॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಭನುಮದ್ಭೀಮನುಧ್ಯಾಂತರ್ಗತ ರಾಮುಕೃಷ್ಣದೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೨೩ ನೇ ಅಧ್ಯಾಯವು.

ನಾರಾಯಣಾನುಗ್ರಹತೋಯಥಾವನ್ನಿಸ್ತೀರ್ಯತಾನ್ ದ್ವಾದಶಾಬ್ದಾನ್ವನೇತೇ ॥
ವಿಸೃಜ್ಯಚಬ್ರಾಹ್ಮಣಾದೀನ್ಸ ಧೌಮ್ಯಾನಜ್ಞಾತವಾಸಾಯ ತತೋ ಮನೋದಧುಃ ॥೦॥

ತೇ – ಆ ಪಾಂಡವರು, ನಾರಾಯಣಾನುಗ್ರಹತಃ – ಪರಮಾತ್ಮನ ಪ್ರಸಾದದಿಂದ, ಯಥಾವತ್ – ವನವಾಸಕ್ಕೆ ಹೋಗುವಾಗ ಪ್ರತಿಜ್ಞೆ ಮಾಡಿದಂತೆ, ದ್ವಾದಶಾಬ್ದಾನ್ – ಹನ್ನೆರಡು ಸಂವತ್ಸರಗಳನ್ನು, ವನೇ – ಕಾಡಿನಲ್ಲಿ, ನಿಸ್ತೀರ್ಯ ಕಳೆದು, ತತಃ – ಆ ವನವಾಸಾನಂತರ, ಸಧೌಮ್ಯಾನ್ – ಧೌಮ್ಯರಿಂದ ಕೂಡಿದ, ತಾನ್ಬ್ರಾಹ್ಮಣಾದೀನ್ - ತಮ್ಮ ಜತೆಗೆ ಬಂದಿರುವ ಬ್ರಾಹ್ಮಣಮುನಿಗಳೇ ಮೊದಲಾದವರನ್ನು, ವಿಸೃಜ್ಯ – ಬಿಟ್ಟು, ಅಜ್ಞಾತವಾಸಾಯ —ಯಾರಿಗೂ ತಮ್ಮ ನಿಜರೂಪ ತಿಳಿಯದಂತೆ ವಾಸಮಾಡುವದಕ್ಕೋಸ್ಕರ, ಮನಃ – ಮನಸ್ಸನ್ನು ದಧುಃ – ಮಾಡಿದರು. ॥೦॥

ಗತ್ವಾವಿರಾಟಸ್ಯ ಪುರೀಂ ನಿಧಾಯ ಹೇತೀಃ ಶಮ್ಯಾಂಛನ್ನರೂಪಾಬಭೂವುಃ ॥
ಯತಿಃ ಸೂದಃ ಷಂಡವೇಷೋಥ ಸೂತವೇಷೋ ಗೋಪೋ ಗಂಧಕರ್ತ್ರೀ ಚ ಜಾತಾಃ ॥೨॥

ತೇ – ಆ ಪಾಂಡವರು, ವಿರಾಟಸ್ಯ – ವಿರಾಟರಾಜನ, ಪುರೀಂ–ಪಟ್ಟಣದ ಸಮೀಪಕ್ಕೆ ಗತ್ವಾ – ಹೋಗಿ, ಶಮ್ಯಾಂ–ಶಮೀವೃಕ್ಷದಲ್ಲಿ, ಹೇತೀಃ – ಆಯುಧಗಳನ್ನು, ನಿಧಾಯ–ಇಟ್ಟು, ಛನ್ನರೂಪಾಃ– ಆಚ್ಛಾದಿತ ನಿಜರೂಪವುಳ್ಳವರು ಬಭೂವುಃ – ಆದರು. ಅದನ್ನೆಲ್ಲ ಪುತ್ತಾರೆ. ಯತಿಃ– ಸನ್ಯಾಸಿಯು, ಸೂದಃ – ಅಡಿಗೆಮಾಡತಕ್ಕವನು, ಷಂಡವೇಷಃ – ನಪುಂಸಕನಾಗಿ ನಟವೇಷವುಳ್ಳವನು, ಸೂತವೇಷಃ - ರಥಿಕನ ವೇಷವುಳ್ಳವನು, ಗೋಪಃ — ಕ್ಷತ್ರಿಯನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದ ಗೋರಕ್ಷಕನು, ಗಂಧಕರ್ತ್ರೀ — ಸ್ತ್ರೀಯರಿಗೆ ಗಂಧಲೇಪನಾದ್ಯಲಂಕಾರ ಮಾಡತಕ್ಕವಳು ಎಂಬುದಾಗಿ, ಜಾತಾಃ - ಯುಧಿಷ್ಠಿರನನ್ನು ಆರಂಭಿಸಿ ದ್ರೌಪದ್ಯಂತರಾದ ಪಾಂಡವರು ಯತ್ಯಾದಿ ವೇಷಧಾರಿಗಳಾದರು ॥೨॥

ಸರ್ವೇವಿರಾಟಂ ಯಯುರತ್ರ ದೇವವತ್ಸಂಭಾವಿತಾಸ್ತೇನ ಶುಭೋರುಲಕ್ಷಣಾಃ ॥
ಯುಧಿಷ್ಠಿರಸ್ಯೈವ ಶುಶ್ರೂಷಣಂ ತೇ ಚಕ್ರುರ್ಹೃದಾವಾಸುದೇವಸ್ಯ ನಾನ್ಯತ್ ॥೩॥

ಶುಭೋರುಲಕ್ಷಣಾಃ–ಮಂಗಳಕರಗಳಾದ ಶ್ರೇಷ್ಠಲಕ್ಷಣಗಳುಳ್ಳ, ಸರ್ವೇ–ಎಲ್ಲಾ ಪಾಂಡವರೂ, ವಿರಾಟಂ–ವಿರಾಟರಾಜನನ್ನು ಯಯುಃ–ಹೊಂದಿದರು. ಅತ್ರ – ಈ ವಿರಾಟನಗರದಲ್ಲಿ, ತೇನ – ಆ ವಿರಾಟನಿಂದ, ದೇವವತ್–ದೇವತೆಗಳಂತೆ

ಸಂಭಾವಿತಾಸ್ಸಂತಃ – ಗೌರವಿಸಲ್ಪಟ್ಟವರಾಗಿ, ಹೃದಾ-ಮನಸ್ಸಿನಿಂದ, ಯುಧಿಷ್ಠಿರಸ್ಯೈವ – ಧರ್ಮರಾಜನ, ವಾಸುದೇವಸ್ಯ-ಪರಮಾತ್ಮನ, ಶಃಶ್ರೂಷಣಂ — ಸೇವೆಯನ್ನು, ಚಕ್ರುಃ- ಮಾಡಿದರು, ಅನ್ಯತ್ – ವಿರಾಟಾದಿಸೇವೆಯನ್ನು, ನ ಚಕ್ರುಃ:— ಮಾಡಲಿಲ್ಲ. ॥೩॥

ಪರಪಾಕೋಗೃಹಸ್ಥಸ್ಯ ಕ್ಷತ್ರಿಯಸ್ಯ ವಿಶೇಷತಃ ॥
ನಯೋಗ್ಯ ಇತಿ ಸೂದಸ್ಯ ಬಭ್ರೇವೇಷಂವೃಕೋದರಃ ॥೪॥

ಗೃಹಸ್ಥಸ್ಯ – ಗೃಹಸ್ಥಾಶ್ರಮವನ್ನು ಹೊಂದಿದ, ಕ್ಷತ್ರಿಯಸ್ಯ - ಕ್ಷತ್ರಿಯನಿಗೆ, ವಿಶೇಷತಃ:–ಸಂಬಂಧವಿಶೇಷವನ್ನಾಗಲೀ ಫಲವಿಶೇಷವನ್ನಾಗಲೀ ಬಿಟ್ಟು, ಪರಪಾಕಃ – ಇನ್ನೊಬ್ಬರು ಮಾಡಿದ ಅಡಿಗೆಯು, ಯೋಗ್ಯಃ – ಯೋಗ್ಯವು, ನ - ಅಲ್ಲ, ಬ್ರಹ್ಮಚರ್ಯಾಶ್ರಮದಲ್ಲಿ ಕ್ಷತ್ರಿಯರಿಗೆ ಪರಪಾಕವು ದೋಷವಲ್ಲ. ಆದ್ದರಿಂದಲೇ ಏಕಚಕ್ರಾನಗರದಲ್ಲಿ ಪಾಂಡವರು ಪರಪಾಕವನ್ನು ಸ್ವೀಕರಿಸಿದರು. ಇತಿ ಈ ಕಾರಣದಿಂದ ವೃಕೋದರಃ — ಭೀಮಸೇನನು ಸೂದಸ್ಯ ಅಡಿಗೆಯವನ, ವೇಷಂ - ವೇಷವನ್ನು, ಬಭ್ರೇ –ಧರಿಸಿದನು. ॥೪॥

ವೈದಿಕ ವ್ಯವಹಾರೇಷು ಜ್ಞಾನಾಧಿಕ್ಯ ಪ್ರಸಿದ್ಧಿತಃ ॥
ಜಾನೀಯುರ್ಭೀಮ ಇತ್ಯೇವ ಶೂದ್ರವೇಷಸ್ತತೋಽಭವತ್ ॥೫॥

ವೈದಿಕ ವ್ಯವಹಾರೇಷು – ವೇದೋಕ್ತ ಶಬ್ದಾರ್ಥಗಳ ಕಥನವ್ಯವಹಾರಗಳಲ್ಲಿ, ಜ್ಞಾನಾಧಿಕ್ಯ ಪ್ರಸಿದ್ಧಿತಃ – ಜ್ಞಾನವು ಅಧಿಕವಾಗಿ ಇದೆ ಎಂಬ ಪ್ರಸಿದ್ಧಿಯಿಂದ, ಯತಃ – ಯಾವ ಕಾರಣದಿಂದ ಜನಾಃ – ಜನರು ಭೀಮಃ, ಇತ್ಯೇವ – ಭೀಮನೆಂಬುದಾಗಿಯೇ, ಜಾನೀಯುಃ— ತಿಳಿಯುವರೋ, ತತಃ – ಆ ಕಾರಣದಿಂದ, ಶೂದ್ರವೇಷಃ – ಶೂದ್ರವೇಷವುಳ್ಳವನು ಅಭವತ್ – ಆದನು ॥೫॥

ಭಾವಾನುವಾದ

೧–೫ ಪಾಂಡವರು ಭಗವದನುಗ್ರಹದಿಂದ ಹನ್ನೆರಡುವರ್ಷವನವಾಸವನ್ನು ನಿಯಮಪ್ರಕಾರ ಮುಗಿಸಿ, ಅಜ್ಞಾತವಾಸ ಮಾಡುವದಕ್ಕಾಗಿ, ಧೌಮ್ಯರೇ ಮೊದಲಾದ ಬ್ರಾಹ್ಮಣರನ್ನು ಬೀಳ್ಕೊಟ್ಟು ವಿರಾಟನಗರಕ್ಕೆ ಬಂದು, ಊರಹೊರಗೆ ಶಮೀವೃಕ್ಷದಲ್ಲಿ ಆಯುಧಗಳನ್ನು ಮುಚ್ಚಿಟ್ಟು, ಕ್ರಮವಾಗಿ, ಯತಿ, ಸೂದ (ಪಾಚಕ) ಪಂಡ, ಸಾರಥಿ, ಗೋಪಾಲಕ ಮತ್ತು ಗಂಧಾದಿ ಅಲಂಕಾರ ಮಾಡುವ ಸ್ತ್ರೀ ಎಂಬ ವೇಷಗಳನ್ನು ಧರಿಸಿದರು. ಎಲ್ಲರೂ ಒಂದೊಂದು ಸಂದರ್ಭದಲ್ಲಿ ವಿರಾಟನಲ್ಲಿಗೆ ಹೋಗಿ ಅಲ್ಲಿ ಕೆಲಸಕ್ಕಾಗಿ ಸೇರಿದರು. ಶ್ರೇಷ್ಠ ಲಕ್ಷಣಭರಿತರಾದ ಇವರನ್ನು ವಿರಾಟನು ತುಂಬಾ ಗೌರವಿಸಿದನು. ಎಲ್ಲರೂ ಧರ್ಮರಾಜನ ಹಾಗೂ ಅವನ ಅಂತರ್ಯಾಮಿಯಾದ ಭಗವಂತನ ಸೇವೆಯನ್ನು ಮಾಡಿದರೇ ವಿನಃ ಬೇರೆ ವಿರಾಟಾದಿಗಳ ಸೇವೆಯನ್ನು ಮಾಡಲಿಲ್ಲ. ಕ್ಷತ್ರಿಯರಿಗೆ ಪರರು ಮಾಡಿದ ಪಾಕವು (ಪರಪಾಕವು) ನಿಷಿದ್ಧವಾದ್ದರಿಂದ (ಈ ನಿಯಮವು ಬ್ರಹ್ಮಚರ್ಯಾಶ್ರಮದಲ್ಲಿ ಇಲ್ಲ. ಆದ್ದರಿಂದ ಏಕಚಕ್ರಾನಗರದಲ್ಲಿ ಪರಾನ್ನವನ್ನು ಸ್ವೀಕರಿಸಿದರು.) ಶ್ರೀ ಭೀಮಸೇನರು ಅಡಿಗೆ ಮಾಡುವವನ ವೇಷವನ್ನು ಸ್ವೀಕರಿಸಿದರು. ಅಡಿಗೆಯವನ ವೇಷವನ್ನು ಧರಿಸದಿದ್ದರೆ ಬೇರೆ ಜ್ಞಾನಕಾರ್ಯ ಮಾಡುವಂಥ ವೇಷ ಸ್ವೀಕರಿಸಿದ್ದರೆ, ಆಗ ತನ್ನ ಜ್ಞಾನಾಧಿಕ್ಯವು ಪ್ರಕಟವಾಗಿ ಜನರು ತನ್ನನ್ನು ಭೀಮ ಎಂದು ತಿಳಿಯುವ ಸಂಭವವಿದೆಯಾದ್ದರಿಂದ ಅಡಿಗೆಯವನ ವೇಷವನ್ನು ಸ್ವೀಕರಿಸಿದರು.

ಸ್ವೀಯಂವೇದವಿದಾಂಸರ್ವಂ ದೇವೇಶಾನಾಂಚ ಕಿಂಪುನಃ ॥
ಅತಸ್ತೇಽನ್ಯಾಶ್ರಯಂ ನೈವಚಕ್ರುಃ ಸ್ವಬಲಸಂಶ್ರಯಾತ್ ॥೬॥

ವೇದವಿದಾಂ – ವೇದದ್ರಷ್ಟೃಗಳಾದ ಋಷಿಗಳಿಗೆ, ಸರ್ವಂ – ಎಲ್ಲಾಧನಾದಿಗಳು, ಸ್ವೀಯಂ – ತಮ್ಮದೇ ಆಗುವವು, ದೇವೇಶಾನಾಂ—ದೇವಶ್ರೇಷ್ಠರಿಗೆ ಕಿಂಪುನಃ – ಧನಾದಿಗಳೆಲ್ಲವೂ ಸ್ವಕೀಯವೆಂದು ಏನು ಹೇಳತಕ್ಕದ್ದು. ಅತಃ – ಈ ಕಾರಣ,

ನಿಂದಲೇ ತೇ – ಆ ಪಾಂಡವರು, ಸ್ವಬಲ ಸಂಶ್ರಯಾತ್ – ತಮ್ಮ ಬಲವನ್ನೇಆಶ್ರಯಿಸಿರುವುದರಿಂದ, ಅನ್ಯಾಶ್ರಯಂ – ವಿರಾಟಾದಿಗಳ ಆಶ್ರಯವನ್ನು, ನೈವಚಕ್ರುಃ – ಮಾಡಲೇ ಇಲ್ಲ. ॥೬॥

ಶಾಪಾದೇವಾರ್ಜುನಃ ಷಂಡವೇಷೋಭೂನ್ನ ಕುಲಸ್ತಥಾ ॥
ಕ್ಷತ್ರಿಯಾನಂತರತ್ವಾತ್ತು ಸೂತಜಾತೇಸ್ತಥಾಭವತ್ ॥೭॥

ಅರ್ಜುನಃ – ಅರ್ಜುನನು, ಶಾಪಾದೇವ – ಊರ್ವಶಿಯ ಶಾಪದಿಂದಲೇ, ಷಂಡವೇಷಃ –ನಪುಂಸಕ ವೇಷವುಳ್ಳವನು ಅಭೂತ್ - ಆದನು. ತಥಾ – ಹಾಗೆಯೇ ನಕುಲಃ – ನಕುಲನು ಸೂತಜಾತೇಃ – ಸೂತಜಾತಿಗೆ, ಕ್ಷತ್ರಿಯಾನಂತರತ್ವಾತ್ – ಕ್ಷತ್ರಜಾತಿಯ ಅನಂತರ್ಯವಿರುವುದರಿಂದ, ತಥಾ -- ಸೂತಜಾತಿ ಉಳ್ಳವನು, ಅಭವತ್ – ಆದನು. ॥೭॥

ಸೂತಸ್ಯಾನಂತರತ್ವಾತ್ತು ವೈಶ್ಯಜಾತೇಸ್ತಥಾऽ ಭವತ್ ॥
ಸಹದೇವೋ ವೈಶ್ಯಜಾತಿರ್ಗೋಪಾಲಸ್ತೇಷು ಚೋತ್ತಮಃ ॥೮॥

ಸಹದೇವಃ– ಸಹದೇವನು, ವೈಶ್ಯಜಾತೇಃ–ವೈಶ್ಯಜಾತಿಗೆ, ಸೂತಸ್ಯಾನಂತರತ್ವಾತ್ – ಸೂತಜಾತಿಯ ಅನಂತರ್ಯವಿರುವುದರಿಂದ. ತಥಾ – ವೈಶ್ಯಜಾತಿಯವನು, ಅಭವತ್—ಆದನು, ಯತಃ – ಯಾವಕಾರಣದಿಂದ, ತೇಷು – ಆವೈಶ್ಯರಲ್ಲಿ ಗೋಪಾಲಃ -- ಗೋವುಗಳನ್ನು ಪಾಲಿಸುವವನು ಉತ್ತಮಃ – ಶ್ರೇಷ್ಠನೋ ॥೮॥

ತತೋಗೋಪಾಲತಾಮಾಪಯತಿಃ ಪೂಜ್ಯೋऽಖಿಲೈರ್ಯತಃ ॥
ಯತಿರಾಸೀದ್ಧರ್ಮಜ್ಞೋऽತಃ ಸೋऽಭ್ಯಾಸಾರ್ಥಂ ಸದೈವಚ ॥
ಅಕ್ಷಾಸಕ್ತೋऽಭವತ್ಪಶ್ಚಾದ್ದರ್ಶಯಿಷ್ಯನ್ ಸ್ವಶಿಷ್ಟತಾಂ ॥೯॥

ತತಃ– ಆಕಾರಣದಿಂದ ಗೋಪಾಲತಾಂ – ಗೋಪಾಲಕತ್ವವನ್ನು, ಆಪ–ಹೊಂದಿದನು. ಯತಃ- ಯಾವಕಾರಣದಿಂದ ಯತಿಃ–ಸನ್ಯಾಸಿಯು, ಅಖಿಲೈಃ– ಎಲ್ಲಾ ವರ್ಣಾಶ್ರಮವುಳ್ಳವರಿಂದ, ಪೂಜ್ಯಃ— ಪೂಜಿಸಲು ಯೋಗ್ಯನೇ, ತತಃ – ಆಕಾರಣದಿಂದ, ಧರ್ಮಜ್ಞಃ–ಧರ್ಮರಾಜನು, ಯತಿಃ–ಸನ್ಯಾಸಿಯು, ಆಸೀತ್-ಆದನು, ಸಃ– ಆಧರ್ಮರಾಜನು, ಪಶ್ಚಾತ್ – ಅಜ್ಞಾತವಾಸ ನಂತರ, ಸ್ವಶಿಷ್ಟತಾಂ — ದ್ಯೂತಕ್ರೀಡೆಗಳಲ್ಲಿ ತನ್ನ ಶ್ರೇಷ್ಠತ್ವವನ್ನು, ದರ್ಶಯಿಷ್ಯನ್ — ತೋರಿಸುವುದಕ್ಕಾಗಿ, ಅಭ್ಯಾಸಾರ್ಥಂ – ದ್ಯೂತ ವಿದ್ಯೆಯ ಅಭ್ಯಾಸಕ್ಕಾಗಿ ಸದೈವ – ಯಾವಾಗಲೂ, ಅಕ್ಷಾಸಕ್ತಃ— ದ್ಯೂತಕ್ರೀಡೆಯಲ್ಲಿ ಆಸಕ್ತನು, ಅಭವತ್ — ಆದನು ಧರ್ಮರಾಜನು ಅಕ್ಷವಿದ್ಯೆಯಲ್ಲಿ ಅತಿನಿಪುಣನು, ಶಕುನಿಯು ಮೋಸದಿಂದಲೇ ಗೆದ್ದನು ಎಂದು ವಿರಾಟನಿಗೆ ತೋರಿಸುವುದಕ್ಕಾಗಿ ಅಕ್ಷಾಸಕ್ತನು ಆದನು ॥೯॥

ಭೀಮಸೇನ ಸಧರ್ಮಾರ್ಥಂ ಶೂದ್ರಾಸ್ಯೈರಂಧ್ರಿಕಾऽ ಭವತ್ ॥
ದ್ರೌಪದೀ ಭರ್ತೃಸಾಧರ್ಮ್ಯಂ ಸ್ತ್ರೀಣಾಂಧರ್ಮೋಯತಃ ಸದಾ ॥೧೦॥

ದ್ರೌಪದೀ—ದ್ರೌಪದಿಯು, ಭೀಮಸೇನಸಧರ್ಮಾರ್ಥಂ – ಸೇವಾರೂಪದಿಂದ ಭೀಮಸೇನನಸ ಮಾನಧರ್ಮವನ್ನು ಮಾಡುವುದಕ್ಕಾಗಿ, ಶೂದ್ರಾಸತೀ – ಶೂದ್ರಳಾಗಿ, ಸೈರಂಧ್ರಿಕಾ ಅಭವತ್ – ಶೂದ್ರಜಾತಿಗೆ ಸಮಾನವಾದ ಸೈರಂಧ್ರಿಕೆಯಾದಳು. ಯತಃ– ಯಾವಕಾರಣದಿಂದ, ಸ್ತ್ರೀಣಾಂ – ಸ್ತ್ರೀಯರಿಗೆ, ಸದಾ-ಯಾವಾಗಲೂ, ಭರ್ತೃಸಾಧರ್ಮ್ಯಂ – ಗಂಡನು ಯಾವ ಧರ್ಮವನ್ನು ಮಾಡುವನೋ ಅದಕ್ಕೆ ಸಮಾನವಾದಧರ್ಮವು ಧರ್ಮಃ– ಕರ್ತವ್ಯವೋ,ಪುಣ್ಯಜನಕವೋ, ತತಃ- ಆದ್ದರಿಂದ,ಭೀಮನು ಶೂದ್ರನಾಗಿ ಸೇವೆಯನ್ನು ಮಾಡುವುದರಿಂದ ತಾನೂ ಶೂದ್ರಳಾಗಿ ಸೇವೆಯನ್ನು ಮಾಡುವವಳಾದಳು, ॥೧೦॥

ಭಾ. ಅ. ೬–೧೦ ವೇದಜ್ಞಾನಿಗಳಾದವರ ಅಧಿಕಾರವೇ ಎಲ್ಲದರ ಮೇಲಿರುವಾಗ ದೇವ ಶ್ರೇಷ್ಠರ ಅಧಿಕಾರವಿದೆ ಎಂದು ಏನು ಹೇಳಬೇಕು? ಅತಃ ಆ ಎಲ್ಲ ರಾಜ್ಯವು ಪಾಂಡವರದಿದ್ದಂತೆಯೇ. ಆದ್ದರಿಂದ ಅವರು ಪರರನ್ನು ಆಶ್ರಯಿಸಿಲ್ಲವೇ ಇಲ್ಲ. ಅರ್ಜುನನಿಗೆ ಊರ್ವಶಿಯ ಶಾಪವಿದ್ದದ್ದರಿಂದ ಅದನ್ನು ಉಪಯೋಗಿಸಿಕೊಂಡು ಅವನು ಷಂಢವೇಷವುಳ್ಳವ–ನಾದನು. ಸೂತಜಾತಿಯು ಕ್ಷತ್ರಿಯ ಜಾತಿಯ ನಂತರದ ಮತ್ತು ವೈಶ್ಯ ಜಾತಿಗಿಂತ ಮೊದಲಿನ ಜಾತಿಯಾದ್ದರಿಂದ (ಅಂದರೆ ಕ್ಷತ್ರಿಯಜಾತಿಗಿಂತ ಕಮ್ಮಿ ವೈಶ್ಯಜಾತಿಗಿಂತ ಹೆಚ್ಚಿನದು ಆದ್ದರಿಂದ) ನಕುಲನು ಸೂತವೇಷವನ್ನು ಹೊಂದಿದನು. ಸೂತ–ಜಾತಿಗಿಂತ ಕಡಿಮೆಯ ಜಾತಿಯು ವೈಶ್ಯ ಜಾತಿಯಾದ್ದರಿಂದ, ಸಹದೇವನು ವೈಶ್ಯಜಾತಿಯ ಪ್ರಭೇದವಾದ ಗೋಪಾಲ ಜಾತಿಯವನಾದನು. ಯತಿಯು – ಎಲ್ಲರಿಂದ ಪೂಜ್ಯನಾದ್ದರಿಂದ, ಅಗ್ರಜನಾದ್ದರಿಂದ ಪೂಜ್ಯನಾದ ಯುಧಿಷ್ಠಿರನು ಯತಿ ವೇಷವುಳ್ಳವನಾದನು. ಅಕ್ಷಕ್ರೀಡೆಯಲ್ಲಿ ತನಗಿರುವ ನೈಪುಣ್ಯವನ್ನು ಜಗತ್ತಿಗೆ ತೋರಿಸಿ, ಶಕುನಿಯು ಕಪಟದಿಂದ ತನ್ನನ್ನು ಗೆದ್ದದ್ದು ಎಂದು ಜಗತ್ತಿಗೆ ತೋರಿಸುವದಕ್ಕಾಗಿ ದ್ಯೂತದಲ್ಲಿ ಆಸಕ್ತನಾಗಿದ್ದನು. ಶ್ರೀಭೀಮಸೇನದೇವರನ್ನು ಅನುಸರಿಸಿ ಇರುವದಕ್ಕಾಗಿ ಶ್ರೀದ್ರೌಪದೀ ದೇವಿಯರು ಶೂದ್ರ ಸೈರಂಧ್ರಿಯಾದರು.

ಅಥಾಜಗಾಮನುಲ್ಲಕಃ ಸಮಸ್ತ ಭೂಮಿಮಂಡಲೇ ॥
ವರೇಣ ಯೋಽಜಿತೋ ಜಯೀ ಶಿವಸ್ಯ ಸಂಜಗರ್ಜಚ ॥೧೧॥

ಅಥ–ಅನಂತರ—ಸಮಸ್ತಭೂಮಿಮಂಡಲೇ – ಎಲ್ಲಾ ಭೂಪ್ರದೇಶದಲ್ಲಿ, ಶಿವಸ್ಯ – ರುದ್ರನ–ವರೇಣ – ವರದಿಂದ ಯಃ–ಯಾವನು, ಅಜಿತಃ – ಯಾವ ವೀರರಿಂದಲೂ ಪರಾಜಿತನಲ್ಲವೊ, ಯಃ ಜಯೀ – ಯಾವನು – ಜಯಶೀಲನೋ ಸ ಮಲ್ಲಕಃ—ಅಂತಹ ಮಲ್ಲನು, ಅಜಗಾಮ – ಬಂದನು. ಸಂಜಗರ್ಜಚ—ಚೆನ್ನಾಗಿ ಸಿಂಹನಾದವನ್ನು ಮಾಡಿದನು. ॥೧೧॥

ತಮೀಕ್ಷ್ಯ ಸರ್ವಮುಲ್ಲಕಾ ವಿರಾಟರಾಜ ಸಂಶ್ರಯಾಃ ॥
ಪ್ರದುದ್ರುವುರ್ಭಯಾರ್ದಿತಾಸ್ತದಾವದದ್ಯುಧಿಷ್ಠಿರಃ ॥೧೨॥

ವಿರಾಟರಾಜಸಂಶ್ರಯಾಃ–ವಿರಾಟರಾಜನನ್ನು ಆಶ್ರಯಿಸಿಕೊಂಡಿರುವ, ಸರ್ವಮಲ್ಲಕಾಃ – ಎಲ್ಲಾ ಜಟ್ಟಿಗಳೂ, ತಂ–ಆ ಮಲ್ಲನನ್ನು ಈಕ್ಷ್ಯ – ನೋಡಿ, ಭಯಾರ್ದಿತಾಸ್ತಂತಃ – ಹೆದರಿಕೆಯಿಂದ ಪೀಡಿತರಾಗಿ, ಪ್ರದುದ್ರುವುಃ– ಓಡಿದರು, ತದಾ–ಆಗ, ಯುಧಿಷ್ಠಿರಃ- ಧರ್ಮರಾಜನು, ಅವದತ್ – ಹೇಳಿದನು ॥೧೨॥

ಯುಏಷ ಸೂದ ಆಶುತಂ ನಿಹತ್ಯಮಲ್ಲಮೋಜಸಾ ॥
ಯಶಸ್ತವಾಭಿವರ್ಧಯೇತ್ಸವಾಹ್ವಯಾಶು ತಂ ನೃಪ ॥೧೩॥

ಹೇ ನೃಪ – ಎಲೋರಾಜನೇ, ಯಃ – ಯಾವ, ಏಷಃ ಸೂದಃ – ಈ ಅಡಿಗೆಯವನು, ತಂ ಮಲ್ಲಂ– ಆ ಮಲ್ಲನನ್ನು ಓಜಸಾ – ತನ್ನ ಸಾಮರ್ಥ್ಯದಿಂದ, ಆಶು, – ಕೂಡಲೇ, ನಿಹತ್ಯ–ಕೊಂದು, ತವ –ನಿನ್ನ, ಯಶಃ–ಕೀರ್ತಿಯನ್ನು, ಅಭಿವರ್ಧಯೇತ್ – ಬೆಳಗಿಸಿಯಾನು, ತತಃ – ಆದ್ದರಿಂದ, ತಂ – ಆಸೂದನನ್ನು, ಅದ್ಯ – ಈಗಲೇ, ಸಮಾಹ್ವಯ – ಕರೆಸು ಎಂದು ಹೇಳಿದನು, ॥೧೩॥

ಇತೀರಿತೇ ಸಮಾಹುತೋ ಜಗಾದ ಮಾರುತಿರ್ವಚಃ ॥
ಪ್ರಸಾದತೋಹರೇರಹಂ ನಿಷೂದಯೇದ್ಯ ಮಲ್ಲಕಂ ॥೧೪॥

ಇತಿ – ಈ ರೀತಿಯಾಗಿ, ಈರೀತೇಸತಿ – ಹೇಳಲ್ಪಡುತ್ತಿರಲು, ಸಮಾಹುತಃ– ಕರೆಸಲ್ಪಟ್ಟ ಮಾರುತಿಃ–ಭೀಮಸೇನನು ಅಹಂ - ನಾನು, ಹರೇಃ–ಪರಮಾತ್ಮನ, ಪ್ರಸಾದತಃ – ಅನುಗ್ರಹದಿಂದ, ಅದ್ಯ–ಈಗ, ಮಲ್ಲಕಂ – ಮಲ್ಲನನ್ನು ನಿಷೂದಯೇ – ಸಂಹರಿಸುವೆನು, ಇತಿ – ಎಂಬ, ವಚಃ – ಮಾತನ್ನು, ಜಗಾದ – ಹೇಳಿದನು ॥೧೪॥

ಅವಃ—ಮೊದಲು ಭೀಮಸೇನನು ತನಗೆ ಹರಿಯು ಪ್ರಸಾದವಿರುವುದರಿಂದ ಸಂಹರಿಸುವೆನು ಎಂದನು. ಆಗ ಸಭೆಯಲ್ಲಿ ಪ್ರತಿಮಲ್ಲನಿಗೆ ಮಹಾದೇವನ ಪ್ರಸಾದವಿದೆ ಎಂದು ಸಭಿಕರು ಹೇಳಿದಾಗ ನನಗೂ ಮಹಾದೇವನ ಪ್ರಸಾದವಿದೆ ಎಂದನು. ಧರ್ಮರಾಜನು ರಾಜ್ಯವಾಳುವಾಗ ಅವನಿಗೆ ಬಹುಕಾಲ ಅಡಿಗೆಮಾಡಿರುವುದರಿಂದ ಯುಧಿಷ್ಠಿರನ ಅನುಗ್ರಹವೂ ಇದೆ ಎಂದನು ಈಗ ಅನ್ನದಾತನಾದ ನಿನ್ನ ಅನುಗ್ರಹವೂ ಇದೆ ಎಂದು ಹೇಳಿದನು. ಈ ಮಹಾದೇವ,ಯುಧಿಷ್ಠಿರ, ನೀನು ಎಂಬ ಶಬ್ದಗಳಿಗೆ ಹರಿಯಲ್ಲಿ ಪ್ರವೃತ್ತಿಯನ್ನು ತೋರಿಸುತ್ತಾ ತಾತ್ಪರ್ಯವನ್ನು ಹೇಳುತ್ತಾರೆ.

ಸಮುಸ್ತದೇವವ್ಯಂದತೋ ಮಹಾನ್ಯಏವ ಕೇಶವಃ ॥
ಸಮುಸ್ತದೇವ ನಾಮವಾಂಸ್ತದೀಯ ಭಕ್ತಿತೋಬಲಂ ॥ ೧೫॥

ಯಃ-- ಯಾವ ಕೇಶವಃ-ಬ್ರಹ್ಮರುದ್ರ ಪ್ರೇರಕನಾದ ಶ್ರೀಹರಿಯು ಸಮಸ್ತದೇವ ವ್ಯಂದತಃ- ಎಲ್ಲಾದೇವತೆಗಳ ಸಮುದಾಯದದೆಸೆಯಿಂದ ಮಹಾನ್ -ಶ್ರೇಷ್ಠನಾಗಿರುವನೋ,ಆದ್ದರಿಂದ ದೇವೇಷುಮಹಾನ್ ಮಹಾದೇವಃ ಎಂಬ ವ್ಯುತ್ಪತ್ತಿಯಿಂದ ಮಹಾದೇವ ಶಬ್ದ ವಾಚ್ಯನು. ಸಮಸ್ತದೇವ ನಾಮವಾನ್ – ಮಹಾದೇವ ಶಬ್ದವಾಚ್ಯನು ಮಾತ್ರವಲ್ಲ, ಎಲ್ಲಾದೇವತೆಗಳ ನಾಮ ಉಳ್ಳವನು. ಶಿವೋಮೇಬಲಂ ಎಂದು ಪ್ರತಿಮಲ್ಲನು ಹೇಳಿದಾಗ ಭೀಮನೂಕೂಡ ತದೀಯಭಕ್ತಿತಃ-ಪರಮಾತ್ಮನ ಸಂಬಂಧಿಯಾದ ಭಕ್ತಿಯಿಂದಲೇ ಬಲಂ – ನನಗೂ ಸಾಮರ್ಥ್ಯವು ಎಂದನು ॥೧೫॥

ಅವಃ–ವಿಷ್ಣುವಿಗೆ ಎಲ್ಲಾದೇವತೆಗಳ ನಾಮವಿದೆಯೆಂದು ಹೇಳತಕ್ಕ ಶ್ರುತಿಯನ್ನು ಅರ್ಥತಃ ಅನುವಾದಮಾಡುತ್ತಾರೆ.

ಯ ಏವದೇವನಾಮಧಾ ಇತಿ ಶ್ರುತಿರ್ಜಗಾದಹಿ ॥
ಮಹಾಂಶ್ಚದೇವ ಏಷ ತತ್ಸನೋ ಜಯಂ ವಿಧಾಸ್ಯತಿ ॥೧೬॥

ಶ್ರುತಿಃ – "ಯೋದೇವಾನಾಂ ನಾಮಧಾಏಕ ಏವ" ಎಂಬ ಶ್ರುತಿಯು ಯ ಏವ-ಯಾವ ನಾರಾಯಣನೇ ದೇವ-ನಾಮಧಾಃ– ಎಲ್ಲಾದೇವತೆಗಳ ನಾಮವನ್ನು ಧರಿಸಿರುವವನು ಇತಿ–ಎಂದು ಜಗಾದ–ಹೇಳುತ್ತದೆ. ವಿಷ್ಣುಃ - ಇಚ್ಛಾರೂಪಿಯಾದ ವಿಷ್ಣುವು. ಮಹಾನ್‌ದೇವಃ— ಶ್ರೇಷ್ಠನಾದದೇವನು ತತ್-ಆಕಾರಣದಿಂದ,ಮೇ-ನನಗೆ ಜಯಂ-ಜಯವನ್ನು ವಿಧಾಸ್ಯತಿ ಮಾಡುವನು ॥೧೬॥

ಯುಧಿಷ್ಠಿರಾಭಿಧಶ್ಚಯೋ ಯುಧಿಷ್ಠಿರೇಸ್ಥಿತಸ್ಸದಾ ॥
ತ್ವಯಿಸ್ಥಿತಸ್ತ್ವ ಮಿತ್ಯಸೌ ಸದಾಭಿಧೀಯತೇಹರಿಃ ॥೧೭॥

ಯಃ – ಯಾವ ಹರಿಯು, ಯುಧಿಷ್ಠಿರಾಭಿಧಃ – ಯುದ್ಧದಲ್ಲಿ ಸ್ಥಿರನಾಗಿರುವುದರಿಂದ ಯುಧಿಷ್ಠಿರ ಶಬ್ದದಿಂದ ವಾಚ್ಯನೋ ಅವನು, ಯುಧಿಷ್ಠಿರೇ – ಯುಧಿಷ್ಠಿರನೆಂಬ ಜೀವನಲ್ಲಿ, ಸದಾ– (ಭೂತಾವೇಶದಂತೆ ಕೆಲವು ಕಾಲ ಮಾತ್ರವಲ್ಲ) ಯಾಪಾಗಲೂ,ಸ್ಥಿತಃ— ಇರತಕ್ಕವನು, ಆದ್ದರಿಂದಲೂ ಯುಧಿಷ್ಠಿರ ಶಬ್ದವಾಚ್ಯನು. ವಿರಾಟನಾದ ನಿನ್ನ ಅನುಗ್ರಹದಿಂದ ಗೆಲ್ಲುವೆನು ಎಂಬವಾತಿನ ತಾತ್ಪರ್ಯವನ್ನು ಹೇಳುತ್ತಾರೆ. ತ್ವಯಿ—ನಿನ್ನಲ್ಲಿ, ಸದಾ–ಯಾವಾಗಲೂ, ಸ್ಥಿತಃ – ಇರತಕ್ಕ, ಅಸೌ ಹರಿಃ – ಈ ಹರಿಯು, ತ್ವಮಿತಿ – ತ್ವಂ ಎಂದು, ಅಭಿಧೀಯತೇ – ಹೇಳಿಸಿಕೊಳ್ಳಲ್ಪಡುತ್ತಾನೆ. ॥೧೭॥

ಇತಿಬ್ರುವಾಣೋ ಮಲ್ಲಂತಮಭಿಯಾತೋ ವೃಕೋದರಃ ॥
ಅನಯನ್ಮೃತ್ಯುಲೋಕಾಯ ಬಲಾಢ್ಯೈರಪಿದುರ್ಜಯಂ ॥೧೮॥

ಇತಿ – ಈ ಅಭಿಪ್ರಾಯದಿಂದ, ಬ್ರುವಾಣಃ-ಹೇಳತಕ್ಕ, ವೃಕೋದರಃ – ಭೀಮಸೇನನು, ತಂ ಮಲ್ಲಂ-ಆಮಲ್ಲನನ್ನು, ಅಭಿಯಾತಸ್ಸನ್ – ಎದುರುಗೊಂಡವನಾಗಿ, ಬಲಾಢ್ಯೈರಪಿ – ಬಲಸಂಪನ್ನರಿಂದಲೂ, ದುರ್ಜಯಂ – ಜಯಿಸಲಶಕ್ಯನಾದ-ಮಲ್ಲನನ್ನು, ಮೃತ್ಯುಲೋಕಾಯ - ಯಮಲೋಕಕೋಸ್ಕರ, ಅನಯತ್ – ಕಳುಹಿಸಿದನು. ॥೧೮॥

ಭಾ. ಅ. ೧೧–೧೪ ಹೀಗೆ ವಿರಾಟರಾಜ್ಯದಲ್ಲಿರುವಾಗ, ಶ್ರೀರುದ್ರದೇವರ ವರದಿಂದ ಭೂಮಂಡಲದಲ್ಲಿ ಜಯಶಾಲಿಯಾದ ಒಬ್ಬ ಮಲ್ಲನು (ಜೀಮೂತ ಎಂಬ ಹೆಸರಿನ) ಬಂದು ತನ್ನ ಜೊತೆಗೆ ಯುದ್ಧ ಮಾಡುವ ಸಮರ್ಥ ಮಲ್ಲನು ನಿಮ್ಮ ರಾಜ್ಯದಲ್ಲಿದ್ದರೆ, ಯುದ್ಧಕ್ಕೆ ಬರಲಿ ಎಂದು ಆಹ್ವಾನಿಸಿದನು. ಆದರೆ ಅವನನ್ನು ನೋಡಿದ ವಿರಾಟರಾಜ್ಯದ ಮಲ್ಲರೆಲ್ಲರೂ ಭಯದಿಂದ ಓಡಿದರು. ರಾಜನು ಚಿಂತಾಕ್ರಾಂತನಾದಾಗ, ಯುಧಿಷ್ಠಿರನು (ಕಂಕ ಎಂದು ಯತಿಯಾಗಿರುವ), ರಾಜನಿಗೆ ಅಡಿಗೆಯವನಾದ ಬಲ್ಲವನು ಈ ಮಲ್ಲನನ್ನು ಕೊಂದು ನಿನಗೆ ಕೀರ್ತಿಯನ್ನು ತಂದುಕೊಡುವನು; ಆದ್ದರಿಂದ ಅವನನ್ನು ಕರೆತರು ಎಂದು ಹೇಳಿದನು. ರಾಜನು ಕರೆಯಿಸಿದನು. ಆಗ ಬಂದ ಶ್ರೀ ಭೀಮಸೇನರು ಶ್ರೀಮನ್ನಾರಾಯಣನ ಅನುಗ್ರಹದಿಂದ, ಮಲ್ಲನನ್ನು ಇಂದು ಸಂಹರಿಸುವೆನೆಂದು ಹೇಳಿದರು. ಶ್ರೀ ಮಹಾಭಾರತದಲ್ಲಿ ಮಹಾದೇವನ ಅನುಗ್ರಹದಿಂದ, ಈ ಮೊದಲು ನನಗೆ ಅನ್ನದಾತನಾದ ಯುಧಿಷ್ಠಿರನ ಮತ್ತು ಈಗ ಅನ್ನದಾತನಾದ ನಿನ್ನ ಅನುಗ್ರಹದಿಂದ ನಾನು ಮಲ್ಲನನ್ನು ಸಂಹರಿಸುತ್ತೇನೆ ಎಂದು ಹೇಳಿದರು ಎಂದು ಇದೆ. ಅದರ ಅರ್ಥವನ್ನು ತಿಳಿಸುತ್ತಾರೆ. ಎಲ್ಲ ದೇವತೆಗಳಿಗಿಂತಲೂ ಮಹಾನ್ (ಶ್ರೇಷ್ಠ)ನಾದ ಶ್ರೀ ನಾರಾಯಣನೇ ಮಹಾದೇವ ಎಂಬ ಶಬ್ದದಿಂದ ಕರಿಸಿಕೊಳ್ಳುತ್ತಾನೆ. ಅವನಿಗೆ ಎಲ್ಲ ನಾಮಗಳೂ ಇವೆ. ಅವನು ನನಗೆ ಜಯವನ್ನು ತಂದುಕೊಡುತ್ತಾನೆ ಎಂದು ಅರ್ಥ. ಯುಧಿಷ್ಠಿರ ರಾಜನಲ್ಲಿ ಭಗವಂತನು ಯುಧಿಷ್ಠಿರ (ಯುದ್ಧದಲ್ಲಿ ಸ್ಥಿರನಾಗಿ ನಿಲ್ಲುವವನು ಎಂಬ ಅರ್ಥದಿಂದ) ನಾಮಕನಾಗಿ ಇದ್ದಾನೆ. ಆದ್ದರಿಂದ ಯುಧಿಷ್ಠಿರನ, ನಿನ್ನ ಅನುಗ್ರಹದಿಂದ ಎಂದರೆ ಅವರಲ್ಲಿರುವ ಭಗವಂತನ ಅನುಗ್ರಹದಿಂದ ಎಂದೇ ಅರ್ಥವು. ಈ ರೀತಿ ಹೇಳಿ ಮಹಾಬಲಿಷ್ಠರಿಂದಲೂ ಅಜೇಯನಾದ ಮಲ್ಲನ ಜೊತೆಗೆ ಯುದ್ಧ ಮಾಡಿ ಅನಾಯಾಸವಾಗಿ ಸಂಹರಿಸಿ ವಿರಾಟರಾಜನಿಗೆ ಯಶಸ್ಸನ್ನು ತಂದಿತ್ತರು.

ಏವಂನಿವಸತಾಂ ತತ್ರ ಪಾಂಡವಾನಾಂ ಮಹಾತ್ಮನಾಂ ॥
ಸಂವತ್ಸರೇ ದ್ವಿಮಾಸೋನೇ ವಿಜಿತ್ಯದಿಶ ಆಗತಃ ॥
ಕೀಚಕೋ ಮತ್ಸ್ಯನೃಪತೇಃ ಶ್ಯಾಲೋಬಲವತಾಂವರಃ ॥೧೯॥

ಏವಂ–ಈ ರೀತಿಯಾಗಿ, ತತ್ರ-ಆ ವಿರಾಟನಗರದಲ್ಲಿ, ನಿವಸತಾಂ-ವಾಸಮಾಡತಕ್ಕ, ಮಹಾತ್ಮನಾಂ–ಮಹಾತ್ಮರಾದ, ಪಾಂಡವಾನಾಂ– ಪಾಂಡವರಿಗೆ, ದ್ವಿಮಾಸೋನೇ– ಎರಡು ತಿಂಗಳುಗಳಿಂದ ಕಮ್ಮಿಯಾದ, ಸಂವತ್ಸರೇ – ಒಂದು ವರ್ಷವು, ಗತೇಸತಿ, ಹೋಗುತ್ತಿರಲು, ಮತ್ಸ್ಯನೃಪತೇಃ – ಮತ್ಸ್ಯದೇಶದ ರಾಜನಾದ ವಿರಾಟನ, ಶ್ಯಾಲಃ – (ಹೆಂಡತಿಯ ತಮ್ಮ,) ವೈದುನನಾದ, ಬಲವತಾಂ – ಬಲಿಷ್ಠರಮಧ್ಯದಲ್ಲಿ ವರಃ – ಶ್ರೇಷ್ಠನಾದ, ಕೀಚಕನು, ದಿಶಃ- ದಿಕ್ಕುಗಳನ್ನು, ವಿಜಿತ್ಯ-ಗೆದ್ದು, ಆಗತಃ – ಬಂದನು. ॥೧೯॥

ಸ ದ್ರೌಪದೀಮೀಕ್ಷ್ಯಮನೋಭವಾರ್ತಃ ಸಂಪ್ರಾರ್ಥಯಾಮಾಸ ತಯಾನಿರಸ್ತಃ ॥
ಮಾಸೇಗತೇ ಭಗಿನೀಂ ಸ್ವಾಂ ಸುದೇಷ್ಣಾಂಸಂಪ್ರಾರ್ಥಯಾಮಾಸತದರ್ಥಮೇವ ॥೨೦॥

ಸಃ ಆ ಕೀಚಕನು, ದ್ರೌಪದೀಂ ದ್ರೌಪದಿಯನ್ನು, ಈಕ್ಷ್ಯ-ನೋಡಿ, ಮನೋಭವಾರ್ತಸ್ಸನ್ — ಕಾಮನಿಂದ ಪೀಡಿತನಾಗಿ, ಸಂಪ್ರಾರ್ಥಯಾಮಾಸ ನನ್ನಿಂದರವಿಸು ಎಂದು ದ್ರೌಪದಿಯನ್ನು ಪ್ರಾರ್ಥಿಸಿದನು. ತಯಾ–ಆ ದ್ರೌಪದಿಯಿಂದ, ನಿರಸ್ತಃ – ನಿರಾಕರಿಸಲ್ಪಟ್ಟ ಕೀಚಕನು, ಮಾಸೇಗತೇಸತಿ – ಒಂದು ತಿಂಗಳು ದಾಟುತ್ತಿರಲು, ಸ್ವಾಂ ಭಗಿನೀಂ – ತನ್ನ ತಂಗಿಯಾದ, ಸುದೇಷ್ಣಾಂ – ಸುದೇಷ್ಣೆಯನ್ನು ತದರ್ಥಮೇವ—ದ್ರೌಪದೀರವಣಕ್ಕಾಗಿಯೇ, ಸಂಪ್ರಾರ್ಥಯಾಮಾಸ – ಪ್ರಾರ್ಥಿಸಿದನು. ॥೨೦॥

ತಯಾನಿಷಿದ್ಧೋsಪಿ ಪುನಃ ಪುನಸ್ತಾಂಯದಾಯಯಾಚೇsಥಚಸಾsಹ ಕೃಷ್ಣಾಂ ॥
ಸಮಾನಯಾಶ್ವೇವ ಸುರಾಂಮದರ್ಥಮಿತೀರಿತಾನೇತಿಭೀತಾವದತ್ಸಾ ॥೨೧॥

ತಯಾ – ಆ ಸುದೇಷ್ಣೆಯಿಂದ, ನಿಷಿದ್ಧೋಪಿ-ನಿರಾಕರಿಸಲ್ಪಟ್ಟವನಾದರೂ ಕೂಡ, ಪುನಃ ಪುನಃ – ಮತ್ತೂ ಮತ್ತು, ತಾಂ - ಆ ಸುದೇಷ್ಣೆಯನ್ನು, ಯದಾ - ಯಾವಾಗ, ಯಯಾಚೇ – ಬೇಡಿದನೋ, ಅಥ – ಅನಂತರ, ಸಾ-ಆ ಸುದೇಷ್ಣೆಯು

ಕೃಷ್ಣಾಂ – ದ್ರೌಪದಿಯನ್ನು ಕುರಿತು ಆಶು-ಕೂಡಲೇ, ಮದರ್ಥಂ–ನನಗೋಸ್ಕರ, ಸುರಾಂ – ಮದ್ಯವನ್ನು ಸಮಾನಯ – ಕೀಚಕನ ಮನೆಯಿಂದ ತೆಗೆದುಕೊಂಡು ಬಾ, ಇತಿ – ಎಂದು, ಆಹ – ಹೇಳಿದಳು, ಇತಿ ಈ ರೀತಿಯಾಗಿ, ಈರಿತಾ – ಹೇಳಿಸಿ ಕೊಳ್ಳಲ್ಪಟ್ಟ, ಸಾ – ಆ ದ್ರೌಪದಿಯು, ಭೀತಾಸತೀ–ಅಸ್ಪೃಶ್ಯನಾದ ಕೀಚಕನ ಸ್ಪರ್ಶದಿಂದ ಹೆದರಿದವಳಾಗಿ, ನೇತಿ – ನಾನು ಹೋಗುವುದಿಲ್ಲವೆಂದು, ಅವದತ್ ಹೇಳಿದಳು. ॥೨೧॥

ಬಲಾತ್ತಯಾಪ್ರೇಷಿತಾ ತದ್ಗೃಹಾಯ ಯದಾಗಮತ್ತೇನ ಹಸ್ತೇಗೃಹೀತಾ ॥
ವಿಧೂಯ ತಂ ಪ್ರಾದ್ರವತ್ಸಾಸಭಾಯೈ ಸ್ಮೃತ್ವಾದಿತ್ಯಸ್ಥಂವಾಸುದೇವಂ ಪರೇಶಂ ॥೨೨॥

ತಯಾ – ಆ ಸುದೇಷ್ಣೆಯಿಂದ, ಬಲಾತ್ – ಬಲಾತ್ಕಾರದಿಂದ, ತದ್ಗೃಹಾಯ – ಆ ಕೀಚಕನ ಮನೆಗೋಸ್ಕರ, ಪ್ರೇಷಿತಾ – ಕಳುಹಿಸಿಕೊಳ್ಳಲ್ಪಟ್ಟ ದ್ರೌಪದಿಯು, ಯದಾ – ಯಾವಾಗ, ಅಗಮತ್ – ಹೋದಳೋ, ತದಾ – ಆಗ, ತೇನ– ಆ ಕೀಚಕನಿಂದ, ಹಸ್ತೇ – ಕೈಯಲ್ಲಿ, ಗೃಹೀತಾ – ಹಿಡಿಯಲ್ಪಟ್ಟ, ಸಾ – ಆ ದ್ರೌಪದಿಯು, ತಂ – ಆ ಕೀಚಕನನ್ನು, ವಿಧೂಯ - ಎಡಗೈಯಿಂದ ದೂರೀಕರಿಸಿ, ಆದಿತ್ಯಸ್ಥಂ – ಸೂರ್ಯನಲ್ಲಿರುವ, ಪರೇಶಂ – ಬ್ರಹ್ಮಾದಿಗಳಿಗೆ ಸ್ವಾಮಿಯಾದ, ವಾಸುದೇವಂ – ಶ್ರೀಕೃಷ್ಣನನ್ನು, ಸ್ಮೃತ್ವಾ – ಸ್ಮರಿಸಿಕೊಂಡು, ಸಭಾಯೈ – ಸಭೆಗೋಸ್ಕರ, ಪ್ರಾದ್ರವತ್ ಓಡಿದಳು ॥೨೨॥

ಅನುದ್ಯುತ್ಯೈನಾಂಪಾತಯಿತ್ವಾಪದಾಸ ಸಂತಾಡಯಾಮಾಸ ತದಾರವಿಸ್ಥಃ ॥
ನಾರಾಯಣೋಹೇತಿನಾಮೈವ ರಕ್ಷೋನ್ಯಯೋಜಯತ್ತದದೃಶ್ಯಂ ಸಮಾಗಾತ್ ॥ ೨೩ ॥

ಸಃ – ಆ ಕೀಚಕನು, ಏನಾಂ – ಈ ದ್ರೌಪದಿಯನ್ನು, ಅನುದ್ಯುತ್ಯ– ಅನುಸರಿಸಿಹೋಗಿ, ಪಾತಯಿತ್ವಾ - ಬೀಳಿಸಿ, ಪದಾ – ಕಾಲಿನಿಂದ, ಸಂತಾಡಯಾಮಾಸ – ಒದ್ದನು. ತದಾಏವ – ಆಗಲೇ ರವಿಸ್ಥಃ – ಸೂರ್ಯಾಂತರ್ಗತನಾದ, ನಾರಾಯಣಃ – ನಾರಾಯಣನು, ಹೇತಿನಾಮ – ಹೇತಿ ಎಂದು ಹೆಸರುಳ್ಳ, ರಕ್ಷಃ ರಾಕ್ಷಸನನ್ನು, ನ್ಯಯೋಜಯತ್ – ಕಳುಹಿಸಿದನು. ತತ್ – ಆ ರಾಕ್ಷಸನು, ಅದೃಶ್ಯಂಸತ್ – ಕಾಣದವನಾಗಿ, ಸಮಾಗಾತ್ –ಬಂದನು, ॥೨೩॥

ವಾಯುಃ ಸಮಾವಿಶ್ಯತುಕೀಚಕಂ ತಂ ನ್ಯಪಾತಯತ್ತಾಂಸಮೀಕ್ಷ್ಯೈವಭೀಮಃ ॥
ಚುಕೋಪವೃಕ್ಷಂಚಸಮೀಕ್ಷಮಾಣಂತಂವಾರಯಾಮಾಸಯುಧಿಷ್ಠಿರೋಗ್ರಜಃ ॥ ೨೪ ॥

ವಾಯುಃ—ವಾಯುದೇವರು, ತಂ – ಆಹೇತಿನಾಮಕರಾಕ್ಷಸನನ್ನು, ಸಮಾವಿಶ್ಯ — ಪ್ರವೇಶಿಸಿ, ಕೀಚಕನನ್ನು, ನ್ಯಪಾತಯತ್ – ಬೀಳಿಸಿದನು. ಭೀಮಃ—ಭೀಮಸೇನನು, ತಾಂ--ಆದ್ರೌಪದಿಯನ್ನು, ಸಮೀಕ್ಷ್ಯೈವ—ನೋಡಿದಾಗಲೇ, ಚುಕೋಪ – ಕುಪಿತನಾದನು. ವೃಕ್ಷಂ – ಮರವನ್ನು, ಸಮೀಕ್ಷಮಾಣಂ – ಕೀಳಲುನೋಡತಕ್ಕ, ತಂ – ಆ ಭೀಮನನ್ನು, ಅಗ್ರಜಃ – ಅಣ್ಣನಾದ, ಯುಧಿಷ್ಠಿರಃ – ಧರ್ಮರಾಜನು, ವಾರಯಾಮಾಸ—ತಡೆದನು ॥ ೨೪ ॥

ಕೃಷ್ಣಾರಾತ್ರೌಭೀಮಸಕಾಶಮೇತ್ಯಹಂತುಂಪಾಪಂ ಕೀಚಕಂ ಪ್ರೇರಯತ್ತಂ ॥
ಭೀಮಸ್ಯಬುದ್ಧ್ಯಾನಿಶಿಸಾಕೀಚಕಂಚಜಗಾದಗಂತುಂಶೂನ್ಯಗೃಹಂಸಚಾಗಾತ್ ॥ ೨೫ ॥

ಕೃಷ್ಣಾ— ದ್ರೌಪದಿಯು, ರಾತ್ರೌ – ರಾತ್ರಿಯಲ್ಲಿ, ಭೀಮಸಕಾಶಂ – ಭೀಮನಸಮೀಪವನ್ನು, ಏತ್ಯ – ಹೊಂದಿ, ಪಾಪಂ–ಪಾಪಿಷ್ಠನಾದ, ಕೀಚಕಂ – ಕೀಚಕನನ್ನು ಹಂತುಂ – ಕೊಲ್ಲಲು, ತಂ – ಆ ಭೀಮನನ್ನು, ಪ್ರೇರಯತ್–ಪ್ರೇರಿಸಿದಳು, ಸಾ – ಆ ದ್ರೌಪದಿಯು, ಭೀಮಸ್ಯ — ಭೀಮನಿಂದ, ಬುದ್ಧ್ಯಾ – ಶಿಕ್ಷಿತವಾದ ಬುದ್ಧಿಯಿಂದ, ಕೀಚಕಂ – ಕೀಚಕನನ್ನು ಕುರಿತು, ನಿಶಿ – ರಾತ್ರಿಯಲ್ಲಿ,ಶೂನ್ಯಗೃಹಂ – ಜನರಿಲ್ಲದ ಮನೆಯನ್ನು, ಗಂತುಂ–ಹೋಗಲು, ಜಗಾದ – ಹೇಳಿದಳು, ಸಚ– ಆ ಕೀಚಕನಾದರೂ, ಅಗಾತ್ – ಹೋದನು. ॥ ೨೫ ॥

ತತ್ರೈನಮಾಸಾದ್ಯಚ ಭೀಮಸೇನೋ ವಿಜಿತ್ಯತಂ ಬಾಹುಯುದ್ಧೇನಿಹತ್ಯ ॥
ಶಿರೋಗುದೇಪಾಣಿಪಾದೌ ಚ ತಸ್ಯಪ್ರವೇಶಯಾಮಾಸ ವಿಮೃದ್ಯ ವೀರಃ ॥೨೬॥

ವೀರಃ — ಪರಾಕ್ರಮಿಯಾದ, ಭೀಮಸೇನ ಃ – ಭೀಮಸೇನನು, ತತ್ರ —ಆ ಶೂನ್ಯಗೃಹದಲ್ಲಿ, ಏನಂ – ಈ ಕೀಚಕನನ್ನು, ಆಸಾದ್ಯ – ಹೊಂದಿ, ಬಾಹುಯುದ್ಧೇ – ಭುಜ ಸಮರದಲ್ಲಿ, ತಂ — ಆ ಕೀಚಕನನ್ನು, ವಿಜಿತ್ಯ — ಗೆದ್ದು, ವಿಮೃದ್ಯ – ಪಿಂಡದಂತೆಮಾಡಿ, ನಿಹತ್ಯ – ಕೊಂದು, ಶಿರಃ – ತಲೆಯನ್ನು, ಪಾಣಿಪಾದೌ ಚ – ಕೈಕಾಲಗಳನ್ನೂ ಕೂಡ, ಗುದೇ – ಕುಂಡೆಯಲ್ಲಿ ಪ್ರವೇಶಯಾಮಾಸ – ಪ್ರವೇಶಮಾಡಿಸಿದನು. ॥೨೬॥

ಅವಧ್ಯಂತಂನಿಹತಂ ವೀಕ್ಷ್ಯ ತಸ್ಯಪಂಚೋತ್ತರಂ ಶತಮೇವಾನುಜಾನಾಂ ॥
ಸರ್ವಂವರಾಚ್ಛಂಕರಸ್ಯಹ್ಯವಧ್ಯಂ ಸಹೈವಕೃಷ್ಣಾಂತೇನದಗ್ಧುಂಬಬಂಧ ॥೨೭॥

ಅವಧ್ಯಂ -- ಯಾರಿಂದಲೂ ಕೊಲ್ಲಲು ಅಶಕ್ಯನಾದ, ತಂ– ಆ ಕೀಚಕನನ್ನು.ನಿಹತಂ–ಕೊಲ್ಲಲ್ಪಟ್ಟವನನ್ನಾಗಿ,ವೀಕ್ಷ್ಯ– ನೋಡಿ, ಶಂಕರಸ್ಯ– ರುದ್ರನ, ವರಾತ್– ವರದಿಂದ, ಅವಧ್ಯಂ-ಅವಧ್ಯವಾದ ತಸ್ಯ – ಕೀಚಕನ, ಅನುಜಾನಾಂ – ತಮ್ಮಂದಿರ, ಪಂಚೋತ್ತರಂಶತಂ – ಐದರಿಂದ ಅಧಿಕವಾದ ನೂರು ಅಂದರೆ ನೂರೈದು ಸಂಖ್ಯೆಯ ಸರ್ವಂ — ಎಲ್ಲ ಸಮೂಹವು, ತೇನ – ಆ ಕೀಚಕನಿಂದ, ಸಹೈವ – ಕೂಡಿಕೊಂಡೇ, ಕೃಷ್ಣಾಂ -- ದ್ರೌಪದಿಯನ್ನು, ದಗ್ಧುಂ — ಸುಡಲು, ಬಬಂಧ– ಕಟ್ಟಿತು. ॥೨೭॥

ಸಾ ನೀಯಮಾನಾ ಕೀಚಕೈಃ ಸಂರುರಾವ ಶ್ರುತ್ವೈವತಂ ಭೀಮಸೇನೋ ಮಹಾಂತಂ ॥
ಉದ್ಧೃತ್ಯ ವೃಕ್ಷಂ ತೇನ ಜಘಾನ ಸರ್ವಾನಾದಾಯಕೃಷ್ಣಾಂ ಪುನರಾಗಾದ್ಗೃಹಂಚ ॥೨೮॥

ಕೀಚಕೈಃ—ನೂರೈದುಕೀಚಕರಿಂದ,ನೀಯಮಾನಾ–ಒಯ್ಯಲ್ಪಡುವ, ಸಾ-ಆ ದ್ರೌಪದಿಯು, ಸಂರುರಾವ – ಚೀರ್ನಾಗಿ ಕೂಗಿದಳು-ಭೀಮಸೇನಃ – ಭೀಮಸೇನನು, ತಂ– ಆ ಶಬ್ದವನ್ನು, ಶ್ರುತ್ವೈವ-ಕೇಳಿಯೇ, ಮಹಾಂತಂ ವೃಕ್ಷಂ – ದೊಡ್ಡಮರವನ್ನು, ಉದ್ಧೃತ್ಯ – ಕಿತ್ತು, ತೇನ – ಆ ಮರದಿಂದ, ಸರ್ವಾನ್ – ಎಲ್ಲಾ ಕೀಚಕರನ್ನೂ, ಜಘಾನ – ಕೊಂದನು. ಪುನಃ ಮತ್ತು, ಕೃಷ್ಣಾಂ – ದ್ರೌಪದಿಯನ್ನು, ಆದಾಯ – ಕರೆದುಕೊಂಡು, ಗೃಹಂ-ವಾಸಸ್ಥಾನವನ್ನು ಕುರಿತು, ಆಗಾತ್ ಹೋದನು. ॥೨೮॥

ಭಾ. ಅ. ೧೯–೨೮ ಹೀಗೆ ವಾಸಮಾಡುತ್ತಾ ಹತ್ತು ತಿಂಗಳುಕಳೆದಿರುವಾಗ, ವಿರಾಟರಾಜನ ಶ್ಯಾಲಕನಾದ (ಹೆಂಡತಿಯ ತಮ್ಮನಾದ) ಬಲಿಷ್ಠನಾದ ಕೀಚಕನು ದಿಗ್ವಿಜಯದಿಂದ ತಿರುಗಿ ಬಂದನು. ಅವನು ದ್ರೌಪದಿಯನ್ನು ನೋಡಿ ಮೋಹಿತನಾಗಿ ತನ್ನಿಂದ ಕೂಡುವದಕ್ಕಾಗಿ ಪ್ರಾರ್ಥಿಸಿ, ಶಕ್ಯವಾಗದಿರಲು ತನ್ನ ಅಕ್ಕನಾದ, ವಿರಾಟನ ರಾಣಿ ಸುದೇಷ್ಣಾಳನ್ನು ಆ ಕಾರ್ಯಮಾಡಿಕೊಡಲು ಪ್ರಾರ್ಥಿಸಿದನು. ಅವಳೂ ಅನೇಕಸಲ ನಿಷೇಧಿಸಿದರೂ ಕೂಡ ಪುನಃ ಪುನಃ ಈ ನೀಚ ಕೀಚಕನು ಪ್ರಾರ್ಥಿಸಿದ್ದರಿಂದ ದ್ರೌಪದಿಯನ್ನು ಕುರಿತು ಕೀಚಕನ ಮನೆಯಿಂದ ಮದ್ಯವನ್ನು ತಾ ಎಂದು ಹೇಳಿದಳು. ಆಗ ದ್ರೌಪದೀ ದೇವಿಯರು ಭೀತಿಯಿಂದ ಆಗದು ಎಂದಾಗ, ಬಲಾತ್ಕಾರ ಮಾಡಿ ಕಳಿಸಿದ್ದಾಳೆ. ಆಗ ಕೀಚಕನು ದ್ರೌಪದೀ ದೇವಿಯರ ಕೈ ಹಿಡಿಯಲು ಕೊಸರಿಕೊಂಡು, ಅವನನ್ನು ದೂರಸರಿಸಿ ಸೂರ್ಯಾಂತರ್ಗತ ಶ್ರೀಮನ್ನಾರಾಯಣನನ್ನು ಸ್ಮರಿಸುತ್ತಾ ಸಭೆಗೆ ಓಡಿ ಬಂದ.ು. ಅವರನ್ನು ಬೆನ್ನು ಹತ್ತಿ ಓಡುತ್ತಾ ಬಂದು ಕೆಡವಿ ಕಾಲಿನಿಂದ ಒದ್ದನು. ಆಗ ಸೂರ್ಯಾಂತರ್ಗತ ಶ್ರೀನಾರಾಯಣ ದೇವರು ಹೇತಿ ಎಂಬ ರಾಕ್ಷಸನನ್ನು ಕಳಿಸಿದರು. ಆ ರಾಕ್ಷಸನು ಕಾಣದಂತೆಯೇ ಬಂದನು. ಅವನಲ್ಲಿ ವಾಯುದೇವರು ಪ್ರವೇಶಿಸಿ ಕೀಚಕನನ್ನು ಕೆಡವಿದರು. ಆಗ ಶ್ರೀದ್ರೌಪದೀದೇವಿಯರನ್ನು ನೋಡಿದ ಶ್ರೀಭೀಮಸೇನದೇವರು ಸಿಟ್ಟಿಗೆದ್ದು ಮರವನ್ನೇ ಕಿತ್ತಿ ಅದರಿಂದಲೇ ಕೀಚಕನನ್ನು ಹೊಡೆಯುವದಕ್ಕಾಗಿ ಎಂಬಂತೆ ಅಲ್ಲಿರುವ ಒಂದು ಮರವನ್ನು ನೋಡಿದಾಗ, ಧರ್ಮರಾಜನು ಶ್ರೀಭೀಮಸೇನದೇವರನ್ನು ತಡೆದನು. ರಾತ್ರಿಯಲ್ಲಿ ದ್ರೌಪದಿಯು ಶ್ರೀಭೀಮಸೇನರ ಹತ್ತಿರ ಎಲ್ಲ ಹೇಳಿ ಕೀಚಕನ ಸಂಹಾರಮಾಡಲು ಪ್ರಾರ್ಥಿಸಿದಳು. ಆಗ ಭೀಮಸೇನದೇವರು ಹೇಳಿಕೊಟ್ಟಂತೆ ಕೀಚಕನಿಗೆ ಯಾರೂ ಇಲ್ಲದ ಒಂದು ಮನೆಯನ್ನು ಕುರಿತು ರಾತ್ರಿಯಲ್ಲಿ ಬರಲು ತಿಳಿಸಿದಳು. ಆ ಪ್ರಕಾರ ಕೀಚಕನು ಬಂದಾಗ, ಶ್ರೀಭೀಮಸೇನರು ಅಲ್ಲಿಗೆ ಬಂದು ಆ ಕೀಚಕನೊಂದಿಗೆ ಬಾಹುಯುದ್ಧಮಾಡಿ, ಗೆದ್ದು, ಅವನ ದೇಹವನ್ನು ಪಿಂಡದಂತೆ ಮಾಡಿ, ಕೊಂದು, ಅವನ ಕೈ – ಕಾಲುಗಳನ್ನು, ತಲೆಯನ್ನು ಗುದದ್ವಾರದಲ್ಲಿ ಸಿಗಿಸಿದರು. ಅವಧ್ಯನಾದ ಅವನು ಸತ್ತದ್ದನ್ನು ನೋಡಿ ಅವನ

ಒಂದುನೂರಾಐದು ತಮ್ಮಂದಿರು ಶ್ರೀರುದ್ರವರದಿಂದ ಅವಧ್ಯರಾದವರು, ಕೀಚಕನೊಟ್ಟಿಗೆ ದ್ರೌಪದಿಯನ್ನು ಸುಡಬೇಕೆಂಬ ಕುಬುದ್ಧಿಯಿಂದ ಕಟ್ಟಿದರು. ಒಯ್ಯಲಾರಂಭಿಸಿದರು. ಆಗ ದ್ರೌಪದಿಯು ಅಳುವ ಧ್ವನಿಯನ್ನು ಕೇಳಿದ ಶ್ರೀ ಭೀಮಸೇನ ದೇವರು ದೊಡ್ಡದಾದ ವೃಕ್ಷವನ್ನು ಕಿತ್ತಿ ಅದರಿಂದಲೇ ಅವರೆಲ್ಲರನ್ನೂ ಕೊಂದು, ದ್ರೌಪದಿಯನ್ನು ಕರೆದುಕೊಂಡು ಮನೆಗೆ ಬಂದರು.

ಏವಂಯತ್ನಾತ್ತಪಸಾ ತೈರವಾಪ್ತೋವರಶ್ಶಿವಾದಜಯತ್ವಂರಣೇಷು ॥
ಅವಧ್ಯತಾಚ್ಚೈವ ಷಡುತ್ತರಾಸ್ತೇಶತಂಹತಾ ಭೀಮಸೇನೇನ ಸಂಖ್ಯೇ ॥೨೯॥

ತೈಃ – ನೂರೈದು ಮಂದಿಕೀಚಕರಿಂದ, ಏವಂ – ಮುಖ್ಯಕೀಚಕನಂತೆಯೇ, ಯತ್ನಾತ್ – ಪ್ರಯತ್ನದಿಂದ ಮಾಡಲ್ಪಟ್ಟ, ತಪಸಾ–ತಪಸ್ಸಿನಿಂದ, ಶಿವಾತ್-ರುದ್ರನಿಂದ, ರಣೇಷು – ಯುದ್ಧಗಳಲ್ಲಿ, ಅಜಯತ್ವಂ – ಪರಾಜಯರಾಹಿತ್ಯವು ಅವಧ್ಯತಾಚ್ಚ – ಇನ್ನೊಬ್ಬರಿಂದ ಕೊಲ್ಲಲ್ಪಡದಿರುವಿಕೆಯು, ವರಃ—ವರವಾಗಿ, ಅವಾಪ್ತಃ–ಹೊಂದಲ್ಪಟ್ಟಿತ್ತು.–ಷಡುತ್ತರಾಃ-ಶತಂ, ಒಂದುನೂರಾ ಆರು ಸಂಖ್ಯಾಕರಾದ,ತೇ – ಆ ಕೀಚಕರು,ಭೀಮಸೇನೇನ – ಭೀಮಸೇನನಿಂದ, ಸಂಖ್ಯೇ–ಯುದ್ಧದಲ್ಲಿ, ಹತಾಃ—ಕೊಲ್ಲಲ್ಪಟ್ಟರು. ॥೨೯॥

ಗಂಧರ್ವ ಇತ್ಯೇವನಿಹತ್ಯ ಸರ್ವಾನ್ಮುಮೋದ ಭೀಮೋದ್ರೌಪದೀಚಾಥಕೃಷ್ಣಾಂ ॥
ಯಾಹೀತ್ಯುಚೇಸಾಸುದೇಷ್ಣಾಭಯೇನ ತ್ರಯೋದಶಾಹಂ ಪಾಲಯೇತ್ಯಾಹತಾಂಸಾ ॥೩೦॥

ಭೀಮ : – ಭೀಮನು, ಗಂಧರ್ವಇತ್ಯೇವ – ನಾನು ಗಂಧರ್ವನೆಂದು ಹೇಳಿಯೇ, ಸರ್ವಾನ್ – ಎಲ್ಲಾ ಕೀಚಕರನ್ನು, ನಿಹತ್ಯ ಕೊಂದು, ಮುಮೋದ–ಸಂತೋಷಗೊಂಡನು. ದ್ರೌಪದೀಚ—ದ್ರೌಪದಿಯೂ ಕೂಡ ಸಂತೋಷಪಟ್ಟಳು ಅಥ–ಅನಂತರ, ಸಾ ಸುದೇಷ್ಣಾ — ಆ ವಿರಾಟನ ಹೆಂಡತಿಯಾದ ಸುದೇಷ್ಣೆಯು, ಭಯೇನ — ಇನ್ನು ಮುಂದೆ ಏನು ಅನರ್ಥ ಆಗುವುದೋ ಎಂಬ ಹೆದರಿಕೆಯಿಂದ, ಕೃಷ್ಣಾಂ— ದ್ರೌಪದಿಯನ್ನು ಕುರಿತು, ಯಾಹಿ – ಹೋಗು, ಇತಿ — ಎಂಬುದಾಗಿ ಊಚೇ – ಹೇಳಿದಳು. ಸಾ – ಆದ್ರೌಪದಿಯು, ತಾಂ – ಆ ಸುದೇಷ್ಣೆಯನ್ನು, ಕುರಿತು ತ್ರಯೋದಶಾಹಂ – ಹದಿಮೂರು ದಿನಗಳ ತನಕ, ಪಾಲಯ – ರಕ್ಷಿಸು, ಇತಿ — ಎಂದು, ಆಹ — ಹೇಳಿದಳು. ॥೩೦॥

ಅಸ್ತ್ವಿತ್ಯೇನಾಮಾಹಭಯಾತ್ಸುದೇಷ್ಣಾತಥಾವಸನ್ಪೂರ್ಣಮಬ್ದಂಚತೇಽತ್ರ ॥
ತದಾಸಾರ್ಥಾನ್ಪ್ರವಿಚಿಂತ್ಯಾಖಿಲಾಯಾಂ ಪೃಥ್ವ್ಯಾಂ ಛನ್ನಾನ್ಧಾರ್ತರಾಷ್ಟ್ರಸ್ಯದೂತಾಃ ॥
ಅವಿಜ್ಞಾಯಪ್ರಯಯುಧಾರ್ತರಾಷ್ಟ್ರಮೂಚುರ್ಹತಂ ಕೀಚಕಂ ಯೋಷಿದರ್ಥೇ ॥೩೧॥

ಸುದೇಷ್ಣಾ – ಸುದೇಷ್ಣೆಯು, ಭಯಾತ್ — ವಾಸಮಾಡುವುದು ಬೇಡವೆಂದರೆ ಅನರ್ಥಭಯದಿಂದ, ಅಸ್ತು — ಹದಿಮೂರು ದಿನಗಳತನಕ ಇರು, ಇತಿ – ಎಂದು, ಏನಾಂ—ಈ ದ್ರೌಪದಿಯನ್ನು ಕುರಿತು ಆಹ – ಹೇಳಿದಳು. ತೇ – ಆ ಪಾಂಡವರು. ತಥಾ – ಹಾಗೆಯೇ, ಅತ್ರ – ಈವಿರಾಟನಗರದಲ್ಲಿ, ಪೂರ್ಣಮಬ್ದಂ – ಒಂದು ವರ್ಷಪೂರ್ಣವಾಗುವತನಕ, ಅವಸನ್ – ವಾಸಮಾಡಿದರು. ತದಾ ಒಂದು ವರ್ಷವಾದಾಗ, ಧಾರ್ತರಾಷ್ಟ್ರಸ್ಯ – ದುರ್ಯೋಧನನ, ದೂತಾಃ – ಭೃತ್ಯರು, ಪಾರ್ಥಾನ್-ಪಾಂಡವರನ್ನು ಅಖಿಲಾಯಾಂ ಪೃಥ್ವ್ಯಾಮ್ ಃ – ಎಲ್ಲಾ ಭೂತಲದಲ್ಲಿ, ಛನ್ನಾನ್—ಎಲ್ಲೋ ಒಂದು ಕಡೆ ಅಡಗಿರುವವರನ್ನಾಗಿ, ಪ್ರವಿಚಿಂತ್ಯ–ಆಲೋಚಿಸಿ, ಅವಿಜ್ಞಾಯ – ಎಲ್ಲಿರುವರೆಂದು ತಿಳಿಯದೆ, ಪ್ರಯಯುಃ – ಹೋದರು. ಧಾರ್ತರಾಷ್ಟ್ರಂ—ದುರ್ಯೋಧನನನ್ನು ಕುರಿತು, ಕೀಚಕಂ — ಕೀಚಕನನ್ನು, ಯೋಷಿದರ್ಥೇ – ಸ್ತ್ರೀನಿಮಿತ್ತವಾಗಿ, ಹತಂ – ಸಂಹೃತನನ್ನಾಗಿ, ಊಚುಃ — ಹೇಳಿದರು. ॥೩೧॥

ತೇನಾವದದ್ದ್ರೌಪದೀಕಾರಣೇನ ದುರ್ಯೋಧನೋನಿಹತಂ ಕೀಚಕಂ ತಂ ॥
ಭೀಮೇನಾಗುಸ್ತತ್ರ ದುರ್ಯೋಧನಾದ್ಯಾಃ ಭೀಷ್ಮಾದಿಭಿಃಸಹಕರ್ಣೇನಚೈವ ॥೩೨॥

ದುರ್ಯೋಧನಃ – ದುರ್ಯೋಧನನು, ತೇನ —ಕೀಚಕನ ಹನನವಾರ್ತಾ ಶ್ರವಣದಿಂದ, ತಂ ಕೀಚಕಂ—ಆ ಕೀಚಕನನ್ನು ದ್ರೌಪದೀಕಾರಣೇನ – ದ್ರೌಪದೀನಿಮಿತ್ತದಿಂದ, ಭೀಮೇನ — ಭೀಮನಿಂದ, ನಿಹತಂ – ಕೊಲ್ಲಲ್ಪಟ್ಟವನನ್ನಾಗಿ, ಆವದತ್ – ಹೇಳಿದನು. ದುರ್ಯೋಧನಾದ್ಯಾಃ — ದುರ್ಯೋಧನನೇ ಮೊದಲಾಗಿ ಉಳ್ಳವರು, ಭೀಷ್ಮಾದಿಭಿಃ— ಭೀಷ್ಮನೇ ಮೊದಲಾಗಿ ಉಳ್ಳವರಿಂದ, ಕರ್ಣೇನಚ — ಕರ್ಣನಿಂದಲೂ ಕೂಡ, ಸಹ—ಕೂಡಿಕೊಂಡು, ತತ್ರ – ಆ ಮತ್ಸ್ಯ ದೇಶಕ್ಕೆ, ಅಗುಃ — ಹೋದರು ॥೩೨॥

ಅಗ್ರೇಯಯೌ ತತ್ರಯೋದ್ಧುಂಸುಶರ್ಮಾಸಗಾವಿರಾಟಸ್ಯ ಸಮಾಜಹಾರ ॥
ಶ್ರುತ್ವಾವಿರಾಟೋಽನುಯಯೌ ಸಸೇನಃ ತಂಪಾಂಡವಾಶ್ಚಾನುಯಯುರ್ವಿನಾರ್ಜುನಂ॥ ॥೩೩॥

ತತ್ರ – ಆ ದುರ್ಯೋಧನಾದಿಗಳ ಮಧ್ಯದಲ್ಲಿ, ಸುಶರ್ಮಾ – ಸುಶರ್ಮನೆಂಬವನು, ಯೋದ್ಧುಂ — ಯುದ್ಧ ಮಾಡುಲು, ಅಗ್ರೇ – ಮುಂಭಾಗದಲ್ಲಿ, ಯಯೌ - ಹೋದನು. ಸಃ – ಆ ಸುಶರ್ಮನು, ವಿರಾಟಸ್ಯ – ವಿರಾಟನ, ಗಾಃ — ಗೋವುಗಳನ್ನು, ಸಮಾಜಹಾರ – ಅಪಹರಿಸಿದನು. ವಿರಾಟಃ – ವಿರಾಟನು, ಶ್ರುತ್ವಾ – ಗೋವುಗಳ ಅಪಹಾರವನ್ನು ಕೇಳಿ, ಸಸೇನಃ ಸನ್ – ಸೈನ್ಯದಿಂದ ಕೂಡಿದವನಾಗಿ, ಅನುಯಯೌ — ಸುಶರ್ಮನನ್ನು ಅನುಸರಿಸಿ ಹೋದನು. ಪಾಂಡವಾಶ್ಚ — ಪಾಂಡವರೂ ಕೂಡ, ಅರ್ಜುನಂ ವಿನಾ – ಅರ್ಜುನನನ್ನು ಹೊರತುಪಡಿಸಿ, ತಂ – ಆ ವಿರಾಟನನ್ನು ಅನುಯಯುಃ – ಅನುಸರಿಸಿ ಹೋದರು. ॥೩೩॥

ವಿಜಿತ್ಯಸಂಖ್ಯೇಜಗೃಹೇವಿರಾಟಂ ತದಾ ಸುಶರ್ಮಾತಮಯಾದ್ವೃಕೋದರಃ ॥
ಸತಸ್ಯಸೇನಾಂವಿನಿಹತ್ಯಮಾತ್ಸ್ಯಂ ವಿಮೋಚ್ಯಜಗ್ರಾಹ ಸುಶರ್ಮರಾಜಂ ॥೩೪॥

ಯದಾ – ಯಾವಾಗ, ಸುಶರ್ಮಾ - ಸುಶರ್ಮನು, ಸಂಖ್ಯೆ – ಯುದ್ಧದಲ್ಲಿ, ವಿರಾಟಂ – ವಿರಾಟನನ್ನು, ವಿಜಿತ್ಯ– ಗೆದ್ದು, ಜಗೃಹೇ—ಹಿಡಿದನೋ, ತದಾ – ಆಗ, ವೃಕೋದರಃ – ಭೀಮಸೇನನು, ತಂ – ಆ ಸುಶರ್ಮನನ್ನು ಕುರಿತು, ಅಯಾತ್ – ಯುದ್ಧಕ್ಕಾಗಿ ಹೋದನು. ಸಃ – ಆ ಭೀಮನು, ತಸ್ಯ – ಆ ಸುಶರ್ಮನ, ಸೇನಾಂ – ಸೈನ್ಯವನ್ನು, ವಿನಿಹತ್ಯ – ಕೊಂದು, ಮಾತ್ಸ್ಯಂ – ವಿರಾಟನನ್ನು, ವಿಮೋಚ್ಯ — ಬಿಡಿಸಿ, ಸುಶರ್ಮರಾಜಂ – ಸುಶರ್ಮರಾಜನನ್ನು ಜಗ್ರಾಹ – ಹಿಡಿದನು. ॥೩೪॥

ಯುಧಿಷ್ಠಿರೋ ಮೋಚಯಾಮಾಸ ತಂಚ ತತೋರಾತ್ರೌ ನ್ಯವಸನ್ ಬಾಹ್ಯತಸ್ತೇ ॥೩೫॥
ತತೋಽಪರದಿನೇಸರ್ವೇ ಭೀಷ್ಮದ್ರೋಣಪುರಃಸರಾಃ ॥
ರಹಿತಂ ಕೀಚಕೈರ್ಮಾತ್ಸ್ಯಂ ಶಕ್ಯಂ ಮತ್ವಾಭಿನಿರ್ಯಯುಃ ॥೩೬॥

ಯುಧಿಷ್ಠಿರಃ – ಧರ್ಮರಾಜನು, ತಂ—ಆ ಸುಶರ್ಮನನ್ನು, ಮೋಚಯಾಮಾಸ – ಬಿಡಿಸಿದನು. ತತಃ – ಸುಶರ್ಮನನ್ನು ಬಿಡಿಸಿದನಂತರ, ತೇ — ಆ ಕೌರವರು, ರಾತ್ರೌ – ರಾತ್ರಿಯಲ್ಲಿ, ಬಾಹ್ಯತಃ – ಪಟ್ಟಣದ ಹೊರಗೆ, ನ್ಯವಸನ್ – ವಾಸ ಮಾಡಿದರು, ತತಃ – ಆ ಯುದ್ಧದಿನಕ್ಕಿಂತ, ಅಪರದಿನೇ–ಮರುದಿವಸದಲ್ಲಿ, ಸರ್ವೇ – ಎಲ್ಲಾ, ಭೀಷ್ಮದ್ರೋಣಪುರಸ್ಸರಾಃ– ಭೀಷ್ಮರು ದ್ರೋಣಾಚಾರ್ಯರೇ ಮೊದಲಾಗಿ ಉಳ್ಳವರು, ಕೀಚಕೈಃ – ಕೀಚಕರಿಂದ, ರಹಿತಂ – ಹೀನನಾದ, ಮಾತ್ಸ್ಯಂ— ವಿರಾಟರಾಜನನ್ನು, ಶಕ್ಯಂ–ತಮಗೆ ಹಿಡಿಯಲು ಸಾಧ್ಯನನ್ನಾಗಿ, ಮತ್ವಾ–ತಿಳಿದು,ಅಭಿನಿರ್ಯಯುಃ–ಹೊರಟರು ॥೩೫॥॥೩೬॥

ಅವ ಃ – ಭೀಷ್ಮಾದಿಗಳಿಂದ ಹಿಂದೆ ಹಿಡಿಯಲು ಸಾಧ್ಯನಾಗದ ವಿರಾಟನು ಈಗ ಹಿಡಿಯಲು ಹೇಗೆ ಸಾಧ್ಯನು ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

ಕೀಚಕಸ್ಯ ಹಿಡಿಂಬಸ್ಯ ಬಕಕಿರ್ಮೀರಯೋರಪಿ ॥
ಜರಾಸಂಧಸ್ಯ ನೃಪತೇಃ ಕಂಸಾದೀನಾಂಚಸರ್ವಶಃ ॥೩೭॥
ನಬಾಧನಾಯಭೀಷ್ಮಾದ್ಯಾಅಪಿಶೇಕುಃ ಕಥಂಚನ ॥
ತಸ್ಮಾತ್ತೇಕೀಚಕಂಶಾಂತಂಶ್ರುತ್ವಾಮಾತ್ಸ್ಯಂಯಯುರ್ಮೃಧೇ ॥೩೮॥

ಕೀಚಕಸ್ಯ — ಕೀಚಕನ, ಹಿಡಿಂಬಸ್ಯ — ಹಿಡಿಂಬರಾಕ್ಷಸನ, ಬಕಕಿರ್ಮೀರಯೋಃ — ಬಕ ಮತ್ತು ಕಿರ್ಮೀರನೆಂಬ ಅಸುರರ, ಜರಾಸಂಧಸ್ಯ-ಜರಾಸಂಧನೆಂಬ, ನೃಪತೇಃ-ರಾಜನ ಚ — ಮತ್ತು ಕಂಸಾದೀನಾಂಸರ್ವಶಃ- ಕಂಸನೇ ಮೊದಲಾಗಿ ಉಳ್ಳಎಲ್ಲರನ್ನು, ಬಾಧನಾಯ — ಪೀಡಿಸುವುದಕ್ಕೆ, ಭೀಷ್ಮಾದ್ಯಾ ಅಪಿ — ಭೀಷ್ಮನೇ ಮೊದಲಾಗಿ ಉಳ್ಳವರೂ ಕೂಡ, ಕಥಂಚನ — ಯಾವರೀತಿಯಿಂದಲೂ, ಯಸ್ಮಾತ್ — ಯಾವ ಕಾರಣದಿಂದ, ನ ಶೇಕುಃ—ಸಮರ್ಥರಾಗಲಿಲ್ಲವೋ, ತಸ್ಮಾತ್-ಆ ಕಾರಣದಿಂದ, ತೇ — ಆ ಭೀಷ್ಮಾದಿಗಳು, ಕೀಚಕಂ - ಕೀಚಕನನ್ನು, ಶಾಂತಂ — ಸತ್ತವನನ್ನಾಗಿ, ಶ್ರುತ್ವಾ — ಕೇಳಿ, ಮತ್ಸ್ಯಂ - ವಿರಾಟನನ್ನು ಕುರಿತು, ಮೃಧೇ — ಯುದ್ಧಕೋಸ್ಕರ, ಯಯುಃ — ಹೊರಟರು. ॥೩೭॥ ॥೩೮॥

ಯತಿಷ್ಯೇ ರಕ್ಷಿತುಂ ಭೀಮಾದ್ಧಾರ್ತರಾಷ್ಟ್ರಾನಿತಿ ಸ್ವಕಾಂ ॥
ಸತ್ಯಾಂ ಕರ್ತುಂ ಪ್ರತಿಜ್ಞಾಂತು ಯಯೌ ದ್ರೋಣಃಸಪುತ್ರಕಃ ॥೩೯॥

ಭೀಮಾತ್ — ಭೀಮನಿಂದ, ಧಾರ್ತರಾಷ್ಟ್ರಾನ್ —ದುರ್ಯೋಧನಾದಿಗಳನ್ನು, ರಕ್ಷಿತುಂ — ರಕ್ಷಿಸಲು, ಯತಿಷ್ಯೇ — ಪ್ರಯತ್ನಮಾಡುವೆನು, ಇತಿ-ಎಂಬುದಾಗಿ, ಸ್ವಕಾಂ—ತನ್ನದಾದ, ಪ್ರತಿಜ್ಞಾಂ — ಪ್ರತಿಜ್ಞೆಯನ್ನು, ಸತ್ಯಾಂ — ಯಥಾರ್ಥವಾದದ್ದನ್ನಾಗಿ, ಕರ್ತುಂ — ಮಾಡಲು, ಸಪುತ್ರಕಃ — ಮಗನಾದ ಅಶ್ವತ್ಥಾಮನಿಂದ ಕೂಡಿದ, ದ್ರೋಣಃ — ದ್ರೋಣರು ಯಯೌ —ಹೋದರು ॥೩೯॥

ಅವ— ವಿರಾಟ ನಗರಕ್ಕೆ ಹೋಗಿರುವ ಕೌರವರ ಅಭಿಪ್ರಾಯವನ್ನು ತಿಳಿಸುತ್ತಾರೆ.

ಯದಿಯುದ್ಧಾಯನಿರ್ಯಾಂತಿ ಜ್ಞಾತಾಃ ಸ್ಯುಃ ಪಾಂಡವಾಸ್ತದಾ ॥
ನಚೇದ್ವಿರಾಟಮನತಂ ನಮಯಿಷ್ಯಾಮಹೇ ವಯಂ ॥
ಇತಿ ಮತ್ವಾ ವಿರಾಟಸ್ಯ ಜಗೃಹುರ್ಗಾಸ್ಸಮಂತತಃ ॥೪೦-೪೧॥

ಪಾಂಡವಾಃ — ಪಾಂಡವರು, ಯದಿ — ಒಂದು ವೇಳೆ, ಯುದ್ಧಾಯ — ಸಮರಕ್ಕೋಸ್ಕರ, ನಿರ್ಯಾಂತಿ — ಹೊರಡುತ್ತಾರೋ, ತದಾ — ಆಗ, ಜ್ಞಾತಾಃ — ತಿಳಿಯಲ್ಪಟ್ಟವರು, ಸ್ಯುಃ — ಆಗುವರು, ನಚೇತ್ — ಪಾಂಡವರು ಯುದ್ಧಕ್ಕೆ ಬಾರದಿದ್ದರೆ, **ಅನತಂ** — ನಮ್ರೀಭೂತನಾಗದ (ಬಾಗದ), ವಿರಾಟಂ — ವಿರಾಟನನ್ನು, ವಯಂ - ನಾವು, ನಮಯಿಷ್ಯಾಮಹೇ— ನಮ್ರೀಭೂತನನ್ನಾಗಿ **ಮಾಡುವೆವು** (ಬಾಗಿಸುವೆವು), ಇತಿ — ಈರೀತಿಯಾಗಿ, ಮತ್ವಾ — ತಿಳಿದು, ವಿರಾಟಸ್ಯ — ವಿರಾಟನ ಗಾಃ — ಗೋವುಗಳನ್ನು, ಸಮಂತತಃ—ಸುತ್ತಮುತ್ತಲೂ, ಜಗೃಹುಃ — ಹಿಡಿದರು. ॥೪೦॥ ॥೪೧॥

ತದೋತ್ತರಃ ಸಾರಥಿತ್ವೇಪ್ರಕಲ್ಪ್ಯ ಪಾರ್ಥಂಯಯೌ ತಾನ್ನಿಶಾಮ್ಯೈವಭೀತಃ ॥
ತತೋಽರ್ಜುನಃ ಸಾರಥಿಂತಂ ವಿಧಾಯ ಕೃಚ್ಛ್ರೇಣ ಸಂಸ್ಥಾಪ್ಯಚ ತಾನ್ಯಯೌ ಕುರೂನ್ ॥೪೨॥

ತದಾ —ಆಗ, ಉತ್ತರಃ — ವಿರಾಟನ ಮಗನಾದ ಉತ್ತರಕುಮಾರನು, ಪಾರ್ಥಂ — ಅರ್ಜುನನನ್ನು, ಸಾರಥಿತ್ವೇ— ರಥ ನಡೆಸುವುದರಲ್ಲಿ, ಪ್ರಕಲ್ಪ್ಯ —ತೊಡಗಿಸಿ ಯಯೌ —ಹೋದನು. ತಾನ್—ಆ ದುರ್ಯೋಧನಾದಿಗಳನ್ನು,ನಿಶಾಮ್ಯೈವ — ನೋಡಿಯೇ, ಭೀತಃ— ಹೆದರಿದನು, ತತಃ — ಅನಂತರ, ಅರ್ಜುನಃ— ಅರ್ಜುನನು, ತಂ — ಹಿಂತಿರುಗಿ, ಹೋಗಲು ಇಚ್ಛಿಸುವ ಉತ್ತರಕುಮಾರನನ್ನು ಕೃಚ್ಛ್ರೇಣ — ಕಷ್ಟದಿಂದ, ಸಂಸ್ಥಾಪ್ಯ — ನಿಲ್ಲಿಸಿ, ತಂ — ಆತನನ್ನು,

ಸಾರಥಿಂ – ಸಾರಥಿಯನ್ನಾಗಿ, ವಿಧಾಯ – ಮಾಡಿ, ತಾನ್‌ಕುರೂನ್ — ಆ ಕೌರವರನ್ನು ಕುರಿತು, ಯಯೌ — ಹೋದನು. ॥೪೨॥

ಆದಾಯಗಾಂಡೀವಮಥ ಧ್ವಜಂಚಹನೂಮದಂಕಂಸದರೋಽಗ್ರತೋಗಾಃ ॥
ನಿವರ್ತ್ಯಯುದ್ಧಾಯಯಯೌ ಕುರೂಂಸ್ತಾನ್ ಜಿಗ್ಯೇಸವರ್ಮಾನ್‌ದ್ವೈರಥೇನೈವಸಕ್ತಾನ್ ॥೪೩॥

ಅಥ – ಅನಂತರ, ಗಾಂಡೀವಂ — ಗಾಂಡೀವ ಧನುಸ್ಸನ್ನು, ಹನೂಮದಂಕಂ – ಹನುಮಂತನು ಚಿನ್ಹವಾಗಿಉಳ್ಳ, ಧ್ವಜಂಚ – ಧ್ವಜವನ್ನೂ ಕೂಡ, ಆದಾಯ – ಶಮೀವೃಕ್ಷದಿಂದ ಹಿಡಿದುಕೊಂಡು, ಸದರಃ – ದೇವದತ್ತವೆಂಬ ಶಂಖದಿಂದ ಸಹಿತನಾದ ಅರ್ಜುನನು, ಅಗ್ರತಃ – ಕುರುಸೈನ್ಯವನ್ನು ಬಿಟ್ಟು ಮಾರ್ಗಾಂತರದಿಂದ ಮುಂದಕ್ಕೆ ಹೋಗಿ, ಗಾಃ–ಕೌರವರಿಂದ ಅಪಹೃತವಾದ ಗೋವುಗಳನ್ನು, ನಿವರ್ತ್ಯ – ಹಿಂತಿರುಗಿಸಿ, ಕುರೂನ್—ಕುರುಗಳನ್ನು ಕುರಿತು ಯುದ್ಧಾಯ–ಯುದ್ಧಕ್ಕಾಗಿ, ಯಯೌ – ಹೋದನು. ದ್ವೈರಥೇನಏವ – ಪರಸ್ಪರದ್ವಂದ್ವಯುದ್ಧದಲ್ಲಿ, ಸಕ್ತಾನ್ — ಆಸಕ್ತರಾದ ಕೌರವರನ್ನು, ಜಿಗ್ಯೇ–ಗೆದ್ದನು. ॥೪೩॥

ಏಕೀಭೂತಾನ್ಪುನರೇವಾನುಯಾತಾನ್ಸಂಮೋಹನಾಸ್ತ್ರೇಣವಿಮೋಹಯಿತ್ವಾ ॥
ಜಗ್ರಾಹತೇಷಾಮುತ್ತರೀಯಾಣ್ಯಪೇತು ಭೀಷ್ಮಸ್ಯ ವೇದಾಸ್ತ್ರಘಾತಂ ಸಏವ ॥೪೪॥

ಅರ್ಜುನಃ – ಅರ್ಜುನನು, ಏಕೀಭೂತಾನ್ – ಒಂದೇಕಡೆಯಲ್ಲಿ ವಿಲಿತರಾದ, ಪುನಃ – ಪರಾಜಯಾನಂತರವೂ, ಅನುಯಾತಾನ್ - ತನ್ನನ್ನು ಅನುಸರಿಸಿ ಬಂದಿರುವ ಕೌರವಾದಿಗಳನ್ನು. ಸಮ್ಮೋಹನಾಸ್ತ್ರೇಣ – ಮೋಹವನ್ನುಂಟುಮಾಡುವ ಅಸ್ತ್ರದಿಂದ, ವಿಮೋಹಯಿತ್ವಾ — ಮೋಹಗೊಳಿಸಿ, ಯತಃ — ಯಾವಕಾರಣದಿಂದ, ಸ ಏವ -- ಭೀಷ್ಮರೊಬ್ಬರೇ, ಅಸ್ತ್ರಘಾತಂ – ವಿಜ್ಞಾನಾಸ್ತ್ರದಿಂದ, ಸಮ್ಮೋಹನಾಸ್ತ್ರದ ಪ್ರತೀಕಾರವನ್ನು, ವೇದ –ತಿಳಿದಿದ್ದಾರೊ, ಅತಃ– ಆ ಕಾರಣದಿಂದ, ಭೀಷ್ಮಸ್ಯ – ಭೀಷ್ಮರ, ಖುತೇ – ಉತ್ತರೀಯ ವಸ್ತ್ರವನ್ನು ಹೊರತುಪಡಿಸಿ, ತೇಷಾಂ –ಆ ಕೌರವಾದಿಗಳ, ಉತ್ತರೀಯಾಣಿ–ಉತ್ತರೀಯವಸ್ತ್ರಗಳನ್ನು, ಜಗೃಹೇ – ಸ್ವೀಕರಿಸಿದನು ॥೪೪॥

ವಿಧಾಯ ಭೀಷ್ಮಂ ವಿರಥಂಜಗಾಮ ತದಾ ಶ್ರುತ್ವಾಮತ್ಸ್ಯಪತಿರ್ಜಿತಾನ್ಕುರೂನ್ ॥
ಮುಮೋದ ಪುತ್ರೇಣ ಜಿತಾಇತಿಸ್ಮತದಾಹಷಂಡೇನ ಜಿತಾನ್ಯುಧಿಷ್ಠಿರಃ ॥೪೫॥

ಅರ್ಜುನನು ಭೀಷ್ಮಂ – ಭೀಷ್ಮರನ್ನು, ವಿರಥಂ – ರಥವಿಲ್ಲದವರನ್ನಾಗಿ, ವಿಧಾಯ – ಮಾಡಿ, ಜಗಾಮ–ಹೋದನು, ತದಾ – ಆಗ, ಮತ್ಸ್ಯಪತಿಃ – ಮತ್ಸ್ಯದೇಶದರಾಜನಾದ ವಿರಾಟನು, ಕುರೂನ್ – ಕೌರವರನ್ನು, ಜಿತಾನ್–ಪರಾಜಿತರನ್ನಾಗಿ, ಶ್ರುತ್ವಾ – ಕೇಳಿ, ಪುತ್ರೇಣ –ಮಗನಾದ ಉತ್ತರನಿಂದ, ಜಿತಾಃ –ಪರಾಜಿತರಾದರು, ಇತಿ – ಎಂಬುದಾಗಿ, ಯದಾ – ಯಾವಾಗ, ಮುಮೋದ – ಸಂತೋಷಗೊಂಡನೋ, ತದಾ – ಆಗ, ಯುಧಿಷ್ಠಿರಃ– ಧರ್ಮರಾಜನು, ಷಂಡೇನ–ಪಂಡನಿಂದ, ಜಿತಾನ್ — ಪರಾಜಿತರನ್ನಾಗಿ, ಆಹ – ಹೇಳಿದನು. ॥೪೫॥

ತದಾ ಕ್ರುದ್ಧಃ ಪ್ರಾಹರತ್ತಂ ವಿರಾಟಃ ಸೋಽಕ್ಷೇಣ ತದ್ಭೀಮಧನಂಜಯಾಭ್ಯಾಂ ॥
ಶ್ರುತಂ ತದಾತೌ ಕುಪಿತೌ ನಿಶಾಮ್ಯ ನ್ಯವಾರಯತ್ತಾವಪಿ ಧರ್ಮಸೂನುಃ ॥೪೬॥

ತದಾ – ಆಗ, ಕ್ರುದ್ಧಃ – ಕೋಪಗೊಂಡ, ಸ ವಿರಾಟಃ – ಆ ವಿರಾಟನು, ಅಕ್ಷೇಣ — ಲೆತ್ತದಿಂದ ತಂ — ಆ ಯುಧಿಷ್ಠಿರನನ್ನು, ಪ್ರಾಹರತ್ — ಹೊಡೆದನು, ತತ್ – ವಿಷಯವು, ಭೀಮಧನಂಜಯಾಭ್ಯಾಂ — ಭೀಮಾರ್ಜುನರಿಂದ, ಶ್ರುತಂ — ಕೇಳಲ್ಪಟ್ಟಿತು. ತದಾ — ಆಗ, ತೌ — ಆ ಭೀಮಾರ್ಜುನರನ್ನು ಕುಪಿತೌ — ಕೋಪಗೊಂಡವರನ್ನಾಗಿ ನಿಶಾಮ್ಯ — ನೋಡಿ, ಧರ್ಮಸೂನುಃ- ಧರ್ಮರಾಜನು ತಾವಪಿ — ಇವರಿಬ್ಬರನ್ನೂ ಕೂಡ, ನ್ಯವಾರಯತ್ — ತಡೆದನು ॥೪೬॥

ಭಾ. ಅ ೨೯–೪೬ ಈ ರೀತಿಯಾಗಿ ರುದ್ರದೇವರ ತಪಸ್ಸು ಮಾಡಿ ಅವರ ವರದಿಂದ ಅವಧ್ಯರೂ, ಅಜೇಯರೂ ಆದ ೧೦೬ ಮಂದಿ ಕೀಚಕರೂ ಕೂಡ ಶ್ರೀ ಭೀಮಸೇನರಿಂದ ಸಂಹೃತರಾದರು. ಈ ಕಾರ್ಯವನ್ನು ಮಾಡುವಾಗ ಶ್ರೀ ಭೀಮಸೇನರು ತಾನು ಗಂಧರ್ವ ಎಂದು ಹೇಳಿಕೊಂಡರು. ಸುದೇಷ್ಣೆಯು ಸಹೋದರನ ವಧದಿಂದ ಭೀತಳಾಗಿ ಮತ್ತೇನಾದರೂ ಅನರ್ಥ ಆದೀತು ಎಂದು ದ್ರೌಪದಿಗೆ ಇಲ್ಲಿಂದ ಹೋಗಿಬಿಡು ಎಂದು ಹೇಳಿದಳು. ಆಗ ದ್ರೌಪದಿಯು ಇನ್ನುಹದಿಮೂರು ದಿನಗಳ ವರೆಗೆ ಇರಲು ಕೊಡು ಎಂದು ಕೇಳಿದಳು. ಅದಕ್ಕೆ ಸಮ್ಮತಿಸದಿದ್ದರೆ ಏನಾದರೂ ತೊಂದರೆ ಬಂದೀತು ಎಂಬ ಭಯದಿಂದ ಸುದೇಷ್ಣೆಯು ಸಮ್ಮತಿಸಿದಳು. ಹೀಗೆ ಪೂರ್ಣ ಒಂದು ವರ್ಷವನ್ನು ಪಾಂಡವರು ವಿರಾಟ ನಗರದಲ್ಲಿ ವಾಸಿಸಿದರು. ದುರ್ಯೋಧನನ ದೂತರು ಪಾಂಡವರನ್ನು ಎಲ್ಲ ಭೂಮಂಡಲದಲ್ಲಿಯೇ ಹುಡುಕಿ ಸಿಗದೇ ವಾಪಸ್ ಬಂದು ಹೆಣ್ಣಿನ ಸಲುವಾಗಿ ಕೀಚಕನು ಮೃತನಾಗಿದ್ದಾನೆ ಎಂಬ ವಾರ್ತೆಯನ್ನು ದುರ್ಯೋಧನನಿಗೆ ಹೇಳಿದರು. ಆಗ ದುರ್ಯೋಧನನು ದ್ರೌಪದಿಯ ಕಾರಣದಿಂದ ಕೀಚಕನು ಭೀಮನಿಂದ ಸಂಹೃತನಾಗಿದ್ದಾನೆಂದು ಊಹಿಸಿ ಭೀಷ್ಮ, ದ್ರೋಣ, ಕರ್ಣಾದಿಗಳಿಂದ ಸಹಿತನಾಗಿ ಅಲ್ಲಿಗೆ ಹೋದನು. ಆಗ ಸುಶರ್ಮನೆಂಬವನು ಯುದ್ಧಮಾಡುವದಕ್ಕಾಗಿ ಮುಂದೆ ಹೋಗಿ ವಿರಾಟನ ಅಳುಗಳನ್ನು ಅಪಹರಿಸಿದನು. ಅದನ್ನು ತಿಳಿದ ವಿರಾಟರಾಜನು ಸೈನ್ಯಸಮೇತನಾಗಿ ಸುಶರ್ಮನ ಬೆನ್ನುಹತ್ತಿ ಹೋಗಿರುವಾಗ ಪಾಂಡವರು ವಿರಾಟನ ಹಿಂದೆ ಹೋದರು. ಸುಶರ್ಮನು ವಿರಾಟನನ್ನು ಗೆದ್ದು, ಹಿಡಿದಿರುವಾಗ ಶ್ರೀಭೀಮಸೇನದೇವರು ಸುಶರ್ಮನ ಜೊತೆಗೆ ಯುದ್ಧ ಮಾಡುತ್ತಾ ಬಂಧಿಸಿ, ಅವನ ಸೈನ್ಯವನ್ನು ಸಂಹರಿಸಿ, ವಿರಾಟರಾಜನನ್ನು ಬಿಡಿಸಿದರು. ಧರ್ಮರಾಜನು ಸುಶರ್ಮನನ್ನು ಬಿಡಿಸಿದನು. ಈ ಯುದ್ಧದ ಮರುದಿನ ಕೌರವರು ಪಾಂಡವರು ಯುದ್ಧಕ್ಕೆ ಬಂದರೆ ಪಾಂಡವರ ಪತ್ತೆಯಾದರೂ ಆಗುತ್ತದೆ. ಅಥವಾ ಕೀಚಕನಿಲ್ಲದ್ದರಿಂದ ವಿರಾಟರಾಜನನ್ನು ಬಂಧಿಸ ಬಹುದೆಂದು ತಿಳಿದು ಯುದ್ಧಕ್ಕೆ ಹೊರಟರು. ಭೀಷ್ಮದ್ರೋಣಾದಿಗಳಿಗೆ, ಕೀಚಕ, ಹಿಡಿಂಬ, ಬಕ, ಕಿರ್ಮೀರ, ಜರಾಸಂಧ, ಕಂಸ ಇವರೆಲ್ಲರ ಬಂಧನವು ಶಕ್ಯವಾಗಿದ್ದಿಲ್ಲ. (ಶಕ್ಯವಿದ್ದಿಲ್ಲ.) ಹೀಗಾಗಿ ಕೀಚಕನ ವಧದನಂತರ ವಿರಾಟನ ಬಂಧನಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಶ್ರೀಭೀಮಸೇನನಿಂದ ನಿಮ್ಮನ್ನು ರಕ್ಷಿಸಲು ಪ್ರಯತ್ನಿಸುತ್ತೇನೆ ಎಂದು ತಾವು ಕೊಟ್ಟ ವಚನವನ್ನು ನಡೆಸಲು ದ್ರೋಣಾಚಾರ್ಯರು ಪುತ್ರ ಸಮೇತರಾಗಿ ಹೋದರು. ಕೌರವರು ಎಲ್ಲ ಕಡೆಯಿಂದಲೂ ವಿರಾಟನ ಗೋವುಗಳನ್ನು ಹಿಡಿದರು. ಆಗ ಉತ್ತರಕುಮಾರನು ಅರ್ಜುನನನ್ನು ಸಾರಥಿಯನ್ನಾಗಿ ಮಾಡಿಕೊಂಡು ಯುದ್ಧಕ್ಕೆಂದು ಹೋಗಿ ಕೌರವರನ್ನು ನೋಡಿಯೇ ಭೀತನಾಗಿ ಓಡುತ್ತಿದ್ದಾಗ, ಅರ್ಜುನನು ಉತ್ತರನನ್ನೇ ಕಷ್ಟದಿಂದ ನಿಲ್ಲಿಸಿ, ಸಾರಥಿಯನ್ನಾಗಿ ಮಾಡಿ ಯುದ್ಧಕ್ಕೆ ನಿಂತನು. ಗಾಂಡೀವ ಧನುಸ್ಸನ್ನು, ಹನುಮದ್ಧ್ವಜವನ್ನು ದೇವದತ್ತ ಎಂಬ ತನ್ನ ಶಂಖವನ್ನು ಶಮೀವೃಕ್ಷದಿಂದ ತೆಗೆದುಕೊಂಡು ಹೋಗಿ, ಕೌರವರು ಹಿಡಿದ ಗೋವುಗಳನ್ನು ಬಿಡಿಸಿ, ಯುದ್ಧವನ್ನು ಆರಂಭಿಸಿದನು. ಪರಸ್ಪರದ್ವಂದ್ವ ಯುದ್ಧವನ್ನು ಮಾಡಿ ಎಲ್ಲರನ್ನೂ ಗೆದ್ದನು. ಮತ್ತೆ ಕೌರವರೆಲ್ಲ ಒಟ್ಟಾಗಿ ಯುದ್ಧಕ್ಕೆ ಬಂದಾಗ, ಅರ್ಜುನನು ಭೀಷ್ಮರೊಬ್ಬರನ್ನು ಬಿಟ್ಟು ಉಳಿದೆಲ್ಲರನ್ನು ಸಮ್ಮೋಹನಾಸ್ತ್ರದಿಂದ ಮೋಹಗೊಳಿಸಿ ಉತ್ತರೀಯ ವಸ್ತ್ರಗಳನ್ನು ಅಪಹರಿಸಿದನು. ಭೀಷ್ಮರಿಗೆ ಸಮ್ಮೋಹನಾಸ್ತ್ರದ ಪ್ರತೀಕಾರವು ತಿಳಿದಿದ್ದರಿಂದ ಅವರ ಮೇಲೆ ಪ್ರಯೋಗಿಸಿಲ್ಲ. ಭೀಷ್ಮರನ್ನು ವಿರಥರನ್ನಾಗಿ ಮಾಡಿ ವಿರಾಟನಗರಕ್ಕೆ ಹೋದನು. ವಿರಾಟರಾಜನು ತನ್ನ ಮಗ ಉತ್ತರಕುಮಾರನು ಕೌರವರನ್ನು ಗೆದ್ದು ಬಂದನೆಂದು ತಿಳಿದು ಸಂತೋಷಪಟ್ಟ. ಹಾಗೇ ಹೇಳಿದನು. ಆಗ ಯುಧಿಷ್ಠಿರನು ಷಂಡನಾದ ಬೃಹನ್ನಳೆಯು ಗೆದ್ದಿರುವಳೆಂದು ಹೇಳಿದನು. ಆಗ ವಿರಾಟನು ಕೋಪಗೊಂಡು ದ್ಯೂತದ ಲೆತ್ತದಿಂದಲೇ ಹೊಡೆದನು. ಈ ಸುದ್ದಿಯನ್ನು ತಿಳಿದು ಸಿಟ್ಟಿಗೆದ್ದ ಭೀಮಾರ್ಜುನರನ್ನು ಧರ್ಮರಾಜನೇ ತಡೆದನು.

ನಿಜಸ್ವರೂಪೇಣ ಸಮಾಸ್ಥಿತಾನ್ನೋ ಯುದಿಷ್ಮನಾಸೌ ಪ್ರಣಿಪಾತಪೂರ್ವಕಂ ॥
ಕ್ಷಮಾಪಯಿಷ್ಯೇದ್ಯಧ್ಯ ಇತ್ಯಾತ್ಮರೂಪಂ ಸಮಾಸ್ಥಿತಾಸ್ತ್ವಸ್ಥರಥಾಪರೇದಿನೇ ॥೪೬॥

ಅಸೌ — ಈ ವಿರಾಟನು, ನಿಜ ಸ್ವರೂಪೇಣ— ನಮ್ಮ ನಿಜವಾದ ಯುಧಿಷ್ಠಿರಾದಿಸ್ವರೂಪದಿಂದ, ಸಮಸ್ಥಿತಾನ್ —ಇರತಕ್ಕ, ನಃ – ನಮ್ಮನ್ನು, ಪ್ರಣಿಪಾತಪೂರ್ವಕಂ, ನಮಸ್ಕಾರವು ಮೊದಲಾಗಿ ಇರತಕ್ಕದ್ದು ಹೇಗೋ ಹಾಗೆ, ನ ಕ್ಷಮಾಪಯೇದ್ಯದಿ – ಕ್ಷಮೆಯನ್ನು ಬೇಡದಿದ್ದ ಪಕ್ಷದಲ್ಲಿ ಅಸೌ — ಈ ವಿರಾಟನು, ವಧ್ಯಃ— ಕೊಲ್ಲಲು ಅರ್ಹನು,

ಇತಿ — ಎಂಬುದಾಗಿ ತಡೆದನು. ಅಥ – ಅನಂತರ ಆಪರೇದಿನೇ – **ಮರುದಿವಸದಲ್ಲಿ ಪಾಂಡವರು, ಆತ್ಮರೂಪಂ** - ತಮ್ಮ ತಮ್ಮ ಸ್ವರೂಪವನ್ನು. ಸಮಾಸ್ಥಿತಾಃ ಸಂತಃ — ಹೊಂದಿದವರಾಗಿ **ತಸ್ಥುಃ**– ನಿಂತರು. ॥೪೭॥

ತದಾವಿರಾಟೋ ಸನಮಾಸ್ಥಿತಂನೃಪಂಯುಧಿಷ್ಠಿರಂವೀಕ್ಷ್ಯವಿರಾಟಿಆಹ ॥
ಕಿನೇತದಿತ್ಯೂಚಿವಾನುತ್ತರೋsಸ್ಯೈತಾನ್ಪಾಂಡವಾನ್ಗೋಗ್ರಹಣೇ ಚವೃತ್ತಂ ॥೪೮॥

ತದಾ – ಆಗ, ವಿರಾಟಾಸನಂ — ವಿರಾಟರಾಜನ ಸಿಂಹಾಸನವನ್ನು, **ಆಸ್ಥಿತಂ** — ಹೊಂದಿರುವ, ನೃಪಂ — ರಾಜನಾದಯುಧಿಷ್ಠಿರನನ್ನು, ವಿರಾಟಃ – ವಿರಾಟನು, ವೀಕ್ಷ್ಯ – ನೋಡಿ, **ಏತತ್ ಕಿಂ** – ಇದೇನು ಆಶ್ಚರ್ಯವು, ಇತಿ – ಎಂಬು ದಾಗಿ, ಊಚಿವಾನ್ – ಹೇಳಿದನು. ಉತ್ತರಃ — ಉತ್ತರಕುಮಾರನು, **ಅಸ್ಯ**— ಈ ವಿರಾಟನಿಗೋಸ್ಕರ, ತಾನ್ — ಆ ಯತ್ಯಾದಿ ವೇಷಧಾರಿಗಳನ್ನು, ಪಾಂಡವಾನ್ – ಪಾಂಡವರನ್ನಾಗಿಯೂ, **ಚ**—ಮತ್ತು, ಗೋಗ್ರಹಣೇ – ಗೋಗ್ರಹಣದಲ್ಲಿ, ವೃತ್ತಂ—ನಡೆದ ವೃತ್ತಾಂತವನ್ನು ಅಂದರೆ ಅರ್ಜುನನಿಂದಲೇ ಯುದ್ಧವು **ಮಾಡಲ್ಪಟ್ಟಿತು** ಎಂಬುದನ್ನು, ಊಚಿವಾನ್ – ಹೇಳಿದನು. ॥೪೮॥

ತತೋವಿರಾಟೋಭಯಕಂಪಿತಾಂಗಃ ಪ್ರಣಮ್ಯಪಾರ್ಥಾನ್ಶರಣಂಜಗಾಮ ॥
ದದೌ ಚಕನ್ಯಾಮುತ್ತರಾಂಫಲ್ಗುನಾಯ ಪುತ್ರಾರ್ಥಮೇವ ಪ್ರತಿಜಗ್ರಹಸೋsಪಿ ॥೪೯॥

ತತಃ – ಅನಂತರ, ವಿರಾಟಃ – ವಿರಾಟನು, ಭಯಕಂಪಿತಾಂಗಃಸನ್ – **ಹೆದರಿಕೆಯಿಂದ** ನಡುಗತಕ್ಕ ಅವಯವ– ವುಳ್ಳವನಾಗಿ, ಪಾರ್ಥಾನ್ – ಪಾಂಡವರನ್ನು, ಪ್ರಣಮ್ಯ – ನಮಸ್ಕರಿಸಿ, ಶರಣಂ - **ಮೊರೆಯಿಸ್ಸು**, ಜಗಾಮ – ಹೊಂದಿದನು ಫಲ್ಗುನಾಯ – ಅರ್ಜುನನಿಗೋಸ್ಕರ, ಉತ್ತರಾಂಕನ್ಯಾಂ – ಉತ್ತರೆಯೆಂಬ ಕನ್ಯೆಯನ್ನು, ದದೌ - **ಕೊಟ್ಟನು**, ಸೋಪಿs — ಆ ಅರ್ಜುನನಾದರೂ, ಪುತ್ರಾರ್ಥಮೇವ – ಮಗನಾದ ಅಭಿಮನ್ಯುವಿಗೋಸ್ಕರವೇ **ಪ್ರತಿಜಗ್ರಾಹ** – ಸ್ವೀಕರಿಸಿದನು. ॥೪೯॥

ಏವಂವಿರಾಟಂಮೋಚಯಿತ್ವೈವಗಾಶ್ಚತಮಸ್ಯಂಧೇಕೀಚಕಾನ್ಪಾತಯಿತ್ವಾ ॥
ಪ್ರಾಪ್ತೋಧರ್ಮಃ ಸುಮಹಾನ್ವಾಯುಜೇನ ತಸ್ಯಾನುಪಾರ್ಥೇನವಗೋವಿಮೋಕ್ಷಣಾತ್ ॥೫೦॥

ಏವಂ — ಈ ರೀತಿಯಾಗಿ ವಿರಾಟಂ — ವಿರಾಟನನ್ನು, **ಗಾಶ್ಚ – ಗೋವುಗಳನ್ನು, ಮೋಚಯಿತ್ವಾ** – ಬಿಡಿಸಿ, ಕೀಚಕಾನ್ – ಕೀಚಕರನ್ನು, ಅಂಧೇತಮಸ್ಯೇವ—ಅಂಧಂತಮಸ್ಸಿನಲ್ಲಿಯೇ, **ಪಾತಯಿತ್ವಾ** – ಹಾಕಿ, ವಾಯುಜೇನ – ವಾಯು ಪುತ್ರ ಭೀಮನಿಂದ, ಸುಮಹಾನ್ – ಅತಿಮಹತ್ತಾದ, ಧರ್ಮಃ — **ಪುಣ್ಯವು, ಪ್ರಾಪ್ತಃ** – ಹೊಂದಲ್ಪಟ್ಟಿತು. ತಸ್ಯ— ಆ ಭೀಮಸೇನನ, ಅನು—ಅನಂತರ, ಪಾರ್ಥೇನ—ಅರ್ಜುನನಿಂದ, ಗೋವಿಮೋಕ್ಷಣಾತ್ - ಗೋವುಗಳನ್ನು ಬಿಡಿಸಿದ್ದರಿಂದ ಮಹತ್ತಾದ ಧರ್ಮವು ಹೊಂದಲ್ಪಟ್ಟಿತು. ॥೫೦॥

ಅಯಾತಯನ್ಕೇಶವಾಯಾಥದೂತಾನ್ಸಹಾಭಿಮನ್ಯುಃಸೋsಪಿರಾಮೇಣಸಾರ್ಧಂ ॥
ಅಗಾದನಂತಾನಂದಚಿದ್ವಾಸುದೇವೋನಿವಾಹಯಾನಾಸುರಥಾಭಿಮನ್ಯುಂ ॥೫೧॥

ಅಥ – ಅನಂತರ ಪಾಂಡವರು, ಕೇಶವಾಯ – ಕೃಷ್ಣನಿಗೋಸ್ಕರ, **ದೂತಾನ್**–ಸೇವಕರನ್ನು, ಪ್ರೇಷಯಾಮಾಸುಃ– ಕಳುಹಿಸಿದರು, ಅನಂತಾನಂದಚಿತ್—ಅಪರಿಮಿತಗಳಾದ ಆನಂದವೂ **ಜ್ಞಾನವೂ** ಇವುಗಳುಳ್ಳ, ಸಃ ವಾಸುದೇವೋಪಿ – ಆ ಶ್ರೀ ಕೃಷ್ಣನಾದರೂ, ಸಹಾಭಿಮನ್ಯುಃ ಸನ್ – ಅಭಿಮನ್ಯುವಿನಿಂದಕೂಡಿದವನಾಗಿ, ರಾಮೇಣ – ಬಲರಾಮನಿಂದ, ಸಾರ್ಧಂ – ಕೂಡಿಕೊಂಡು, ಆಗಾತ್ – ಬಂದನು. ಅಥ – ಅನಂತರ, ಅಭಿಮನ್ಯುಂ – ಅಭಿಮನ್ಯುವನ್ನು, ವಿವಾಹಯಾಮಾಸುಃ — ಮದುವೆಮಾಡಿಸಿದರು. ॥೫೧॥

ಆಸೀನ್ಮಹಾನುತ್ಸವಸ್ತತ್ರತೇಷಾಂದಾಶಾರ್ಹವೀರೈಸ್ಸಪಾಂಡವಾನಾಂ ॥
ಸಪಾಂಚಾಲಾನಾಂವಾಸುದೇವೇನಸಾರ್ಧಮುಚ್ಚಾತನಾಸಂ ಸಮುತೀತ್ಯ ಮೋದತಾಂ ॥೫೨॥

ಅಜ್ಞಾತವಾಸಂ: – ಅಜ್ಞಾತವಾಸವನ್ನು, ಸಮತೀತ್ಯ – ದಾಟಿ, ವಾಸುದೇವೇನ — ಶ್ರೀಕೃಷ್ಣನಿಂದ, ಸಾರ್ಧಂ – ಕೂಡಿಕೊಂಡು, ಸಪಾಂಚಾಲಾನಾಂ—ದ್ರುಪದಾದಿಗಳಿಂದ ಕೂಡಿದ, ದಾಶಾರ್ಹವೀರೈಃ—ಯಾದವವೀರರಿಂದ, ಸಹ—ಕೂಡಿಕೊಂಡು, ಮೋದತಾಂ — ಸಂತೋಷಪಡತಕ್ಕ, ಪಾಂಡವಾನಾಂ — ಪಾಂಡವರಿಗೆ, ತತ್ರ — ಆ ಅಭಿಮನ್ಯುವಿನ ವಿವಾಹ ಕಾಲದಲ್ಲಿ, ಮಹಾನ್ – ಶ್ರೇಷ್ಠವಾದ ಉತ್ಸವಃ ಆಸೀತ್ – ಉತ್ಸವವು ಆಯಿತು. ॥೫೨॥

ಭಾ. ಅ. ೪೭ ೫೨ ಒಂದು ವೇಳೆ ನಮ್ಮ ನಿಜವಾದ ಪಾಂಡವರ ರೂಪದಿಂದ ಇರುವಾಗ ವಿರಾಟರಾಜನು ನಮ್ಮನ್ನು ನಮಸ್ಕಾರ ಪೂರ್ವಕ ಗೌರವ ಸಲ್ಲಿಸಿ, ಕ್ಷಮೆಯನ್ನು ಕೇಳಿಕೊಳ್ಳದಿದ್ದರೆ, ಆಗ ಅವನನ್ನು ನಿಗ್ರಹಿಸೋಣ ಎಂದು ಹೇಳಿ ಅಂದು ತಡೆದು, ಮರುದಿನ ಪಾಂಡವರೆಲ್ಲರೂ ತಮ್ಮ ತಮ್ಮ ರೂಪವನ್ನು ಧರಿಸಿನಿಂತರು. ವಿರಾಟರಾಜನು ತನ್ನ ಸಿಂಹಾಸನಸ್ಥನಾಗಿ ಕುಳಿತ ಯುಧಿಷ್ಠಿರನನ್ನು ನೋಡಿ ಏನಿದು ಎಂದು ಕೇಳಿದಾಗ ಅವನ ಮಗನಾದ ಉತ್ತರಕುಮಾರನೇ ಇವರೆಲ್ಲರೂ ಪಾಂಡವರು ಎಂದೂ, ಇವರೇ ಗೋಮೋಚನ ಮಾಡಿದವರೆಂದೂ ತಿಳಿಸಿದನು. ಅದನ್ನು ತಿಳಿದಂಥ ವಿರಾಟನು ಈ ಪಾಂಡವರ ಬಗ್ಗೆ ಎಷ್ಟೊಂದು ಅಪಚಾರಗಳು ನಡೆದಿರುವವಲ್ಲಾ ಎಂದು ಹೆದರಿ, ನಡುಗಿ, ಕ್ಷಮೆ ಕೇಳಿಕೊಂಡು, ರಕ್ಷಿಸಬೇಕೆಂದು ಶರಣಾಗತನಾದನು. ಅರ್ಜುನನಿಗೆ ತನ್ನ ಮಗಳಾದ ಉತ್ತರೆಯನ್ನು ಕೊಡುವದಾಗಿ ಇಚ್ಛಿಸಿದಾಗ, ಅರ್ಜುನನು ತನ್ನಮಗನಾದ ಅಭಿಮನ್ಯುವಿನ ಸಲುವಾಗಿ ಸ್ವೀಕರಿಸಿದನು. ಹೀಗೆ ಅಜ್ಞಾತವಾಸದಲ್ಲಿ ಇರುವಾಗಲೂ ಕೂಡ ವಿರಾಟರಾಜನ ಮೋಚನ, ಗೋಮೋಕ್ಷಣ,ಕೀಚಕ ಸಂಹಾರ ಮೊದಲಾದ ಶಿಷ್ಟರಕ್ಷಣ, ದುಷ್ಟಸಂಹಾರ ಕಾರ್ಯಗಳಿಂದ ಅಧಿಕವಾದ ಭಾಗವತ ಧರ್ಮದ ಆಚರಣೆಯನ್ನು ಶ್ರೀಭೀಮಸೇನದೇವರು ನಡೆಸಿದರು. ಅರ್ಜುನನು ಗೋಮೋಚನ ಮಾತ್ರ ಮಾಡಿ ಶ್ರೀ ಭೀಮಸೇನದೇವರಿಗಿಂತಲೂ ಕಡಿಮೆಯಾದ ಭಾಗವತ ಧರ್ಮಾನುಷ್ಠಾನ ಮಾಡಿದನು. ಉತ್ತರೆಯ ವಿವಾಹಕ್ಕೆ ಕರೆಯಲು ಪಾಂಡವರು ಶ್ರೀಕೃಷ್ಣಪರಮಾತ್ಮನ ಸಮೀಪಕ್ಕೆ ದೂತರನ್ನು ಕಳಿಸಿದರು. ಬಲರಾಮ, ಅಭಿಮನ್ಯು ಸಹಿತನಾಗಿ ಶ್ರೀಕೃಷ್ಣನು ಬಂದನು. ಅಭಿಮನ್ಯು – ಉತ್ತರೆಯರ ವಿವಾಹವಾಯಿತು. ಶ್ರೀಕೃಷ್ಣ, ಪಾಂಚಾಲರಾಜ, ಯಾದವರು, ವಿರಾಟರಾಜಾದಿಗಳು ಇವರೆಲ್ಲರಿಂದ ಕೂಡಿದ ಆ ವಿವಾಹಮಹೋತ್ಸವವು ಬಹಳ ಸಂಭ್ರಮದಿಂದ ಅಜ್ಞಾತವಾಸದ ನಂತರ ನಡೆದಿದೆ.

~~ದುರ್ಯೋಧನಾದ್ಯಾಃ ಸೂತಪುತ್ರೇಣ ಸಾರ್ಧಂ ಸಸೌ ಬಲೇಯಾಯುಧಿಪಾರ್ಥಪೀಡಿತಾಃ ॥~~

ಭೀಷ್ಮಾದಿಭಿಃಸಾರ್ಧಮುಪೇತ್ಯ ನಾಗಪುರಂಮುಂತ್ರಂ ಮುಂತ್ರಯಾಮಾಸುರತ್ರ ॥೫೩॥

ಸಸೌಬಲೇಯಾಃ – ಶಕುನಿಯಿಂದ ಕೂಡಿದ, ಯುಧಿ–ಯುದ್ಧದಲ್ಲಿ, ಪಾರ್ಥಪೀಡಿತ ಃ– ಪಾಂಡವರಿಂದ ಪೀಡಿಸಿಕೊಳ್ಳಲ್ಪಟ್ಟ ದುರ್ಯೋಧನಾದ್ಯಾಃ – ದುರ್ಯೋಧನನೇ ಮೊದಲಾಗಿ ಉಳ್ಳವರು, ಸೂತಪುತ್ರೇಣ – ಸೂತಪುತ್ರಕರ್ಣನಿಂದ, ಸಾರ್ಧಂ–ಕೂಡಿಕೊಂಡು, ಭೀಷ್ಮಾದಿಭಿಃ–ಭೀಷ್ಮನೇ ಮೊದಲಾದವರಿಂದ, ಸಾರ್ಧಂ ಕೂಡಿಕೊಂಡು, ನಾಗಪುರಂ ಹಸ್ತಿನಾವತೀ ಪಟ್ಟಣವನ್ನು, ಉಪೇತ್ಯ — ಹೊಂದಿ, ಅತ್ರ — ಈ ಪಾಂಡವರ ಅಜ್ಞಾತವಾಸಾದಿವಿಷಯದಲ್ಲಿ, ಮುಂತ್ರಂ ಮುಂತ್ರಯಾಮಾಸುಃ—ಆಲೋಚನೆಯನ್ನು ಮಾಡಿದರು. ॥೫೩॥

ಅಜ್ಞಾತವಾಸೇ ಫಲ್ಗುನೋ ನೋಽದ್ಯದೃಷ್ಟಸ್ತಸ್ಮಾತ್ಪುನರ್ಯಾಂತುಪಾರ್ಥಾವನಾಯ ॥
ಇತಿ ಬ್ರುವಾಣಾನಾಹಭೀಷ್ಮೋಽಭ್ಯತೀತಮಜ್ಞಾತವಾಸಂ ದ್ರೋಣ ಆಹೈವಮೇವ ॥೫೪॥

ಯತಃ– ಯಾವಕಾರಣದಿಂದ, ಅಜ್ಞಾತವಾಸೇ–ಅಜ್ಞಾತವಾಸಸಮಯದಲ್ಲಿ, ಅದ್ಯ–ಈಗ ನಃ–ನಮಗೆ, ಫಲ್ಗುನಃ– ಅರ್ಜುನನು, ದೃಷ್ಟಃ– ಕಾಣಿಸಿಕೊಳ್ಳಲ್ಪಟ್ಟನೋ, ತಸ್ಮಾತ್ – ಆದ್ದರಿಂದ, ಪಾರ್ಥಾಃ– ಪಾಂಡವರು, ಪುನಃ– ಮತ್ತೊಮ್ಮೆ ವನಾಯ – ಅರಣ್ಯಕ್ಕೋಸ್ಕರ, ಯಾಂತು – ಹೋಗಲಿ, ಇತಿ– ಈ ರೀತಿಯಾಗಿ ಬ್ರುವಾಣಾನ್ ಹೇಳತಕ್ಕ ಕೌರವರನ್ನು ಕುರಿತು ಭೀಷ್ಮಃ – ಭೀಷ್ಮರು ಅಜ್ಞಾತವಾಸಂ – ಅಜ್ಞಾತವಾಸವನ್ನು ಅಭ್ಯತೀತಂ – ದಾಟಲ್ಪಟ್ಟದ್ದನ್ನಾಗಿ ಆಹ — ಹೇಳಿದರು, ಏವಮೇವ—ಭೀಷ್ಮರು ಹೇಳಿದಂತೆಯೇ, ದ್ರೋಣಃ – ದ್ರೋಣರು, ಆಹ – ಹೇಳಿದರು ॥೫೪॥

ತಯೋರ್ವಾಕ್ಯಂತೇತ್ವನಾದೃತ್ಯಪಾಪಾವನಂಪಾರ್ಥಾಃಪುನರೇವಪ್ರಯಾಂತು ॥
ಇತಿಸ್ಮದೂತಂ ಪ್ರೇಷಯಾಮಾಸುರತ್ರಜಾನಂತಿವಿಪ್ರಾಇತಿ ಧರ್ಮಜೋಽವದತ್ ॥೫೫॥

ಪಾಪಾಃ - ಪಾಪಿಷ್ಠರಾದ, ತೇತು — ಆಕೌರವರಾದರೂ, ತಯೋಃ ಭೀಷ್ಮದ್ರೋಣರ ವಾಕ್ಯಂ – ಮಾತನ್ನು ಅನಾದೃತ್ಯ – ತಿರಸ್ಕರಿಸಿ, ಪಾರ್ಥಾಃ – ಪಾಂಡವರು, ಪುನಃ–ಮತ್ತೊಮ್ಮೆ, ವನಂ – ಕಾಡನ್ನು ಕುರಿತು, ಪ್ರಯಾಂತು – ಹೋಗಲಿ, ಇಂತಿ–ಎಂಬುದಾಗಿ, ದೂತಂ–ಸೇವಕನನ್ನು, ಪ್ರೇಷಯಾಮಾಸುಃ – ಕಳುಹಿಸಿದರು. ಅತ್ರ— ಈ ಅಜ್ಞಾತವಾಸ ಸಮಾಪ್ತಿ ವಿಷಯದಲ್ಲಿ, ವಿಪ್ರಾಃ - ದ್ರೋಣಾದಿ ಬ್ರಾಹ್ಮಣರು, ಜಾನಂತಿ – ತಿಳಿಯುತ್ತಾರೆ. ಇತಿ–ಎಂದು ಧರ್ಮಜಃ – ಧರ್ಮರಾಜನು, ಅವದತ್ – ದೂತನನ್ನು ಕುರಿತು ಹೇಳಿದನು. ॥೫೫॥

ಅವಃ – ಅಜ್ಞಾತವಾಸವು ಮುಗಿದಿದೆ ಎಂದು ಹೇಳತಕ್ಕ ಭೀಷ್ಮಾದಿಗಳ, ಮುಂಗಿಯಲಿಲ್ಲವೆಂಬ ದುರ್ಯೋಧನಾದಿಗಳ ಅಭಿಪ್ರಾಯವನ್ನು ತಿಳಿಸುತ್ತಾರೆ.

ಸೌರಮಾಸಾನುಸಾರೇಣ ಧಾರ್ತರಾಷ್ಟ್ರಾ ಅಪೂರ್ಣತಾಂ ॥
ಆಹುಶ್ಚಾಂದ್ರೇಣಮಾಸೇನ ಪೂರ್ಣಃಕಾಲೋಽಖಿಲೋಽಹ್ಯಸೌ ॥೫೬॥

ಧಾರ್ತರಾಷ್ಟ್ರಾಃ – ದುರ್ಯೋಧನಾದಿಗಳು, ಸೌರಮಾಸಾನುಸಾರೇಣ - ಸೌರಮಾಸವನ್ನನುಸರಿಸಿ, ಅಪೂರ್ಣತಾಂ – ಸಂವತ್ಸರಕ್ಕೆ ಅಪೂರ್ಣತ್ವವನ್ನು. ಆಹುಃ – ಹೇಳುತ್ತಾರೆ. ಚಾಂದ್ರೇಣಮಾಸೇನ – ಚಂದ್ರ ಸಂಬಂಧಿ ಮಾಸದಿಂದ, ಅಸೌ – ಅಜ್ಞಾತವಾಸಕ್ಕೆ ಪ್ರತಿಜ್ಞಾತವಾದ, ಅಖಿಲಃ ಕಾಲಃ— ಮುನ್ನೂರ ಅರವತ್ತು ದಿನಾತ್ಮಕವಾದ ಸಂವತ್ಸರ ಕಾಲವು, ಪೂರ್ಣಃ – ಪರಿಪೂರ್ಣವಾಗಿದೆ. ಹ – ಪ್ರಸಿದ್ಧವು. ॥೫೬॥

~~ವಿಶೇಷಾಂಶಃ— ಸೂರ್ಯನು ಒಂದು ಸಂಕ್ರಮಣದಿಂದ ಮತ್ತೊಂದು ಸಂಕ್ರಮಣದವರೆಗೆ ಸಂಚರಿಸುವ ಕಾಲವು~~ ಸೌರಮಾಸವು. ಪೂರ್ಣಿಮಾದಿಂದ ಪೂರ್ಣಿಮಾಪರ್ಯಂತರಚಾಂದ್ರಮಾಸವು. ಅಮಾವಾಸ್ಯಾದಿಂದ ಅಮಾವಾಸ್ಯಾತನಕ ಪಿತೃಮಾಸವು. ಅದರಲ್ಲಿ ಚಾಂದ್ರಮಾಸದಲ್ಲಿಯೂ, ಪಿತೃಮಾಸಲ್ಲಿಯೂ "ಪಂಚಮೇಪಂಚಮೇವರ್ಷೇ ದ್ವೌಮಾಸಾವಧಿಕೌಮತೌ" ಎಂಬ ಭಾರತ ವಚನಪ್ರಕಾರ ಐದೈದು ವರ್ಷಗಳು ಮುಗಿಯುವಾಗ ಎರಡೆರಡು ಅಧಿಕಮಾಸಗಳು ಬರುತ್ತವೆ. ಈ ಅಧಿಕಮಾಸಗಳನ್ನು ಸೇರಿಸಿಗಣನೆ ಮಾಡಿದಾಗ ಹದಿಮೂರು ವರ್ಷಗಳೂ ದಾಟಿವೆಯೆಂದು ಭೀಷ್ಮಾದಿಗಳ ಅಭಿಪ್ರಾಯ. ಗೋದಾವರಿಯ ದಕ್ಷಿಣತೀರದಲ್ಲಿಯೂ ಉತ್ತರತೀರದಲ್ಲಿಯೂ ಇರುವವರು ಚಾಂದ್ರಮಾಸ, ಪಿತೃಮಾಸ ಇವುಗಳ ರೀತಿ ಆಚರಿಸುವುದರಿಂದ ತಮ್ಮ ದೇಶಾಚಾರವನ್ನೂ ಸಹ ತಿಳಿಯದಿರುವ ಕೌರವರು ಅತಿಮೂಢರು ಎಂಬ ಅಭಿಪ್ರಾಯವು. ॥೫೬॥

ಅವಃ— ಚಾಂದ್ರಮಾಸವು ಮುಖ್ಯವಾಗಿರುವುದರಿಂದ ಅದೇ ಮಾಸವು ಗ್ರಾಹ್ಯವೆನ್ನುತ್ತಾರೆ.

ದಿನಾನಾಮಧಿಪಃಸೂರ್ಯಃಪಕ್ಷಮಾಸಾಬ್ದಪಃಶಶೀ ॥
ತಸ್ಮಾತ್ಸೌಮ್ಯಾಬ್ದಮೇವಾತ್ರಮುಖ್ಯಮಾಹುರ್ಮನೀಷಿಣಃ ॥೫೭॥

ಸೂರ್ಯೋದಯವನ್ನು ಆರಂಭಿಸಿ ಮರುದಿನ ಸೂರ್ಯೋದಯಪರ್ಯಂತ ಒಂದುದಿನವಾಗುತ್ತದೆ. ಆದುದರಿಂದ ದಿನಗಳಿಗೆ ಅಧಿಪತಿ ಸೂರ್ಯನು. ಪೂರ್ಣಿಮಾನಂತರದ ಪಾಡ್ಯವನ್ನು ಆರಂಭಿಸಿ ಅಮಾವಾಸ್ಯೆಯ ಪರ್ಯಂತರ ಕೃಷ್ಣಪಕ್ಷವು, ಅಮಾವಾಸ್ಯಾನಂತರದ ಪಾಡ್ಯವನ್ನು ಆರಂಭಿಸಿ ಪೂರ್ಣಿಮಾಪರ್ಯಂತರ ಶುಕ್ಲಪಕ್ಷವು. ಆದುದರಿಂದ ಪಕ್ಷಗಳಿಗೂ, ಮಾಸ – ಗಳಿಗೂ, ಸಂವತ್ಸರಗಳಿಗೂ ಅಧಿಪತಿಯು ಚಂದ್ರನು. ತಸ್ಮಾತ್ – ಚಾಂದ್ರಮಾಸವೇ ಮುಖ್ಯವಾದುದರಿಂದ ಮನೀಷಿಣಃ– ಜ್ಞಾನಿಗಳು, ಅತ್ರ – ಅಜ್ಞಾತವಾಸವೆಂಬವ್ರತದಲ್ಲಿ ಸೌಮ್ಯಾಬ್ದಮೇವ — ಚಾಂದ್ರಸಂವತ್ಸರವನ್ನೇ ಮುಖ್ಯಂ – ಮುಖ್ಯ ವನ್ನಾಗಿ, ಆಹುಃ – ಹೇಳುತ್ತಾರೆ. ॥೫೭॥

ಸೌಮ್ಯಕಾಲಂ ಸಮೋಯಜ್ಞೇಗೃಹ್ಣಂತಿಸತುಸೂರ್ಯಜಂ ॥
ತದೇತದಾವಿಚಾಯ್ಯೈವ ಲೋಭಾಚ್ಚ ಧೃತರಾಷ್ಟ್ರಜೈಃ ॥೫೮॥

ರಾಜ್ಯಂನದತ್ತಂ ಪಾರ್ಥೇಭ್ಯಃ ಪಾರ್ಥಾಃ ಕಾಲಸ್ಯಪೂರ್ಣತಾಂ ॥
ವ್ಯಾಪಯಂತೋವಿಪ್ರವರ್ಯೈರುಪಪ್ಲಾವ್ಯಮುಪಾಯಯುಃ ॥೫೯॥

ತತಃ – ಚಾಂದ್ರಮಾಸವು ಮುಖ್ಯವಾದ್ದರಿಂದ, **ಸೌಮ್ಯಕಾಲಂ**– ಚಂದ್ರಸಂಬಂಧಿಯಾದಕಾಲವನ್ನು – **ಚಾಂದ್ರಮಾಸವನ್ನು**, **ಯಜ್ಞೇ**– ಯಾಗವಲ್ಲಿ, **ಗೃಹ್ಣಂತಿ** – ಸ್ವೀಕರಿಸುತ್ತಾರೆ. **ಸೂರ್ಯಜಂ** – ಸೂರ್ಯನಿಂದಾಗುವ **ಸೌರಮಾಸವನ್ನು**, **ನತುಗೃಹ್ಣಂತಿ** – ಸ್ವೀಕರಿಸುವುದಿಲ್ಲ, **ತದೇತತ್**–ಆ ಈದಾವಮಾಸಮುಖ್ಯತ್ವವನ್ನು **ಅವಿಚಾಯ್ಯೈವ** – ವಿಚಾರಮಾಡದೇನೇ, **ಲೋಭಾಚ್ಚ** - ರಾಜ್ಯಲೋಭದಿಂದಲೂ ಕೂಡ, **ಧೃತರಾಷ್ಟ್ರಜೈಃ** – ದುರ್ಯೋಧನಾದಿಗಳಿಂದ, **ಪಾರ್ಥೇಭ್ಯಃ** – ಪಾಂಡವರಿಗೆ **ರಾಜ್ಯಂ** – ರಾಜ್ಯವು, **ನದತ್ತಂ** —ಕೊಡಲ್ಪಡಲಿಲ್ಲ. **ಪಾರ್ಥಾಃ** – ಪಾಂಡವರು, **ವಿಪ್ರವರ್ಯೈಃ** – ಬ್ರಾಹ್ಮಣ ಶ್ರೇಷ್ಠರಿಂದ, **ಕಾಲಸ್ಯ** – ಒಂದು ಸಂವತ್ಸರಾತ್ಮಕವಾದ ಕಾಲಕ್ಕೆ, **ಪೂರ್ಣತಾಂ** – ಪರಿಪೂರ್ಣತ್ವವನ್ನು, **ವ್ಯಾಪಯಂತಃ ಸಂತಃ** – ಪ್ರಸಿದ್ಧವಾಗಿಸತಕ್ಕವರಾಗಿ, **ಉಪಪ್ಲಾವ್ಯಂ** – ಉಪಪ್ಲಾವ್ಯನಗರವನ್ನು, **ಉಪಾಯಯುಃ** – ಹೊಂದಿದರು. ॥೫೯॥

ಸವಾಸುದೇವಾ ಅಖಿಲೈಶ್ಚಯಾದವೈಃ ಪಾಂಚಾಲ ಮಾತ್ಸ್ಯೈಶ್ಚಯುತಾಃ ಸಭಾರ್ಯಾಃ ॥
ಉಪಪ್ಲಾವ್ಯೇ ತೇಕತಿಚಿದ್ದಿನಾನಿ ವಾಸಂಚಕ್ರುಃ ಕೃಷ್ಣಸಂಶಿಕ್ಷಿತಾರ್ಥಾಃ ॥೬೦॥

ಇತಿಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಅಜ್ಞಾತವಾಸ
ಸಮಾಪ್ತಿನಾಮ ತ್ರಯೋವಿಂಶೋsಧ್ಯಾಯಃ ॥

॥ ಶ್ರೀ ಕೃಷ್ಣಾರ್ಪಣ ಮಸ್ತು ॥

ಅಖಿಲೈಃ – ಎಲ್ಲಾ, **ಯಾದವೈಃ** – ಯಾದವರಿಂದಲೂ, **ಪಾಂಚಾಲಮಾತ್ಸ್ಯೈಃ**— ಪಾಂಚಾಲ,ಮತ್ತು ಮತ್ಸ್ಯದೇಶದವರಿಂದಲೂ, **ಯುತಾಃ** – ಕೂಡಿರುವ, **ಸಭಾರ್ಯಾಃ** – ಹೆಂಡಂದಿರಿಂದ ಕೂಡಿರುವ, **ಸವಾಸುದೇವಾಃ**— ಶ್ರೀಕೃಷ್ಣನಿಂದ ಸಹಿತರಾದ, **ತೇ** — ಆ ಪಾಂಡವರು, **ಉಪಪ್ಲಾವ್ಯೇ** – ಉಪಪ್ಲಾವ್ಯನಗರದಲ್ಲಿ, **ಕೃಷ್ಣಸಂಶಿಕ್ಷಿತಾರ್ಥಾಸ್ಸಂತಃ**— ಕೃಷ್ಣನಿಂದ ಚೆನ್ನಾಗಿ ಶಿಕ್ಷಿಸಲ್ಪಟ್ಟ ಧರ್ಮಾದ್ಯರ್ಥವುಳ್ಳವರಾಗಿ, **ಕತಿಚಿದ್ದಿನಾನಿ** – ಕೆಲವುದಿವಸಗಳಲ್ಲಿ, **ವಾಸಂ** — ಆವಾಸವನ್ನು, **ಚಕ್ರುಃ**— ಮಾಡಿದರು ॥೬೦॥

ಈರೀತಿಯಾಗಿ ಶ್ರೀಆನಂದತೀರ್ಥರಿಂದ ರಚಿಸಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಅಜ್ಞಾತವಾಸ–ಸಮಾಪ್ತಿ ಪರ್ಯಂತದ ಕಥೆಯನ್ನು ಪ್ರತಿಪಾದಿಸುವ ಇಪ್ಪತ್ತಮೂರನೇ ಅಧ್ಯಾಯವು ಸಮಾಪ್ತವಾಯಿತು. ಈ ಕೃತಿಯು ಶ್ರೀಹರಿವಾಯುಗಳಿಗೆ ಅರ್ಪಿತವಾಗಲಿ. ಆದರಿಂದ ಶ್ರೀಹರಿವಾಯುಗಳು ಪ್ರೀತರಾಗಲಿ. ಶುಭಂ

ಭಾ. ಆ. ೫೩-೬೦ ಭೀಮಾರ್ಜುನರಿಂದ ಕರ್ಣ, ಶಕುನಿಸಹಿತರಾಗಿ ಪರಾಜಿತರಾದ ಕೌರವರು ಭೀಷ್ಮರಿಂದ ಕರೆಸಿಕೊಂಡು ಹಸ್ತಿನಾವತಿಗೆ ಬಂದು ಗುಟ್ಟಾದ ದುರಾಲೋಚನೆಯನ್ನು ಆರಂಭಿಸಿದರು. ಅಜ್ಞಾತವಾಸ ಮುಗಿಯದಿರುವಾಗಲೇ ಅರ್ಜುನನು ನಮ್ಮ ಕಣ್ಣಿಗೆ ಬಿದ್ದಿದ್ದಾನೆ. ಆದ್ದರಿಂದ ಪಾಂಡವರು ಪುನಃ ವನವಾಸಕ್ಕೆ ಹೋಗಲಿ ಎಂದು ಮಾತಾಡಿಕೊಂಡರು. ಭೀಷ್ಮಾಚಾರ್ಯರು ಅಜ್ಞಾತವಾಸದ ಅವಧಿಮುಗಿದಿದೆ ಎಂದು ಹೇಳಿದರು. ದ್ರೋಣರೂಕೂಡ ಹಾಗೇ ಹೇಳಿದರು. ಆದರ ಮಾತನ್ನೂ ಅಲಕ್ಷಿಸಿ ಪಾಪಿಗಳಾದ ಕೌರವರು ಪಾಂಡವರ ಹತ್ತಿರ ತಮ್ಮ ದೂತನನ್ನು ಕಳಿಸಿ ಪುನಃ ವನಕ್ಕೆ

ಹೋಗಲು ಹೇಳಿ ಕಳಿಸಿದರು. ಧರ್ಮರಾಜನು ಜ್ಞಾನಿಗಳು ಈ ಬಗ್ಗೆ ಸರಿಯಾಗಿ ತಿಳಿದಿದ್ದಾರೆ ಎಂದು ಹೇಳಿಕಳಿಸಿದನು. ಸೌರಮಾನವನ್ನು ಹಿಡಿದು ಅವಧಿ ಮುಗಿಯಲಿಲ್ಲವೆಂದು ದುರ್ಯೋಧನಾದಿ ಕೌರವರ ವಾದವಾಗಿತ್ತು. ಚಾಂದ್ರಮಾನದಿಂದ ಮುಗಿದಿದೆ ಎಂದು ಭೀಷ್ಮಾದಿ ಜ್ಞಾನಿಗಳ ವಾದವಾಗಿತ್ತು. ಕೌರವರು ಹಾಗು ಪಾಂಡವರಲ್ಲಿ ಚಾಂದ್ರಮಾನವೇ ಬಳಕೆ-ಯಲ್ಲಿದ್ದದ್ದು. ಹಾಗೂ ಸೌರಮಾನಕ್ಕಿಂತ ಚಾಂದ್ರಮಾನವೇ ಮುಖ್ಯವಾದದ್ದು. ಯಜ್ಞಾದಿಪುಣ್ಯಕಾರ್ಯಗಳಲ್ಲಿ ಚಾಂದ್ರ ಮಾನವನ್ನೇ ಹಿಡಿಯುತ್ತಾರೆ. ಇಷ್ಟೆಲ್ಲ ಇದ್ದರೂ, ಲೋಭ, ಮಾತ್ಸರ್ಯ ಮೊದಲಾದ ದೋಷಗಳಿಂದ, ಸರಿಯಾಗಿ ವಿಚಾರ ವನ್ನೂ ಕೂಡ ಮಾಡದೇ ದುಷ್ಟ ಕೌರವರು ಪಾಂಡವರಿಗೆ ರಾಜ್ಯವನ್ನು ಕೊಡಲಿಲ್ಲ. ಪಾಂಡವರಾದರೂ ತಮ್ಮ ನಿಯಮಿತ ಕಾಲ ಪೂರ್ಣವಾದದ್ದನ್ನು ತಿಳಿಸುವವರಾಗಿ, ಬ್ರಾಹ್ಮಣರ ಮೂಲಕ ಎಲ್ಲ ಕಡೆಗೂ ಪ್ರಚಾರ ಮಾಡಿಸುವವರಾಗಿ ಉಪ ಪ್ಲಾವ್ಯಕ್ಕೆ ಬಂದು, ಅಲ್ಲಿ ಶ್ರೀ ಕೃಷ್ಣನಿಂದ, ಯಾದವರು, ಪಾಂಚಾಲ ಹಾಗು ವಿರಾಟರಾಜ್ಯದ ಬಂಧುಗಳಿಂದ, ತಮ್ಮ ತಮ್ಮ ಪತ್ನಿಯರಿಂದಲೂ ಸಹಿತರಾಗಿ, ಶ್ರೀ ಕೃಷ್ಣನ ಉಪದೇಶವನ್ನು ಪಡೆಯುತ್ತಾ, ೆಲದಿನಗಳ ವರಗೆ ಸಂತೋಷದಿಂದ ವಾಸಿಸಿದರು.

ಶ್ರೀ ಮದಾನಂದತೀರ್ಥರಿಂದ ವಿರಚಿತವಾದ ಶ್ರೀಮಹಾಭಾರತತಾತ್ಪರ್ಯನಿರ್ಣಯದ. ಅಜ್ಞಾತವಾಸಕಥಾ ನಿರೂಪಣ ಮಾಡುವ ಇಪ್ಪತ್ತುಮೂರನೆಯ ಅಧ್ಯಾಯದ ಭಾವಾನುವಾದವು ಮುಗಿಯಿತು.

ಶ್ರೀ ಕೃಷ್ಣಾರ್ಪಣಮಸ್ತು ಶ್ರೀ ಮಧ್ವೇಶಾರ್ಪಣಮಸ್ತು

॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೨೪ ನೇ ಅಧ್ಯಾಯವು.

ತತಃ ಸಮ್ಮಂತ್ರ್ಯಾನುಮತೇಕೃಷ್ಣಸ್ಯಸ್ವಪುರೋಹಿತಂ ॥
ದ್ರುಪದಃ ಪ್ರೇಷಯಾಮಾಸ ಧೃತರಾಷ್ಟ್ರಾಯ ಶಾಂತಯೇ ॥೧॥

ತತಃ— ಅನಂತರ, ದ್ರುಪದಃ – ದ್ರುಪದನು, ಸಂಮತ್ರ್ಯ – ಚೆನ್ನಾಗಿ ಅಲೋಚಿಸಿ, ಕೃಷ್ಣಸ್ಯ – ಶ್ರೀಕೃಷ್ಣನ, ಅನುಮತೇ – ಅನುಮತಿಯಲ್ಲಿ, ಸ್ವಪುರೋಹಿತಂ – ತನ್ನಪುರೋಹಿತನನ್ನು, ಧೃತರಾಷ್ಟ್ರಾಯ — ಧೃತರಾಷ್ಟ್ರನನ್ನು ಕುರಿತು ಶಾಂತಯೇ – ಕೌರವ ಪಾಂಡವರ ವಿರೋಧಪರಿಹಾರಕ್ಕಾಗಿ, ಪ್ರೇಷಯಾಮಾಸ – ಕಳುಹಿಸಿದನು ॥೧॥

ಸಗತ್ವಾಧೃತರಾಷ್ಟ್ರಂ ತಂ ಭೀಷ್ಮದ್ರೋಣಾದಿಭಿರ್ಯುತಂ ॥
ಉವಾಚ ನವಿರೋಧಸ್ತೇ ಉತ್ಪಾದ್ಯೋಧರ್ಮಸೂನುನಾ ॥೨॥

ಸಃ – ಆ ಪುರೋಹಿತನು, ಗತ್ವಾ – ಹಸ್ತಿನಾವತಿಗೆ ಹೋಗಿ, ಭೀಷ್ಮದ್ರೋಣಾದಿಭಿಃ— ಭೀಷ್ಮಾಚಾರ್ಯರು ಇವರೇ ಮೊದಲಾಗಿ ಉಳ್ಳವರಿಂದ,ಯುತಂ-ಕೂಡಿದ, ತಂ ಧೃತರಾಷ್ಟ್ರಂ—ಆ ಧೃತರಾಷ್ಟ್ರನನ್ನು ಕುರಿತು, ತೇ – ನಿನ್ನಿಂದ, ಧರ್ಮಸೂನುನಾ – ಧರ್ಮರಾಜನಿಂದ, ವಿರೋಧಃ – ಕಲಹವು, ನೋತ್ಪಾದ್ಯಃ – ಉಂಟುಮಾಡಲ್ಪಡಲು ಯೋಗ್ಯವಲ್ಲ. ॥೨॥

ಯಸ್ಯ ಭೀಮಾರ್ಜುನೌ ಯೋಧೌ ನೇತಾಯಸ್ಯ ಜನಾರ್ದನಃ ॥
ಶ್ರುತಾಸ್ತೇ ಭೀಮನಿಹತಾ ಜರಾಸಂಧಾದಯೋಽಖಿಲಾಃ ॥೩॥

ಯಥಾಚರುದ್ರವಚನಾದವಧ್ಯಾರಾಕ್ಷಸಾಧಿಪಾಃ ॥
ತೀರ್ಥವಿಘ್ನಕರಾಃ ಸರ್ವೇ ತೀರ್ಥಾನ್ಯಾಚ್ಛಾದ್ಯಸಂಸ್ಥಿತಾಃ ॥೪॥
ತಿಸ್ರಃಕೋಟ್ಯೋಮಹಾವೀರ್ಯಾಭೀಮೇನೈವ ನಿಷೂದಿತಾಃ ॥
ಭ್ರಾತೃಣಾಂ ಬ್ರಾಹ್ಮಣಾನಾಂಚ ಲೋಕಾನಾಂಚ ಹಿತೈಷಿಣಾ ॥೫॥
ತತೋಹಿ ಸರ್ವತೀರ್ಥಾನಿ ಗಮ್ಯಾನ್ಯಾಸನ್ ನೃಣಾಂಕ್ಷಿತೌ ॥೬॥

ಯಸ್ಯ— ಯಾವ ಧರ್ಮರಾಜನಿಗೆ, ಭೀಮಾರ್ಜುನೌ—ಭೀಮಾರ್ಜುನರು, ಯೋಧೌ - ಯುದ್ಧಮಾಡತಕ್ಕವರೋ, ಯಸ್ಯ— ಯಾವ ಧರ್ಮರಾಜನಿಗೆ, ಜನಾರ್ದನಃ – ಸಂಸಾರನಾಶಕನಾದ ಶ್ರೀಕೃಷ್ಣನು, ನೇತಾ [illegible] ಪ್ರೇರಕನೋ, ಅಂತಹ

ಧರ್ಮರಾಜನಿಂದ ವಿರೋಧವನ್ನು ಬಿಳಿಸಬೇಡ. ರುದ್ರವಚನಾತ್— ರುದ್ರದೇವರವರದಿಂದ, ಅವಧ್ಯಾಃ – ಕೊಲ್ಲಲು ಅಶಕ್ಯರಾದ, ರಾಕ್ಷಸಾಧಿಪಾಃ — ಹಿಡಿಂಬಮೊದಲಾದ ರಾಕ್ಷಸಶ್ರೇಷ್ಠರೂ, ಅಖಿಲಾಃ – ಎಲ್ಲಾ, ಜರಾಸಂಧಾದಯಃ– ಜರಾಸಂಧನೇ ಮೊದಲಾಗಿಉಳ್ಳವರೂ ಕೂಡ, ಯಥಾ-ಹೇಗೆ, ಭೀಮನಿಹತಾಃ – ಭೀಮನಿಂದ ಕೊಲ್ಲಲ್ಪಟ್ಟವರೆಂದು, ತೇ – ನಿನ್ನಿಂದ, ಶ್ರುತಾಃ – ಕೇಳಲ್ಪಟ್ಟಿರುತ್ತಾರೆ, ತೀರ್ಥಾನಿ - ತೀರ್ಥಗಳನ್ನು, ಆಪ್ಲುತ್ಯ – ಮುಳುಗಿ, ಸಂಸ್ಥಿತಾಃ – ಇರತಕ್ಕ, ತಿಸ್ರಃ ಕೋಟ್ಯಃ – ಮೂರುಕೋಟಿಸಂಖ್ಯಾಕರಾದ, ಮಹಾವೀರ್ಯಾಃ – ಬಹುಪರಾಕ್ರಮಿಗಳಾದ, ತೀರ್ಥವಿಘ್ನಕರಾಃ – ತೀರ್ಥದಲ್ಲಿ ಸ್ನಾನಮಾಡುವವರಿಗೆ ತೊಂದರೆಯನ್ನುಂಟುಮಾಡತಕ್ಕ, ಸರ್ವೇ — ಎಲ್ಲಾರಾಕ್ಷಸರು, ಭ್ರಾತೃಣಾಂ – ಸಹೋದರರಿಗೂ, ಬ್ರಾಹ್ಮಣಾನಾಂಚ – ಬ್ರಾಹ್ಮಣರಿಗೂ ಕೂಡ, ಲೋಕಾನಾಂಚ ಜನರಿಗೂ ಕೂಡ, ಹಿತೈಷಿಣಾ - ಹಿತವನ್ನು ಇಚ್ಛಿಸತಕ್ಕ, ಭೀಮೇನೈವ — ಭೀಮಸೇನನಿಂದಲೇ ಯಥಾ — ಹೇಗೆ, ನಿಪಾತಿತಾಃ – ಕೊಲ್ಲಲ್ಪಟ್ಟಿರುವರೋ, ತಥಾ--ಹಾಗೆಯೇ ನಿನ್ನಿಂದ ಕೇಳಲ್ಪಟ್ಟಿರುತ್ತಾರೆ. ತತಃ – ಆ ರಾಕ್ಷಸಸಂಹಾರಾನಂತರವೇ, ಕ್ಷಿತೌ –ಭೂಮಿಯಲ್ಲಿ ನೃಣಾಂ– ಮನುಷ್ಯರಿಗೆ, ಸರ್ವತೀರ್ಥಾನಿ ಎಲ್ಲಾ ತೀರ್ಥಗಳು, ಗಮ್ಯಾನಿ — ಹೋಗಲು ಶಕ್ಯಗಳು ಆಸನ್ — ಆದವು ॥೩॥೪॥೫॥೬॥

ಯಥಾಜಟಾಸುರಃ ಪಾಪಃ ಶರ್ವಾಣೇವರಸಂಶ್ರಯಾತ್ ॥
ಅವಧ್ಯೋವಿಪ್ರರೂಪೇಣ ವಂಚಯನ್ನೇವ ಪಾಂಡವಾನ್ ॥೭॥
ಜ್ಞಾತ್ವಾಪಿ ಭೀಮಸೇನೇನ ವಿಪ್ರರೂಪಸ್ಯ ನೋವಧಃ ॥
ಯೋಗ್ಯ ಇತ್ಯಹತೋಭೀಮೇ ಮೃಗಯಾರ್ಥಂ ಗತೇಕ್ವಚಿತ್ ॥೮॥
ಯುವಾಭ್ಯಾಂ ಯುಧಿಷ್ಠಿರಂ ಕೃಷ್ಣಾಂ ಚಾದಾಯೈವ ಪರಾದ್ರವತ್ ॥
ದೃಷ್ಟ್ವೈಭೀಮೇನ ತಾಂಸ್ತ್ಯಕ್ತ್ವಾ ಸಂಸಕ್ತಸ್ತೇನಸಂಗರೇ ॥೯॥
ನಿಪಾತ್ಯಭೂವಾಂ ಪಾದೇನ ಸಂಚೂರ್ಣಿತಶಿರಾಸ್ತಮಃ ॥

ಜಗಾಮ ಕೀಮುತೇ ಪುತ್ರಾಃ ಶಕ್ಯಾಹಂತುಮಿತಿಸ್ಮಹ ॥
ನಿವಾತಕವಚಾಶ್ಚೈವಹತಾಃ ಪಾರ್ಥೇನತೇ ಶ್ರುತಾಃ ॥೧೦॥

ಶರ್ವಾಣೇವರಸಂಶ್ರಯಾತ್ – ಪಾರ್ವತಿಯ ವರಬಲದಿಂದ, ಅವಧ್ಯಃ – ಕೊಲ್ಲಲಶಕ್ಯನಾದ, ವಿಪ್ರರೂಪೇಣ —ಬ್ರಾಹ್ಮಣವೇಷದಿಂದ, ಪಾಂಡವಾನ್—ಪಾಂಡವರನ್ನು, ವಂಚಯನ್ — ಮೋಸಗೊಳಿಸುವ, ಪಾಪಃ – ಪಾಪಿಷ್ಠನಾದ, ಜಟಾಸುರಃ – ಜಟಾಸುರನು, ಭೀಮಸೇನೇನ – ಭೀಮಸೇನನಿಂದ, ಜ್ಞಾತ್ವಾಪಿ—ಬ್ರಾಹ್ಮಣನಲ್ಲ; ರಾಕ್ಷಸನೆಂದು ತಿಳಿದಾಗ್ಯೂ, ವಿಪ್ರರೂಪಸ್ಯ – ಬ್ರಾಹ್ಮಣವೇಷವುಳ್ಳವನ, ವಧಃ – ಸಂಹಾರವು, ನೋಯೋಗ್ಯಃ – ಯೋಗ್ಯವಲ್ಲ, ಇತಿ – ಈ ಕಾರಣದಿಂದ, ಅಹತಃ — ಕೊಲ್ಲಲ್ಪಡದ ಜಟಾಸುರನು, ಕ್ವಚಿತ್ —ಒಮ್ಮೆ, ಭೀಮೇ – ಭೀಮನು, ಮೃಗಯಾರ್ಥಂ - ಬೇಟೆಗೋಸ್ಕರ, ಗತೇಸತಿ – ಹೋಗುತ್ತಿರಲು, ಯಮೌ — ನಕುಲಸಹದೇವರನ್ನು, ಯುಧಿಷ್ಠಿರಂ - ಧರ್ಮರಾಜನನ್ನು, ಕೃಷ್ಣಾಂ - ದ್ರೌಪದಿಯನ್ನು ಆದಾಯೈವ – ಹಿಡಿದುಕೊಂಡೇ, ಪರಾದ್ರವತ್ — ಓಡಿಹೋದನು, ಭೀಮೇನ – ಭೀಮನಿಂದ, ದೃಷ್ಟಃ – ಕಾಣಿಸಿ–ಕೊಳ್ಳಲ್ಪಟ್ಟ ಜಟಾಸುರನು, ತಾನ್ – ಆ ಧರ್ಮಾದಿಗಳನ್ನು, ತ್ಯಕ್ತ್ವಾ – ಬಿಟ್ಟು, ತೇನ – ಆ ಭೀಮನಿಂದ, ಸಂಗರೇ – ಯುದ್ಧದಲ್ಲಿ, ಸಂಸಕ್ತಃ—ಆಸಕ್ತನಾದನು. ತೇನ – ಆ ಭೀಮನಿಂದ ಭೂಮೌ – ಭೂಮಿಯಲ್ಲಿ. ನಿಪಾತ್ಯ – ಕೆಡವಿ, ಪಾದೇನ–ಕಾಲಿನಿಂದ, ಸಂಚೂರ್ಣಿತಶಿರಾಸ್ತನ್ – ಪುಡಿಮಾಡಲ್ಪಟ್ಟ ತಲೆಉಳ್ಳವನಾಗಿ, ತಮಃ— ಅಂಧಂತಮಸ್ಸನ್ನು, ಜಗಾಮ— ಹೊಂದಿದನು. ತೇ—ನಿನ್ನ, ಪುತ್ರಾಃ—ಮಕ್ಕಳಾದ ದುರ್ಯೋಧನಾದಿಗಳು, ಹಂತುಂ—ಅಂತಹ ಭೀಮಸೇನನಿಂದ ಕೊಲ್ಲಲು, ಶಕ್ಯಾ ಇತಿ – ಸಾಧ್ಯರೆಂದು, ಕಿಮು – ಏನು ಹೇಳತಕ್ಕದ್ದು, ಸ್ಮಹ – ಪ್ರಸಿದ್ಧವು. ನಿವಾತಕವಚಾಶ್ಚೈವ - ಗಾಳಿಯು ಪ್ರವೇಶವೂ ಇಲ್ಲದ ಕವಚಉಳ್ಳ ನಿವಾತಕವಚರೂ ಕೂಡ, ಪಾರ್ಥೇನ – ಅರ್ಜುನನಿಂದ, ಹತಾಃ — ಕೊಲ್ಲಲ್ಪಟ್ಟವರಾಗಿ, ತೇ—ನಿನ್ನಿಂದ ಶ್ರುತಾಃ – ಕೇಳಲ್ಪಟ್ಟಿರುತ್ತಾರೆ. ॥೭॥೮॥೯॥೧೦॥

ಜಾನಾಸಿಚ ಹರೇರ್ವೀರ್ಯಂ ಯಸ್ಯೇದಮಖಿಲಂವಶೇ ॥
ಸಬ್ರಹ್ಮರುದ್ರಶಕ್ರಾದ್ಯಂ ಚೇತನಾಚೇತನಾತ್ಮಕಂ ॥೧೧॥

ತಸ್ಮಾದೇತೈಃ ಪಾಲಿತಸ್ಯ ಧರ್ಮಜಸ್ಯ ಸ್ವಕಂವಸು ॥
ದೀಯತಾಮಿತಿತೇನೋಕ್ತೋ ಧೃತರಾಷ್ಟ್ರೋನಚಾಕರೋತ್ ॥೧೨॥

ಯಸ್ಯ – ಯಾವ ಶ್ರೀಕೃಷ್ಣನ, **ವಶೇ** – ಆಧೀನದಲ್ಲಿ, **ಸಬ್ರಹ್ಮರುದ್ರಶಕ್ರಾದ್ಯಂ** – ಬಹ್ಮ, ರುದ್ರ, ಇಂದ್ರ ಇವರೇ ಮೊದಲಾಗಿ ಉಳ್ಳವರಿಂದ ಕೂಡಿದ, **ಚೇತನಾಚೇತನಾತ್ಮಕಂ** – ಜೀವ ಜಡಾತ್ಮಕವಾದ, **ಇದಮಖಿಲಂ** – ಈ ಎಲ್ಲಾ ಜಗತ್ತು ಇದೆಯೋ, **ತಸ್ಯ - ಹರೇಃ** ಅಂತಹ ಶ್ರೀಕೃಷ್ಣನ, **ವೀರ್ಯಂ** – ಸಾಮರ್ಥ್ಯವನ್ನು, **ಜಾನಾಸಿ** – ತಿಳಿದಿರುವಿ, **ತಸ್ಮಾತ್** – ಆದಕಾರಣ, **ಏಶ್ಯಃ - ಈ ಕೃಷ್ಣ.ಭೀಮಾರ್ಜುನರಿಂದ**, **ಪಾಲಿತಸ್ಯ** — ರಕ್ಷಿಸಲ್ಪಟ್ಟ, **ಧರ್ಮಜಸ್ಯ** — ಧರ್ಮರಾಜನಿಗೆ, **ಸ್ವಕಂ ವಸು** – ತನ್ನದಾದ **ದ್ಯೂತದಲ್ಲಿ ಅಪಹೃತವಾದ ರಾಜ್ಯಸಂಪತ್ತು**, **ದೀಯತಾಂ**—ಕೊಡಲ್ಪಡಲಿ, **ಇತಿ** – ಎಂಬುದಾಗಿ **ತೇನ** – ಆ **ದ್ರುಪದ ಪುರೋಹಿತನಿಂದ**, **ಉಕ್ತಃ** – ಹೇಳಿಸಿಕೊಳ್ಳಲ್ಪಟ್ಟ, **ಧೃತರಾಷ್ಟ್ರಃ** – ಧೃತರಾಷ್ಟ್ರನು, **ನಚಾಕರೋತ್** – ಪುರೋಹಿತನು ಹೇಳಿದಂತೆ ಮಾಡಲಿಲ್ಲ, ರಾಜ್ಯಕೊಡಲಿಲ್ಲ. ॥ ೧೧ ॥ ೧೨ ॥

ಭಾ. ಅ. ೧–೧೨ ದ್ರುಪದರಾಜನು ಶ್ರೀಕೃಷ್ಣನ ಸಮ್ಮತಿಯಂತೆ ತನ್ನ ಪುರೋಹಿತನನ್ನು ಕೌರವ – ಪಾಂಡವ ವಿರೋಧ ಪರಿಹಾರಕ್ಕಾಗಿ ಧೃತರಾಷ್ಟ್ರನ ಹತ್ತಿರಕ್ಕೆ ಕಳಿಸಿದನು. ಆ ಪುರೋಹಿತನು ಧೃತರಾಷ್ಟ್ರನ ಹತ್ತಿರ ಬಂದು ದ್ರುಪದನ ಮಾತನ್ನು (ಈ ಮುಂದಿನಂತೆ) ಹೇಳಿದನು. 'ಧೃತರಾಷ್ಟ್ರನೇ, ನಿನಗೆ ಗೊತ್ತೇ ಇದೆ. ಶ್ರೀಭೀಮಸೇನರು ಎಷ್ಟು ಸಮರ್ಥರು ಎಂದು. ಅವರು ಜರಾಸಂಧಾದಿ ಮಹಾಬಲಿಷ್ಠರನ್ನು ಕೊಂದದ್ದನ್ನು ನೀನು ತಿಳಿದಿರುವಿ. ತೀರ್ಥಸ್ನಾನ ಮಾಡಬಂದ ಯಾತ್ರಿಕರಿಗೆ ಪೀಡಾಕರರಾಗಿ ತೀರ್ಥಗಳಲ್ಲಿ ವ್ಯಾಪಿಸಿಕೊಂಡು ಇದ್ದಂಥ, ರುದ್ರವರದಿಂದ ಅವಧ್ಯರಾದ ಮೂರು ಕೋಟಿ ಪರಾಕ್ರಮಿ ರಾಕ್ಷಸ ಶ್ರೇಷ್ಠರನ್ನು ಎಲ್ಲ ಸಾತ್ವಿಕ ಜನರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಸಂಹಾರ ಮಾಡಿದ ವಿಷಯವನ್ನು ನೀನು ತಿಳಿದಿರುವಿ. ಹೀಗೆ ಆ ಭೀಮರಿಂದಾಗಿ ಎಲ್ಲ ಜನರೂ ತೀರ್ಥಗಳಿಗೆ ಹೋಗುವಂತಾಯಿತು. ಹಾಗೇ, ಪಾರ್ವತೀ ವರದಿಂದ ಅವಧ್ಯನಾದ ಜಟಾಸುರ ಎಂಬ ಪಾಪಿಯು ಬ್ರಾಹ್ಮಣ ವೇಷವನ್ನು ಧರಿಸಿ ಪಾಂಡವರನ್ನು ವಂಚಿಸಲು ಬಂದಾಗ, ಶ್ರೀ ಭೀಮರು ತಿಳಿದೂಕೊಡ ವಿಪ್ರವೇಷದಲ್ಲಿ ಗೌರವದಿಂದ ಕೊಲ್ಲದೇ ಸುಮ್ಮನಿದ್ದರು. ಅವರು ಒಮ್ಮೆ ಬೇಟೆಗೆ ಹೋಗಿರುವಾಗ ಈ ಪಾಪಿಯು, ಧರ್ಮರಾಜ, ನಕುಲ, ಸಹದೇವ, ದ್ರೌಪದಿಯರನ್ನು ಹೊತ್ತುಕೊಂಡು ಓಡುತ್ತಿರುವಾಗ ಬಂದ ಶ್ರೀ ಭೀಮರ ಕಣ್ಣಿಗೆ ಬಿದ್ದು ಅವರೆಲ್ಲರನ್ನು ಬಿಟ್ಟು ಶ್ರೀಭೀಮಸೇನರ ಜೊತೆಗೆ ಯುದ್ಧಕ್ಕಿಳಿದಾಗ ವಿಪ್ರರೂಪಿಯಾದರೂ, ಈ ಮೋಸಗಾರನು ಯುದ್ಧಕ್ಕಿಳಿದ ಈ ಸಮಯದಲ್ಲಿ ವಧಾರ್ಹನೇ ಎಂದು ವಿಚಾರಿಸಿ ಶ್ರೀಭೀಮರು ಅವನನ್ನು ನೆಲಕ್ಕೆ ಕೆಡವಿ, ತಮ್ಮ ಕಾಲಿನಿಂದ ಅವನ ತಲೆಯನ್ನು ತುಳಿದು ಸಂಹರಿಸಿದರು. ಅಂದಮೇಲೆ ನಿನ್ನ ಮಕ್ಕಳನ್ನು ಅನಾಯಾಸವಾಗಿ ಸಂಹರಿಸುವರು ಎಂದು ಏನು ಹೇಳುವದು. ಅರ್ಜುನನು ನಿವಾತಕವಚ (ಕವಚದಲ್ಲಿ ಗಾಳಿಕೂಡ ಹೋಗದಂತಿದ್ದವರು, ಆದ್ದರಿಂದ ಸಂಹಾರ ಮಾಡಲು ಅಸಾಧ್ಯರಾದ) ಎಂಬ ದೈತ್ಯರನ್ನೂ ಕೂಡ ಜಯಿಸುವದು ಮಾತ್ರವಲ್ಲ ಸಂಹರಿಸಿಯೇ ಬಿಟ್ಟಿದ್ದಾನೆ ಎಂಬುದೂ ನಿನಗೆ ಗೊತ್ತು. ಹಾಗೇ ಪೌಲೋಮ ಕಾಲಕೇಯ ದೈತ್ಯರನ್ನೂ ಸಂಹರಿಸಿದ್ದಾನೆ. ಪಾಂಡವರಕ್ಷಕನಾದ ಶ್ರೀ ಕೃಷ್ಣನ ಪರಾಕ್ರಮವನ್ನು ನೀನು ತಿಳಿದಿರುವಿ. ಬ್ರಹ್ಮರುದ್ರಾದಿ ಸಮೇತವಾದ ಚೇತನಾಚೇತನಾತ್ಮಕವಾದ ಈ ಜಗತ್ತೇ ಆ ಮಹಾನುಭಾವನ ವಶದಲ್ಲಿದೆ. ಧರ್ಮರಾಜನು ಈ ಮೂವರಿಂದ ರಕ್ಷಿತನಾಗಿರುವನು. ಅವನಿಗೆ ಅವನ ರಾಜ್ಯವನ್ನು ಕೊಡು; ಕಲಹ ಬೇಡ' ಎಂದು ಹೇಳಿದರೂ ಕೂಡ ಧೃತರಾಷ್ಟ್ರನು ಹಾಗೆ ಮಾಡಲಿಲ್ಲ. **ವಿಶೇಷಾಂಶ** – 1) ವನ ಪರ್ವದಲ್ಲಿರುವ ಘಟನೆಗಳನ್ನು ಸಂಗ್ರಹಿಸಿದ್ದಾರೆ ಸರ್ವಜ್ಞ ಆಚಾರ್ಯರು. 2) ಧರ್ಮ ಎಂಬ ಪದದಿಂದ ಧರ್ಮರಾಜನನ್ನು ಕರೆದು ಸದಾ ಧರ್ಮಮಾರ್ಗದಲ್ಲಿರುವ ಯುಧಿಷ್ಠಿರನ ಬಗ್ಗೆ ನೀನು ಈ ರೀತಿ ನಡೆಯುತ್ತಿರುವದು ಅನ್ಯಾಯ ಎಂದು ತಿಳಿಸಿದ್ದಾನೆ ಎಂದೂ ಸೂಚಿಸಿದ್ದಾರೆ. 3) ಈ ನಿನ್ನ ಅನ್ಯಾಯಕ್ಕೆ ನಿನ್ನನ್ನು ಶಿಕ್ಷಿಸಲು ಸಮರ್ಥರು ಶ್ರೀ ಕೃಷ್ಣ-ಭೀಮಾರ್ಜುನರು ಎಂಬುದನ್ನು ಅವರ ಸಾಮರ್ಥ್ಯ ನಿರೂಪಣೆಯಿಂದ ತಿಳಿಸಿದ್ದಾನೆ ಎಂದು ತಿಳಿಸಿದ್ದಾರೆ.

ತತಃ ಸಹೈವಯದುಭಿಃ ಕೃಷ್ಣಂದ್ವಾರವತೀಂಗತಂ ॥
ಯುದ್ಧಸಾಹಾಯ್ಯಮಿಚ್ಛಂತೌ ಧಾರ್ತರಾಷ್ಟ್ರಧನಂಜಯೌ ॥೧೩॥

ಯುಗಪದ್ಯಯತುಸ್ತತ್ರ ವೇಗೇನಾಜಯದರ್ಜುನಂ ॥
ದುರ್ಯೋಧನಃ ಶಿರಸ್ಥಾನ ಆಸೀನೋಽಭೂದ್ಧರೇಸ್ತದಾ ॥
ದರ್ಪಾನ್ನಾಹಂ ರಾಜರಾಜ ಉಪಾಸ್ಯೇ ಪಾದಯೋರಿತಿ ॥೧೪॥

ತತಃ – ಅನಂತರ, ಯದುಭಿಃ – ಯಾದವರಿಂದ, ಸಹೈವ – ಕೂಡಿಕೊಂಡೇ, ದ್ವಾರವತೀಂ – ದ್ವಾರಕೆಯನ್ನು ಗತಂ – ಹೊಂದಿರುವ, ಕೃಷ್ಣಂ – ಶ್ರೀ ಕೃಷ್ಣನನ್ನು, ಧಾರ್ತರಾಷ್ಟ್ರಧನಂಜಯೌ — ದುರ್ಯೋಧನ ಅರ್ಜುನರಿಬ್ಬರು, ಯುದ್ಧಸಾಹಾಯ್ಯಂ—ಯುದ್ಧಕ್ಕಾಗಿ ಸಹಾಯವನ್ನು, ಇಚ್ಛಂತೌ ಸಂತೌ —ಇಚ್ಛಿಸುವವರಾಗಿ, ಯುಗಪತ್ – ಏಕಕಾಲದಲ್ಲಿ ಯಯತುಃ – ತಮ್ಮ ವಾಸಸ್ಥಾನದಿಂದ ಹೋದರು, ತತ್ರ — ಆಗಮನದಲ್ಲಿ, ದುರ್ಯೋಧನಃ – ದುರ್ಯೋಧನನು, ವೇಗೇನ – ತ್ವರೆಯಿಂದ, ಅರ್ಜುನಂ – ಅರ್ಜುನನನ್ನು, ಅಜಯತ್ – ಗೆದ್ದನು, ಅಂದರೆ ಅರ್ಜುನನಿಗಿಂತ ಮೊದಲೇ ಶ್ರೀ ಕೃಷ್ಣನನ್ನು ಹೊಂದಿದನು, ತದಾ – ಆಗ, ರಾಜರಾಜಃ – ರಾಜಾಧಿರಾಜನಾದ ಅಹಂ – ನಾನು, ಪಾದಯೋಃ — ಚರಣಗಳ, ಉಪ—ಸಮೀಪದಲ್ಲಿ ನ ಆಸ್ಯೇ — ಕೂತುಕೊಳ್ಳುವುದಿಲ್ಲ, ಇತಿ – ಎಂದು, ದರ್ಪಾತ್ – ಅಹಂಕಾರದಿಂದ ಹರೇಃ ಶ್ರೀ ಕೃಷ್ಣನ, ಶಿರಸ್ಥಾನೇ—ತಲೆಯ ಸ್ಥಾನದಲ್ಲಿ, ಆಸೀನಃ – ಕುಳಿತವನು, ಅಭೂತ್ – ಆದನು. ॥೧೩॥೧೪॥

ತಯೋರಾಗಮನಂಪೂರ್ವಂ ಜ್ಞಾತ್ವೈವಹಿ ಹರಿಃ ಪ್ರಭುಃ ॥
ಅಸುಪ್ತಃ ಸುಪ್ತವಚ್ಛಿಶ್ಯೇ ತತ್ರಾತಿಷ್ಠದ್ಧನಂಜಯಃ ॥೧೫॥

ಪ್ರಣಮ್ಯಪಾದಯೋಃ ಪ್ರಹ್ವೋಭಕ್ತ್ಯೇಕಾತ್ಕೃತಾಂಜಲಿಃ ॥೧೬॥

ಪ್ರಭುಃ—ಸಮರ್ಥನಾದ, ಹರಿಃ — ಶ್ರೀಕೃಷ್ಣನು, ತಯೋಃ – ಅವರಿಬ್ಬರ, ಆಗಮನಂ — ಆಗಮನವನ್ನು, ಪೂರ್ವಂ ಏವ — ಮೊದಲೇ, ಜ್ಞಾತ್ವಾ — ತಿಳಿದು, ಅಸುಪ್ತೋಪಿ — ನಿದ್ರೆ ಇಲ್ಲದವನಾದರೂ, ಸುಪ್ತವತ್ — ನಿದ್ರೆ ಬಂದವನಂತೆ, ಶಿಶ್ಯೆ – ಮಲಗಿದನು, ಧನಂಜಯಃ – ಅರ್ಜುನನು, ಭಕ್ತ್ಯೇಕಾತ್—ಭಕ್ತಿಯ ಆಧಿಕ್ಯದಲ್ಲಿ, ಪ್ರಹ್ವಃಸನ್ —ನಮ್ರೀಭೂತನಾಗಿ, ಕೃತಾಂಜಲಿಃಸನ್— ಮಾಡಲ್ಪಟ್ಟ ಕರಸಂಪುಟವುಳ್ಳವನಾಗಿ, ಪಾದಯೋಃ — ಶ್ರೀ ಕೃಷ್ಣನ ಪಾದಗಳಲ್ಲಿ, ಪ್ರಣಮ್ಯ — ನಮಸ್ಕರಿಸಿ, ತತ್ರ—ಕೃಷ್ಣನಪಾದದ ಸಮೀಪದಲ್ಲಿ, ಅತಿಷ್ಠತ್ — ನಿಂತನು ॥೧೫॥ ॥೧೬॥

ತಮೈಕ್ಷತ್ಪ್ರಥಮಂದೇವೋ ಜಾನನ್ನಪಿಸುಯೋಧನಂ ॥
ಸ್ವಾಗತಂ ಫಲ್ಗುನೇತ್ಯುಕ್ತೇ ಪೂರ್ವಮಾಗಾಮುಹಂತ್ವಿತಿ ॥೧೭॥
ಅಹ ದುರ್ಯೋಧನಸ್ತಂಚ ಸ್ವಾಗತೇನಾಭ್ಯಪೂಜಯತ್ ॥೧೮॥

ದೇವಃ — ಶ್ರೀ ಕೃಷ್ಣನು, ಸುಯೋಧನಂ — ದುರ್ಯೋಧನನನ್ನು, ಜಾನನ್ನಪಿ — ಮೊದಲು ಬಂದವನನ್ನಾಗಿ ತಿಳಿದರೂ ಕೂಡ, ಪ್ರಥಮಂ — ಮೊದಲು, ತಂ — ಅರ್ಜುನನ್ನು, ಐಕ್ಷತ್ – ನೋಡಿದನು, ಹೇ–ಫಲ್ಗುನ,–ಎಲೋ ಅರ್ಜುನನೇ, ಸ್ವಾಗತಂ – ನಿನಗೆ ಸ್ವಾಗತವು, ಇತಿ–ಎಂದು, ಉಕ್ತೇಸತಿ – ಶ್ರೀಕೃಷ್ಣನು ಹೇಳುತ್ತಿರಲು, ದುರ್ಯೋಧನಃ — ದುರ್ಯೋಧನನು, ಅಹಂ – ನಾನು, ಪೂರ್ವಂ — ಮೊದಲು, ಆಗಾಂ–ಬಂದಿರುವೆನು, ಇತಿ– ಎಂದು, ಅಹ — ಹೇಳಿದನು, ತಂ ಚ –ಆ ದುರ್ಯೋಧನನನ್ನೂ ಕೂಡ, ಸ್ವಾಗತೇನ – ಸ್ವಾಗತವಚನದಿಂದ, ಅಭ್ಯಪೂಜಯತ್ – ಪೂಜಿಸಿದನು. ॥೧೭॥೧೮॥

ತಯೋರಾಗಮನೇಹೇತುಂ ಶ್ರುತ್ವಾಸ್ಮಾಹ ಜನಾರ್ದನಃ ॥
ಏಕಃಪೂರ್ವಾಗತೋಽತ್ರಾನ್ಯಃ ಪೂರ್ವದೃಷ್ಟೋಮಯಾಯತಃ ॥೧೯॥
ಸಮುಂಕರಿಷ್ಯೇ ಯುವಯೋ ರೇಕತ್ರಾಹಂ ನಿರಾಯುಧಃ ॥
ಅನ್ಯತ್ರದಶಲಕ್ಷಂಮೇ ಪುತ್ರಾಃ ಶೂರಾಃ ಪದಾತಯಃ ॥೨೦॥
ಇತ್ಯುಕ್ತೇ ಫಲ್ಗುನಃ ಕೃಷ್ಣಂ ವವ್ರೇತದ್ಭಕ್ತಿಮಾನ್ಮತಃ ॥
ಅನ್ಯಸ್ತತ್ರಾಭಕ್ತಿಮತ್ವಾ ದ್ಪವ್ರೇಗೋಪಾನ್ಪ್ರಯುಧ್ಯತಃ ॥೨೧॥

ಜನಾರ್ದನಃ-ಶ್ರೀ ಕೃಷ್ಣನು. ತಯೋಃ - ಆ ಅರ್ಜುನ ದುರ್ಯೋಧನರಿಬ್ಬರ. ಆಗಮನೇ — ಬಂದವಿಷಯದಲ್ಲಿ ಹೇತುಂ ಕಾರಣವನ್ನು, ಶ್ರುತ್ವಾ - ಕೇಳಿ ಪ್ರಾಹ--ಹೇಳಿದನು. ಅತ್ರ — ನನ್ನ ಸಮೀಪಕ್ಕೆ, ಏಕಃ – ಒಬ್ಬನಾದ ದುರ್ಯೋಧನನು, ಪೂರ್ವಾಗತಃ – ಮೊದಲು ಬಂದವನು, ಅನ್ಯಃ - ಇನ್ನೊಬ್ಬನಾದ ಅರ್ಜುನನು, ಯತಃ—ಯಾವ ಕಾರಣದಿಂದ, ಮಯಾ — ನನ್ನಿಂದ, ಪೂರ್ವದೃಷ್ಟಃ — ಮೊದಲು ನೋಡಲ್ಪಟ್ಟವನೋ, ತತಃ — ಆ ಕಾರಣದಿಂದ ಯುವಯೋಃ – ನಿಮ್ಮಿಬ್ಬರಿಗೆ, ಸಮಂ – ಸಮವಾಗಿಯೇ, ಕರಿಷ್ಯೇ - ಸಹಾಯವನ್ನು ಮಾಡುವೆನು, ಏಕತ್ರ – ಒಂದು ಪಕ್ಷದಲ್ಲಿ, ಅಹಂ — ನಾನು, ನಿರಾಯುಧಃ – ಆಯುಧರಹಿತನಾಗಿರುವೆನು, ಅನ್ಯತ್ರ — ಇನ್ನೊಂದು ಪಕ್ಷದಲ್ಲಿ, ಶೂರಾಃ – ಪರಾಕ್ರಮಿಗಳಾದ, ಪದಾತಯಃ – ಪಾದಚಾರಿಗಳಾದ ದಶಲಕ್ಷಂ – ಹತ್ತುಲಕ್ಷ ಸಂಖ್ಯಾಕರಾದ, ಮೇ – ನನ್ನ, ಪುತ್ರಾಃ – ಮಕ್ಕಳು ಇರುವರು, ಇತಿ – ಎಂದು ಉಕ್ತೇ ಸತಿ – ಹೇಳುತ್ತಿರಲು, ಯತಃ ಯಾವಕಾರಣದಿಂದ, ಅರ್ಜುನಃ – ಅರ್ಜುನನು ತದ್ಭಕ್ತಿಮಾನ್–ಆ ಕೃಷ್ಣನಲ್ಲಿ ಭಕ್ತಿಉಳ್ಳವನೋ, ತತಃ ಆ ಕಾರಣದಿಂದ, ಕೃಷ್ಣಂ – ಶ್ರೀ ಕೃಷ್ಣನನ್ನು, ವವ್ರೇ – ಸ್ವೀಕರಿಸಿದನು, ಅನ್ಯಃ–ಇತರನಾದ ದುರ್ಯೋಧನನು, ತತ್ರ — ಆ ಕೃಷ್ಣನಲ್ಲಿ, ಅಭಕ್ತಿಮತ್ವಾತ್ — ಭಕ್ತಿ ಇಲ್ಲದಿರುವದರಿಂದ, ಪ್ರಯುಧ್ಯತಃ–ಜೆನ್ನಾಗಿ ಯುದ್ಧ ಮಾಡತಕ್ಕ, ಗೋಪಾನ್ – ಗೋಪರನ್ನು, ವವ್ರೇ—ಸ್ವೀಕರಿಸಿದನು. ॥೧೯॥೨೦॥೨೧॥

ಪಾರ್ಥಾನಾಮೇವ ಸಾಹಾಯ್ಯಂ ಕರಿಷ್ಯನ್ನಪಿ ಕೇಶವಃ ॥
ತಸ್ಯಾಭಕ್ತಿಂ ದರ್ಶಯಿತುಂ ಚಕ್ರೇ ಸಮವದೀಶ್ವರ ಃ ॥೨೨॥

ಕೇಶವಃ— ಶ್ರೀಕೃಷ್ಣನು, ಪಾರ್ಥಾನಾಮೇವ ಪಾಂಡವರಿಗೇನೇ, ಸಾಹಾಯ್ಯಂ – ಸಹಾಯವನ್ನು ಕರಿಷ್ಯನ್ನಪಿ— ಮಾಡುವವನಾದರೂ, ತಸ್ಯ ಆ ದುರ್ಯೋಧನನ, ಅಭಕ್ತಿಂ – ಭಕ್ತಿ ಇಲ್ಲದಿರುವಿಕೆಯನ್ನು, ದರ್ಶಯಿತುಂ - ತೋರಿಸುವುದ ಕ್ಕೋಸ್ಕರ, ಈಶ್ವರೋಪಿ –ಬ್ರಹ್ಮಾದಿಗಳಿಗೆ ಸ್ವಾಮಿಯಾದರೂ, ಸಮವತ್ – ತನಗೂ ಗೋಪಾಲಕರಿಗೂ ಸಮವಾದಂತೆ ಚಕ್ರೇ—ಮಾಡಿದನು. ॥೨೨॥

ಭಾ. ಆ. ೧೩ – ೨೨ ಈ ನಂತರ ಶ್ರೀ ಕೃಷ್ಣನು ಮುಂದಿನದೆಲ್ಲವನ್ನು ತಿಳಿದೇ ಯಾದವಸಮೇತನಾಗಿ ದ್ವಾರಕಾಕ್ಕೆ ಬಂದಿದ್ದಾನೆ. ಯುದ್ಧ ಸಹಾಯವನ್ನು ಇಚ್ಛಿಸತಕ್ಕ ಅರ್ಜುನ ದುರ್ಯೋಧನರಿಬ್ಬರು ಏಕಕಾಲದಲ್ಲಿ ಶ್ರೀಕೃಷ್ಣನ ಕಡೆಗೆ ಹೊರಟಿದ್ದಾರೆ. ಆಗ ದುರ್ಯೋಧನನು ವೇಗವಾಗಿ ಹೋಗಿ ಅರ್ಜುನನಿಗಿಂತ ಮೊದಲೇ ಶ್ರೀಕೃಷ್ಣನ ಸಮೀಪಕ್ಕೆ ಹೋಗಿ, ರಾಜಾಧಿರಾಜನಾದ ತಾನು ಶ್ರೀಕೃಷ್ಣನ ಪಾದಸ್ಥಳದಲ್ಲಿ ಕೂಡುವದು ಸರಿಯಲ್ಲ ಎಂಬ ಗರ್ವ, ದುರಭಿಮಾನಗಳಿಂದ ಶ್ರೀಕೃಷ್ಣನ ತಲೆಯ ಕಡೆಗೆ ಕೂತನು. ಇವರು ಬರುತ್ತಿರುವದನ್ನು ತಿಳಿದೇ ನಿತ್ಯವೂ ಎಚ್ಚರದಲ್ಲಿರುವ ಭಗವಂತನು ನಿದ್ರೆಯ ನಾಟಕ ಮಾಡುತ್ತಾ ಮಲಗಿದ್ದನು. ಅರ್ಜುನನು ಬಂದು ಭಕ್ತಿಯಿಂದ ಶ್ರೀಕೃಷ್ಣನ ಪಾದಗಳಿಗೆ ನಮಿಸಿ. ನಮ್ರನಾಗಿ ಪಾದಸಮೀಪದಲ್ಲಿ ಕುಳಿತಿದ್ದಾನೆ. ಆಗ ಎಚ್ಚರದ ನಾಟಕ ಮಾಡುತ್ತಾ ಶ್ರೀಕೃಷ್ಣನು ಎದ್ದು ಕೂಡುತ್ತಾ ಅರ್ಜುನನಿಗೆ ಸ್ವಾಗತ ಕೋರಿದನು. ಆಗ ದುರ್ಯೋಧನನು ನಾನು ಮೊದಲು ಬಂದಿದ್ದೇನೆ ಎಂದು ಕೂಗಿಕೊಂಡನು. ಆಗ ಅವನನ್ನು ಬಂದದ್ದಾಗಿ ತಿಳಿದಂತೆ ತೋರಿಸಿ, ಸ್ವಾಗತಿಸಿ. ಇಬ್ಬರ ಬರುವಿಕೆಯ ಕಾರಣವನ್ನು ಕೇಳಿ ತಿಳಿದುಕೊಂಡು ಒಬ್ಬರು ಮೊದಲು ಬಂದವರು, ಒಬ್ಬರು ಮೊದಲು

ಬಂದವರು, ಒಬ್ಬರು ಮೊದಲು ನನ್ನ ಕಣ್ಣಿಗೆ ಬಿದ್ದವರು. ಇಬ್ಬರಿಗೂ ಸಮವಾದ ಸಹಾಯ ಮಾಡುತ್ತೇನೆ ಎಂದು ಹೇಳಿ ಒಂದು ಕಡೆ ನಿರಾಯುಧನಾದ ನಾನು ಬರುವೆನು; ಇನ್ನೊಂದು ಕಡೆ ಶೂರರಾದ ಹತ್ತುಲಕ್ಷ ಸಂಖ್ಯಾಕರಾದ ನನ್ನ ಮಕ್ಕಳಾದ ಪದಾತಿಸೈನಿಕರು ಬರುವರು ಎಂದನು. ಆಗ ಶ್ರೀ ಕೃಷ್ಣಭಕ್ತನಾದ ಅರ್ಜುನನು, ಕೃಷ್ಣನನ್ನು ಆರಿಸಿಕೊಂಡನು. ಭಕ್ತಿಯಿಲ್ಲದ ದುರ್ಯೋಧನನು ಹತ್ತು ಲಕ್ಷ ಮಂದಿ ಪದಾತಿಗಳನ್ನು ಆರಿಸಿಕೊಂಡಿದ್ದಾನೆ. ದುರ್ಯೋಧನನ ಈ ಭಕ್ತಿಯಿಲ್ಲದ ಸ್ವಭಾವವನ್ನು ಲೋಕಕ್ಕೆ ತೋರಿಸುವದಕ್ಕಾಗಿಯೇ ಸರ್ವಲೋಕ ಸ್ವಾಮಿಯಾದ ತನ್ನನ್ನು ಹತ್ತು ಲಕ್ಷ ಮಂದಿಗೆ ಸಮನನ್ನಾಗಿ ಹೇಳಿಕೊಂಡಿದ್ದಾನೆ. ಈ ನಾಟಕ ಮಾಡಿದ್ದಾನೆ.

ತತಃಪಾರ್ಥೇನಸಹಿತಃ ಪಾಂಡವಾನ್ಕೇಶವೋಯಯೌ ॥
ದುರ್ಯೋಧನೋಯಯೌ ರಾಮಂ ಸಭಯಾತ್ಕೇಶವಸ್ಯಚ ॥
ನ ಸಹಾಯ್ಯಂ ಕರೋಮೀತಿ ಪ್ರಾಹ ತಸ್ಮಿನ್ನೇಹವಾನಪಿ ॥೨೩॥

ತತಃ - ಅನಂತರ, ಕೇಶವಃ – ಶ್ರೀಕೃಷ್ಣನು, ಪಾರ್ಥೇನ – ಅರ್ಜುನನಿಂದ, ಸಹಿತಃಸನ್ – ಕೂಡಿದವನಾಗಿ, ಪಾಂಡವಾನ್ – ಪಾಂಡವರನ್ನು ಕುರಿತು, ಯಯೌ – ಹೋದನು. ದುರ್ಯೋಧನಃ – ದುರ್ಯೋಧನನು, ರಾಮಂ – ಬಲರಾಮನನ್ನು ಕುರಿತು, ಯಯೌ – ಹೋದನು. ತಸ್ಮಿನ್ನೇಹವಾನಪಿ - ದುರ್ಯೋಧನನಲ್ಲಿ ಪ್ರೀತಿಉಳ್ಳವನಾದರೂ, ಸಃ – ಆ ಬಲರಾಮನು ಕೇಶವಸ್ಯ – ಶ್ರೀಕೃಷ್ಣನ, ಭಯಾತ್ – ಹೆದರಿಕೆಯಿಂದ, ಸಹಾಯ್ಯಂ – ಸಹಾಯವನ್ನು ನ ಕರೋಮಿ – ಮಾಡುವುದಿಲ್ಲ, ಇತಿ – ಎಂದು ಪ್ರಾಹ – ಹೇಳಿದನು. ॥೨೩॥

ಉಪಪ್ಲಾವ್ಯೇ ಸಭಾಯಾಂಹಿ ತತ್ಪಕ್ಷೀಯಂ ವಚೋಬ್ರುವನ್ ॥
ನಿರಾಕೃತಃ ಸಾತ್ಯಕಿನಾ ಸಮಕ್ಷಂ ಕೇಶವಸ್ಯಚ ॥೨೪॥

ಉಪಪ್ಲಾವ್ಯೇ – ಉಪಪ್ಲಾವ್ಯನಗರದಲ್ಲಿ, ಸಭಾಯಾಂ ಸಭೆಯಲ್ಲಿ, ತತ್ಪಕ್ಷೀಯಂ – ದುರ್ಯೋಧನನಲ್ಲಿ ಪಕ್ಷಪಾತ ಉಳ್ಳ, ವಚಃ– ಮಾತನ್ನು, ಬ್ರುವನ್ – ಹೇಳತಕ್ಕಬಲರಾಮನು, ಕೇಶವಸ್ಯ – ಶ್ರೀಕೃಷ್ಣನ ಸಮಕ್ಷಂ – ಎದುರಿನಲ್ಲಿ, ಸಾತ್ಯಕಿನಾ – ಸಾತ್ಯಕಿಯಿಂದ, ನಿರಾಕೃತಃ – ನಿಂದಿಸಿಕೊಳ್ಳಲ್ಪಟ್ಟನು ॥೨೪॥

ತತೋದುರ್ಯೋಧನಂನಾಯಾತ್ಸಚ ಹಾರ್ದಿಕ್ಯಸಂಯುತಃ ॥
ಜಗಾಮ ಹಾಸ್ತಿನಪುರಮಕ್ಷೌ ಹಿಣ್ಯೌದಶಾಭವನ್ ॥

ತತಃ– ಕೃಷ್ಣನ ಎದುರಿನಲ್ಲಿ ಸಾತ್ಯಕಿಯಿಂದ ನಿರಾಕೃತನಾದ್ದರಿಂದ, ದುರ್ಯೋಧನಂ – ತನ್ನಪಟ್ಟಣಕ್ಕೆ ಹೋಗುವ ದುರ್ಯೋಧನನನ್ನು, ನಾಯಾತ್ – ಅನುಸರಿಸಿಹೋಗಲಿಲ್ಲ. ಸಚ -ಆ ದುರ್ಯೋಧನನಾದರೂ, ಹಾರ್ದಿಕ್ಯಸಂಯುತಃಸನ್– ಕೃತವರ್ಮನಿಂದಕೂಡಿದವನಾಗಿ, ಹತ್ತುಲಕ್ಷಗೋಪರಿಂದಲೂಕೂಡಿದವನಾಗಿ ಹಾಸ್ತಿನಪುರಂ – ಹಸ್ತಿನಾವತಿಪಟ್ಟಣಕ್ಕೆ, ಜಗಾಮ – ಹೋದನು.

ಏಕಾಚ ಧಾರ್ತರಾಷ್ಟ್ರಸ್ಯನಾನಾದೇಶ್ಯೈರ್ನೃಪೈರ್ಯುತಾಃ ೨೫॥

ಧಾರ್ತರಾಷ್ಟ್ರಸ್ಯ – ದುರ್ಯೋಧನನಿಗೆ, ನಾನಾದೇಶ್ಯೈಃ– ಅನೇಕದೇಶಗಳಲ್ಲಿ ಹುಟ್ಟಿರುವ, ನೃಪೈಃ– ರಾಜರಿಂದ ಯುತಾಃ– ಕೂಡಿದ, ದಶ – ಹತ್ತು, ಅಕ್ಷೌಹಿಣ್ಯಃ– ಅಕ್ಷೌಹಿಣೀ ಸೈನ್ಯಗಳು, ಧಾರ್ತರಾಷ್ಟ್ರಸ್ಯ – ದುರ್ಯೋಧನನ, ಏಕಾಚ– ಒಂದು ಅಕ್ಷೌಹಿಣಿ ಸೈನ್ಯವೂಕೂಡ ಸೇರಿ, ಹನ್ನೊಂದು ಅಕ್ಷೌಹಿಣೀ ಸಂಖ್ಯಾಕ ಸೈನ್ಯಗಳು, ಅಭವನ್ – ಆದವು. ॥೨೫॥

ಸಪ್ತಪಾಂಡುಸುತಾನಾಂಚ ವಾತ್ಸ್ಯದ್ರುಪದಕೈಕಯೈಃ ॥
ಧೃಷ್ಟಕೇತು ಜರಾಸಂಧಸುತ ಕಾಶಿನೃಪೈರ್ಯುತಾಃ ॥೨೬॥

ಪಾಂಡುಸುತಾನಾಂ – ಪಾಂಡವರಿಗೆ, ಮಾತ್ಸ್ಯದ್ರುಪದಕೈಕಯೈಃ– ವಿರಾಟನ ದೇಶದವರೂ, ದ್ರುಪದ, ಕೈಕಯರಂ ಇವರಿಂದಲೂ, ಧೃಷ್ಟಕೇತು ಜರಾಸಂಧಸುತ ಕಾಶಿನೃಪೈಃ–ಧೃಷ್ಟಕೇತುವು, ಜರಾಸಂಧನ ಮಗ ಸಹದೇವನು, ಕಾಶಿರಾಜನೂ ಇವರಿಂದ, ಯುತಃ – ಕೂಡಿದ, ಸಪ್ತ – ಏಳು ಅಕ್ಷೌಹಿಣಿಗಳು, ಅಭವನ್ — ಆದವು. ॥೨೬॥

ಪುರುಜಿತ್ಕುಂತಿಭೋಜಶ್ಚ ಚೇಕಿತಾನಶ್ಚ ಸಾತ್ಯಕಿಃ ॥
ಸಾಂಡವಾನ್ಸೇನಯಾ ಯುಕ್ತಾಃ ಸಮಿಯುರ್ದೇವಪಕ್ಷಿಣಃ ॥೨೭॥

ದೇವಪಕ್ಷಿಣಃ – ದೇವತೆಗಳ ಪಕ್ಷದಲ್ಲಿರುವ, ಪುರುಜಿತ್ – ಪುರುಜಿತ್ತನು, ಕುಂತಿಭೋಜಶ್ಚ – ಕುಂತಿ ಭೋಜನು, ಚೇಕಿತಾನಃ – ಚೇಕಿತಾನನೆಂಬಯಾದವನು, ಸಾತ್ಯಕಿಶ್ಚ– ಸಾತ್ಯಕಿಯೂ ಕೂಡ, ಸೇನಯಾ — ತಮ್ಮ ತಮ್ಮ ಸೈನ್ಯಗಳಿಂದ, ಯುಕ್ತಾಃ ಸಂತಃ – ಕೂಡಿದವರಾಗಿ, ಪಾಂಡವಾನ್—ಪಾಂಡವರನ್ನು, ಸಮಿಯುಃ – ಹೊಂದಿದರು, ॥೨೭॥

ವಿಂದಾನುವಿಂದಾವಾವಂತ್ಯೌ ಜಯತ್ಸೇನೋನ್ಯಕೈಕಯೂಃ ॥
ಕ್ಷೇಮಧೂರ್ತಿರ್ದಂಡಧರಃ ಕಲಿಂಗೋಽಂಬಷ್ಠವಿವಚ ॥೨೮॥

ಶ್ರುತಾಯುರಚ್ಯುತಾಯುಶ್ಚ ಬೃಹದ್ಬಲಸುದಕ್ಷಿಣೌ ॥
ಶ್ರುತಾಯುಧಃ ಸೈಂಧವಶ್ಚ ರಾಕ್ಷಸೋಽಲಂಬುಸಸ್ತಥಾ ॥
ಅಲಾಯುಧೋಽಲಂಬಲಶ್ಚ ದೈತ್ಯಾ ದುರ್ಯೋಧನಂಯಯುಃ ॥೨೯॥

ಆವಂತ್ಯೌ – ಅವಂತಿದೇಶದ ರಾಜರಾದ, ವಿಂದಾನುವಿಂದೌ – ವಿಂದ ಮತ್ತು ಅನುವಿಂದರು, ಜಯತ್ಸೇನಃ – ಜಯತ್ಸೇನನು, ಅನ್ಯಕೈಕಯಾಃ- ದೇವಪಕ್ಷದಲ್ಲಿರುವ ಐದು ಕೈಕಯರಿಂದ ಇತರರಾದ ಅಸುರಪಕ್ಷದಲ್ಲಿರುವ ಕೈಕಯರೂ, ಕ್ಷೇಮ ಧೂರ್ತಿಃ – ಕ್ಷೇಮಧೂರ್ತಿಯು, ದಂಡಧರಃ – ದಂಡಧರನು, ಕಲಿಂಗಃ-ಕಲಿಂಗನು, ಅಂಬಷ್ಠಃ – ಅಂಬಷ್ಠನು, ಶ್ರುತಾಯುಃ– ಶ್ರುತಾಯುವು, ಅಚ್ಯುತಾಯುಶ್ಚ – ಅಚ್ಯುತಾಯುವೂ ಕೂಡ, ಬೃಹದ್ಬಲ ಸುದಕ್ಷಿಣೌ – ಬೃಹದ್ಬಲ ಸುದಕ್ಷಿಣರು, ಶ್ರುತಾಯುಧಃ – ಶ್ರುತಾಯುಧನು, ಸೈಂಧವಶ್ಚ – ಸೈಂಧವನೂ ಕೂಡ, ರಾಕ್ಷಸಃ—ರಾಕ್ಷಸನಾದ, ಅಲಂಬುಸಃ – ಅಲಂಬುಸನು, ತಥಾ – ಹಾಗೆಯೇ, ಅಲಾಯುಧಃ – ಅಲಾಯುಧ ರಾಕ್ಷಸನು, ಅಲಂಬಲಶ್ಚ – ಅಲಂಬಲ ರಾಕ್ಷಸನು, ದೈತ್ಯಾಃ – ದೈತ್ಯರೂ ದುರ್ಯೋಧನಂ – ದುರ್ಯೋಧನನನ್ನು, ಯಯುಃ — ಹೊಂದಿದರು. ॥೨೮॥೨೯॥

೨೧,೮೭೦ ಗಜಗಳೂ, ಅಷ್ಟೇ ರಥಗಳೂ, ೬೫,೬೧೦ ಕುದುರೆಗಳೂ, ೧೦,೯,೩೫೦ ಕಾಲಾಳುಗಳೂ ಸೇರಿದರೆ ಒಂದು ಅಕ್ಷೌಹಿಣಿಯಾಗುವುದು.

ಗತ್ವಾದುರ್ಯೋಧನಾಹೂತೋ ಭಗದತ್ತೋಽಪಿ ತಂ ಯಯೌ ॥೩೦॥
ಸಪುತ್ರಪೌತ್ರೋಬಾಹ್ಲೀಕೋ ಭೀಷ್ಮದ್ರೋಣಕೃಪಾ ಅಪಿ ॥
ಪ್ರೀತ್ಯರ್ಥಂ ಧೃತರಾಷ್ಟ್ರಸ್ಯ ಬಭೂವು ಸ್ತತ್ಸುತಾನುಗಾಃ ॥೩೧॥

ಗತ್ವಾ — ಪ್ರಾಗ್ಜ್ಯೋತಿಷಪುರಕ್ಕೆ ಹೋಗಿ, ದುರ್ಯೋಧನಾಹೂತಃ – ದುರ್ಯೋಧನನಿಂದ ಕರೆಯಲ್ಪಟ್ಟ, ಭಗದತ್ತೋಪಿ — ಭಗದತ್ತನೂ ಕೂಡ, ತಂ — ಆ ದುರ್ಯೋಧನನನ್ನು, ಯಯೌ – ಹೊಂದಿದನು, ಸಪುತ್ರಪೌತ್ರಃ— ಮಕ್ಕಳು ಮೊಮ್ಮಕ್ಕಳು ಇವರಿಂದ ಕೂಡಿದ, ಬಾಹ್ಲೀಕಃ – ಬಾಹ್ಲೀಕರಾಜನು, ಭೀಷ್ಮದ್ರೋಣ ಕೃಪಾ ಅಪಿ — ಭೀಷ್ಮರು, ದ್ರೋಣರು, ಕೃಪಾಚಾರ್ಯರೂ ಕೂಡ, ಧೃತರಾಷ್ಟ್ರಸ್ಯ–ಧೃತರಾಷ್ಟ್ರನ, ಪ್ರೀತ್ಯರ್ಥಂ – ಸಂತೋಷಕ್ಕಾಗಿ, ತತ್ಸುತಾನುಗಾಃ– ಆ ಧೃತರಾಷ್ಟ್ರನ ಮಕ್ಕಳನ್ನು ಅನುಸರಿಸುವವರಾದರು. ॥೩೦॥೩೧॥

ಪಾಂಡ್ಯಶ್ಚ ವೀರಸೇನಾಖ್ಯಃ ಪಾಂಡವಾನೇವ ಸಂಶ್ರಿತಃ ॥
ಶಲ್ಯಂಚ ಪಾಂಡವಾನೇವ ಯಾತಂ ಜ್ಞಾತ್ವಾ ಸುಯೋಧನಃ ॥೩೨॥
ಸುಸಭಾಃ ಕಾರಯಾಮಾಸ ಸರ್ವಭೋಗ ಸಮನ್ವಿತಾಃ ॥
ತಾಯುಧಿಷ್ಠರಕ್ಲೃಪ್ತಾಸ್ಸ ಮತ್ವಾಶಲ್ಯೋಽಬ್ರವೀದಿದಂ ॥೩೩॥
ಯಏತಾಃ ಕಾರಯಾಮಾಸ ತದಭೀಷ್ಟಂ ಕರೋಮ್ಯಹಂ ॥೩೪॥

ಪಾಂಡ್ಯಶ್ಚ – ಪಾಂಡ್ಯ ದೇಶದ ರಾಜನಾದ, ವೀರಸೇನಾಖ್ಯಃ – ವೀರಸೇನನೆಂದು ಹೆಸರುಳ್ಳವನು, ಪಾಂಡವಾನೇವ– ಪಾಂಡವರನ್ನೇ, ಸಂಶ್ರಿತಃ-ಆಶ್ರಯಿಸಿದನು, ಸುಯೋಧನಃ–ದುರ್ಯೋಧನನು, ಪಾಂಡವಾನೇವ–ಪಾಂಡವರನ್ನೇ, ಯಾತಂ– ಹೋಗತಕ್ಕ, ಶಲ್ಯಂ – ಶಲ್ಯನನ್ನು, ಜ್ಞಾತ್ವಾ – ತಿಳಿದು, ಮಾರ್ಗಮಧ್ಯಲ್ಲಿ ವಿಶ್ರಾಂತಿಗಾಗಿ, ಸರ್ವಭೋಗ ಸಮನ್ವಿತಾಃ–ಎಲ್ಲಾ ಭೋಗಗಳಿಂದ ಕೂಡಿರುವ, ಸುಸಭಾಃ – ಒಳ್ಳೆಯ ವಿಶ್ರಮ ಸ್ಥಳಗಳನ್ನು, ಕಾರಯಾಮಾಸ — ಮಾಡಿಸಿದನು, ಸಃ ಶಲ್ಯಃ – ಆ ಶಲ್ಯನು, ತಾಃ- ಆ ಸಭೆಗಳನ್ನು, ಯುಧಿಷ್ಠಿರಕ್ಲೃಪ್ತಾಃ – ಧರ್ಮರಾಜನಿಂದ ಮಾಡಿಸಲ್ಪಟ್ಟವುಗಳನ್ನಾಗಿ, ಮತ್ವಾ–ತಿಳಿದು, ಯಃ–ಯಾವನು, ಏತಾಃ-ಈ ಸಭೆಗಳನ್ನು ಕಾರಯಾಮಾಸ–ಮಾಡಿಸಿರುವನೋ, ತದಭೀಷ್ಟಂ–ಅವನ ಅಭೀಷ್ಟವನ್ನು, ಅಹಂ- ನಾನು, ಕರೋಮಿ – ಪೂರ್ಣ ಮಾಡುತ್ತೇನೆಂದು, ಇದಂ – ಈ ಮಾತನ್ನು, ಅಬ್ರವೀತ್ – ಹೇಳಿದನು. ॥೩೨॥ ॥೩೩॥ ॥೩೪॥

ಲೀನಃ ಶ್ರುತ್ವಾಧಾರ್ತರಾಷ್ಟ್ರಃ ಸತ್ಯಂ ಕುರ್ಮತ್ಯಭಾಷತ ॥
ದೇಹಿಮೇ ಯುದ್ಧಸಾಹಾಯ್ಯಮಿತಿ ಸೋಽಪಿಯಶೋಽರ್ಥಯನ್ ॥
ರಕ್ಷಾರ್ಥಮಾತ್ಮವಾಕ್ಯಸ್ಯ ತಥೇತ್ಯೇವಾಭ್ಯಭಾಷತ ॥೩೫॥

ಧಾರ್ತರಾಷ್ಟ್ರಃ– ದುರ್ಯೋಧನನು, ಲೀನಸ್ಸನ್ – ಅಡಗಿದವನಾಗಿ, ಶ್ರುತ್ವಾ —ಶಲ್ಯನ ಮಾತನ್ನು ಕೇಳಿ, ಸತ್ಯಂ– ನಿನ್ನ ಮಾತನ್ನು ಸತ್ಯವನ್ನಾಗಿ, ಕುರು ಮಾಡು, ಇತಿ–ಎಂದು, ಅಭ್ಯಭಾಷತ – ಹೇಳಿದನು, ಸೋಪಿ–ನಿನ್ನ ಅಭೀಷ್ಟವೆನೆಂದು ಕೇಳಲ್ಪಟ್ಟ ದುರ್ಯೋಧನನಾದರೂ, ಮೇ–ನನಗೆ, ಯುದ್ಧಸಾಹಾಯ್ಯಂ – ಯುದ್ಧಸಹಾಯವನ್ನು, ದೇಹಿ–ಕೊಡು, ಇತಿ– ಎಂದು, ಹೇಳಿದನು. ಸೋಪಿ – ಶಲ್ಯನಾದರೂ, ಯಶಃ – ಕೀರ್ತಿಯನ್ನು, ಅರ್ಥಯನ್‌ಸನ್ – ಇಚ್ಛಿಸತಕ್ಕವನಾಗಿ, ಆತ್ಮವಾಕ್ಯಸ್ಯ—ತನ್ನ ಮಾತಿನ, ರಕ್ಷಾರ್ಥಂ – ರಕ್ಷಣೆಗೋಸ್ಕರ, ತಥಾಏವ – ಹಾಗೆಯೇಆಗಲಿ, ಇತಿ— ಈ ರೀತಿಯಾಗಿ, ಅಭ್ಯಭಾಷತ – ಹೇಳಿದನು. ॥೩೫॥

ಸಪಾಂಡವಾಂಸ್ತತೋಗತ್ವಾತೈರನುಜ್ಞಾತಏವಚ ॥
ತೇಜೋವಧಾರ್ಥಂ ಕರ್ಣಸ್ಯ ಧನಂಜಯಕೃತೇಽರ್ಥಿತಃ ॥೩೬॥
ತಥೇತ್ಯುಕ್ತ್ವಾಯಯೌ ಧರ್ಮನಂದನಂ ಕೌರವಾನ್ಪ್ರತಿ ॥೩೭॥

ತತಃ – ಅನಂತರ, ಸಃ — ಆ ಶಲ್ಯನು, ಪಾಂಡವಾನ್ – ಪಾಂಡವರನ್ನು ಕುರಿತು, ಗತ್ವಾ – ಹೋಗಿ, ತೈಃ – ಆ ಪಾಂಡವರಿಂದ, ಅನುಜ್ಞಾತಏವ–ದುರ್ಯೋಧನನಿಗೆ ಸಹಾಯ ಮಾಡಲು ಅನುಜ್ಞೆಯನ್ನುಪಡೆದವನಾಗಿಯೇ, ಧನಂಜಯಕೃತೇ– ಅರ್ಜುನನ ಜಯಕ್ಕೋಸ್ಕರ, ಕರ್ಣಸ್ಯ – ಕರ್ಣನ, ತೇಜೋವಧಾರ್ಥಂ — ಮಾನಸಿಕ ಸಾಮರ್ಥ್ಯಭಂಗವನ್ನು ಮಾಡುವ ದಕ್ಕಾಗಿ, ಅರ್ಥಿತಃ— ಧರ್ಮರಾಜನಿಂದ ಪ್ರಾರ್ಥಿಕೊಳ್ಳಲ್ಪಟ್ಟನು. ಸಃ - ಆ ಶಲ್ಯನು, ಧರ್ಮನಂದನಂ ಧರ್ಮರಾಜನನ್ನು ಕುರಿತು, ತಥೇತಿ – ಹಾಗೆಯೇ ಆಗಲೆಂದು, ಉಕ್ತ್ವಾ – ಹೇಳಿ, ಕೌರವಾನ್ಪ್ರತಿ — ಕೌರವರನ್ನುಕುರಿತು, ಯಯೌ – ಹೋದನು. ॥೩೬॥೩೭॥

ಭಾ. ಅ. ೨೩ – ೩೭. ಶ್ರೀ ಕೃಷ್ಣನು ಅರ್ಜುನನ ಜೊತೆಗೆ ಹೋದನು. ದುರ್ಯೋಧನನು ಬಲರಾಮದೇವರ ಹತ್ತಿರ ಹೋಗಿ ಸಹಾಯವನ್ನು ಕೇಳಿದ್ದಾನೆ. ಆದರೆ ಶ್ರೀ ಬಲರಾಮದೇವರು ದುರ್ಯೋಧನನಲ್ಲಿ ಸ್ನೇಹವಿದ್ದರೂ

ಶ್ರೀ ಕೃಷ್ಣನ ಭಯದಿಂದ 'ಸಹಾಯ ಮಾಡಲಾರೆನು' ಎಂದು ಹೇಳಿದನು. ಉಪಪ್ಲಾವ್ಯದಲ್ಲಿ ವಿಚಾರ ನಡದಿರುವ ಸಭೆಯಲ್ಲಿ ಶ್ರೀ ಬಲರಾಮರು ದುರ್ಯೋಧನನ ಪಕ್ಷಪಾತದಿಂದ ಮಾತನ್ನಾಡಿದಾಗ, ಸಾತ್ಯಕಿಯು ಶ್ರೀಕೃಷ್ಣನ ಎದುರಿನಲ್ಲಿಯೇ ಅವರನ್ನು ನಿಂದಿಸಿದ್ದನು. ಹೀಗಾಗಿ ಆ ದುರ್ಯೋಧನನಿಗೆ ಸಹಾಯ ಮಾಡಲು, ಅವನ ಜೊತೆಗೆ ಹೋಗಲು ಅಂಜಿಕೆಯಿಂದ ಒಪ್ಪಲಿಲ್ಲ. ದುರ್ಯೋಧನನು ಕೃತವರ್ಮಾದಿ ಹತ್ತುಲಕ್ಷ ಸೈನಿಕರಿಂದ ಸಮೇತನಾಗಿ ಹಸ್ತಿನಾವತಿಗೆ ಬಂದನು. ಬೇರೆ ಬೇರೆ ರಾಜರು ಅವರ ಸೈನಿಕರು ಇವರಿಂದ ಸಹಿತವಾಗಿ ಹನ್ನೊಂದು ಅಕ್ಷೌಹಿಣೀ ಸೈನ್ಯ ದುರ್ಯೋಧನನಿಗಿತ್ತು. ವಿರಾಟರಾಜ, ದ್ರುಪದರಾಜ, ಕೈಕಯರಾಜ, ಧೃಷ್ಟಕೇತು, ಸಹದೇವ (ಜರಾಸಂಧ ಪುತ್ರ) ಕಾಶೀರಾಜ ಮೊದಲಾದವರಿಂದ ಕೂಡಿದ ಏಳು ಅಕ್ಷೌಹಿಣೀ ಸೈನ್ಯ ಪಾಂಡವರಿಗಿತ್ತು. ದೇವತಾಪಕ್ಷಪಾತಿಗಳಾದ ಪುರುಜಿತ್, ಕುಂತಿಭೋಜ, ಜೇಕಿತಾನ ಸಾತ್ಯಕಿ ಎಂಬಯಾದವರು, ಪಾಂಡ್ಯದೇಶದ ವೀರಸೇನನು ಪಾಂಡವರ ಕಡೆಗೆ ಬಂದಿದ್ದಾರೆ. ಅವಂತೀ ದೇಶದವರಾದ ವಿಂದ-ಅನುವಿಂದರು, ಜಯತ್ಸೇನನು, ಪಾಂಡವ ಪಕ್ಷಕ್ಕೆ ಬಂದ ಐದು ಕೈಕಯರನ್ನು ಬಿಟ್ಟು ಉಳಿದ ಕೈಕಯರು, ಶ್ರುತಾಯು, ಅಚ್ಯುತಾಯು ಬೃಹದ್ಬಲ, ಸುದಕ್ಷಿಣ, ಸಿಂಧುದೇಶದ ಜಯದ್ರಥ, ಅಲಂಬುಸ ರಾಕ್ಷಸನು, ಅಲಾಯುಧ ಅಲಂಬಲ ಎಂಬ ದೈತ್ಯರು ಇವರೆಲ್ಲರು ದುರ್ಯೋಧನನ ಪಕ್ಷಕ್ಕೆ ಹೋದರು. ನರಕಾಸುರನ ಮಗನಾದ ಭಗದತ್ತನು ಭಗವದ್ಭಕ್ತನಾದರೂ ಕೂಡ ದುರ್ಯೋಧನನು ಅವನ ಮನೆಗೆ ಹೋಗಿ ಕರೆದದ್ದರಿಂದ ಅವನ ಪಕ್ಷಕ್ಕೆ ಹೋದನು. ಪ್ರುತ್ರಪೌತ್ರಸಹಿತನಾದ ಬಾಹ್ಲೀಕನು ಭೀಷ್ಮ, ದ್ರೋಣ, ಕೃಪ ಇವರೆಲ್ಲರು ಧೃತರಾಷ್ಟ್ರನ ಸಂತೋಷಕ್ಕಾಗಿ ದುರ್ಯೋಧನನ ಪಕ್ಷಕ್ಕೆ ಹೋದರು. ಶಲ್ಯನು ಪಾಂಡವರ ಕಡೆಗೆ ಹೋದದ್ದನ್ನು ತಿಳಿದ ದುರ್ಯೋಧನನು ದಾರಿಯಲ್ಲಿ ಅವನ ವಿಶ್ರಾಂತಿಗಾಗಿ ಸುಖಸಾಮಗ್ರಿಗಳಿಂದ ಸಹಿತವಾದ ವಿಶ್ರಾಮ ಸ್ಥಳಗಳ ಏರ್ಪಾಡು ಮಾಡಿದನು. ಅಲ್ಲೆಲ್ಲ ಉಪಚಾರಗಳಿಂದ, ಸಾಮಗ್ರಿಗಳಿಂದ ಸಂತಸಗೊಂಡ ಅವನು ಇವೆಲ್ಲ ಧರ್ಮರಾಜನಿಂದ ವ್ಯವಸ್ಥಿತವಾದವುಗಳು ಎಂದು ತಿಳಿದು, ಈ ರೀತಿ ನನಗೆ ಆದರಿಸಿದವನ ಅಭೀಷ್ಟವನ್ನು ಪೂರ್ಣ ಮಾಡುವೆನೆಂದನು. ಅವನ ಜೊತೆಗೇ ಅಡಗಿಕೊಂಡು ಇರುವ ದುರ್ಯೋಧನನು ಈ ಎಲ್ಲ ವ್ಯವಸ್ಥೆಗಳನ್ನು ನಾನು ಮಾಡಿದ್ದು, ನನಗೆ ಸಹಾಯ ಮಾಡು, ನಿನ್ನ ವಾಕ್ಯವನ್ನು ಸತ್ಯವನ್ನಾಗಿ ಮಾಡು ಎಂದು ಅಂದನು. ಆಗ ಶಲ್ಯನು ತನ್ನ ಮಾತನ್ನು ಸತ್ಯವನ್ನಾಗಿ ಮಾಡಿದ ಕೀರ್ತಿಕಾಮನೆಯಿಂದ ಸಮ್ಮತಿಸಿದನು. ನಂತರ ಪಾಂಡವರ ಬಳಿಗೆ ಹೋಗಿ ಅವರಿಂದ ಅನುಮತಿ ಪಡೆದನು. ಧರ್ಮರಾಜನು ಅರ್ಜುನನಿಗೆ ಜಯ ಪ್ರಾಪ್ತಿಗಾಗಿ ಕರ್ಣನ ಮಾನಸಿಕ ಸ್ಥೈರ್ಯಬಲಗಳನ್ನು ಅವನ ಧಿಕ್ಕಾರ ನಿಂದೆಗಳಿಂದ ಕುಗ್ಗಿಸಲು ಪ್ರಾರ್ಥಿಸಿದನು. ಆಗ ಶಲ್ಯನು ಒಪ್ಪಿಕೊಂಡು ದುರ್ಯೋಧನನ ಪಕ್ಷಕ್ಕೆ ಹೋದನು.

ಸಂಜಯಂ ಪ್ರೇಷಯಾಮಾಸ ಧೃತರಾಷ್ಟ್ರೋಽಥ ಶಾಂತಯೇ ॥
ಪಾಂಡವಾನ್ಪತ್ಯಧರ್ಮಂಚ ಯುದ್ಧಂಸಪ್ರತ್ಯಪಾದಯತ್ ॥೩೮॥

ಅಥ — ಅನಂತರ, ಧೃತರಾಷ್ಟ್ರಃ — ಧೃತರಾಷ್ಟ್ರನು, ಶಾಂತಯೇ — ವಿರೋಧಪರಿಹಾರಕ್ಕಾಗಿ, ಸಂಜಯಂ — ಸಂಜಯನನ್ನು, ಪ್ರೇಷಯಾಮಾಸ—ಪಾಂಡವರ ಸಮೀಪಕ್ಕೆ ಕಳುಹಿಸಿದನು, ಸಃ-ಸಂಜಯನು, ಯುದ್ಧಂ— ಯುದ್ಧವನ್ನು, ಅಧರ್ಮಂ ಪಾಪಹೇತುವನ್ನಾಗಿ, ಪ್ರತ್ಯಪಾದಯತ್ —ಹೇಳಿದನು,

ಚ—ಶಬ್ದದಿಂದ ಯುದ್ಧವನ್ನು ಮಾಡಬಾರದಾದರೆ, ನಮ್ಮ ಅಂಶವನ್ನು ಕೊಡಬೇಡ್ದರೆ, ಹೇಗೆ ಜೀವಿಸಬೇಕು ಎಂದರೆ ದೈವದತ್ತವಾದ ಹಣದಿಂದ ಜೀವಿಸಬೇಕು ಎಂದೂ, ಪ್ರತ್ಯಪಾದಯತ್ — ಹೇಳಿದನು. ॥೩೮॥

ಹಠವಾದೇಽವದದ್ಭೀಮೋಯಂ ಧರ್ಮಂ ದ್ರೌಪದೀ ತಥಾ ॥
ತಮೇವೋಕ್ತ್ವಾಧರ್ಮಜಸ್ತುಚಕಾರಚ ನಿರುತ್ತರಂ ॥೩೯॥
ಕೃಷ್ಣೋಽಪಿತಸ್ಯಧರ್ಮಸ್ಯ ಪ್ರಾಮಾಣ್ಯಂ ಪ್ರತ್ಯಪಾದಯತ್ ॥೪೦॥

ಭೀಮಃ – ಭೀಮನು ತಥಾ—ಹಾಗೂ, ದ್ರೌಪದೀಚ — ದ್ರೌಪದಿಯು ಕೂಡ, ಹಠವಾದೇ — ಹಠವಾದದಲ್ಲಿ, ಯಂ ಧರ್ಮಂ — ಯಾವಧರ್ಮವನ್ನು, ಅವದತ್ — ಹೇಳಿರುವರೋ. ತಮೇವ — ಅವರು ಹೇಳಿರುವ ಧರ್ಮವನ್ನೇ

ಧರ್ಮಜಸ್ತು – ಧರ್ಮರಾಜನಾದರೂ ಉಕ್ತ್ವಾ – ಹೇಳಿ, ನಿರುತ್ತರಂ — ಆ ಸಂಜಯನನ್ನು ಉತ್ತರವಿಲ್ಲದವನನ್ನಾಗಿ, ಚಕಾರ – ಮಾಡಿದನು, ಕೃಷ್ಣೋಽಪಿ – ಶ್ರೀಕೃಷ್ಣನೂ ಕೂಡ, ತಸ್ಯ ಧರ್ಮಸ್ಯ – ಆ ಯುಧಿಷ್ಠಿರನಿಂದ ಹೇಳಲ್ಪಟ್ಟ ಧರ್ಮಕ್ಕೆ, ಪ್ರಾಮಾಣ್ಯಂ – ಪ್ರಾಮಾಣಿಕತ್ವವನ್ನು, ಪ್ರತ್ಯಪಾದಯತ್ – ಪ್ರತಿಪಾದಿಸಿದನು. ॥೫೯॥೬೦॥

ತತೋನಿರುತ್ತರಃ ಕೃಷ್ಣಂ ಪಾಂಡವಾಂಶ್ಚ ಪ್ರಣಮ್ಯಸಃ ॥
ಧೃತರಾಷ್ಟ್ರಂಯಯೌ ತಂಚ ವಿನಿಂದ್ಯಪ್ರಯಯೌ ಗೃಹಂ ॥೪೧॥

ತತಃ – ಅನಂತರ, ನಿರುತ್ತರಃ–ಉತ್ತರವಿಲ್ಲದ, ಸಃ —ಆ ಸಂಜಯನು, ಕೃಷ್ಣಂ – ಕೃಷ್ಣನನ್ನು, ಪಾಂಡವಾಂಶ್ಚ–ಪಾಂಡವರನ್ನೂ ಕೂಡ, ಪ್ರಣಮ್ಯ – ನಮಸ್ಕರಿಸಿ, ಧೃತರಾಷ್ಟ್ರಂ — ಧೃತರಾಷ್ಟ್ರನನ್ನು ಕುರಿತು, ಯಯೌ – ಹೋದನು; ತಂ — ಆ ಧೃತರಾಷ್ಟ್ರನನ್ನು, ವಿನಿಂದ್ಯ — ಚೆನ್ನಾಗಿ ನಿಂದಿಸಿ, ಗೃಹಂ – ತನ್ನ, ಮನೆಯನ್ನು ಕುರಿತು, ಪ್ರಯಯೌ – ಹೋದನು. ॥೪೧॥

ನಿಂದಿತಃ ಸಂಜಯೇನಾಸಾವಾಹೂಯ ವಿದುರಂ ನಿಶಿ ॥
ಪಪ್ರಚ್ಛ ಸೋವದದ್ಧರ್ಮಂ ಪಾರ್ಥಾನಾಂ ರಾಜ್ಯದಾಪನಂ ॥೪೨॥

ಸಂಜಯೇನ—ಸಂಜಯನಿಂದ, ನಿಂದಿತಃ - ನಿಂದಿಸಿಕೊಳ್ಳಲ್ಪಟ್ಟ, ಅಸೌ – ಈ ಧೃತರಾಷ್ಟ್ರನು, ನಿಶಿ–ರಾತ್ರಿಯಲ್ಲಿ, ವಿದುರಂ – ವಿದುರನನ್ನು, ಆಹೂಯ – ಕರೆದು, ಧರ್ಮಂ—ಧರ್ಮವನ್ನು ಪಪ್ರಚ್ಛ – ಕೇಳಿದನು. ಸಃ – ಆ ವಿದುರನು, ಪಾರ್ಥಾನಾಂ – ಪಾಂಡವರಿಗೆ, ರಾಜ್ಯದಾಪನಂ – ರಾಜ್ಯ ಕೊಡಿಸುವಿಕೆಯನ್ನು, ಧರ್ಮಂ— ಧರ್ಮವನ್ನಾಗಿ, ಅವದತ್–ಹೇಳಿದನು, ॥೪೨॥

ಐಹಿಕಸ್ಯಸುಖಸ್ಯಾಪಿ ಕಾರಣಂ ತದನಿಂದಿತಂ ॥
ಅನ್ಯಥಾ ಸರ್ವಪುತ್ರಾಣಾಂ ನಾಶಂ ಧರ್ಮಾತಿಲಂಘನಂ ॥೪೩॥

ತತ್ – ಆರಾಜ್ಯದಾಪನೆಯು, ಅನಿಂದಿತಂ – ನಿಂದಿತವಲ್ಲದ ಧರ್ಮವೇ, ಐಹಿಕಸ್ಯ – ಈ ಲೋಕದಲ್ಲಿ ಆಗತಕ ಪುತ್ರ, ಧನಾದಿ ಪ್ರಾಪ್ತಿ ರೂಪವಾದ ,ಸುಖಸ್ಯ – ಸಂತೋಷಕ್ಕೆ, ಅಪಿ—ಪರಲೋಕ ಸುಖಕ್ಕೂ ಕೂಡ, ಕಾರಣಂ-ಕಾರಣವು. ಅನ್ಯಥಾ – ರಾಜ್ಯವನ್ನು ಕೊಡಿಸದಿದ್ದರೆ, ಸರ್ವಪುತ್ರಾಣಾಂ – ಅವನ ಎಲ್ಲಾ ಮಕ್ಕಳ, ನಾಶಂ – ನಾಶವನ್ನು, ಧರ್ಮಾತಿಲಂಘನಂ – ಧರ್ಮದ ಅತ್ರಿಕಮಣವನ್ನೂ ಕೂಡ, ಅವದತ್ – ಹೇಳಿದನು ॥೪೩॥

ತತ್ರಭಾವಮಕೃತ್ವಾಸ ಜ್ಞಾನದಿಚ್ಛನ್ನಘಕ್ಷಯಂ ॥
ವಿಷ್ಣೋಃ ಸ್ವರೂಪಂ ಪಪ್ರಚ್ಛಸೋಽಸ್ಮರಚ್ಚ ಸನಾತನಂ ॥೪೪॥

ತತ್ರ – ಆ ರಾಜ್ಯಕೊಡಿಸುವ ವಿಷಯದಲ್ಲಿ, ಭಾವಂ – ಅಭಿಪ್ರಾಯವನ್ನು, ಅಕೃತ್ವಾ – ಮಾಡದೇ, ಅಘಕ್ಷಯಂ– ಪಾಂಡವರ ದ್ವೇಷದಿಂದುಂಟಾದ ಪಾಪದ ನಾಶವನ್ನು, ಜ್ಞಾನಾತ್ – ಜ್ಞಾನದಿಂದ, ಇಚ್ಛನ್‌ಸನ್ – ಇಚ್ಛಿಸುವವನಾಗಿ, ವಿಷ್ಣೋಃ – ಪರಮಾತ್ಮನ, ಸ್ವರೂಪಂ —ಸ್ವರೂಪವನ್ನು, ಪಪ್ರಚ್ಛ – ಕೇಳಿದನು. ಸಃ— ಆ ವಿದುರನು, ಸನಾತನಂ – ಸನಾತನರೆಂಬ ಋಷಿಗಳನ್ನು ಅಸ್ಮರತ್ – (ಬೋಧಿಸುವುದಕ್ಕಾಗಿ) ಸ್ಮರಿಸಿದನು. ॥೪೪॥

ಭಾ. ಅ. ೩೮ – ೪೪ ಧೃತರಾಷ್ಟ್ರನು ಈವಿರೋಧಪರಿಹಾರಕ್ಕಾಗಿ ಸಂಜಯನನ್ನು ಪಾಂಡವರ ಸಮೀಪಕ್ಕೆ ಕಳಿಸಿ ಯುದ್ಧಮಾಡುವದು, ಸರಿಯಲ್ಲ, ದೇವರು ಕೊಟ್ಟದ್ದರಿಂದಲೇ ತೃಪ್ತರಾಗಿರಬೇಕೆಂದು, ರಾಜ್ಯಾಶಾಬೇಡ ಎಂದು (ಕುಬುದ್ಧಿಯಿಂದ) ಹೇಳಿಕಳಿಸಿದನು. ಸಂಜಯನು ಬಂದು ಅದೇ ರೀತಿ ಹೇಳಿದಾಗ, ಧರ್ಮರಾಜನು ವನವಾಸದಲ್ಲಿರುವಾಗ ಭೀಮಸೇನ

ದೇವರಿಂದ ಹಾಗೂ ದ್ರೌಪದಿದೇವಿಯರಿಂದ ಹೇಳಲ್ಪಟ್ಟ ಯುದ್ಧ ಕರ್ತವ್ಯತಾ ಧರ್ಮವನ್ನು ಹೇಳಿದನು. ಸಂಜಯನನ್ನು ನಿರುತ್ತರನನ್ನಾಗಿ ಮಾಡಿದ್ದಾನೆ. ಶ್ರೀ ಕೃಷ್ಣನನೂ ಧರ್ಮರಾಜನು ಹೇಳಿದ್ದು ಸರಿ ಎಂದೂ ಹೇಳಿದನು. ಆಗ ಸಂಜಯನು ಶ್ರೀ ಕೃಷ್ಣ ಪಾಂಡವರನ್ನು ನಮಸ್ಕರಿಸಿ ಧೃತರಾಷ್ಟ್ರನ ಹತ್ತಿರ ಹೋಗಿ ಎಲ್ಲ ಸುದ್ದಿಯನ್ನು ಹೇಳಿ, ಅವನನ್ನು ಅವನ ತಪ್ಪಿಗಾಗಿ ನಿಂದಿಸಿ ತನ್ನ ಮನೆಗೆ ಹೋದನು. ಹೀಗೆ ಸಂಜಯನಿಂದ ನಿಂದಿಸಿಕೊಂಡ ಧೃತರಾಷ್ಟ್ರನು ರಾತ್ರಿಯಲ್ಲಿ ವಿದುರರನ್ನು ಕರಿಸಿ ಅವರ ಅಭಿಪ್ರಾಯವನ್ನು ಕೇಳಿದಾಗ, ಅವರು ಪಾಂಡವರಿಗೆ ರಾಜ್ಯವನ್ನು ಕೊಡುವದು ಯೋಗ್ಯವೆಂದು, ಅದರಿಂದ ಐಹಿಕ-ಪಾರತ್ರಿಕ ಸುಖಗಳಾಗುವವೆಂದೂ, ಇಲ್ಲದಿದ್ದರೆ ಅವನ ಸರ್ವಪುತ್ರನಾಶ, ಧರ್ಮಹಾನಿಗಳಾಗುವವೆಂದೂ ಹೇಳಿದರು. ಅಷ್ಟು ಹೇಳಿದರೂ ಕೂಡ, ಧೃತರಾಷ್ಟ್ರನು ರಾಜ್ಯವನ್ನು ಕೊಡುವ ಮನಸ್ಸನ್ನು ಮಾಡದೇ, ಪಾಂಡವರಿಗೆ ಮಾಡಿದ ಅನ್ಯಾಯದಿಂದ ಬರುವ ಪಾಪವನ್ನು ಭಗವಂತನ ಜ್ಞಾನದಿಂದ ಕಳೆದುಕೊಳ್ಳಲು, ಭಗವಂತನ ಸ್ವರೂಪ ಮಹಿಮೆಯನ್ನು ಹೇಳಲು ಕೇಳಿದನು. ಶ್ರೀ ವಿದುರರು ಆಗ ಸನಾತನ ಮಹರ್ಷಿಗಳನ್ನು ನೆನಿಸಿದರು.

ಸ ಆಗತ್ಯಾವದತ್ತತ್ತ್ವಂ ವಿಷ್ಣೋರ್ಮಾಯಾವಿನಃ ಶುಭಾ ॥
ನಗತಿಶ್ಚೇತ್ಯಥಪ್ರಾತಃ ಸಂಜಯಃ ಪಾಂಡವೋದಿತಂ ॥
ಅವದದ್ಧೃತರಾಷ್ಟ್ರಾಯ ಸಭಾಯಾಂ ಕುರು ಸನ್ನಿಧೌ ॥೪೫॥

ಸಃ – ಆ ಸನಾತನಮುನಿಗಳು, ಆಗತ್ಯ-ಬಂದು, ವಿಷ್ಣೋಃ – ಪರಮಾತ್ಮನ, ತತ್ತ್ವಂ— ಸ್ವರೂಪವನ್ನೂ, ಮಾಯಾವಿನಃ – ಕಪಟಉಳ್ಳವನಿಗೆ, ಶುಭಾಗತಿಃ — ಸಮೂಚೀನವಾದ ಗತಿಯೂ ಕೂಡ, ನ – ಆಗುವುದಿಲ್ಲ, ಇತಿ – ಎಂದು, ಅವದತ್– ಹೇಳಿದರು. ಅಥ – ಅನಂತರ, ಪ್ರಾತಃ – ಬೆಳಿಗ್ಗೆ, ಸಂಜಯಃ—ಸಂಜಯನು, ಪಾಂಡವೋದಿತಂ — ಧರ್ಮರಾಜನಿಂದ ಹೇಳಲ್ಪಟ್ಟದ್ದನ್ನು, ಧೃತರಾಷ್ಟ್ರಾಯ – ಧೃತರಾಷ್ಟ್ರನಿಗೋಸ್ಕರ, ಸಭಾಯಾಂ — ಸಭೆಯಲ್ಲಿ, ಕುರುಸನ್ನಿಧೌ – ಕುರುಸನ್ನಿಧಾನದಲ್ಲಿ, ಅವದತ್ – ಹೇಳಿದನು, ॥೪೫॥

ತಚ್ಛ್ರುತ್ವಾ ಸತುಭೀತೋಽಪಿ ಪುತ್ರಸ್ನೇಹಾನುಗೋನೃಪಃ ॥
ರಾಜ್ಯಂನಾದಾತ್ಪಾಂಡವಾನಾಂ ತತೋಧರ್ಮಸುತೋನೃಪಃ ॥ ॥೪೬॥

ಯದುಕ್ತವಾನ್ಸಂಜಯಾಯ ಯದಿದಿತ್ಸತಿ ನಃ ಪಿತಾ ॥
ರಾಜ್ಯಂ ತದಾ ತ್ವಮಾಗಚ್ಛ ವಿದುರೋವಾ ನಚೇನ್ನಚ ॥
ತಾವಥಾನಾಗತೌ ಜ್ಞಾತ್ವಾ ಮುಂತ್ರಯಾಮಾಸ ಶೌರಿಣಾ ॥೪೭॥

ತತ್ — ಆ ಧರ್ಮರಾಜನ ಮಾತನ್ನು, ಶ್ರುತ್ವಾ – ಕೇಳಿ, ಸ ನೃಪಃ–ಆಧೃತರಾಷ್ಟ್ರನು,ಭೀತೋಽಪಿ – ಭಯಂಗ್ರಸ್ತನಾದರೂಕೂಡ, ಪುತ್ರಸ್ನೇಹಾನುಗಃಸನ್ – ಮಕ್ಕಳಮೋಹಕ್ಕೆ ಅಧೀನನಾಗಿ, ಪಾಂಡವಾನಾಂ — ಪಾಂಡವರಿಗೆ, ರಾಜ್ಯಂ — ರಾಜ್ಯವನ್ನು, ನಾದಾತ್ – ಕೊಡಲಿಲ್ಲ. ತತಃ – ಅನಂತರ, ನೃಪಃ—ರಾಜನಾದ ಯುಧಿಷ್ಠಿರನು, ನಃ— ನಮಗೆ, ಪಿತಾ – ತಂದೆಯಾದ ಧೃತರಾಷ್ಟ್ರನು, ರಾಜ್ಯಂ ದಿತ್ಸತಿಯದಿ — ರಾಜ್ಯವನ್ನು ಕೊಡಲು ಇಚ್ಛಿಸುವದಾದರೆ, ತದಾ – ಆಗ, ತ್ವಂ – ನೀನು, ಆಗಚ್ಛ — ಬಾ, ವಿದುರೋವಾ — ವಿದುರನಾಗಲೀ, ಆಗಚ್ಛತು – ಬರಲಿ, ನಚೇತ್ — ರಾಜ್ಯ ಕೊಡುವುದಿಲ್ಲವಾದರೆ, ನಚ – ನೀನೂ ಬರಬೇಡ, ವಿದುರನೂ ಬರುವುದು ಬೇಡ, ಇತಿ — ಈ ರೀತಿಯಾಗಿ, ಸಂಜಯಾಯ — ಸಂಜಯನಿಗೋಸ್ಕರ ಯತ್ – ಯಾವಕಾರಣದಿಂದ, ಉಕ್ತವಾನ್—ಹೇಳಿರುವನೋ, ತತ್–ಆ ಕಾರಣದಿಂದ, ಅನಾಗತೌ– ಬಾರದಿರುವ ತೌ – ಆ ಸಂಜಯ ವಿದುರರನ್ನು, ಜ್ಞಾತ್ವಾ—ತಿಳಿದು, ಅಥ – ಅನಂತರ, ಶೌರಿಣಾ— ಶ್ರೀಕೃಷ್ಣನಿಂದ, ಸಹ–ಕೂಡಿಕೊಂಡು, ಮುಂತ್ರಯಾಮಾಸ – ಆಲೋಚಿಸಿದನು. ॥೪೬॥೪೭॥

ಸೋಽಪ್ಯಹಾಹಂ ಗಮಿಷ್ಯಾಮಿ ಸಭಾಯಾಮೃಷಿಸನ್ನಿಧೌ ॥
ವಕ್ಷ್ಯೇಪಥ್ಯಾನಿಯುಕ್ತಾನಿಯದಿನಾಸೌ ಗೃಹಿಷ್ಯತಿ ॥೪೮॥
ವಧ್ಯಃ ಸರ್ವಸ್ಯ ಲೋಕಸ್ಯ ಸಭಮೇತ್ಸರ್ವಧರ್ಮಹಾ ॥೪೯॥

ಸೋಽಪಿ — ಆ ಕೃಷ್ಣನಾದರೂ, ಅಹಂ – ನಾನು, ಗಮಿಷ್ಯಾಮಿ — ಹಸ್ತಿನಾಪತಿಗೆ ಹೋಗುವೆನು, ಸಭಾಯಾಂ– ಸಭೆಯಲ್ಲಿ, ಋಷಿಸನ್ನಿಧೌ — ಜ್ಞಾನಿಗಳ ಸನ್ನಿಧಾನದಲ್ಲಿ ಪಥ್ಯಾನಿ – ಹಿತವನ್ನುಂಟುಮಾಡುವ, ಯುಕ್ತಾನಿ — ಶಾಸ್ತ್ರಸಮ್ಮತ ಗಳಾದ ಮಾತುಗಳನ್ನು, ವಕ್ಷ್ಯೇ – ಹೇಳುವೆನು. ಅಸೌ – ಈ ದುರ್ಯೋಧನನು, ನಗೃಹಿಷ್ಯತಿ ಯದಿ – ನನ್ನ ಮಾತನ್ನು ಸ್ವೀಕರಿಸುವದಿಲ್ಲವಾದರೆ, ಸಃ — ಆ ದುರ್ಯೋಧನನು, ಸರ್ವಸ್ಯ — ಎಲ್ಲಾ, ಲೋಕಸ್ಯ – ಜನರಿಗೆ, ವಧ್ಯಃ – ಕೊಲ್ಲಲು ಯೋಗ್ಯನು, ಭವೇತ್ — ಆಗುವನು. ಸರ್ವಧರ್ಮಹಾ — ಶ್ರುತಿಸ್ಮೃತಿಗಳಲ್ಲಿ ಹೇಳಲ್ಪಟ್ಟ ಅರ್ಥವು ವಿಷ್ಣುವಿನ ಆಜ್ಞೆ– ಯಾದ್ದರಿಂದ ಶ್ರೀಕೃಷ್ಣನ ಆಜ್ಞೆಯನ್ನು ನಡಸದಿರುವದರಿಂದ ಸರ್ವಧರ್ಮಗಳನ್ನು ಪರಿತ್ಯಾಗ ಮಾಡಿದವನು, ಭವೇತ್. ಆಗುವನು, ಇತಿ — ಎಂದು, ಆಹ — ಹೇಳಿದನು. ॥೪೮॥೪೯॥

ಇತ್ಯುಕ್ತೋ ವೈರಮಾತ್ಮೋತ್ಥಂ ಲೋಕಮಧ್ಯೇ ಪ್ರಹಾಪಯನ್ ॥
ಲೋಕಸಂಗ್ರಹಣಾರ್ಥಾಯ ಭೀಮಸೇನೋಽಬ್ರವೀದ್ವಚಃ ॥೫೦॥

ಇತಿ - ಈ ರೀತಿಯಾಗಿ, ಉಕ್ತಃ — ಹೇಳಿಸಿಕೊಳ್ಳಲ್ಪಟ್ಟ, ಭೀಮಸೇನಃ – ಭೀಮಸೇನನು, ಆತ್ಮೋತ್ಥಂ – ತನ್ನ ನಿಮಿತ್ತದಿಂದುಂಟಾದ, ವೈರಂ – ವಿರೋಧವನ್ನು, ಲೋಕಮಧ್ಯೇ – ಜನರ ಮಧ್ಯದಲ್ಲಿ, ಪ್ರಹಾಪಯನ್ ಸನ್ - ಬಿಡಿಸುವವ ನಾಗಿ, ಲೋಕಸಂಗ್ರಹಣಾರ್ಥಾಯ – ಜನರನ್ನು ಸಂಗ್ರಹಿಸುವುದಕ್ಕಾಗಿ, ವಚಃ – ಮಾತನ್ನು, ಅಬ್ರವೀತ್ - ಹೇಳಿದನು ॥೫೦॥

ನಾಸ್ಮನ್ನಿಮಿತ್ತಂ ನಾಶಃ ಸ್ಯಾತ್ಕುಲಸ್ಯಾಪಿ ವಯಂ ಕುಲಂ ॥
ರಕ್ಷಿತುಂ ಧಾರ್ತರಾಷ್ಟ್ರಸ್ಯ ಭವೇಮಾಧಶ್ಚರಾ ಇತಿ ॥೫೧॥

ಅಸ್ಮನ್ನಿಮಿತ್ತಂ - ನಮ್ಮ ನಿಮಿತ್ತವಾಗಿ, ಕುಲಸ್ಯ – ವಂಶದ, ನಾಶಃ — ನಾಶವು, ನಸ್ಯಾತ್ — ಆಗಬಾರದು ವಯಂ — ನಾವು, ಕುಲಂ ವಂಶವನ್ನು, ರಕ್ಷಿತುಂ – ರಕ್ಷಿಸುವದಕ್ಕಾಗಿ, ಧಾರ್ತರಾಷ್ಟ್ರಸ್ಯ — ದುರ್ಯೋಧನನ, ಅಧಶ್ಚರಾಃ — ಕೆಳಗಿರುವವರು, ಭವೇಮ — ಆಗುವೆವು, ಇತಿ – ಎಂದು, ಅಬ್ರವೀತ್ – ಹೇಳಿದನು, ಅಚ್ಛಿನ್ನ ಧರ್ಮವುಳ್ಳ ಭೀಮನು ಲೋಕ ಸಂಗ್ರಹಕ್ಕಾಗಿಯೂ ಸುಳ್ಳನ್ನು ಸರ್ವಥಾ ಹೇಳಲಾರನು. ಆದ್ದರಿಂದ ಯುದ್ಧದಲ್ಲಿ ಮರಣಾನಂತರ ಸ್ವಲ್ಪ ಸಮಯದ ವರೆಗೆ ವೀರಸ್ವರ್ಗದಲ್ಲಿರತಕ್ಕ ದುರ್ಯೋಧನನ, ಅಧಃ – ಕೆಳಗಿನ ಭೂಲೋಕದಲ್ಲಿ, ಚರಾಃ – ರಾಜ್ಯಪರಿಪಾಲನೆಗೋಸ್ಕರ ಅತ್ತಿತ್ತ ಸಂಚಾರವುಳ್ಳವರಾಗುವೆವು ಎಂದು ಅಧಶ್ಚರಾಃ ಎಂಬ ಶಬ್ದದ ಒಳಗಿನ ಅರ್ಥವು. ॥೫೧॥

ಇಚ್ಛತಾಪ್ಯಖಿಲಾನ್ ಹಂತುಂ ಧಾರ್ತರಾಷ್ಟ್ರಾನ್ ದೃಢಾತ್ಮನಾ ॥
ಭೀಮೇನೋಕ್ತೋವಾಸುದೇವೋ ಲೋಕಸಂಗ್ರಹಣೇಚ್ಛಯಾ ॥೫೨॥
ವಧಂ ತೇಷಾಂ ಧರ್ಮವೇವ ಲೋಕೇ ಖ್ಯಾಪಯಿತುಂ ಹರಿಃ ॥
ಆಕ್ಷಿಪನ್ನಿವ ಭೀಮಂತಂ ಯುದ್ಧಾಯ ಪ್ರೇರಯದ್ದೃಢಂ ॥೫೩॥

ದೃಢಾತ್ಮನಾ – ಅಚಲವಾದ ಅಂತಃಕರಣದಿಂದ, ಅಖಿಲಾನ್ — ಎಲ್ಲಾ, ಧಾರ್ತರಾಷ್ಟ್ರಾನ್ – ದುರ್ಯೋಧನಾದಿ ಗಳನ್ನು, ಹಂತುಂ—ಕೊಲ್ಲಲು, ಇಚ್ಛತಾ – ಇಚ್ಛಿಸಿಕೊಂಡಿರುವ, ಭೀಮೇನ— ಭೀಮನಿಂದ, ಲೋಕಸಂಗ್ರಹಣೇಚ್ಛಯಾ — ಜನರನ್ನು ಸಂಗ್ರಹಿಸಬೇಕೆಂಬ ಇಚ್ಛೆಯಿಂದ, ಉಕ್ತಃ —ಹೇಳಲ್ಪಟ್ಟ, ಹರಿಃ – ಶತ್ರುಗಳನ್ನು ಸಂಹರಿಸುವ, ವಾಸುದೇವಃ – ಶ್ರೀಕೃಷ್ಣನು, ತೇಷಾಂ-ಆದುರ್ಯೋಧನಾದಿಗಳ, ವಧಂ – ಸಂಹಾರವನ್ನು, ಧರ್ಮವೇವ – ಧರ್ಮವನ್ನಾಗಿಯೇ, ಲೋಕೇ – ಜಗತ್ತಿನಲ್ಲಿ. ಖ್ಯಾಪಯಿತುಂ — ಪ್ರಸಿದ್ಧಿಪಡಿಸುವುದಕ್ಕೋಸ್ಕರ, ತಂ ಭೀಮಂ — ಆ ಭೀಮಸೇನನನ್ನು ಆಕ್ಷಿಪನ್ನಿವ — — ಆಕ್ಷೇಪಿಸುವವನಂತೇ (ಗದರಿಸುವವಂತೆ), ದೃಢಂ— ದೃಢವಾಗಿದ್ದು,ಹೇಗೋ ಹಾಗೆ, ಯುದ್ಧಾಯ – ಯುದ್ಧಕ್ಕೋಸ್ಕರ, ಪ್ರೇರಯತ್ — ಪ್ರೇರಿಸಿದನು ॥೫೨॥ ॥೫೩॥

ಅಭಿಪ್ರಾಯಂ ಕೇಶವಸ್ಯ ಜಾನನ್ಭೀಮೋ ನಿಜಂಬಲಂ ॥
ರಾಜ್ಞಾಂ ಮಧ್ಯೇಽವದತ್ತಚ್ಚ ಕೃಷ್ಣೋಽಭ್ಯಧಿಕಮೇವಹಿ ॥೫೪॥
ಶಶಂಸ ಸತ್ಯೈಃ ಸದ್ವಾಕ್ಯೈರಾಜ್ಞಾಂ ಮಧ್ಯೇಪ್ರಕಾಶಯನ್ ॥
ವಧಂ ಕುರೂಣಾಂಸದ್ಧರ್ಮಂಗುಣಾನ್ಭೀಮಸ್ಯಚಾಮಿತಾನ್ ॥೫೫॥

ಕೇಶವಸ್ಯ — ಶ್ರೀಕೃಷ್ಣನ, ಅಭಿಪ್ರಾಯಂ – ನಾನು ನನ್ನ ಬಲವನ್ನು ಹೇಳಬೇಕೆಂಬ ಅಭಿಪ್ರಾಯವನ್ನು, ಜಾನನ್– ತಿಳಿದಿರುವ, ಭೀಮಃ – ಭೀಮನು, ನಿಜಂಬಲಂ – ತನ್ನದ್ದಾದ ಎಲ್ಲರನ್ನೂ ನಾಶ ಮಾಡುವ ವಿಷಯದಲ್ಲಿ ಸಾಮರ್ಥ್ಯವನ್ನು, ರಾಜ್ಞಾಂ – ರಾಜರ, ಮಧ್ಯೇ – ಮಧ್ಯದಲ್ಲಿ,ಅವದತ್ – ಹೇಳಿದನು. ಕೃಷ್ಣಃ – ಶ್ರೀಕೃಷ್ಣನು, ಸತ್ಯೈಃ—ಯಥಾರ್ಥಗಳಾದ, ಸದ್ವಾಕ್ಯೈಃ —ನಿರ್ದುಷ್ಟವಾಕ್ಯಗಳಿಂದ, ಕುರೂಣಾಂ – ಕುರುಗಳ, ವಧಂ — ನಾಶವನ್ನು, ಸದ್ಧರ್ಮಂ— ಸಜ್ಜನರ ಧರ್ಮವನ್ನಾಗಿಯೂ, ಪ್ರಕಾಶಯನ್ — ಪ್ರಕಾಶ ಪಡಿಸುವವನಾಗಿ, ಭೀಮಸ್ಯ — ಭೀಮನ, ಅಮಿತಾನ್ – ಅಸಂಖ್ಯಾತಗಳಾದ, ಗುಣಾನ್ — ಕ್ಷಮಾ, ಬಲ, ವೀರ್ಯಾದಿ ಗುಣಗಳನ್ನು, ರಾಜ್ಞಾಂ – ರಾಜರ ಮಧ್ಯೇ – ಮಧ್ಯದಲ್ಲಿ, ಪ್ರಕಾಶಯನ್ ಸನ್ – ಪ್ರಕಾಶಪಡಿಸುವವನಾಗಿ, ಅತ್ಯಧಿಕಂ – ಅತ್ಯಧಿಕವಾದದ್ದು ಹೇಗೋ ಹಾಗೆ, ಶಶಂಸೆ – ಭೀಮನ ಬಲವನ್ನು ಹೊಗಳಿದನು. ಹಿ — ಪ್ರಸಿದ್ಧ. ॥೫೪॥ ॥೫೫॥

ನಿತ್ಯಮೇಕಮನಸ್ಕೌತಾವಪಿ ಕೇಶವಮಾರುತೀ ॥
ಏವಂ ಲೋಕಸ್ಯ ಸಂವಾದಹೇತೋಃ ಸಂವಾದಮಕೃತಾಂ ॥೫೬॥

ಕೇಶವಮಾರುತೀ – ಶ್ರೀ ಕೃಷ್ಣಭೀಮಸೇನರಿಬ್ಬರೂ, ನಿತ್ಯಂ – ಯಾವಾಗಲೂ, ಏಕಮನಸ್ಕಾವಪಿ – ಒಂದೇ ವಿಧವಾದ ಮನಸುಳ್ಳವರಾದರೂ ಕೂಡ, ಏವಂ – ಹಿಂದೆಹೇಳಿದ ರೀತಿಯಿಂದ, ಲೋಕಸ್ಯ – ಜನರಿಗೆ, ಸಂವಾದಹೇತೋಃ – ಭೀಮನು ಸಮೀಚೀನನು ಎನ್ನುವ ಮಾತನ್ನು ಹೇಳುವುದಕ್ಕೋಸ್ಕರ, ಸಂವಾದಂ – ಆಕ್ಷೇಪ ಸಮಾಧಾನ ರೂಪವಾದ ವಿವಾದವನ್ನು ಅಕೃತಾಂ – ಮಾಡಿದರು. ॥೫೬॥

ತತಃ ಕೃಷ್ಣೋಽರ್ಜುನಂ ಚೈವ ಕೃಪಾಲುಂಸಂಧಿಕಾಮುಕಂ ॥
ಹೇತುಮದ್ಭಿಃ ಶುಭೈರ್ವಾಕ್ಯೈರನುನೀಯ ಜಗತ್ಪತಿಃ ॥
ಉಕ್ತೋಮಾನುಷಯಾ ಬುಧ್ಯಾ ನಕುಲೇನ ಸುನೀತಿವತ್ ॥೫೭॥

ತತಃ – ಅನಂತರ, ಜಗತ್ಪತಿಃ – ಲೋಕಕ್ಕೆ ಸ್ವಾಮಿಯಾದ ಕೃಷ್ಣನು, ಸಂಧಿಕಾಮುಕಂ – ಸಂಧಾನವನ್ನು ಇಚ್ಛಿಸುತಕ್ಕ, ಕೃಪಾಲುಂ — ದಯಾಶೀಲನಾದ, ಅರ್ಜುನಂ – ಅರ್ಜುನನ್ನು, ಹೇತುಮದ್ಭಿಃ – ಯುದ್ಧ ಮಾಡಲು ಕಾರಣವುಳ್ಳ, ಶುಭೈಃ—ವಾಕ್ಯೈಃ - ಯುದ್ಧವು ನಿರ್ದುಷ್ಟವಾದದ್ದೆಂದು ಹೇಳತಕ್ಕ ವಾಕ್ಯಗಳಿಂದ, ಅನುನೀಯ – ಯುದ್ಧಕ್ಕೆ ಅನುಕೂಲನನ್ನಾಗಿ ಮಾಡಿ, ನಕುಲೇನ – ನಕುಲನಿಂದ, ಸುನೀತಿವತ್-– ಒಳ್ಳೆ ನೀತಿಯನ್ನು ತಿಳಿದವನಂತೆ, ಮಾನುಷಯಾ ಬುದ್ಧ್ಯಾ– ಮನುಷ್ಯ ಸ್ವಭಾವದಿಂದ, ಉಕ್ತಃ—ಶಿಕ್ಷಿಸಲ್ಪಟ್ಟವನಾದನು. ಅಂದರೆ ಮನುಷ್ಯ ಸ್ವಭಾವದಿದ ಕೃಷ್ಣನು ಸರ್ವಜ್ಞನೆಂದು ತಿಳಿಯದೆ ಇದ್ದ ನಕುಲನಿಂದ ಹೀಗೆ ಮಾಡು ಎಂದು ಶಿಕ್ಷಿಸಲ್ಪಟ್ಟನು. ॥೫೭॥

ಶೌರ್ಯಪ್ರಕಾಶನಾಯೈವ ಯುದ್ಧಂಯೋಜಯತಾದ್ಭವಾನ್
ಇತ್ಯುಕ್ತಃ ಸಹದೇವೇನ ಯುಯುಧಾನೇನಚಾಚ್ಯುತಃ ॥೫೮॥

ಸಹದೇವೇನ – ಸಹದೇವನಿಂದ, ಶೌರ್ಯಪ್ರಕಾಶನಾಯೈವ—ತನ್ನ ಶೂರತ್ವವನ್ನು ಪ್ರಕಟಪಡಿಸುವದಕ್ಕಾಗಿಯೇ, ಭವಾನ್ – ನೀನು, ಯುದ್ಧಂ – ಯುದ್ಧವನ್ನು, ಯೋಜಯತಾತ್ — ಕೂಡಿಸುವವನಾಗು, ಇತಿ – ಎಂದು, ಅಚ್ಯುತಃ –

ಶ್ರೀ ಕೃಷ್ಣನು, ಉಕ್ತಃ – ಹೇಳಿಸಿಕೊಳ್ಳಲ್ಪಟ್ಟನು, ಯುಯುಧಾನೇನಚ – ಸಾತ್ಯಕಿಯಿಂದಲೂ ಕೂಡ, ಸಹದೇವನು ಹೇಳಿದಂತೆಯೇ ಹೇಳಿಸಿಕೊಳ್ಳಲ್ಪಟ್ಟನು. ॥೫೮॥

ದಸ್ಯೂನಾಂ ನಿಗ್ರಹೋಧರ್ಮಃ ಕ್ಷತ್ರಿಯಾಣಾಂಯತಃ ಪರಃ ॥
ಅತೋನ ಧಾರ್ತರಾಷ್ಟ್ರೈರ್ನಃ ಸಂಧಿಸ್ಯಾದಿತಿ ಪಾರ್ಷತೀ ॥೫೯॥
ಜಗಾದಕೃಷ್ಣಂ ಸೋಽಪ್ಯೇನಾಮೋಮಿತ್ಯುಕ್ತ್ವಾವವಿನಿರ್ಯಯೌ ॥೬೦॥

ಯತಃ–ಯಾವಕಾರಣದಿಂದ, ಕ್ಷತ್ರಿಯಾಣಾಂ – ಕ್ಷತ್ರಿಯರಿಗೆ, ದಸ್ಯೂನಾಂ–ದುಷ್ಟರ, ನಿಗ್ರಹಃ – ಸಂಹಾರವು, ಪರಃ ಧರ್ಮಃ – ಶ್ರೇಷ್ಠ ಧರ್ಮವೋ, ಅತಃ – ಆದ್ದರಿಂದ, ನಃ–ನಮಗೆ, ಧಾರ್ತರಾಷ್ಟ್ರೈಃ– ದುರ್ಯೋಧನಾದಿಗಳಿಂದ, ಸಂಧಿಃ – ಸಂಧಾನವು, ನ ಸ್ಯಾತ್ – ಆಗಬಾರದು, ಇತಿ – ಎಂದು, ಪಾರ್ಷತೀ – ದ್ರೌಪದಿಯು, ಕೃಷ್ಣಂ – ಕೃಷ್ಣನನ್ನು ಕುರಿತು, ಜಗಾದ – ಹೇಳಿದಳು, ಸೋಽಪಿ – ಆ ಕೃಷ್ಣನಾದರೂ, ಏನಾಂ – ಈ ದ್ರೌಪದಿಯನ್ನು ಕುರಿತು, ಓಮಿತಿ – ಹಾಗೆಯೇ ಆಗಲೆಂದು, ಉಕ್ತ್ವಾವ – ಹೇಳಿ, ವಿನಿರ್ಯಯೌ — ಹೊರಟುಹೋದನು. ॥೫೯॥ ॥೬೦॥

ಸಸಾತ್ಯಕಿಃ ಸ್ಯಂದನವರ್ಯಸಂಸ್ಥಿತಃ ಪೃಥಾತನೂಜೈರಖಿಲೈಶ್ಚ ಭೂಮಿಪೈಃ ॥
ಅನ್ವಾಗತೋ ದೂರತರಂ ಗಿರಾತಾನ್ಸಂಸ್ಥಾಪ್ಯವಿಪ್ರಪ್ರವರೈಃ ಕುರೂನ್ಯಯೌ ॥೬೧॥

ಸಸಾತ್ಯಕಿಃ— ಸಾತ್ಯಕಿಯಿಂದ ಕೂಡಿದ, ಸ್ಯಂದನವರ್ಯಸಂಸ್ಥಿತಃ – ಶ್ರೇಷ್ಠರಥದಲ್ಲಿ ಕುಳಿತಿರುವ ಶ್ರೀಕೃಷ್ಣನು, ಪೃಥಾತನೂಜೈಃ – ಕುಂತಿಯಮಕ್ಕಳಾದ ಪಾಂಡವರಿಂದಲೂ, ಅಖಿಲೈಃ – ಎಲ್ಲಾ, ಭೂಮಿಪೈಶ್ಚ — ರಾಜರಿಂದಲೂ ಕೂಡ, ದೂರತರಂ —ಬಹುದೂರದವರೆಗೆ, ಅನ್ವಾಗತಃ ಸನ್ - ಹಿಂಬಾಲಿಸಲ್ಪಟ್ಟವನಾಗಿ, ಗಿರಾ—ನಿಲ್ಲಿರಿ ಎಂಬ ಮಾತಿನಿಂದ, ತಾನ್— ಅನುಸರಿಸಿ ಬಂದವರನ್ನು ಸಂಸ್ಥಾಪ್ಯ – ನಿಲ್ಲಿಸಿ, ವಿಪ್ರಪ್ರವರೈಃ — ಬ್ರಾಹ್ಮಣಶ್ರೇಷ್ಠರಿಂದ, ಸಹ—ಕೂಡಿಕೊಂಡು, ಕುರೂನ್ — ಕೌರವರನ್ನು ಕುರಿತು, ಯಯೌ – ಹೋದನು. ॥೬೧॥

ಭಾ. ಆ. ೪೫—೬೧. ಆಗ ಸನಾತನ ಮಹರ್ಷಿಗಳು ಬಂದು ಶ್ರೀವಿಷ್ಣು ತತ್ವದಬಗ್ಗೆ ಚೆನ್ನಾಗಿ ತಿಳಿಸಿ, ಕಪಟಿಗಳಾದವರಿಗೆ ಸದ್ಗತಿಯಾಗದು ಎಂದೂ ಹೇಳಿದರು. ಪ್ರಾತಃಕಾಲವಾದಾಗ ಸಂಜಯನು ಪಾಂಡವರು ಹೇಳಿದ್ದನ್ನು ಎಲ್ಲರ ಸಮಕ್ಷಮದಲ್ಲಿ ಸಭೆಯಲ್ಲಿ ಧೃತರಾಷ್ಟ್ರನಿಗೆ ತಿಳಿಸಿದನು' ಅದನ್ನು ಕೇಳಿ ಹೆದರಿದರೂ ಕೂಡ ಧೃತರಾಷ್ಟ್ರನು ಪುತ್ರಮೋಹದಿಂದ ರಾಜ್ಯವನ್ನು ಪಾಂಡವರಿಗೆ ಕೊಡಲಿಲ್ಲ. ಸಂಜಯನು ಪಾಂಡವರ ಹತ್ತಿರ ಬಂದಾಗ ಧರ್ಮರಾಜನು ಸಂಜಯನಿಗೆ ಯುದ್ಧ ಕರ್ತವ್ಯತೆಯನ್ನು ತಿಳಿಸಿ, 'ದೊಡ್ಡಪ್ಪನು ರಾಜ್ಯ ಕೊಡುವದಾದರೆ ನೀನಾಗಲೀ ವಿದುರರಾಗಲಿ ಬನ್ನಿರಿ; ಇಲ್ಲದಿದ್ದರೆ ಬೇಡ. ನೀವು ಬಾರದಿದ್ದರೆ ಯುದ್ಧ ನಿಶ್ಚಿತವೆಂದು ತಿಳಿಯುವೆನು ಎಂದು ಹೇಳಿದ್ದನು. ಈಗ ಅವರಿಬ್ಬರೂ ಬಾರದ್ದರಿಂದ ಯುದ್ಧದ ಬಗ್ಗೆ ಶ್ರೀ ಕೃಷ್ಣನ ಹತ್ತಿರ ವಿಚಾರಿಸಿದನು. ಆಗ ಶ್ರೀ ಕೃಷ್ಣಪರಮಾತ್ಮನು 'ನಾನು ಹಸ್ತಿನಾವತಿಗೆ ಹೋಗುತ್ತೇನೆ. ಹಿತವಚನಗಳನ್ನು ಎಲ್ಲ ಋಷಿಗಳ, ಹಿರಿಯರ ಸಮಕ್ಷಮದಲ್ಲಿ ಸಭೆಯಲ್ಲಿ ಹೇಳುತ್ತೇನೆ. ಅದನ್ನೂ ದುರ್ಯೋಧನನು ನಡೆಸದಿದ್ದರೆ, ಅವನು ಸಕಲಧರ್ಮತ್ಯಾಗ ಮಾಡಿದವನು, ವಧಾರ್ಹನೂ ಆಗುತ್ತಾನೆ.' ಎಂದು ಹೇಳಿದನು. ಆಗ ಶ್ರೀಭಿಮಸೇನದೇವರು ಎಲ್ಲ ಆ ದುಷ್ಟರನ್ನು ಕೊಲ್ಲುವ ಇಚ್ಛೆವುಳ್ಳವರೇ ಆಗಿದ್ದರೂ ಲೋಕದ ಜನರಿಗೆ ಆದಷ್ಟು ಹಿಂಸೆಯಾಗದಂತೆ ಕಾರ್ಯ ಮಾಡಬೇಕೆಂದು ತಿಳಿಸಲು, ತಮ್ಮ ಬಗ್ಗೆ ದುರ್ಯೋಧನನಿಗೆ ಇರುವ ದ್ವೇಷಭಾವವನ್ನು ಲಕ್ಷಿಸದೇ ತಾವು ದ್ವೇಷವನ್ನು ಬಿಟ್ಟವರಂತೆ ತೋರಿಸುತ್ತಾ, ನಮ್ಮ ನಿಮಿತ್ತ ಯುದ್ಧವಾಗಿ ಕುಲನಾಶವಾಗುವದು ಬೇಡ. ದುರ್ಯೋಧನನ ಕುಲವನ್ನು ರಕ್ಷಿಸಲು ಅವರಕೆಳಗಿರುವವರೂ ಬೇಕಾದರೆ ಆಗುತ್ತೇವೆ ಎಂದು ಅರ್ಥ ತೋರುವಂತೆ ಹೇಳಿದರು. (ಶುದ್ಧ ಭಾಗವತ ಧರ್ಮದಲ್ಲಿರುವ ಶ್ರೀಭೀಮಸೇನರು, ಲೋಕ ಸಂಗ್ರಹಕ್ಕಾಗಿಯೂ ಸುಳ್ಳನ್ನಾಗಲೀ, ದುಷ್ಟನಿಗ್ರಹಕರ್ತವ್ಯ ರೂಪ ಧರ್ಮದ ವಿರುದ್ಧ ಮಾತನ್ನಾಗಲೀ ಹೇಳಲಾರರು ಆದ್ದರಿಂದ ದುರ್ಯೋಧನನು ಸತ್ತನಂತರ ಕೆಲಕಾಲ ಸ್ವರ್ಗದಲ್ಲಿರು

ವಾಗ ನಾವು ರಾಜ್ಯ ಪರಿಪಾಲನೆಗಾಗಿ ಭೂಮಿಯಲ್ಲಿ ಸಂಚರಿಸುತ್ತಿರುವದರಿಂದ ಸ್ವರ್ಗದ ಕೆಳಗೆ ಭೂಮಿಯಲ್ಲಿ ರಾಜ್ಯಮಾಡುತ್ತಿರುವೆವು ಎಂಬ ಗೂಢಾರ್ಥ ಇಟ್ಟುಕೊಂಡು 'ಅಧಶ್ಚರಾಭವೇಮ' ಎಂದು ಹೇಳಿದ್ದಾರೆ.) ಹಾಗೆ ಹೇಳಿದಾಗ, ಶ್ರೀ ಕೃಷ್ಣ ಪರಮಾತ್ಮನು ದುಷ್ಟನಿಗ್ರಹರೂಪವಾದ ಯುದ್ಧವು ಧರ್ಮವೇ ಆಗಿದೆ ಎಂದು ಲೋಕಕ್ಕೆ ತಿಳಿಸುವವನಾಗಿ ಭೀಮಸೇನರು ಹೇಳಿದಮಾತನ್ನು ಆಕ್ಷೇಪಿಸಿ ಯುದ್ಧದಕರ್ತವ್ಯತ್ವವನ್ನು ದೃಢವಾಗಿ ಪ್ರತಿಪಾದಿಸಿದನು. ಈ ಸಂದರ್ಭದಲ್ಲಿ ಶ್ರೀಕೃಷ್ಣನ ಮನಸ್ಸಿನಲ್ಲಿದ್ದದ್ದನ್ನು ತಿಳಿದ ಶ್ರೀ ಭೀಮಸೇನರು ತಾವು ಸಕಲ ವೈರಿಗಳನ್ನು ನಾಶಮಾಡಲು ಸಮರ್ಥರು ಎಂಬುದಾಗಿ ತಿಳಿಸುತ್ತ ತಮ್ಮ ಸಾಮರ್ಥ್ಯದ ಬಗ್ಗೆ ಎಲ್ಲ ರಾಜರ ಸಮಕ್ಷಮದಲ್ಲಿ ಹೇಳಿದಾಗ, ಶ್ರೀ ಕೃಷ್ಣನು ನೀನು ತಿಳಿದದ್ದಕ್ಕಿಂತ ಸಹಸ್ರ ಪಟ್ಟು ಹೆಚ್ಚು ಸಾಮರ್ಥ್ಯಾದಿಗುಣಗಳು ನಿನ್ನಲ್ಲಿವೆ ಎಂದು ನಾನು ತಿಳಿದಿರುವೆ ಎಂದು ಪ್ರಶಂಸಿಸಿದನು. ಶ್ರೀ ಕೃಷ್ಣ-ಭೀಮರು ಯಾವಾಗಲೂ ಏಕಾಭಿಪ್ರಾಯದವರೇ ಆಗಿದ್ದರೂ ಲೋಕನೀತಿಗಾಗಿ, ಲೋಕದ ಜನರಿಗೂ ಸಮ್ಮತಿಯಾಗುವದಕ್ಕಾಗಿ ಮೇಲೆ ಹೇಳಿದಂತೆ ಆಕ್ಷೇಪ – ಸಮಾಧಾನ ರೂಪವಾದ ಚರ್ಚೆಯನ್ನು ಮಾಡಿದರು.

(ವಿಶೇಷಾಂಶ – ಶ್ರೀಭೀಮಸೇನರೂ ಕೂಡ ಯಾವದೇ ದ್ವೇಷಾದಿಗಳಿಲ್ಲದೇ ಯುದ್ಧ ಬಿಡಲೂ ಸಿದ್ಧರಾಗಿದ್ದವರು. ಶ್ರೀಕೃಷ್ಣನ ಧರ್ಮ ನಿರ್ಣಯವನ್ನು ಅಂಗೀಕರಿಸಿ ಅವರೂ ಯುದ್ಧಕ್ಕೆ ಸಿದ್ಧರಾಗಿದ್ದಾರೆ ಎಂದು ತಿಳಿಸಲು, ಶ್ರೀಕೃಷ್ಣನು ಶ್ರೀಭೀಮಸೇನರಿಗಿಂತಲೂ ಉತ್ತಮ ಧರ್ಮಜ್ಞನು; ಅವನು ಹೇಳಿದಂತೆ ಶ್ರೀಭೀಮಸೇನರೂ ನಡೆಯುವವರು ಎಂಬುದನ್ನು ತಿಳಿಸಲು ಚರ್ಚೆಯನಾಟಕವನ್ನು ಮಾಡಿದ್ದಾರೆ ಎಂದು ತಿಳಿಯಬೇಕು.) ಈ ಸಮಯದಲ್ಲಿ ಅರ್ಜುನನು ಸಂಧಿಯಾಗಲಿ ಎಂದು ಬಯಸುತ್ತಿದ್ದನು. ಅವನಿಗೆ ಯುದ್ಧವೇ ಕರ್ತವ್ಯವಾದದ್ದು ಎಂದು ಪ್ರಮಾಣ ಪೂರ್ವಕವಾಗಿ ತಿಳಿಹೇಳಿ ಯುದ್ಧಕ್ಕೆ ಸಿದ್ಧನನ್ನಾಗಿಸಿದನು. ನಕುಲನು ಶ್ರೀಕೃಷ್ಣನು ಸರ್ವಜ್ಞನು ಎಂದು ತಿಳಿಯದೇ, ತಾನು ನೀತಿಜ್ಞ, ಎಂದು ತಿಳಿದುಕೊಂಡು ಯುದ್ಧವನ್ನು ಸುನೀತಿಯನ್ನಾಗಿ ಹೇಳಿ, ಹೀಗೆ ಮಾಡು, ಹಾಗೆಮಾಡು ಎಂದು ಶ್ರೀಕೃಷ್ಣನಿಗೆ ಬೋಧಿಸಿದನು. ಸಹದೇವನು ತಾನು ಶೂರ ಎಂದು ಪ್ರಕಟಿಸಲು ಯುದ್ಧವನ್ನೇ ನಿರ್ಣಯ ಮಾಡಿಕೊಂಡು ಬಾ ಎಂದು ಹೇಳಿದನು. ಹಾಗೆಯೇ ಸಾತ್ಯಕಿಯೂ ಹೇಳಿದನು. ದುಷ್ಟನಿಗ್ರಹವೇ ಕ್ಷತ್ರಿಯರಿಗೆ ಮುಖ್ಯ ಧರ್ಮವಾದ್ದರಿಂದ, ಕೌರವರಜೊತೆಗೆ ಸಂಧಿಯುಬೇಡಾ ಎಂದು ದ್ರೌಪದೀದೇವಿಯರು ಹೇಳಿದರು. ಶ್ರೀಕೃಷ್ಣನು ಹಾಗೇ ಆಗಲಿ ಎಂದು ದ್ರೌಪದೀ ಮಾತನ್ನು ಸಮ್ಮತಿಸಿ ಹೇಳಿ, ಸಾತ್ಯಕಿಯಿಂದ ಸಹಿತನಾಗಿ ರಥದಲ್ಲಿ ಕುಳಿತು ಹೊರಟನು. ಆಗ ಪಾಂಡವರೆಲ್ಲರೂ, ರಾಜರೆಲ್ಲರೂ ಬೆನ್ನು ಹತ್ತಿ ಬಂದು ಬೀಳ್ಕೊಟ್ಟರು. ಮುನಿಗಣಸಮೇತನಾಗಿ ಶ್ರೀಕೃಷ್ಣನು ಹೊರಟುಹೋದನು.

ಏಕೋಽಪಿವಿಷ್ಣು ಃ ಸಚಭಾರ್ಗವಾತ್ಮಾ ವ್ಯಾಸಾತ್ಮಕಶ್ಚಾನುಗತೋ ಮುನೀಂದ್ರೈ ಃ ॥
ಯುಯೌತದುಕ್ತೇರ್ಹಿಗುಣಾನ್ಪ್ರವೇತ್ತುಂ ನಾನ್ಯೋಽಹಿಶಕ್ತ್ಯಸ್ತಮೃತೇಯತಃ ಪ್ರಭುಂ ॥೬೨॥

ಸಃ—ಕೃಷ್ಣನು, ಭಾರ್ಗವಾತ್ಮಾ – ಪರಶುರಾಮ ಸ್ವರೂಪನಾದ, ವ್ಯಾಸಾತ್ಮಕಃ – ವೇದವ್ಯಾಸ ಸ್ವರೂಪಿಯಾದ, ವಿಷ್ಣುಃ—ಪರಮಾತ್ಮನಾದ, ಸಃ—ಆ ಶ್ರೀಕೃಷ್ಣನು, ಏಕೋಽಪಿ – ನಿರ್ವಿಶೇಷಾಭಿನ್ನನಾದರೂ ಕೂಡ, ಯತಃ — ಯಾವ ಕಾರಣದಿಂದ, ತದುಕ್ತೇಃ – ಕೃಷ್ಣನ ಮಾತಿನ, ಗುಣಾನ್ — ಅಭಿಪ್ರಾಯಗಳನ್ನು, ಪ್ರವೇತ್ತುಂ — ಚೆನ್ನಾಗಿ ತಿಳಿಯಲು, ಪ್ರಭುಂ – ಸಮರ್ಥನಾದ, ತಂ – ಆ ಪರಮಾತ್ಮನನ್ನು, ಋತೇ – ಹೊರತು,ಅನ್ಯಃ—ಬೇರೊಬ್ಬನು, ಶಕ್ತಃ– ಸಮರ್ಥನು, ನ — ಅಲ್ಲವೋ, ಅತಃ – ಆದ್ದರಿಂದ, ಮುನೀಂದ್ರೈಃ— ವ್ಯಾಸಭಾರ್ಗವರಿಂದಲೂ, ಮುನಿಶ್ರೇಷ್ಠರಿಂದಲೂ, ಅನುಗತಃ ಸನ್ – ಹಿಂಬಾಲಿಸಲ್ಪಟ್ಟವನಾಗಿ, ಯಯೌ – ಹೋದನು. ಶ್ಲೋಕದಲ್ಲಿರುವ ಎರಡೂ ಹಿ ಶಬ್ದಗಳು ಗುಣಗಳಿಗೆ ಅನಂತತ್ವ ಪ್ರಸಿದ್ಧಿಯನ್ನೂ ವಿಷ್ಣುವಿನಿಂದ ಇತರರಿಗೆ ಅಸರ್ವಜ್ಞತ್ವಪ್ರಸಿದ್ಧಿಯನ್ನೂ ಸೂಚಿಸುತ್ತವೆ. ॥ ೬೨ ॥

ಸವಂದ್ಯಮಾನೋಽಖಿಲರಾಷ್ಟ್ರವಾಸಿಭಿಃಪ್ರಸೂನವರ್ಷೈರಭಿವರ್ಷಿತಸ್ತೈ ಃ ॥
ಸಂಸ್ತೂಯಮಾನಃ ಪ್ರಣತೋಽಬ್ಜಜಾದಿಭಿರ್ಗಜಾಹ್ವಯಂ ಪ್ರಾಪಪರೋಽಪ್ರಮೇಯ ಃ ॥೬೩॥

ಅಪ್ರಮೇಯಃ —ಸಂಪೂರ್ಣವಾಗಿ ತಿಳಿಯಲಶಕ್ಯನಾದ, ಪರಃ – ಸರ್ವೋತ್ತಮನಾದ, ಸಃ— ಆ ಶ್ರೀ ಕೃಷ್ಣನು, ಅಖಿಲರಾಷ್ಟ್ರವಾಸಿಭಿಃ – ಎಲ್ಲ ರಾಜ್ಯಗಳಲ್ಲಿ ವಾಸಮಾಡುವವರಿಂದ, ವಂದ್ಯಮಾನಃಸನ್ — ನಮಸ್ಕರಿಸಲ್ಪಟ್ಟವನಾಗಿ,

ಅಬ್ಜಜಾದಿಭಿಃ – ಬ್ರಹ್ಮನೇ ಮೊದಲಾಗಿಉಳ್ಳ, ಸುರೈಃ – ದೇವತೆಗಳಿಂದ, ಪ್ರಸೂನವರ್ಷೈಃ – ಹೂಗಳ ಮಳೆಗಳಿಂದ, ಅಭಿವರ್ಷಿತಸ್ಸನ್ – ಅಭಿಷೇಕಿಸಲ್ಪಟ್ಟವನಾಗಿಯೂ, ಸಂಸ್ತೂಯಮಾನಸ್ಸನ್ – ಚೆನ್ನಾಗಿ ಸ್ತೋತ್ರಮಾಡಿಸಿಕೊಳ್ಳಲ್ಪಟ್ಟವನಾಗಿಯೂ, ಪ್ರಣತಃಸನ್ – ನಮಸ್ಕಾರಮಾಡಿಸಿಕೊಂಡವನಾಗಿಯೂ, ಗಜಾಹ್ವಯಂ – ಹಸ್ತಿನಾವತಿಯನ್ನು, ಪ್ರಾಪ– ಹೊಂದಿದನು. ॥೬೩॥

ಸಭೀಷ್ಮಮುಖ್ಯೈಃ ಸರಸಾಭಿಯಾತಃ ಸಹೈವ ತೈಃ ಪ್ರಯಯೌ ರಾಜಮಾರ್ಗೇ ॥
ದಿದೃಕ್ಷವಸ್ತಂ ಜಗದೇಕಸುಂದರಂ ಗುಣಾರ್ಣವಂಚಾಯಯುರತ್ರಸರ್ವೇ ॥೬೪॥

ಭೀಷ್ಮಮುಖ್ಯೈಃ–ಭೀಷ್ಮರೇ ಪ್ರಧಾನರಾಗಿ ಉಳ್ಳವರಿಂದ, ಸರಸಾಭಿಯಾತಃ–ಸ್ನೇಹಪೂರ್ವಕ ಎದುರುಗೊಳ್ಳಲ್ಪಟ್ಟ, ಸಃ – ಆ ಶ್ರೀ ಕೃಷ್ಣನು, ತೈಃ – ಆ ಭೀಷ್ಮರೇ ಮೊದಲಾದವರಿಂದ, ಸಹೈವ – ಕೂಡಿಕೊಂಡೇ, ರಾಜಮಾರ್ಗೇ – ರಾಜರಸ್ತೆಯಲ್ಲಿ, ಪ್ರಯಯೌ – ಹೋದನು. ಅತ್ರ – ಹಸ್ತಿನಾವತಿಯಲ್ಲಿ, ಸರ್ವೇ – ಎಲ್ಲರು, ಜಗದೇಕಸುಂದರಂ – ಲೋಕದಲ್ಲಿ ಮುಖ್ಯ ಸುಂದರನಾದ, ಗುಣಾರ್ಣವಂ – ಜ್ಞಾನಾನಂದಾದಿ ಗುಣಗಳಿಂದ ಸಮುದ್ರದಂತಿರುವ, ತಂ – ಆ ಶ್ರೀಕೃಷ್ಣನನ್ನು, ದಿದೃಕ್ಷವಃಸಂತಃ – ನೋಡಲಿಚ್ಛೆಉಳ್ಳವರಾಗಿ, ಆಯಯುಃ—ಬಂದರು. ॥೬೪॥

ಸಂಭಾವಿತಸ್ತೈಃ ಪರಮಾದರೇಣ ವಿವೇಶಗೇಹಂ ನೃಪತೇರನಂತಃ ॥
ಸಭೀಷ್ಮಮುಖ್ಯಾನ್ಪುರತೋ ನಿಧಾಯು ವೈಚಿತ್ರವೀರ್ಯೇಣ ಸಮರ್ಚಿತೋಽಜಃ ॥೬೫॥
ರೌಕ್ಮೇನಿಷಣ್ಣಃ ಪರಮಾಸನೇಪ್ರಭುಃ ಬಭೌ ಸ್ವಭಾಸಾಕಕುಭೋಽವಭಾಸಯನ್ ॥೬೬॥

ತೈಃ – ಆ ಭೀಷ್ಮಾದಿಗಳಿಂದ, ಪರಮಾದರೇಣ–ಶ್ರೇಷ್ಠ ಭಕ್ತಿಯಿಂದ, ಸಂಭಾವಿತಃ–ಪೂಜಿಸಿಕೊಳ್ಳಲ್ಪಟ್ಟ, ಅನಂತಃ– ನಾಶವಿಲ್ಲದ ಶ್ರೀಕೃಷ್ಣನು, ನೃಪತೇಃ – ಧೃತರಾಷ್ಟ್ರನ, ಗೇಹಂ – ಮನೆಯನ್ನು, ವಿವೇಶ – ಪ್ರವೇಶಿಸಿದನು, ಅಜಃ – ಉತ್ಪತ್ತಿಇಲ್ಲದ, ಸಃ — ಆ ಕೃಷ್ಣನು, ಭೀಷ್ಮಮುಖ್ಯಾನ್ – ಭೀಷ್ಮನೇಪ್ರಧಾನರಾಗಿಉಳ್ಳವರನ್ನು, ಪುರತೋನಿಧಾಯ– ಮುಂದಿಟ್ಟುಕೊಂಡು, ವೈಚಿತ್ರವೀರ್ಯೇಣ – ಧೃತರಾಷ್ಟ್ರನಿಂದ, ಸಮರ್ಚಿತಃ – ಪೂಜಿಸಿಕೊಳ್ಳಲ್ಪಟ್ಟನು, ರೌಕ್ಮೇ—ಭಂಗಾರ ಮಯವಾದ, ಪರಮಾಸನೇ— ಉತ್ತಮ ಪೀಠದಲ್ಲಿ, ನಿಷಣ್ಣಃ — ಕುಳಿತಿರುವ, ಪ್ರಭುಃ— ಸಮರ್ಥನಾದ ಶ್ರೀಕೃಷ್ಣನು, ಸ್ವಭಾಸಾ — ತನ್ನ ಕಾಂತಿಯಿಂದ, ಕಕುಭಃ – ದಿಕ್ಕುಗಳನ್ನು, ಅವಭಾಸಯನ್‌ಸನ್ – ಪ್ರಕಾಶಪಡಿಸುವವನಾಗಿ, ಬಭೌ — ಶೋಭಿಸಿದನು. ॥೬೫॥೬೬॥

ಯಥೋಚಿತಂತೇಷು ವಿಧಾಯು ಕೇಶವೋದೌರ್ಯೋಧನಂ ಪ್ರಾಪ್ಯ ಗೃಹಂಚಪೂಜಿತಃ ॥
ಪೂಜಾಂತದೀಯಾಂ ಗುಣವದ್ವಿಡಿತ್ಯಸೌ ಜಗ್ರಾಹನೋ ವಿದುರಂಚಾಜಗಾಮು ॥೬೭॥

ಕೇಶವಃ – ಶ್ರೀ ಕೃಷ್ಣನು, ತೇಷು—ಆ ಭೀಷ್ಮಾದಿಗಳಲ್ಲಿ, ಯಥೋಚಿತಂ—ಅವರವರಿಗೆ ಯೋಗ್ಯವಾದ ಮರ್ಯಾದೆಯನ್ನು, ವಿಧಾಯ —ಮಾಡಿ, ದೌರ್ಯೋಧನಂ – ದುರ್ಯೋಧನನ ಸಂಬಂಧಿಯಾದ, ಗೃಹಂ — ಮನೆಯನ್ನು, ಪ್ರಾಪ್ಯ– ಹೊಂದಿ, ಪೂಜಿತಶ್ಚ —ಅವನಿಂದ ಪೂಜಿಸಲ್ಪಟ್ಟವನಾದರೂ ಕೂಡ, ಅಸೌ –ಈ ದುರ್ಯೋಧನನು, ಗುಣವದ್ವಿಟ್–ಗುಣವಂತರಾದ ಪಾಂಡವರ ದ್ವೇಷಿಯು ಇತಿ—ಈ ಕಾರಣದಿಂದ, ತದೀಯಾಂ—ಆ ದುರ್ಯೋಧನನಿಂದ ಮಾಡಲ್ಪಟ್ಟ, ಪೂಜಾಂ— ಪೂಜೆಯನ್ನು, ನೋ ಜಗ್ರಾಹ—ಸ್ವೀಕರಿಸಲಿಲ್ಲ, ವಿದುರಂಚ—ವಿದುರನನ್ನು ಕುರಿತೇ–ಆಜಗಾಮ— ಬಂದನು. ॥೬೭॥

ಸಭೀಷ್ಮಪೂರ್ವೈರಭಿಯಾಚಿತೋಽಪಿ ಜಗಾಮನೈಷಾಂಗೃಹಮಾದಿದೇವಃ ॥
ಉಪೇಕ್ಷಿತಾ ದ್ರೌಪದೀತ್ಯಪ್ರಮೇಯೋ ಜಗಾಮುಗೇಹಂ ವಿದುರಸ್ಯ ಶೀಘ್ರಂ ॥೬೮॥

ಆದಿದೇವಃ—ಆದಿದೇವನಾದ, ಸಃ— ಆ ಕೃಷ್ಣನು, ಭೀಷ್ಮಪೂರ್ವೈಃ — ಭೀಷ್ಮನೇ ಮೊದಲಾಗಿ ಉಳ್ಳವರಿಂದ, ಅಭಿಯಾಚಿತೋಪಿ —ತಮ್ಮ ಮನೆಯನ್ನು ಕುರಿತು ಬರಬೇಕೆಂದು ಪ್ರಾರ್ಥಿಸಿಕೊಳ್ಳಲ್ಪಟ್ಟವನಾದರೂ ಕೂಡ, ದ್ರೌಪದೀ–

ದ್ರೌಪದಿಯು, ಉಪೇಕ್ಷಿತಾ–ವಸ್ತ್ರಾಪಹರಣ ಕಾಲದಲ್ಲಿ ಉಪೇಕ್ಷಿಸಲ್ಪಟ್ಟಿರುವಳು, ಇತಿ–ಎಂದು, ತೇಷಾಂ – ಆ ಭೀಷ್ಮಾದಿಗಳ, ಗೃಹಂ—ಮನೆಯನ್ನು ಕುರಿತು, ನ ಜಗಾಮ – ಹೋಗಲಿಲ್ಲ, ಅಪ್ರಮೇಯಃ— ಪೂರ್ಣತಿಳಿಯಲಶಕ್ಯನಾದ ಶ್ರೀ ಕೃಷ್ಣನು, ವಿದುರಸ್ಯ—ವಿದುರನ, ಗೃಹಂ—ಮನೆಯನ್ನು ಕುರಿತು, ಶೀಘ್ರಂ—ಬೇಗನೇ, ಜಗಾಮ – ಹೋದನು. ॥೬೮॥

ಸತೇನ ಭಕ್ತ್ಯಾಭಿಗತಃ ಪ್ರಸನ್ನಃ ಪ್ರವಿಶ್ಯಚಾಂತರ್ಗೃಹಮೀಶ್ವರೋಽಜಃ ॥
ಭಕ್ತ್ಯಾಭಿಪೂರ್ಣೇನ ಸಸಂಭ್ರಮೇಣ ಸಂಪೂಜಿತಃ ಸರ್ವಸಮರ್ಪಣೇನ ॥೬೯॥

ತೇನ – ಆ ವಿದುರನಿಂದ, ಭಕ್ತ್ಯಾ-ಭಕ್ತಿಯಿಂದ, ಅಭಿಗತಃ – ಎದುರುಗೊಳ್ಳಲ್ಪಟ್ಟ, ಪ್ರಸನ್ನಃ – ಸಂತುಷ್ಟನಾದ, ಅಜಃ – ಹುಟ್ಟಿಲ್ಲದ, ಈಶ್ವರಃ — ಸ್ವಾಮಿಯಾದ, ಸಃ — ಆ ಶ್ರೀ ಕೃಷ್ಣನು, ಅಂತರ್ಗೃಹಂ – ಮನೆಯೊಳಗೆ, ಪ್ರವಿಶ್ಯ — ಪ್ರವೇಶಿಸಿ, ಭಕ್ತ್ಯಾ – ಭಕ್ತಿಯಿಂದ, ಅಭಿಪೂರ್ಣೇನ — ತುಂಬಿದ, ಸಸಂಭ್ರಮೇಣ – ಸಂಭ್ರಮದಿಂದ ಕೂಡಿದ ವಿದುರನಿಂದ, ಸರ್ವಸಮರ್ಪಣೇನ – ಎಲ್ಲಾ ದೇಹೇಂದ್ರಿಯ ಹೆಂಡತಿ ಮಕ್ಕಳ ನಿವೇದನದಿಂದ ಅಂದರೆ ಎಲ್ಲವೂ ನಿನ್ನ ಆಧೀನದಲ್ಲಿರತಕ್ಕದ್ದು, ಎಂಬ ಭಾವದಿಂದ ಸಂಪೂಜಿತಃ – ಪೂಜಿಸಿಕೊಳ್ಳಲ್ಪಟ್ಟನು. ॥೬೯॥

ಭಾ.ಅ೬೨-೬೯ ಶ್ರೀಕೃಷ್ಣನು ಕೌರವರಲ್ಲಿಗೆ ಹೋಗಿ ಹೇಳತಕ್ಕ ಮಾತಿನ ಗಂಭೀರಾರ್ಥಗಳನ್ನು ಭಗವಂತನೇ ತಿಳಿಯುವನು. ಜ್ಞಾನಿಗಳು ಸ್ವಲ್ಪ ಸ್ವಲ್ಪ ತಿಳಿಯಬಹುದು. ಆದ್ದರಿಂದ ಶ್ರೀಕೃಷ್ಣನು ಶ್ರೀವೇದವ್ಯಾಸ ಹಾಗೂ ಶ್ರೀಪರಶುರಾಮ (ರೂಪಗಳು ತನ್ನಿಂದ ಒಂದೇ ಆದರೂ ಕೂಡ) ರೂಪಗಳಿಂದ ಹಾಗೂ ಮುನಿ ಶ್ರೇಷ್ಠರಿಂದ ಕೂಡಿಕೊಂಡು ಹೊರಟನು. ದಾರಿಯಲ್ಲಿ ಎಲ್ಲ ರಾಜ್ಯಗಳ ಜನರಿಂದಲೂ ನಮಸ್ಕೃತನಾಗಿ, ಬ್ರಹ್ಮಾದಿದೇವತೆಗಳಿಂದ ಸ್ತೋತ್ರ-ಪ್ರಣಾಮ – ಪುಷ್ಪವೃಷ್ಟಿಗಳಿಂದ ಸತ್ಕೃತನಾಗಿ ಹಸ್ತಿನಾವತಿಗೆ ಬಂದನು. ಅಲ್ಲಿ ಭೀಷ್ಮಾದಿಗಳಿಂದ ಪೀತಿಪೂರ್ವಕ ಸ್ವಾಗತಿಸಲ್ಪಟ್ಟವನಾಗಿ ಅವರಿಂದ ಕೂಡಿಯೇ ರಾಜಬೀದಿಯಲ್ಲಿ ಹೊರಟಾಗ ಆ ಗುಣಸಮುದ್ರನಾದ ಶ್ರೀಕೃಷ್ಣನನ್ನು ನೋಡುವ ಇಚ್ಛೆವುಳ್ಳವರಾಗಿ ಎಲ್ಲರೂ ಬಂದು ಸೇರಿದರು. ಧೃತರಾಷ್ಟ್ರನ ಗೃಹವನ್ನು ಪ್ರವೇಶಿಸಿ ಅಲ್ಲಿ ಭೀಷ್ಮಾದಿಗಳಿಂದಲೂ,ರಾಜನಿಂದಲೂ ಸುವರ್ಣಾಸನದಲ್ಲಿ ಪೂಜಿತನಾದನು. ಆವರಿಗೆಲ್ಲ ಯಥೋಚಿತವಾಗಿ ಪೂಜೆಮಾಡಿ, ದುರ್ಯೋಧನನ ಮನೆಗೆ ಬಂದು,ಅವನು ಪೂಜೆ ಮಾಡಲು ಉದ್ಯುಕ್ತನಾದಾಗ ಗುಣಗಳಾದ ಪಾಂಡವರದ್ವೇಷಿಯು ಎಂಬ ಕಾರಣದಿಂದ ಆ ಪೂಜೆಯನ್ನು ಸ್ವೀಕರಿಸದೇ ವಿದುರನ ಮನೆಗೆ ಹೋದನು. ಭೀಷ್ಮಾದಿಗಳು ತಮ್ಮ ಮನೆಗೆ ಬರಲು ಸಾಕಷ್ಟು ವಿನಂತಿಸಿದರೂ ಕೂಡ ಆ ದುಷ್ಟಸಭೆಯಲ್ಲಿ ದ್ರೌಪದಿಯನ್ನು ಉದಾಸೀನ ಮಾಡಿದ ಕಾರಣದಿಂದ ಅವರಲ್ಲಿಗೆ ಹೋಗದೇ ವಿದುರನ ಮನೆಗೆ ಹೋದನು. ವಿದುರನು ಭಕ್ತಿಯಿಂದ ಎದುರುಗೊಂಡು ಭಕ್ತಿಪೂರ್ಣ ಸಂಭ್ರಮದಿಂದ ಭಗವಂತನ ಪೂಜೆಯನ್ನು ಮಾಡಿದ್ದಾನೆ. 'ದಾರಾನ್ಸುತಾನ್ಪ್ರಿಯಾನ್ಪ್ರಾಣಾನ್ ಪರಸ್ಮೈಸನ್ನಿವೇದಯೇತ್' ಎಂಬ ಪ್ರಮಾಣಾನುಸಾರ ಮನೆ, ಮಡದಿ, ಮಕ್ಕಳು, ಮನಸ್ಸು, ಎಲ್ಲವು ಭಗವಂತನ ಅಧೀನ, ಭಗವಂತ ಕೊಟ್ಟದ್ದು ಎಂಬ ಭಾವನೆಯಿಂದ ಪೂಜಿಸಿದನು.

ಪರೇದಿನೇಽಸೌ ಧೃತರಾಷ್ಟ್ರಸೂನುನಾಸಮ್ಮಾನಿತಃ ಸಂಸದಿಕೌರವಾಣಾಂ ॥
ವಿವೇಶದಿವ್ಯೇಮಣಿಕಾಂಚನಾಸನೇಸಾರ್ಧಂ ಮುನೀಂದ್ರೈಃ ಪರಮಾರ್ಥವೇದಿಭಿಃ ॥೭೦॥

ಪರೇದಿನೇ–ಮರುದಿವಸದಲ್ಲಿ, ಕೌರವಾಣಾಂ–ಕೌರವರ, ಸಂಸದಿ– ಸಭೆಯಲ್ಲಿ ಧೃತರಾಷ್ಟ್ರಸೂನುನಾ- ಧೃತರಾಷ್ಟ್ರನ ಮಗನಾದ ದುರ್ಯೋಧನನಿಂದ,ಸಮ್ಮಾನಿತಃ–ಪೂಜಿಸಿಕೊಳ್ಳಲ್ಪಟ್ಟ; ಅಸೌ – ಈ ಶ್ರೀಕೃಷ್ಣನು,ಪರಮಾರ್ಥವೇದಿಭಿಃ–ಸರ್ವೋತ್ತಮನಾದ ಶ್ರೀಹರಿಯನ್ನು ತಿಳಿದಿರುವ, ಮುನೀಂದ್ರೈಃ – ಮುನಿಶ್ರೇಷ್ಠರಿಂದ, ಸಾರ್ಧಂ – ಕೂಡಿಕೊಂಡು, ದಿವ್ಯೇ — ಅಲೌಕಿಕವಾದ, ಮಣಿಕಾಂಚನಾಸನೇ – ರತ್ನ ಮತ್ತು ಭಂಗಾರಮಯವಾದ ಪೀಠದಲ್ಲಿ, ವಿವೇಶ —ಕುಳಿತನು. ॥೭೦॥

ಸಂಪೂಜಿತೋಭೀಷ್ಮಮುಖೈಃ ಸಮಸ್ತೈಃರರಾಜ ರಾಜೀವಸಮಾನನೇತ್ರಃ ॥
ಯಥೋಚಿತಾಸ್ತತ್ರವಿಧಾಯವಾರ್ತಾಜಗಾದಕಾಲೇಕಲಿಕಲ್ಮಷಾಪಹಃ ॥೭೧॥

ಭೀಷ್ಮಮುಖ್ಯೈಃ — ಭೀಷ್ಮರೇಮೊದಲಾಗಿಉಳ್ಳ, ಸಮಸ್ತೈಃ— ಎಲ್ಲರಿಂದಲೂ, ಸಂಪೂಜಿತಃ — ಚೆನ್ನಾಗಿ ಪೂಜಿಸಿಕೊಳ್ಳಲ್ಪಟ್ಟ, ರಾಜೀವಸಮಾನನೇತ್ರಃ-- ಕಮಲಗಳಿಗೆ ಸದೃಶಗಳಾದ ಕಣ್ಣುಗಳುಳ್ಳ ಶ್ರೀಕೃಷ್ಣನು, ರರಾಜ – ಶೋಭಿಸಿದನು. ತತ್ರ – ಆ ಸಭೆಯುಲ್ಲಿ, ಕಲಿಕಲ್ಮಷಾಪಹಃ – ಕಲಿಯ ಮಲವನ್ನು ನಾಶಮಾಡತಕ್ಕ ಶ್ರೀಕೃಷ್ಣನು, ಯಥೋಚಿತಾಃ– ದೇಶಕಾಲಗಳಿಗೆ ಅನುಗುಣವಾದ, ವಾರ್ತಾಃ – ಮಾತುಕಥೆಗಳನ್ನು, ವಿಧಾಯ – ಮಾಡಿ, ಕಾಲೇ — ವಿವಕ್ಷಿತಾರ್ಥವನ್ನು ಹೇಳಲು ಯೋಗ್ಯವಾದ ಸಮಯದಲ್ಲಿ, ಜಗಾದ — ಹೇಳಿದನು. ॥೭೧॥

ವೈಚಿತ್ರವೀರ್ಯ ಸ್ವಕುಲಸ್ಯ ವೃಧ್ಯೈ ಪ್ರದೇಹಿರಾಜ್ಯಂತವಸತ್ಸುತಾಯ ॥
ಯಶಶ್ಚ ಧರ್ಮಂ ಪರಮಂಪ್ರಸಾದಂ ಮಮ ತ್ವಮಾಪ್ನೋಷಿತದೈವರಾಜನ್ ॥೭೨॥

ವೈಚಿತ್ರವೀರ್ಯ—ಎಲೋವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನೇ, ಸ್ವಕುಲಸ್ಯ – ನಿನ್ನ ವಂಶದ,ವೃಧ್ಯೈ — ಅಭಿವೃದ್ಧಿಗೋಸ್ಕರ, ತವ – ನಿನ್ನ, ಸತ್ಸುತಾಯ – ಸತ್ಪುತ್ರನಾದಧರ್ಮರಾಜನಿಗೋಸ್ಕರ, ರಾಜ್ಯಂ – ರಾಜ್ಯವನ್ನು, ದೇಹಿ – ಕೊಡು, ಹೇ, ರಾಜನ್ — ಎಲೋರಾಜನೇ, ತದೈವ — ಆಗಲೇ, ತ್ವಂ – ನೀನು, ಯಶಃ — ಕೀರ್ತಿಯನ್ನು, ಧರ್ಮಂ – ಧರ್ಮವನ್ನು, ಮಮ—ನನ್ನ, ಪರಮಂ ಪ್ರಸಾದಂ ಚ—ಉತ್ತಮ ಅನುಗ್ರಹವನ್ನೂ ಕೂಡ, ಪ್ರಾಪ್ನೋಷಿ – ಹೊಂದುವಿ. ॥೭೨॥

ಅತೋಽನ್ಯಥಾಯಶಸೋಧರ್ಮತಶ್ಚ ಹೀನಃ ಪ್ರತೀಪತ್ವಮುಪೈಷಿಮೇಽತಃ
ಇತೀರಿತಃ ಪ್ರಾಹಮಮಾತಿವರ್ತಿನಂ ಸುತಂಸ್ವಯಂಮೇ ಪ್ರತಿಬೋಧಯೇತಿ ॥೭೩॥

ಅತೋಽನ್ಯಥಾಕರೋಷಿಚೇತ್ – ಹಿಂದೇ ಹೇಳಿದ್ದಕ್ಕೆ ವಿಪರೀತವಾಗಿ ಮಾಡುವಿಯಾದರೆ ಅಂದರೆ ರಾಜ್ಯವನ್ನು ಕೊಡದಿದ್ದರೆ. ಅತಃ — ಕೀರ್ತಿಯಿಂದಲೂ, ಧರ್ಮದಿಂದಲೂ ಹೀನಃಸನ್ – ರಹಿತನಾಗಿ, ಮೇ – ನನ್ನ, ಪ್ರತೀಪತ್ವಂ— ವಿರೋಧವನ್ನು, ಉಪೈಷಿ—ಹೊಂದುವಿ, ಇತಿ – ಈ ರೀತಿಯಾಗಿ, ಈರಿತಃ— ಹೇಳಿಸಿಕೊಳ್ಳಲ್ಪಟ್ಟ ಧೃತರಾಷ್ಟ್ರನು, ಮಮ ಅತಿವರ್ತಿನಂ – ನನ್ನನ್ನು ಅತಿಕ್ರಮಿಸಿರುವ, ಅಂದರೆ ನನ್ನ ಮಾತನ್ನು ಕೇಳದಿರುವ, ಮೇ — ನನ್ನ ಸುತಂ – ಮಗನನ್ನು, ಸ್ವಯಂ – ನೀನೇ ಪ್ರತಿಬೋಧಯ – ಉಪದೇಶಿಸು, ಇತಿ – ಎಂದು, ಪ್ರಾಹ – ಹೇಳಿದನು, ॥೭೩॥

ಸ ವಾಸುದೇವೇನ ವಿಬೋಧಿತೋಽಪಿ ಪಾಪಾಭಿಸಂಧಿರ್ಧೃತರಾಷ್ಟ್ರಸೂನುಃ ॥
ಉತ್ಥಾಯ ತಸ್ಮಾದನುಜೈರಮಾತ್ಯೈರ್ನಿಯಂತುಮೀಶಂಕುಮತಿರ್ವ್ಯಧಾನ್ಮತಿಂ ॥೭೪॥

ಪಾಪಾಭಿಸಂಧಿಃ – ಪಾಪಕರ್ಮದಲ್ಲಿ ಬುದ್ಧಿಯುಳ್ಳ, ಕುಮತಿಃ – ಸ್ವಭಾವದಿಂದಲೇ ದುಷ್ಟಬುದ್ಧಿಯುಳ್ಳ, ಧೃತರಾಷ್ಟ್ರ ಸೂನುಃ – ದುರ್ಯೋಧನನು, ವಾಸುದೇವೇನ – ಶ್ರೀಕೃಷ್ಣನಿಂದ, ವಿಬೋಧಿತೋಪಿ – ಚೆನ್ನಾಗಿ ಬೋಧಿಸಲ್ಪಟ್ಟವನಾದರೂ ಕೂಡ, ತಸ್ಮಾತ್ – ಆ ಸಭೆಯದೆಸೆಯಿಂದ, ಉತ್ಥಾಯ — ಎದ್ದು, ಅನುಜೈಃ – ತಮ್ಮಂದಿರಿಂದಲೂ, ಅಮಾತ್ಯೈಃ – ಮಂತ್ರಿಗಳಿಂದಲೂ, ಸಹ – ಕೂಡಿಕೊಂಡು, ಈಶಂ — ಸ್ವಾಮಿಯಾದ ಶ್ರೀ ಕೃಷ್ಣನನ್ನು, ನಿಯಂತುಂ — ಕಟ್ಟಿಹಾಕಲು, ಮತಿಂ – ಬುದ್ಧಿಯನ್ನು, ವ್ಯಧಾತ್ – ಮಾಡಿದನು. ॥೭೪॥

ಯೇಯೇ ತದಾ ಕೇಶವ ಸಂಯಮಾಯ ನ್ಯಮಂತ್ರಯಂಸ್ತೇ ವಿಬುಧಪ್ರತೀಪಾಃ ॥
ಅತೋಽವಿಕರ್ಣ ಪ್ರಮುಖಾ ಅಪಿಸ್ಮ ವಧ್ಯತ್ವಮಾಯನ್ನ ಶುಭಾಂ ಗತಿಂಚ ॥೭೫॥

ಯೇಯೇ – ಯಾರು ಯಾರು, ತದಾ – ಆಗ, ಕೇಶವ ಸಂಯಮಾಯ — ಶ್ರೀ ಕೃಷ್ಣನನ್ನು ಕಟ್ಟುವದಕ್ಕೋಸ್ಕರ, ನ್ಯಮಂತ್ರಯನ್ – ಆಲೋಚಿಸಿದರೋ, ತೇ — ಅವರು, ವಿಬುಧಪ್ರತೀಪಾಃ– ದೇವದ್ವೇಷಿಗಳು, ಅತೋಪಿ – ಈ ಕಟ್ಟುವ

ಅಪರಾಧದಿಂದಲೇವಿಕರ್ಣಪ್ರಮುಖಾ ಅಪಿ – ವಿಕರ್ಣನೇ ಮೊದಲಾದ ಧೃತರಾಷ್ಟ್ರನ ಮಕ್ಕಳು, ವಧ್ಯತ್ವಂ–ಕೊಲ್ಲಲರ್ಹತೆಯನ್ನು, ಅಶುಭಾಂ – ಕೆಟ್ಟ,ಗತಿಂಚ - ಗತಿಯನ್ನೂ ಕೂಡ, ಆಯನ್ – ಹೊಂದಿದರು. ॥೭೫॥

ಕರ್ಣಃ ಸುರಾಂಶೋಽಪಿ ಸುಯೋಧನಾರ್ಥೇ ನ್ಯಮುಂತ್ರಯದ್ಭಾವತೋನೈವ ದುಷ್ಟಃ ॥
ಅತೋಗತಿಶ್ಚಾಸ್ಯಸುಶೋಭನಾಭೂದ್ಯೇಽತ್ರಾನುಕೂಲಾಃ ಪರಮುಸ್ಯತೇ ಶುಭಾಃ ॥೭೬॥

ಕರ್ಣಃ— ಕರ್ಣನು ಸುರಾಂಶೋಪಿ – (ದೇವತಾ), ಸೂರ್ಯನ ಅಂಶ ಸಂಭೂತನಾದರೂ,ಸುಯೋಧನಾರ್ಥೇ–ದುರ್ಯೋಧನನ ಪ್ರೀತಿಗೋಸ್ಕರ, ನ್ಯಮುಂತ್ರಯತ್–ಸಹಸ್ರವರ್ಮನೆಂಬ ಅಸುರಾವೇಶದಿಂದ ಕಟ್ಟಲು ಆಲೋಚಿಸಿದನು. ಭಾವತಃ–ಸ್ವಭಾವದಿಂದ, ನೈವದುಷ್ಟಃ – ದುಷ್ಟನು ಅಲ್ಲವೇ ಅಲ್ಲ, ಅತಃ—ಆದ್ದರಿಂದ, ಅಸ್ಯ – ಈ ಕರ್ಣನಿಗೆ, ಸುಶೋಭನಾ–ಅತಿ ಒಳ್ಳೆಯ ಗತಿಃಗತಿಯೂ, ಅಭೂತ್-ಆಯಿತು. ಅತ್ರ—ಈ ಸಮಯದಲ್ಲಿ, ಯೇ–ಯಾರು,ಪರಮಸ್ಯ – ಸರ್ವೋತ್ತಮನಾದ ಶ್ರೀಕೃಷ್ಣನಿಗೆ, ಅನುಕೂಲಾಃ – ಅನುಕೂಲರಾಗಿರುವರೋ, ವಿರೋಧಿಗಳಲ್ಲವೋ, ತೇ – ಅವರು, ಶುಭಾಃ – ಶೋಭನರಾದದೇವತೆಗಳು; ದೇವತೆಗಳಿಗೆ ಅನುಕೂಲರಾದವರು. ॥೭೬॥

ಭಾ. ಅ. ೭೦—೭೬ ಮರುದಿನ ಕೌರವಸಭೆಯಲ್ಲಿ ದುರ್ಯೋಧನನಿಂದ ಸತ್ಕೃತನಾದ ಶ್ರೀಕೃಷ್ಣನು ಶ್ರೇಷ್ಠ ತತ್ವಜ್ಞಾನಿಗಳಾದ ಋಷಿ-ಮುನಿಗಳಿಂದ ಸಹಿತನಾಗಿ ಭಂಗಾರರತ್ನದ ಶ್ರೇಷ್ಠ ಆಸನದಲ್ಲಿ ಕುಳಿತಿದ್ದಾನೆ. ಆ ಕಾಲಕ್ಕೆ ಯೋಗ್ಯವಾದ ಮಾತುಗಳನ್ನಾಡಿ, ತಾನು ಹೇಳಬಂದಿರುವ ವಿಷಯವನ್ನು ಹೇಳಲು ಯೋಗ್ಯವಾದ ಸಮಯದಲ್ಲಿ ಧೃತರಾಷ್ಟ್ರನಿಗೆ 'ರಾಜನೇ, ನಿನ್ನ ಕುಲದ ಕ್ಷೇಮಾಭಿವೃದ್ಧಿಗೊಸ್ಕರ ನಿನ್ನ ಸತ್ಪುತ್ರ (ಧರ್ಮರಾಜ)ನಿಗೆ ರಾಜ್ಯವನ್ನು ಕೊಡು. ಆದರಿಂದಲೇ ನನ್ನ ಅನುಗ್ರಹವನ್ನು, ಧರ್ಮ ಕೀರ್ತಿಗಳನ್ನು ಹೊಂದುತ್ತೀ. ಇಲ್ಲವಾದರೆ, ಧರ್ಮ ಕೀರ್ತಿಹಾನಿಗಳನ್ನು ಹೊಂದುವದಲ್ಲದೇ ನನ್ನ ಅವಕೃಪೆಯನ್ನು ಹೊಂದುತ್ತಿ,' ಎಂದು ಹೇಳಿದನು. ಆಗ ಧೃತರಾಷ್ಟ್ರನು ನನ್ನನ್ನು ಮೀರಿರುವ ನನ್ನ ಮಗ ದುರ್ಯೋಧನನಿಗೆ ನೀನೇ ಉಪದೇಶ ಮಾಡು, ಎಂದು ಹೇಳಿದನು. ಆಗ ಶ್ರೀಕೃಷ್ಣನು ದುರ್ಯೋಧನನಿಗೆ ಚೆನ್ನಾಗಿ ತಿಳಿ ಹೇಳಿದರೂ ಕೂಡ, ತಾಮಸಸ್ವಭಾವದವನಾದ, ಕುಮತಿಯಾದ ಅವನು, ಸಭಾದಲ್ಲಿ ಆಸನದಿಂದ ಎದ್ದುನಿಂತು, ತಮ್ಮಂದಿರಿಂದ ಸಹಿತನಾಗಿ ಶ್ರೀಕೃಷ್ಣನನ್ನು ಬಂಧಿಸಲು ಮನಸ್ಸು ಮಾಡಿದನು. ಆಗ ಶ್ರೀಕೃಷ್ಣನನ್ನು ಬಂಧಿಸಲು ಮನಸ್ಸು ಮಾಡಿದವರೆಲ್ಲರೂ ದೇವದ್ವೇಷಿಗಳಾದ ದೈತ್ಯಸ್ವಭಾವದವರು. ಈ ಕಾರ್ಯದಲ್ಲಿ ವಿಕರ್ಣ ಮೊದಲಾದವರೆಲ್ಲರೂ ಸೇರಿದ್ದರಿಂದ, ಎಲ್ಲರೂ ಸಂಹೃತರಾಗಿ ತಮೋಗತಿಯನ್ನು ಹೊಂದಿದರು. ಕರ್ಣನೂ ಕೂಡ ಈ ಬಂಧನ ವಿಚಾರದಲ್ಲಿ ಸೇರಿದ್ದರಿಂದ ಅವನು ಅಸುರಸ್ವಭಾವದವನೆಂದು ಶಂಕೆ ಬರಬಹುದು.ಅಥವಾ ದೇವಾಂಶನಾದ ಕರ್ಣನು ಇಂಥ ವಿಚಾರದಲ್ಲಿ ಹೇಗೆ ತೊಡಗಿದ ಎಂಬ ಪ್ರಶ್ನೆ ಬರಬಹುದು. ಅದಕ್ಕೆ ಉತ್ತರವನ್ನು ಸಕಲಸಜ್ಜನೋದ್ಧಾರಕರಾದ ಸರ್ವಜ್ಞಾಚಾರ್ಯರು ಹೇಳುತ್ತಿದ್ದಾರೆ. ಕರ್ಣನು ತನ್ನೊಳಗಿರುವ ಸಹಸ್ರವರ್ಮ ಎಂಬ ಅಸುರನ ಆವೇಶಪ್ರಯುಕ್ತವಾಗಿ, ದುರ್ಯೋಧನನ ಪ್ರೀತಿಗಾಗಿ, ಶ್ರೀಕೃಷ್ಣಬಂಧನದ ವಿಚಾರದಲ್ಲಿ ಪ್ರವೃತ್ತನಾದನು. ಸ್ವರೂಪದುಷ್ಟನಲ್ಲ. ಆದ್ದರಿಂದ ಶುಭಗತಿಯೇ ಅವನಿಗೆ ಆಗಿದೆ. ಹೀಗೆ ಭಗವದನುಕೂಲರಾಗಿದ್ದವರೆಲ್ಲರೂ ಶುಭಜನರು, ವಿರುದ್ಧರಾಗಿರುವವರು ದುಷ್ಟರು ಎಂದು ತಿಳಿಯಬೇಕು.

ವಿಶೇಷಾಂಶ : ವಿಕರ್ಣನೂ ಶ್ರೀಕೃಷ್ಣಬಂಧನ ವಿಚಾರದಲ್ಲಿ ಸೇರಿದವನೇ ಎಂದು ತಿಳಿಸಿ ವಿಕರ್ಣನ ಬಗ್ಗೆ ಅನೇಕ ಜನರಿಗಿರುವ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸಿದರು. ದ್ರೌಪದೀದೇವಿಗೆ ಅವಮಾನ ಮಾಡಲು ಪ್ರಯತ್ನಿಸುತ್ತಿದ್ದಾಗ ವಿಕರ್ಣನು ವಿರೋಧಿಸಿದ ಎಂಬ ಕಥೆ ಕೇಳಿ ಜನರು ಅವನೂ ಒಳ್ಳೆಯವನು ಎಂದು ತಿಳಿಯುತ್ತಾರೆ;ಎಷ್ಟೋಜನ ತಿಳಿದಿದ್ದಾರೆ. ಅದಕ್ಕಾಗಿ ಆಚಾರ್ಯರು ಅವನೂ ಕೂಡ ತಮೋಯೋಗ್ಯನೇ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ. ಅವನು ಆಗಲೂ ಕೂಡ ಡಂಭಕ್ಕಾಗಿ, ಕಪಟಕ್ಕಾಗಿ ವಿರೋಧಿಸಿದ್ದು ಎಂದೂ ಆಚಾರ್ಯರು ಹಿಂದೇ ನಿರ್ಣಯ ಕೊಟ್ಟಿದ್ದಾರೆ ಎಂಬುದನ್ನು ತಿಳಿಯಬೇಕು.

ಋಷಿಭಿರ್ಜಾಮದಗ್ನ್ಯೇನ ವ್ಯಾಸೇನಾಪ್ಯಮಿತೌ ಜಸಾ ॥
ವಾಸುದೇವಾತ್ಮಕೇನೈವಂ ತ್ರಿರೂಪೇಣೈವ ವಿಷ್ಣುನಾ ॥೭೭॥

ಮಾತಾಪಿತೃಭ್ಯಾಂ ಭೀಷ್ಮಾದ್ಯೈರನುಶಿಷ್ಟೋಽಪಿದುರ್ಮತಿಃ ॥
ದುರ್ಯೋಧನೋಮುಂತ್ರಯತೇ ಮುಕುಂದಸ್ಯಾನುಬಂಧನಂ ॥೭೮॥

ಋಷಿಭಿಃ – ಋಷಿಗಳಿಂದ, ಅಮಿತೌಜಸಾ – ಅಪರಿಮಿತ ಸಾಮರ್ಥ್ಯವುಳ್ಳ, ಜಾಮದಗ್ನ್ಯೇನ — ಜಮದಗ್ನಿಪುತ್ರ ಪರಶುರಾಮರಿಂದ, ವ್ಯಾಸೇನ – ವೇದವ್ಯಾಸರಿಂದ, ವಾಸುದೇವಾತ್ಮಕೇನ— ವಸುದೇವಪುತ್ರನಾದ ಶ್ರೀಕೃಷ್ಣರೂಪದಿಂದ, ಏವಂ–ಈ ರೀತಿಯಾಗಿ, ತ್ರಿರೂಪೇಣ–ಮೂರುರೂಪವುಳ್ಳ, ವಿಷ್ಣುನೈವ–ಪರಮಾತ್ಮನಿಂದಲೂ ಕೂಡ, ಮಾತಾಪಿತೃಭ್ಯಾಂ– ತಂದೆತಾಯಿಗಳಿಂದಲೂ, ಭೀಷ್ಮಾದ್ಯೈಃ – ಭೀಷ್ಮನೇ ಮೊದಲಾಗಿಉಳ್ಳವರಿಂದಲೂ, ಅನುಶಿಷ್ಟೋಪಿ – ರಾಜ್ಯವನ್ನು ಕೊಡು ಎಂದು ಶಿಕ್ಷಿಸಲ್ಪಟ್ಟವನಾದರೂ ಕೂಡ, ದುರ್ಮತಿಃ — ದುಷ್ಟಬುದ್ಧಿಯುಳ್ಳ, ದುರ್ಯೋಧನಃ – ದುರ್ಯೋಧನನು, ಮುಕುಂದಸ್ಯ – ಸಂಸಾರಬಂಧನವನ್ನುಬಿಡಿಸತಕ್ಕ ಶ್ರೀಕೃಷ್ಣನ ಅನುಬಂಧನಂ – ತಮೋಗತಿಗೆ ಅನುಕೂಲವಾದ ಕಟ್ಟುವಿಕೆಯನ್ನು, ಮುಂತ್ರಯತೇ – ಆಲೋಚಿಸುತ್ತಾನೆ. ॥೭೭॥೭೮॥

ಸಾತ್ಯಕಿಃ ಕೃತವರ್ಮಾಚ ತಚ್ಛ್ರುತ್ವಾತುರಂಜಸಾ ॥
ಸಂಸ್ಥಾಪ್ಯ ಕೃತವರ್ಮಾಣಂ ರಹಃ ಸಾತ್ಯಕಿರತ್ರಚ ॥
ಅಭ್ಯೇತ್ಯ ಕೇಶವಂ ಪ್ರಾಹ ದುರ್ಯೋಧನ ವಿನಿಶ್ಚಯಂ ॥೭೯॥

ಸಾತ್ಯಕಿಃ – ಸಾತ್ಯಕಿಯು, ಕೃತವರ್ಮಾಚ – ಕೃತವರ್ಮನೂ ಕೂಡ, ಅಂಜಸಾ – ಚೆನ್ನಾಗಿ, ತತ್ — ಆ ಬಂಧನವನ್ನು, ಶುಶ್ರುವತುಃ – ಕೇಳಿದರು, ಕೃತವರ್ಮಾಣಂ – ಕೃತವರ್ಮನನ್ನು, ರಹಃ – ಏಕಾಂತದಲ್ಲಿ, ಸಂಸ್ಥಾಪ್ಯ – ನಿಲ್ಲಿಸಿ, ಸಾತ್ಯಕಿಃ – ಸಾತ್ಯಕಿಯು, ಅತ್ರ – ಈ ಕೃಷ್ಣನ ಸಮೀಪದಲ್ಲಿ, ಅಭ್ಯೇತ್ಯ — ಬಂದು, ಕೇಶವಂ — ಶ್ರೀಕೃಷ್ಣನನ್ನುಕುರಿತು, ದುರ್ಯೋಧನವಿನಿಶ್ಚಯಂ–ದುರ್ಯೋಧನನಿಂದ ಮಾಡಲ್ಪಟ್ಟ ಶ್ರೀಕೃಷ್ಣಬಂಧನ ನಿರ್ಣಯವನ್ನು, ಪ್ರಾಹ–ಹೇಳಿದನು ॥೭೯॥

ಜಾನನ್ನಪ್ಯಖಿಲಂ ಕೃಷ್ಣಸ್ತಚ್ಛ್ರುತ್ವಾ ಸಾತ್ಯಕೇರ್ಮುಖಾತ್ ॥
ವೈಚಿತ್ರವೀರ್ಯಮವದತ್ಪಶ್ಯಮಾವಿತಿ ಸರ್ವಗಂ ॥೮೦॥

ಕೃಷ್ಣಃ—ಕೃಷ್ಣನು, ಅಖಿಲಂ–ಎಲ್ಲ ವಿಚಾರವನ್ನು, ಜಾನನ್ನಪಿ–ತಿಳಿದವನಾದರೂ ಕೂಡ, ಸಾತ್ಯಕೇಃ– ಸಾತ್ಯಕಿಯ, ಮುಖಾತ್ – ವದನದಿಂದ, ತತ್ – ಆ ಬಂಧನ ಸುದ್ದಿಯನ್ನು ಶ್ರುತ್ವಾ – ಕೇಳಿ, ಸರ್ವಗಂ – ಸರ್ವತ್ರವ್ಯಾಪ್ತನಾದ, ಮಾಂ – ನನ್ನನ್ನು, ಪಶ್ಯ – ನೋಡು, ಇತಿ – ಎಂದು, ವೈಚಿತ್ರವೀರ್ಯಂ—ಧೃತರಾಷ್ಟ್ರನನ್ನು ಕುರಿತು, ಅವದತ್– ದಿವ್ಯದೃಷ್ಟಿಯನ್ನು ಕೊಟ್ಟು ಹೇಳಿದನು. ॥೮೦॥

ಅಥತೇನಾಹುತೇ ಪುತ್ರೇ ಸಾಮಾತ್ಯೇ ಪುರುಷೋತ್ತಮಃ ॥
ಸ್ವರೂಪಂದರ್ಶಯಾಮಾಸ ಸರ್ವಗಂ ಪೂರ್ಣಷಡ್ಗುಣಂ ॥೮೧॥

ಅಥ – ಅನಂತರ, ತೇನ – ಆ ಧೃತರಾಷ್ಟ್ರನಿಂದ, ಸಾಮಾತ್ಯೇ – ಮಂತ್ರಿಗಳಿಂದ ಸಹಿತನಾದ, ಪುತ್ರೇ–ಮಗನು, ಆಹುತೇಸತಿ — ಕರೆಯಲ್ಪಡುತ್ತಿರಲು, ಪುರುಷೋತ್ತಮಃ — ಕ್ಷರಾಕ್ಷರ ಪುರುಷರಿಂದ ಉತ್ತಮನಾದ ಶ್ರೀಕೃಷ್ಣನು, ಸರ್ವಗಂ – ಸರ್ವತ್ರವ್ಯಾಪ್ತವಾದ,–ಪೂರ್ಣಷಡ್ಗುಣಂ ಪರಿಪೂರ್ಣಗಳಾದ ಐಶ್ವರ್ಯಾದಿ ಆರುಗುಣಗಳುಳ್ಳ, ಸ್ವರೂಪಂ–ತನ್ನ ಸ್ವರೂಪವನ್ನು, ದರ್ಶಯಾಮಾಸ – ತೋರಿಸಿದನು. ॥೮೧॥

ತತ್ಕಾಲಸೂರ್ಯಾಮಿತದೀಪ್ತಿ ಸರ್ವಜಗದ್ಭರಂ ಶಾಶ್ವತಮಪ್ರಮೇಯಂ ॥
ದೃಷ್ಟ್ವೈವಚಕ್ಷ್ಮಾಂಷಿ ಸುಯೋಧನಾದ್ಯಾನ್ಮೀಲಯನ್ದೀಧಿತಿವಾರಿತಾನಿ ॥೮೨॥

ಕಾಲಸೂರ್ಯಾಮಿತದೀಪ್ತಿ – ಪ್ರಲಯಕಾಲದಲ್ಲಿರುವ ಸೂರ್ಯರಿಗಿಂತ ಅಪರಿಮಿತವಾದ ಕಾಂತಿಯುಳ್ಳ, ಸರ್ವ ಜಗದ್ಭರಂ–ಎಲ್ಲಾ ಲೋಕದಲ್ಲಿರುವವರನ್ನು ಪೋಷಿಸತಕ್ಕ, ಶಾಶ್ವತಂ–ಯಾವಾಗಲೂ ಒಂದೇರೀತಿ ಇರತಕ್ಕ, ಅಪ್ರಮೇಯಂ–ತಿಳಿಯಲು ಅಶಕ್ಯವಾದ, ತತ್ – ಆ ರೂಪವನ್ನು, ದೃಷ್ಟ್ವೈವ – ನೋಡಿಯೇ, ಸುಯೋಧನಾದ್ಯಾಃ – ದುರ್ಯೋಧನನೇ ಮೊದಲಾಗಿ ಉಳ್ಳವರು, ದೀಧಿತಿವಾರಿತಾನಿ – ಪ್ರಕಾಶದಿಂದ ನೋಡಲು ಅಶಕ್ಯಗಳಾದ, ಚಕ್ಷೂಂಷಿ – ಕಣ್ಣುಗಳನ್ನು, ನ್ಯಮೀಲಯನ್ – ಮುಚ್ಚಿಕೊಂಡರು. ॥೮೨॥

ಪಿಧಾಯರೂಪಂ ಪುನರೇವ ತದ್ಧರಿರ್ವೈಚಿತ್ರವೀರ್ಯೇಣ ಸಮರ್ಥಿತಃ ಪುನಃ ॥
ಕೃತ್ವಾಂಧಮೇವ ಪ್ರಯಯೌ ಸುಯೋಧನಂ ಸಹಾನುಗಂ ಪಾಪತಮಂ ಪ್ರಕಾಶ್ಯ ॥೮೩॥

ವೈಚಿತ್ರವೀರ್ಯೇಣ – ಧೃತರಾಷ್ಟ್ರನಿಂದ, ಪುನಃಪುನಃ–ಮತ್ತೂ ಮತ್ತೂ, ಪ್ರಾರ್ಥಿತಃ – ರೂಪವನ್ನು ಮರೆಮಾಡು ಎಂದು ಪ್ರಾರ್ಥಿಸಿಕೊಳ್ಳಲ್ಪಟ್ಟ, ಹರಿಃ – ಶ್ರೀಕೃಷ್ಣನು, ತತ್ರೂಪಂ – ಆ ರೂಪವನ್ನು, ಪಿಧಾಯ – ಆಚ್ಛಾದಿಸಿ, ಅಂಧಮೇವ – ಧೃತರಾಷ್ಟ್ರನನ್ನು ಕುರುಡನನ್ನಾಗಿಯೇ ಕೃತ್ವಾ—ಮಾಡಿ, ಸಹಾನುಗಂ – ಸೇವಕರಿಂದ ಕೂಡಿದ, ಸುಯೋಧನಂ–ದುರ್ಯೋಧನನನ್ನು, ಪಾಪತಮಂ–ಅತ್ಯಂತ ಪಾಪಿಷ್ಠನನ್ನಾಗಿ, ಪ್ರಕಾಶ್ಯ–ಪ್ರಕಾಶಪಡಿಸಿ, ಪ್ರಯಯೌ – ಹೋದನು. ॥೮೩॥

ಅನಂತಶಕ್ತಿಃ ಪುರುಷೋತ್ತಮೋಽಸೌ ಶಕ್ತೋಪಿ ದುರ್ಯೋಧನ ಚಿತ್ತನಿಗ್ರಹೇ ॥
ನೈವವ್ಯಧಾದೇನ ಮಧೋಕ್ತಕಾರಿಣಂ ನಿಪಾತಯನ್ನಂಧ ತಮಸ್ಯನಂತಃ ॥೮೪॥

ಅನಂತಶಕ್ತಿಃ – ಅಪರಿಮಿತ ಸಾಮರ್ಥ್ಯವುಳ್ಳ, ಅನಂತಃ – ಗುಣಪೂರ್ಣನಾದ, ಪುರುಷೋತ್ತಮಃ – ಕ್ಷರಾಕ್ಷರ ಪುರುಷರಿಂದ ಶ್ರೇಷ್ಠನಾದ, ಅಸೌ – ಈ ಕೃಷ್ಣನು, ದುರ್ಯೋಧನ ಚಿತ್ತನಿಗ್ರಹೇ—ದುರ್ಯೋಧನನ ಮನಸ್ಸನ್ನು ನಿಗ್ರಹಿಸುವುದರಲ್ಲಿ, ಶಕ್ತೋಪಿ – ಸಮರ್ಥನಾದರೂ, ಅತಏವ – ಆದ್ದರಿಂದಲೇ, ಉಕ್ತಕಾರಿಣಂಕರ್ತುಂಅಶಕ್ತೋಽಪಿ–ತಾನು ಹೇಳಿದ್ದನ್ನು ಮಾಡುವಂತೆ ಮಾಡಲು ಸಮರ್ಥನಾದರೂ, ಅಧ – ಮರಣಾನಂತರವೇ, ಅಂಧತಮಸಿ— ಅಂಧಂತಮಸ್ಸಿನಲ್ಲಿ, ನಿಪಾತಯನ್ಸನ್ – ಹಾಕುವವನಾಗಿ, ಏನಂ – ಈ ದುರ್ಯೋಧನನನ್ನು, ಉಕ್ತಕಾರಿಣಂ – ತಾನು ಹೇಳಿದ ಮಾತನ್ನು ನಡೆಸುವವನನ್ನಾಗಿ, ನೈವ ವ್ಯಧಾತ್ – ಮಾಡಲೇ ಇಲ್ಲ. ॥೮೪॥

ಭಾ. ಅ. ೨೨–೮೪. ಶ್ರೀ ಕೃಷ್ಣಾಭಿನ್ನರೇ ಆದ ಶ್ರೀ ವ್ಯಾಸ ಪರಶುರಾಮರಿಂದಲೂ ತಂದೆ-ತಾಯಿ, ಭೀಷ್ಮಾದಿ ಹಿರಿಯರಿಂದಲೂ ಉಪದಿಷ್ಟನಾದರೂ ಕೂಡ ದುಷ್ಟಬುದ್ಧಿಯಾದ ದುರ್ಯೋಧನನು ಶ್ರೀಕೃಷ್ಣನ ಬಂಧನದ ವಿಚಾರವನ್ನು ಮಾಡಿದನು. (ಯಾರು ಬೋಧಿಸಿದರೂ ಸ್ವರೂಪ ದುಷ್ಟರು ಬದಲಾಗಲಾರರು. ತ್ರಿವಿಧ ಚೇತನರು ಇದ್ದಾರೆ ಎಂಬುದಕ್ಕೆ ಇದು ಒಂದು ಒಳ್ಳೆಯ ನಿದರ್ಶನವು.) ಸಾತ್ಯಕಿಕೃತವರ್ಮರು ಶ್ರೀಕೃಷ್ಣನ ಬಂಧನ ಮಾಡುವ ವಿಚಾರ ತಿಳಿದು ಅವರಲ್ಲಿ ಸಾತ್ಯಕಿಯು ಕೃತವರ್ಮನನ್ನು ಗುಪ್ತಸ್ಥಳದಲ್ಲಿ ನಿಲ್ಲಿಸಿ, ತಾನು ಶ್ರೀಕೃಷ್ಣನ ಸಮೀಪಕ್ಕೆ ಬಂದು ಬಂಧನ ವಿಷಯವನ್ನು ತಿಳಿಸಿದನು. ಎಲ್ಲವನ್ನೂ ತಿಳಿದ ಶ್ರೀಕೃಷ್ಣಪ್ರಭುವು ಸಾತ್ಯಕಿಯಿಂದ ತಿಳಿದಂತೆ ಮಾಡಿ, ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನು ಇತ್ತು, ಸರ್ವತ್ರ ವ್ಯಾಪಿಸಿರುವ ನನ್ನನ್ನು ನೋಡು ಎಂದು ಹೇಳಿದನು. ಆಗ ಧೃತರಾಷ್ಟ್ರನು ಮಂಗನನ್ನು, ಮಂತ್ರಿಗಳನ್ನು ಕರೆದಾಗ, ಭಗವಂತನು ತನ್ನ ವ್ಯಾಪ್ತವಾದ, ಗುಣಪೂರ್ಣವಾದರೂಪವನ್ನು ತೋರಿಸಿದನು. ಪ್ರಳಯಕಾಲದ ಸೂರ್ಯಪ್ರಕಾಶಕ್ಕಿಂತಲೂ ಹೆಚ್ಚಾದ ಪ್ರಕಾಶವುಳ್ಳ, ಜಗದ್ರಕ್ಷಕವಾದ, ಅನಾದಿ– ನಿತ್ಯ–ಅವಿಕಾರವಾದ, ಯಾರಿಗೂ ಪೂರ್ಣ ತಿಳಿಯಲು ಅಶಕ್ಯವಾದ ಆ ರೂಪವನ್ನು ನೋಡಿದ ದುರ್ಯೋಧನಾದಿಗಳು ಕಣ್ಣುಕುಕ್ಕಿ ಆ ರೂಪವನ್ನು ನೋಡಲೂ ಅಶಕ್ತರಾಗಿ, ಕಣ್ಣುಮುಚ್ಚಿದರು. ನೋಡಿ ಭೀತನಾದ ಧೃತರಾಷ್ಟ್ರನು ಆ ರೂಪವನ್ನು ಅದೃಶ್ಯಮಾಡಲು ಪ್ರಾರ್ಥಿಸಿದನು. ಆಗ ಶ್ರೀಕೃಷ್ಣನು ಆ ರೂಪವನ್ನು ಮರೆಮಾಡಿ ಪುನಃ ಧೃತರಾಷ್ಟ್ರನನ್ನು ಮೊದಲಿನಂತೆ ಕುರುಡನನ್ನಾಗಿ ಮಾಡಿ, ಸಹೋದರ್ಯ, ಸೇವಕರಿಂದ, ಸಹಿತನಾದ ದುರ್ಯೋಧನನನ್ನು ಅತ್ಯಂತ ಪಾಪಿಷ್ಠನನ್ನಾಗಿ ಪ್ರಕಟಪಡಿಸಿ ಅಲ್ಲಿಂದ ಹೊರಟನು. ಅಪರಿಮಿತ ಶಕ್ತಿಯುಳ್ಳ

ಆ ಶ್ರೀಕೃಷ್ಣನು ದುರ್ಯೋಧನನ ಚಿತ್ತನಿಗ್ರಹ ಮಾಡಲು, ಅವನು ತಾನು ಹೇಳಿದಂತೆ ಕೇಳುವಂತೆಮಾಡಲು ಸಮರ್ಥನಾದರೂ ಕೂಡ, ಅವನು ತಮೋಯೋಗ್ಯನಾದ್ದರಿಂದ ಅಂಧ ತಮಸ್ಸಿಗೆ ಹೋಗಲಿ ಎಂದು ಹಾಗೆ ಮಾಡಲಿಲ್ಲ.

ಪುನಶ್ಚ ಕುಂತೀ ಗೃಹಮೇತ್ಯ ಕೃಷ್ಣಃ ತಯೋದ್ಯೋಗಂ ಧರ್ಮಸುತಸ್ಯ ಶಿಷ್ಟಂ ॥
ಶ್ರುತ್ವಾಯಯೌ ಸೂರ್ಯಜಮಾತ್ಮಯಾನೇ ನಿಧಾಯತಸ್ಮಾವದದಾತ್ಮ ಜನ್ಮ ॥
ಆಯಾಹಿಪಾರ್ಥಾನಿತಿ ತದ್ವಚಃ ಸ ನೈವಾಕರೋನ್ಮಾನಿತೋಧಾರ್ತರಾಷ್ಟ್ರೈಃ ॥೮೫॥

ಕೃಷ್ಣಃ – ಶ್ರೀಕೃಷ್ಣನು, ಪುನಃ – ಮತ್ತೊಮ್ಮೆ, ಕುಂತೀಗೃಹಂ – ಕುಂತಿಯ ಮನೆಯನ್ನು, ಏತ್ಯ – ಹೊಂದಿ, ತಯಾ – ಆ ಕುಂತಿಯಿಂದ, ಶಿಷ್ಟಂ—ಹೇಳಲ್ಪಟ್ಟ, ಧರ್ಮಸುತಸ್ಯ—ಧರ್ಮರಾಜನ, ಉದ್ಯೋಗಂ – ಯುದ್ಧದ ಉದ್ಯೋಗವನ್ನು, ಶ್ರುತ್ವಾ – ಕೇಳಿ, ಸೂರ್ಯಜಂ – ಸೂರ್ಯನ ಮಗನಾದ ಕರ್ಣನನ್ನು, ಆತ್ಮಯಾನೇ – ತನ್ನ ರಥದಲ್ಲಿ, ನಿಧಾಯ – ಕುಳ್ಳಿರಿಸಿ, ತಸ್ಯ – ಅವನಿಗೆ, ಆತ್ಮಜನ್ಮ – ಕರ್ಣನ ಉತ್ಪತ್ತಿಯನ್ನು, ನೀನು ಕುಂತಿಯಮಗನೆಂದು ಅವದತ್— ಹೇಳಿದನು. ಪಾರ್ಥಾನ್ — ಪಾಂಡವರನ್ನು ಕುರಿತು, ಆಯಾಹಿ – ಬಾ, ಇತಿ – ಎಂಬ. ತದ್ವಚಃ— ಆ ಶ್ರೀಕೃಷ್ಣನ ಮಾತನ್ನು, ಧಾರ್ತರಾಷ್ಟ್ರೈಃ–ದುರ್ಯೋಧನಾದಿಗಳಿಂದ – ಮಾನಿತಃ – ಗೌರವಿಸಲ್ಪಟ್ಟ, ಸಃ–ಆ ಕರ್ಣನು, ನೈವಾಕರೋತ್ – ನಡೆಸಲೇ ಇಲ್ಲ. ॥೮೫॥

ಸಂಸ್ಥಾಪ್ಯ ತಂ ಭಗವಾನ್ದ್ರೌಣಯೇಚ ರಹೋಽವದನ್ಮಿತ್ರಭಾವಂ ಪೃಥಾಜ್ಯೈಃ ॥
ಯಾವತ್ಪಿತುರ್ಮರಣಂ ಸೋಽಪಿ ಮೈತ್ರೀಂ ವವ್ರೇಪಾರ್ಥೈಸ್ತಂ ವಿಸೃಜ್ಯಾಥಕೃಷ್ಣಃ ॥೮೬॥
ಯಯೌ ಕುರೂನ್ಪೂರ್ವಮೇವೋದ್ವಿಸೃಜ್ಯ ಪೃಥಾಸುತಾನಾಂ ಸಸಕಾಶಮೀಶಃ ॥೮೭॥

ಭಗವಾನ್ – ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನು, ತಂ – ಆ ಕರ್ಣನನ್ನು, ಸಂಸ್ಥಾಪ್ಯ – ರಥದಿಂದ ಕೆಳಗಿರಿಸಿ, ದ್ರೌಣಯೇ—ಅಶ್ವತ್ಥಾಮನಿಗೋಸ್ಕರ, ಪೃಥಾಜ್ಯೈಃ – ಕುಂತಿಯ ಪುತ್ರರಾದ ಪಾಂಡವರಿಂದ ಕೂಡಿಕೊಂಡು, ಮಿತ್ರಭಾವಂ – ಮೈತ್ರಿಯನ್ನು, ರಹಃ–ಏಕಾಂತದಲ್ಲಿ, ಅವದತ್–ಮಾಡಲು ಹೇಳಿದನು. ಸೋಪಿ- ಆ ಅಶ್ವತ್ಥಾಮನಾದರೂ, ಪಿತುಃ – ತಂದೆಯಾದ ದ್ರೋಣರ, ಮರಣಂಯಾವತ್ – ಮರಣ ಪರ್ಯಂತರವಾಗಿ, ಪಾರ್ಥೈಃ – ಪಾಂಡವರಿಂದ ಮೈತ್ರೀಂ – ಮಿತ್ರತ್ವವನ್ನು, ವವ್ರೇ— ಒಪ್ಪಿದನು. ಅಥ – ಅನಂತರ, ಈಶಃ – ಸ್ವಾಮಿಯಾದ, ಸಃ – ಆ ಶ್ರೀಕೃಷ್ಣನು ತಂ—ಆ ಅಶ್ವತ್ಥಾಮನನ್ನು, ವಿಸೃಜ್ಯ – ಬಿಟ್ಟು, ಪೂರ್ವಮೇವ – ಕರ್ಣನೊಡನೆ ಮಾತಾಡುದವಕ್ಕಿಂತ ಮೊದಲೇ, ಕುರೂನ್ ಕೌವರನ್ನು, ವಿಸೃಜ್ಯ–ಬಿಟ್ಟು, ಪೃಥಾಸುತಾನಾಂ–ಪಾಂಡವರ, ಸಕಾಶಂ–ಸಮೀಪಕ್ಕೆ, ಯಯೌ –ಹೋದನು. ॥೮೬॥ ೮೭॥

ಸಂಪ್ರಾರ್ಥಿತಃ ಪೃಥಯಾಚೈವಕರ್ಣಃ ಪಾರ್ಥೈರ್ಯೋಗಂ ಯಾಹಿ ಸೂನುರ್ಮಮಾಸಿ ॥
ತೇನಾಪ್ಯುಕ್ತಾವಾಸವಿನಾವಿನಾಹಂ ಹನ್ಯಾಂಸುತಾಂಸ್ತೈಽಂಬ ಕಥಂಚನೇತಿ ॥೮೮॥

ಕೃಷ್ಣನುಹೋದನಂತರ ಗಂಗಾತೀರದಲ್ಲಿ ಜಪಕಾಲದಲ್ಲಿ ನಮಸ್ಕಾರಪೂರ್ವಕ ಯಾಕೆ ಬಂದಿರುವಿ ಎಂದು ಕೇಳಲ್ಪಟ್ಟ, ಪೃಥಯಾ – ಕುಂತಿಯಿಂದ, ತ್ವಂ – ನೀನು, ಮಮ– ನನ್ನ, ಸೂನುಃ – ಮಗನು, ಅಸಿ–ಆಗಿದ್ದಿ, (ಆದ್ದರಿಂದ) ಪಾರ್ಥೈಃ – ಪಾಂಡವರಿಂದ, ಯೋಗಂ – ಸಂಯೋಗವನ್ನು, ಯಾಹಿ – ಹೊಂದು, ಇತಿ – ಎಂದು, ಕರ್ಣಃ — ಕರ್ಣನು, ಪ್ರಾರ್ಥಿತಃ— ಪ್ರಾರ್ಥಿಸಿಕೊಳ್ಳಲ್ಪಟ್ಟನು. ಹೇ ಅಂಬ–ಎಲೋ ತಾಯಿಯೇ, ವಾಸವಿನಾ—ಅರ್ಜುನನಿಂದ, ವಿನಾ– ಹೊರತು, ಕಥಂಚ— ಯಾವರೀತಿಯಿಂದಲೂ, ತೇ – ನಿನ್ನ ಸುತಾನ್ – ಬೇರೆ ಮಕ್ಕಳನ್ನು ಅಹಂ – ನಾನು, ನಹನ್ಯಾಂ – ಕೊಲ್ಲಲಾರೆನು ಇತಿ – ಎಂದು ತೇನಾಪಿ – ಆ ಕರ್ಣನಿಂದಲೂ, ಉಕ್ತಾ – ಕುಂತಿಯು ಹೇಳಿಸಿಕೊಳ್ಳಲ್ಪಟ್ಟಳು. ॥೮೯॥

ಯಾವರೀತಿಯಿಂದಲೂ, ತೇ – ನಿನ್ನ, ಸುತಾನ್—ಬೇರೆ ಮಕ್ಕಳನ್ನು, ಅಹಂ – ನಾನು, ನ ಹನ್ಯಾಂ–ಕೊಲ್ಲಲಾರೆನು. ಇತಿ–ಎಂದು, ತೇನಾಪಿ – ಆ ಕರ್ಣನಿಂದಲೂ, ಉಕ್ತಾ – ಕುಂತಿಯು ಹೇಳಿಸಿಕೊಳ್ಳಲ್ಪಟ್ಟಳು. ॥೮೮॥

ತತೋಯುಯುಧುಃ ಕೌರವಾಃ ಪಾಂಡವಾಶ್ಚ ಕುರುಕ್ಷೇತ್ರಂಯೋದ್ಧುಕಾಮಾಃ ಸ ಕೃಷ್ಣಾಃ ॥
ಚಕ್ರುಶ್ಚತೇ ಶಿಬಿರಾಣ್ಯತ್ರ ಸರ್ವೇ ಶುಭೇದೇಶೇ ಪಾಂಡವಾಃ ಕೃಷ್ಣಬುದ್ಧ್ಯಾ ॥೮೯॥

ತತಃ – ಅನಂತರ, ಕೌರವಾಃ – ಕೌರವರು, ಪಾಂಡವಾಶ್ಚ – ಪಾಂಡವರೂ ಕೂಡ, ಯೋದ್ಧುಕಾಮಾಃ ಸಂತಃ – ಯುದ್ಧ ಮಾಡಲು ಇಚ್ಛೆಉಳ್ಳವರಾಗಿ, ಸ ಕೃಷ್ಣಾಃಸಂತಃ – ಕೃಷ್ಣನಿಂದ ಕೂಡಿದವರಾಗಿ, ಕುರಕ್ಷೇತ್ರಂ – ಕುರುಕ್ಷೇತ್ರವನ್ನು ಕುರಿತು, ಯಯುಃ - ಹೋದರು. ಅತ್ರ – ಈ ಕುರುಕ್ಷೇತ್ರದಲ್ಲಿ, ತೇ ಸರ್ವೇ – ಅವರೆಲ್ಲರೂ, ಶಿಬಿರಾಣಿ – ವಸ್ತ್ರಾದಿಗಳಿಂದ ಮಾಡಲ್ಪಟ್ಟ ಗೃಹಗಳನ್ನು, ಚಕ್ರುಃ—ಮಾಡಿದರು. ಪಾಂಡವಾಃ– ಪಾಂಡವರು ಕೃಷ್ಣಬುದ್ಧ್ಯಾ – ಕೃಷ್ಣನಿಂದ ಉಕ್ತವಾದ ಬುದ್ಧಿಯಿಂದ, ಶುಭೇದೇಶೇ — ಜಯಪ್ರದವಾದ ದೇಶವಿಶೇಷದಲ್ಲಿ, ಶಿಬಿರಾಣಿ – ಶಿಬಿರಗಳನ್ನು, ಚಕ್ರುಃ — ಮಾಡಿದರು. ॥೮೯॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಉದ್ಯೋಗಪರ್ವಕಥಾನಿರೂಪಣಂ
ನಾಮ ಚತುರ್ವಿಂಶೋऽಧ್ಯಾಯಃ ॥
॥ ಶ್ರೀಕೃಷ್ಣಾರ್ಪಣಮಸ್ತು ॥
॥ ಶ್ರೀಕೃಷ್ಣಃ ಪ್ರೀತೋಭವತು ॥

ಈರೀತಿಯಾಗಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಉದ್ಯೋಗಪರ್ವದ ಕಥೆಯನ್ನು ಪ್ರತಿಪಾದಿಸುವ ಇಪ್ಪತ್ತನಾಲ್ಕನೇ ಅಧ್ಯಾಯವು ಸಮಾಪ್ತವಾಯಿತು. ಈ ಕೃತಿಯು ಶ್ರೀಕೃಷ್ಣನಿಗೆ ಅರ್ಪಿತವಾಗಲಿ. ಇದರಿಂದ ಶ್ರೀಕೃಷ್ಣನು ಪ್ರೀತನಾಗಲಿ.

॥ ಶುಭಂ ॥

ಭಾ. ಅ. ೮೩—೮೯ ಶ್ರೀಕೃಷ್ಣನು ನಂತರ ಕುಂತೀದೇವಿಯ ಮನೆಗೆ ಹೋಗಿ, ಕುಂತಿದೇವಿಯು ಹೇಳಿದ ವಿಷಯವನ್ನೆಲ್ಲ ತಿಳಿದುಕೊಂಡು ಹೊರಟು ಕರ್ಣನ ಹತ್ತಿರಕ್ಕೆ ಬಂದು, ಅವನನ್ನು ತನ್ನ ರಥದಲ್ಲಿ ಕರೆದುಕೊಂಡು ದೂರಕ್ಕೆ ಹೋಗಿ, ಅವನು ಕುಂತಿಯ ಪುತ್ರನೆಂಬುದನ್ನು ತಿಳಿಸಿ, ಪಾಂಡವ ಪಕ್ಷಕ್ಕೆ ಬರಲು ತಿಳಿಸಿದನು. ಆದರೆ, ದುರ್ಯೋಧನನ ಹಂಗಿನಲ್ಲಿರುವ ಕರ್ಣನಿಗೆ ಅದು ಸಾಧ್ಯವಾಗಲಿಲ್ಲ. ಅನಂತರ ಕರ್ಣನನ್ನು ಬಿಟ್ಟು ಅಶ್ವತ್ಥಾಮರ ಹತ್ತಿರ ಬಂದು ಪಾಂಡವರಲ್ಲಿ ಸ್ನೇಹವಿರಲಿ, ಎಂದು ತಿಳಿಸಿದಾಗ, ಅಶ್ವತ್ಥಾಮರು ತಮ್ಮ ತಂದೆ ದ್ರೋಣಾಚಾರ್ಯರು ಬದುಕಿರುವವರೆಗೆ ಸ್ನೇಹದಿಂದ ಇರಲು ಒಪ್ಪಿದರು. ಆಮೇಲೆ ಶ್ರೀಕೃಷ್ಣನು ಪಾಂಡವರ ಸಮೀಪಕ್ಕೆ ಬಂದನು. ಈ ಕಡೆ ಕುಂತೀದೇವಿಯು ಕರ್ಣನು ಗಂಗಾದಂಡೆಯಲ್ಲಿ ಜಪಿಸುತ್ತಿರುವ ಸಮಯದಲ್ಲಿ ಅವನ ಸಮೀಪಕ್ಕೆ ಹೋದಳು. ಕರ್ಣನು ನಮಸ್ಕಾರ ಮಾಡಿದಾಗ, ನೀನು ನನ್ನ ಮಗ, ಪಾಂಡವ ಪಕ್ಷಕ್ಕೆ ಬಾ ಎಂದು ಅಂದಳು. ಅದಕ್ಕೆ ಒಪ್ಪದೆಯೇ, ಅರ್ಜುನನನ್ನು ಬಿಟ್ಟು ಬೇರೆ ಯಾವ ಪಾಂಡವನನ್ನೂ ಸಂಹರಿಸುವದಿಲ್ಲ ಎಂಬ ಮಾತನ್ನು ಕೊಟ್ಟನು. ಇಷ್ಟೆಲ್ಲ ವ್ಯವಸ್ಥೆಯನಂತರ ಕೌರವ – ಪಾಂಡವರು ಯುದ್ಧೋನ್ಮುಖರಾಗಿ ಕುರುಕ್ಷೇತ್ರಕ್ಕೆ ಬಂದರು. ವಾಸಕ್ಕಾಗಿ ಶಿಬಿರಗಳನ್ನು ತಯಾರಿಸಿಕೊಂಡರು. ಪಾಂಡವರು ಶ್ರೀಕೃಷ್ಣನ ಮಾರ್ಗದರ್ಶನದಲ್ಲಿ ಅವನು ಹೇಳಿದ ಶುಭಸ್ಥಳದಲ್ಲಿ ಶಿಬಿರಗಳನ್ನು ಮಾಡಿಕೊಂಡರು.

ಶ್ರೀಮದಾನಂದತೀರ್ಥರಿಂದ ರಚಿತವಾದ ಶ್ರೀಮಹಾಭಾರತತಾತ್ಪರ್ಯನಿರ್ಣಯದಲ್ಲಿ ಉದ್ಯೋಗಪರ್ವ ಕಥಾವನ್ನು ತಿಳಿಸುವ ೨೪ ನೆಯ ಅಧ್ಯಾಯದ ಭಾವಾನುವಾದವು ಮುಗಿಯಿತು.

ಶ್ರೀ ಕೃಷ್ಣಾರ್ಪಣಮಸ್ತು ಶ್ರೀಮಧ್ವೇಶಾರ್ಪಣಮಸ್ತು

॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೨೫ ನೇ ಅಧ್ಯಾಯವು.

ತೇಸೇನೇಸಮುದಾರಂಭೇ ಸಮೇತೇಸಾಗರೋಪಮೇ ॥
ಭೀಮಭೀಷ್ಮಮುಖೇವೀಕ್ಷ್ಯ ಪ್ರಾಹ ವಾಸವಿರಚ್ಯುತಂ ॥೧॥

ವಾಸವಿಃ—ಇಂದ್ರನಮಗನಾದ ಅರ್ಜುನನು, ಸಮರಾರಂಭೇಸತಿ – ಯುದ್ಧವು ಪ್ರಾರಂಭವಾಗುತ್ತಿರಲು, ಸಮೇತೇ–ತಮ್ಮದೇಶದಿಂದ ಕುರುಕ್ಷೇತ್ರವನ್ನು ಸೇರಿದ, ಸಾಗರೋಪಮೇ — ಬಲ, ಶಿಕ್ಷಾದಿಗಳಿಂದ ಸಮುದ್ರಕ್ಕೆ ಸಮಾನವಾದ, ಭೀಮ ಭೀಷ್ಮಮುಖೇ — ಭೀಮನೂಭೀಷ್ಮರೂ ಪ್ರಧಾನರಾಗಿರುಳ್ಳ, ತೇ ಸೇನೇ — ಆ ಕುರುಪಾಂಡವರ ಸೇನೆಗಳನ್ನು, ವೀಕ್ಷ್ಯ — ನೋಡಿ, ಅಚ್ಯುತಂ — ಶ್ರೀಕೃಷ್ಣನನ್ನು ಕುರಿತು, ಪ್ರಾಹ — ಹೇಳಿದನು ॥೧॥

ಸೇನಯೋರುಭಯೋರ್ಮಧ್ಯೇರಥಂಸ್ಥಾಪಯಮೇಽಚ್ಯುತ ॥
ಇತ್ಯುಕ್ತಃ ಸ ತಥಾಚಕ್ರೇ ಪಾರ್ಥೋಽಪಶ್ಯಚ್ಚ ಬಾಂಧವಾನ್ ॥೨॥
ವಿಸಸರ್ಜಧನುಃ ಪಾಪಾಶಂಕೀ ತತ್ರಾಹಮಾಧವಃ ॥
ಸ್ವಧರ್ಮೋದುಷ್ಪನಿಧನಂ ಧರ್ಮಜ್ಞಾನಾನುಪಾಲನಂ ॥
ಕ್ಷತ್ರಿಯಸ್ಯ ತಮುತ್ಸೃಜ್ಯನಿಂದಿತೋಯಾತ್ಯಧೋಗತಿಂ ॥೩॥

ಹೇ ಅಚ್ಯುತ – ಎಲೋ ನಾಶವಿಲ್ಲದ ಶ್ರೀಕೃಷ್ಣನೇ, ಉಭಯೋಃ ಸೇನಯೋಃ – ಎರಡು ಸೈನ್ಯಗಳ, ಮಧ್ಯೇ — ಮಧ್ಯದಲ್ಲಿ, ಮೇ – ನನ್ನ, ರಥಂ – ರಥವನ್ನು, ಸ್ಥಾಪಯ — ನಿಲ್ಲಿಸು, ಇತಿ – ಈ ರೀತಿಯಾಗಿ, ಉಕ್ತಃ— ಹೇಳಿಸಿಕೊಳ್ಳಲ್ಪಟ್ಟ, ಸಃ – ಆ ಶ್ರೀಕೃಷ್ಣನು, ತಥಾ – ಹಾಗೆಯೇ, ಚಕ್ರೇ —ಮಾಡಿದನು. ಪಾರ್ಥಃ-ಅರ್ಜುನನು, ಬಾಂಧವಾನ್ ಬಾಂಧವರನ್ನು ಅಪಶ್ಯತ್ — ನೋಡಿದನು. ತತ್ರ — ಆ ಬಂಧುಗಳ ಸಂಹಾರ ವಿಷಯದಲ್ಲಿ, ಪಾಪಾಶಂಕೀಸನ್ — ಪಾಪ ಬರುವುದೆಂಬ ಸಂಶಯವುಳ್ಳವನಾಗಿ, ಧನುಃ – ಬಿಲ್ಲನ್ನು, ವಿಸಸರ್ಜ – ರಥದಲ್ಲಿಬಿಟ್ಟನು. ತದಾ – ಆಗ, ಮಾಧವಃ – ಶ್ರೀಕೃಷ್ಣನು, ಆಹ – ಹೇಳಿದನು. ಕ್ಷತ್ರಿಯಸ್ಯ –ಕ್ಷತ್ರಿಯನಿಗೆ, ಧರ್ಮಜ್ಞಾನಾನುಪಾಲನಂ – ಧರ್ಮಜ್ಞಾನಗಳರಕ್ಷಣೆಗೆ ಕಾರಣವಾದ, ದುಷ್ಪನಿಧನಂ – ದುಷ್ಟರನಾಶವು, ಸ್ವಧರ್ಮಃ — ತನಗೆ ಅಸಾಧಾರಣವಾದ ಧರ್ಮವು. ತಂ—ಅಂತಹ ಸ್ವಧರ್ಮವಾದ ದುಷ್ಟರ ನಾಶವನ್ನು, ಉತ್ಸೃಜ್ಯ – ಬಿಟ್ಟು, ನಿಂದಿತಃಸನ್ – ಧರ್ಮಶಾಸ್ತ್ರದಿಂದ ನಿಂದಿಸಿಕೊಳ್ಳಲ್ಪಟ್ಟವನಾಗಿ, ಧ್ರುವಂ—ನಿಶ್ಚಯವಾಗಿಯೂ, ಅಧಃ— ಅಧೋಗತಿಯನ್ನು, ಯಾತಿ – ಹೊಂದುತ್ತಾನೆ. ॥೨॥೩॥

ಯತಃ ಪ್ರವೃತ್ತಿರ್ಭೂತಾನಾಂಯೇನಸರ್ವಮಿದಂತತಂ ॥
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥೪॥

ಯತಃ — ಯಾವ ವಿಷ್ಣುವಿನಿಂದಲೇ, ಭೂತಾನಾಂ-ಪ್ರಾಣಿಗಳಿಗೆ, ಪ್ರವೃತ್ತಿಃ- ಎಲ್ಲಾ ವ್ಯಾಪಾರಗಳು ಆಗುವವೋ, ಯೇನ — ಯಾವ ಪರಮಾತ್ಮನಿಂದ, ಇದಂ ಸರ್ವಂ— ಈ ಎಲ್ಲಾ ಜಗತ್ತು, ತತಂ — ವ್ಯಾಪ್ತವಾಗಿದೆಯೋ, ತಂ — ಅಂತಹ ಶ್ರೀಹರಿಯನ್ನು, ಸ್ವಕರ್ಮಣಾ —ತಮ್ಮ ತಮ್ಮವರ್ಣಾಶ್ರಮಗಳಿಗೆ ಉಚಿತವಾದ ಕರ್ಮದಿಂದ, ಅಭ್ಯರ್ಚ್ಯ — ಚೆನ್ನಾಗಿ ಪೂಜಿಸಿ, ಸಿದ್ಧಿಂ – ಮೋಕ್ಷವನ್ನು, ಮಾನವಃ — ಮನುಷ್ಯನು, ಯಾತಿ — ಹೊಂದುತ್ತಾನೆ. ॥೪॥

ನಚ ಶೋಕಸ್ತ್ವಯಾ ಕಾರ್ಯೋ ಬಂಧೂನಾಂನಿಧನೇಚ್ಛಯಾ ॥
ದೇಹಸ್ಯ ಸರ್ವಥಾನಾಶಾದನಾಶಾಚ್ಚೇತನಸ್ಯಚ ॥೫॥

ಸೃಷ್ಟಿಸ್ಥಿತ್ಯಪ್ಯಯಾಜ್ಞಾನಬಂಧಮೋಕ್ಷಪ್ರವೃತ್ತಯಃ ॥
ಪ್ರಕಾಶನಿಯಮೌ ಚೈವ ಬ್ರಹ್ಮೇಶಾದಿಕ್ಷರಸ್ಯಚ ॥೬॥

ಅಕ್ಷರಪ್ರಕೃತೇಶ್ಚೈವ ಮತ್ತ ಏವ ನಚಾನ್ಯತಃ ॥೭॥

ಬಂಧೂನಾಂ – ಬಂಧುಗಳ, ನಿಧನೇಚ್ಛಯಾ — ಸಂಹಾರವಾಗುವದೆಂಬ ಸಂಶಯದಿಂದ ತ್ವಯಾ — ನಿನ್ನಿಂದ, ಶೋಕಃ – ದುಃಖವು, ನಚ ಕಾರ್ಯಃ—ಮಾಡಲುಯೋಗ್ಯವಲ್ಲ. ಏಕೆ ಶೋಕಮಾಡಬಾರದೆಂದರೆ, ದೇಹವು ನಾಶವಾಗುವ ಕಾರಣದಿಂದ ನಿನಗೆ ದುಃಖವೋ? ಚೇತನವು ನಾಶವಾಗುವ ಕಾರಣದಿಂದ ದುಃಖವೋ? ಎರಡುರೀತಿಯಿಂದಲೂ ದುಃಖವು ಕೂಡುವದಿಲ್ಲವೆಂದು ಶ್ರೀಕೃಷ್ಣನು ಹೇಳುತ್ತಾನೆ. ದೇಹಸ್ಯ — ಶರೀರಕ್ಕೆ, ಸರ್ವಥಾನಾಶಾತ್ — ಯುದ್ಧಾದಿಕಾರಣವಿಲ್ಲವಾದರೂ ನಿಶ್ಚಯವಾಗಿಯೂ ನಾಶವಾಗುವದರಿಂದ, ಚೇತನಸ್ಯ — ಜೀವನಿಗೆ, ಅನಾಶಾತ್ — ನಿತ್ಯತ್ವವಿರುವದರಿಂದ, ನಾಶವಿಲ್ಲದಿರುವದರಿಂದಲೂ, ದುಃಖವುಕೂಡುವ್ವದಿಲ್ಲ. ಹಾಗಾದರೆ, ನಾನು ಯುದ್ಧ ಮಾಡಿದರೆ ಬಂಧುಗಳ ದೇಹನಾಶವಾಗುವುದು, ಯುದ್ಧಮಾಡದಿದ್ದರೆ ದೇಹನಾಶವಾಗುವುದಿಲ್ಲ. ಆದ್ದರಿಂದ ಯುದ್ಧವು ಬಂಧುಗಳ ದೇಹನಾಶಕ್ಕೆ ಕಾರಣವಾದ್ದರಿಂದ ಮಾಡುವದಿಲ್ಲವೆಂಬ ಅರ್ಜುನನ ಶಂಕೆಗೆ ಉತ್ತರವನ್ನು ಶ್ರೀಕೃಷ್ಣನು ಹೇಳುತ್ತಾನೆ. ಸೃಷ್ಟಿಸ್ಥಿತ್ಯಪ್ಯಯಾಜ್ಞಾನ ಬಂಧ ಮೋಕ್ಷಪ್ರವೃತ್ತಯಃ – ಸರ್ಗವು, ಪಾಲನೆ, ನಾಶ, ಅಜ್ಞಾನ, ಮತ್ತು ನಿಯಮನವು ಇದೆಲ್ಲವೂ, ಬ್ರಹ್ಮೇಶಾದಿಕ್ಷರಸ್ಯಚ— ಚತುರ್ಮುಖ ಬ್ರಹ್ಮರುದ್ರರೇ ಮೊದಲಾಗಿ ಉಳ್ಳ ಶರೀರನಾಶವುಳ್ಳ (ಕ್ಷರ)ಪುರುಷರಿಗೆ,ಅಕ್ಷರ ಪ್ರಕೃತೇಶ್ಚೈವ— ಶರೀರನಾಶವಿಲ್ಲದಿರುವ ಲಕ್ಷ್ಮೀದೇವಿಗೂ ಕೂಡ ಯಥಾಯೋಗ್ಯವಾಗಿ, ಮತ್ತ ಏವ — ನನ್ನಿಂದಲೇ, ಭವಂತಿ ಆಗುತ್ತವೆ. ಅನ್ಯತಃ — ಇತರ ಪುರುಷರಿಂದ, ನಚ ಆಗುವುದಿಲ್ಲ, ॥೫॥ ॥೬॥ ॥೭॥

ಅಥ— ಹಾಗಾದರೆ ನಿನಗೂ ಸೃಷ್ಟ್ಯಾದಿಗಳನ್ನು ಮಾಡತಕ್ಕವನು ಬೇರೊಬ್ಬನು ಇದ್ದಾನೋ ಎಂದರೆ ಇಲ್ಲವೆನ್ನುತ್ತಾನೆ.

ನಮೇಕುತಶ್ಚಿತ್ಸ್ವರ್ಗಾದ್ಯಾಃ ಸ್ವಾತಂತ್ರ್ಯಾದ್ಗುಣಪೂರ್ತಿತಃ ॥
ಅತಃ ಸಮಾಧಿಕಾಭಾವಾತ್ಸರ್ವಂ ಮದ್ವಶಮೇವಚ ॥೮॥

ಸ್ವಾತಂತ್ರ್ಯಾತ್ — ಸ್ವರೂಪ, ಪ್ರಮಿತಿ,ಪ್ರವೃತ್ತಿಸತ್ತಾಗಳಲ್ಲಿ ಪರಾಪೇಕ್ಷೆಇಲ್ಲದಿರುವದರಿಂದ, ಗುಣಪೂರ್ತಿತಃ— ಗುಣಗಣಪೂರ್ಣತೆ ಇರುವದರಿಂದಲೂ, ಅತಃ — ಈ ಗುಣಪೂರ್ಣತೆಇರುವದರಿಂದಲೇ, ಸಮಾಧಿಕಾಭಾವಾತ್ — ಸದೃಶನೂ

ಉತ್ತಮನೂ ಇಲ್ಲದ್ದರಿಂದಲೂ, ಸರ್ವಂ–ಎಲ್ಲವೂ, ಮದ್ವಶಮೇವ – ನನ್ನ ಅಧೀನದಲ್ಲೇ ಇರತಕ್ಕದ್ದು. ಅತಃ–ಎಲ್ಲವೂ ನನ್ನ ಅಧೀನದಲ್ಲಿರುವುದರಿಂದ, ಮೇ— ನನಗೆ, ಕುತಶ್ಚಿತ್ – ಯಾವನಿಂದಲೂ, ಸರ್ಗಾದ್ಯಾಃ – ಸೃಷ್ಟಿಯೇ ಮೊದಲಾದವುಗಳು, ನೈವ—ಇಲ್ಲವೇ ಇಲ್ಲ. ॥೮॥

ಜ್ಞಾತ್ವೈಷಾಂ ನಿಧನಾದ್ಯಂಚ ಜೀವಾದೇರಸ್ವತಂತ್ರತಾಂ ॥
ಅಸ್ವಾತಂತ್ರ್ಯಾನ್ನಿವೃತ್ತೌಚ ಮಾಮನುಸ್ಮರ ಯುಧ್ಯಚ ॥೯॥

ಏಷಾಂ – ಈ ಬಂಧುಗಳ, ನಿಧನಾದ್ಯಂಚ – ಸಂಹಾರ, ಸೃಷ್ಟಿಮೊದಲಾದದ್ದನ್ನು ಕೂಡ ನನ್ನ ಅಧೀನವನ್ನಾಗಿ, ಜ್ಞಾತ್ವಾ – ತಿಳಿದು, ಜೀವಾದೇಃ — ಚೇತನಾಚೇತನಾತ್ಮಕವಾದ ಜಗತ್ತಿಗೆ, ಅಸ್ವತಂತ್ರತಾಂ — ಸ್ವಾತಂತ್ರ್ಯಾಭಾವವನ್ನು, ಜ್ಞಾತ್ವಾ – ತಿಳಿದು, ನಿವೃತ್ತೌ — ಯುದ್ಧವನ್ನುಮಾಡದೇ ಹಿಂತಿರುಗಿಹೋಗುವವಿಷಯದಲ್ಲಿ, ಅಸ್ವಾತಂತ್ರ್ಯಾತ್ – ನಿನಗೆ ಸ್ವಾತಂತ್ರ್ಯವಿಲ್ಲದಿರುವದರಿಂದ, ಯುಧ್ಯಚ — ಯುದ್ಧವನ್ನುಮಾಡು. ಮಾಂ — ನನ್ನನ್ನು, ಅನುಸ್ಮರ — ನನ್ನಲ್ಲಿದ್ದು ಯುದ್ಧಮಾಡುವವನು ಶ್ರೀಹರಿಯು ಎಂದುಸ್ಮರಿಸು. ಅಥವಾ ದುಷ್ಟಸಂಹಾರವು ಶ್ರೀಹರಿಯಪೂಜೆ ಎಂದುಸ್ಮರಿಸು. ॥೯॥

ಅವ – 'ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿಮಾನವಃ' ಎಂಬುದನ್ನು ವಿವರಿಸುತ್ತಾನೆ.

ಯೇತು ಸರ್ವಾಣಿಕರ್ಮಾಣಿಮಯಿಸನ್ಯಸ್ಯಮತ್ಪರಾಃ ॥
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥೧೦॥
ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರ ಸಾಗರಾತ್ ॥
ಭವಾಮಿ ನಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಂ ॥೧೧॥

ಮತ್ಪರಾಃ – ನಾನೇಸರ್ವೋತ್ತಮನೆಂಬ ಬುದ್ಧಿಯುಳ್ಳ, ಯೇ – ಯಾರು, ಸರ್ವಾಣಿ – ಎಲ್ಲಾ, ಕರ್ಮಾಣಿ – ಕೆಲಸಗಳನ್ನು, ಮಯಿ – ನನ್ನಲ್ಲಿ. ಸನ್ಯಸ್ಯ—ಪರಮಾತ್ಮನಪೂಜೆಯಾಗಲಿ ಎಂದು ಸಮರ್ಪಿಸಿ, ಅನನ್ಯೇನೈವ – ವಿಷ್ಣುವಿನಲ್ಲಿರುವಂತೆ ಇತರರಲ್ಲಿಲ್ಲದಿರುವ, ಯೋಗೇನ – ಭಕ್ತಿರೂಪಉಪಾಯದಿಂದ, ಅಥವಾ ಇತರ ವಿಷಯಕವಲ್ಲದಿರುವ ಮನೋಯೋಗದಿಂದಲೇ, ಮಾಂ — ನನ್ನನ್ನು, ಧ್ಯಾಯಂತಃಸಂತಃ — ಧ್ಯಾನಮಾಡತಕ್ಕವರಾಗಿ, ಉಪಾಸತೇ — ಭಜಿಸುತ್ತಾರೋ, ಮಯ್ಯಾವೇಶಿತಚೇತಸಾಂ — ನನ್ನಲ್ಲಿ ಇಡಲ್ಪಟ್ಟ ಮನಸ್ಸುಳ್ಳ, ತೇಷಾಂ — ಆ ನನ್ನಭಕ್ತರನ್ನು, ಹೇ ಪಾರ್ಥ – ಎಲೋ ಅರ್ಜುನನೇ, ನಚಿರಾತ್ — ಬೇಗನೇ, ಮೃತ್ಯುಸಂಸಾರ ಸಾಗರಾತ್ — ಮರಣಾದಿಗಳುಳ್ಳ ಸಂಸಾರವೆಂಬ ಸಮುದ್ರದಿಂದ, ಸಮುದ್ಧರ್ತಾ – ದಾಟಿಸತಕ್ಕವನು, ಭವಾಮಿ – ಆಗುತ್ತೇನೆ. ॥೧೦॥ ॥೧೧॥

ಮಯಾತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ॥
ಮತ್ಸ್ಥಾನಿಸರ್ವಭೂತಾನಿ ನಚಾಹಂ ತೇಷ್ವವಸ್ಥಿತಃ ॥೧೨॥

ಅವ್ಯಕ್ತಮೂರ್ತಿನಾ – ಕಣ್ಣಿಗೆ ಕಾಣದ ಸ್ವರೂಪವುಳ್ಳ, ಮಯಾ—ನನ್ನಿಂದ, ಇದಂ ಸರ್ವಂ ಜಗತ್ – ಈ ಎಲ್ಲಾ ಜಗತ್ತು, ವ್ಯಾಪ್ತಂ — ನಿಯಮಿಸುವುದಕ್ಕಾಗಿ ವ್ಯಾಪಿಸಲ್ಪಟ್ಟಿದೆ. ಸರ್ವಭೂತಾನಿ – ಎಲ್ಲಾ ಪ್ರಾಣಿಗಳೂ, ಮತ್ಸ್ಥಾನಿ – ನನ್ನಲ್ಲಿ ಆಶ್ರಯಿಸಿರುವವು. ಅಹಂ–ನಾನು, ತೇಷು – ಆ ಭೂತಗಳಲ್ಲಿ, ನಾವಸ್ಥಿತಃ – ಆಶ್ರಯಿಸಿಕೊಂಡಿರುವುದಿಲ್ಲ. ॥೧೨॥

ಸುಪೂರ್ಣಸತ್ಸರ್ವಗುಣದೇಹೋಽಹಂ ಸರ್ವದಾಪ್ರಭುಃ ॥
ಅಸ್ಪೃಷ್ಟಾಖಿಲದೋಷೈಕನಿತ್ಯಸತ್ತನುರವ್ಯಯಃ ॥೧೩॥

ಇತ್ಯುಕ್ತೋವಾಸವಿಃಪ್ರಾಹ ವ್ಯಾಪ್ತಿಂ ತೇದರ್ಶಯೇಶಮೇ ॥೧೪॥

ಸರ್ವದಾ—ಯಾವಾಗಲೂ, ಅಹಂ — ನಾನು, ಸುಪೂರ್ಣಸತ್ಸರ್ವಗುಣದೇಹಃ— ಅತ್ಯಂತ ಪರಿಪೂರ್ಣಗಳಾದ, ನಿರ್ದುಷ್ಟಗಳಾದ, ಎಲ್ಲಾಗುಣಗಳೇ ದೇಹವಾಗಿಉಳ್ಳವನು, ಅಸ್ಪೃಷ್ಟಾಖಿಲದೋಷೈಕಸತ್ತನುಃ— ಪಾರತಂತ್ರ್ಯಾದ್ಯಖಿಲ ದೋಷಗಳ ಸಂಬಂಧವಿಲ್ಲದ, ಏಕ ಪ್ರಕಾರವಾದ, ನಿತ್ಯವಾದ ಶೋಭನವಾದ ಶರೀರವುಳ್ಳವನು. ಅವ್ಯಯಃ—ನಾಶರಹಿತನು. ಆದ್ದರಿಂದಲೇ, ಪ್ರಭುಃ— ಸರ್ವವಿಷಯದಲ್ಲಿಯೂ ಸಮರ್ಥನು, ಇತ್ಯುಕ್ತಃ— ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ, ವಾಸವಿಃ—ಅರ್ಜುನನು, ಹೇ ಈಶ — ಎಲೋ, ಸ್ವಾಮಿಯಾದ ಶ್ರೀಕೃಷ್ಣನೇ. ಮೇ — ನನಗೆ, ತೇ – ನಿನ್ನ, ವ್ಯಾಪ್ತಿಂ — ವ್ಯಾಪ್ತಿಯನ್ನು, ದರ್ಶಯ — ತೋರಿಸು. ಇತಿ — ಎಂದು, ಪ್ರಾಹ—ಹೇಳಿದನು (ವ್ಯಾಪ್ತವಾದ ರೂಪವನ್ನು ತೋರಿಸು ಎಂದು ವಾದಿರಾಜರ ಪಾಠವು) ॥೧೪॥

ಅಥದಿವ್ಯದೃಶಂ ತಸ್ಮೈ ದತ್ವಾ ವ್ಯಾಪ್ತಂ ನಿಜಂವಪುಃ ॥
ದೇಶತಃ ಕಾಲತಶ್ಚೈವ ಪೂರ್ಣಂ ಸರ್ವಗುಣೈಸ್ಸದಾ ॥
ದರ್ಶಯಾಮಾಸ ಭಗವಾನ್ಯಾವತ್ಯರ್ಜುನ ಯೋಗ್ಯತಾ ॥೧೫॥

ಅಥ—ಅರ್ಜುನನು ಹೇಳಿದನಂತರ, ಭಗವಾನ್ — ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು, ತಸ್ಯ – ಆ ಅರ್ಜುನನಿಗೆ, ದಿವ್ಯದೃಶಂ – ದಿವ್ಯದೃಷ್ಟಿಯನ್ನು, ದತ್ವಾ — ಕೊಟ್ಟು, ಸದಾ--ಯಾವಾಗಲೂ, ದೇಶತಃ – ದೇಶದಿಂದಲೂ, ಕಾಲತಃ – ಕಾಲದಿಂದಲೂ, ಸರ್ವಗುಣೈಃ—ಎಲ್ಲಾಗುಣಗಳಿಂದಲೂ, ಪೂರ್ಣಂ – ಪೂರ್ಣವಾದ, ವ್ಯಾಪ್ತಂ – ವ್ಯಾಪ್ತವಾದ, ನಿಜಂ ವಪುಃ – ತನ್ನ ಶರೀರವನ್ನು, ಅರ್ಜುನ ಯೋಗ್ಯತಾ ಯಾವತೀ – ಅರ್ಜುನನಿಗೆ ಪರಮಾತ್ಮನ ರೂಪವನ್ನು ನೋಡಲು ಎಷ್ಟುಯೋಗ್ಯತೆ ಇದೆಯೋ, ತಾವದ್ದರ್ಶಯಾಮಾಸ–ಅವನ ಯೋಗ್ಯತೆಗೆ ಅನುಗುಣವಾದ ರೂಪವನ್ನು ತೋರಿಸಿದನು. ॥೧೫॥

ತತ್ಪ್ರಾರ್ಥಿತಃಪುನಃ ಕೃಷ್ಣಸ್ತದ್ರೂಪಂ ಲೋಕಮಾನತಃ ॥
ಪೂರ್ವವದ್ದರ್ಶಯಾಮಾಸ ಪುನಶ್ಚೈನಮುಶಿಷ್ಟಯತ್ ॥೧೬॥

ಜ್ಞಾನಜ್ಞೇಯಪ್ರಕೃತ್ಯಾದಿ ಜ್ಞಾಪಯನ್ಪುರುಷೋತ್ತಮಃ ॥
ತೇನಾನುಶಿಷ್ಟಃ ಪಾರ್ಥಸ್ತು ಸಶರಂಧನುರಾದದೇ ॥೧೭॥

ಪುನಃ – ತಿರುಗಿ, ತತ್ಪ್ರಾರ್ಥಿತಃ – ಆ ಅರ್ಜುನನಿಂದ ವಾಪ್ತವಾದರೂಪವನ್ನು ಆಚ್ಛಾದನೆಮಾಡು ಎಂದು ಪಾರ್ಥಿಸಿ ಕೊಳ್ಳಲ್ಪಟ್ಟ, ಕೃಷ್ಣಃ— ಶ್ರೀಕೃಷ್ಣನು, ತದ್ರೂಪಂ — ಆ ವ್ಯಾಪ್ತವಾದರೂಪವನ್ನು, ಲೋಕಮಾನತಃ — ದ್ವಾಪರಯುಗದ ಅಂತ್ಯದಲ್ಲಿರುವ ಮನುಷ್ಯರ ಪ್ರಮಾಣದಿಂದ, ಪೂರ್ವವತ್ — ಮೊದಲು ಇದ್ದರೂಪದಂತೆ, ದರ್ಶಯಾಮಾಸ — ತೋರಿಸಿದನು. ಪುನಃ –, ತನ್ನರೂಪವನ್ನು ತೋರಿಸಿದ ನಂತರವೂ, ಪುರುಷೋತ್ತಮಃ — ಪುರುಷಶ್ರೇಷ್ಠನಾದ ಶ್ರೀಕೃಷ್ಣನು, ಜ್ಞಾನಜ್ಞೇಯಪ್ರಕೃತ್ಯಾದಿ – ಜ್ಞಾನವು, ಜ್ಞೇಯವು, ಸ್ವಭಾವ ಇವುಗಳೇ ಮೊದಲಾದ ಪ್ರಪಂಚವು ಸಾತ್ವಿಕ, ರಾಜಸ, ತಾಮಸ, ಭೇದದಿಂದ ಮೂರು ವಿಧವಾಗಿದೆಯೆಂದು, ಜ್ಞಾಪಯನ್ ಸನ್ — ತಿಳಿಸುವವನಾಗಿ, ಏವಂ – ಈ ಅರ್ಜುನನನ್ನು ಅನುಶಿಷ್ಟಯತ್ — ಉಪದೇಶಿಸಿದನು. ತೇನ — ಆ ಶ್ರೀಕೃಷ್ಣನಿಂದ, ಅನುಶಿಷ್ಟಃ— ಶಿಕ್ಷಿಸಲ್ಪಟ್ಟ, ಪಾರ್ಥಸ್ತು – ಅರ್ಜುನನಾದರೂ, ಸಶರಂ – ಬಾಣದಿಂದ ಕೂಡಿದ, ಧನುಃ – ಬಿಲ್ಲನ್ನು, ಆದದೇ— ಹಿಡಿದುಕೊಂಡನು. ॥೧೬॥೧೭॥

ಭಾ. ಆ. ೧-೧೭ ಯುದ್ಧನಿಶ್ಚಯವಾಗಿ,ಪ್ರಾರಂಭವಾಗುವಾಗ ಶ್ರೀಭೀಮಸೇನರಿಂದ ಹಾಗೂ ಭೀಷ್ಮರಿಂದ ರಕ್ಷಿತವಾದ ಬಲಿಷ್ಠವಾದ, ಅಪಾರವಾದ ಆ ಸೈನ್ಯಗಳನ್ನು ನೋಡಿದ ಅರ್ಜುನನು ಶ್ರೀಕೃಷ್ಣಪರಮಾತ್ಮನಿಗೆ ತನ್ನ ರಥವನ್ನು ಎರಡು ಸೇನೆಗಳ ನಡುವೆ ನಿಲ್ಲಿಸಲು ಹೇಳಿದನು: ಪರಮಾತ್ಮನು ಹಾಗೆ ನಿಲ್ಲಿಸಿದನು. ಅರ್ಜುನನು ಎಲ್ಲ ಬಂಧು–ಬಾಂಧವರನ್ನು,

ಗುರು-ಹಿರಿಯರನ್ನು ನೋಡಿ, ಯುದ್ಧದಲ್ಲಿ ಇವರನ್ನು ಕೊಲ್ಲುವದರಿಂದ ಪಾಪ ಬರುವದೆಂಬ ಸಂಶಯವುಳ್ಳವನಾಗಿ, ಬಿಲ್ಲನ್ನು ಕೆಳಗಿಟ್ಟನು. ಯುದ್ಧ ಮಾಡುವದಿಲ್ಲ ಎಂದು ನಿಂತನು. ಆಗ ಸರ್ವಜ್ಞಶಿಖಾಮಣಿಯಾದ ಶ್ರೀಕೃಷ್ಣನು ಅವನಿಗೆ ಉಪದೇಶಿಸಲು ಆರಂಭಿಸಿದನು. (ಆ ಉಪದೇಶವೇ ಶ್ರೀಭಗವದ್ಗೀತಾ. ಅದರ ಸಾರಭಾಗವನ್ನು ಶ್ರೀಮದಾಚಾರ್ಯರು ಸಂಗ್ರಹಿಸಿದ್ದಾರೆ.) ಅದು ಹೀಗಿದೆ. — ಧರ್ಮ, ಜ್ಞಾನಗಳ ರಕ್ಷಣೆಗಾಗಿ, ಅವುಗಳ ನಾಶಕರಾದ ದುಷ್ಟರ ಸಂಹಾರವು ಕ್ಷತ್ರಿಯನಿಗೆ ಮುಖ್ಯಕರ್ತವ್ಯವು. ಅದನ್ನು ಬಿಟ್ಟವನು ಶಾಸ್ತ್ರ ವಿರೋಧಿಯಾಗಿ, ನಿಂದಿತನಾಗಿ, ಅಧೋಗತಿಗೆ ಹೋಗುವನು. ಯಾವನು ಎಲ್ಲವನ್ನೂ ವ್ಯಾಪಿಸಿದ್ದು ಎಲ್ಲ ಚೇತನರ ಪ್ರವೃತ್ತಿಗಳಿಗೂ ಪ್ರೇರಕನಾಗಿರುವನೋ ಅಂತಹ ಶ್ರೀನಾರಾಯಣನನ್ನು ಸ್ವಕರ್ತವ್ಯಗಳ ಆಚರಣೆ ಪೂರ್ವಕ ಸೇವಿಸಿದಾಗಲೇ ಮನುಷ್ಯನು ಮುಕ್ತಿಯನ್ನು ಹೊಂದುತ್ತಾನೆ. ನಿನ್ನ ಕರ್ತವ್ಯ ರೂಪವಾದ ಈ ಯುದ್ಧದಲ್ಲಿ ಬಂಧು ಗುರು-ಹಿರಿಯರ ನಾಶವಾಗಿ ಪಾಪಬರುವದೆಂಬ ಚಿಂತೆಯನ್ನು ಮಾಡಬಾರದು. ಆಗ ಮೋಹದಿಂದಾಗಿ ಕರ್ತವ್ಯ ತ್ಯಾಗ ಮಾಡಿದಂತಾಗುತ್ತದೆ. ಅಷ್ಟೇ ಅಲ್ಲ, ನಿಧನವಾಗುವದು ಯಾರು ? ದೇಹವೋ? ಚೇತನವೋ ? ಯಾರ ನಾಶದಿಂದಾಗಿ, ನೀನು ದುಃಖಪಡುವದು? ಯಾವಕಾರಣದಿಂದಲೂ ನಿನ್ನ ದುಃಖ ಯುಕ್ತವಲ್ಲ. ದೇಹವು ಎಂದಾದರೂ ನಾಶವಾಗುವಂಥದ್ದೇ. ಈಗ ನೀನು ಯುದ್ಧ ಮಾಡದಿದ್ದರೂ ಅದು ನಾಶವನ್ನು ಹೊಂದುವದು. ಆದ್ದರಿಂದ ದೇಹನಾಶವನ್ನು ಬಿಡಿಸಲು ನಿನಗೆ ಶಕ್ಯವಿಲ್ಲ. ಚೇತನವಂತೂ ಎಂದೂ ನಾಶವಾಗುವದೇ ಇಲ್ಲ. ಎಲ್ಲರಿಗೂ ಸೃಷ್ಟಿ, ರಕ್ಷಣ, ಸಂಹಾರ, ಮೊದಲಾದವುಗಳನ್ನು ತಂದುಕೊಡುವವನು (ಸ್ವತಂತ್ರವಾಗಿ) ನಾರಾಯಣರೂಪನಾದ ನಾನೇ ಹೊರತು ಬೇರೆಯವರಲ್ಲ. ಆದ್ದರಿಂದ ನನ್ನಿಂದಾಗಿ ಅವರ ದೇಹನಾಶವಾಗುವದು ಎಂದು ದುಃಖಿಸುವದೂ ಸರಿಯಲ್ಲ. ಯುದ್ಧ ಮಾಡದೇ ಇರಲೂ ನಿನಗೆ ಶಕ್ಯವಿಲ್ಲ. ನನಗೆ ಸೃಷ್ಟ್ಯಾದಿಗಳನ್ನು ಯಾರೂ ಮಾಡುವದಿಲ್ಲ. ನಾನೇ ಸ್ವತಂತ್ರ, ಗುಣಪೂರ್ಣ. ಆದ್ದರಿಂದ ನನ್ನ ಸಮರೂ ಇಲ್ಲ: ಅಧಿಕರಂತೂ ಸುತರಾಂ ಇಲ್ಲ. ಎಲ್ಲವೂ ನನ್ನ ಅಧೀನವೇ. ಆದ್ದರಿಂದ, ದುಷ್ಟಸಂಹಾರ ಕಾರ್ಯವು ಕ್ಷತ್ರಿಯರಿಗೆ ಕರ್ತವ್ಯವು, ಶ್ರೀಹರಿಪೂಜೆಯು, ನನ್ನಲ್ಲಿದ್ದು ಶ್ರೀಹರಿಯೇ ಮಾಡುತ್ತಾನೆ ಎಂದು ಸ್ಮರಿಸುತ್ತಾ ಯುದ್ಧಮಾಡು. ಯಾರು ಸೂಚಿತವಾದ ಕರ್ತವ್ಯಕರ್ಮಗಳನ್ನು ಮೇಲೆ ಹೇಳಿದಂತೆಸ್ಮರಿಸುತ್ತಾ ನನ್ನಲ್ಲಿ ಭಕ್ತಿಪೂರ್ವಕ, ನನ್ನ ಸರ್ವೋತ್ತಮತ್ವ ಜ್ಞಾನ ಪೂರ್ವಕ, ಇತರರಲ್ಲಿ ಮಾಡುವ ಭಕ್ತಿಗಿಂತಲೂ ಅಧಿಕವಾದ ಭಕ್ತಿಯಿಂದ ಮಾಡಿ, ನನಗೆ ಸಮರ್ಪಿಸುವರೋ ಅಂಥವರನ್ನು ನಾನು ಸಂಸಾರ ಸಮುದ್ರದಿಂದ ದಾಟಿಸುತ್ತೇನೆ. ನಾನು ಸರ್ವೋತ್ತಮನೇಕೆಂದರೆ ನನ್ನ ಮಹಿಮೆಯನ್ನು ಹೇಳುವೆನು-ಕೇಳು, "ನಾನು ಈ ಎಲ್ಲ ಜಗತ್ತನ್ನೂ ವ್ಯಾಪಿಸಿದ್ದೇನೆ. ಆದರೆ ಯಾರಿಗೂ ತೋರದೆ ಇರುವೆನು. ನನ್ನನ್ನೇ ಎಲ್ಲ ಚೇತನರು ಆಶ್ರಯಿಸಿದ್ದಾರೆ. ನಾನು ಮಾತ್ರ ಯಾರನ್ನೂ ಆಶ್ರಯಿಸಿಲ್ಲ. ನನ್ನದೇಹವು ಪ್ರಾಕೃತವಲ್ಲ. ಅಪ್ರಾಕೃತವಾದ, ನಿರ್ದೋಷವಾದ, ಸರ್ವಗುಣಗಳೇ ನನ್ನ ದೇಹ. ನನ್ನಲ್ಲಿ ದೋಷ ಲೇಶವೂ ಇಲ್ಲ. ಯಾವಾಗಲೂ ಎಲ್ಲರ ಸ್ವಾಮಿಯು." ಶ್ರೀಕೃಷ್ಣನು ಹೀಗೆ ಹೇಳಿದಾಗ, ಅರ್ಜುನನು ಶ್ರೀಕೃಷ್ಣನ ವ್ಯಾಪ್ತರೂಪವನ್ನು ನೋಡಲು ಇಚ್ಛಿಸಿದಾಗ, ಅವನಿಗೆ ದಿವ್ಯ ದೃಷ್ಟಿಯನ್ನು ಕೊಟ್ಟು, ಅರ್ಜುನನ ಯೋಗ್ಯತಾನುಸಾರವಾಗಿ ಆ ವ್ಯಾಪ್ತರೂಪವನ್ನು ತೋರಿಸಿದನು. ಅದನ್ನು ನೋಡಿದ ಅರ್ಜುನನು ಸ್ತುತಿಸಿ,ಭೀತನಾಗಿ, ಪುನಃ ಮೊದಲಿನ ರೂಪವನ್ನೇ ತೋರಿಸಲು ಪ್ರಾರ್ಥಿಸಿದಾಗ ಹಾಗೆ ಮಾಡಿ ಪುನಃ ಉಪದೇಶ ಮಾಡಿದನು. ಆಗ ಅಜ್ಞಾನದಿಂದ ದೂರನಾದ ಅರ್ಜುನನು ಯುದ್ಧಕ್ಕೆ ಸಿದ್ಧನಾಗಿ ಧನುರ್ಬಾಣಗಳನ್ನು ತಗದುಕೊಂಡನು.

ಅಥವ್ಯೂಢೇಷ್ವನೀಕೇಷು ನದನ್ಭಾಯುಸುತೋಽಭ್ಯಗಾತ್ ॥
ಸಮಿತಿಂ ಧಾರ್ತರಾಷ್ಟ್ರಾಣಾಂ ತೇತಂಸರ್ವೇನ್ಯವಾರಯನ್ ॥೧೮॥

ಅಥ-ಅನಂತರ, ಅನೀಕೇಷು – ಸೈನ್ಯಗಳು, ವ್ಯೂಢೇಷುಸತ್ಸು— ವಿರುದ್ಧವಾಗಿ ನಿಂತಿರುತ್ತಿರಲು, ವಾಯುಸುತಃ— ಭೀಮಸೇನನು, ನದನ್ ಸನ್-ಸಿಂಹನಾದವನ್ನು ಮಾಡುವವನಾಗಿ, ಧಾರ್ತರಾಷ್ಟ್ರಾಣಾಂ-ಕೌರವರ, ಸಮಿತಿಂ-ಸಮೂಹವನ್ನು ಕುರಿತು, ಅಭ್ಯಗಾತ್-ಹೋದನು, ತೇ ಸರ್ವೇ – ಅವರೆಲ್ಲರೂ, ತಂ-ಆ ಭೀಮನನ್ನು, ನ್ಯವಾರಯನ್-ತಡೆದರು. ॥೧೮॥

ಸಸೃಜುಃ ಶರವೃಷ್ಟಿಂಚ ಭೀಮಸೇನಸ್ಯಮೂರ್ಧನಿ ॥
ಕ್ಷಿಪ್ರಂನೈವಪ್ರಹರ್ತವ್ಯಂ ಜ್ಞಾತಿಷುಪ್ರಹರತ್ಸ್ವಪಿ ॥
ಇತ್ಯೇವಾಸ್ಯಹರತ್ಯಸ್ಮಿನ್ ಶತ್ರುಭಿಃಶರವಿಕ್ಷತೇ ॥೧೯॥

ಅಮುಚನ್ ಧಾತ್ರರಾಷ್ಟ್ರೇಷು ಶರವೃಷ್ಟಿಂ ದುರಾಸದಾಂ ॥
ಸೌಭದ್ರಪ್ರಮುಖಾವೀರಾಃ ಸರ್ವೇಪಾಂಡುಸುತಾತ್ಮಜಾಃ ॥೨೦॥

ಕೌರವರು ಭೀಮಸೇನಸ್ಯ — ಭೀಮಸೇನನ, ಮೂರ್ಧನಿ – ತಲೆಯಮೇಲ್ಲಿ, ಶರವೃಷ್ಟಿಂ — ಬಾಣಗಳಮಳೆಯನ್ನು, ಸಸೃಜುಃ – ಸುರಿಸಿದರು. ಜ್ಞಾತಿಷು – ತನ್ನ ವಂಶದವರು, ಪ್ರಹರತ್ಸ್ವಪಿ –ಹೊಡೆಯುತ್ತಿದ್ದರೂ, ಕ್ಷಿಪ್ರಂ – ಕೂಡಲೇ ನೈವಪ್ರಹರ್ತವ್ಯಂ — ತಾನು ಹೊಡೆಯಲೇಬಾರದು, ಇತ್ಯೇವ — ಈ ಅಭಿಪ್ರಾಯದಿಂದಲೇ, ಶತ್ರುಭಿಃ — ಶತ್ರುಗಳಿಂದ, ಶರವಿಕ್ಷತೇ — ಬಾಣಗಳಿಂದ ಹೊಡೆಯಲ್ಪಟ್ಟ ಅಸ್ಮಿನ್ — ಈ ಭೀಮಸೇನನು, ಅಪ್ರಹರತಿಸತಿ — ತಾನು ಹೊಡೆಯದೇ ಇರುತ್ತಿರಲು, ಸೌಭದ್ರಪ್ರಮುಖಾಃ – ಸುಭದ್ರೆಯ ಮಗನಾದ ಅಭಿಮನ್ಯುವೇ ಪ್ರಧಾನನಾಗಿ ಉಳ್ಳ, ಸರ್ವೇ – ಎಲ್ಲಾ, ವೀರಾಃ – ಪರಾಕ್ರಮಿಗಳಾದ, ಪಾಂಡುಸುತಾತ್ಮಜಾಃ– ಪಾಂಡವರ ಮಕ್ಕಳು ಧಾರ್ತರಾಷ್ಟ್ರೇಷು-ಕೌರವರಲ್ಲಿ, ದುರಾಸದಾಂ– ಸಹಿಸಲಶಕ್ಯವಾದ, ಶರವೃಷ್ಟಿಂ — ಬಾಣಗಳಮಳೆಯನ್ನು, ಅಮುಚನ್ —ಸುರಿಸಿದರು. ॥೧೯॥೨೦॥

ಅಪೀಡಯಂಸ್ತಾನ್ ಶಸ್ತ್ರೌಘೈರ್ಧಾರ್ತರಾಷ್ಟ್ರಾಃ ಸಮಂತತಃ ॥ ॥೨೧॥

ರರಕ್ಷತಾನ್ವಾಯುಸುತೋ ವಿಸೃಜನ್ ಶರಸಂಚಯಾನ್ ॥
ತತ್ರಭೀಮಶರೈರ್ನುನ್ನಾ ಧಾರ್ತರಾಷ್ಟ್ರಾಃ ಸಮಂತತಃ ॥೨೨॥

ಭಗ್ನಾಂಸ್ತಾನಥಗಾಂಗೇಯೋ ದಿವ್ಯಾಸ್ತ್ರವಿದಧಾರಯತ್ ॥
ಅಥ ದ್ವಂದ್ವಾನಿಯುದ್ಧಾನಿಬಭೂವುರ್ವಿಜಿಗೀಷತಾಂ ॥೨೩॥

ಧಾರ್ತರಾಷ್ಟ್ರಾಃ – ಕೌರವರು, ತಾನ್— ಆ ಪಾಂಡವರ ಮಕ್ಕಳನ್ನು, ಶಸ್ತ್ರೌಘೈಃ – ಬಾಣಗಳಸಮೂಹಗಳಿಂದ ಸಮಂತತಃ – ಸುತ್ತುಮುತ್ತಲೂ, ಅಪೀಡಯನ್ —ಪೀಡಿಸಿದರು. ವಾಯುಸುತಃ – ಭೀಮಸೇನನು, ಶರಸಂಚಯಾನ್ – ಬಾಣಗಳ ಸಮೂಹಗಳನ್ನು, ವಿಸೃಜನ್‌ಸನ್ –ಬಿಡತಕ್ಕವನಾಗಿ, ತಾನ್– ಆ ಅಭಿಮನ್ಯುಮೊದಲಾದವರನ್ನು, ರರಕ್ಷ– ಪಾಲಿಸಿದನು. ತತ್ರ — ಆಗ, ಧಾರ್ತರಾಷ್ಟ್ರಾಃ— ಕೌರವರು, ಸಮಂತತಃ – ಸುತ್ತಮುತ್ತಲೂ, ಭೀಮಶರೈಃ – ಭೀಮನಬಾಣಗಳಿಂದ, ನುನ್ನಾಃ – ಓಡಿಸಲ್ಪಟ್ಟವರಾದರು. ಅಥ— ಅನಂತರ, ದಿವ್ಯಾಸ್ತ್ರವಿತ್ — ದಿವ್ಯವಾದ ಅಸ್ತ್ರವನ್ನು ತಿಳಿದಿರುವ, ಗಾಂಗೇಯಃ – ಗಂಗಾಪುತ್ರರಾದಭೀಷ್ಮರು, ಭಗ್ನಾನ್ – ಪರಾಜಿತರಾದ, ತಾನ್ – ಆ ಕೌರವರನ್ನು, ಅಧಾರಯತ್ – ನಿಲ್ಲಿಸಿದರು. ವಿಜಿಗೀಷತಾಂ – ಅನ್ಯೋನ್ಯವಾಗಿ ಗೆಲ್ಲಲಿಚ್ಛೆಯುಳ್ಳ ಕುರುಪಾಂಡವರಿಗೆ, ದ್ವಂದ್ವಾನಿ ಯುದ್ಧಾನಿ —ದ್ವಂದ್ವಯುದ್ಧಗಳು, ಬಭೂವುಃ— ಆದವು. ॥೨೧॥ ॥೨೨॥ ॥೨೩॥

ಭಾ. ಅ. ೧೪—೨೩ ನಂತರ ಯುದ್ಧಕ್ಕಾಗಿ ಎರಡುಸೈನ್ಯಗಳೂ ಸಿದ್ಧವಾಗಿ ನಿಂತಿರುವಾಗ ಶ್ರೀಭೀಮಸೇನದೇವರು ಗರ್ಜಿಸುತ್ತಾ ಯುದ್ಧಕ್ಕಾಗಿ ಹೊರಟರು. ಆಗ ಅವರನ್ನು ಎಲ್ಲ ಕೌರವರೂ ಸೇರಿ ತಡೆದರು. ತಲೆಯಮೇಲೆ ಶರವೃಷ್ಟಿಯನ್ನು ಮಾಡಿದರು. ಅವರೆಲ್ಲ ಹಾಗೆ ಮಾಡಿದರೂ ಕೂಡ, ಶ್ರೀಭೀಮಸೇನದೇವರು ಒಮ್ಮೆಲೇ ಹೊಡೆಯಬಾರದು ಎಂದೇ ಸುಮ್ಮನಿದ್ದರು. ಆಗ ಅಭಿಮನ್ಯು ಮೊದಲಾದ ಪಾಂಡವರ ಮಕ್ಕಳು ಕೌರವರ ಮೇಲೆ ಅಸಹ್ಯವಾದ ಬಾಣವೃಷ್ಟಿಯನ್ನು ಮಾಡಿದರು. ಆಗ ಕೌರವರು ಆ ಪಾಂಡವಪುತ್ರರನ್ನು ಪೀಡಿಸುತ್ತಿರಲು ಭೀಮಸೇನದೇವರು ಬಾಣಗಳನ್ನು ಸುರಿಸಿ ಆ ಮಕ್ಕಳನ್ನೆಲ್ಲ ರಕ್ಷಿಸಿದರು. ಆಗ ಕೌರವರು ಶ್ರೀಭೀಮರ ಬಾಣಗಳಿಂದಪೀಡಿತರಾಗಿ ಓಡಿದರು.ಆಗ ಅವರನ್ನು ಭೀಷ್ಮರು ನಿಲ್ಲಿಸಿದರು. ಪರಸ್ಪರಜಯಾಶೆಯಿಂದ ಪುನಃ ಯುದ್ಧಗಳು ನಡೆದವು.

ಅವ –/ ದ್ವಂದ್ವಯುದ್ಧವನ್ನೇವಿಶದೀಕರಿಸುತ್ತಾರೆ –

ದ್ರೋಣಪಾರ್ಷತಯೋಶ್ಚೈವ ಶೈನೇಯಕೃತವರ್ಮಣೋಃ ॥
ದುಃಶಾಸನೇನವೀರಸ್ಯಮಾದ್ರೇಯಸ್ಯಯುವೀಯಸಃ ॥೨೪॥

ನಕುಲಸ್ಯ ವಿಕರ್ಣಸ್ಯ ಕಾಷ್ಣೇ೯ಯೈರ್ದುರ್ಮುಖಾದಿನಾಂ ॥
ವೃತ್ತೇಸ್ವಂದ್ವೇಮಹಾಯುದ್ಧೇ ತತ್ರಧರ್ಮಜಪಕ್ಷಗಾಃ ॥
ಜಿತಾವಿನೈವ ಶೈನೇಯಂಸೋಽಜಯದ್ಧೃದಿಕಾತ್ಮಜಂ ॥೨೫॥

ದ್ರೋಣಪಾರ್ಷತಯೋಶ್ಚೈವ — ದ್ರೋಣಾಚಾರ್ಯರಿಗೂ ದ್ರುಪದರಾಜನಿಗೂ, ಶೈನೇಯಕೃತವರ್ಮಣೋಃ — ಸಾತ್ಯಕಿಗೂ ಕೃತವರ್ಮನಿಗೂ, ವೀರಸ್ಯ — ಪರಾಕ್ರಮಿಯಾದ, ಯವೀಯಸ್ಯ - ಸಣ್ಣವನಾದ, ಮಾದ್ರೇಯಸ್ಯ — ಮಾದ್ರೀಪುತ್ರನಾದ ಸಹದೇವನಿಗೆ, ದುಃಶಾಸನೇನ — ದುಃಶಾಸನನಿಂದಲೂ, ನಕುಲಸ್ಯ ವಿಕರ್ಣಸ್ಯ — ನಕುಲನಿಗೂ ವಿಕರ್ಣನಿಗೂ, ದುರ್ಮುಖಾದಿನಾಂ — ದುರ್ಮುಖನೇ ಮೊದಲಾದವರಿಗೆ, ಕಾಷ್ಣೇ೯ಯೈಃ — ದ್ರೌಪದೀಪುತ್ರರಿಂದ, ದ್ವಂದ್ವೇ— ಅನ್ಯೋನ್ಯವಾಗಿ, ಮಹಾಯುದ್ಧೇ— ಮಹತ್ತಾದಯುದ್ಧವು, ವೃತ್ತೇಸತಿ — ಉಂಟಾಗುತ್ತಿರಲು, ತತ್ರ — ಆ ದ್ವಂದ್ವಯುದ್ಧದಲ್ಲಿ, ಧರ್ಮಜಪಕ್ಷಗಾಃ—ಧರ್ಮರಾಜನ ಪಕ್ಷದಲ್ಲಿರತಕ್ಕವರು, ಶೈನೇಯಂ ವಿನೈವ — ಸಾತ್ಯಕಿಯೊಬ್ಬನನ್ನು ಬಿಟ್ಟು, ಜಿತಾಃ — ಇತರರು ಪರಾಜಿತರಾದರು. ಸಃ — ಆ ಸಾತ್ಯಕಿಯು, ಹೃದಿಕಾತ್ಮಜಂ — ಹೃದಿಕನಮಗನಾದ ಕೃತವರ್ಮನನ್ನು, ಅಜಯತ್ — ಗೆದ್ದನು. ॥೨೪॥೨೫॥

ಅಥಭೀಷ್ಮದ್ರೋಣಮುಖೈರ್ಭಗದತ್ತಾದಿಭಿಸ್ತಥಾ ॥
ವಿದ್ರಾವ್ಯಮಾಣಂಸ್ವಬಲಂ ಸ್ಥಾಪಯಾಮಾಸವಾರುತಿಃ ॥೨೬॥

ಅಥ — ಅನಂತರ, ಭೀಷ್ಮದ್ರೋಣ ಮುಖೈಃ— ಭೀಷ್ಮ,ದ್ರೋಣರೇ ಪ್ರಧಾನರಾಗಿ ಉಳ್ಳವರಿಂದಲೂ, ತಥಾ— ಹಾಗೆಯೇ, ಭಗದತ್ತಾದಿಭಿಃ — ಭಗದತ್ತನೇ ಮೊದಲಾದವರಿಂದಲೂ, ವಿದ್ರಾವ್ಯಮಾಣಂ — ಓಡಿಸಲ್ಪಟ್ಟ, ಸ್ವಬಲಂ — ತನ್ನ ಸೈನ್ಯವನ್ನು, ವಾರುತಿಃ - ಭೀಮಸೇನನು ಸ್ಥಾಪಯಾಮಾಸ — ನಿಲ್ಲಿಸಿದನು. ॥೨೬॥

ದ್ರೋಣಂಚಭಗದತ್ತಂಚ ಕೃಪಂ ದುರ್ಯೋಧನಂತಥಾ ॥
ಕೇವಲಂ ಬಾಹುವೀರ್ಯೇಣ ವ್ಯಜಯದ್ಭೀಮವಿಕ್ರಮಃ ॥೨೭॥

ಭೀಮವಿಕ್ರಮಃ — ಭಯಂಕರವಾದ ಪರಾಕ್ರಮವುಳ್ಳ ಭೀಮಸೇನನು, ದ್ರೋಣಂಚ— ದ್ರೋಣನನ್ನು, ಭಗದತ್ತಂಚ— ಭಗದತ್ತನನ್ನೂ ಕೂಡ, ಕೃಪಂ — ಕೃಪಾಚಾರ್ಯರನ್ನು, ತಥಾ—ಹಾಗೆಯೇ, ದುರ್ಯೋಧನಂ— ದುರ್ಯೋಧನನನ್ನು, ಕೇವಲಂ ಬಾಹುವೀರ್ಯೇಣ — ಶಸ್ತ್ರಾಸ್ತ್ರಗಳಿಲ್ಲದೆ ಭುಜಗಳಪರಾಕ್ರಮದಿಂದಲೇ, ವ್ಯಜಯತ್ — ಗೆದ್ದನು. ॥೨೭॥

ಹತ್ವೋತ್ತರಂಮದ್ರರಾಜೋವ್ಯದ್ರಾವಯದನೀಕಿನೀಂ ॥
ಅಥಭೀಷ್ಮಮುದೀರ್ಣಾಸ್ತ್ರಂ ದ್ರಾವಯಂತಂವರೂಥಿನೀಂ ॥೨೮॥
ಸಸೌಮದತ್ತಿಂ ಸೌಭದ್ರಸಹಾಯೋಽರ್ಜುನ ಆಸದತ್ ॥
ಸೌಭದ್ರಂ ತತ್ರ ವಿಕ್ರಾಂತಮತೀತ್ಯಾದ್ಯುಸರಿತ್ಸುತಃ ॥೨೯॥
ದ್ರಾವಯಾಮಾಸ ಪಾಂಚಾಲಾನ್ಪಶ್ಯತಃಸವ್ಯಸಾಚಿನಃ ॥೩೦॥

ಮದ್ರರಾಜಃ — ಶಲ್ಯನು, ಉತ್ತರಂ — ವಿರಾಟನಮಗನಾದ ಉತ್ತರನನ್ನು, ಹತ್ವಾ — ಕೊಂದು, ಅನೀಕಿನೀಂ — ಪಾಂಡವರ ಸೈನ್ಯವನ್ನು, ವ್ಯದ್ರಾವಯತ್ — ಓಡಿಸಿದನು. ಅಥ — ಅನಂತರ, ಸೌಭ್ರದಸಹಾಯಃ— ಅಭಿಮನ್ಯುವಿಗೆ ಸಹಾಯಕನಾದ, ಅರ್ಜುನಃ — ಅರ್ಜುನನು, ಸಸೌಮದತ್ತಿಂ — ಸೋಮದತ್ತನ ಮಗನಾದ ಭೂರಿಶ್ರವಸ್ಸಿಂದ ಕೂಡಿದ,

ವರೂಥಿನೀಂ – ಸೈನ್ಯವನ್ನು, ದ್ರಾವಯಂತಂ— ಓಡಿಸತಕ್ಕ, ಉದೀರ್ಣಾಸ್ತ್ರಂ – ಉಕ್ಕಟ್ಟವಾದ ಅಸ್ತ್ರವುಳ್ಳ, ಭೀಷ್ಮಂ – ಭೀಷ್ಮರನ್ನು, ಆಸದತ್ – ಹೊಂದಿದನು. ದ್ಯುಸರಿತ್ಸುತಃ – ಗಂಗೆಯಮಗನಾದ ಭೀಷ್ಮನು, ತತ್ರ – ಆ ಯುದ್ಧದಲ್ಲಿ, ವಿಕ್ರಾಂತಂ – ಪರಾಕ್ರಮಿಯಾದ, –ಸೌಭದ್ರಂ ಅಭಿಮನ್ಯುವನ್ನು, ಅತೀತ್ಯ – ಅತಿಕ್ರಮಿಸಿ, (ಲಕ್ಷೀಕರಿಸದೆ), ಸವ್ಯಸಾಚಿನಃ— ಅರ್ಜುನನು ಪಶ್ಯತಃಸತಃ— ನೋಡುತ್ತಿರುವಾಗಲೇ, ಪಾಂಚಾಲಾನ್ — ಪಾಂಚಾಲರನ್ನು, ದ್ರಾವಯಾಮಾಸ – ಓಡಿಸಿದನು. ॥೨೮॥೨೯॥೫೦॥

ತಸ್ಯವಿಕ್ರಮಮಾಲಕ್ಷ್ಯಪಾರ್ಥಂ ತದೌ ರವಾನುಗಂ ॥
ದೃಷ್ಟ್ವಾಯುಧಿಷ್ಠಿರೋರಾಜಾಕ್ರುದ್ಧಃ ಸೇನಾಮುಪಾಹರತ್ ॥೫೧॥

ತಸ್ಯ – ಆ ಭೀಷ್ಮಾಚಾರ್ಯರ, ವಿಕ್ರಮಂ – ಪರಾಕ್ರಮವನ್ನು, ಆಲಕ್ಷ್ಯ – ನೋಡಿ, ತದೌ ರವಾನುಗಂ – ಆ ಭೀಷ್ಮಾಚಾರ್ಯರ ಮೇಲಿನ ಗೌರವಬುದ್ಧಿಯಿಂದ ಅವರಿಗೆ ಅನುಕೂಲನಾದ, ಪಾರ್ಥಂ – ಅರ್ಜುನನನ್ನು, ದೃಷ್ಟ್ವಾ-ನೋಡಿ, ರಾಜಾ ಯುಧಿಷ್ಠಿರಃ – ರಾಜನಾದ ಯುಧಿಷ್ಠಿರನು, ಕ್ರುದ್ಧಃಸನ್ – ಕೋಪಗೊಂಡವನಾಗಿ, ಸೇನಾಂ – ಸೈನ್ಯವನ್ನು, ಅಪಾಹರತ್ – ಶಿಬಿರವನ್ನು ಕುರಿತು ಹಿಂತಿರುಗಿಸಿದನು. ॥೫೧॥

ರೌತ್ರ್ಯಾಯುಧಿಷ್ಠಿರಶ್ಚಿಂತಾಮಾಪ್ಯ ಪಾರ್ಥಂ ವ್ಯಗರ್ಹಯತ್ ॥
ಸಕೃಷ್ಣಾದ್ಯೈಃ ಸಾಂತ್ವಿತಶ್ಚ ಪುನರ್ಯುದ್ಧಾಯ ನಿರ್ಯಯೌ ॥೫೨॥

ರಾತ್ರ್ಯೌ–ರಾತ್ರಿಯಲ್ಲಿ, ಯುಧಿಷ್ಠಿರಃ–ಧರ್ಮರಾಜನು, ಚಿಂತಾಂ – ದುಃಖವನ್ನು, ಆಪ್ಯ – ಹೊಂದಿ, ಪಾರ್ಥಂ– ಅರ್ಜುನನನ್ನು, ವ್ಯಗರ್ಹಯತ್ – ನಿಂದಿಸಿದನು, ಸಃ –ಆ ಅರ್ಜುನನು, ಕೃಷ್ಣಾದ್ಯೈಃ – ಕೃಷ್ಣನೇ ಮೊದಲಾದವರಿಂದ, ಸಾಂತ್ವಿತಃಸನ್ – ಸಮಾಧಾನೀಕರಿಸಲ್ಪಟ್ಟವನಾಗಿ, ಪುನಃ – ಮತ್ತೆ, ಯುದ್ಧಾಯ – ಯುದ್ಧಕ್ಕೋಸ್ಕರ, ನಿರ್ಯಯೌ— ಹೋದನು. ॥೫೨॥

ಏವಂ ಭೀಷ್ಮೋದಶಾಹಾನಿ ಸೇನಾಪತ್ಯಂ ಚಕಾರ ಹ ॥
ಕೃತ್ವಾತು ಪಾಂಡವೈರ್ಯುದ್ಧಂ ತತ್ಕರ್ತುಮಕೃತೋಪಮಂ ॥೫೩॥

ಕರ್ಣೋರ್ಧರಥ ಇತ್ಯುಕ್ತ್ವಾ ತಾವದುದ್ಯಾತ್ಪ್ರಯಾಪಿತಃ ॥
ಯಾವತ್ತ್ವಂ ಯೋತ್ಸ್ಯಸೇ ತಾವನ್ನಯೋತ್ಸ್ಯಾಮೀತಿನಿರ್ಗತೇ ॥೫೪॥

ಕರ್ಣೇಽಯುತರಥಾನಾಂಚ ನಿತ್ಯಶೋ ವಧಮಾಹವೇ ॥
ಪ್ರತಿಜಜ್ಞೇಽಕರೋತ್ತಚ್ಚ ಪುನಶ್ಚಾಸ್ತ್ರವಿದಾಂವರಃ ॥೫೫॥

ಏವಂ – ಈ ರೀತಿಯಾಗಿ, ಭೀಷ್ಮಃ— ಭೀಷ್ಮರು, ದಶಾಹಾನಿ— ಹತ್ತುದಿವಸಗಳವರೆಗೆ, ಸೇನಾಪತ್ಯಂ – ಸೇನಾಧಿಪತಿತ್ವವನ್ನು, ಚಕಾರ—ಮಾಡಿದರು. ಪಾಂಡವೈಃ – ಪಾಂಡವರಿಂದ, ಯುದ್ಧಂ–ಯುದ್ಧವನ್ನು, ಕೃತ್ವಾ – ಮಾಡಿ, ತತ್– ಆ ತನ್ನ ಯುದ್ಧವನ್ನು, ಅಕೃತೋಪಮಂ – ಇನ್ನೊಬ್ಬರಿಂದ ಮಾಡಲ್ಪಡದ ಉಪಮಾನವುಳ್ಳ ಅಂದರೆ–ಅಸದೃಶವಾದದ್ದನ್ನಾಗಿ ಕರ್ತುಂ – ಮಾಡುವದಕ್ಕೋಸ್ಕರ, ಕರ್ಣಃ – ಕರ್ಣನು, ಅರ್ಧರಥಃ— ಅತಿರಥ, ಮಹಾರಥ, ಅರ್ಧರಥ ಇವರಲ್ಲಿ ಅರ್ಧರಥನು, ಇತಿ—ಎಂದು, ಉಕ್ತ್ವಾ ಹೇಳಿ, ತಾವತ್—ತನ್ನ ಸೇನಾಪತ್ಯವಿರುವತನಕ, ಯುದ್ಧಾತ್ – ಯುದ್ಧದಿಂದ, ಪ್ರಯಾಪಿತಃ— ಹೊರಡಿಸಲ್ಪಟ್ಟನು. ಎಲೋ ಭೀಷ್ಮರೇ, ಯಾವತ್ – ಎಷ್ಟರತನಕ, ತ್ವಂ – ನೀವು, ಯೋತ್ಸ್ಯಸೇ – ಯುದ್ಧ ಮಾಡುವಿರೋ, ತಾವತ್–ಅಷ್ಟರತನಕ, ನ ಯೋತ್ಸ್ಯಾಮಿ –ನಾನು ಯುದ್ಧ ಮಾಡುವದಿಲ್ಲ, ಇತಿ–ಎಂದು ಹೇಳಿ, ಕರ್ಣೇ—

ಕರ್ಣನು, ನಿರ್ಗತೇಸತಿ – ಹೋಗುತ್ತಿರಲು, ಅಸ್ತ್ರ ವಿದಾಂ— ಅಸ್ತ್ರಜ್ಞರಲ್ಲಿ, ವರಃ – ಶ್ರೇಷ್ಠರಾದ ಭೀಷ್ಮರು, ನಿತ್ಯಶಃ—ಪ್ರತಿ ನಿತ್ಯವೂ, ಆಹವೇ – ಯುದ್ಧದಲ್ಲಿ,ಅಯುತರಥಾನಾಂ—ಹತ್ತುಸಾವಿರ ಸಂಖ್ಯಾಕ ರಥಿಕರ, ವಧಂ – ನಾಶವನ್ನು,ಪ್ರತಿಜಜ್ಞೇ– ಪ್ರತಿಜ್ಞಾ ಮಾಡಿದರು. ತತ್ – ಆ ಪ್ರತಿಜ್ಞಾ ಮಾಡಿದ್ದನ್ನು, ಅಕರೋತ್ – ಮಾಡಿದರು, ಪುನಶ್ಚ – ಪ್ರತಿಜ್ಞಾತಕ್ಕಿಂತ ಹೆಚ್ಚು ನಾಶವನ್ನು ಮಾಡಿದರು. ॥೩೩॥ ॥೩೪॥ ॥೩೫॥

ಭಾ.ಆ. ೨೪—೩೫ ದ್ರೋಣಾಚಾರ್ಯ – ದ್ರುಪದರಿಗೆ, ಸಾತ್ಯಕಿ – ಕೃತವರ್ಮರಿಗೆ ದುಃಶಾಸನ – ಸಹದೇವರಿಗೆ, ವಿಕರ್ಣ – ನಕುಲರಿಗೆ, ದ್ರೌಪದೀಪುತ್ರ – ದುರ್ಮುಖಾದಿ ಕೌರವರಿಗೆ, ಪರಸ್ಪರವಾಗಿ ದ್ವಂದ್ವ ಯುದ್ಧಗಳು ನಡೆದವು. ಇವುಗಳಲ್ಲಿ ಪಾಂಡವಪಕ್ಷೀಯನಾದ ಸಾತ್ಯಕಿಯೊಬ್ಬನು ಮಾತ್ರ ಕೌರವ ಪಕ್ಷೀಯ ಕೃತವರ್ಮನನ್ನು ಸೋಲಿಸಿದನು. ಆದರೆ ಉಳಿದೆಲ್ಲ ಪಾಂಡವ ಪಕ್ಷೀಯರು (ದ್ರುಪದ, ಸಹದೇವ, ನಕುಲ, ದ್ರೌಪದೀಪುತ್ರರು) ತಮ್ಮ ಎದುರಾಳಿಗಳಿಗೆ ಸೋತ್ತಿದ್ದಾರೆ. ಅನಂತರ ಭೀಷ್ಮ, ದ್ರೋಣಾದಿಗಳು ಪಾಂಡವ ಸೈನ್ಯವನ್ನು ಓಡಿಸಿದರು. ಆದರೆ ಶ್ರೀಭೀಮಸೇನದೇವರು ತಡೆದು ನಿಲ್ಲಿಸಿದರು ಮತ್ತು ಕೇವಲ ಬಾಹುಪರಾಕ್ರಮದಿಂದಲೇ ದ್ರೋಣ, ಭಗದತ್ತ, ಕೃಪಾಚಾರ್ಯ, ದುರ್ಯೋಧನರನ್ನು ಗೆದ್ದರು. ಶಲ್ಯರಾಜನು ಉತ್ತರಕುಮಾರನನ್ನು ಕೊಂದು ಪಾಂಡವಸೈನ್ಯವನ್ನು ಓಡಿಸಿದನು. ಇನ್ನೊಂದೆಡೆಗೆ, ಭೂರಿಶ್ರವನಿಂದ ಕೂಡಿಕೊಂಡು ಭೀಷ್ಮರೂ ಪಾಂಡವರ ಸೈನ್ಯವನ್ನು ಓಡಿಸುತ್ತಿದ್ದರು, ಆಗ ಅವರ ಹತ್ತಿರಕ್ಕೆ ಅಭಿಮನ್ಯುಸಹಿತನಾಗಿ ಅರ್ಜುನನು ಬಂದನು. ಆಗ ಭೀಷ್ಮರು ಪರಾಕ್ರಮಿಯಾದ ಅಭಿಮನ್ಯುವನ್ನು ಲಕ್ಷೀಕರಿಸದೇ, ಅರ್ಜುನನು ನೋಡುತ್ತಿರುವಂತೆಯೇ ಪಾಂಚಾಲ ಸೈನ್ಯವನ್ನು ಓಡಿಸಿದರು. ಹೀಗೆ ಭೀಷ್ಮರ ಪರಾಕ್ರಮಕಾರ್ಯವನ್ನೂ, ಮತ್ತು ಅರ್ಜುನನು ಭೀಷ್ಮರಲ್ಲಿದ್ದ ಗೌರವದಿಂದ ಹೆಚ್ಚು ಪ್ರತಿರೋಧ ತೋರಿಸದೇ ಅವರಿಗೆ ಅನುಕೂಲನಾಗಿರುವದನ್ನೂ ನೋಡಿ ಧರ್ಮರಾಜನು ಕ್ರೋಧದಿಂದ ಮತ್ತು ದಿನಸಮಯವು ಮುಗಿದದ್ದರಿಂದ ತನ್ನ ಸೇನೆಯನ್ನು ಶಿಬಿರಕ್ಕೆ ಕಳಿಸಿದನು. ಅಂದಿನ ರಾತ್ರಿಯಲ್ಲಿ ಧರ್ಮರಾಜನು ಚಿಂತೆಗೀಡಾಗಿ, ಅರ್ಜುನನನ್ನು ಅವನ ಯುದ್ಧದ ಬಗ್ಗೆ ನಿಂದಿಸಿದನು. ಶ್ರೀಕೃಷ್ಣನು ಅರ್ಜುನನನ್ನು ಸಮಾಧಾನಪಡಿಸಿದನು. ಪ್ರಾತಃ ಕಾಲದಲ್ಲಿ ಪುನಃ ಯುದ್ಧಕ್ಕೆ ಅರ್ಜುನನು ಹೊರಟನು. ಈ ರೀತಿಯಾಗಿ ಭೀಷ್ಮರು ಹತ್ತುದಿನಗಳ ಪರ್ಯಂತ ಸೇನಾಪತಿಗಳಾಗಿದ್ದರು. ಬೇರೆಯವರಿಗೆ ಮಾಡಲಾಗದ, ಶ್ರೇಷ್ಠಯುದ್ಧವನ್ನು ಮಾಡಿದರು. ಆದಕ್ಕಾಗಿಯೇ, ಇವರು ಕರ್ಣನನ್ನು 'ಅರ್ಧರಥ' ಎಂದು ನಿಂದಿಸಿದರು. ಆಗ ಕರ್ಣನು ನೀವಿರುವವರೆಗೆ ನಾನು ಯುದ್ಧವನ್ನೇ ಮಾಡುವದಿಲ್ಲವೆಂದು ಹೇಳಿ ಹೊರಟುಹೋದನು. ಆಗ, ಭೀಷ್ಮರು ಪ್ರತಿದಿನವೂ (10,000) ಹತ್ತುಸಾವಿರ ರಥಿಕರನ್ನು ಸಂಹರಿಸುವದಾಗಿ ಪ್ರತಿಜ್ಞೆ ಮಾಡಿದರು. ಹಾಗೆಯೇ ಯುದ್ಧದಲ್ಲಿ ಪ್ರತಿಜ್ಞೆ ಪೂರ್ಣಮಾಡುತ್ತಿದ್ದರು.

ಸುಸಮರ್ಥಾವಪಿವಧೇ ತಸ್ಯ ಭೀಮಧನಂಜಯೌ ॥
ಸ್ನೇಹೇನ ಯಂತ್ರಿತೌ ತಸ್ಯಗೌರವಾಚ್ಚಾನ್ವವರ್ತತಾಂ ॥೩೬॥

ಭೀಮಧನಂಜಯೌ – ಭೀಮಾರ್ಜುನರು, ತಸ್ಯ – ಆ ಭೀಷ್ಮರ, ವಧೇ – ನಾಶದಲ್ಲಿ, ಸುಸಮರ್ಥಾವಪಿ— ಅತ್ಯಂತಸಮರ್ಥರಾದರೂ ಕೂಡ, ತಸ್ಯ – ಆ ಭೀಷ್ಮರ, ಸ್ನೇಹೇನ – ಪ್ರೀತಿಯಿಂದ, ಯಂತ್ರಿತೌ ಸಂತೌ – ಬದ್ಧರಾದವರಾಗಿ, ಗೌರವಾಚ್ಚ – ಭೀಷ್ಮಾಚಾರ್ಯರಿಗೆ ಗುರುತ್ವವಿದ್ದ ನಿಮಿತ್ತದಿಂದಲೂ. ಅನ್ವವರ್ತತಾಂ – ಅವರಿಗೆ ಅನುಕೂಲವಾಗಿರುತ್ತಿದ್ದರು ॥೩೬॥

ಬಭೂವುಸ್ತತ್ರಯುದ್ಧಾನಿ ಚಿತ್ರಾಣಿಸುಬಹೂನಿಚ ॥
ತಾನ್ಯಂಬರೇವಿಮಾನಸ್ಥಾಬ್ರಹ್ಮರುದ್ರಪುರಸ್ಸರಾಃ ॥೩೭॥
ಅಪಶ್ಯನ್ದೇವತಾಃಸರ್ವಾಗಂಧರ್ವಾಪ್ಸರಸೋಽಸುರಾ ॥೩೮॥

ತತ್ರ – ಅಲ್ಲಿ, ಸುಬಹೂನಿ – ಬಹಳವಾದ, ಚಿತ್ರಾಣಿ – ಆಶ್ಚರ್ಯವನ್ನುಂಟುಮಾಡತಕ್ಕ, ಯುದ್ಧಾನಿ – ಸಮರಗಳು ಬಭೂವುಃ – ಆದವು. ತಾನಿ – ಆ ಯುದ್ಧಗಳನ್ನು, ಅಂಬರೇ – ಆಕಾಶದಲ್ಲಿ, ವಿಮಾನಸ್ಥಾಃ— ವಿಮಾನಗಳಲ್ಲಿರುವ, ಬ್ರಹ್ಮ

ರುದ್ರಪುರುಸ್ಸರಾಃ— ಬ್ರಹ್ಮರುದ್ರರೇ ಮೊದಲಾಗಿಉಳ್ಳ, ಸರ್ವಾದೇವತಾಃ— ಎಲ್ಲಾದೇವತೆಗಳೂ, ಗಂಧರ್ವಾಪ್ಸರಸಃ— ಗಂಧರ್ವರೂ, ಅಪ್ಸರ ಸ್ತ್ರೀಯರೂ, ಅಸುರಾಃ—ಅಸುರರೂ, ಅಪಶ್ಯನ್ — ನೋಡಿದರು. ॥೩೭॥೩೮॥

ಧೃಷ್ಟದ್ಯುಮ್ನೋಮಹೇಷ್ವಾಸಃ ಪ್ರತಿವ್ಯೂಹ್ಯಾಪಗಾಸುತಂ ॥
ಚಕ್ರೇಯುದ್ಧಾನಿ ಸುಬಹೂನ್ಯಜೇಯಃಶತ್ರುಭೀರಣೇ ॥೩೯॥

ರಣೇ—ಯುದ್ಧದಲ್ಲಿ, ಶತ್ರುಭಿಃ—ಶತ್ರುಗಳಿಂದ, ಅಜೇಯಃ— ಜಯಿಸಲು ಅಶಕ್ಯನಾದ, ಮಹೇಷ್ವಾಸಃ—ಶ್ರೇಷ್ಠ ಧನುಸ್ಸುಳ್ಳ, ಧೃಷ್ಟದ್ಯುಮ್ನಃ— ಧೃಷ್ಟದ್ಯುಮ್ನನು, ಆಪಗಾಸುತಂ — ಗಂಗಾಪುತ್ರಭೀಷ್ಮರನ್ನು, ಪ್ರತಿವ್ಯೂಹ್ಯ —ತಡೆದು, ಸುಬಹೂನಿ ಯುದ್ಧಾನಿ—ಬಹುವಿಧಗಳಾದ ಯುದ್ಧಗಳನ್ನು, ಚಕ್ರೇ—ಮಾಡಿದನು. ॥೩೯॥

ತತ್ರೋದ್ದಧಾರಕೃಷ್ಣೋಪಿ ಫಲ್ಗುನಂಮೃದುಯೋಧಿನಂ ॥
ದೃಷ್ಟ್ವಾಚಕ್ರಂ ತಥೋದ್ಯಮ್ಯಬಾಹುಂ ಭೀಷ್ಮಾಯಜಗ್ಮಿವಾನ್ ॥೪೦॥

ತತ್ರ — ಧೃಷ್ಟದ್ಯುಮ್ನಾದಿಗಳಿಂದ ಯುದ್ಧಸಮಾಪ್ತಿಯಾಗಲು, ಕೃಷ್ಣೋಪಿ— ಒಂದು ಪಕ್ಷದಲ್ಲಿ ಆಯುಧರಹಿತನಾಗಿರುವೆನೆಂದು ಮಾತುಳ್ಳವನಾದರೂ ಶ್ರೀಕೃಷ್ಣನು, ಮೃದುಯೋಧಿನಂ— ಮೆಲ್ಲನೆ ಯುದ್ಧಮಾಡತಕ್ಕ, ಫಲ್ಗುನಂ— ಅರ್ಜುನನನ್ನು, ದೃಷ್ಟ್ವಾ—ನೋಡಿ, ಚಕ್ರಂ-ಸುದರ್ಶನವನ್ನು, ಉದ್ದಧಾರ – ಮೇಲಕ್ಕೆತ್ತಿಹಿಡಿದನು. ತಥಾ- ಹಾಗೆಯೇ, ಭೀಷ್ಮಾಯ—ಭೀಷ್ಮನಿಗೋಸ್ಕರ, ಬಾಹುಂ—ಚಕ್ರವನ್ನು ಹಿಡಿದಕೈಯನ್ನು, ಉದ್ಯಮ್ಯ—ಮೇಲಕ್ಕೆತ್ತಿ, ಜಗಿವಾನ್—ಭೀಷರೊಡನೆ ಯುದ್ಧಕ್ಕಾಗಿ ಹೋದನು. ॥೪೦॥

ತೇನಸ್ತುತೋಗೃಹೀತಶ್ಚಫಲ್ಗುನೇನಪ್ರಣಮ್ಯಚ ॥
ಪ್ರಾರ್ಥಿತೋರಥಮಾರೂಢಃಪುನಶ್ಶಂಖಮುಪೂರಯತ್ ॥೪೧॥

ತೇನ—ಆ ಭೀಷ್ಮರಿಂದ, ಸ್ತುತಃ—ಸ್ತೋತ್ರವಮಾಡಿಸಿಕೊಳ್ಳಲ್ಪಟ್ಟನು. ಫಲ್ಗುನೇನ —ಅರ್ಜುನನಿಂದ, ಪ್ರಣಮ್ಯ— ನಮಸ್ಕರಿಸಿ, ಗೃಹೀತಃ – ಕೈಯಿಂದ ಹಿಡಿಯಲ್ಪಟ್ಟನು. ಪ್ರಾರ್ಥಿತಃ— ಯುದ್ಧವನ್ನು ಮಾಡಬೇಡವೆಂದು ಪ್ರಾರ್ಥಿಸಿಕೊಳ್ಳಲ್ಪಟ್ಟನು. ಪುನಃ – ಮತ್ತೆ,ರಥಂ— ರಥವನ್ನು, ಆರೂಢಸ್ಸನ್ – ಏರಿದವನಾಗಿ,ಶಂಖಮುಪೂರಯತ್— ಶಂಖವನ್ನು ಊದಿದನು. ॥೪೧॥

ತತೋಭೀಷ್ಮೋಽರ್ಜುನಶ್ಚೈವ ಶಸ್ತ್ರಾಸ್ತ್ರೈರಭ್ಯವರ್ಷತಾಂ ॥
ಅಯತ್ನೇನಜಿತಶ್ಚೈವ ಫಲ್ಗುನೇನಾಪಗಾಸುತಃ ॥೪೨॥

ಅಯುತಾನಿ ಬಹೂನ್ಯಾಜೌ ರಥಾನಾಂನಿಜಘಾನಚ ॥
ಜಿತಾಃ ಸೇನಾಪಹಾರಂಚ ಚಕ್ರುರ್ಭೀಷ್ಮಮುಖಾಸ್ತತಃ ॥೪೩॥

ತತಃ — ಅನಂತರ, ಭೀಷ್ಮಃ—ಭೀಷ್ಮರು, ಅರ್ಜುನಶ್ಚ — ಅರ್ಜುನನೂಕೂಡ,ಶಸ್ತ್ರಾಸ್ತ್ರೈಃ — ಶಸ್ತ್ರ ಮತ್ತು ಅಸ್ತ್ರಗಳಿಂದ, ಅಭ್ಯವರ್ಷತಾಂ —ಮಳೆಗರಿಸಿದರು. ಆಪಗಾಸುತಃ —ಭೀಷ್ಮರು, ಫಲ್ಗುನೇನ —ಅರ್ಜುನನಿಂದ, ಅಯತ್ನೇನೈವ — ಪ್ರಯಾಸವಿಲ್ಲದೇನೇ, ಜಿತಶ್ಚ —ಪರಾಜಿತರಾದರೂಕೂಡ, ಆಜೌ –ಯುದ್ಧದಲ್ಲಿ, ರಥಾನಾಂ-ರಥಿಕರ, ಬಹೂನಿ ಅಯುತಾನಿ—

ಬಹಳ ಅಯುತ ಸಂಖ್ಯಾಕರನ್ನು, ನಿಜಘ್ನಾನ—ಕೊಂದರು. ತತಃ—ಅನಂತರ, ಜಿತಾಃ –ಪರಾಜಿತರಾದ ಭೀಷ್ಮಮುಖಾಃ–ಭೀಷ್ಮನೇ ಪ್ರಧಾನರಾಗಿ ಉಳ್ಳವರು, ಸೇನಾಪಹಾರಂ – ಶಿಬಿರಕ್ಕೆ ಸೇನೆಯ ಒಯ್ಯೋಣವನ್ನು ಚಕ್ರುಃ–ಮಾಡಿದರು ॥೪೨॥೪೩॥

ಕದಾಚಿದಗ್ರಗೋ ಭೀಮೋ ಭೀಷ್ಮದ್ರೌಣೌ ವಿಸಾರಥೀ ॥
ಕೃತ್ವಾವಿದ್ರಾವ್ಯ ತಾನಶ್ವಾನ್ ಭಿತ್ವಾ ವ್ಯೂಹಂ ವಿವೇಶಹ ॥೪೪॥

ಕದಾಚಿತ್ – ಒಮ್ಮೆ, ಅಗ್ರಗಃ – ಮುಂದೆ ಹೋಗತಕ್ಕ, ಭೀಮಃ – ಭೀಮನು. ಭೀಷ್ಮದ್ರೋಣೌ – ಭೀಷ್ಮದ್ರೋಣರನ್ನು, ವಿಸಾರಥೀ— ಸಾರಥಿರಹಿತರನ್ನಾಗಿ, ಕೃತ್ವಾ–ಮಾಡಿ, ತಾನ್ ಅಶ್ವಾನ್–ರಥದಲ್ಲಿ ಕಟ್ಟಿದ ಕುದುರೆಗಳನ್ನು, ವಿದ್ರಾವ್ಯ–ಓಡಿಸಿ, ವ್ಯೂಹಂ— ಸೇನೆಯ ಸಮೂಹವನ್ನೂ, ಭಿತ್ವಾ–ಭೇದಿಸಿಕೊಂಡು, ವಿವೇಶಹ – ಸೇನೆಯೊಳಗೆ ಪ್ರವೇಶಿಸಿದನು, ॥೪೪॥

ಪುನಃ ಸಂಸ್ಥಾಪಿತರಥೌ ವಿಜಿತ್ಯಾಯತ್ನತೋಬಲೀ ॥
ಯತಮಾನೌ ಮಹೇಷ್ವಾಸೌ ಧಾರ್ತರಾಷ್ಟ್ರಾನ್ಜಘಾನಹ ॥೪೫॥

ಬಲೀ – ಬಲಿಷ್ಠನಾದ ಭೀಮನು, ಪುನಃ–ಮತ್ತೊಮ್ಮೆ, ಸಂಸ್ಥಾಪಿತರಥೌ – ಸ್ಥಾಪಿಸಲ್ಪಟ್ಟ ರಥವುಳ್ಳ. ಯತಮಾನೌ–ಪ್ರಯತ್ನ ಮಾಡತಕ್ಕ. ಮಹೇಷ್ವಾಸೌ — ಶ್ರೇಷ್ಠಧನುಸ್ಸುಳ್ಳ ಭೀಷ್ಮದ್ರೋಣರನ್ನು, ಅಯತ್ನತಃ— ಆಯಾಸವಿಲ್ಲದೇನೇ, ವಿಜಿತ್ಯ–ಗೆದ್ದು, ಧಾರ್ತರಾಷ್ಟ್ರಾನ್—ಧೃತರಾಷ್ಟ್ರನ ಪುತ್ರರನ್ನು, ಜಘಾನ—ಕೊಂದನು. ॥೪೫॥

ಪಂಚವಿಂಶದ್ಧತಾಸ್ತತ್ರ ಧಾರ್ತರಾಷ್ಟ್ರಾ ಮಹಾಬಲಾಃ ॥
ಭಗದತ್ತದ್ರೌಣಿಕೃಪಶಲ್ಯದುರ್ಯೋಧನಾದಯಃ ॥೪೬॥

ಸರ್ವೇಹತಾ ದ್ರಾವಿತಾಶ್ಚ ಸೇನಾಚಬಹುಲಾಹತಾ ॥
ವಿರಥೋವ್ಯಾಯುಧಶ್ಚೈವದೃಢವೇಧವಿಮೂರ್ಛಿತಃ ॥೪೭॥

ಕೃತೋದುರ್ಯೋಧನಃಸರ್ವರಾಜ್ಞಾಂ ಭೀಮೇನಪಶ್ಯತಾಂ ॥
ತತೋಽಪಹಾರಂಸೈನ್ಯಸ್ಯ ಜಿತಾಶ್ಚಕ್ರುಶ್ಚಕೌರವಾಃ ॥೪೮॥

ತತ್ರ— ಆ ಯುದ್ಧದಲ್ಲಿ, ಮಹಾಬಲಾಃ—ಬಹಳ ಬಲಿಷ್ಠರಾದ, ಪಂಚವಿಂಶತ್ – ಇಪ್ಪತ್ತೈದು ಸಂಖ್ಯಾಕರಾದ, ಧಾರ್ತರಾಷ್ಟ್ರಾಃ— ಧೃತರಾಷ್ಟ್ರನ ಪುತ್ರರು, ಹತಾಃ — ಭೀಮನಿಂದಕೊಲ್ಲಲ್ಪಟ್ಟರು. — ಭಗದತ್ತದ್ರೌಣಿಕೃಪಶಲ್ಯ ದುರ್ಯೋಧನಾದಯಃ – ಭಗದತ್ತನು, ಅಶ್ವತ್ಥಾಮನು, ಕೃಪಾಚಾರ್ಯರು, ಶಲ್ಯನು, ದುರ್ಯೋಧನನೇ ಮೊದಲಾಗಿಉಳ್ಳ ಸರ್ವೇ – ಎಲ್ಲರೂ, ಜಿತಾಃ – ಭೀಮನಿಂದ ಪರಾಜಿತರಾದರು. ದ್ರಾವಿತಾಶ್ಚ—ಯುದ್ಧದಿಂದ ಓಡಿಸಲ್ಪಟ್ಟರು. ಬಹುಲಾ—ಬಹಳವಾದ, ಸೇನಾಚ— ಸೇನೆಯೂಕೂಡ, ಹತಾ—ಕೊಲ್ಲಲ್ಪಟ್ಟಿತು. ಸರ್ವರಾಜ್ಞಾಂ—ಎಲ್ಲಾರಾಜರು, ಪಶ್ಯತಾಂಸತಾಂ–ನೋಡುತ್ತಿರುವಾಗಲೇ, ಭೀಮೇನ — ಭೀಮನಿಂದ, ದುರ್ಯೋಧನಃ – ದುರ್ಯೋಧನನು, ವಿರಥಃ–ರಥರಹಿತನಾಗಿಯೂ, ವ್ಯಾಯುಧಃ– ಆಯುಧರಹಿತನಾಗಿಯೂ, ದೃಢವೇಧವಿಮೂರ್ಛಿತಃ– ಗಾಢವಾದಪ್ರಹಾರದಿಂದ ಅತ್ಯಂತ ಮೂರ್ಛೆಗೊಂಡವನಾಗಿಯೂ, ಕೃತಃ – ಮಾಡಲ್ಪಟ್ಟನು. ತತಃ – ಅನಂತರ, ಕೌರವಾಃ – ಕೌರವರು, ಜಿತಾಸ್ತಂತಃ – ಪರಾಜಿತರಾಗಿ, ಸೈನ್ಯಸ್ಯ – ಸೈನ್ಯದ, ಅಪಹಾರಂ – ಶಿಬಿರವನ್ನು ಕುರಿತು ಹೊಂದುವಿಕೆಯನ್ನು, ಚಕ್ರುಃ–ಮಾಡಿದರು. ॥೪೬॥೪೭॥೪೮॥

ಭಾ. ಅ.: ೫೬—೪೮ ಶ್ರೀಭೀಮಸೇನ ಅರ್ಜುನರು ಭೀಷ್ಮರನ್ನು ಸಂಹರಿಸಲು ಸಮರ್ಥರಾದರೂ ಕೂಡ ಅವರಲ್ಲಿ ಗೌರವಸ್ನೇಹಗಳಿಂದ ಅವರಿಗೆ ಹೆಚ್ಚು ವಿರೋಧವನ್ನು ಒತ್ತದೇ ಅನುಕೂಲರಾಗಿದ್ದರು. ಹೀಗೆ ಆಶ್ಚರ್ಯಕರವಾದ

ಈ ಕೌರವ ಪಾಂಡವ ಯುದ್ಧಗಳನ್ನು ಬ್ರಹ್ಮರುದ್ರಾದಿ ದೇವತೆಗಳು, ಗಂಧರ್ವ, ಅಪ್ಸರೆಯರು ವಿಮಾನಾರೂಢರಾಗಿ ಆಕಾಶದಲ್ಲಿ ಬಂದು ನೋಡಿದರು. ಅಸುರರೂ ನೋಡುತ್ತಿದ್ದರು. ಧೃಷ್ಟದ್ಯುಮ್ನನು ಭೀಷ್ಮರನ್ನು ತಡೆದು, ಕೌರವಸೈನ್ಯದ ಜೊತೆಗೆ ಭಯಂಕರ ಯುದ್ಧವನ್ನು ಮಾಡಿದನು. ಒಂದು ಸಂದರ್ಭದಲ್ಲಿ, ಅರ್ಜುನನು ಭೀಷ್ಮರೊಂದಿಗೆ ಮೆಲ್ಲನೆ ಯುದ್ಧ ಮಾಡುವವನ್ನು ನೋಡಿದ ಶ್ರೀಕೃಷ್ಣನು ಚಕ್ರವನ್ನು ಕೈಯಲ್ಲಿ ಹಿಡಿದು, ರಥದಿಂದಿಳಿದು, ಭೀಷ್ಮರಮೇಲೆ ಒಗೆಯುವಂತೆ ಕೈಎತ್ತಿಹೋದನು. ಆಗ ಭೀಷ್ಮರು (ನನ್ನ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡುವದಕ್ಕಾಗಿ, ನಿನ್ನ ಪ್ರತಿಜ್ಞೆಯನ್ನೂ ಬಿಟ್ಟು ಕೈಯಲ್ಲಿ ಚಕ್ರವನ್ನು ಹಿಡಿದಿರುವಿ, ನೀನು ಭಕ್ತಪಕ್ಷಪಾತಿಯಾದ ಸರ್ವೋತ್ತಮ ದೇವನು ಎಂದು ಮೊದಲಾದ) ಶ್ರೀಕೃಷ್ಣನ ಸ್ತೋತ್ರವನ್ನು ಮಾಡಿದರು. ಅರ್ಜುನನು ನಮಸ್ಕರಿಸಿ ನೀನು ಯುದ್ಧಮಾಡಬಾರದೆಂದು ಪ್ರಾರ್ಥಿಸಿದಾಗ ಪುನಃ ರಥವನ್ನೇರಿ ಶಂಖಧ್ವನಿಯನ್ನು ಮಾಡಿದನು.(ಈ ರೀತಿ ನಾಟಕಮಾಡಿದ ಶ್ರೀಕೃಷ್ಣನು ಅರ್ಜುನನನ್ನು ಹುರಿದುಂಬಿಸಿದ್ದಾನೆ.) ಆಗ ಅರ್ಜುನ–ಭೀಷ್ಮರಿಗೆ ಘೋರ ಶಸ್ತ್ರಾಸ್ತ್ರಯುದ್ಧವಾಗಿದೆ. ಆಗ ಯುದ್ಧದಲ್ಲಿ ಭೀಷ್ಮರನ್ನು ಅನಾಯಾಸವಾಗಿಯೇ ಗೆದ್ದನು.ಆದರೂಕೂಡ, 30 ಸಾವಿರಕ್ಕೂಮಿಕ್ಕಿ ರಥಿಕರನ್ನು ಸಂಹರಿಸಿದ್ದಾರೆ. ನಂತರ ಅಂದಿನ ಯುದ್ಧವನ್ನು ಮುಗಿಸಿ ಸೈನ್ಯವನ್ನು ಶಿಬಿರಕ್ಕೆಕಳಿಸಿದರು. ಮತ್ತೆ ಯುದ್ಧಾರಂಭವಾದಾಗ ಶ್ರೀಭೀಮಸೇನರು ಮುಂದೆ ಹೋಗಿ ಭೀಷ್ಮ–ದ್ರೋಣರ ಸಾರಥಿಗಳನ್ನು ಸಂಹರಿಸಿ, ಕುದುರೆಗಳನ್ನು ಓಡಿಸಿ, ವ್ಯೂಹವನ್ನು ಭೇದಿಸಿ ಸೈನ್ಯವನ್ನು ಪ್ರವೇಶಿಸಿದರು. ಪುನಃ ರಥವನ್ನೇರಿ ಬಂದ ಭೀಷ ದ್ರೋಣರನ್ನು ಯತ್ನವಿಲ್ಲದೇ ಗೆದ್ದು, ಇಪ್ಪತ್ತೈದು ಧೃತರಾಷ್ಟ್ರ ಪುತ್ರರನ್ನು ಸಂಹರಿಸಿ, ಭಗದತ್ತ, ಅಶ್ವತ್ಥಾಮ, ಕೃಪ, ಶಲ್ಯ, ದುರ್ಯೋಧನಾದಿಗಳನ್ನು ಚೆನ್ನಾಗಿ ಬಡಿದು ಓಡಿಸಿದರು ಬಹು ಸೈನ್ಯವನ್ನು ಸಂಹರಿಸಿದರು. ಎಲ್ಲರಾಜರೂ ನೋಡುತ್ತಿರುವಂತೆಯೇ ದುರ್ಯೋಧನನನ್ನು ಮೂರ್ಛೆಗೊಳಿಸಿದರು.ಸೋತ ಕೌರವರು ಅಂದಿನ ಯುದ್ಧಮುಗಿಸಿ ಶಿಬಿರಕ್ಕೆ ನಡೆದರು.

ದುರ್ಯೋಧನೋನಿಶಾಯಾಂಚಯಯೌ ಯತ್ರನದೀಸುತಃ ॥
ಪೀಡಿತೋಭೀಮಬಾಣೈಶ್ಚ ಕ್ಷರದ್ಗಾತ್ರೋನನಾಮತಂ ॥
ಉವಾಚಹೇತುನಾಕೇನ ವಯಂ ಜೀಯಾಮಸರ್ವದಾ ॥೪೯॥

ಭೀಮಬಾಣೈಃ— ಭೀಮನಬಾಣಗಳಿಂದ, ಪೀಡಿತಃ– ಪೀಡಿಸಿಕೊಳ್ಳಲ್ಪಟ್ಟ, ಕ್ಷರದ್ಗಾತ್ರಃ – ರಕ್ತಸುರಿಯುವ ಶರೀರವುಳ್ಳ, ದುರ್ಯೋಧನಃ – ದುರ್ಯೋಧನನು, ನಿಶಾಯಾಂ – ರಾತ್ರಿಯಲ್ಲಿ,ನದೀಸುತಃ – ಭೀಷ್ಮರು ಯತ್ರ– ಎಲ್ಲಿರುವರೋ, ತತ್ರ– ಅಲ್ಲಿಗೆ, ಯಯೌ– ಹೋದನು. ತಂ— ಆ ಭೀಷ್ಮರನ್ನು, ನನಾಮ– ನಮಸ್ಕರಿಸಿದನು. ವಯಂ—ನಾವು, ಕೇನಹೇತುನಾ – ಯಾವಕಾರಣದಿಂದ, ಸರ್ವದಾ–ಯಾವಾಗಲೂ, ಜೀಯಾಮ–ಪಾಂಡವರನ್ನು ಜಯಿಸುವೆವು, ಇತಿ– ಎಂದು ಉವಾಚ–ಹೇಳಿದನು. ॥೪೯॥

ಪಾಂಡವಾಶ್ಚ ಜಯಂನಿತ್ಯಂಲಬ್ಧ್ವಾಹರ್ಷಮವಾಪ್ನುವನ್ ॥
ತವಾಹಭೀಷ್ಮಸ್ತೇಽಜೇಯಾದೇವಾಸ್ತೇಧರಣೇಂಗತಾಃ ॥
ವಿಶೇಷತಃಕೇಶವೇನಪಾಲಿತಾಸ್ತತ್ಪ್ರಿಯಾಃಸದಾ ॥೫೦॥

ಪಾಂಡವಾಶ್ಚ – ಪಾಂಡವರು, ಕೇನ-ಯಾವಕಾರಣದಿಂದ ನಿತ್ಯಂ–ಯಾವಾಗಲೂ, ಜಯಂ-ಜಯವನ್ನು, ಲಬ್ಧ್ವ-ಹೊಂದಿ, ಹರ್ಷಂ–ಸಂತೋಷವನ್ನು, ಅವಾಪ್ನುವನ್ಹೊಂದಿರುವರು, (ಎಂದು ಕೇಳಿದನು) ಭೀಷ್ಮಃ– ಭೀಷ್ಮರು, ತಂ— ಆ ದುರ್ಯೋಧನನನ್ನು ಕುರಿತು, ಆಹ–ಹೇಳಿದರು. ತೇ— ಆ ಪಾಂಡವರು, ಅಜೇಯಾಃ — ಗೆಲ್ಲಲು ಅಶಕ್ಯರು, ತೇ– ಅವರು, ದೇವಾಃ—ದೇವತೆಗಳು, ಧರಣೇಂ ಗತಾಃ—ಭೂಮಿಯನ್ನು ಕುರಿತು ಬಂದವರು. ವಿಶೇಷತಃ – ವಿಶೇಷಾಕಾರವಾಗಿ, ಕೇಶವೇನ ಶ್ರೀಕೃಷ್ಣನಿಂದ, ಪಾಲಿತಾಃ–ರಕ್ಷಿಸಲ್ಪಟ್ಟವರು, ಸದಾ – ಯಾವಾಗಲೂ, ತತ್ಪ್ರಿಯಾಃ – ಶ್ರೀಕೃಷ್ಣನಿಗೆ ಪ್ರೀತಿಪಾತ್ರರು ॥೫೦॥

ಅವ – ದೇವತೆಗಳು ಅವತರಿಸಲು ಕಾರಣವನ್ನು ಹೇಳುತ್ತಾರೆ –

ಮಾನಸೋತ್ತರಶೈಲೇಹಿಪುರಾಬ್ರಹ್ಮಪುರಸ್ಸರಾಃ ॥
ಸ್ಥಿತಾದೇವಾಸ್ತದಾsಪಶ್ಯದ್ಬ್ರಹ್ಮೈಕೋಹರಿಮಂಬರೇ ॥೫೦॥

ಪುರಾ – ಹಿಂದೆ, ಬ್ರಹ್ಮಪುರಸ್ಸರಾಃ— ಬ್ರಹ್ಮನೇ ಮೊದಲಾಗಿಉಳ್ಳ, ದೇವಾಃ — ದೇವತೆಗಳು, ಮಾನಸೋತ್ತರ–ಶೈಲೇ— ಮಾನಸೋತ್ತರ ಪರ್ವತದಲ್ಲಿ, ಸ್ಥಿತಃ—ಇದ್ದರು, ತದಾ – ಆಗ, ಏಕಃ ಬ್ರಹ್ಮಾ – ಬ್ರಹ್ಮನೊಬ್ಬನು, ಅಂಬರೇ— ಆಕಾಶದಲ್ಲಿ, ಹರಿಂ – ಶ್ರೀಹರಿಯನ್ನು, ಅಪಶ್ಯತ್ — ನೋಡಿದನು. ॥೫೦॥

ಸ್ತುತ್ವಾಸಂಪೂಜ್ಯಭೂಮೇಃಸಭಾರಾವತರಾಣಾಯತಂ ॥
ಪ್ರಾರ್ಥಯಾಮಾಸತೇನೋಕ್ತಂದೇವಾನಾವದದ್ವಿಭುಃ ॥೫೨॥

ಸಃ – ಆ ಬ್ರಹ್ಮನು, ತಂ— ಆ ಹರಿಯನ್ನು, ಸ್ತುತ್ವಾ — ಸ್ತೋತ್ರಮಾಡಿ, ಸಂಪೂಜ್ಯ – ಚೆನ್ನಾಗಿ ಪೂಜಿಸಿ ಭೂಮೇಃ —ಭೂಮಿಗೆ, ಭಾರಾವತರಣಾಯ ಭಾರಭೂತರಾದದೈತ್ಯರ ನಾಶಮಾಡುವುದಕ್ಕೋಸ್ಕರ, ಪ್ರಾರ್ಥಯಾಮಾಸ–ಪ್ರಾರ್ಥಿಸಿದನು, ವಿಭುಃ--ಸಮರ್ಥನಾದ ಬ್ರಹ್ಮನು, ತೇನ – ಆ ಹರಿಯಿಂದ, ಉಕ್ತಂ–ಹೇಳಲ್ಪಟ್ಟಮತನ್ನ, ದೇವಾನಾಂ–ದೇವತೆಗಳಿಗೆ, ಅವದತ್ ಹೇಳಿದನು. ॥೫೨॥

ಅಯಂನಾರಾಯಣೋದೇವಃಪೂರ್ಣಾನಂತಗುಣಾರ್ಣವಃ ॥
ಆಜ್ಞಾಪಯತಿವಃಸರ್ವಾನ್ಪ್ರಾದುರ್ಭಾವಾಯಭೂತಲೇ ॥೫೩॥
ಸ್ವಯಂಚದೇವಕೀಪುತ್ರೋ ಭವಿಷ್ಯತಿ ಜಗತ್ಪತಿಃ ॥೫೪॥

ಪೂರ್ಣಾನಂತಗುಣಾರ್ಣವಃ — ಪೂರ್ಣಗಳಾದ, ಲೆಕ್ಕವಿಲ್ಲದ ಗುಣಗಳಿಂದ ಸಮುದ್ರದಂತಿರುವ, ದೇವಃ– ಕ್ರೀಡಾದಿ ಗುಣವಿಶಿಷ್ಟನಾದ. ಅಯಂ ನಾರಾಯಣಃ– ತನಗೆ ಪ್ರತ್ಯಕ್ಷನಾದ ಈ ನಾರಾಯಣನು,ವಃಸರ್ವಾನ್–ನಿಮ್ಮೆಲ್ಲರನ್ನು,ಭೂತಲೇ– ಭೂಮಿಯಲ್ಲಿ, ಪ್ರಾದುರ್ಭಾವಾಯ — ಅವತರಿಸುವುದಕ್ಕೋಸ್ಕರ, ಆಜ್ಞಾಪಯತಿ — ಆಜ್ಞಾಪಿಸುತ್ತಾನೆ. ಜಗತ್ಪತಿಃ– ಜಗತ್ತಿಗೆಸ್ವಾಮಿಯಾದ ನಾರಾಯಣನು, ಸ್ವಯಂಚ — ತಾನೂ ಕೂಡ, ದೇವಕೀಪುತ್ರಸ್ತನ್ — ದೇವಕಿಯ ಮಗನಾಗಿ, ಭವಿಷ್ಯತಿ— ಅವತರಿಸುವನು. ಇತಿ – ಎಂದು, ಅವದತ್ ಹೇಳಿದನು. ॥೫೩॥೫೪॥

ಏವಂತೇನಸಮಾದಿಷ್ಟಾ ಧರ್ಮವಾಯ್ವಾದಯೋsಖಿಲಾಃ ॥
ಅಭವನ್ಪಾಂಡವಾದ್ಯಾಸ್ತೇಸೇಂದ್ರಾಸ್ಸಹ ಮರುದ್ಗಣಾಃ ॥೫೫॥

ಏವಂ – ಈ ಹಿಂದೆ ಹೇಳಿದಪ್ರಕಾರ, ತೇನ —ಆ ನಾರಾಯಣನಿಂದ, ಸಮಾದಿಷ್ಟಾಃ – ಆಜ್ಞಾಪಿಸಿಕೊಳ್ಳಲ್ಪಟ್ಟ, ಸೇಂದ್ರಾಃ – ಇಂದ್ರನಿಂದ ಕೂಡಿದ, ಸಹ ಮರುದ್ಗಣಾಃ – ಮರುದ್ಗಣಗಳಿಂದ ಕೂಡಿದ, ತೇ —ಆದಾವ, ಅಖಿಲಾಃ – ಎಲ್ಲಾ, ಧರ್ಮವಾಯ್ವಾದಯಃ – ಯಮಧರ್ಮರಾಜ, ವಾಯು, ಮೊದಲಾಗಿಉಳ್ಳವರು, (ಆದಿ ಪದದಿಂದ ಗಂಧರ್ವಾದಿಗಳು,)ಪಾಂಡವಾದ್ಯಾಃ — ಪಾಂಡವರೇ ಮೊದಲಾದವರು,(ಆದಿಪದದಿಂದ ಯಾದವರು,ಶಲ್ಯ, ಬಾಹ್ಲೀಕಾದಿಗಳು,)ಅಭವನ್–ಹುಟ್ಟಿದರು. ॥೫೫॥

ಸಚನಾರಾಯಣೋ ದೇವೋದೇವಕೀನಂದನೋsಭವತ್ ॥
ತೇನೈತೇಪಾಲಿತಾಃ ಪಾರ್ಥಾ ಅಜೇಯಾದೇವಸರ್ಗಿಣಃ ॥
ತಸ್ಮಾತ್ತೈಃ ಸಂಧಿಮುನ್ಮಿಚ್ಛ ಯದೀಚ್ಛಸ್ಯಪರಾಭವಂ ॥೫೬॥

ದೇವಃ – ಕ್ರೀಡಾದಿಗುಣವಿಶಿಷ್ಟನಾದ, ಸಚ – ಆ ನಾರಾಯಣಃ – ನಾರಾಯಣನು, ದೇವಕೀನಂದನಸ್ಸನ್– ದೇವಕಿಯಮಗನಾಗಿ, ಅಭವತ್ – ಅವತರಿಸಿದನು. ದೇವಸರ್ಗಿಣಃ – ದೇವತೆಗಳಿಂದ ಉತ್ಪತ್ತಿಉಳ್ಳ, ದೇವತೆಗಳ ಸ್ವಭಾವ ಉಳ್ಳ, ಏತೇಪಾರ್ಥಾಃ— ಈ ಪಾಂಡವರು, ತೇನ – ಆ ಶ್ರೀಕೃಷ್ಣನಿಂದ, ಪಾಲಿತಾಃ— ರಕ್ಷಿಸಿಕೊಳ್ಳಲ್ಪಟ್ಟವರು, ಅತಏವ – ಆದ್ದರಿಂದಲೇ, ಅಜೇಯಾಃ— ಜಯಿಸಲಿಕ್ಕೆ ಅಶಕ್ಯರು,ತಸ್ಮಾತ್–ಆದ್ದರಿಂದ, ಅಪರಾಭವಂ – ಜಯಂವನ್ನು, ಇಚ್ಛಸಿಯದಿ – ಇಚ್ಛಿಸುವುದಾದರೆ, ತೈಃ–ಆ ಪಾಂಡವರಿಂದ, ಸಂಧಿಂ–ಸಂಧಾನವನ್ನು, ಅನ್ವಿಚ್ಛ – ಇಚ್ಛಿಸು (ಸಂಧಿಯನ್ನು ಮಾಡಿಕೋ) ॥೫೬॥

ಇತ್ಯುಕ್ತೋ ಡಂಭಬುದ್ಧ್ಯೈವ ನತ್ವಾವಿಷ್ಣುಂತತೋಯಯೌ ॥
ಪ್ರಾತರ್ನಿರ್ಯಾತಯಾಮಾಸ ಸೇನಾಂಯುದ್ಧಾಯ ದುರ್ಮತಿಃ ॥೫೭॥

ಇತಿಃ – ಈ ರೀತಿಯಾಗಿ, ಉಕ್ತಃ – ಭೀಷ್ಮರಿಂದ ಹೇಳಿಸಿಕೊಳ್ಳಲ್ಪಟ್ಟ, ದುರ್ಮತಿಃ — ದುಷ್ಟಬುದ್ಧಿಯುಳ್ಳ ದುರ್ಯೋಧನನು, ಡಂಭಬುಧ್ಯೈವ – ಕಪಟ ಬುದ್ಧಿಯಿಂದಲೇ, ವಿಷ್ಣುಂ – ನಾರಾಯಣನನ್ನು, ನತ್ವಾ — ನಮಸ್ಕರಿಸಿ ತತಃ – ಆ ಭೀಷ್ಮರ ಶಿಬಿರದಿಂದ, ಯಯೌ – ತನ್ನ ಶಿಬಿರಕ್ಕೆ ಹೋದನು. ಪ್ರಾತಃ – ಬೆಳಿಗ್ಗೆ, ಯುದ್ಧಾಯ – ಯುದ್ಧ ಕ್ಕೋಸ್ಕರ, ಸೇನಾಂ – ಸೈನ್ಯವನ್ನು, ನಿರ್ಯಾತಯಾಮಾಸ – ಕಳುಹಿಸಿದನು. ॥೫೭॥

ದಿವ್ಯೌಷಧೇನ ಭೀಷ್ಮಸ್ಯ ಭೂತ್ವಾಸ ನಿರುಜಸ್ತತಃ ॥
ಭೀಷ್ಮಮಗ್ರೇ ನಿಧಾಯೈವ ಯಯೌ ಯುದ್ಧಾಯದಂಶಿತಃ ॥೫೮॥

ಸಃ – ಆ ದುರ್ಯೋಧನನು, ಭೀಷ್ಮಸ್ಯ—ಭೀಷ್ಮರ, ದಿವ್ಯೌಷಧೇನ – ಉತ್ತಮವಾದ ಔಷಧದಿಂದ, ನಿರುಜಃ— ರೋಗರಹಿತನು, ಭೂತ್ವಾ—ಆಗಿ, ಭೀಷ್ಮರನ್ನು, ಅಗ್ರೇ – ಮುಂದೆ, ನಿಧಾಯೈವ – ಮಾಡಿಕೊಂಡೇ, ಯುದ್ಧಾಯ – ಯುದ್ಧಕ್ಕೋಸ್ಕರ ದಂಶಿತಃ ಸನ್— ಕವಚಾದಿ ಯುದ್ಧ ಸನ್ನಾಹವುಳ್ಳವನಾಗಿ, ಯಯೌ—ಹೋದನು. ॥೫೮॥

ತತ್ರಾಸೀತ್ಸು ಮಹದ್ಯುದ್ಧಂ ಭೀಮಭೀಷ್ಮಾನುಯಾಯಿನಾಂ ॥
ಪಾಂಡವಾನಾಂ ಕುರೂಣಾಂಚ ಶೂರಾಣಾಮನಿವರ್ತಿನಾಂ ॥೫೯॥

ತತ್ರ – ಅಲ್ಲಿ, ಭೀಮಭೀಷ್ಮಾನುಯಾಯಿನಾಂ – ಭೀಮ ಮತ್ತು ಭೀಷ್ಮರನ್ನು ಅನುಸರಿಸಿಕೊಂಡಿರುವ ಶೂರಾಣಾಂ— ಪರಾಕ್ರಮಿಗಳಾದ, ಅನಿವರ್ತಿನಾಂ – ಯುದ್ಧದಿಂದ ಹಿಂತಿರುಗದಿರುವ, ಪಾಂಡವಾನಾಂ – ಪಾಂಡವರಿಗೂ, ಕುರೂಣಾಂಚ — ಕುರುಗಳಿಗೂ ಕೂಡ, ಮಹದ್ಯುದ್ಧಂ – ದೊಡ್ಡ ಯುದ್ಧವು, ಆಸೀತ್ – ಆಯಿತು. ॥೫೯॥

ಧೃಷ್ಟದ್ಯುಮ್ನಸ್ತತ್ರಭೀಮಾನುಯಾಯೀದುರ್ಯೋಧನಸ್ಯಾವರಜೈಃಪ್ರಯುಧ್ಯನ್ ॥
ಸಮ್ಮೋಹನಾಸ್ತ್ರೇಣ ವಿಮೋಹಯಿತ್ವಾ ವಿಕರ್ಣಪೂರ್ವಾನಹನಚ್ಚ ಸೇನಾಂ ॥೬೦॥

ತತ್ರ – ಆ ಯುದ್ಧದಲ್ಲಿ, ಧೃಷ್ಟದ್ಯುಮ್ನಃ – ಧೃಷ್ಟದ್ಯುಮ್ನನು, ಭೀಮಾನುಯಾಯೀಸನ್ – ಭೀಮನನ್ನು ಅನುಸರಿಸಿಇರುವವನಾಗಿ, ದುರ್ಯೋಧನಸ್ಯ – ದುರ್ಯೋಧನನ, ಅವರಜೈಃ–ತಮ್ಮಂದಿರಿಂದ, ಪ್ರಯುಧ್ಯನ್ಸನ್–ಯುದ್ಧ ಮಾಡುವವನಾಗಿ, ವಿಕರ್ಣಪೂರ್ವಾನ್ – ವಿಕರ್ಣನೇ ಮೊದಲಾಗಿಉಳ್ಳವರನ್ನು, ಸಮ್ಮೋಹನಾಸ್ತ್ರೇಣ - ಮೂರ್ಛೆಯನ್ನುಂಟು ಮಾಡುವ ಅಸ್ತ್ರದಿಂದ, ವಿಮೋಹಯಿತ್ವಾ – ಮೋಹಗೊಳಿಸಿ, ಸೇನಾಂ – ಸೈನ್ಯವನ್ನು, ಅಹನತ್ – ಕೊಂದನು. ॥೬೦॥

ತತೋದ್ರೋಣಸ್ತಾನ್ಸಮುತ್ಥಾಪ್ಯಸರ್ವಾನ್ವಿಜ್ಞಾನಾಸ್ತ್ರೇಣಾಸದತ್ಪಾರ್ಷತಂಚ ॥
ತಂಭೀಮಸೇನಃ ಸೂತಹೀನಂವಿಧಾಯ ವ್ಯದ್ರಾವಯಚ್ಛತ್ರುಗಣಾಞ್ಶರೌಘೈಃ ॥೬೧॥

ತತಃ — ಆನಂತರ, ದ್ರೋಣಃ — ದ್ರೋಣರು, ತಾನ್ — ವಿಕರ್ಣವೊದಲಾದವರನ್ನು, ವಿಜ್ಞಾನಾಸ್ತ್ರೇಣ ವಿಜ್ಞಾನಾಸ್ತ್ರದಿಂದ. ಸಮುತ್ಥಾಪ್ಯ — ಮೂರ್ಛೆಯಿಂದ ಎಬ್ಬಿಸಿ, ಪಾರ್ಷತಂ-ಧೃಷ್ಟದ್ಯುಮ್ನನನ್ನು, ಆಸದತ್ - ಹೊಂದಿದರು. ಭೀಮಸೇನಃ — ಭೀಮಸೇನನು, ತಂ — ಆ ದ್ರೋಣರನ್ನು, ಸೂತಹೀನಂ — ಸೂತ ರಹಿತನನ್ನಾಗಿ, ವಿಧಾಯ — ಮಾಡಿ, ಶರೌಘೈಃ—ಬಾಣಗಳ ಸಮುದಾಯಗಳಿಂದ, ಶತ್ರುಗಣಾನ್ — ಶತ್ರುಗಳ ಸಮೂಹಗಳನ್ನು, ವ್ಯದ್ರಾವಯತ್ — ಓಡಿಸಿದನು. ॥೬೦॥

ಅಥಾಸದತ್ಕೃತವರ್ಮಾರಥೇನ ಧೃಷ್ಟದ್ಯುಮ್ನಂಸೋಽಭ್ಯಯಾತ್ತಾವುಭೌ ಚ ॥
ವವರ್ಷತುಃಶರವರ್ಷೈರಥೋಗ್ರೈಃತತ್ರಾಕರೋದ್ವಿರಥಂದ್ರೌಪದಿಸ್ತಂ ॥೬೨॥

ಅಥ—ಅನಂತರ, ಕೃತವರ್ಮಾ — ಕೃತವರ್ಮನು, ರಥೇನ— ರಥದಿಂದ, ಧೃಷ್ಟದ್ಯುಮ್ನಂ - ಧೃಷ್ಟದ್ಯುಮ್ನನನ್ನು, ಅಭ್ಯಯಾತ್ — ಹೊಂದಿದನು, ಸೋಽಪಿ — ಆ ಧೃಷ್ಟದ್ಯುಮ್ನನಾದರೂ, ಅಭ್ಯಯಾತ್ — ಕೃತವರ್ಮನನ್ನು ಹೊಂದಿದನು. ತಾವುಭೌ — ಆ ಧೃಷ್ಟದ್ಯುಮ್ನ ಕೃತವರ್ಮರಿಬ್ಬರೂ, ಉಗ್ರೈಃ— ಕ್ರೂರಗಳಾದ, ಶರವರ್ಷೈಃ — ಬಾಣಗಳ ಮಳೆಗಳಿಂದ, ವವರ್ಷತುಃ — ಸುರಿಸಿದರು. ತತ್ರ — ಅವರ ಮಧ್ಯದಲ್ಲಿ, ದ್ರೌಪದಿಃ — ದ್ರುಪದನ ಮಗನಾದ ಧೃಷ್ಟದ್ಯುಮ್ನನು, ತಂ — ಕೃತವರ್ಮನನ್ನು, ವಿರಥಂ — ರಥರಹಿತನನ್ನಾಗಿ, ಅಕರೋತ್ — ಮಾಡಿದನು. ॥೬೨॥

ತಸ್ಮಿನ್ಜಿತೇರಥವೀರೇಸ್ವಯಂತಂದುರ್ಯೋಧನಃಪಾರ್ಷತಮಾಸಸಾದ ॥
ತಂ ಭೀಮಸೇನೋವಿರಥಾಯುಧಂಚಕೃತ್ವಾಬಾಣೇನಾಹನಜ್ಜತ್ರುದೇಶೇ ॥೬೩॥

ರಥವೀರೇ — ರಥಿಕರಲ್ಲಿ ಶ್ರೇಷ್ಠನಾದ, ತಸ್ಮಿನ್ — ಆ ಕೃತವರ್ಮನು, ಜೀತೇಸತಿ — ಪರಾಜಿತನಾಗುತ್ತಿರಲು, ದುರ್ಯೋಧನಃ— ದುರ್ಯೋಧನನು, ಸ್ವಯಂ — ತಾನೇ, ತಂ ಪಾರ್ಷತಂ-ಆ ಧೃಷ್ಟದ್ಯುಮ್ನನನ್ನು, ಆಸಸಾದ-ಹೊಂದಿದನು. ಭೀಮಸೇನಃ — ಭೀಮಸೇನನು, ತಂ — ಆ ದುರ್ಯೋಧನನನ್ನು, ವಿರಥಾಯುಧಂಚ — ರಥರಹಿತನನ್ನಾಗಿಯೂ ಆಯುಧರಹಿತನನ್ನಾಗಿಯೂ, ಕೃತ್ವಾ — ಮಾಡಿ, ಬಾಣೇನ — ಬಾಣದಿಂದ, ಜತ್ರುದೇಶೇ — ಕುತ್ತಿಗೆ ಮತ್ತು ಎದೆಯ ಮಧ್ಯದಲ್ಲಿ, ಅಹನತ್ — ಹೊಡೆದನು.॥೬೩॥

ವಿಮೂರ್ಛಿತಂ ತಂ ರುಧಿರೌಘಮುಚ್ಚೈರ್ವಮಂತಮಾಶುಸ್ವರಥೇನಿಧಾಯ ॥
ಕೃಪೋಯಯೌ ಮಾರುತಿರ್ಧಾರ್ತರಾಷ್ಟ್ರೀಂ ವ್ಯದ್ರಾವಯತ್ಪೃತನಾಂಬಾಣಪೂಗೈಃ ॥೬೪॥

ಕೃಪಃ — ಕೃಪಾಚಾರ್ಯರು. ರುಧಿರೌಘಂ — ರಕ್ತಸಮೂಹವನ್ನು, ಉಚ್ಚೈಃ — ಚೆನ್ನಾಗಿ,ವಮಂತಂ — ವಾಂತಿ ಮಾಡತಕ್ಕ, ವಿಮೂರ್ಛಿತಂ — ಮೂರ್ಛೆಯನ್ನು ಹೊಂದಿದ, ತಂ— ಆ ದುರ್ಯೋಧನನನ್ನು, ಆಶು — ಕೂಡಲೇ, ಸ್ವರಥೇ — ತನ್ನರಥದಲ್ಲಿ, ನಿಧಾಯ — ಇಟ್ಟುಕೊಂಡು, ಯಯೌ — ಹೋದರು. ಮಾರುತಿಃ— ಭೀಮಸೇನನು, ಬಾಣ ಪೂಗೈಃ— ಬಾಣಗಳಸಮೂಹಗಳಿಂದ, ಧಾರ್ತರಾಷ್ಟ್ರೀಂ — ಧೃತರಾಷ್ಟ್ರನ ಸಂಬಂಧಿಯಾದ, ಪೃತನಾಂ — ಸೇನೆಯನ್ನು ವ್ಯದ್ರಾವಯತ್ — ಓಡಿಸಿದನು. ॥೬೪॥

ಭಾ. ಅ. ೪೯—೬೪. ಶ್ರೀಭೀಮನ ಬಾಣ ಹೊಡೆತಕ್ಕೆ ಹಣ್ಣು ಹಣ್ಣಾದ ದುರ್ಯೋಧನ ಅಂದು ರಾತ್ರಿ ಭೀಷ್ಮರ ಹತ್ತಿರ ಬಂದು ನಮಸ್ಕರಿಸಿ ತನಗೆ ಯಾವಾಗಲೂ ಜಯವು ಹೇಗೆ ಸಿಕ್ಕೀತು ಎಂದು ಕೇಳಿದನು. ಆಗ ಭೀಷ್ಮರು ದುರ್ಯೋಧನನಿಗೆ—'ಪಾಂಡವರು ದೇವತೆಗಳು, ಶ್ರೀಕೃಷ್ಣನ ಪ್ರಿಯರು, ಅವನಿಂದ ಸದಾರಕ್ಷಿತರು. ಹಿಂದೊಮ್ಮೆ ಬ್ರಹ್ಮದೇವರು ಶ್ರೀನಾರಾಯಣ ದೇವರನ್ನು ಕಂಡು ಸ್ತುತಿಸಿ, ನಮಿಸಿ ಭೂಭಾರ ದೈತ್ಯರ ಸಂಹಾರಕ್ಕಾಗಿ ಪ್ರಾರ್ಥಿಸಿದಾಗ, ದೇವರು ತಾನು

ಭೂಮಿಯಲ್ಲಿ ದೇವಕಿಯಲ್ಲಿ ಅವತರಿಸುವದಾಗಿ, ತನ್ನ ಸೇವೆಗಾಗಿ ದೇವತೆಗಳೂ ಅವತರಿಸಬೇಕೆಂದೂ ಹೇಳಿದನು. ಬ್ರಹ್ಮ-ದೇವರು ದೇವತೆಗಳಿಗೆ ಹಾಗೆ ಹೇಳಿದರು. ಆ ಪ್ರಕಾರ, ಧರ್ಮ, ವಾಯು, ಇಂದ್ರ, ಅಶ್ವಿನಿ ದೇವತೆಗಳು, ಮರುದ್ದೇವತೆಗಳು ಅವತರಿಸಿರುವರು.ಶ್ರೀನಾರಾಯಣನು ಶ್ರೀಕೃಷ್ಣನಾಗಿ ಅವತರಿಸಿರುವನು.ಅವನಿಂದ ರಕ್ಷಿತರಾದ ಈ ಪಾಂಡವರು ಅಜೇಯರು. ನಿನಗೆ ಸೋಲು ಬರಬಾರದು; ಜಯವಾಗಬೇಕು ಎಂದು ಇಚ್ಛೆ ಇದ್ದರೆ, ಅವರ ಜೊತೆಗೆ ಸಂಧಿಯನ್ನು ಮಾಡಿಕೊ' ಎಂದು ಹೇಳಿದರು. ಆಗ ದುರ್ಯೋಧನನು ಕಪಟದಿಂದ ಶ್ರೀನಾರಾಯಣನನ್ನು ನಮಸ್ಕರಿಸಿ ತನ್ನ ಶಿಬಿರಕ್ಕೆ ಹೋದನು. (ಅವನು ನಮಿಸಿದ್ದನ್ನು ನೋಡಿ ಭೀಷ್ಮರಿಗೆ ಇವನು ಯುದ್ಧವನ್ನು ನಿಲ್ಲಿಸಬಹುದು ಎಂಬ ಭ್ರಾಂತಿಯು ಹುಟ್ಟುವಂತೆ ಮಾಡಿದನು.) ಬೆಳಗಾಗುವಾಗ ಭೀಷ್ಮರ ಶ್ರೇಷ್ಠ ಔಷಧದಿಂದ, ಗಾಯನೋವುಗಳಿಂದ ದೂರನಾಗಿ, ಭೀಷ್ಮರನ್ನು ಮುಂದೆ ಮಾಡಿಕೊಂಡು ಪುನಃ ಯುದ್ಧಕ್ಕೆ ಸೈನ್ಯಸಮೇತನಾಗಿ ಹೊರಟನು. ಆಗ ನಡೆದ ಭೀಕರ ಯುದ್ಧದಲ್ಲಿ ಧೃಷ್ಟದ್ಯುಮ್ನನು ದುರ್ಯೋಧನನ ತಮ್ಮಂದಿರಾದ ವಿಕರ್ಣಾದಿಗಳ ಜೊತೆಗೆ ಯುದ್ಧ ಮಾಡುತ್ತಾ, ಸಮ್ಮೋಹನಾಸ್ತ್ರದಿಂದ ಅವರನ್ನೆಲ್ಲ ಮೋಹಗೊಳಿಸಿ ಬಹು ಸೇನೆಯನ್ನೂ ಸಂಹರಿಸಿದನು. ಆಗ ದ್ರೋಣರು ಅವರನ್ನು ವಿಜ್ಞಾನಾಸ್ತ್ರದಿಂದ ಎಬ್ಬಿಸಿ, ಧೃಷ್ಟದ್ಯುಮ್ನನ ಹತ್ತಿರ ಯುದ್ಧಕ್ಕೆ ಹೋದರು. ಆಗ ಶ್ರೀಭಿಮಸೇನದೇವರು ಅವರ ಸಾರಥಿಯನ್ನು ಕೊಂದು ಬಹು ಶತ್ರುಸೈನ್ಯವನ್ನು ಓಡಿಸಿದರು.ಕೃತವರ್ಮನು ಧೃಷ್ಟದ್ಯುಮ್ನನ ಹತ್ತಿರ ಯುದ್ಧಕ್ಕೆ ಹೋದಾಗ ಧೃಷ್ಟದ್ಯುಮ್ನನು ಭಯಂಕರ ಯುದ್ಧಮಾಡಿ ಅವನ ರಥವನ್ನು ನಾಶಪಡಿಸಿದನು. ಆಗ ದುರ್ಯೋಧನನು ಧೃಷ್ಟದ್ಯುಮ್ನನ ಹತ್ತಿರ ಯುದ್ಧಕ್ಕೆ ಬಂದಾಗ ಶ್ರೀಭೀಮಸೇನದೇವರು ಬಂದು ಅವನ ಆಯುಧ, ರಥಗಳನ್ನು ನಾಶಪಡಿಸಿ, ಅವನ ಕುತ್ತಿಗೆ ಎದೆಗಳು ಸೇರುವ ಪ್ರದೇಶದಲ್ಲಿ ಬಾಣದಿಂದ ಹೊಡೆದರು. ಆಗ ಆ ಹೊಡೆತದಿಂದ ದುರ್ಯೋಧನನು ರಕ್ತವನ್ನು ಕಾರುತ್ತಾ ಮೂರ್ಛಿತನಾಗಿ ಬಿದ್ದನು. ಆಗ ಕೃಪಾಚಾರ್ಯರು ಬಂದು ಅವನನ್ನು ತಮ್ಮ ರಥದಲ್ಲಿ ಹಾಕಿಕೊಂಡು ಹೋದರು. ಶ್ರೀಭೀಮಸೇನರು ಬಾಣವೃಷ್ಟಿಯಿಂದ ಇನ್ನೂ ಹೆಚ್ಚು ಸೈನ್ಯವನ್ನು ಓಡಿಸಿದರು.

ಅಥೇಂದ್ರಸೂನುಃ ಕೇಶವಪ್ರೇರಿತೇನರಥೇನಶತ್ರೂನ್ವಿಧಮನ್ಶರೌಘೈಃ ॥
ರಥಾನ್ರಣೇ ಪಂಚವಿಂಶತ್ಸಹಸ್ರಾನ್ನಿನಾಯ ವೈವಸ್ವತಸಾದನಾಯ ॥೬೫॥

ಅಥ - ಅನಂತರ, ಇಂದ್ರಸೂನುಃ - ಇಂದ್ರನಮಗನಾದ ಅರ್ಜುನನು, ಕೇಶವಪ್ರೇರಿತೇನ - ಶ್ರೀಕೃಷ್ಣನಿಂದ ಪ್ರೇರಿಸಲ್ಪಟ್ಟ, ರಥೇನ-ರಥದಿಂದ, ಶರೌಘೈಃ - ಬಾಣಗಳ ಸಮೂಹಗಳಿಂದ, ಶತ್ರೂನ್- ವೈರಿಗಳನ್ನು, ವಿಧಮನ್‌ಸನ್ - ಸಂತಾಪಗೊಳಿಸುವವನಾಗಿ, ರಣೇ - ಯುದ್ಧದಲ್ಲಿ, ಪಂಚವಿಂಶತ್ಸಹಸ್ರಾನ್ - ಇಪ್ಪತ್ತೈದು ಸಾವಿರ ಸಂಖ್ಯಾಕರಾದ, ರಥಾನ್ - ರಥಿಕರನ್ನು, ವೈವಸ್ವತಸಾದನಾಯ - ಯಮನಲೋಕಕ್ಕೆ, ನಿನಾಯ-ಕಳುಹಿಸಿದನು. ॥೬೫॥

ತಮನ್ವಯಾದ್ಯುಯುಧಾನಸ್ಸುಧನ್ವಾವಿದ್ರಾವಯನ್ಧಾರ್ತರಾಷ್ಟ್ರಸ್ಯಸೇನಾಂ ॥
ತಮಭ್ಯಯಾತ್ಸೌಮದತ್ತಿಸ್ತಯೋಶ್ಚಸುಯುದ್ಧಮಾಸೀದತಿಭೈರವಾಸ್ತ್ರಂ ॥೬೬॥

ಸುಧನ್ವಾ— ಶ್ರೇಷ್ಠಧನುಸ್ಸುಳ್ಳ, ಯುಯುಧಾನಃ - ಸಾತ್ಯಕಿಯು, ಧಾರ್ತರಾಷ್ಟ್ರಸ್ಯ- ದುರ್ಯೋಧನನ, ಸೇನಾಂ ಸೇನೆಯನ್ನು, ವಿದ್ರಾವಯನ್‌ಸನ್ — ಓಡಿಸುವವನಾಗಿ, ತಂ-- ಆ ಅರ್ಜುನನನ್ನು, ಅನ್ವಯಾತ್— ಅನುಸರಿಸಿಹೋದನು. ಸೌಮದತ್ತಿಃ-ಸೋಮದತ್ತನ ಮಗನಾದ ಭೂರಿಶ್ರವನು, ತಂ-ಆ ಸಾತ್ಯಕಿಯನ್ನು ಅಭ್ಯಯಾತ್ —ಹೊಂದಿದನು. ತಯೋಃ- ಅವರಿಬ್ಬರಿಗೆ, ಅತಿಭೈರವಾಸ್ತ್ರಂ— ಅತ್ಯಂತ ಭಯಂಕರ ಅಸ್ತ್ರಗಳುಳ್ಳ, ಸುಯುದ್ಧಂ — ಶ್ರೇಷ್ಠಯುದ್ಧವು, ಆಸೀತ್— ಆಯಿತು. ॥೬೬॥

ಪುತ್ರಾನ್ದಶಾಸ್ಯಶುನಿಹತ್ಯವೀರಃ ಸಸಾತ್ಯಕೇಃಸೌಮದತ್ತಿಃಸಕಾಶೇ ॥
ಸಮರ್ದಯಾಮಾಸಶರೀರದಾರಣೈಃಶರೈರುಭೌತೌ ವಿರಥೌ ಚ ಚಕ್ರತುಃ ॥೬೭॥

ವೀರಃ—ಪರಾಕ್ರಮಿಯಾದ, ಸಃ ಸೌಮದತ್ತಿಃ - ಆ ಭೂರಿಶ್ರವನು, ಸಾತ್ಯಕೇಃ—ಸಾತ್ಯಕಿಯ. ಸಕಾಶೇ- ಸಮೀಪದಲ್ಲಿ, ಅಸ್ಯ— ಈ ಸಾತ್ಯಕಿಯ, ದಶಪುತ್ರಾನ್ — ಹತ್ತು ಮಕ್ಕಳನ್ನು, ಆಶು — ಕೂಡಲೇ, ನಿಹತ್ಯ — ಕೊಂದು, ಶರೀರ

ದಾರಣೈಃ – ಶರೀರವನ್ನು ಸೀಳತಕ್ಕ, ಶರೈಃ – ಬಾಣಗಳಿಂದ, ಸಮರ್ದಯಾಮಾಸ—ಸಾತ್ಯಕಿಯನ್ನು ಚೆನ್ನಾಗಿ ಪೀಡಿಸಿದನು. ಉಭೌ ತೌ — ಸಾತ್ಯಕಿ, ಭೂರಿಶ್ರವರಿಬ್ಬರು, ವಿರಥೌ — ಅನ್ಯೋನ್ಯವಾಗಿ, ರಥರಹಿತರನ್ನಾಗಿ, ಚಕ್ರತುಃ— ಮಾಡಿ ಕೊಂಡರು ॥೬೭॥

ಅಥಾಸಿಪಾಣಿಂ ಯುಯುಧಾನಮಾಶು ಮಹಾಸಿಹಸ್ತೇನಚಸೌ ಮದತ್ತಿನಾ ॥
ಆಸಾದಿತಂ ವೀಕ್ಷ್ಯ ರಥಂಸ್ವಕೀಯಂ ಆರೋಪಯಾಮಾಸಸುತೋऽನಿಲಸ್ಯ ॥೬೮॥

ಅಥ— ಅನಂತರ, ಅನಿಲಸ್ಯ– ವಾಯುದೇವರ, ಸುತಃ–ಮಗನಾದ ಭೀಮಸೇನನು, ಮಹಾಸಿಹಸ್ತೇನ–ಮಹತ್ತಾದ ಖಡ್ಗವುಕೈಯಲ್ಲುಳ್ಳ, ಸೌ ಮದತ್ತಿನಾ– ಭೂರಿಶ್ರವನಿಂದ, ಆಸಾದಿತಂ–ಹೊಂದಲ್ಪಟ್ಟ, ಅಸಿಪಾಣಿಂ– ಖಡ್ಗವು ಕೈಯಲ್ಲುಳ್ಳ, ಯುಯುಧಾನಂ – ಸಾತ್ಯಕಿಯನ್ನು, ವೀಕ್ಷ್ಯ — ನೋಡಿ, ಆಶು–ಕೂಡಲೇ, ಸ್ವರಥಂ— ತನ್ನ ರಥವನ್ನು ಆರೋಪಯಾಮಾಸ— ಏರಿಸಿದನು. ॥೬೮॥

ಸುಯೋಧನಃ ಸೌ ಮದತ್ತಿಂಸ್ವಕೀಯರಥೇವ್ಯವಸ್ಥಾಪ್ಯಚಭೀಮಸೇನಾತ್ ॥
ಅಪಾದ್ರವದ್ವಾಸವಿರ್ಭೀಷ್ಮಮಾಜೌ ಸಮಾಸಸಾದಾಶು ಮಹೇಂದ್ರಕಲ್ಪಃ ॥೬೯॥

ಸುಯೋಧನಃ— ದುರ್ಯೋಧನನು, ಸೌ ಮದತ್ತಿಂ – ಭೂರಿಶ್ರವನನ್ನು, ಸ್ವಕೀಯರಥೇ– ತನ್ನರಥದಲ್ಲಿ, ವ್ಯವಸ್ಥಾಪ್ಯ – ಕೂತುಕೊಳ್ಳಿಸಿ, ಭೀಮಸೇನಾತ್ – ಭೀಮಸೇನನ ಸಕಾಶದಿಂದ, ಅಪಾದ್ರವತ್— ಓಡಿಹೋದನು. ಮಹೇಂದ್ರಕಲ್ಪಃ – ದೇವೇಂದ್ರನಿಗೆ ಸಮಾನನಾದ, ವಾಸವಿಃ – ಅರ್ಜುನನು, ಆಜೌ —ಯುದ್ಧದಲ್ಲಿ ಭೀಷ್ಮಂ - ಭೀಷ್ಮರನ್ನು, ಆಶು – ಕೂಡಲೇ, ಸಮಾಸಸಾದ – ಹೊಂದಿದನು. ॥೬೯॥

ಉಭೌ ಚತಾವಸ್ತ್ರವಿದಾಂ ಪ್ರಬರ್ಹೌ ಶರೈರ್ಮಹಾಶೀವಿಷ ಸನ್ನಿಕಾಶೈಃ ॥
ತತಕ್ಷತುರ್ನಾಕಸದಾಂ ಸಮಕ್ಷಂ ಮಹಾಬಲೌ ಸಂಯತಿ ಜಾತದರ್ಪೌ ॥೭೦॥

ಅಸ್ತ್ರವಿದಾಂ–-ಅಸ್ತ್ರವನ್ನು ತಿಳಿದವರಲ್ಲಿ,ಪ್ರಬರ್ಹೌ – ಶೇಷ್ಠರಾದ,ಮಹಾಬಲೌ – ಬಹಳ ಬಲಿಷ್ಠರಾದ, ಸಂಯತಿ–ಯುದ್ಧದಲ್ಲಿ,ಜಾತದರ್ಪೌ–ಉಂಟಾದ ಗರ್ವವುಳ್ಳ, ಉಭೌ –ಇಬ್ಬರಾದ, ತೌ –ಆ ಭೀಷ್ಮಾರ್ಜುನರು,ಮಹಾಶೀವಿಷಸನ್ನಿಕಾಶೈಃ –ಮಂತ್ರೌಷಧಾದಿಗಳಿಂದ ಪರಿಹರಿಸಲು ಅಶಕ್ಯವಾದ, ಸರ್ಪಕ್ಕೆ ಸದೃಶಗಳಾದ, ಶರೈಃ—ಬಾಣಗಳಿಂದ, ನಾಕಸದಾಂ – ಸ್ವರ್ಗವಾಸಿಗಳಾದ ದೇವತೆಗಳ, ಸಮಕ್ಷಂ – ಎದುರಿನಲ್ಲಿ, ತತಕ್ಷತುಃ— ಹೊಡೆದುಕೊಂಡರು. ॥೭೦॥

ಸ್ವಬಾಹುವೀರ್ಯೇಣಜಿತಃ ಸ ಭೀಷ್ಮಃ ಕಿರೀಟಿನಾಲೋಕಮಹಾರಥೇನ ॥
ಸೇನಾಮುಪಾಹೃತ್ಯಯಯೌ ನಿಶಾಯಾಮಾಸಾದಿತಾಯಾಮುಥ ಪಾಂಡವಾಶ್ಚ ॥೭೧॥

ಲೋಕಮಹಾರಥೇನ – ಲೋಕದಲ್ಲಿ ಮಹಾರಥಿಕನಾದ, ಕಿರೀಟಿನಾ— ಅರ್ಜುನನಿಂದ, ಸ್ವಬಾಹುವೀರ್ಯೇಣ — ತನ್ನ ಭುಜ ಪರಾಕ್ರಮದಿಂದ, ಜಿತಃ – ಪರಾಜಿತರಾದ, ಸಃಭೀಷ್ಮಃ— ಆ ಭೀಷ್ಮಾಚಾರ್ಯರು, ನಿಶಾಯಾಂ – ರಾತ್ರಿಯು, ಆಸಾದಿತಾಯಾಂ ಸತ್ಯಾಂ— ಪ್ರಾಪ್ತವಾಗುತ್ತಿರಲು, ಸೇನಾಂ – ಸೈನ್ಯವನ್ನು, ಅಪಾವೃತ್ಯ— ಹಿಂತಿರುಗಿಸಿ, ಯಯೌ — ಹೋದರು. ಅಥ—ಅನಂತರ, ಪಾಂಡವಾಶ್ಚ—ಪಾಂಡವರೂ ಕೂಡ, ಯಯುಃ – ಹೋದರು ॥೭೧॥

ತತಃ ಪರೇದ್ಯುಃ ಪುನರೇವ ಭೀಮಭೀಷ್ಮೌ ಪುರಸ್ಕೃತ್ಯಸಮೊಯಯುಸ್ತೇ ॥
ಸೇನೇತದಾ ಸಾರಥಿಹೀನಮಾಶು ಭೀಷ್ಮಂಕೃತ್ವಾಮಾರುತಿರಭ್ಯಯಾತ್ಪರಾನ್ ॥೭೨॥

ತತಃ—ಅನಂತರ, ಪರೇದ್ಯುಃ – ಮರುದಿವಸ, ತೇ ಸೇನೇ- ಎರಡು ಆ ಸೇನೆಗಳು, ಭೀಮಭೀಷ್ಮೌ – ಭೀಮ ಭೀಷ್ಮರನ್ನು, ಪುರಸ್ಕೃತ್ಯ—ಮುಂದೆ ಮಾಡಿಕೊಂಡು, ಸಮೀತುಃ— ಬಂದವು. ತದಾ – ಆಗ, ಮಾರುತಿಃ— ಭೀಮಸೇನನು, ಭೀಷ್ಮಂ – ಭೀಷ್ಮರನ್ನು, ಆಶು—ಕೂಡಲೇ ಸಾರಥಿಹೀನಂ— ಸಾರಥಿರಹಿತರನ್ನಾಗಿ, ಕೃತ್ವಾ ಮಾಡಿ, ಪರಾನ್ — ಶತ್ರುಗಳನ್ನು ಕುರಿತು, ಅಭ್ಯಯಾತ್—ಯುದ್ಧಕ್ಕಾಗಿ ಹೋದನು. ॥೭೨॥

ನಿಪಾತಿತಾಸ್ತೇನ ರಥೇಭವಾಜಿನಃ ಪ್ರದುದ್ರುವುಶ್ಚಾವಶಿಷ್ಟಾಃ ಸಮುಸ್ತಾಃ ॥
ದುರ್ಯೋಧನಾದ್ಯೇಷು ಪರಾಜಿತೇಷು ಭೀಷ್ಮದ್ರೋಣ ದ್ರೌಣಿಪುರಸ್ಸರೇಷು ॥೭೩॥

ತೇನ- ಆ ಭೀಮನಿಂದ, ರಥೇಭವಾಜಿನಃ-ರಥಗಳು, ಆನೆಗಳು, ಕುದುರೆಗಳೂ ಇವುಗಳುಳ್ಳವೀರರು, ನಿಪಾತಿತಾಃ-ಕೊಲ್ಲಲ್ಪಟ್ಟರು, ಭೀಷ್ಮದ್ರೋಣದ್ರೌಣಿಪುರಸ್ಸರೇಷು — ಭೀಷ್ಮರು, ದ್ರೋಣರು, ಅಶ್ವತ್ಥಾಮ ಇವರೇ ಮುಂದಾಳುಗಳಾಗಿರುಳ್ಳ, ದುರ್ಯೋಧನಾದ್ಯೇಷು -- ದುರ್ಯೋಧನನೇ ಮೊದಲಾಗಿರುಳ್ಳವರು, ಪರಾಜಿತೇಷು ಸತ್ಸು-ಪರಾಜಿತರಾಗುತ್ತಿರಲು, ಅವಶಿಷ್ಟಾಃ ಸಮುಸ್ತಾಃ – ಉಳಿದವರೆಲ್ಲರೂ, ಪ್ರದುದ್ರುವುಃ - ಓಡಿದರು. ॥೭೩॥

ಮಹಾಗಜಸ್ಥೋಭಗದತ್ತ ಆಗಾದಾಯನ್ಬಾಣಾನ್ಭೀಮಸೇನೇಽಮುಚಚ್ಚ ॥
ತೇನಾತಿವಿದ್ಧೇ ಭೀಮಸೇನೇಽಸ್ಯ ಪುತ್ರಉದ್ಯಚ್ಛನೂನಂ ಪಿತರಂನಿವಾರ್ಯ ॥
ಘಟೋತ್ಕಚೋಽಭ್ಯದ್ರವದಾಶುವೀರಃ ಸ್ವಮಾಯಯಾ ಹಸ್ತಿಚತುಷ್ಟಯಸ್ಥಃ ॥೭೪॥

ಮಹಾಗಜಸ್ಥಃ – ದೊಡ್ಡ ಆನೆಯಲ್ಲಿ ಕುಳಿತಿರುವ, ಭಗದತ್ತಃ— ಭಗದತ್ತನು, ಆಗಾತ್ – ಬಂದನು. , ಆಯನ್–ಬರತಕ್ಕ ಭಗದತ್ತನು, ಭೀಮಸೇನೇ-ಭೀಮಸೇನನಲ್ಲಿ,ಬಾಣಾನ್–ಬಾಣಗಳನ್ನು ಅಮುಚತ್–ಬಿಟ್ಟನು, ತೇನ–ಆ ಭಗದತ್ತನಿಂದ ಭೀಮಸೇನೇ – ಭೀಮಸೇನನು,ಅತಿವಿದ್ಧೇಸತಿ – ಚೆನ್ನಾಗಿಹೊಡೆಯಲ್ಪಡುತ್ತಿರಲು, ಅಸ್ಯ – ಈ ಭೀಮನ, ಪುತ್ರಃ–ಮಗನಾದ, ವೀರಃ – ಪರಾಕ್ರಮಿಯಾದ, ಸ್ವಮಾಯಯಾ — ತನ್ನ ಮಾಯೆಯಿಂದ, ಹಸ್ತಿಚತುಷ್ಟಯಸ್ಥಃ — ನಾಲ್ಕು ಆನೆಗಳಲ್ಲಿರತಕ್ಕ, ಘಟೋತ್ಕಚಃ – ಘಟೋತ್ಕಚನು ಉದ್ಯಚ್ಛಮಾನಂ— ಯುದ್ಧ ಮಾಡಲು ಪ್ರಯತ್ನ ಮಾಡುವ, ಪಿತರಂ— ತಂದೆಯನ್ನು, ನಿವಾರ್ಯ ತಡೆದು, ಆಶು – ಕೂಡಲೇ, ಅಭ್ಯದ್ರವತ್–ತಾನೇ ಯುದ್ಧ ಮಾಡಲು ಹೋದನು ॥೭೪॥

ಇವ — ಮಗನು ತಡೆದಾಗ ಭೀಮನು ಯುದ್ಧಕ್ಕೆ ಹೋಗದಿರಲು ಕಾರಣವನ್ನು ಹೇಳುತ್ತಾರೆ.

ಸವೈಷ್ಣವಾಸ್ತ್ರಂ ಭಗದತ್ತಸಂಸ್ಥಂ ವಿಜ್ಞಾಯವಿಷ್ಣೋರ್ವರತೋ ವಿಶೇಷತಃ ॥
ಅಮೋಘಮನ್ಯತ್ರ ಹರೇರ್ಮರುತ್ಸುತಃ ಪುತ್ರೋಯಾತೇನಸ್ವಯಮಭ್ಯಧಾವತ್ ॥೭೫॥

ಸ ಮರುತ್ಸುತಃ – ಆ ವಾಯುಪುತ್ರನಾದ ಭೀಮನು, ಹರೇಃ— ಪರಮಾತ್ಮನದೆಸೆಯಿಂದ, ಅನ್ಯತ್ರ—ಇತರರಲ್ಲಿ, ಅಮೋಘಂ – ವ್ಯರ್ಥವಾಗದಿರುವ, ವಿಷ್ಣೋಃ— ವರಾಹರೂಪಿಯಾದ ಪರಮಾತ್ಮನ, ವಿಶೇಷತಃ – ವಿಶೇಷಾಕಾರವಾದ, ವರತಃ – ವರದಿಂದ, ಭಗದತ್ತಸಂಸ್ಥಂ — ಭಗದತ್ತನಲ್ಲಿರತಕ್ಕ, ವೈಷ್ಣವಾಸ್ತ್ರಂ – ವಿಷ್ಣುಸಂಬಂಧಿಯಾದ ಅಸ್ತ್ರವನ್ನು, ವಿಜ್ಞಾಯ – ತಿಳಿದು, ಪುತ್ರೇ – ಮಗನಾದ ಘಟೋತ್ಕಚನು, ಯಾತೇಸತಿ – ಹೋಗುತ್ತಿರಲು, ಸ್ವಯಂ – ತಾನು, ನ – ಅಭ್ಯಧಾವತ್ – ಯುದ್ಧಕ್ಕಾಗಿ ಹೋಗಲಿಲ್ಲ ॥೭೫॥

ಅನುಗ್ರಹಾದಭ್ಯಧಿಕಾದವಧ್ಯಂ ಜಾನನ್ನಪಿಸ್ವಂ ವಾಸುದೇವಸ್ಯನಿತ್ಯಂ ॥
ತದ್ಭಕ್ತಿವೈಶೇಷ್ಯತ ಏವ ತಸ್ಯ ಸತ್ಯಂ ವಾಕ್ಯಂ ಕರ್ತುಮುರಿನಚಾಗಾತ್ ॥೭೬॥

ವಾಸುದೇವಸ್ಯ – ಶ್ರೀಕೃಷ್ಣನ, ನಿತ್ಯಂ - ಯಾವಾಗಲೂ, ಅಭ್ಯಧಿಕಾತ್ – ರುದ್ರಾದಿಗಳಲ್ಲಿರುವ ಅನುಗ್ರಹಕ್ಕಿಂತ ಹೆಚ್ಚಾದ, ಅನುಗ್ರಹಾತ್—ತನ್ನಲ್ಲಿರುವ ಅನುಗ್ರಹದಿಂದ, ಸ್ವಂ – ತನ್ನನ್ನು, ಅವಧ್ಯಂ – ಇನ್ನೊಬ್ಬರಿಂದ ಕೊಲ್ಲಲು ಅಶಕ್ಯ, ನನ್ನಾಗಿ, ಜ್ಞಾನನ್ನಪಿ – ತಿಳಿದವನಾದರೂ ಕೂಡ, ತದ್ಭಕ್ತಿವೈಶೇಷ್ಯತಃ ಏವ - ವಿಷ್ಣುವಿನಲ್ಲಿರುವ ಭಕ್ತಿಯ ಪ್ರಾಬಲ್ಯದಿಂದಲೇ ತಸ್ಯ – ಆ ವರಾಹರೂಪಿ ಪರಮಾತ್ಮನ, ವಾಕ್ಯಂ – ಮಾತನ್ನು, ಸತ್ಯಂ—ಸತ್ಯವನ್ನಾಗಿ, ಕರ್ತುಂ — ಮಾಡಲು, ಅರಿಂ – ಶತ್ರುವಾದ ಭಗದತ್ತನನ್ನು ಕುರಿತು, ನಚಾಗಾತ್ – ಹೋಗಲಿಲ್ಲ. ॥೭೬॥

ಯದಾಸ್ವಪುತ್ರೇಣ ಜಿತೋಭವೇತ್ಸ ಕಿಂ ಸ್ವಾತ್ಮನೇತ್ಯೇವತದಾಪ್ರವೇತ್ತುಂ ॥
ಸವಿಸ್ಮೃತಾಸ್ತ್ರಸ್ತುಯದಾಭವೇತ ತದಾ ಭೀಮೋಭಗದತ್ತಂ ಪ್ರಯಾತಿ ॥೭೭॥

ಯದಾ— ಯಾವಾಗ, ಸ್ವಪುತ್ರೇಣೈವ— ತನ್ನ ಮಗನಾದ ಘಟೋತ್ಕಚನಿಂದಲೇ, ಸಃ— ಆ ಭಗದತ್ತನು, ಜಿತಃ— ಪರಾಜಿತನು,ಭವೇತ್ – ಆಗುವನೋ, ತದಾ – ಆವಾಗ, ಸ್ವಾತ್ಮನಾ – ತನ್ನಿಂದ, ಕಿಂ – ಪರಾಜಿತನೆಂದು ಏನು ಹೇಳತಕ್ಕದ್ದು, ಇತಿ – ಎಂಬುದಾಗಿ, ಪ್ರವೇತ್ತುಂ – ತಿಳಿಸುವುದಕ್ಕಾಗಿ, ಭಗದತ್ತನನ್ನು ಕುರಿತು ಹೋಗಲಿಲ್ಲ – ಸಃ– ಆ ಭಗದತ್ತನು,ಯದಾ– ಯಾವಾಗ, ವಿಸ್ಮೃತಾಸ್ತ್ರಸ್ತು ಭವೇತ – ಅಸ್ತ್ರಾತ್ಮಕ ಮಂತ್ರಸ್ಮರಣೆ ಇಲ್ಲದವನಾಗುವನೋ, ತದಾ – ಆಗ, ಭೀಮಃ – ಭೀಮನು, ಭಗದತ್ತಂ – ಭಗದತ್ತನನ್ನು, ಪ್ರಯಾತಿ — ಯುದ್ಧಕ್ಕಾಗಿ ಹೊಂದುತ್ತಾನೆ. ॥೭೭॥

ಏಷತೇಭೀಮಂ ಚಾರ್ಜುನಂ ನಾಸ್ತ್ರಮೇಷ ಪ್ರಮುಂಚತೀತ್ಯೇವಹಿ ವೇದ ಭೀಮಃ ॥೭೮॥

ಚತುರ್ಗಜಾತ್ಮೋಪರಿಗಾತ್ಮಕಶ್ಚ ಘಟೋತ್ಕಚಃ ಸುಪ್ರತೀಕಂಚ ತಂಚ ॥
ನಾನಾಪ್ರಹಾರೈರ್ವಿತುದಂಶ್ಚಕಾರ ಸಂದಿಗ್ಧ ಜೀವೌ ಜಗತಃ ಸಮಕ್ಷಂ ॥೭೯॥

~~ಏಷಃ – ಈ ಭಗದತ್ತನು, ಭೀಮಂ – ಭೀಮನನ್ನು, ಅರ್ಜುನಂಚ - ಅರ್ಜುನನನ್ನೂ ಕೂಡ, ಮುತೇ – ಹೊರತು,~~ ಅಸ್ತ್ರಂ – ವೈಷ್ಣವಾಸ್ತ್ರವನ್ನು, ನೈವಪ್ರಮುಂಚತಿ-ಬಿಡುವುದೇ ಇಲ್ಲ, ಇತಿ— ಎಂಬುದಾಗಿ. ಭೀಮಃ – ಭೀಮನು, ವೇದ – ತಿಳಿದಿರುತ್ತಾನೆ. ಘಟೋತ್ಕಚಃ – ಘಟೋತ್ಕಚನು, ಚತುರ್ಗಜಾತ್ಮೋಪರಿಗಾತ್ಮಕಃ ಸನ್ – ನಾಲ್ಕು ಆನೆಗಳ ರೂಪವುಳ್ಳವನೂ ಆನೆಗಳ ಮೇಲೆ ನಾಲ್ಕು ರೂಪವುಳ್ಳವನೂ ಆಗಿ, ಸುಪ್ರತೀಕಂ— ಸುಪ್ರತೀಕವೆಂಬ ಆನೆಯನ್ನೂ, ತಂಚ–ಆ ಭಗದತ್ತನನ್ನೂ ಕೂಡ, ನಾನಾಪ್ರಹಾರೈಃ-ನಾನಾವಿಧ ಆಯುಧಗಳ ತಾಡನೆಗಳಿಂದ, ವಿತುದನನ್ ವ್ಯಥೆಪಡಿಸುವವನಾಗಿ, ಜಗತಃ– ಲೋಕದ, ಸಮಕ್ಷಂ – ಎದುರಿನಲ್ಲಿ, ಸಂದಿಗ್ಧ ಜೀವೌ ಸಂತೌ – ಜೀವನ ವಿಷಯದಲ್ಲಿ ಸಂಶಯವುಳ್ಳವರನ್ನಾಗಿ, ಚಕಾರ ಮಾಡಿದನಃ. ॥೭೮॥ ॥೭೯॥

ಗಜಾರ್ತನಾದಂತು ನಿಶಮ್ಯಭೀಷ್ಮಮುಖಾಃಸಮಾಪೇತುರಮುಂ ಚ ದೃಷ್ಟ್ವಾ ॥
ಮಹಾಕಾಯಂಭೀಮಮಮುಷ್ಯಪೃಷ್ಠಗೋಪಂಚವಾಯ್ವಾತ್ಮಜಮುತ್ರಸನ್ಭೃಶಂ ॥೮೦॥

ತೇಭೀತಭೀತಾಃಪೃತನಾಪಹಾರಂಕೃತ್ವಾಽಪಜಗ್ಮುಃ ಶಿಬಿರಾಯಶೀಘ್ರಂ ॥೮೧॥

ಭೀಷ್ಮಮುಖಾಃ – ಭೀಷ್ಮರೇಪ್ರಧಾನರಾಗಿರುಳ್ಳವರು, ಗಜಾರ್ತನಾದಂ–ಸುಪ್ರತೀಕವೆಂಬ ಆನೆಯದುಃಖಿದ ಧ್ವನಿಯನ್ನು,ನಿಶಮ್ಯ–ಕೇಳಿ, ಸಮಾಪೇತುಃ–ಬಂದರು. ಮಹಾಕಾಯಂ–ಸ್ಥೂಲದೇಹವುಳ್ಳ,ಭೀಮಂ–ಭಯಂಕರನಾದ, ಅಮುಂ– ಈ ಘಟೋತ್ಕಚನನ್ನು, ಅಮುಷ್ಯ – ಈ ಘಟೋತ್ಕನ, ಪೃಷ್ಠಗೋಪಂ–ಹಿಂದುಗಡೆರಕ್ಷಿಸಿಕೊಂಡಿರತಕ್ಕ, ವಾಯ್ವಾತ್ಮಜಂಚ– ಭೀಮನನ್ನೂ ಕೂಡ, ದೃಷ್ಟ್ವಾಪ — ನೋಡಿ, ಭೃಶಂ – ಚೆನ್ನಾಗಿ, ಅತ್ರಸನ್ – ಭಯಗ್ರಸ್ತರಾದರು. ಭೀತಭೀತಾಃ – ಅತ್ಯಂತ ಭಯಗ್ರಸ್ತರಾದ, ತೇ—ಆ ಭೀಷ್ಮಾದಿಗಳು, ಪೃತನಾಪಹಾರಂ – ಸೈನ್ಯದ ಅಪಹಾರವನ್ನು, ಕೃತ್ವಾ–ಮಾಡಿ, ಶೀಘ್ರಂ – ಬೇಗನೆ, ಶಿಬಿರಾಯ — ಶಿಬಿರಕ್ಕೋಸ್ಕರ, ಅಪಜಗ್ಮುಃ – ಹೋದರು. ॥೮೦॥ ॥೮೧॥

ಭಾ. ಅ. ೬೫—೮೧. ಅರ್ಜುನನು ಸರ್ವೋತ್ತಮಶ್ರೀಕೃಷ್ಣನಸಾರಥ್ಯಉಳ್ಳ ರಥದಲ್ಲಿ ಕುಳಿತು ಯುದ್ಧ ಮಾಡುತ್ತಾ ಇಪ್ಪತ್ತೈದುಸಹಸ್ರ ರಥಿಕರನ್ನು ಸಂಹರಿಸಿದನು. ಅವನ ಬೆನ್ನು ಹಿಂದೆಯೇ ಸಾತ್ಯಕಿಯು ಕೌರವ ಸೈನ್ಯವನ್ನು ಓಡಿಸುತ್ತಾ ಬಂದನು. ಅವನ ಹತ್ತಿರ ಭೂರಿಶ್ರವನು ಯುದ್ಧಕ್ಕೆ ಬಂದಾಗ ಅವರಿಬ್ಬರಿಗೂ ಭಯಂಕರ ಅಸ್ತ್ರಯುದ್ಧ ವಾಯಿತು. ಅದರಲ್ಲಿ ಸಾತ್ಯಕಿಯ ಎದುರೇ ಅವನ ಹತ್ತು ಮಕ್ಕಳನ್ನು ಕೊಂದನು; ಸಾತ್ಯಕಿಯನ್ನೂ ಪೀಡಿಸಿದನು. ಪರಸ್ಪರರ ರಥಗಳನ್ನು ನಾಶಪಡಿಸಿದರು. ಭೂರಿಶ್ರವನು ಖಡ್ಗಹಿಡಿದು ಬಂದನು; ಸಾತ್ಯಕಿಯೂ ಖಡ್ಗವನ್ನು ಹಿಡಿದಿದ್ದಾನೆ. ಅವನನ್ನು ಶ್ರೀಭೀಮಸೇನದೇವರು ನೋಡಿ, ತನ್ನ ರಥದಲ್ಲಿ ಹತ್ತಿಸಿಕೊಂಡರು. ಆಗ ದುರ್ಯೋಧನನು ಭೂರಿಶ್ರವನನ್ನು ತನ್ನ ರಥದಲ್ಲಿ ಹತ್ತಿಸಿಕೊಂಡು ಶ್ರೀಭೀಮಸೇನರಿಂದ ದೂರಕ್ಕೆ ಓಡಿಹೋದನು. ಇನ್ನೊಂದು ಕಡೆಗೆ ಅರ್ಜುನ–ಭೀಷ್ಮರು ಯುದ್ಧ ಮಾಡಿದರು, ಇವರ ಆ ಸರ್ಪಸದೃಶವಾದ ಬಾಣಗಳಿಂದ ಘೋರವಾದ ಯುದ್ಧವನ್ನು ದೇವತೆಗಳೂ ಅಂತರಿಕ್ಷದಲ್ಲಿ ನೋಡುತ್ತಿದ್ದರು. ಆ ಯುದ್ಧದಲ್ಲಿ ಅರ್ಜುನನು ಭೀಷ್ಮರನ್ನು ಗೆದ್ದನು. ಆ ದಿನ ಸಾಯಂಕಾಲವಾದ್ದರಿಂದ ಭೀಷ್ಮರು ಸೇನೆಯನ್ನು ಹಿಂದೆಗೆದು ಕೊಂಡು ಹೋದರು. ಪಾಂಡವರೂ ಹೋದರು. ಮರುದಿನ ಭೀಷ್ಮ ಭೀಮಸೇನರನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಬಂದರು. ಆಗ ಶ್ರೀಭೀಮಸೇನರು ಭೀಷ್ಮರಸಾರಥಿಯನ್ನು ಸಂಹರಿಸಿ, ರಥಗಳನ್ನು. ರಥಿಕರನ್ನು ಆನೆ–ಕುದುರೆಗಳನ್ನೂ ಸಂಹರಿಸಿದರು. ಅಷ್ಟೇ ಅಲ್ಲದೆ, ಭೀಷ್ಮ, ದ್ರೋಣ, ಅಶ್ವತ್ಥಾಮ, ದುರ್ಯೋಧನಾದಿಗಳೆಲ್ಲರೂ ಶ್ರೀಭೀಮಸೇನದೇವರಿಗೆ ಸೋತರು. ಉಳಿದೆಲ್ಲರೂ ಓಡಿಹೋದರು. ಆಗ ಭಗದತ್ತನು ತನ್ನ ಸುಪ್ರತೀಕ ಎಂಬ ಆನೆಯಮೇಲೆ ಕುಳಿತುಕೊಂಡು ಬಂದಾಗ, ಭೀಮಸೇನರನ್ನು ಗಟ್ಟಿಯಾಗಿ ಹೊಡೆದಾಗ, ವಾಯುಶಕ್ತಿಯಿಂದ ನಾಲ್ಕು ಆನೆಗಳ ಮೇಲೆ ನಾಲ್ಕು ರೂಪಗಳಿಂದ ಕುಳಿತ ಘಟೋತ್ಕಚನು, ಆ ಭಗದತ್ತನನ್ನು ಎದುರಿಸಿದನು. ಶ್ರೀಭೀಮಸೇನರನ್ನು ನಿಲ್ಲಿಸಿದನು. ಆ ಭಗದತ್ತನ ಹತ್ತಿರ ಶ್ರೀವರಾಹದೇವರ ವಿಶೇಷವರದಿಂದಾಗಿ ವ್ಯರ್ಥವಾಗದೇ ಇರುವ ವೈಷ್ಣವಾಸ್ತ್ರವು ಇತ್ತು. ಅದನ್ನು ಶ್ರೀಭೀಮಸೇನ-ಅರ್ಜುನ ಇಬ್ಬರನ್ನು ಬಿಟ್ಟು ಬೇರೆ ಯಾರಮೇಲೂ ಆ ಭಗದತ್ತನು ಪ್ರಯೋಗಿಸುವದಿಲ್ಲ ಎಂದು ತಿಳಿದಿದ್ದ ಭೀಮಸೇನದೇವರು, ತಾನು ಯುದ್ಧಕ್ಕೆ ಹೋದರೆ ತನ್ನ ಮೇಲೆ ಆ ಅಸ್ತ್ರವನ್ನು ಅವನು ಪ್ರಯೋಗಿಸುವನು. ತಾನೂಕೂಡ ಇತರ ಯಾರಲ್ಲಿಯೂ ಇರದ ಶ್ರೀವಿಷ್ಣುವಿನ ವಿಶೇಷಾನುಗ್ರಹದಿಂದ ಅವಧ್ಯನಾದ್ದರಿಂದ ವರಾಹರೂಪಿ ಪರಮಾತ್ಮನ ವರವು ಅಸತ್ಯವಾಗುವ ಪ್ರಸಂಗ ಬರುತ್ತದೆ. ಹಾಗಾಗಬಾರದು. ಆದ್ದರಿಂದ ಆ ಅಸ್ತ್ರವನ್ನೇ ಬಿಡುವ ಪ್ರಸಂಗವನ್ನು ಈಗ ತರುವಂತಾಗಬಾರದೆಂದು ಶ್ರೀವಿಷ್ಣುವಿನ ಭಕ್ತವಿಶೇಷದಿಂದಲೇ, ಘಟೋತ್ಕಚನು ತಡೆದದ್ದನ್ನು ನಿಮಿತ್ತಮಾಡಿಕೊಂಡು ಶ್ರೀಭೀಮಸೇನರು ಭಗದತ್ತನ ಹತ್ತಿರ ಯುದ್ಧಕ್ಕೆ ಹೋಗಲಿಲ್ಲ. ಇದು ಒಂದು ಕಾರಣ; ಮತ್ತು ಮಗನೇ ಅವನನ್ನು ಗೆಲ್ಲುವಾಗ ತಾನು ಅವನನ್ನು ಗೆಲ್ಲುವದು ಏನು ಕಠಿಣ ಎಂದು ತಿಳಿಸುವದಕ್ಕಾಗಿಯೂ ಹೋಗಲಿಲ್ಲ. ಆದ್ದರಿಂದಲೇ, ಭಗದತ್ತನು ಆ ವೈಷ್ಣವ ಅಸ್ತ್ರವನ್ನು, ಉಪಯೋಗಿಸದಂತೆ ಮರೆತವನಾಗುತ್ತಿರಲು ಅವನ ಮೇಲೆ ಯುದ್ಧಮಾಡಿಯೇಮಾಡುತ್ತಾರೆ. ಭಗದತ್ತನ ಜೊತೆಗೆ ಘೋರಯುದ್ಧ ಮಾಡಿದ ಘಟೋತ್ಕಚನು ಅವನ ಆನೆಯನ್ನೂ, ಅವನನ್ನೂಕೂಡ ಸಾಯುತ್ತಾರೇನೋ ಎಂದು ಸಂಶಯ ಬರುವಷ್ಟು ಹಣ್ಣು ಮಾಡಿದನು. ಆ ಸುಪ್ರತೀಕ ಗಜದ ದುಃಖಧ್ವನಿಯನ್ನು ಕೇಳಿ ಭೀಷ್ಮಾದಿಗಳು ಬಂದು ದೊಡ್ಡ ಆಕಾರವುಳ್ಳ ಘಟೋತ್ಕಚನನ್ನು ಅವನ ಹಿಂದೆ ರಕ್ಷಕರಾಗಿ ಇರುವ ಶ್ರೀಭೀಮಸೇನರನ್ನು ನೋಡಿ ತುಂಬಾ ಹೆದರಿದರು, ಹಾಗೂ ಸೇನೆಯನ್ನು ಹಿಂದೆಗೆದುಕೊಂಡು ಶಿಬಿರಕ್ಕೆ ಹೋದರು.

ದಿನೇಪರೇಚೈವ ಪುನಃ ಸಮೇತಾಃಪರಸ್ಪರಂ ಪಾಂಡವಾಃ ಕೌರವಾಸ್ತೇ ॥
ತತ್ರಾಸದನ್ನಾಗಸುತಾಸಮುದ್ಭವಃಪಾರ್ಥಾತ್ಮಜಃ ಶಾಕುನೇಯಾನ್ ಷಡೇಕಃ ॥೮೨॥

ಪರೇದಿನೇ— ಮರುದಿನದಲ್ಲಿ, ಪುನಃ ಮತ್ತೆ, ತೇ— ಆ,ಪಾಂಡವಾಃ— ಪಾಂಡವರು, ಕೌರವಾಶ್ಚ — ಕೌರವರೂ ಕೂಡ, ಪರಸ್ಪರಂ—ಅನ್ಯೋನ್ಯವಾಗಿ, ಸಮೇತಾಃ —ಒಂದೆಡೆಮಿಲಿತರಾದರು. ತತ್ರ —ಆ ದಿನದ ಯುದ್ಧದಲ್ಲಿ, ನಾಗಸುತಾ ಸಮುದ್ಭವಃ ನಾಗನಮಗಳಾದ ಉಲೂಪಿಕೆಯಲ್ಲಿ ಹುಟ್ಟಿದ, ಪಾರ್ಥಾತ್ಮಜಃ— ಅರ್ಜುನನ ಮಗನಾದ ಇರಾವಂತನು, ಏಕಏವ–ಒಬ್ಬನೇ, ಷಟ್–ಆರುಸಂಖ್ಯಾಕರಾದ, ಶಾಕುನೇಯಾನ್–ಶಕುನಿಯ ಮಕ್ಕಳನ್ನು, ಆಸದತ್–ಹೊಂದಿದನು. ॥೮೨॥

ತೈಃಪ್ರಾಸಹಸ್ತೈಃಕ್ಷತಕಾಯೋಽತಿರೂಢಕೋಪಃಸ ಖಡ್ಗೇನಚಕರ್ತತೇಷಾಂ ॥
ಶಿರಾಂಸಿನೀರೋಬಲವಾನಿರಾವಾನ್ಭಯುಂದಧದ್ಧಾರ್ತರಾಷ್ಟ್ರೇಷುಚೋಗ್ರಂ ॥೮೩॥

ಪ್ರಾಸಹಸ್ತೈಃ – ಪ್ರಾಸವೆಂಬ ಆಯುಧವು ಕೈಯಲ್ಲಿ ಇರುವ, ತೈಃ—ಆ ಶಕುನಿಪುತ್ರರಿಂದ, ಕ್ಷತಕಾಯಃ – ಗಾಯ ಹೊಂದಿದಶರೀರಉಳ್ಳ, ಅತಿರೂಢಕೋಪಃ— ಬಹಳವಾಗಿ ಉತ್ಪನ್ನವಾದ ಸಿಟ್ಟುಳ್ಳ, ಧಾರ್ತರಾಷ್ಟ್ರೇಷು– ದುರ್ಯೋಧನಾದಿಗಳಲ್ಲಿ, ಉಗ್ರಂ - ಕ್ರೂರವಾದ, ಭಯಂ – ಹೆದರಿಕೆಯನ್ನು ದಧತ್ – ಉಂಟುಮಾಡಿದ, ವೀರಃ – ಪರಾಕ್ರಮಿಯಾದ, ಬಲವಾನ್ – ಬಲಿಷ್ಠನಾದ, ಸ ಇರಾವಾನ್ – ಆ ಇರಾವಂತನು, ಖಡ್ಗೇನ – ಖಡ್ಗದಿಂದ, ತೇಷಾಂ – ಆ ಶಕುನಿಪುತ್ರರ ಶಿರಾಂಸಿ – ತಲೆಗಳನ್ನು, ಚಕರ್ತ – ಕತ್ತರಿಸಿದನು. ॥೮೩॥

ದೃಷ್ಟ್ವಾತಮುಗ್ರಂ ಧೃತರಾಷ್ಟ್ರಪುತ್ರೋದಿದೇಶರಕ್ಷೋಽಲಂಬುಸನಾಮಧೇಯಂ ॥
ಜಹ್ಯಾರ್ಜುನಿಂಕ್ಷಿಪ್ರಮಿತಿಸ್ಮತಚ್ಚಸಮಾಸದನ್ನಾಗಸುತಾತನೂಜಂ ॥೮೪॥

ಧೃತರಾಷ್ಟ್ರಪುತ್ರಃ – ಧೃತರಾಷ್ಟ್ರನ ಮಗನಾದ ದುರ್ಯೋಧನನು,ಉಗ್ರಂ – ಕ್ರೂರನಾದ, ತಂ–ಆ ಇರಾವಂತನನ್ನು ದೃಷ್ಟ್ವಾ – ನೋಡಿ, ಅಲಂಬುಸನಾಮಧೇಯಂ – ಅಲಂಬುಸನೆಂದು ಹೆಸರುಳ್ಳ, ರಕ್ಷಃ— ರಾಕ್ಷಸನನ್ನು, ಆರ್ಜುನಿಂ – ಅರ್ಜುನನ ಮಗನಾದ ಇರಾವಂತನನ್ನು, ಕ್ಷಿಪ್ರಂ – ಕೂಡಲೇ, ಜಹಿ – ಕೊಲ್ಲು, ಇತಿ–ಎಂದು, ದಿದೇಶ ಹೇಳಿ ಕಳುಹಿಸಿದನು. ತಚ್ಚ–ಆ ಅಲಂಬುಸನಾದರೂ, ನಾಗಸುತಾತನೂಜಂ—ಉಲೂಪಿಯ ಮಗನಾದ ಇರಾವಂತನನ್ನು, ಸಮಾಸದತ್-ಹೊಂದಿದನು. ॥೮೪॥

ತಯೋರಭೂದ್ಯುದ್ಧಮತೀವದಾರುಣಂ ಮಾಯಾಯುಜೋರ್ವೀರ್ಯವತೋರ್ಮಹಾದ್ಭುತಂ ॥
ಸ ಸಾದಿನೋಽಶ್ವಾನ್ಸತು ರಾಕ್ಷಸೋಽಸೃಜತ್ತೇಪಾರ್ಥಪುತ್ರಸ್ಯಚಸಾದಿನೋಽಹನ್ ॥
ತತಸ್ತ್ವನಂತಾಕೃತಿಮಾಪ್ತಮಾರ್ಜುನಿಂಸುಪರ್ಣರೂಪೋಽಹನದಾಶುರಾಕ್ಷಸಃ ॥೮೫॥

ಮಾಯಾಯುಜೋಃ – ಮಾಯೆಯನ್ನು ಸೃಷ್ಟಿಮಾಡತಕ್ಕ, ವೀರ್ಯವತೋಃ – ಪರಾಕ್ರಮವುಳ್ಳ, ತಯೋಃ – ಆ ಇರಾವದಲಂಬುಸರಿಗೆ, ಮಹಾದ್ಭುತಂ — ಅತ್ಯಂತ ಆಶ್ಚರ್ಯಕರವಾದ, ಅತಿದಾರುಣಂ – ಅತ್ಯಂತಕ್ರೂರವಾದ, ಯುದ್ಧಂ – ಯುದ್ಧವು,ಅಭೂತ್—ಉಂಟಾಯಿತು. ಸ ರಾಕ್ಷಸಃ – ಆ ಅಲಂಬುಸನು, ಸಸಾದಿನಃ – ಕುದುರೆಸವಾರರಿಂದ ಕೂಡಿದ, ಅಶ್ವಾನ್—ಕುದುರೆಗಳನ್ನು, ಅಸೃಜತ್ – ಸೃಷ್ಟಿ ಮಾಡಿದನು. ತೇ–ಆ ಕುದುರೆಗಳಲ್ಲಿರುವವರು, ಪಾರ್ಥಪುತ್ರಸ್ಯ–ಇರಾವಂತನ, ಸಾದಿನಃ – ಕುದುರೆಗಳಲ್ಲಿರುವಪುರುಷರನ್ನು, ಅಹನ್ — ಕೊಂದರು. ತತಃ – ಅನಂತರ, ಅನಂತಾಕೃತಿಂ – ಸರ್ಪದ ಆಕಾರವನ್ನು ಆಪ್ತಂ – ಹೊಂದಿರುವ, ಆರ್ಜುನಿಂ ಇರಾವಂತನನ್ನು, ಸುಪರ್ಣರೂಪಃ— ಗರುಡನರೂಪವನ್ನು ಹೊಂದಿದ, ರಾಕ್ಷಸಃ – ರಾಕ್ಷಸನು, ಆಶು — ಕೂಡಲೇ ಅಹನತ್—ಕೊಂದನು ॥೮೫॥

ಹತಂನಿಶಮ್ಯಾರ್ಜುನಿಮುಗ್ರಪೌರುಷೋನನಾದಕೋಪೇನವೃಕೋದರಾತ್ಮಜಃ ॥
ಚಚಾಲಭೂರ್ನಾನದತೋಽಸ್ಯರಾವತಃಸಸಾಗರಾಗೇಂದ್ರನಗಾಭೃಶಂತದಾ ॥೮೬॥

ಉಗ್ರಪೌರುಷಃ – ಕ್ರೂರವಾದ ಪರಾಕ್ರಮವುಳ್ಳ, ವೃಕೋದರಾತ್ಮಜಃ— ಭೀಮನಮಗನಾದ ಘಟೋತ್ಕಚನು, ಆರ್ಜುನಿಂ—ಅರ್ಜುನನ ಮಗನಾದ ಇರಾವಂತನನ್ನು, ಹತಂ – ಕೊಲ್ಲಲ್ಪಟ್ಟವನನ್ನಾಗಿ, ನಿಶಮ್ಯ – ಕೇಳಿ, ಕೋಪೇನ – ಸಿಟ್ಟಿನಿಂದ, ನನಾದ – ಸಿಂಹನಾದವನ್ನು ಮಾಡಿದನು. ತದಾ–ಆಗ, ನಾನದತಃ – ಅತಿಶಯವಾಗಿ ಶಬ್ದವನ್ನುಮಾಡತಕ್ಕ, ಅಸ್ಯ—ಈ ಘಟೋತ್ಕಚನ, ರಾವತಃ - ಶಬ್ದದಿಂದ, ಸಸಾಗರಾಗೇಂದ್ರನಗಾ— ಸಮುದ್ರಗಳೂ, ವೃಕ್ಷಶ್ರೇಷ್ಠಗಳೂ, ಪರ್ವತಗಳೂ ಇವುಗಳಿಂದ ಕೂಡಿದ, ಭೂಃ – ಭೂಮಿಯು, ಭೃಶಂ— ಚೆನ್ನಾಗಿ, ಚಚಾಲ ನಡುಗಿತು. ॥೮೬॥

ಅಲಂಬುಸಸ್ತಂಪ್ರಸವಿೀಕ್ಷ್ಯ ಮಾರುತೇಃ ಸುತಂ ಬಲಾಢ್ಯಂಭಯತಃಪರಾದ್ರವತ್ ॥
ಪರಾದ್ರವದ್ಧಾರ್ತರಾಷ್ಟ್ರಸ್ಯ ಸೇನಾಃಸರ್ವಾಸ್ತಮಾರಾಥಸುಯೋಧನೋನೃಪಃ ॥೮೭॥

ಅಲಂಬುಸಃ — ಅಲಂಬುಸನು, ಬಲಾಢ್ಯಂ — ಬಲಸಂಪನ್ನನಾದ, ಮಾರುತೇಃ — ಭೀಮನ, ಸುತಂ — ಮಗನಾದ ಘಟೋತ್ಕಚನನ್ನು, ಪ್ರಸವಿೀಕ್ಷ್ಯ — ನೋಡಿ, ಭಯತಃ—ಹೆದರಿಕೆಯಿಂದ, ಪರಾದ್ರವತ್—ಓಡಿಹೋದನು. ಧಾರ್ತರಾಷ್ಟ್ರಸ್ಯ— ದುರ್ಯೋಧನನ ಸರ್ವಾಃ — ಎಲ್ಲಾ, ಸೇನಾಃ— ಸೈನ್ಯಗಳು, ಪರಾದ್ರವನ್ — ಓಡಿಹೋದವು. ಅಥ — ಅನಂತರ, ನೃಪಃ— ರಾಜನಾದ, ಸುಯೋಧನಃ— ದುರ್ಯೋಧನನು, ತಂ— ಆ ಘಟೋತ್ಕಚನನ್ನು ಆರ — ಹೊಂದಿದನು. ॥೮೭॥

ಸಭೀಮಪುತ್ರಸ್ಯ ಜಘಾನಮಂತ್ರಿಣೋಮಹಾಬಲಾಂಶ್ಚತುರೊsನ್ಯಾಂಸ್ತಥೈವ ॥
ಹತಾವಶೇಷೇಷುಚ ವಿದ್ರವತ್ಸು ಘಟೋತ್ಕಚೋsಭ್ಯಾಹನದಾಶು ತಂ ನೃಪಂ ॥೮೮॥

ಸಃ — ಆ ದುರ್ಯೋಧನನು, ಭೀಮಪುತ್ರಸ್ಯ— ಭೀಮನಮಗನಾದ ಘಟೋತ್ಕಚನ, ಮಹಾಬಲಾನ್ — ಬಹಳ ಬಲಿಷ್ಠರಾದ, ಚತುರಃ—ನಾಲ್ಕು ಸಂಖ್ಯಾಕರಾದ, ಮಂತ್ರಿಣಃ—ಮಂತ್ರಿಗಳನ್ನು, ತಥೈವ— ಹಾಗೆಯೇ, ಅನ್ಯಾನ್ — ಬೇರೆ ರಾಕ್ಷಸರನ್ನೂ ಕೂಡ, ಜಘಾನ— ಕೊಂದನು. ಹತಾವಶೇಷೇಷು — ಸತ್ತುಉಳಿದವರು, ವಿದ್ರವತ್ಸು ಸತ್ಸು — ಓಡಿಹೋಗುತ್ತಿರಲು, ಘಟೋತ್ಕಚಃ — ಘಟೋತ್ಕಚನು ಆಶು — ಕೂಡಲೇ ನೃಪಂ ತಂ—ರಾಜನಾದ ದುರ್ಯೋಧನನನ್ನು ಅಭ್ಯಾಹನತ್— ಹೊಡೆದನು. ॥೮೮॥

ಸಪೀಡ್ಯಮಾನೋಯುಧಿತೇನ ರಕ್ಷಸಾಪ್ರವೇಶಯಾಮಾಸ ಶರಂ ಘಟೋತ್ಕಚೇ ॥
ದೃಢಾಹತಸ್ತೇನ ತದಾಬಲೀಯಸಾ ಘಟೋತ್ಕಚಃ ಪ್ರವ್ಯಥಿತೇಂದ್ರಿಯೋಭೃಶಂ ॥
ತಸೌ್ಥಕಥಂಚಿದ್ಭುವಿಪಾತ್ಯಮಾನಃ ಪುನಃ ಶರಾನಸೃಜತ್ಸುಯೋಧನೇ ॥೮೯॥

ಯುಧಿ ಯುದ್ಧದಲ್ಲಿ. ತೇನರಕ್ಷಸಾ — ಆ ರಾಕ್ಷಸನಿಂದ, ಪೀಡ್ಯಮಾನಃ—ಚೆನ್ನಾಗಿಪೀಡಿಸಿಕೊಳ್ಳಲ್ಪಡತಕ್ಕ, ಸಃ — ಆ ದುರ್ಯೋಧನನು, ಘಟೋತ್ಕಚೇ — ಘಟೋತ್ಕಚನಲ್ಲಿ, ಶರಂ — ಬಾಣವನ್ನು, ಪ್ರವೇಶಯಾಮಾಸ — ಪ್ರವೇಶಿಸಿದನು, ತದಾ — ಆಗ, ಬಲೀಯಸಾ - ಬಲಿಷ್ಠನಾದ, ತೇನ — ಆ ದುರ್ಯೋಧನನಿಂದ, ದೃಢಾಹತಃ — ಚೆನ್ನಾಗಿ ಹೊಡಿಸಿಕೊಳ್ಳಲ್ಪಟ್ಟ ಭೃಶಂ — ಚೆನ್ನಾಗಿ, ಪ್ರವ್ಯಥಿತೇಂದ್ರಿಯಃ — ಪೀಡಿಸಿಕೊಳ್ಳಲ್ಪಟ್ಟ ಇಂದ್ರಿಯಗಳುಳ್ಳ, ಘಟೋತ್ಕಚಃ — ಘಟೋತ್ಕಚನು, ಭುವಿ — ಭೂಮಿಯಲ್ಲಿ, ಪಾತ್ಯಮಾನೋಪಿ - ರಥದಿಂದ ಬೀಳಿಸಿಕೊಳ್ಳಲ್ಪಟ್ಟವನಾದರೂ ಕೂಡ, ಕಥಂಚಿತ್ — ಮಹಾ ಪ್ರಯತ್ನದಿಂದ, ತಸೌ್ಥ — ನಿಂತನು, ಪುನಃ — ಮತ್ತು, ದುರ್ಯೋಧನೇ — ದುರ್ಯೋಧನನಲ್ಲಿ, ಶರಾನಪಿ — ಬಾಣಗಳನ್ನೂ ಕೂಡ, ಅಸೃಜತ್ — ಬಿಟ್ಟನು. ॥೮೯॥

ಚಿರಂಪ್ರಯುದ್ಧೌ ನೃಪರಾಕ್ಷಸಾಧಿಪೌ ಪರಸ್ಪರಾಜೇಯತನೂರಣಾಜಿರೇ ॥
ದ್ರೋಣಾದಯೋವೀಕ್ಷ್ಯರಿರಕ್ಷಿಷಂತಃ ಸುಯೋಧನಂಪ್ರಾಪುರಮಿತ್ರಸಾಹಾಃ ॥೯೦॥

ಚಿರಂ — ಬಹುಕಾಲ, ಪ್ರಯುದ್ಧೌ — ಪ್ರಕೃಷ್ಟ ಯುದ್ಧವುಳ್ಳ, ನೃಪರಾಕ್ಷಸಾಧಿಪೌ — ದುರ್ಯೋಧನ ಮತ್ತು ಘಟೋತ್ಕಚರಿಬ್ಬರನ್ನು, ರಣಾಜಿರೇ—ಯುದ್ಧಾಂಗಣದಲ್ಲಿ, ವೀಕ್ಷ್ಯ — ನೋಡಿ, ಸುಯೋಧನಂ — ದುರ್ಯೋಧನನನ್ನು, ರಿರಕ್ಷಿಷಂತಃ — ರಕ್ಷಿಸಲಿಕ್ಕೆ ಇಚ್ಛೆಉಳ್ಳ, ಅಮಿತ್ರಸಾಹಾಃ — ದ್ವೇಷಿಗಳ ಪರಾಕ್ರಮವನ್ನು ಸಹಿಸಲು ಸಮರ್ಥರಾದ, ದ್ರೋಣಾದಯಃ—ದ್ರೋಣನೇ ಮೊದಲಾಗಿ ಉಳ್ಳವರು, ಸುಯೋಧನಂ ಪ್ರಾಪುಃ—ದುರ್ಯೋಧನನನ್ನು ಹೊಂದಿದರು. ॥೯೦॥

ಸದ್ರೋಣಶಲ್ಯೌ ಗುರುಪುತ್ರಗೌತಮೌ ಭೂರಿಶ್ರವಃಕೃತವರ್ಮಾದಿಕಾಂಶ್ಚ ॥
ವವರ್ಷಬಾಣೈರ್ಗಗನಂ ಸಮಾಶ್ರಿತೋಘಟೋತ್ಕಚಃ ಸ್ಥೂಲತಮೈಃ ಸುವೇಗೈಃ ॥೯೧॥

ಸಃ ಘಟೋತ್ಕಚಃ – ಆ ಘಟೋತ್ಕಚನು, ದ್ರೋಣಶಲ್ಯೌ – ದ್ರೋಣ ಮತ್ತು ಶಲ್ಯರೆನ್ನು, ಗುರುಪುತ್ರಗೌತಮೌ – ಅಶ್ವತ್ಥಾಮ ಮತ್ತು ಕೃಪಾಚಾರ್ಯರನ್ನು, ಭೂರಿಶ್ರವಃಕೃತವರ್ಮಾದಿಕಾಂಶ್ಚ – ಭೂರಿಶ್ರವನು, ಕೃತವರ್ಮನು ಇವರೇ ಮೊದಲಾಗಿ ಉಳ್ಳವರನ್ನೂ ಕೂಡ, ಸ್ಥೂಲತಮೈಃ – ಅತ್ಯಂತ ಸ್ಥೂಲಗಳಾದ, ಸುವೇಗೈಃ – ಅತಿವೇಗವುಳ್ಳ ಬಾಣೈಃ – ಶರಗಳಿಂದ, ಗಗನಂ – ಆಕಾಶವನ್ನು, ಸಮಾಶ್ರಿತಃಸನ್—ಏರಿದವನಾಗಿ, ವವರ್ಷ – ಮಳೆಗರಿಸಿದನು. ॥೯೧॥

ತಮೇಕಮುಗ್ರೈಃ ರಥಿಭಿಃ ಪರಿಷ್ಕೃತಂ ನಿರೀಕ್ಷ್ಯಭೀಮೋಽಭ್ಯಗಮತ್ಸಮಸ್ತಾನ್ ॥
ದ್ರೋಣೋಽತ್ರ ಭೀಮಪ್ರಹಿತೈಃ ಶರೋತ್ತಮೈಃ ಸುಪೀಡಿತಃ ಪ್ರಾಪ್ತಮೂರ್ಛಃ ಪಪಾತ ॥೯೨॥

ಭೀಮಃ – ಭೀಮನು, ಅಗ್ರ್ಯೈಃ – ಶ್ರೇಷ್ಠರಾದ, ರಥಿಭಿಃ – ರಥಿಕರಿಂದ, ಪರಿಷ್ಕೃತಂ - ಸುತ್ತುವರಿಯಲ್ಪಟ್ಟ, ಏಕಂ ಒಬ್ಬನಾದ, ತಂ—ಆ ಘಟೋತ್ಕಚನನ್ನು, ನಿರೀಕ್ಷ್ಯ— ನೋಡಿ, ಸಮಸ್ತಾನ್ — ಎಲ್ಲರನ್ನು, ಅಭ್ಯಗಮತ್— ಎದುರಾಗಿ ಹೊಂದಿದನು, ಅತ್ರ - ಈ ಯುದ್ಧದಲ್ಲಿ, ದ್ರೋಣಃ – ದ್ರೋಣಾಚಾರ್ಯರು, ಭೀಮಪ್ರಹಿತೈಃ—ಭೀಮನಿಂದ ಬಿಡಲ್ಪಟ್ಟ, ಶರೋತ್ತಮೈಃ–ಶ್ರೇಷ್ಠ ಬಾಣಗಳಿಂದ, ಸುಪೀಡಿತಸ್ಸನ್–ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟವರಾಗಿ, ಪ್ರಾಪ್ತಮೂರ್ಛಃ ಸನ್—ಮೂರ್ಛೆಹೊಂದಿದವರಾಗಿ, ಪಪಾತ—ಬಿದ್ದರು. ॥೯೨॥

ದ್ರೌಣಿಂಕೃಪಾದ್ಯಾನ್ಸಸುಯೋಧನಾಂಶ್ಚ ಚಕಾರಭೀಮೋವಿರಥಾನ್ ಕ್ಷಣೇನ ॥
ನಿವಾರ್ಯಮಾಣಾಂಸ್ತು ವೃಕೋದರೇಣ ಘಟೋತ್ಕಚಸ್ತಾನ್ಪ್ರವವರ್ಷ ಸಾಯಕೈಃ ॥೯೩॥

ಭೀಮಃ— ಭೀಮನು, ದ್ರೌಣಿಂ – ಅಶ್ವತ್ಥಾಮರನ್ನು, ಸಸುಯೋಧನಾನ್ — ದುರ್ಯೋಧನನಿಂದಕೂಡಿದ, ಕೃಪಾದ್ಯಾನ್ — ಕೃಪಾಚಾರ್ಯರೇ ಮೊದಲಾಗಿ ಉಳ್ಳವರನ್ನು, ಕ್ಷಣೇನ — ಕೂಡಲೇ, ವಿರಥಾನ್ – ರಥರಹಿತರನ್ನಾಗಿ, ಚಕಾರ – ಮಾಡಿದನು. ಘಟೋತ್ಕಚಃ – ಘಟೋತ್ಕಚನು, ವೃಕೋದರೇಣ — ಭೀಮನಿಂದ, ನಿವಾರ್ಯಮಾಣಾಂಸ್ತು — ನಿವಾರಿಸಿಕೊಳ್ಳಲ್ಪಡತಕ್ಕ, ತಾನ್ – ಆ ಅಶ್ವತ್ಥಾಮನೇ ಮೊದಲಾದವರನ್ನು ಸಾಯಕೈಃ – ಬಾಣಗಳಿಂದ, ಪ್ರವವರ್ಷ — ಮಳೆಗರಿಸಿದನು. ॥೯೩॥

ತೇನಾಂಬರಸ್ಥೇನ ತರುಪ್ರಮಾಣೈಃಅಭ್ಯರ್ದಿತಾಃ ಕುರವಃಸಾಯಕೌಘೈಃ ॥
ಭೂಮೌ ಚಭೀಮೇನಶರೌಘಪೀಡಿತಾಃಪೇತುರ್ನೇದುಃಪ್ರಾದ್ರವಂಶ್ಚಾತಿಭೀತಾಃ ॥೯೪॥

ಆಂಬರಸ್ಥೇನ – ಆಕಾಶದಲ್ಲಿರತಕ್ಕ, ತೇನ – ಆ ಘಟೋತ್ಕಚನಿಂದ, ತರುಪ್ರಮಾಣೈಃ – ವೃಕ್ಷಗಳಿಗೆಸದೃಶಗಳಾದ ಸಾಯಕೌಘೈಃ—ಬಾಣಗಳ ಸಮೂಹಗಳಿಂದ, ಅಭ್ಯರ್ದಿತಾಃ— ಪೀಡಿಸಿಕೊಳ್ಳಲ್ಪಟ್ಟ, ಕುರವಃ – ಕೌರವರು, ಭೂಮೌ ಚ— ಭೂಮಿಯಲ್ಲಿಯೂ ಕೂಡ, ಭೀಮೇನ – ಭೀಮನಿಂದ, ಶರೌಘಪೀಡಿತಾಸ್ಸಂತಃ — ಬಾಣಗಳ ಸಮೂಹಗಳಿಂದ ಪೀಡಿಸಿಕೊಳ್ಳಲ್ಪಟ್ಟವರಾಗಿ, ಪೇತುಃ — ಬಿದ್ದರು, ನೇದುಃ – ಕೂಗಿದರು. ಅತಿಭೀತಾಸ್ಸಂತಃ – ಅತ್ಯಂತ ಭಯಗ್ರಸ್ತರಾಗಿ, ಪ್ರಾದ್ರವನ್—ಓಡಿಹೋದರು. ॥೯೪॥

ಸರ್ವಾಂಶ್ಚತಾನ್ಶಿಬಿರಂಪ್ರಾಪಯಿತ್ವಾವಿನಾಭೀಷ್ಮಂಕೌರವಾನ್ಭೀಮಸೇನಃ ॥
ಘಟೋತ್ಕಚಶ್ಚಾನದತಾಂಮಹಾಸ್ವನೌನಾದೇನಲೋಕಾನಭಿಪೂರಯಂತೌ ॥೯೫॥

ಭೀಮಸೇನಃ – ಭೀಮಸೇನನು, ಘಟೋತ್ಕಚಶ್ಚ—ಘಟೋತ್ಕಚನೂಕೂಡ, ಭೀಷ್ಮಂವಿನಾ- ಭೀಷ್ಮಾಚಾರ್ಯರನ್ನು ಹೊರತು, ತಾನ್ ಸರ್ವಾನ್ ಕೌರವಾನ್ – ಆ ಎಲ್ಲಾ ಕೌರವರನ್ನು, ಶಿಬಿರಂ. ಶಿಬಿರವನ್ನು, ಪ್ರಾಪಯಿತ್ವಾ – ಹೊಂದಿಸಿ, ಮಹಾಸ್ವನೌ – ಮಹತ್ತಾದ ಧ್ವನಿಉಳ್ಳವರಾಗಿ, ನಾದೇನ– ಧ್ವನಿಯಿಂದ, ಲೋಕಾನ್ – ಲೋಕಗಳನ್ನು, ಅಭಿಪೂರಯಂತೌ ಸಂತೌ — ಪೂರ್ತಿಮಾಡುವವರಾಗಿ, ಆನದತಾಂ —ಸಿಂಹಧ್ವನಿಯನ್ನು ಮಾಡಿದರು. ॥೯೫॥

ಭಾ. ಅ. ೮೨-೯೫ ಮರುದಿನ ಪುನಃ ಯುದ್ಧಕ್ಕೆ ನಿಂತಾಗ, ಅರ್ಜುನ ಉಲೂಪಿ (ನಾಗಕನ್ಯೆ)ಯರ ಮಗನಾದ ಇರಾವಂತನೊಬ್ಬನೇ ಶಕುನಿಯ ಆರು ಮಕ್ಕಳನ್ನು ಎದುರಿಸಿದನು. ಅವರು ಇವನ ಮೇಲೆ ಪ್ರಾಸಾಯುಧದಿಂದ ಪ್ರಹಾರ ಮಾಡಿ ಘಾಯ ಮಾಡಿದಾಗ, ತುಂಬಾ ಕೋಪಗೊಂಡ ಇವನು ಅವರೆಲ್ಲರ ತಲೆಗಳನ್ನೇ ಖಡ್ಗದಿಂದ ಕತ್ತರಿಸಿದನು. ಇದನ್ನು ನೋಡಿ ಹೆದರಿಕೊಂಡ ದುರ್ಯೋಧನನು ಆ ಇರಾವಂತನನ್ನು ಸಂಹರಿಸಲು ಅಲಂಬುಸ ರಾಕ್ಷಸನನ್ನು ಕಳಿಸಿದನು. ಅವರಿಬ್ಬರೂ ಅತ್ಯಂತ ಅದ್ಭುತವಾದ ಯುದ್ಧವನ್ನು ಮಾಡುತ್ತಾ ಇರುವಾಗ ಅಲಂಬುಸನು ಅನೇಕ ಕುದುರೆಸವಾರರನ್ನು, ಕುದುರೆಗಳನ್ನು ಸೃಷ್ಟಿಮಾಡಿದನು (ಮಾಯೆಯಿಂದ). ಅವರು ಇರಾವಂತನ ಅಶ್ವ–ಅಶ್ವಾರೋಹಿಗಳನ್ನು ಸಂಹರಿಸುತ್ತಿರುವಾಗ ದೊಡ್ಡ ಸರ್ಪಾಕಾರವನ್ನು ಹೊಂದಿನಿಂತ ಇರಾವಂತನನ್ನು ಅಲಂಬುಸನು ಗರುಡಪಕ್ಷಿಯ ರೂಪವನ್ನು ಹೊಂದಿ ಕೊಂದನು. ಇದನ್ನು ತಿಳಿದ ಘಟೋತ್ಕಚನು ಅತಿ ರೋಷದಿಂದ ಸಿಂಹದಂತೆ ಗರ್ಜಿಸುತ್ತಾ ಬರುವಾಗ ಸಮುದ್ರಪರ್ವತ ಸಮೇತವಾದ ಭೂಮಿಯೂ ನಡುಗಿತು, ಮತ್ತು ಇವನು ಬರುವದನ್ನು ನೋಡಿಯೇ ಅಲಂಬುಸನು ಭಯದಿಂದ ಓಡಿಹೋದನು. ಕೌರವ ಸೈನ್ಯವೂ ಓಡಿತು. ಆಗ ದುರ್ಯೋಧನನು ಘಟೋತ್ಕಚನ ಹತ್ತಿರ ಯುದ್ಧಕ್ಕಾಗಿ ಬಂದನು ಮತ್ತು ಬಲಿಷ್ಠರಾದ, ಘಟೋತ್ಕಚನ ನಾಲ್ಕು ಮಂತ್ರಿಗಳನ್ನು ಕೊಂದನು. ಉಳಿದವರು ಓಡಿದರು. ಆಗ ಘಟೋತ್ಕಚನು ದುರ್ಯೋಧನನನ್ನು ಹೊಡೆದನು. ಆಗ ತುಂಬಾ ವ್ಯಥೆಯನ್ನು ಹೊಂದಿದ ದುರ್ಯೋಧನನು ಪ್ರಬಲವಾದ ಬಾಣವನ್ನು ಘಟೋತ್ಕಚನ ಮೇಲೆ ಬಿಟ್ಟನು. ಅದು ಬಡಿದದ್ದರಿಂದ ತುಂಬಾ ನೋವನ್ನು ಹೊಂದಿದ ಘಟೋತ್ಕಚನು ಬೀಳುವವನಾದರೂ ಸುಧಾರಿಸಿಕೊಂಡು ಎದ್ದುನಿಂತು ದುರ್ಯೋಧನನ ಮೇಲೆ ಬಾಣಪ್ರಯೋಗ ಮಾಡಿದನು. ಹೀಗೆ ಬಹಳ ಹೊತ್ತಿನ ವರೆಗೆ ಪರಸ್ಪರ ಕಾದಾಡುತ್ತಿದ್ದಾರೆ. ಇಬ್ಬರೂ ಸೋಲುತ್ತಾ ಇಲ್ಲ. ಇದನ್ನು ನೋಡಿ ದ್ರೋಣಾದಿಗಳು ದುರ್ಯೋಧನನ ರಕ್ಷಣೆಗಾಗಿ ಬಂದರು. ಆಗ ಘಟೋತ್ಕಚನು ಆಕಾಶದಲ್ಲಿ ಏರಿನಿಂತು ದ್ರೋಣ, ಶಲ್ಯ, ಅಶ್ವತ್ಥಾಮ, ಕೃಪ, ಭೂರಿಶ್ರವ, ಕೃತವರ್ಮ ಮೊದಲಾದ ಮಹಾರಥಿಕರನೇಕರ ಮೇಲೆ ಪ್ರಬಲವಾದ ಬಾಣವೃಷ್ಟಿಗಳನ್ನು ಮಾಡಿದನು. ಅನೇಕರ ಜೊತೆಗೆ ಒಬ್ಬನು ಯುದ್ಧ ಮಾಡುವದನ್ನು ಕಂಡು ಭೀಮಸೇನದೇವರು ಘಟೋತ್ಕಚನ ಸಹಾಯಕ್ಕಾಗಿ ಬಂದು, ಎಲ್ಲರ ಜೊತೆಗೆ ಯುದ್ಧಮಾಡುತ್ತಿದ್ದರು. ಆಗ ಭೀಮರ ಭೀಮ ಬಾಣಗಳಿಂದ ದ್ರೋಣಾಚಾರ್ಯರು ಮೂರ್ಛಿತರಾಗಿ ಬಿದ್ದರು. ಅಶ್ವತ್ಥಾಮ, ಕೃಪ, ದುರ್ಯೋಧನ ಮೊದಲಾದವರ ರಥಗಳನ್ನು ಕೂಡಲೇ ನಾಶಪಡಿಸಿದರು. ಹೀಗೆ ಭೂಮಿಯಲ್ಲಿ ಭೀಮರಿಂದ ತೊಂದರೆಯನ್ನು ಹೊಂದುತ್ತಿದ್ದ ಅವರ ಮೇಲೆ ಆಕಾಶದಿಂದ ಭೀಮಪುತ್ರನು ಬಾಣಗಳ ಪ್ರಹಾರ ಮಾಡುತ್ತಿದ್ದನು. ಇಬ್ಬರಿಂದ ಈ ರೀತಿ ಅತಿಯಾಗಿ ಪೀಡಿತರಾದ ಕೌರವರು ಭೀತರಾಗಿ, ರೋದಿಸುತ್ತಾ ಓಡಿಹೋದರು. ಭೀಷ್ಮಾಚಾರ್ಯರೊಬ್ಬರನ್ನು ಬಿಟ್ಟು ಉಳಿದೆಲ್ಲರನ್ನು ಶಿಬಿರಕ್ಕೆ ಓಡಿಸಿ ಇಡೀ ಲೋಕವೇ ತುಂಬುವಂತೆ ಸಿಂಹಗರ್ಜನವನ್ನು ಮಾಡಿದರು.

ದುರ್ಯೋಧನೋಽಥ ಸ್ವಜನೈಃ ಸಮೇತಃ ಪುನಃಪ್ರಾಯಾದ್ರಣಭೂಮಿಂ ಸ ಭೀಷ್ಮಂ ॥
ಜಯೋಪಾಯಂಭೈಮಸೇನೇರಪೃಚ್ಛತ್ಸ್ವಸ್ಯೈವಸಪ್ರಾಹ ತಂ ವ್ರಜೇತಿ ॥೯೬॥

ಅಥ – ಅನಂತರ, ದುರ್ಯೋಧನಃ – ದುರ್ಯೋಧನನು. ಸ್ವಜನೈಃ - ತನ್ನವರಿಂದ, ಸಮೇತಸ್ಸನ್ – ಕೂಡಿದವನಾಗಿ, ಪುನಃ — ಮತ್ತೆ, ರಣಭೂಮಿಂ – ಯುದ್ಧಭೂಮಿಯನ್ನು ಕುರಿತು, ಪ್ರಾಯಾತ್ – ಹೋದನು, ಸಃ – ಆ ದುರ್ಯೋಧನನು, ಸ್ವಸ್ಯೈವ – ತನಗೇನೇ, ಭೈಮಸೇನೇಃ – ಘಟೋತ್ಕಚನ, ಜಯೋಪಾಯಂ—ಜಯ ಸಿಗಲು ಉಪಾಯವನ್ನು, ಭೀಷ್ಮಂ — ಭೀಷ್ಮರನ್ನು ಕುರಿತು, ಅಪೃಚ್ಛತ್ –ಕೇಳಿದನು, ಸಃ – ಭೀಷ್ಮರು, ತಂ—ಆ ಘಟೋತ್ಕಚನನ್ನು ಕುರಿತು ನ ವ್ರಜ – ಹೋಗಬೇಡ, ಇತಿ – ಎಂದು, ಪ್ರಾಹ – ಹೇಳಿದರು. ॥೯೬॥

ಪ್ರಾಗ್ಜ್ಯೋತಿಷಂ ಚೈವ ಘಟೋತ್ಕಚಾಯ ಸಂಪ್ರೇಷಯಾಮಾಸ ಸುರಾಪಗಾಸುತಃ ॥
ಸಂಪ್ರಾಪ್ಯ ಹೈಡಿಂಬ ಮಯೋಧಯದ್ಬಲೀ ಸಚಾರ್ದಯಾಮಾಸ ಸಕುಂಜರಂತಂ ॥೯೭॥

ಸುರಾಪಗಾಸುತಃ—ಗಂಗಾಪುತ್ರರಾದ ಭೀಷ್ಮರು, ಘಟೋತ್ಕಚಾಯ – ಘಟೋತ್ಕಚನಿಗೋಸ್ಕರ, ಪ್ರಾಗ್ಜ್ಯೋತಿಷಂ– ಭಗದತ್ತನನ್ನು, ಸಂಪ್ರೇಷಯಾಮಾಸ – ಕಳುಹಿಸಿದರು, ಬಲೀ – ಬಲಿಷ್ಠನಾದ ಭಗದತ್ತನು, ಹೈಡಿಂಬಂ – ಹಿಡಿಂಬಿಯ ಮಗನಾದ ಘಟೋತ್ಕಚನನ್ನು, ಸಂಪ್ರಾಪ್ಯ—ಹೊಂದಿ, ಅಯೋಧಯತ್ — ಯುದ್ಧಮಾಡಿದನು, ಸಃ – ಆ ಘಟೋತ್ಕಚನು, ಸಕುಂಜರಂ–ಸುಪ್ರತೀಕವೆಂಬ ಆನೆಯಿಂದ ಕೂಡಿದ, ತಂ – ಆ ಭಗದತ್ತನನ್ನು, ಅರ್ದಯಾಮಾಸ — ಪೀಡಿಸಿದನು. ॥೯೭॥

ತೇನಾರ್ದಿತಃ ಪ್ರಾಹಿಣೋಚ್ಛೂಲಮಸ್ಯ ವಿಯತ್ಯವಪ್ಲುತ್ಯತದಾ ಘಟೋತ್ಕಚಃ ॥
ಪ್ರಗೃಹ್ಯ ಶೂಲಂ ಪ್ರಬಭಂಜಜಾನುಮಾರೋಪ್ಯದೇವಾಜಹೃಷುಸ್ತದೀಕ್ಷ್ಯ ॥೯೮॥

ತೇನ– ಆ ಘಟೋತ್ಕಚನಿಂದ, ಅರ್ದಿತಃ – ಪೀಡಿಸಿಕೊಳ್ಳಲ್ಪಟ್ಟ ಭಗದತ್ತನು, ಅಸ್ಯ – ಈ ಘಟೋತ್ಕಚನಿಗೋಸ್ಕರ, ಶೂಲಂ— ಶೂಲವೆಂಬ ಆಯುಧವನ್ನು, ಪ್ರಾಹಿಣೋತ್–ಹಾಕಿದನು. ತದಾ–ಆಯುಧವನ್ನು ಹಾಕಿದಾಗ, ಘಟೋತ್ಕಚಃ – ಘಟೋತ್ಕಚನು, ವಿಯತಿ – ಆಕಾಶದಲ್ಲಿ, ಅವಪ್ಲುತ್ಯ – ಹಾರಿ, ಶೂಲಂ – ಶೂಲವನ್ನು, ಪ್ರಗೃಹ್ಯ ಹಿಡಿದುಕೊಂಡು, ಜಾನುಂ – ಮೊಣಕಾಲನ್ನು ಆರೋಪ್ಯ – ಏರಿಸಿ, ಪ್ರಬಭಂಜ – ಮುರಿದನು, ದೇವಾಃ ದೇವತೆಗಳು, ತತ್ – ಅವನ ಕರ್ಮವನ್ನು, ಈಕ್ಷ್ಯ—ನೋಡಿ, ಜಹೃಷುಃ – ನಕ್ಕರು, (ಸಂತೋಷಪಟ್ಟರು) ॥೯೮॥

ತದಾಸತಸ್ಯೈವಪದಾನುಗಾನ್ನೃಪೋಜಘಾನ ತಂ ಮಾರುತಿರಭ್ಯಯಾದ್ರಣೇ ॥
ಸಪ್ರಾಹಿಣೋದ್ಭೀಮಸೇನಾಯ ವೀರೋ ಗಜಂ ತಮುಸ್ತಂಭಯದಾಶು ಸಾಯಕೈಃ ॥೯೯॥

ನೃಪಃ – ರಾಜನಾದ ಭಗದತ್ತನು, ತದಾ – ಆಗ, ತಸ್ಯ – ಆ ಘಟೋತ್ಕಚನ, ಪದಾನುಗಾನ್ – ಪಾದಚಾರಿಗಳಾದ ಸೇವಕರನ್ನು, ಜಘಾನ–ಕೊಂದನು, ಮಾರುತಿಃ–ಭೀಮಸೇನನು, ತಂ –ಆ ಭಗದತ್ತನನ್ನು, ರಣೇ–ಯುದ್ಧದಲ್ಲಿ, ಅಭ್ಯಯಾತ್ ಹೊಂದಿದನು. ಸಃ– ಆ ಭಗದತ್ತನು ಭೀಮಸೇನಾಯ — ಭೀಮಸೇನನಿಗೋಸ್ಕರ, ತಂ ಗಜಂ– ಆ ಸುಪ್ರತೀಕವೆಂಬ ಆನೆಯನ್ನು, ಪ್ರಾಹಿಣೋತ್– ಕಳುಹಿಸಿದನು. ವೀರಃ – ಪರಾಕ್ರಮಿಯಾದ ಭೀಮನು, ತಂ— ಆ ಆನೆಯನ್ನು, ಸಾಯಕೈಃ — ಬಾಣಗಳಿಂದ, ಆಶು – ಕೂಡಲೇ, ಅಸ್ತಂಭಯತ್ —ಸ್ತಂಭನೆ ಮಾಡಿದನು, ॥೯೯॥

ಸಂಸ್ತಂಭಿತೇ ಬಾಣವರೈಸ್ತು ನಾಗೇಭೀಮಸ್ಯಾಶ್ವಾನ್ಸಾಯಕೈರರ್ದಯತ್ಸಃ ॥
ಸೋಽಭ್ಯರ್ದಿತಾಶ್ವೋಽಥಗದಾಂ ಪ್ರಗೃಹ್ಯಹಂತುಂನೃಪಂತಂ ಸಗಜಂ ಸಮಾಸದತ್ ॥೧೦೦॥

ನಾಗೇ – ಸುಪ್ರತೀಕವೆಂಬ ಆನೆಯು, ಬಾಣವರೈಃ–ಶ್ರೇಷ್ಠಬಾಣಗಳಿಂದ, ಸಂಸ್ತಂಭಿತೇಸತಿ – ಅಲುಗಾಡದಂತಾಗುತ್ತಿರಲು, ಸಃ–ಆ ಭಗದತ್ತನು, ಭೀಮಸ್ಯ –ಭೀಮನ, ಅಶ್ವಾನ್–ಕುದುರೆಗಳನ್ನು, ಸಾಯಕೈಃ– ಬಾಣಗಳಿಂದ, ಅರ್ದಯತ್– ಪೀಡಿಸಿದನು, ಅಥ ಅನಂತರ, ಅಭ್ಯರ್ದಿತಾಶ್ವಃ – ಪೀಡಿಸಲ್ಪಟ್ಟ ಕುದುರೆಗಳುಳ್ಳ, ಸಃ—ಆ ಭೀಮಸೇನನು, ಗದಾಂ – ಗದೆಯನ್ನು. ಪ್ರಗೃಹ್ಯ – ಹಿಡಿದುಕೊಂಡು, ಸಗಜಂ – ಆನೆಯಿಂದ ಕೂಡಿದ, ತಂ ನೃಪಂ — ಆ ರಾಜನಾದ ಭಗದತ್ತನನ್ನು ಹಂತುಂ – ಕೊಲ್ಲಲು, ಸಮಾಸದತ್ – ಹೊಂದಿದನು. ॥೧೦೦॥

ಸಹಂತುಕಾಮೇನರುಷಾಭಿಪನ್ನೋಭೀಮೇನ ರಾಜಾಪುರತಃಪೃಷ್ಠತಶ್ಚ ॥
ಕೃಷ್ಣೇನಾಽಽಶ್ವಂ ವೈಷ್ಣವಂತಸ್ಯಹೀತುಂಸಹಾರ್ಜುನೇನಾಪಯಯೌ ಸ ಭೀತಃ ॥೧೦೧॥

ಸಃರಾಜಾ - ಆ ರಾಜನಾದ ಭಗದತ್ತನು ರುಷಾ – ಕೋಪದಿಂದ, ಹಂತುಕಾಮೇನ- ಕೊಲ್ಲಲು ಇಚ್ಛೆಉಳ್ಳ, ಭೀಮೇನ – ಭೀಮನಿಂದ. ಪುರತಃ - ಮುಂಭಾಗದಿಂದಲೂ, ತತ್— ಆ ವರಾಹದೇವರಿಂದಕೊಡಲ್ಪಟ್ಟ, ವೈಷ್ಣವಂ – ವಿಷ್ಣುದೇವತಾಕವಾದ, ಅಸ್ತ್ರಂ- ಅಸ್ತ್ರವನ್ನು, ಗೃಹೀತುಂ – ತೆಗೆದುಕೊಳ್ಳಲು, ಸಹಾರ್ಜುನೇನ – ಅರ್ಜುನನಿಂದ ಕೂಡಿದ, ಕೃಷ್ಣೇನ – ಕೃಷ್ಣನಿಂದ, ಪೃಷ್ಠತಃ- ಹಿಂಭಾಗದಿಂದಲೂ, ಅಭಿಪನ್ನಃ - ಹೊಂದಲ್ಪಟ್ಟ, ಭೀತಃ- ಹೆದರಿದ ಸಃ- ಆ ಭಗದತ್ತನು, ಅಪಯಯೌ –ಹಿಂತಿರುಗಿ ಹೋದನು. ॥೧೮೦॥

ತಸ್ಮಿನ್ಗತೇಭೀಮಸೇನಾರ್ಜುನಾಭ್ಯಾಂವಿದ್ರಾವಿತೇರಾಜಸಂಘೇಸಮಸ್ತೇ ॥
ಭೀಷ್ಮಃಸೇನಾಮುಪಹೃತ್ಯಾಪಯಾತೋದುರ್ಯೋಧನಸ್ತಂನಿಶಿಚೋಪಜಗ್ಮಿವಾನ್ ॥೧೦೨॥

ತಸ್ಮಿನ್- ಆ ಭಗದತ್ತನು, ಗತೇಸತಿ- ಹೋಗುತ್ತಿರಲು, ಭೀಮಸೇನಾರ್ಜುನಾಭ್ಯಾಂ -- ಭೀಮಸೇನಾರ್ಜುನರಿಂದ, ಸಮಸ್ತೇ — ಎಲ್ಲಾ, ರಾಜಸಂಘೇ - ರಾಜರಸಮುದಾಯವು, ವಿದ್ರಾವಿತೇ ಸತಿ — ಓಡಿಸಲ್ಪಡುತ್ತಿರಲು, ಭೀಷ್ಮಃ — ಭೀಷ್ಮರು, ಸೇನಾಂ — ಸೈನ್ಯವನ್ನು, ಉಪಹೃತ್ಯ – ಹಿಂತಿರುಗಿಸಿ, ಅಪಯಾತಃ – ಹೋದರು. ದುರ್ಯೋಧನಃ— ದುರ್ಯೋಧನನು, ನಿಶಿ – ರಾತ್ರಿಯಲ್ಲಿ, ತಂ- ಆ ಭೀಷ್ಮರನ್ನು, ಉಪಜಗ್ಮಿವಾನ್—ಹೊಂದಿದನು. ॥೧೦೨॥

ಸಂಶ್ರಾವಿತಃಕ್ರೂರವಚಃ ಸತೇನಚಕ್ರೇಪ್ರತಿಜ್ಞಾಂ ಮೃತ್ಯುಭಯಂವಿಹಾಯ ॥
ಶಕ್ತ್ಯಾಹನಿಷ್ಯಾಮಿಪರಾನಿತಿಸ್ಮ ಚಕ್ರೇಚತತ್ಕರ್ಮತಥಾಪರೇದ್ಯುಃ ॥೧೦೩॥

ತೇನ—ಆ ದುರ್ಯೋಧನನಿಂದ, ಕ್ರೂರವಚಃ – ಕೆಟ್ಟವಾತನ್ನು, ಸಂಶ್ರಾವಿತಃ – ಕೇಳಿಸಿಕೊಳ್ಳಲ್ಪಟ್ಟ, ಸಃ – ಆ ಭೀಷ್ಮರು, ಮೃತ್ಯುಭಯಂ – ಮರಣ ಭಯವನ್ನು, ವಿಹಾಯ–ಬಿಟ್ಟು, ಶಕ್ತ್ಯಾ – ತನ್ನ ಶಕ್ತ್ಯನುಸಾರವಾಗಿ, ಪರಾನ್- ~~ಶತ್ರುಗಳನ್ನು, ಹನಿಷ್ಯಾಮಿ — ಕೊಲ್ಲುವೆನು, ಇತಿ – ಎಂದು, ಪ್ರತಿಜ್ಞಾಂ — ಪ್ರತಿಜ್ಞೆಯನ್ನು, ಚಕ್ರೇ — ಮಾಡಿದರು.~~ ಪರೇ ದ್ಯುಃ – ಮರುದಿವಸ, ತತ್ಕರ್ಮ – ಶತ್ರುಸಂಹಾರರೂಪಕರ್ಮವನ್ನು, ತಥಾ – ಪ್ರತಿಜ್ಞೆಮಾಡಿದಂತೆಯೇ, ಚಕ್ರೇ — ಮಾಡಿದರು ॥೧೦೩॥

ತಂಶಕ್ತಿತೋಜುಗುಪುರ್ಧಾರ್ತರಾಷ್ಟ್ರಾಸ್ತೇನಾರ್ದಿತಾಶ್ಚೇದಿಪಾಂಚಾಲಮಾತ್ಸ್ಯಾಃ ॥
ಪರಾದ್ರವನ್ಭೀಷ್ಮಬಾಣೋರುಭೀತಾಃ ಸಿಂಹಾರ್ದಿತಾಃ ಕ್ಷುದ್ರಮೃಗಾಇವಾರ್ತಾಃ ॥೧೦೪॥

ಧಾರ್ತರಾಷ್ಟ್ರಾಃ – ಕೌರವರು, ತಂ – ಆ ಭೀಷ್ಮರನ್ನು, ಶಕ್ತಿತಃ – ಶಕ್ತ್ಯನುಸಾರವಾಗಿ, ಜುಗುಪುಃ– ರಕ್ಷಿಸಿದರು. ತೇನ- ಆ ಭೀಷ್ಮರಿಂದ, ಅರ್ದಿತಾಃ– ಪೀಡಿಸಿಕೊಳ್ಳಲ್ಪಟ್ಟ, ಚೇದಿಪಾಂಚಾಲಮಾತ್ಸ್ಯಾಃ- ಚೇದಿದೇಶದವರೂ. ಪಾಂಚಾಲ ದೇಶದವರೂ, ಮತ್ಸ್ಯದೇಶದವರೂ, ಭೀಷ್ಮಬಾಣೋರುಭೀತಾಸ್ಸಂತಃ – ಭೀಷ್ಮರಬಾಣಗಳಿಂದಚೆನ್ನಾಗಿ ಭಯಗ್ರಸ್ತರಾಗಿ, ಸಿಂಹಾರ್ದಿತಾಃ––ಸಿಂಹದಿಂದಪೀಡಿಸಿಕೊಳ್ಳಲ್ಪಟ್ಟ, ಆರ್ತಾಃ – ದುಃಖಿಗೊಂಡ, ಕ್ಷುದ್ರಮೃಗಾಇವ – ಅಲ್ಪಪ್ರಾಣಿಗಳಂತೆ, ಪರಾದ್ರವನ್ – ಓಡಿ ಹೋದರು. ॥೧೦೪॥

ಸಂಸ್ಥಾಪ್ಯತಾನ್ಭೀಷ್ಮಮಭಿಪ್ರಯಾಂತಮುಲಂಬುಸೋಽವಾರಯತ್ಪಾರ್ಥಸೂನುಂ ॥
ವಿಜಿತ್ಯ ತಂ ಕೇಶವಭಾಗಿನೇಯೋ ಭೀಷ್ಮಂಯಯೌ ಧಾರ್ತರಾಷ್ಟ್ರೋಽಮುಮೋರ ॥೧೦೫॥

ತಾನ್ – ಆ ಚೇದಿ ಪಾಂಚಾಲಮಾತ್ಸ್ಯರನ್ನು, ಸಂಸ್ಥಾಪ್ಯ – ನಿಲ್ಲಿಸಿ, ಭೀಷ್ಮಂ – ಭೀಷ್ಮಾಚಾರ್ಯರನ್ನು ಕುರಿತು– ಅಭಿಪ್ರಯಾಂತಂ–ಎದುರಾಗಿ ಬರತಕ್ಕ, ಪಾರ್ಥಸೂನುಂ–ಅಭಿಮನ್ಯುವನ್ನು ಅಲಂಬುಸಃ–ಅಲಂಬುಸ ರಾಕ್ಷಸನು ಅವಾರಯತ್-

ತಡೆದನು, ಕೇಶವಭಾಗಿನೇಯಃ – ಶ್ರೀಕೃಷ್ಣನ ತಂಗಿಯಾವ ಸುಭದ್ರೆಯ ಮಗನಾದ ಅಭಿಮನ್ಯುವು, ತಂ–ಅಲಂಬುಸನನ್ನು, ವಿಜಿತ್ಯ – ಗೆದ್ದು, ಭೀಷ್ಮಂ – ಭೀಷ್ಮರನ್ನು, ಯಯೌ –ಹೊಂದಿದನು, ಧಾರ್ತರಾಷ್ಟ್ರಃ – ದುರ್ಯೋಧನನು, ಅಮುಂ– ಈ ಅಭಿಮನ್ಯುವನ್ನು, ಆರ – ಹೊಂದಿದನು. ॥೧೦೫॥

ತದ್ಯುದ್ಧಮಾಸೀನೃಪ ಪಾರ್ಥಪುತ್ರಯೋರ್ವಿಚಿತ್ರಮತ್ಯದ್ಭುತ ರೂಪಮುಗ್ರಂ ॥
ಸಮಂ ಚಿರಂ ತತ್ರ ಧನುಶ್ಚಕರ್ತಧ್ವಜಂಚ ರಾಜಾ ಸಹಸಾಭಿಮನ್ಯೋಃ ॥೧೦೬॥

ನೃಪಪಾರ್ಥಪುತ್ರಯೋಃ - ದುರ್ಯೋಧನ ಮತ್ತು ಅರ್ಜುನನ ಮಗನಾದ ಅಭಿಮನ್ಯು ಇವರಿಬ್ಬರಿಗೆ, ವಿಚಿತ್ರಂ – ವಿಚಿತ್ರವಾದ, ಅತ್ಯದ್ಭುತರೂಪಂ – ಅತ್ಯಾಶ್ಚರ್ಯಕರವಾದ, ಉಗ್ರಂ - ಕ್ರೂರವಾದ, ಸಮಂ – ಸಮಾನವಾದ, ತತ್-ಯುದ್ಧಂ— ಆ ಯುದ್ಧವು, ಚಿರಂ ಬಹುಕಾಲದ ತನಕ, ಆಸೀತ್ – ಆಯಿತು, ತತ್ರ – ಆ ಯುದ್ಧದಲ್ಲಿ, ರಾಜಾ – ದುರ್ಯೋಧನನು, ಸಹಸಾ—ಮಹಾಪ್ರಯತ್ನದಿಂದ, ಅಭಿಮನ್ಯೋಃ – ಅಭಿಮನ್ಯುವಿನ, ಧನುಃ – ಬಿಲ್ಲನ್ನು, ಧ್ವಜಂಚ– ಧ್ವಜವನ್ನೂ ಕೂಡ, ಚಕರ್ತ – ಕತ್ತರಿಸಿದನು. ॥೧೦೬॥

ಅಥೈನ ಮುಗ್ರೈಃ ಶರೈರ್ನವರ್ಷ ಸೂತಂಚ ತಸ್ಯಾಶು ಜಘಾನವೀರಃ ॥
ತದಾ ಸದದ್ಭೀಮಸೇನೋ ನೃಪಂ ತಂ ಜಘಾನಚಾಶ್ವಾನ್ ಧೃತರಾಷ್ಟ್ರಜಸ್ಯ ॥೧೦೭॥

ಅಥ - ಧನುಸ್ಸನ್ನು ತುಂಡುಮಾಡಿದ ನಂತರ, ವೀರಃ — ಪರಾಕ್ರಮಿಯಾದ ದುರ್ಯೋಧನನು, ಏನಂ ಈ ಅಭಿಮನ್ಯುವನ್ನು, ಉಗ್ರೈಃ – ತೀಕ್ಷ್ಣಗಳಾದ, ಶರೈಃ – ಬಾಣಗಳಿಂದ, ವವರ್ಷ–ಮಳೆಗರಿಸಿದನು, ತಸ್ಯ - ಆ ಅಭಿಮನ್ಯುವಿನ, ಸೂತಂ - ಸೂತನನ್ನು, ಆಶು – ಕೂಡಲೇ, ಜಘಾನ – ಕೊಂದನು, ತದಾ—ಆಗ, ಭೀಮಸೇನಃ – ಭೀಮಸೇನನು, ತಂ ನೃಪಂ — ಆ ದುರ್ಯೋಧನನನ್ನು, ಆಸದತ್ – ಹೊಂದಿದನು, ಧೃತರಾಷ್ಟ್ರಜಸ್ಯ — ದುರ್ಯೋಧನನ, ಅಶ್ವಾನ್ — ಕುದುರೆಗಳನ್ನು, ಜಘಾನ— ಕೊಂದನು. ॥೧೦೭॥

ದ್ರೋಣೋದ್ರೌಣಿರ್ಭಗದತ್ತಃ ಕೃಪಶ್ಚ ಸಚಿತ್ರಸೇನಾ ಅಭ್ಯಯುರ್ಭೀಮಸೇನಂ ॥
ಸರ್ವಾಂಶ್ಚ ತಾನ್ವಿಮುಖೀಕೃತ್ಯ ಭೀಮಃ ಸಚಿತ್ರಸೇನಾಯಗದಾಂಸಮಾದದೇ ॥೧೦೮॥

ದ್ರೋಣಃ – ದ್ರೋಣರು, ದ್ರೌಣಿಃ – ಅಶ್ವತ್ಥಾಮರು, ಭಗದತ್ತಃ – ಭಗದತ್ತನು, ಕೃಪಶ್ಚ – ಕೃಪನೂ ಕೂಡ, ಸಚಿತ್ರಸೇನಾಸ್ಸಂತಃ - ಚಿತ್ರಸೇನನೆಂಬ ದುರ್ಯೋಧನನ ತಮ್ಮನಿಂದ ಕೂಡಿದವರಾಗಿ, ಭೀಮಸೇನಂ - ಭೀಮಸೇನನನ್ನು, ಅಭ್ಯಯುಃ–ಹೊಂದಿದರು, ಸ ಭೀಮಃ-ಆ ಭೀಮಸೇನನು,ತಾನ್ಸರ್ವಾನ್ – ಅವರೆಲ್ಲರನ್ನೂ, ವಿಮುಖೀಕೃತ್ಯ–ಹಿಂತಿರುಗುವಂತೆ ಮಾಡಿ ಚಿತ್ರಸೇನಾಯ – ಚಿತ್ರಸೇನನಿಗೋಸ್ಕರ, ಗದಾಂ – ಗದೆಯನ್ನು, ಸಮಾದದೇ – ಹಿಡಿದನು. ॥೧೦೮॥

ತಾಮುದ್ಯತಾಂ ವೀಕ್ಷ್ಯಪರಾದ್ರವಂಸ್ತೇ ಸ ಚಿತ್ರಸೇನಶ್ಚ ರಥಾದವಪ್ಲುತಃ ॥
ಸಂಚೂರ್ಣಿತೋ ಗದಯಾತದ್ರಥಶ್ಚ ತಜ್ಜೀವನೇನೋದ್ಧೃಷಿತಾಶ್ಚ ಕೌರವಾಃ ॥೧೦೯॥

ತೇ – ಆ ದ್ರೋಣಾದಿಗಳು, ಉದ್ಯತಾಂ—ಎತ್ತಲ್ಪಟ್ಟ, ತಾಂ ಆ ಗದೆಯನ್ನು ವೀಕ್ಷ್ಯ–ನೋಡಿ, ಪರಾದ್ರವನ್–ಓಡಿದರು. ಸಃ ಚಿತ್ರಸೇನಃ ಆ ಚಿತ್ರಸೇನನು, ರಥಾತ್– ರಥದಿಂದ, ಅವಪ್ಲುತಃ– ಕೆಳಗಿಳಿದನು. ತದ್ರಥಃ – ಆ ಚಿತ್ರಸೇನನ ರಥವು, ಗದಯಾ - ಭೀಮನ ಗದೆಯಿಂದ, ಸಂಚೂರ್ಣಿತಃ—ಪುಡಿಯಾಯಿತು. ಕೌರವಾಃ – ಕೌರವರು, ತಜ್ಜೀವನೇನ ಆ ಚಿತ್ರಸೇನನ ಬದುಕುವಿಕೆಯಿಂದ, ಉದ್ಧೃಷಿತಾಃ– ಉತ್ಕೃಷ್ಟವಾದ ಆನಂದವುಳ್ಳವರಾದರು. ॥೧೦೯॥

ಭೀಷ್ಮಸ್ತು ಪಾಂಚಾಲಕರೂಷಚೇದಿಷ್ವಹನ್ಸಹಸ್ರಾಣಿ ಚತುರ್ದಶೋಗ್ರಃ ॥
ರಥಪ್ರಬರ್ಹಾನತಿತಿಗ್ಮತೇಜಾ ವಿದ್ರಾವಯಾಮಾಸ ಪರಾನವೀನಿವ ॥೧೧೦॥

ಉಗ್ರಃ – ಕ್ರೂರರಾದ, ಭೀಷ್ಮಸ್ತು– ಭೀಷ್ಮರಾದರೂ, ಪಾಂಚಾಲಕರೂಷಚೇದಿಷು — ಪಾಂಚಾಲ, ಕರೂಷ, ಚೇದಿ ರಾಜರಮಧ್ಯದಲ್ಲಿ, ಚತುರ್ದಶಸಹಸ್ರಾಣಿ – ಹದಿನಾಲ್ಕು ಸಾವಿರ ಸಂಖ್ಯಾಕರನ್ನು, ಅಹನ್–ಕೊಂದರು. ಅತಿತಿಗ್ಮತೇಜಾಃ– ಅತ್ಯಂತತೀಕ್ಷ್ಣವಾದ ತೇಜಸ್ಸುಳ್ಳ ಭೀಷ್ಮರು,ಪರಾನ್–ಇತರರಾದ, ರಥಪ್ರಬರ್ಹಾನ್–ಶ್ರೇಷ್ಠರಥಿಕರನ್ನು,ಅವೀನಿವ–ತೋಳವು ಕುರಿಗಳನ್ನೆಂಬಂತೆ, ವಿದ್ರಾವಯಾಮಾಸ—ಓಡಿಸಿದರು. ॥೧೧೦॥

ವಿದ್ರಾವ್ಯ ಸರ್ವಾಮಪಿ ಪಾಂಡುಸೇನಾಂ ವಿಶ್ರಾವ್ಯ ಲೋಕೇಷುಚ ಕೀರ್ತಿಮಾತ್ಮನಃ ॥
ಸೇನಾಮುಪಾಹೃತ್ಯ ಯಯೌ ನಿಶಾಗಮೇಸಂಸ್ತೂಯಮಾನೋ ಧೃತರಾಷ್ಟ್ರಪುತ್ರೈಃ ॥೧೧೧॥

ಭೀಷ್ಮಃ – ಭೀಷ್ಮರು, ಸರ್ವಾಮಪಿಪಾಂಡುಸೇನಾಂ — ಎಲ್ಲಾಪಾಂಡವರ ಸೇನೆಯನ್ನು, ವಿದ್ರಾವ್ಯ — ಓಡಿಸಿ, ಲೋಕೇಷು — ಲೋಕಗಳಲ್ಲಿ ಆತ್ಮನಃ – ತನ್ನ, ಕೀರ್ತಿಂ– ಯಶಸ್ಸನ್ನು, — ವಿಶ್ರಾವ್ಯ — ಕೆಳಪಡಿಸಿ, ವಿಸ್ತರಿಸಿ, ನಿಶಾಗಮೇಸತಿ– ರಾತ್ರಿ ಬರುತ್ತಿರಲು, ಧೃತರಾಷ್ಟ್ರ ಪುತ್ರೈಃ– ಧೃತರಾಷ್ಟ್ರನ ಮಕ್ಕಳಿಂದ, ಸಂಸ್ತೂಯಮಾನಃಸನ್–ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟವರಾಗಿ, ಸೇನಾಂ–ಸೇನೆಯನ್ನು, ಉಪಾಹೃತ್ಯ – ಹಿಂತಿರುಗಿಸಿ, ಯಯೌ –ಶಿಬಿರಕ್ಕೆ ಹೋದರು. ॥೧೧೧॥

ದ್ರೋಣೋವಿರಾಟಸ್ಯಪುರೋನಿಹತ್ಯ ಶಂಖಂ ಸುತಂ ತಸ್ಯ ನಿಹತ್ಯ ತಂಚ ॥
ವಿದ್ರಾವ್ಯ ಸೇನಾಮುಪಿ ಪಾಂಡವಾನಾಂ ಯಯೌ ನದೀಜೇನ ಸಹೈವ ಪೃಷ್ಟಃ ॥೧೧೨॥

ದ್ರೋಣಃ ದ್ರೋಣರು, ವಿರಾಟಸ್ಯ — ವಿರಾಟರಾಜನ, ಪುರಃ– ಎದುರಿನಲ್ಲಿಯೇ, ತಸ್ಯ–ಆ ವಿರಾಟನ, ಶಂಖಂ– ಶಂಖನೆಂಬ, ಸುತಂ–ಮಗನನ್ನು, ನಿಹತ್ಯ–ಕೊಂದು, ತಂಚ–ಆ ವಿರಾಟರಾಜನನ್ನೂಕೂಡ, ವಿಜಿತ್ಯ–ಗೆದ್ದು, ಪಾಂಡವಾನಾಂ– ಪಾಂಡವರ, ಸೇನಾಮಪಿ – ಸೈನ್ಯವನ್ನೂಕೂಡ, ವಿದ್ರಾವ್ಯ – ಓಡಿಸಿ, ನದೀಜೇನ – ಭೀಷ್ಮರಿಂದ, ಸಹೈವ — ಕೂಡಿಕೊಂಡೇ, ಹೃಷ್ಟಃಸನ್ – ಸಂತುಷ್ಟರಾಗಿ, ಯಯೌ —ಹೋದರು. ॥೧೧೨॥

ಭೀಮಾರ್ಜುನಾವಪಿ ಶತ್ರೂನ್ನಿಹತ್ಯ ವಿದ್ರಾವ್ಯ ಸರ್ವಾಂಶ್ಚ ಯುಧಿಪ್ರವೀರಾನ್ ॥
ಯುಧಿಷ್ಠಿರೇಣಾಪಹೃತೇಸ್ವಸೈನ್ಯೇಭೀತೇನ ಭೀಷ್ಮಾಚ್ಛಿಬಿರಂಪ್ರಜಗ್ಮತುಃ ॥೧೧೩॥

ಭೀಮಾರ್ಜುನಾವಪಿ—ಭೀಮಾರ್ಜುನರೂ ಕೂಡ, ಶತ್ರೂನ್ — ಶತ್ರುಗಳನ್ನು, ನಿಹತ್ಯ – ಕೊಂದು, ಯುಧಿ — ಯುದ್ಧದಲ್ಲಿ, ಸರ್ವಾನ್ – ಎಲ್ಲಾ, ಪ್ರವೀರಾನ್–ಮಹಾವೀರರನ್ನು, ವಿದ್ರಾವ್ಯ–ಓಡಿಸಿ, ಭೀಷ್ಮಾತ್– ಭೀಷ್ಮರಿಂದ,ಭೀತೇನ– ಹೆದರಿದ, ಯುಧಿಷ್ಠಿರೇಣ – ಧರ್ಮರಾಜನಿಂದ, ಸ್ವಸೈನ್ಯೇ—ತಮ್ಮ ಸೈನ್ಯವು, ಅಪಹೃತೇಸತಿ — ಶಿಬಿರಕ್ಕೆ ಒಯ್ಯಲ್ಪಡುತ್ತಿರಲು, ಶಿಬಿರಂ – ಶಿಬಿರವನ್ನು ಕುರಿತು, ಪ್ರಜಗ್ಮತುಃ – ಹೋದರು. ॥೧೧೩॥

ಯುಧಿಷ್ಠಿರೋ ಭೀಷ್ಮಪರಾಕ್ರಮೇಣ ಭೀತೋಭೀಷ್ಮಂ ಸ್ವವಧೋಪಾಯಮೇವ ॥
ಪ್ರಷ್ಟುಂಯಯೌ ನಿಶಿಕೃಷ್ಣೋSನುಜಾಶ್ಚ ತಸ್ಮಾನ್ನಯುಸ್ತಂಸ ಪಿತಾಮಹೋಯತ್ ॥೧೧೪॥

ಭೀಷ್ಮಪರಾಕ್ರಮೇಣ — ಭೀಷ್ಮರ ಪರಾಕ್ರಮದಿಂದ, ಭೀತಃ— ಹೆದರಿದ, ಯುಧಿಷ್ಠಿರಃ – ಧರ್ಮರಾಜನು, ಸ್ವವಧೋಪಾಯಂ – ಭೀಷ್ಮಾಚಾರ್ಯರ ಸಂಹಾರೋಪಾಯವನ್ನು, ಭೀಷ್ಮಮೇವ — ಭೀಷ್ಮರನ್ನೇ, ಪ್ರಷ್ಟುಂ – ಕೇಳಲ

ನಿಶ –ರಾತ್ರಿಯಲ್ಲಿ, ಯತ್ – ಯಾವಕಾರಣದಿಂದ, ಸಃ – ಆ ಭೀಷ್ಮರು, ಪಿತಾಮಹಃ – ಅಜ್ಜಂದಿರೋ, ತತ್ – ಆ ಕಾರಣದಿಂದ, ಯಯೌ –ಭೀಷ್ಮರ ಶಿಬಿರವನ್ನು ಕುರಿತು ಹೋದನು. ಕೃಷ್ಣಃ— ಶ್ರೀಕೃಷ್ಣನು, ತಸ್ಯ-ಆ ಯುಧಿಷ್ಠಿರನ, ಅನುಜಾಶ್ಚ –ತಮ್ಮಂದಿರೂ ಕೂಡ, ತಂ – ಆ ಯುಧಿಷ್ಠಿರನನ್ನು, ಅನ್ವಯುಃ— ಅನುಸರಿಸಿ ಹೋದರು. ॥೧೧೪॥

ಭೀಮಾರ್ಜುನೌ ಶಕ್ನುವಂತಾವಪಿಸ್ಮ ನರ್ತೇನುಜ್ಞಾಂ ಹಂತುಮಿಮಂ ಸಮೈಚ್ಛತಾಂ ॥
ಪೂಜ್ಯೋಯತೋ ಭೀಷ್ಮ ಉದಾರಕರ್ಮಾ ಕೃಷ್ಣೋಪ್ಯಾಯಾತ್ತೇನಹಿಪಾಂಡವಾರ್ಥೇ ॥೧೧೫॥

ಭೀಮಾರ್ಜುನೌ – ಭೀಮಾರ್ಜುನರಿಬ್ಬರೂ, ಇಮಂ—ಈ ಭೀಷ್ಮರನ್ನು, ಹಂತುಂ – ಕೊಲ್ಲಲು, ಶಕ್ನುವಂತಾವಪಿ – ಸಮರ್ಥರಾದಾಗ್ಯೂ ಕೂಡ, ಅನುಜ್ಞಾಂ – ಭೀಷ್ಮರ ಅಪ್ಪಣೆಯನ್ನು. ಋತೇ – ಹೊರತು, ಹಂತುಂ - ಭೀಷ್ಮರನ್ನು ಕೊಲ್ಲಲು, ಯತಃ ಯಾವ ಕಾರಣದಿಂದ, ಭೀಷ್ಮಃ – ಭೀಷ್ಮನು, ಪೂಜ್ಯಃ - ಪಿತಾಮಹರಾದ್ದರಿಂದ ಪೂಜ್ಯರೋ, ಅತಃ – ಆದ್ದರಿಂದ, ನ ಸಮೈಚ್ಛತಾಂ ಇಚ್ಛಿಸಲಿಲ್ಲ, ಉದಾರಕರ್ಮಾ – ಉತ್ಕೃಷ್ಟ ವ್ಯಾಪಾರವುಳ್ಳ, ಕೃಷ್ಣೋಪಿ — ಕೃಷ್ಣನೂ ಕೂಡ, ಪಾಂಡವಾರ್ಥೇ – ಪಾಂಡವರಿಗೋಸ್ಕರ, ತೇನ - ಆ ಕಾರಣದಿಂದ (ಆ ಭೀಷ್ಮರಿಂದ ಅನುಜ್ಞೆಯನ್ನು ಕೊಡಿಸುವ ನಿಮಿತ್ತದಿಂದ,) ಆಯಾತ್ – ಹೋದನು. ॥೧೧೫॥

ಪ್ರಾಪ್ಯಾನುಜ್ಞಾಂ ಭೀಷ್ಮತಸ್ತೇವಧಾಯ ಶಿಖಂಡಿನಂ ತದ್ವಚಸಾಗ್ರ್ಯಯಾಯಿನಂ ॥
ಕೃತ್ವಾಪರೇದ್ಯುಃ ಯುಧಯೇ ವಿನಿರ್ಗತಾ ಭೀಷ್ಮಂ ಪುರಸ್ಕೃತ್ಯ ತಥಾ ಪರೇಽಪಿ ॥೧೧೬॥

ತೇ –ಆ ಪಾಂಡವರು, ಭೀಷ್ಮತಃ – ಭೀಷ್ಮರಿಂದ, ಅನುಜ್ಞಾಂ – ಅಪ್ಪಣೆಯನ್ನು, ವಧಾಯ — ಭೀಷ್ಮರ ನಾಶಕ್ಕೋಸ್ಕರ, ಪ್ರಾಪ್ಯ – ಹೊಂದಿ, ತದ್ವಚಸಾ—ಆ ಭೀಷ್ಮರ ಮಾತಿನಿಂದಲೇ, ಶಿಖಂಡಿನಂ – ಶಿಖಂಡಿಯನ್ನು, ಅಗ್ರ್ಯಾಯಿನಂ – ಮುಂದೆ ಹೋಗತಕ್ಕವನನ್ನಾಗಿ, ಕೃತ್ವಾ – ಮಾಡಿ, ಪರೇದ್ಯುಃ—ಮರುದಿವಸ ಯುಧಯೇ – ಯುದ್ಧಕ್ಕೋಸ್ಕರ, ವಿನಿರ್ಗತಾಃ —ಹೊರಟರು, ತಥಾ - ಹಾಗೆಯೇ, ಪರೇಽಪಿ – ಇತರರಾದ ಕೌರವರೂ ಕೂಡ, ಭೀಷ್ಮಂ — ಭೀಷ್ಮರನ್ನು ಪುರಸ್ಕೃತ್ಯ – ಮುಂದೆ ಮಾಡಿಕೊಂಡು, ವಿನಿರ್ಗತಾಃ – ಹೋದರು. ॥೧೧೬॥

ಭಾ. ಅ. ೯೬—೧೧೬ ಪುನಃ ಸ್ವಸೈನ್ಯ ಸಮೇತನಾಗಿ ದುರ್ಯೋಧನನು ಯುದ್ಧಕ್ಕೆ ಬಂದು, ತಾನು ಘಟೋತ್ಕಚನನ್ನು ಗೆಲ್ಲುವ ಉಪಾಯದ ಬಗ್ಗೆ ಭೀಷ್ಮರನ್ನು ಕೇಳಿದನು. ಅವರು ಘಟೋತ್ಕಚನ ಹತ್ತಿರ ಹೋಗುವದು ಬೇಡವೆಂದೇ ಹೇಳಿದರು ಮತ್ತು ಭಗದತ್ತನನ್ನು ಕಳಿಸಿದರು. ಘಟೋತ್ಕಚನು ಯುದ್ಧಕ್ಕೆ ಬಂದ ಆ ಭಗದತ್ತನನ್ನೂ ಅವನ ಆನೆಯನ್ನೂ ಚೆನ್ನಾಗಿಮರ್ದಿಸಿದನು. ಪೀಡೆಯನ್ನು ಹೊಂದಿದ ಭಗದತ್ತನು ಶೂಲಾಯುಧವನ್ನು ಒಗೆದಾಗ ಘಟೋತ್ಕಚನು ಆಕಾಶದಲ್ಲಿ ಹಾರಿ, ಆ ಶೂಲಾಯುಧವನ್ನು ಹಿಡಿದು ಮುರಿದು ಹಾಕಿದನು. ಅದನ್ನು ಕಂಡ ದೇವತೆಗಳು ಸಂತೋಷಪಟ್ಟರು. ಭಗದತ್ತನಾಗ ಘಟೋತ್ಕಚನ ಪದಾತಿಗಳನ್ನು ಸಂಹರಿಸಿದನು. ಆಗ, ಶ್ರೀಭೀಮಸೇನದೇವರು ಭಗದತ್ತನ ಹತ್ತಿರ ಯುದ್ಧಕ್ಕೆ ಧಾವಿಸಿದರು. ಅವರ ಮೇಲೆ ಸುಪ್ರತೀಕಗಜವನ್ನು ಏರಿಬಿಟ್ಟನು. ಅದರ ಮೇಲೆ ಭೀಮಾರು ಬಾಣಗಳನ್ನು ಬಿಟ್ಟು ನಿಶ್ಚೇಷ್ಟವನ್ನಾಗಿ ಮಾಡಿದರು.ಆಗ ಅವನು ಶ್ರೀಭೀಮಸೇನರ ಕುದುರೆಗಳನ್ನು ಕೊಲ್ಲುತ್ತಾ ಇರಲು,ಗದಾವನ್ನು ತೆಗೆದುಕೊಂಡು ಗಜಸಮೇತನಾದ ಭಗದತ್ತನನ್ನು ಕೊಲ್ಲಲು ಎದುರಿಗೆ ಹೋಗುತ್ತಿರಲು,ಹಿಂಬದಿಯಿಂದ ಶ್ರೀಕೃಷ್ಣನು ಅರ್ಜುನನನ್ನು ಕರೆದುಕೊಂಡು ಬಂದನು. ಭಗದತ್ತನ ಹತ್ತಿರವಿರುವ ವೈಷ್ಣವಾಸ್ತ್ರವನ್ನು ಅವನಿಂದ ದೂರಮಾಡುವ ಉದ್ದೇಶದಿಂದ ಶ್ರೀಕೃಷ್ಣನು ಬಂದನು. ಆಗ ಭೀತನಾದ ಭಗದತ್ತನು ಯುದ್ಧ ಬಿಟ್ಟು ಹಿಂದೆಹೋದನು. ಅಂದಿನ ಸಾಯಂ ತನಕ ಭೀಮಾರ್ಜುನರಿಂದ ಎಲ್ಲ ರಾಜಸಮೂಹವು ಸೋತು ಓಡುತ್ತಿರಲು ಅಂದು ಯುದ್ಧನಿಲ್ಲಿಸಿದರು. ರಾತ್ರಿಯಲ್ಲಿ ದುರ್ಯೋಧನನು ಭೀಷ್ಮರ ಹತ್ತಿರಕ್ಕೆ ಹೋಗಿ ಕ್ರೂರವಾಗಿ ಬೈದಾಗ ಅವರು ಮರಣಭಯವನ್ನು ತ್ಯಜಿಸಿ ಶಕ್ತ್ಯನುಸಾರವಾಗಿ ವೈರಿಗಳನ್ನು ಸಂಹರಿಸುವದಾಗಿ ಹೇಳಿದರು. ಮರುದಿನದ ಯುದ್ಧದಲ್ಲಿ ಹಾಗೆ ಮಾಡಲಾರಂಭಿಸಿದರು. ಅವರನ್ನು ಕೌರವಸಹೋದರರು ರಕ್ಷಿಸುತ್ತಿದ್ದರು. ಭೀಷ್ಮರ ಬಾಣಗಳಿಂದ

ಪೆಟ್ಟಿತಿಂದ ಚೇದಿ, ಪಾಂಚಾಲ, ವಿರಾಟರಾಜ್ಯದ ಸೈನಿಕರು ಹೆದರಿ ಓಡಿಹೋದರು. ಆಗ ಅಭಿಮನ್ಯುವು ಓಡುವವರನ್ನು ನಿಲ್ಲಿಸಿ ಭೀಷ್ಮರ ಹತ್ತಿರಕ್ಕೆ ಯುದ್ಧಕ್ಕೆ ಬರುತ್ತಿರಲು ಅವನನ್ನು ಅಲಂಬುಸರಾಕ್ಷಸನು ತಡೆದಾಗ ಅವನನ್ನು ಗೆದ್ದು, ಮುಂದೆ ಹೊರಟಾಗ ದುರ್ಯೋಧನನು ಬಂದನು. ಇಬ್ಬರಿಗೂ ಘನಘೋರವಾದ ಯುದ್ಧವು ಬಹಳಸಮಯ ನಡೆಯಿತು. ಇಬ್ಬರಿಗೂ ಜಯ ಪರಾಜಯಗಳಿಲ್ಲದಂತೆ ನಡೆಯಿತು. ಬಹಳ ಪ್ರಯತ್ನದಿಂದ ದುರ್ಯೋಧನನು ಅಭಿಮನ್ಯುವಿನ ಧ್ವಜವನ್ನು, ಬಿಲ್ಲನ್ನು ಕತ್ತರಿಸಿದನು ಮತ್ತು ಸಾರಥಿಯನ್ನೂಕೊಂದನು. ಆಗ ಶ್ರೀಭೀಮಸೇನರು ಬಂದು ದುರ್ಯೋಧನನ ಕುದುರೆಗಳನ್ನು ಕೊಂದರು. ಆಗ ಯುದ್ಧಕ್ಕೇರಿಬಂದ ದ್ರೋಣ, ಅಶ್ವತ್ಥಾಮ, ಭಗದತ್ತ, ಕೃಪ, ಚಿತ್ರಸೇನ (ದುರ್ಯೋಧನನ ತಮ್ಮ) ಇವರೆಲ್ಲರನ್ನು ರಣಭೂಮಿಯಿಂದ ಓಡಿಸಿ, ಚಿತ್ರಸೇನನಿಗೆಂದು ಗದೆಯನ್ನು ತೆಗೆದುಕೊಂಡು ಎತ್ತಿದಾಗ, ಅದನ್ನು ನೋಡಿದ ಚಿತ್ರಸೇನನು ರಥವನ್ನು ಬಿಟ್ಟು ಓಡಿದನು. ರಥದಮೇಲೆಯೇ ಗದೆಯನ್ನು ಬೀಸಿದಾಗ ರಥವುಪ್ಪಡಿಯಾಯಿತು. ಅದನ್ನು ನೋಡಿದ ಕೌರವರು ಚಿತ್ರಸೇನನು ಬದುಕಿದನೆಂದು ಸಂತಸಬಟ್ಟರು. ಭೀಷ್ಮರು ಪಾಂಚಾಲ, ಕರೂಷ, ಚೇದಿ ರಾಜ್ಯದ ಹದಿನಾಲ್ಕುಸಾವಿರ ಸೈನಿಕರನ್ನು ಸಂಹರಿಸಿದರು ಮತ್ತು ಶ್ರೇಷ್ಠರಥಿಕರನ್ನೂಕೂಡ ಕುರಿಗಳಂತೆ ಓಡಿಸಿದರು. ಹೀಗೆ ಅಂದಿನ ಯುದ್ಧದಲ್ಲಿ ಪಾಂಡವರಸೇನೆಯನ್ನೆಲ್ಲ ಓಡಿಸಿ ಯುದ್ಧನಿಲ್ಲಿಸಿದರು. ಭೀಷ್ಮರನ್ನು ಕೌರವರು ತುಂಬಾ ಪ್ರಶಂಸಿಸಿದರು. ಅವರ ಕೀರ್ತಿಯು ಪಸರಿಸಿತು. ದ್ರೋಣರಾದರೂ ವಿರಾಟರಾಜನ ಎದುರೇ ಅವನ ಮಗ ಶಂಖನನ್ನು ಸಂಹರಿಸಿ, ಸೇನೆಯನ್ನು ಓಡಿಸಿ ಶಿಬಿರಕ್ಕೆಹೋದರು. ಅಂದು ಭೀಮಾರ್ಜುನರೂ ವೈರಿಪಕ್ಷದಸೈನ್ಯವನ್ನು ಗೆದ್ದಿದ್ದರೂಕೂಡ ಭೀಷ್ಮರ ಭಯಂಕರ ಯುದ್ಧಕ್ಕೆ ಹೆದರಿದ ಧರ್ಮನು ಸೈನ್ಯವನ್ನು ಹಿಂತೆಗೆದುಕೊಳ್ಳಲು ಅವರೂಶಿಬಿರಕ್ಕೆ ಹೋದರು. ಹೆದರಿದ ಧರ್ಮರಾಜನು ಭೀಷ್ಮರ ವಧೋಪಾಯವನ್ನು ಕೇಳಲು (ಅಜ್ಜರಾದ್ದರಿಂದ) ಅವರ ಹತ್ತಿರಕ್ಕೆ ಹೋದನು. ಅವನ ಹಿಂದೆ ಶ್ರೀಕೃಷ್ಣನೂ, ಭೀಮಾದಿಗಳೂ ಹೋದರು. ಭೀಮಾರ್ಜುನರು ಭೀಷ್ಮರ ಸಂಹಾರಮಾಡಲು ಸಮರ್ಥರಾದರೂಕೂಡ, ಪೂಜ್ಯರಾದ ಅವರ ಅಪ್ಪಣೆಯಿಲ್ಲದೇ ಸಂಹರಿಸಲು ಇಚ್ಛಿಸದೆ ಅಪ್ಪಣೆಗಾಗಿ ಹೋದರು. ಪಾಂಡವರಿಗೆ ಅಪ್ಪಣೆಕೊಡಿಸುವದಕ್ಕಾಗಿಯೇ ಶ್ರೀಕೃಷ್ಣನೂ ಹೋದನು. ಪಾಂಡವರು ಆ ಪ್ರಕಾರ ಅಪ್ಪಣೆಪಡೆದು ಅವರು ಹೇಳಿದಂತೆಯೇ ಮರುದಿನಯುದ್ಧದಲ್ಲಿ ಶಿಖಂಡಿಯನ್ನು ಮುಂದೆಮಾಡಿಕೊಂಡು ಹೊರಟರು. ಭೀಷ್ಮರನ್ನು ಮುಂದಾಗಿಟ್ಟುಕೊಡು ಕೌರವರು ಬಂದರು.

ಶಿಖಂಡಿನೋ ರಕ್ಷಕಃ ಫಲ್ಗುನೋ ಽಭೂದ್ಭೀಷ್ಮಸ್ಯ ದುಃಶಾಸನ ಆಸಚಾಗ್ರೇ ॥
ಅನ್ಯೇಚ ಸರ್ವೇ ಜುಗುಪು ರ್ಭೀಷ್ಮಮೇವನ್ಯವಾರಯನ್ಭೀಮಸೇನಾದಯಸ್ತಾನ್ ॥೧೧೭॥

ಫಲ್ಗುನಃ – ಅರ್ಜುನನು, ಶಿಖಂಡಿನಃ— ಶಿಖಂಡಿಗೆ, ರಕ್ಷಕಃ- ರಕ್ಷಕನು, ಅಭೂತ್ – ಆದನು. ದುಃಶಾಸನಃ— ದುಃಶಾಸನನು, ಭೀಷ್ಮಸ್ಯ – ಭೀಷ್ಮರಿಗೆ, ಅಗ್ರೇ ಮುಂಭಾಗದಲ್ಲಿ, ರಕ್ಷಕಃ – ರಕ್ಷಕನು, ಆಸ – ಆಗಿದ್ದನು. ಅನ್ಯೇಚ – ಸರ್ವೇ ಇತರರೆಲ್ಲರೂ ಕೂಡ, ಭೀಷ್ಮಮೇವ – ಭೀಷ್ಮರನ್ನೇ, ಜುಗುಪುಃ— ರಕ್ಷಿಸಿದರು; ಭೀಮಸೇನಾದಯಃ – ಭೀಮನೇ ಮೊದಲಾಗಿ ಉಳ್ಳವರು, ತಾನ್ – ಆ ಭೀಷ್ಮರಕ್ಷಕರನ್ನು, ನ್ಯವಾರಯನ್– ತಡೆದರು. ॥೧೧೭॥

ಭೀಷ್ಮಾಯ ಯಾಂತಂ ಯುಯುಧಾನಮಾಜೌ ನ್ಯವಾರಯದ್ರಾಕ್ಷಸೋ ಽಲಂಬುಸೋ ಽಥ ॥
ತಂವಜ್ರಕಲ್ಪೈರತುದದ್ವೃಷ್ಣಿವೀರಃ ಶರೈಃ ಸ ಮಾಯಾಮುಸೃಜತ್ತದೋಗ್ರಾಂ ॥೧೧೮॥

ಭೀಷ್ಮಾಯ — ಭೀಷ್ಮರನ್ನು ಕುರಿತು, ಯಾಂತಂ – ಹೋಗತಕ್ಕ, ಯುಯುಂಧಾನಂ – ಯುಯುಧಾನನನ್ನು, ಆಜೌ – ಯುದ್ಧದಲ್ಲಿ, ರಾಕ್ಷಸಃ – ರಾಕ್ಷಸನಾದ, ಅಲಂಬುಸಃ – ಅಲಂಬುಸನು, ನ್ಯವಾರಯತ್ — ತಡೆದನು, ಅಥ – ಅನಂತರ, ವೃಷ್ಣಿವೀರಃ–ಯಾದವರಲ್ಲಿ ಪರಾಕ್ರಮಿಯಾದ ಯುಯುಧಾನನು, ವಜ್ರಕಲ್ಪೈಃ – ವಜ್ರಕ್ಕೆ ಸದೃಶಗಳಾದ, ಶರೈಃ – ಬಾಣಗಳಿಂದ, ತಂ – ಆ ಅಲಂಬುಸನನ್ನು, ಅತುದತ್ –ವ್ಯಥೆಪಡಿಸಿದನು, ಸಃ – ಆ ಅಲಂಬುಸನು, ತದಾ — ಆಗ, ಉಗ್ರಾಂ – ಕ್ರೂರವಾದ, ಮಾಯಾಂ — ಮಾಯೆಯನ್ನು ಅಸೃಜತ್ – ಸೃಷ್ಟಿಸಿದನು. ॥೧೧೮॥

ಅಸ್ತ್ರೇಣ ಮಾಯಾಮಪನುದ್ಯವೀರೋ ವ್ಯದ್ರಾವಯದ್ರಾಕ್ಷಸಂ ಸಾತ್ಯಕಿಸ್ತಂ ॥
ತಸ್ಮಿನ್ಗತೇಯುಯುಧಾನೋ ರಥೇನ ಯಯೌ ಭೀಷ್ಮಂ ಪಾರ್ಥಮನ್ವೇವ ಧನ್ವೀ ॥೧೧೯॥

ವೀರಃ – ಪರಾಕ್ರಮಿಯಾದ, ಸಾತ್ಯಕಿಃ—ಸಾತ್ಯಕಿಯು, ಅಸ್ತ್ರೇಣ—ವಿಜ್ಞಾನಾಸ್ತ್ರದಿಂದ, ಮಾಯಾಂ – ಮಾಯೆಯನ್ನು, ಅಪನುದ್ಯ — ನಾಶಮಾಡಿ, ರಾಕ್ಷಸಂ ತಂ — ರಾಕ್ಷಸನಾದ ಅಲಂಬುಸನನ್ನು, ವ್ಯದ್ರಾವಯತ್ — ಓಡಿಸಿದನು. ತಸ್ಮಿನ್ಗತೇಸತಿ – ಆ ಅಲಂಬುಸನು ಹೋಗುತ್ತಿರಲು, ಧನ್ವೀ—ಧನುರ್ಧಾರಿಯಾದ, ಯುಯುಧಾನಃ— ಯುಯುಧಾನನು, ಪಾರ್ಥಂ—ಅರ್ಜುನನನ್ನು, ಅನ್ವೇವ—ಅನುಸರಿಸಿಯೇ, ರಥೇನ-ರಥದಿಂದ, ಭೀಷ್ಮಂ—ಭೀಷ್ಮರನ್ನು ಕುರಿತು, ಯಯೌ–ಹೋದನು. ॥೧೧೯॥

ದ್ರೋಣೋದ್ರೌಣಿರ್ದಾರ್ತರಾಷ್ಟ್ರಶ್ಚ ರಾಜಾ ಭೂರಿಶ್ರವಾಭಗದತ್ತಃ ಕೃಪಶ್ಚ ॥
ಶಲ್ಯೋಬಾಹ್ಲೀಕಃ ಕೃತವರ್ಮಾ ಸುಶರ್ಮಾ ಸರ್ವಾಶ್ಚ ಸೇನಾ ವಾರಿತಾ ವಾಯುಜೇನ ॥೧೨೦॥

ದ್ರೋಣಃ – ದ್ರೋಣರು, ದ್ರೌಣಿಃ – ಅಶ್ವತ್ಥಾಮನು, ರಾಜಾಧಾರ್ತರಾಷ್ಟ್ರಶ್ಚ - ರಾಜನಾದ ದುರ್ಯೋಧನನೂ, ಭೂರೀಶ್ರವಾಃ–ಭೂರಿಶ್ರವನು, ಭಗದತ್ತಃ – ಭಗದತ್ತನು, ಕೃಪಶ್ಚ–ಕೃಪಾಚಾರ್ಯರೂಕೂಡ, ಶಲ್ಯಃ-ಶಲ್ಯನು, ಬಾಹ್ಲೀಕಃ–ಬಾಹ್ಲೀಕ ರಾಜನು, ಕೃತವರ್ಮಾ– ಕೃತವರ್ಮನು, ಸುಶರ್ಮಾ – ಸುಶರ್ಮರಾಜನು. ಸರ್ವಾಃ ಸೇನಾಶ್ಚ – ಎಲ್ಲಾ ಸೈನ್ಯಗಳೂ ಕೂಡ, ವಾಯುಜೇನ – ವಾಯುಪುತ್ರ ಭೀಮನಿಂದ, ವಾರಿತಾಃ– ತಡೆಯಲ್ಪಟ್ಟವು. ॥೧೨೦॥

ಸತಾನ್ಮುಹುರ್ವಿರಥೀಕೃತ್ಯವೀರಃಪ್ರಾಗ್ಜ್ಯೋತಿಷಂ ಸಗಜಂ ದ್ರಾವಯಿತ್ವಾ ॥
ನ್ಯವಾರಯತ್ಫಲ್ಗುನಂ ರೋ(ಯೋ)ದ್ಧುಕಾಮಂ ಪಾರ್ಥಶ್ಚದೇವವ್ರತಮಾಸಸಾದ ॥೧೨೧॥

ವೀರಃ – ಪರಾಕ್ರಮಿಯಾದ, ಸಃ– ಆ ಭೀಮನು, ತಾನ್— ಆ ದ್ರೋಣಾದಿಗಳನ್ನು, ಮುಹುಃ– ಮತ್ತೂಮತ್ತೂ, ವಿರಥೀಕೃತ್ಯ — ರಥವಿಲ್ಲದವರನ್ನಾಗಿ ಮಾಡಿ, ದ್ರಾವಯಿತ್ವಾ — ಓಡಿಸಿ, ಫಲ್ಗುನಂ – ಅರ್ಜುನನನ್ನು ಕುರಿತು, ಯೋದ್ಧು–ಕಾಮಂ— ಯುದ್ಧಮಾಡಲು ಇಚ್ಛೆಯುಳ್ಳ, ಸಗಜಂ -- ಸುಪ್ರತೀಕ ಆನೆಯಿಂದ ಕೂಡಿದ, ಪ್ರಾಗ್ಜ್ಯೋತಿಷಂ–ಭಗದತ್ತನನ್ನು, ನ್ಯವಾರಯತ್– ತಡೆದನು, ಪಾರ್ಥಶ್ಚ– ಅರ್ಜುನನಾದರೂ, ದೇವವ್ರತಂ–ಭೀಷ್ಮರನ್ನು, ಆಸಸಾದ– ಹೊಂದಿದನು. ॥೧೨೧॥

ಯುಧಿಷ್ಠಿರಂ ಭೀಷ್ಮಮಭಿಪ್ರಯಾಂತಂ ಮಾದ್ರೀಸುತಾಭ್ಯಾಂಸಹಿತಂನೃವೀರಂ ॥
ನ್ಯವಾರಯಚ್ಛಕುನಿಃಸಾದಿನಾಂಚಯುತೋಽಯುತೇನೈವವರಾಶ್ವಗೇನ ॥೧೨೨॥

ಭೀಷ್ಮಂ—ಭೀಷ್ಮರನ್ನು ಕುರಿತು, ಅಭಿಪ್ರಯಾಂತಂ – ಎದುರಾಗಿ ಹೋಗತಕ್ಕ, ಮಾದ್ರೀಸುತಾಭ್ಯಾಂ—ಮಾದ್ರಿಯ ಮಕ್ಕಳಾದ ನಕುಲ ಸಹದೇವರಿಂದ, ಸಹಿತಂ— ಕೂಡಿದ, ನೃವೀರಂ— ಪುರುಷರಲ್ಲಿ ಪರಾಕ್ರಮಿಯಾದ, ಯುಧಿಷ್ಠಿರಂ—ಧರ್ಮರಾಜನನ್ನು, ವರಾಶ್ವಗೇನ - ಉತ್ತಮ ಅಶ್ವದಲ್ಲಿರತಕ್ಕ, ಸಾದಿನಾಂ–ಗಜಾಶ್ವಾದಿವಾಹನದಲ್ಲಿರತಕ್ಕವರ, ಅಯುತೇನ–ಹತ್ತುಸಾವಿರದಿಂದ, ಯುತಃ – ಕೂಡಿದ, ಶಕುನಿಃ – ಶಕುನಿಯು, ನ್ಯವಾರಯತ್ — ತಡೆದನು. ॥೧೨೨॥

ತಾನ್ಸಾದಿನೋಽಶ್ವಾಂಶ್ಚ ನಿಹತ್ಯಸರ್ವಾನ್ವಿಜಿತ್ಯತಂ ಶಕುನಿಂ ಪಾಂಡವಾಸ್ತೇ ॥
ಪ್ರಾಪುರ್ಭೀಷ್ಮಂದ್ರೌಪದೇಯಾಶ್ಚ ಸರ್ವೇತಥಾವಿರಾಟದ್ರುಪದೌ ಕುಂತಿಭೋಜಃ ॥೧೨೩॥

ತೇಪಾಂಡವಾಃ – ಆ ಯುಧಿಷ್ಠಿರ, ನಕುಲ, ಸಹದೇವರು, ತಾನ್ ಸಾದಿನಃ— ಅಶ್ವಾರೂಢ ಪುರುಷರನ್ನು ಅಶ್ವಾಂಶ್ಚ - ಕುದುರೆಗಳನ್ನೂಕೂಡ, ನಿಹತ್ಯ— ಕೊಂದು, ತಂ ಶಕುನಿಂ – ಆ ಶಕುನಿಯನ್ನು, ವಿಜಿತ್ಯ–ಗೆದ್ದು, ಭೀಷ್ಮಂ–ಭೀಷ್ಮರನ್ನು, ಪ್ರಾಪುಃ— ಹೊಂದಿದರು. ದ್ರೌಪದೇಯಾಃ— ದ್ರೌಪದಿಯಮಕ್ಕಳೂ, ತಥಾ— ಹಾಗೆಯೇ, ವಿರಾಟ ದ್ರುಪದೌ —ವಿರಾಟ ಮತ್ತು ದ್ರುಪದರು, ಕುಂತಿಭೋಜಃ — ಕುಂತಿಭೋಜನು, ಸರ್ವೇ— ಎಲ್ಲರೂ, ಭೀಷ್ಮಂ – ಭೀಷ್ಮರನ್ನು ಪ್ರಾಪುಃ — ಹೊಂದಿದರು. ॥೧೨೩॥

ಧೃಷ್ಟದ್ಯುಮ್ನಂ ಭೀಷ್ಮಮಭಿಪ್ರಯಾಂತಂ ನ್ಯವಾರಯತ್ಸೈಂಧವಸ್ತಂಸಬಾಣೈಃ ॥
ಹತಾಶ್ವಸೂತಂ ಸಗಣಂದ್ರಾವಯಿತ್ವಾಸಮಾಸದದ್ಭೀಷ್ಮಮೇವಾಶುವೀರಃ ॥೧೨೪॥

ಭೀಷ್ಮಂ – ಭೀಷ್ಮರನ್ನು ಕುರಿತು, ಅಭಿಪ್ರಯಾಂತಂ— ಎದುರಾಗಿಹೋಗತಕ್ಕ, ಧೃಷ್ಟದ್ಯುಮ್ನಂ– ಧೃಷ್ಟದ್ಯುಮ್ನನನ್ನು, ಸೈಂಧವಃ – ಸಿಂಧುದೇಶದ ರಾಜನಾದ ಜಯದ್ರಥನು, ನ್ಯವಾರಯತ್ — ತಡೆದನು. ವೀರಃ– ಪರಾಕ್ರಮಿಯಾದ, ಸಃ– ಆ ಧೃಷ್ಟದ್ಯುಮ್ನನು, ಬಾಣೈಃ — ಬಾಣಗಳಿಂದ, ಹತಾಶ್ವಸೂತಂ – ಕೊಲ್ಲಲ್ಪಟ್ಟ ಕುದುರೆಗಳು ಸೂತನೂ ಇವರುಳ್ಳ, ಸಗಣಂ – ಕಾಲಕೇಯ ಗಣದಿಂದ ಕೂಡಿದ, ತಂ ಆ ಸೈಂಧವನನ್ನು, ದ್ರಾವಯಿತ್ವಾ — ಓಡಿಸಿ, ಆಶು — ಕೂಡಲೇ, ಭೀಷ್ಮಮೇವ — ಭೀಷ್ಮರನ್ನೇ, ಸಮಾಸದತ್ – ಹೊಂದಿದನು. ॥೧೨೪॥

ಗುಪ್ತೋಽಥಪಾರ್ಥೇನರಣೇಶಿಖಂಡೀ ಭೀಷ್ಮಂ ಸಮಾಸಾದ್ಯಶರೈರತಾಡಯತ್ ॥
ಭೀಷ್ಮಃಸ್ತ್ರೀತ್ವಂತಸ್ಯಜಾನನ್ನತಸ್ತೈಮುಮೋಚಬಾಣಾನ್ಸತು ತಂ ತುತೋದ ॥೧೨೫॥

ಅಥ – ಅನಂತರ, ಪಾರ್ಥೇನ – ಅರ್ಜುನನಿಂದ, ಗುಪ್ತಃ — ರಕ್ಷಿಸಲ್ಪಟ್ಟ, ಶಿಖಂಡೀ —ಶಿಖಂಡಿಯು. ರಣೇ— ಯುದ್ಧದಲ್ಲಿ, ಭೀಷ್ಮಂ –ಭೀಷ್ಮರನ್ನು, ಸಮಾಸಾದ್ಯ — ಹೊಂದಿ, ಶರೈಃ– ಬಾಣಗಳಿಂದ, ಅತಾಡಯತ್ – ಹೊಡೆದನು. ಭೀಷ್ಮಃ – ಭೀಷ್ಮರು, ತಸ್ಯ— ಆ ಶಿಖಂಡಿಗೆ, ಸ್ತ್ರೀತ್ವಂ– ಸ್ತ್ರೀರೂಪವನ್ನು, ಜಾನನ್ಸನ್ – ತಿಳಿದವರಾಗಿ, ತಸ್ಮೈ— ಆ ಶಿಖಂಡಿ ಗೊಸ್ಕರ, ಬಾಣಾನ್ — ಶರಗಳನ್ನು, ನಮುಮೋಚ – ಬಿಡಲಿಲ್ಲ. ಸತು– ಆ ಶಿಖಂಡಿಯಾದರೂ, ತಂ— ಆ ಭೀಷ್ಮರನ್ನು, ತುತೋದ – ವ್ಯಥೆಪಡಿಸಿದನು. ॥೧೨೫॥

ಶಿಖಂಡಿನಂ ವಾರಯಾಮಾಸಬಾಣೈಃ ದುರ್ಮರ್ಷಣೋಽಮರ್ಷಣವಿಹ್ವಲೇಕ್ಷಣಃ ॥
ನಾತ್ಯೇತುಮೇನಮಶಕಚ್ಛಿಖಂಡೀದುಃಶಾಸನಃ ಪಾರ್ಥಮವಾರಯತ್ತದಾ ॥೧೨೬॥

ಅಮರ್ಷಣವಿಹ್ವಲೇಕ್ಷಣಃ – ಕೋಪದಿಂದ ಚಂಚಲಗಳಾದ ಕಣ್ಣುಗಳುಳ್ಳ, ದುರ್ಮರ್ಷಣಃ– ಸುಯೋಧನನ ತಮ್ಮನಾದ ದುರ್ಮರ್ಷಣನು, ಬಾಣೈಃ –ಬಾಣಗಳಿಂದ, ಶಿಖಂಡಿನಂ– ಶಿಖಂಡಿಯನ್ನು, ವಾರಯಾಮಾಸ – ತಡೆದನು. ಶಿಖಂಡೀ– ಶಿಖಂಡಿಯು, ಏನಂ – ಈ ದುರ್ಮರ್ಷಣನನ್ನು, ಅತ್ಯೇತುಂ — ಅತಿಕ್ರಮಿಸಿಹೋಗಲು ನಾಶಕತ್ — ಸಮರ್ಥನಾಗಲಿಲ್ಲ. ತದಾ—ಆಗ, ದುಃಶಾಸನಃ— ದುಃಶಾಸನನು, ಪಾರ್ಥಂ – ಅರ್ಜುನನನ್ನು, ಅವಾರಯತ್ – ತಡೆದನು. ॥೧೨೬॥

ಸಲೋಕವೀರೋಽಪಿದುರಾತ್ಮನಾಮುನಾರುದ್ಧೋಶಕನ್ನೈನಮತೀತ್ಯಯಾತುಂ ॥
ಭೀಷ್ಮಂ ಪಾರ್ಥಸ್ಸಾಯಕಾಶ್ಚಾಸ್ಯತಸ್ಮಿನ್ನಸಜ್ಜಿರೇಪರ್ವತೇಷ್ವಪ್ಯಸಕ್ತಾಃ ॥೧೨೭॥

ದುರಾತ್ಮನಾ— ದುಷ್ಟವಾದ ಮನಸ್ಸುಳ್ಳ, ಅಮುನಾ — ಈ ದುಃಶಾಸನಿಂದ, ರುದ್ಧಃ– ತಡೆಯಲ್ಪಟ್ಟ, ಸಃ–ಆ ಅರ್ಜುನನು, ಲೋಕವೀರೋಽಪಿ – ಲೋಕದಲ್ಲಿ ಪರಾಕ್ರಮಿಯಾದರೂ, ಕೂಡ, ಏನಂ – ಈ ದುಃಶಾಸನನನ್ನು, ಅತೀತ್ಯ– ದಾಟಿ, ಭೀಷ್ಮಂ – ಭೀಷ್ಮರನ್ನು ಕುರಿತು, ಯಾತುಂ – ಹೋಗಲು ನಾಶಕತ್ – ಸಮರ್ಥನಾಗಲಿಲ್ಲ. ಅಸ್ಯ – ಈ ಅರ್ಜುನನ, ಪರ್ವತೇಷ್ವಪ್ಯಸಕ್ತಾಃ— ಪರ್ವತಗಳಲ್ಲಿಯೂಕೂಡ ಪ್ರಯೋಗಿಸಿದಾಗ ಸಂಬದ್ಧಗಳಾಗದ ಅಂದರೆ ಪರ್ವತಗಳನ್ನು ಭೇದಿಸಿಕೊಂಡು ಹೋಗುವ, ಸಾಯಕಾಃ –ಬಾಣಗಳು, ತಸ್ಮಿನ್– ಆ ದುಃಶಾಸನನಲ್ಲಿ, ಸಸಜ್ಜಿರೇ– ಸಂಬದ್ಧಗಳಾದವು. ದೇಹವನ್ನು ಭೇದಿಸಿಹೋಗಲಿಲ್ಲ. ॥೧೨೭॥

ಅಮುಷ್ಯಯುಕ್ತೌಚಿರಮೇವವೀರಾನಯುಧ್ಯತಾಮರ್ಜುನಧಾರ್ತರಾಷ್ಟ್ರೌ ॥
ಸಮುಂತದಾಸೀನ್ಮಹದದ್ಭುತಂ ಚ ದಿವೌಕಸಾಂಪಶ್ಯತಾಂಭೂಭೃತಾಂಚ ॥೧೨೮॥

ವೀರೌ – ಪರಾಕ್ರಮಿಗಳಾದ, ಅರ್ಜುನ ಧಾರ್ತರಾಷ್ಟ್ರೌ –ಅರ್ಜುನ ಮತ್ತು ದುಃಶಾಸನರಿಬ್ಬರು, ಅಮರ್ಷಯುಕ್ತೌ ಸಂತೌ – ಕೋಪದಿಂದ ಕೂಡಿದವರಾಗಿ, ಚಿರಂ – ಬಹುಕಾಲದವರೆಗೆ, ಅಯುಧ್ಯತಾಂ—ಯುದ್ಧ ಮಾಡಿದರು. ತದಾ–ಆಗ, ದಿವೌಕಸಾಂ – ದೇವತೆಗಳೂ, ಭೂಭೃತಾಂಚ – ರಾಜರುಗಳೂ ಕೂಡ, ಪಶ್ಯತಾಂಸತಾಂ— ನೋಡುತ್ತಿರಲು, ಮಹತ್ – ದೊಡ್ಡದಾದ, ಅದ್ಭುತಂ – ಆಶ್ಚರ್ಯಕರವಾದ, ತತ್ – ಆ ಯುದ್ಧವು, ಸಮಮೇವ – ಸಮಾನವಾಗಿಯೇ, ಆಸೀತ್–ಆಯಿತು. ॥೧೨೮॥

ತದಾವಿರಾಟದ್ರುಪದೌ ಕುಂತಿ ಭೋಜಂ ಕೃಷ್ಣಾಸುತಾನ್ ಕೈಕಯಾಂಶ್ಚೇಕಿತಾನಂ ॥
ಭೂರಿಃಶಲಃ ಸೋಮದತ್ತೋ ವಿಕರ್ಣಃ ಸಕೈಕಯಾವಾರಯಾಮಾಸುರುಚ್ಚೈಃ ॥೧೨೯॥

ತದಾ– ಆಗ, ಸಕೈಕಯಾಃ–ಕೈಕಯರಿಂದ, ಕೂಡಿದ ಭೂರಿಃ–ಭೂರಿ ಎಂಬವನು, ಶಲಃ– ಶಲನು, ಸೋಮದತ್ತಃ– ಸೋಮದತ್ತನು, ವಿಕರ್ಣಃ – ವಿಕರ್ಣನು ಮೊದಲಾದ ದುರ್ಯೋಧನ ಪಕ್ಷದಲ್ಲಿರುವವರು, ವಿರಾಟದ್ರುಪದೌ – ವಿರಾಟ ಮತ್ತು ದ್ರುಪದರನ್ನು, ಕುಂತಿಭೋಜಂ ಕುಂತಿ ಭೋಜನನ್ನು, ಕೃಷ್ಣಾಸುತಾನ್—ದ್ರೌಪದಿಯ ಮಕ್ಕಳನ್ನು, ಕೈಕಯಾನ್–ಕೈಕಯರನ್ನು, ಚೇಕಿತಾನಂಚ—ಚೇಕಿತಾನನನ್ನೂ ಕೂಡ, ಉಚ್ಚೈಃ – ಚೆನ್ನಾಗಿ, ವಾರಯಾಮಾಸುಃ– ತಡೆದರು. ॥೧೨೯॥

ಜಿತ್ವೈವತಾಂಸ್ತೇಽಭಿಯಯುಶ್ಚ ಭೀಷ್ಮಂ ತದಾರ್ಜುನೋಽತೀತ್ಯ ದುಃಶಾಸನಂಚ ॥
ಭೀಷ್ಮಂಶರೈರಾರ್ಧದರಿಪ್ರಮಾಥಿಭಿಃ ಶಿಖಂಡಿನಂ ಧಾರ್ತರಾಷ್ಟ್ರಾದ್ವಿಮುಚ್ಯ ॥೧೩೦॥

ತೇ – ಆ ವಿರಾಟಾದಿಗಳು, ತಾನ್ – ಆ ಭೂರಿ ಮೊದಲಾದವರನ್ನು, ಜಿತ್ವೈವ – ಪರಾಜಯಿಸಿಯೇ, ಭೀಷ್ಮಂ – ಭೀಷ್ಮರನ್ನು, ಅಭಿಯಯುಃ – ಹೊಂದಿದರು, ದುಃಶಾಸನಂ – ದುಃಶಾಸನನನ್ನು, ಅತೀತ್ಯ – ಅತಿಕ್ರಮಿಸಿ, ಶಿಖಂಡಿನಂ, – ಶಿಖಂಡಿಯನ್ನು, ಧಾರ್ತರಾಷ್ಟ್ರತ್ – ದುರ್ಯೋಧನನ ದೆಸೆಯಿಂದ, ವಿಮುಂಚ್ಯ – ಬಿಡಿಸಿ, ಅರಿಪ್ರಮಾಥಿಭಿಃ–ಶತ್ರುಗಳನ್ನು ಪೀಡಿಸತಕ್ಕ, ಶರೈಃ – ಬಾಣಗಳಿಂದ, ಭೀಷ್ಮಂ – ಭೀಷ್ಮರನ್ನು, ಆರ್ಧತ್ – ಪೀಡಿಸಿದನು ॥೧೩೦॥

ಸತೈಃ ಸಮಸ್ತೈರ್ಬಹುಭಿಃ ಶಸ್ತ್ರಪೂಗೈಃ ಭೃಶಂ ಮರ್ಮಸ್ವರ್ದಿತಶ್ಚಾಪ ಮುಕ್ತೈಃ ॥
ಶರೈಸ್ಸಸಾತ್ಯಕ್ಯಿರಥಾಂಶ್ಚಕಾರ ಶೈನೇಯಪಾಂಚಾಲಯುಧಿಷ್ಠಿರಾದ್ಯಾನ್ ॥೧೩೧॥

ಸಃ– ಆ ಭೀಷ್ಮರು, ಸಮಸ್ತೈಃ ತೈಃ– ಆ ಎಲ್ಲಾ ಯುಧಿಷ್ಠಿರಾದಿಗಳಿಂದ, ಬಹುಭಿಃ – ನಾನಾವಿಧಗಳಾದ, ಶಸ್ತ್ರ-ಪೂಗೈಃ— ಶಸ್ತ್ರಗಳಸಮೂಹಗಳಿಂದ, ಮರ್ಮಸು — ವ್ಯಥೆಯನ್ನುಂಟುಮಾಡುವಸ್ಥಾನಗಳಲ್ಲಿ, ಭೃಶಂ — ಚೆನ್ನಾಗಿ, ಅರ್ದಿತಃಸನ್ — ಪೀಡಿಸಿಕೊಳ್ಳಲ್ಪಟ್ಟವರಾಗಿ, ಚಾಪಮುಕ್ತೈಃ— ಧನುಸ್ಸಿನಿಂದ ಬಿಡಲ್ಪಟ್ಟ, ಶರೈಃ— ಬಾಣಗಳಿಂದ, ಶೈನೇಯಪಾಂಚಾಲಯುಧಿಷ್ಠಿರಾದ್ಯಾನ್ – ಸಾತ್ಯಕಿ, ದ್ರುಪದ, ಯುಧಿಷ್ಠಿರನೇಮೊದಲಾದ, ಸಮಸ್ತಾನ್ – ಎಲ್ಲರನೂ, ವಿರಥಾನ್ — ರಥರಹಿತರನ್ನಾಗಿ, ಚಕಾರ — ಮಾಡಿದರು. ॥೧೩೧॥

ಸಚೇದಿಪಾಂಚಾಲಕರೂಶಮುಖ್ಯಾನ್ರಥೋದಾರಾನ್ಪಂಚವಿಂಶತ್ಸಹಸ್ರಾನ್ ॥
ಸಂಪ್ರೇಷಯಾಮಾಸಯಮಾಯಬಾಣೈಃಯುಗಾಂತಕಾಲಾಗ್ನಿರಿವ ಪ್ರವೃದ್ಧಃ ॥೧೩೨॥

ಸಃ – ಆ ಭೀಷ್ಮರು, ಪಂಚವಿಂಶತ್ಸಹಸ್ರಾನ್ – ಇಪ್ಪತ್ತೈದುಸಾವಿರ ಸಂಖ್ಯಾಕರಾದ, ರಥೋದಾರಾನ್ – ರಥಗಳಿಂದ ಶೇಷ್ಠರಾದ, ಚೇದಿಪಾಂಚಾಲಕರೂಶಮುಖ್ಯಾನ್ – ಚೇದಿದೇಶದವರು, ಪಾಂಚಾಲ, ಕರೂಶರಲ್ಲಿ ಶ್ರೇಷ್ಠ

ರಾದವರನ್ನು, ಬಾಣೈಃ – ಶರಗಳಿಂದ, ಪ್ರವೃದ್ಧಃ – ಅಭಿವೃದ್ಧವಾದ, ಯುಗಾಂತಕಾಲಾಗ್ನಿರಿವ – ಪ್ರಳಯಕಾಲದ ಬೆಂಕಿಯಂತೆ, ಯಮಾಯ – ಯಮನಿಗೋಸ್ಕರ, ಸಂಪ್ರೇಷಯಾಮಾಸ – ಕಳುಹಿಸಿದರು. ॥೧೩೨॥

ನಿರೀಕ್ಷ್ಯತಂಸೂರ್ಯಮಿವಾತಪಂತಂ ಸಂಚೋದಿತೋವಾಸುದೇವೇನಪಾರ್ಥಃ ॥
ಚಿಚ್ಛೇದತತ್ಕಾರ್ಮುಕಮುಲ್ಲೋಕವೀರೋರಣೇಽರ್ಧಚಂದ್ರೇಣಸಚಾನ್ಯದಾದದೇ ॥೧೩೩॥

ಆತಪಂತಂ– ಲೋಕವನ್ನು ಸುಡತಕ್ಕ, ಸೂರ್ಯಮಿವ – ಸೂರ್ಯನನ್ನು ಹೇಗೋಹಾಗೆ, ತಂ – ಆ ಭೀಷ್ಮಾಚಾರ್ಯರನ್ನು, ನಿರೀಕ್ಷ್ಯ– ನೋಡಿ, ವಾಸುದೇವೇನ – ಶ್ರೀಕೃಷ್ಣನಿಂದ, ಪ್ರೇರಿತಃ – ಪ್ರೇರಿಸಲ್ಪಟ್ಟ, ಪಾರ್ಥಃ – ಅರ್ಜುನನು, ರಣೇ – ಯುದ್ಧದಲ್ಲಿ, ಅರ್ಧಚಂದ್ರೇಣ – ಅರ್ಧಚಂದ್ರಾಕಾರವಾದ ಬಾಣದಿಂದ, ತತ್ಕಾರ್ಮುಕಂ – ಆ ಭೀಷ್ಮರ ಧನುಸ್ಸನ್ನು, ಚಿಚ್ಛೇದ – ತುಂಡರಿಸಿದನು. ಲೋಕವೀರಃ – ಲೋಕದಲ್ಲಿ ಪರಾಕ್ರಮಿಗಳಾದ, ಸಚ – ಆ ಭೀಷ್ಮರಾದರೂ, ಅನ್ಯತ್– ಇನ್ನೊಂದು ಧನುಸ್ಸನ್ನು, ಆದದೇ – ಸ್ವೀಕರಿಸಿದರು. ॥೧೩೩॥

ಚಿಚ್ಛೇದತಚ್ಚೈವಮುಷ್ಟೌಧನೂಂಷಿಶಕ್ತಿಂಚ ಚರ್ಮಾಸಿವರಂಪರಾಣಿ ॥
ಧನೂಂಷಿತತ್ತಾನಿನೃಭಿರ್ನೃಪಸ್ಯಸರ್ವಾಣಿ ಚಿಚ್ಛೇದಸಪಾಕಶಾಸನಿಃ ॥೧೩೪॥

ಪಾಕಶಾಸನಿಃ ಸಃ – ದೇವೇಂದ್ರನಮಗನಾದ ಆ ಅರ್ಜುನನು, ತಚ್ಚ – ಆ ಧನುಸ್ಸನ್ನೂಕೂಡ, ಚಿಚ್ಛೇದ –ತುಂಡು ಮಾಡಿದನು, ಏವಂ– ಇದೇರೀತಿಯಾಗಿ, ಅಷ್ಟೌಧನೂಂಷಿ – ಎಂಟುಕಾರ್ಮುಕಗಳನ್ನೂ, ಶಕ್ತಿಂ – ಶಕ್ತಿಎಂಬ ಆಯುಧವನ್ನೂ, ಚರ್ಮ – ಶತಚಂದ್ರವನ್ನು, ಅಸಿವರಂ – ಶ್ರೇಷ್ಠಖಡ್ಗವನ್ನು, ಚಿಚ್ಛೇದ – ತುಂಡರಿಸಿದನು. ನೃಪಸ್ಯ – ದುರ್ಯೋಧನನ, ನೃಭಿಃ – ಸೇವಕರಿಂದ, ದತ್ತಾನಿ – ಕೊಡಲ್ಪಟ್ಟ, ಪರಾಣಿ – ಇತರಗಳಾದ, ಸರ್ವಾಣಿ - ಎಲ್ಲಾ, ಧನೂಂಷಿ– ಕಾರ್ಮುಕಗಳನ್ನೂ, ಚಿಚ್ಛೇದ – ತುಂಡರಿಸಿದನು. ॥೧೩೪॥

ತತಃಶರೈಃಸೂರ್ಯಕರಪ್ರಕಾಶೈರ್ವಿವ್ಯಾಧಸರ್ವೇಽಪಿಯುಧಿಷ್ಠಿರಾದ್ಯಾಃ ॥
ತೈರರ್ದಿತೋನ್ಯಪತದ್ಭೂತಲೇಸ ಪ್ರಾಣಾನ್ದಧಾರಾಪಿ ತಥೋತ್ತರಾಯಣಾತ್ ॥೧೩೫॥

ತತಃ – ಅನಂತರ, ಸೂರ್ಯಕರಪ್ರಕಾಶೈಃ – ಸೂರ್ಯನ ಕಿರಣಗಳಂತೆ ಪ್ರಕಾಶಿಸುವ, ಶರೈಃ– ಬಾಣಗಳಿಂದ, ವಿವ್ಯಾಧ – ಅರ್ಜುನನು ಹೊಡೆದನು. ಯುಧಿಷ್ಠಿರಾದ್ಯಾಃ – ಧರ್ಮರಾಜನೇ ಮೊದಲಾದ, ಸರ್ವೇಽಪಿ– ಎಲ್ಲರೂಕೂಡ, ವಿವ್ಯಧುಃ – ಹೊಡೆದರು. ತೈಃ– ಆ ಯುಧಿಷ್ಠಿರಾದಿಗಳಿಂದ,ಅರ್ದಿತಃ–ಪೀಡಿಸಿಕೊಳ್ಳಲ್ಪಟ್ಟ,ಸಃ– ಆ ಭೀಷ್ಮರು, ಭೂತಲೇ– ಭೂಮಿಯಲ್ಲಿ, ನ್ಯಪತತ್– ಬಿದ್ದರು. ಸಃ–ಆಭೀಷ್ಮರು, ತಥಾಪಿ–ಆ ಭೂಮಿಯಲ್ಲಿ ಬಿದ್ದರೂಕೂಡ, ಆ ಉತ್ತರಾಯಣಾತ್– ಉತ್ತರಾಯಣದ ವರೆಗೆ, (ಉತ್ತರಾಯಣವನ್ನು, ನಿರೀಕ್ಷಿಸಿ) ಪ್ರಾಣಾನ್ — ಪ್ರಾಣಗಳನ್ನು, ದಧಾರ — (ಇಚ್ಛಾಮರಣವುಳ್ಳವರಾದ್ದರಿಂದ) ಧರಿಸಿದರು. ॥೧೩೫॥

ನಿಪಾತಿತೇಽಸ್ಮಿನ್ಮಾರುತಿರ್ದ್ರೋಣಮುಖ್ಯಾನ್ವಿದ್ರಾವ್ಯ ತತ್ರಾಗಮದಾಶುತೇಽಪಿ ॥
ತದಾಯುಧಾನಿಪ್ರಣಿಧಾಯವೀರಾಃಪಾರ್ಥಾಃಪರೇಚೈನಮುಪಾಸದನ್ಸ್ಮ ॥೧೩೬॥

ಅಸ್ಮಿನ್— ಈ ಭೀಷ್ಮಾಚಾರ್ಯರು ನಿಪಾತಿತೇಸತಿ– ಬೀಳಿಸಲ್ಪಡುತ್ತಿರಲು, ಮಾರುತಿಃ– ಭೀಮನು, ದ್ರೋಣಮುಖ್ಯಾನ್ – ದ್ರೋಣಾಚಾರ್ಯರೇ ಪ್ರಧಾನರಾಗಿಉಳ್ಳವರನ್ನು, ವಿದ್ರಾವ್ಯ – ಓಡಿಸಿ,ತತ್ರ – ಆ ಭೀಷ್ಮರಿದ್ದಲ್ಲಿಗೆ,

ಅಗಮತ್– ಹೋದನು. ತದಾ— ಆಗ, ತೇಪಿ –ಆ ದ್ರೋಣಾದಿಗಳೂಕೂಡ, ಆಶು — ಕೂಡಲೇ, ಆಯುಧಾನಿ — ತಮ್ಮ ತಮ್ಮ ಆಯುಧಗಳನ್ನು, ಪ್ರಣಿಧಾಯ— ಇಟ್ಟು, ತತ್ರ– ಅಲ್ಲಿಗೆ, ಅಗಮನ್—ಹೋದರು. ವೀರಾಃ— ಪರಾಕ್ರಮಿಗಳಾದ, ಪಾರ್ಥಾಃ—ಪಾಂಡವರೂ ಪರೇಚ ಕೌರವರೂಕೂಡ, ಏನಂ—ಈ ಭೀಷ್ಮರನ್ನು, ಉಪಾಸದನ್— ಉಪಸತ್ತಿಮಾಡಿದರು. ಸ್ಮ—ಪ್ರಸಿದ್ಧ. ॥೧೩೬॥

ಪ್ರಣಮ್ಯತಂ ತದ್ವಚನಾತ್ಸವಿಯುಸ್ತಸ್ಮಿನ್ದಿನೇಶಿಬಿರಾಣ್ಯೇವ ಸರ್ವೇ ॥
ಪರೇದಿನೇಸರ್ವಏವೋಪತಸ್ಥುರ್ಭೀಷ್ಮಂಯದೂನಾಂಪತಿನಾಸಹೈವ ॥೧೩೭॥

ತದ್ವಚನಾತ್ – ಶಿಬಿರಕ್ಕೆ ಹೋಗಿ ಬನ್ನಿ ಎಂಬ ಭೀಷ್ಮರ ಮಾತಿನಿಂದ ತಸ್ಮಿನ್ದಿನೇ —ಆ ದಿನದಲ್ಲಿ, ಸರ್ವೇ– ಕುರು ಪಾಂಡವರೆಲ್ಲರೂ, ತಂ—ಆಭೀಷ್ಮರನ್ನು, ಪ್ರಣಮ್ಯ — ನಮಸ್ಕರಿಸಿ, ಶಿಬಿರಾಣ್ಯೇವ — ಶಿಬಿರಗಳನ್ನೇ — ಸವಿಯುಃ - ಹೊಂದಿದರು. ಪರೇದಿನೇ - ಮರುದಿವಸದಲ್ಲಿ, ಯದೂನಾಂ – ಯಾದವರಿಗೆ, ಪತಿನಾ -, ಸ್ವಾಮಿಯಾದ ಶ್ರೀಕೃಷ್ಣನಿಂದ, ಸಹೈವ – ಕೂಡಿಕೊಂಡೇ, ಸರ್ವೇ — ಕುರುಪಾಂಡವರೆಲ್ಲರೂ, ಭೀಷ್ಮಂ — ಭೀಷ್ಮರನ್ನು ಉಪತಸ್ಥುಃ— ಸವಿಾಪದಲ್ಲಿ ಹೊಂದಿದರು. ॥೧೩೭॥

ಸಪೂರ್ವದಿವಸೇ ಪಾರ್ಥದತ್ತಬಾಣೋಪಬರ್ಹಣಃ ॥
ತದಾಪಿ ತೃಪ್ತಿರೀತಾತ್ಮಾಯೋಗ್ಯಂಪೇಯಮಯಾಚತ ॥೧೩೮॥

ಸಃ— ಆ ಭೀಷ್ಮರು, ಪೂರ್ವದಿವಸೇ - ಮುಂಚಿನದಿನದಲ್ಲಿ, ಪಾರ್ಥದತ್ತಬಾಣೋಪಬರ್ಹಣಃ – ಅರ್ಜುನನಿಂದ ಕೊಡಲ್ಪಟ್ಟ ಬಾಣರೂಪವಾದ ಹಾಸಿಗೆಯುಳ್ಳವರಾಗಿದ್ದರು. ತದಾಪಿ – ಮರುದಿನದಲ್ಲಿಯೂ ಕೂಡ, ತೃಪ್ತಿರೀತಾತ್ಮಾಸನ್– ಬಾಯಾರಿಕೆಯಿಂದ ಕೂಡಿದ ಸ್ವರೂಪವುಳ್ಳವರಾಗಿ, ಯೋಗ್ಯಂ – ಬಾಣದ ಹಾಸಿಗೆಯಲ್ಲಿದ್ದ ತನಗೆ ಬಾಣದಿಂದ ತರಲು ಯೋಗ್ಯವಾದ, ಪೇಯಂ — ನೀರನ್ನು, ಅಯಾಚತ — ಬೇಡಿದರು. ॥೧೩೮॥

ಧಾರ್ತರಾಷ್ಟ್ರೈರವಿಜ್ಞಾತಂ ತದಾವಿಜ್ಞಾಯ ವಾಸವಿಃ ॥
ವಾರುಣಾಸ್ತ್ರೇಣಭಿತ್ವಾಸ ಭುವಿವಾರಿಸುಗಂಧಿ ಚ ॥
ಊರ್ಧ್ವಧಾರಮಧಾದಾಸ್ಯೇತರ್ಪಿತೋಸ್ತನೇನಸೋಸ್ತವದತ್ ॥೧೩೯॥

ತದಾ – ಆಗ, ಸಃ ವಾಸವಿಃ — ಆ ಅರ್ಜುನನು, ಧಾರ್ತರಾಷ್ಟ್ರೈಃ – ದುರ್ಯೋಧನಾದಿಗಳಿಂದ, ಅವಿಜ್ಞಾತಂ– ತಿಳಿಯಲ್ಪಡದಿರುವ ವಿಷಯವನ್ನು, ವಿಜ್ಞಾಯ – ಭೀಷ್ಮರಿಂದ ಹೇಳಲ್ಪಟ್ಟದ್ದನ್ನು ತಿಳಿದುಕೊಂಡು, ವಾರುಣಾಸ್ತ್ರೇಣ – ವರುಣದೇವತಾಕಮಂತ್ರದಿಂದ, ಭಿತ್ವಾ ಭೂಮಿಯನ್ನು ಭೇದಿಸಿ, ಭುವಿ— ಭೂಮಿಯಲ್ಲಿ ಸುಗಂಧಿ – ಅತಿ ಪರಿಮಳವುಳ್ಳ, ಊರ್ಧ್ವಧಾರಂ – ಮೇಲ್ಮುಖವಾದ ಧಾರೆಯುಳ್ಳ, ವಾರಿ – ನೀರನ್ನು, ಆಸ್ಯೇ – ಬಾಯಿಯಲ್ಲಿ, ಅಧಾತ್ – ಹಾಕಿದನು. ಅನೇನ – ಈ ಅರ್ಜುನನಿಂದ, ತರ್ಪಿತಃ – ಸಂತೃಪ್ತಿಯನ್ನು ಹೊಂದಿದ, ಸಃ – ಆ ಭೀಷ್ಮರು, ಅವದತ್ ಹೇಳಿದರು. ॥೧೩೯॥

ಯಾದೃಶಸ್ತ್ರಜ್ಞತಾಪಾರ್ಥೇ ದೃಷ್ಟಾತ್ಪ್ರಕುರುನಂದನಾಃ ॥
ಯಾದೃಗ್ಬಾಹುಬಲಂ ಭೀಮೇ ಸಂಯುಗೇ ಚ ಪುನಃಪುನಃ ॥೧೪೦॥

ಯಾದೃಶಂಚೈವಮಾಹಾತ್ಮ್ಯಮನಂತಮಜರಂ ಹರೇಃ ॥
ವಿಜ್ಞಾತಂ ಸರ್ವಲೋಕಸ್ಯ ಸಭಾಯಾಂದೃಷ್ಟಮೇವಚ ॥೧೪೧॥

ಉಪಾರಮತ ತದ್ಯುದ್ಧಂ ಸುಖಿನಃ ಸಂತುಭೂಮಿಪಾಃ ॥
ಯಥೋಚಿತಂ ವಿಭಕ್ತಾಂಚ ಭುಜ್ಧ್ವಂಭೂಪಾಃ ಸದಾಭುವಂ ॥೧೪೨॥
ಇತ್ಯುಕ್ತಃಸ ಯಯೌತೂಷ್ಣೀಂ ಧಾರ್ತರಾಷ್ಟ್ರಃಸ್ವಕಂ ಗೃಹಂ ॥೧೪೩॥

ಹೇ ಕುರುನಂದನಾಃ – ಎಲೋ ಕೌರವರೇ, ಪಾರ್ಥೇ – ಅರ್ಜುನನಲ್ಲಿ, ಯಾದೃಶೀ – ಎಂತಹ, ಅಸ್ತ್ರಜ್ಞತಾ – ಅಸ್ತ್ರಜ್ಞಾನವು, ಅಸ್ತಿ – ಇದೆಯೋ, ತಾದೃಶೀ–ಅಂತಹ ಅಸ್ತ್ರಜ್ಞಾನವು, ಅತ್ರ – ಇಲ್ಲಿಯೇ ಜಲದಾನ ವಿಷಯದಲ್ಲಿ, ದೃಷ್ಟಾ-ಕಾಣಲ್ಪಟ್ಟಿತೋ, ಭೀಮೇಚ - ಭೀಮನಲ್ಲಿಯೂ ಕೂಡ, ಯಾದೃಕ್—ಎಂತಹ, ಬಾಹುಬಲಂ – ಭುಜಗಳ ಸಾಮರ್ಥ್ಯವು, ಪರ್ವತೇ–ಇದೆಯೋ' ತಾದೃಶಂ-ಅಂತಹ ಭುಜಪರಾಕ್ರಮವು, ಸಂಯುಗೇಷು–ಯುದ್ಧಗಳಲ್ಲಿ,ಪುನಃ ಪುನಃ-ಮತ್ತೂ ಮತ್ತೂ, ದೃಷ್ಟಂ ಕಾಣಲ್ಪಟ್ಟಿತೋ, ಹರೇಶ್ಚ - ಕೃಷ್ಣನಿಗೂ ಕೂಡ, ಅನಂತಮ್— ನಾಶವಿಲ್ಲದ, ಅಜರಂ—ಹ್ರಾಸವಿಲ್ಲದ, ವಿಜ್ಞಾತಂ–ವೇದಶಾಸ್ತ್ರಗಳಿಂದ ಪ್ರಸಿದ್ಧವಾದ, ಯಾದೃಶಂ—ಎಂತಹ, ಮಾಹಾತ್ಮ್ಯಂ– ಮಹಿಮೆಯು, ಅಸ್ತಿ–ಇದೆಯೋ, ತಾದೃಶಂ – ಅಂತಹ ಮಹಿಮೆಯು, ಸರ್ವಲೋಕಸ್ಯ ಎಲ್ಲಾ ಜನರಿಗೆ, ಸಭಾಯಾಂ— ಸಭೆಯಲ್ಲಿ, ವಿಶ್ವರೂಪವನ್ನು ತೋರಿಸಿದ್ದರಿಂದ ದೃಷ್ಟಮೇವ–ಕಾಣಲ್ಪಟ್ಟಿದೆಯೋ, ತತ್–ಆ ಕಾರಣದಿಂದ, ಯುದ್ಧಂ– ಸಮರವನ್ನು, ಉಪಾರಮತ–ನಿಲ್ಲಿಸಿರಿ, ಭೂಮಿಪಾಃ– ನಿಮ್ಮ ಸಹಾಯಕ್ಕಾಗಿ ಬಂದಿರುವ ರಾಜರು, ಸುಖಿನಃಸಂತು – ತಮ್ಮ ರಾಜ್ಯಕ್ಕೆ ಹೋಗಿ ಸುಖಿಗಳಾಗಲಿ, ಹೇ ಭೂಪಾಃ – ಎಲೋ ಕೌರವರೇ, ಯಥೋಚಿತಂ ನಿಮಗೂ ಪಾಂಡವರಿಗೂ ಯಥಾ ಯೋಗ್ಯವಾಗಿ, ವಿಭಕ್ತಾಂ – ಶ್ರೀ ಕೃಷ್ಣನಿಂದ, ವಿಭಾಗ ಮಾಡಲ್ಪಟ್ಟ, ಭುವಂ — ಭೂಮಿಯನ್ನು, ಸದಾ – ಯಾವಾಗಲೂ, ಭುಜ್ಧ್ವಂ – ಅನುಭವಿಸಿರಿ, ಇತಿ – ಈ ರೀತಿಯಾಗಿ, ಉಕ್ತಃ—ಹೇಳಿಸಿಕೊಳ್ಳಲ್ಪಟ್ಟ, ಸ ಧಾರ್ತರಾಷ್ಟ್ರಃ ಆ ದುರ್ಯೋಧನನು, ತೂಷ್ಣೀಂ – ಸುಮ್ಮನೇ,ಏನೂ ಉತ್ತರ ಕೊಡದೇ, ಸ್ವಕಂ ಗೃಹಂ - ತನ್ನ ಶಿಬಿರವನ್ನು ಕುರಿತು, ಯಯೌ – ಹೋದನು. ॥೧೪೦॥೧೪೧॥೧೪೨॥೧೪೩॥

ವ್ಯಾಸ ದತ್ತೋರುವಿಜ್ಞಾನಾತ್ಸಂಜಯಾದಖಿಲಂ ಪಿತಾ॥
ಶ್ರುತ್ವಾ ತದಾ ಪರ್ಯತಪ್ಯತ್ಪಾಂಡವಾಃ ಕೃಷ್ಣದೇವತಾಃ ॥
ಮುಮುದುಃ ಶಿಬಿರಂ ಪ್ರಾಪ್ಯಸರ್ವೇಕೃಷ್ಣಾನುಮೋದಿತಾಃ ॥೧೪೪॥

ಪಿತಾ—ತಂದೆಯಾದ ಧೃತರಾಷ್ಟ್ರನು, ವ್ಯಾಸದತ್ತೋರುವಿಜ್ಞಾನಾತ್ – ವೇದವ್ಯಾಸರಿಂದ ಕೊಡಲ್ಪಟ್ಟ ಉತ್ಕೃಷ್ಟ ಜ್ಞಾನವುಳ್ಳ, ಸಂಜಯಾತ್—ಸಂಜಯನಿಂದ, ಅಖಿಲಂ – ಎಲ್ಲಾ ಯುದ್ಧವಾರ್ತೆಯನ್ನು, ಶ್ರುತ್ವಾ – ಕೇಳಿ, ತದಾ – ಆ ಭೀಷ್ಮರ ಪತನದ ಕಥಾಶ್ರವಣ ಸಮಯದಲ್ಲಿ, ಪರ್ಯತಪ್ಯತ್ – ಸಂತಾಪಗೊಂಡನು, ಕೃಷ್ಣದೇವತಾಃ– ಕೃಷ್ಣನೇ ದೇವತೆಯಾಗಿವುಳ್ಳ, ಸರ್ವೇಪಾಂಡವಾಃ – ಎಲ್ಲ ಪಾಂಡವರು, ಶಿಬಿರಂ — ವಿಶ್ರಾಂತಿಸ್ಥಾನವನ್ನು, ಪ್ರಾಪ್ಯ — ಹೊಂದಿ, ಕೃಷ್ಣಾನುಮೋದಿತಾಃಸಂತಃ— ಶ್ರೀಕೃಷ್ಣನಿಂದ ಶಿಕ್ಷಿತರಾಗಿ, ಮುಮುದುಃ– ಸಂತೋಷಪಟ್ಟರು. ॥೧೪೪॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಭೀಷ್ಮಪಾತೋನಾಮ ಪಂಚವಿಂಶೋಽಧ್ಯಾಯಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ರೀತಿಯಾಗಿ ಶ್ರೀಮನ್ಮಧ್ವಾಚಾರ್ಯರಿಂದ ಮಾಡಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಭೀಷ್ಮಾಚಾರ್ಯರ ಮಂಚಪ್ರಾಪ್ತಿಯನ್ನು ಪ್ರತಿಪಾದಿಸುವ ಇಪ್ಪತ್ತೈದನೆಯ ಅಧ್ಯಾಯವು ಸಮಾಪ್ತವಾಯಿತು.
ಈ ಕೃತಿಯು ಶ್ರೀ ಹರಿವಾಯುಗಳಿಗೆ ಅರ್ಪಿತವಾಗಲಿ. ಇದರಿಂದ ಶ್ರೀ ಹರಿವಾಯುಗಳು ಪ್ರೀತರಾಗಲಿ.

ಶುಭಂ ಶುಭಂ ಶುಭಂ

ಭಾ, ಅ. ೧೩೭—೧೪೪ ಭೀಷ್ಮರನ್ನು ನಮಸ್ಕರಿಸಿ, ಅನುಜ್ಞೆಯನ್ನು ಪಡೆದು, ಶಿಬಿರಕ್ಕೆ ಹೋಗಿ ಪುನಃ ಮರುದಿನ ಶ್ರೀಕೃಷ್ಣ ಸಮೇತರಾಗಿ ಭೀಷ್ಮರ ಹತ್ತಿರ ಬಂದರು. ಪೂರ್ವದಿನದಲ್ಲಿ ಅರ್ಜುನನು ಅವರನ್ನು ಶರಶಯ್ಯೆಯಲ್ಲಿ ಮಲಗಿಸಿದ್ದನು. ಈ ದಿನ ನೀರಡಿಸಿ ನೀರನ್ನು ಕೇಳಿದಾಗ ಅವರಿಗೆ ಯೋಗ್ಯವಾದ ನೀರು ಯಾವದೆಂದು ಕೌರವರು ತಿಳಿಯದಿರಲು, ಅರ್ಜುನನು ವಾರುಣಾಸ್ತ್ರವನ್ನು ಭೂಮಿಯಮೇಲೆ ಪ್ರಯೋಗಮಾಡಿ ಭೂಮಿಯಿಂದ ಶುದ್ಧವಾದ, ಸುಗಂಧಯುಕ್ತವಾದ ನೀರಿನಧಾರೆ ಭೀಷ್ಮರ ಬಾಯಿಯಲ್ಲಿ ಬೀಳುವಂತೆ ಮಾಡಿದನು. ಅದರಿಂದ ಸಂತುಷ್ಟರಾದ ಭೀಷ್ಮರು ಕೌರವರನ್ನು ಕುರಿತು 'ಕೌರವರೇ, ಅರ್ಜುನನು, ಎಂಥ ಅಸ್ತ್ರನಿಪುಣನು ಎಂಬುದನ್ನು ಯುದ್ಧದಲ್ಲಿ, ಈಗಲೂ ಕೂಡ ಕಂಡಿದ್ದೀರಿ. ಭೀಮಸೇನದೇವರು ಎಷ್ಟು ಬಲಿಷ್ಠರೆಂಬುದನ್ನು ಮನಗಂಡಿದ್ದೀರಿ. ಶ್ರೀಕೃಷ್ಣನ ಅಚಿಂತ್ಯಮಹಿಮೆಯನ್ನು ನೋಡಿದ್ದೀರಿ; ಆದ್ದರಿಂದ ಯುದ್ಧವನ್ನು ನಿಲ್ಲಿಸಿರಿ. ಶ್ರೀಕೃಷ್ಣನು ಹಂಚಿಕೊಟ್ಟಂತೆ ಭೂಮಿಯನ್ನು ಇಟ್ಟುಕೊಂಡು ಸುಖವಾಗಿ ಇರ್ರಿ. ಎಲ್ಲ ರಾಜರೂ ಕ್ಷೇಮವಾಗಿ ಇರಲಿ' ಎಂದು ಹೇಳಿದರು. ಆಗ ದುರ್ಯೋಧನನು ಉತ್ತರ ಕೊಡದೇ ಶಿಬಿರಕ್ಕೆ ಹೋದನು. ಶ್ರೀವೇದವ್ಯಾಸ ದೇವರಿಂದ ಅನುಗ್ರಹಿಸಲ್ಪಟ್ಟ ದಿವ್ಯದೃಷ್ಟಿಯುಳ್ಳ ಸಂಜಯನಿಂದ ಈ ಎಲ್ಲ ಯುದ್ಧವಾರ್ತೆಯನ್ನು ಕೇಳುತ್ತಾ ಭೀಷ್ಮರಪಾತವನ್ನು ತಿಳಿದು ಧೃತರಾಷ್ಟ್ರನು ತುಂಬಾ ಸಂತಾಪಗೊಂಡನು. ಪಾಂಡವರು ಶ್ರೀಕೃಷ್ಣನೇ ದೇವಾಧಿದೇವನೆಂದು ಅವನಲ್ಲಿ ತುಂಬಾ ಭಕ್ತಿಯುಳ್ಳವರಾದ್ದರಿಂದ ಜಯವನ್ನು ಹೊಂದಿ ಶಿಬಿರಕ್ಕೆ ಬಂದು ಸಂತೋಷದಿಂದ ಇದ್ದರು.

ಈ ರೀತಿ ಶ್ರೀಮದಾನಂದತೀರ್ಥರಿಂದ ರಚಿತವಾದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಶ್ರೀಭೀಷ್ಮರ ಶರಶಯ್ಯಾ ಶಯನವನ್ನು ನಿರೂಪಿಸುವ ೨೫ ನೆಯ ಅಧ್ಯಾಯದ ಭಾವಾನುವಾದವು ಮುಗಿಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಮಧ್ವೇಶಾರ್ಪಣಮಸ್ತು ॥

॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಭನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೨೬ ನೇ ಅಧ್ಯಾಯವು. (ದ್ರೋಣಪರ್ವ)

ಅಥಾಖಿಲಾನಾಂ ಪೃಥಿವೀಪತೀನಾಮಾಚಾರ್ಯಮಗ್ರ್ಯಂ ರಥಿನಾಂ ಸುವಿದ್ಯಮ್ ॥
ರಾಮಸ್ಯವಿಶ್ವಾಧಿಪತೇಃ ಸುಶಿಷ್ಯಂ ಚಕ್ರೇ ಚಮೂಪಂ ಧೃತರಾಷ್ಟ್ರಪುತ್ರಃ ॥೧॥

ಅಥ – ಭೀಷ್ಮರು ಶರಮಂಚದಲ್ಲಿ ಮಲಗಿದ ನಂತರ, ಅಖಿಲಾನಾಂ ಪೃಥಿವೀಪತೀನಾಂ—ಎಲ್ಲಾ ರಾಜರಿಗೂ, ಆಚಾರ್ಯಂ—ಅಸ್ತ್ರವಿದ್ಯಾಭ್ಯಾಸವನ್ನು ಮಾಡಿಸಿರುವದರಿಂದ ಗುರುಗಳಾದ, ರಥಿನಾಂ—ರಥಿಕರಮಧ್ಯದಲ್ಲಿ,ಅಗ್ರ್ಯಂ – ಶ್ರೇಷ್ಠರಾದ, ಸುವಿದ್ಯಂ — ಶೋಭನವಾದ ವಿದ್ಯೆಯುಳ್ಳ, ವಿಶ್ವಾಧಿಪತೇಃ – ಎಲ್ಲಾ ಜಗತ್ತಿಗೂ ಸ್ವಾಮಿಗಳಾದ, ರಾಮಸ್ಯ – ಪರಶುರಾಮದೇವರಿಗೆ, ಸುಶಿಷ್ಯಂ – ಪ್ರಿಯಶಿಷ್ಯರಾದ ದ್ರೋಣಾಚಾರ್ಯರನ್ನು, ಧೃತರಾಷ್ಟ್ರಪುತ್ರಃ — ದುರ್ಯೋಧನನು, ಚಮೂಪಂ — ಸೇನಾಪತಿಯನ್ನಾಗಿ, ಚಕ್ರೇ – ಮಾಡಿದನು. ॥೧॥

ಕರ್ಣೋಪಿ ಭೀಷ್ಮಾನುಮತೋಧನುಷ್ಮಾನ್ ಯುದ್ಧೋದ್ಯತೋಽಭೂತ್ತದಸತ್ಕೃತಃಪುರಾ ॥
ತಸ್ಮಿನ್ಸ್ಥಿತೇಽನಾತ್ತಧನುಸ್ತದೈನ ರಥಂ ಸಮಾಸ್ಥಾಯ ಗುರುಂ ಸಮನ್ವಯಾತ್ ॥೨॥

ಪುರಾ–ಭೀಷ್ಮಾಚಾರ್ಯರು ಸೇನಾಪತಿಯಾಗಿರುವಾಗ,ತದಸತ್ಕೃತಃ–ಆ ಭೀಷ್ಮಾಚಾರ್ಯರಿಂದ ಅರ್ಧರಥನೆಂಬುದಾಗಿ ತಿರಸ್ಕೃತನಾದ, ಕರ್ಣೋಪಿ— ಕರ್ಣನಾದರೂ, ಭೀಷ್ಮಾನುಮತಸ್ಸನ್ – ಭೀಷ್ಮಾಚಾರ್ಯರಿಂದ ಸಮ್ಮತನಾಗಿ, ಧನುಷ್ಮಾನ್– ಧನುಸ್ಸುಳ್ಳವನಾಗಿ, ಯುದ್ಧೋದ್ಯತಃ— ಯುದ್ಧಕ್ಕೋಸ್ಕರ ಉದ್ಯುಕ್ತನು, ಅಭೂತ್ – ಆದನು,ತಸ್ಮಿನ್ — ಆ ಭೀಷ್ಮರು, ಸ್ಥಿತೇಸತಿ – ಯುದ್ಧಮಾಡುತ್ತಿರಲು, ಅನಾತ್ತಧನುಃ —ಯುದ್ಧಕ್ಕಾಗಿ ಮೊದಲು ಹಿಡಿಯಲ್ಪಡದ ಧನುಸ್ಸುಳ್ಳ ಕರ್ಣನು, ತದೈವ–ಭೀಷ್ಮರ ಯುದ್ಧವು ಮುಗಿದ ನಂತರವೇ, ರಥಂ–ರಥವನ್ನು, ಸಮಾಸ್ಥಾಯ – ಏರಿಕೊಂಡು, ಗುರುಂ – ದ್ರೋಣರನ್ನು, ಸಮನ್ವಯಾತ್ - ಅನುಸರಿಸಿ ಹೋದನು: ॥೨॥

ದ್ರೋಣೋವೃತೋ ಧಾರ್ತರಾಷ್ಟ್ರೇಣ ಧರ್ಮಸುತಗ್ರಹೇ ತೇನಕೃತೇ ಪ್ರತಿಶ್ರವೇ ।।
ಜ್ಞಾತ್ವಾಯತ್ತಾಃ ಪಾಂಡವಾಸ್ತಂ ಸಮಿಯಯುರ್ಯುದ್ಧಾಯ ತತ್ರಾಭವದುಗ್ರಯುದ್ಧಂ ॥೩॥

ದ್ರೋಣಃ – ದ್ರೋಣರು, ಧಾರ್ತರಾಷ್ಟ್ರೇಣ – ದುರ್ಯೋಧನನಿಂದ, ಧರ್ಮಸೂತಗ್ರಹೇ – ಯುಧಿಷ್ಠಿರನನ್ನು ಹಿಡಿಯುವ ವಿಷಯದಲ್ಲಿ, ವೃತಃ – ಪ್ರಾರ್ಥಿಸಲ್ಪಟವರು, ಅಭೂತ್—ಆದರು, ತೇನ – ಆ ದ್ರೋಣರಿಂದ, ಪ್ರತಿಶ್ರವೇ–

ಪ್ರತಿಜ್ಞೆಯು, ಕೃತೇಸತಿ ಮಾಡಲ್ಪಡುತ್ತಿರಲು. ತಂ – ಆ ಪ್ರತಿಶ್ರವವನ್ನು, ಪಾಂಡವಾಃ – ಪಾಂಡವರು, ಜ್ಞಾತ್ವಾ– ತಿಳಿದು, ಯತ್ತಾಸ್ಸಂತಃ – ಯುಧಿಷ್ಠಿರನ ರಕ್ಷಣೆಗಾಗಿ ಪ್ರಯತ್ನವುಳ್ಳವರಾಗಿ, ಯುದ್ಧಾಯ – ಯುದ್ಧಕ್ಕೋಸ್ಕರ, ಸಮಿಯಾಯುಃ–ಬಂದರು, ತತ್ರ—ಆ ಸಮಯದಲ್ಲಿ, ಉಗ್ರಯುದ್ಧಂ – ಕ್ರೂರ ಯುದ್ಧವು, ಅಭವತ್ – ಆಯಿತು. ॥೩॥

ಪತತ್ರಿಭಿಸ್ತತ್ರದುಧಾವ ಶಾತ್ರವಾನ್‌ದ್ರೋಣೋಧನುರ್ಮಂಡಲಮಂತ್ರನಿಸ್ಸೃತೈಃ ॥
ತಮಾಸಸಾದಾಶು ವೃಕೋದರೋನದನ್‌ತಮಾಸದನ್‌ದ್ರೌಣಿಕೃಪೌ ಚಮದ್ರರಾಟ್ ॥೪॥

ದ್ರೋಣಃ — ದ್ರೋಣರು, ಧನುರ್ಮಂಡಲಮಂತ್ರನಿಸ್ಸೃತೈಃ – ಮಂಡಲಾಕಾರವಾದ ಧನುಸ್ಸಿನ ದೆಸೆಯಿಂದ ದೇವತಾ ಪ್ರಾರ್ಥನರೂಪಮಂತ್ರಗಳಿಂದ ಹೊರಟಿರುವ, ಪತತ್ರಿಭಿಃ – ಬಾಣಗಳಿಂದ, ಶಾತ್ರವಾನ್ – ಶತ್ರುಗಳನ್ನು, ಯದಾ – ಯಾವಾಗ, ದುಧಾವ ನಡುಗಿಸಿದರೋ,ತತ್ರ—ಆಗ, ವೃಕೋದರಃ—ಭೀಮಸೇನನು, ತಂ – ಆ ದ್ರೋಣರನ್ನು, ಆಶು—ಕೂಡಲೇ, ನದನ್‌ಸನ್ – ಸಿಂಹನಾದಮಾಡುತ್ತಾ, ಆಸಸಾದ— ಹೊಂದಿದನು. ತಂ— ಆ ಭೀಮನನ್ನು, ದ್ರೌಣಿ ಕೃಪೌ — ಅಶ್ವತ್ಥಾಮ ಮತ್ತು ಕೃಪಾಚಾರ್ಯರು, ಮದ್ರರಾಟ್‌ಚ – ಶಲ್ಯನೂಕೂಡ, ಆಸದನ್ – ಹೊಂದಿದರು ॥೪॥

ಸತಾನ್ವಿಧೂಯಾಭ್ಯಪತದ್ರಣೇಽಗ್ರಣೀರ್ದ್ರೋಣಂ ತಮನ್ವಾರ್ಜುನಿರಭ್ಯಯಾತ್ಪರಾನ್ ॥
ತಮಾರತಂಮದ್ರಪತಿಸ್ತಯೋರಭೂದ್ರಣೋಮಹಾಂಸ್ತತ್ರಗದಾಂಸಮಾದದೇ ॥
ಶಲ್ಯೋಽಥಭೀಮೋಽಭಿಯಯೌ ಗದಾಧರಸ್ತಮೇತಯೋರತ್ರಬಭೂವಸಂಗರಃ ॥೫॥

ರಣೇ – ಯುದ್ಧದಲ್ಲಿ, ಅಗ್ರಣೀಃ— ಅಗ್ರಗಣ್ಯನಾದ, ಸಃ– ಆ ಭೀಮಸೇನನು, ತಾನ್– ಆ ಅಶ್ವತ್ಥಾಮ, ಕೃಪ, ಶಲ್ಯರನ್ನು, ವಿಧೂಯ – ಓಡಿಸಿ, ದ್ರೋಣಂ – ದ್ರೋಣರನ್ನು ಅಭ್ಯಯಾತ್ – ಹೊಂದಿದನು. ತಂ – ಆ ಭೀಮಸೇನನನ್ನು, ಅನು–ಅನುಸರಿಸಿ, ಆರ್ಜುನಿಃ–ಅರ್ಜುನನ ಮಗನಾದ ಅಭಿಮನ್ಯುವು, ಪರಾನ್– ಶತ್ರುಗಳನ್ನು,ಅಭ್ಯಯಾತ್– ಹೊಂದಿದನು. ತಂ – ಆ ಅಭಿಮನ್ಯುವನ್ನು, ಮದ್ರಪತಿಃ – ಶಲ್ಯನು, ವವಾರ– ತಡೆದನು. ತಯೋಃ – ಆ ಅಭಿಮನ್ಯು ಶಲ್ಯರಿಗೆ, ಮಹಾನ್‌ರಣಃ – ದೊಡ್ಡಯುದ್ಧವು, ಅಭೂತ್ – ಆಯಿತು. ತತ್ರ – ಆ ಯುದ್ಧದಲ್ಲಿ, ಶಲ್ಯಃ— ಶಲ್ಯನು, ಗದಾಂ — ಅಭಿಮನ್ಯುವನ್ನುಕೊಲ್ಲಲು ಗದೆಯನ್ನು, ಸಮಾದದೇ – ಹಿಡಿದನು. ಅಥ – ಶಲ್ಯನು ಗದೆಯನ್ನು ಹಿಡಿದನಂತರ, ಗದಾಧರಃ– ಗದೆಯನ್ನು ಹಿಡಿದಿರುವ, ಭೀಮಃ– ಭೀಮನು, ತಂ – ಆ ಶಲ್ಯನಿಗೆ, ಅಭಿಯಯೌ – ಎದುರಾಗಿ ಹೋದನು. ತಯೋಃ– ಆ ಭೀಮಶಲ್ಯರಿಗೆ, ಅತ್ರ – ಇಲ್ಲಿ, ಸಂಗರಃ – ಯುದ್ಧವು ಬಭೂವ – ಆಯಿತು. ॥೫॥

ಉಭಾವಜೇಯೌ ಗದಿನಾವನುತ್ತಮೌ ಅತುಲ್ಯವೀರ್ಯೌಪ್ರವರೌ ಬಲೀಯಸಾಂ ॥
ವಿಚೇರತುಶ್ಚಿತ್ರತಮಂ ಪ್ರಪಶ್ಯತಾಂ ಮನೋಹರಂ ತಾವಭಿನರ್ದಮಾನೌ ॥೬॥

ಅನುತ್ತಮಗದಿನೌ – ಇವರಿಂದ ಬೇರೆ ಉತ್ತಮರಿಲ್ಲದಂತೆ, ಗದಾಯುದ್ಧ ನಿಪುಣರಾದ, ಅತುಲ್ಯ ವೀರ್ಯೌ— ಅಸದೃಶಪರಾಕ್ರಮವುಳ್ಳ, ಬಲೀಯಸಾಂ– ಬಲಶಾಲಿಗಳ ಮಧ್ಯದಲ್ಲಿ,ಪ್ರವರೌ– ಶ್ರೇಷ್ಠರಾದ, ಅಜೇಯೌ – ಜಯಿಸಲಶಕ್ಯರಾದ, ಉಭೌತೌ – ಆ ಭೀಮಶಲ್ಯರಿಬ್ಬರು, ಪ್ರಪಶ್ಯತಾಂ– ಯುದ್ಧವನ್ನು ನೋಡುವವರಿಗೆ,ಚಿತ್ರತಮಂ ಯಥಾಭವತಿತಥಾ– ಅತ್ಯಂತ ಆಶ್ಚರ್ಯವನ್ನುಂಟು ಮಾಡತಕ್ಕದ್ದು ಹೇಗೇ ಆದೀತೋ ಹಾಗೆ, ಮನೋಹರಂ — ಮನಸ್ಸನ್ನು ಆಕರ್ಷಿಸತಕ್ಕದ್ದು ಹೇಗಾದೀತೋ ಹಾಗೆ, ಅಭಿ ನರ್ದಮಾನೌಸಂತೌ — ಗರ್ಜಿಸುವವರಾಗಿ, ವಿಚೇರತುಃ ಸಂಚರಿಸಿದರು. ॥೬॥

ಗದಾಪ್ರಪಾತಾಂಕಿತವಜ್ರಗಾತ್ರೌ ದದರ್ಶ ಲೋಕೋಽಖಿಲ ಏವತೌರಣೇ ॥
ಗದಾಭಿಘಾತೇನ ವೃಕೋದರಸ್ಯ ವಿಚೇತನಃ ಪ್ರಾಪತದತ್ರಮುದ್ರರಾಟ್ ॥೭॥

ಭೀಮೋऽಪಿಕೋಪಾತ್ಪ್ರಚಲತ್ಪದಃ ಕ್ಷಿತೌ ವಿಧಾಯಜಾನುಂ ಸಹಸೋತ್ಥಿತಃ ಕ್ಷಣಾತ್ ॥೮॥

ಅಖಿಲಲೋಕಃ – ಎಲ್ಲಾ ಜನರೂ, ಗದಾಪ್ರಪಾತಾಂಕಿತವಜ್ರಗಾತ್ರೌ – ಗದೆಯ ಹೊಡೆತದಿಂದ ಚಿಹ್ನಿತವಾದ, ವಜ್ರದಂತಿರುವ ಶರೀರವುಳ್ಳ, ತೌ — ಆ ಭೀಮಶಲ್ಯರನ್ನು, ರಣೇ – ಯುದ್ಧದಲ್ಲಿ, ದದರ್ಶ — ನೋಡಿದರು. ಅತ್ರ – ಈ ಯುದ್ಧದಲ್ಲಿ, ಮದ್ರರಾಟ್ – ಶಲ್ಯನು, ವೃಕೋದರಸ್ಯ— ಭೀಮನ, ಗದಾಭಿಘಾತೇನ – ಹೊಡೆತದಿಂದ, ವಿಚೇತನಸ್ಸನ್ – ಮೂರ್ಛಿತನಾಗಿ, ಪ್ರಾಪತತ್ – ಬಿದ್ದನು. ಭೀಮೋऽಪಿ–ಭೀಮನಾದರೂ, ಕೋಪಾತ್—ಸಿಟ್ಟಿನಿಂದ, ಪ್ರಚಲತ್ಪದಸ್ಸನ್,– ಅಲಗಾಡುವ ಕಾಲುಳ್ಳವನಾಗಿ, ಕ್ಷಿತೌ – ಭೂಮಿಯಲ್ಲಿ, ಜಾನುಂ – ಮೊಣಗಾಲನ್ನು, ವಿಧಾಯ–ಇಟ್ಟು. ಸಹಸಾ — ಸಾಮರ್ಥ್ಯದಿಂದ, ಕ್ಷಣಾತ್ – ಕೂಡಲೇ, ಉತ್ಥಿತಃ—ಮೇಲಕ್ಕೆದ್ದನು. ॥೮॥

ವಿಚೇತನಂ ಪತಿತಂ ಮದ್ರರಾಜಂ ವಿಲೋಕ್ಯಭೀಮಂಚತ ಮಾಹ್ವಯಂತಂ ॥
ರಥಂ ಸಮಾರೋಪ್ಯಜನಸ್ಯಪಶ್ಯತಃ ಪುರಶ್ಚಭೀಮಸ್ಯಕೃಪೋऽಪಜಗ್ಮಿವಾನ್ ॥೯॥

ಕೃಪಃ – ಕೃಪಾಚಾರ್ಯರು, ವಿಚೇತನಂ— ಮೂರ್ಛಿತನಾದ, ಪತಿತಂ – ಬಿದ್ದಿರುವ, ಮದ್ರರಾಜಂ— ಶಲ್ಯನನ್ನು, ಆಹ್ವಯಂತಂ ಯುದ್ಧಕ್ಕಾಗಿ ಕರೆಯುತಕ್ಕ, – ಭೀಮಂಚ – ಭೀಮನನ್ನೂ ಕೂಡ, ವಿಲೋಕ್ಯ— ನೋಡಿ, ಭೀಮಸ್ಯ – ಭೀಮನ, ಪುರಶ್ಚ – ಮುಂಭಾಗದಲ್ಲಿಯೇ ಜನಸ್ಯಪಶ್ಯತಸ್ಸತಃ— ಜನರು ನೋಡತ್ತಿರುವಾಗಲೇ, ರಥಂ – ರಥವನ್ನು, ಸಮಾರೋಪ್ಯ – ಏರಿಸಿಕೊಂಡು, ಅಪಜಗ್ಮಿವಾನ್ – ಹೋದರು. ॥೯॥

ವಿಜಿತ್ಯಮದ್ರಾಧಿಪನೋಜಸಾರಿಹಾನದನ್ರಥಂಪ್ರಾಪ್ಯನಿಜಂಸ ಮಾರುತಿಃ ॥
ವ್ಯದ್ರಾವಯದ್ಬಾಣಗಣೈಃ ಪರೇಷಾಮನೀಕಿನೀಂ ದ್ರೋಣಸಮಕ್ಷಮೇವ ॥೧೦॥

ಅರಿಹಾ – ಶತ್ರುಗಳನ್ನು ಸಂಹರಿಸುವ, ಸ ಮಾರುತಿಃ – ಆ ಭೀಮಸೇನನು, ಮದ್ರಾಧಿಪಂ ಶಲ್ಯನನ್ನು, ಓಜಸಾ– ಸಾಮರ್ಥ್ಯದಿಂದ, ವಿಜಿತ್ಯ – ಗೆದ್ದು, ನದನ್‌ಸನ್ – ಗರ್ಜಿಸುವವನಾಗಿ, ನಿಜಂರಥಂ – ತನ್ನ ರಥವನ್ನು, ಪ್ರಾಪ್ಯ – ಹೊಂದಿ, ಬಾಣಗಣೈಃ—ಶರಗಳ ಸಮೂಹಗಳಿಂದ, ಪರೇಷಾಂ—ಶತ್ರುಗಳ, ಅನೀಕಿನೀಂ – ಸೈನ್ಯವನ್ನು, ದ್ರೋಣಸಮಕ್ಷಮೇವ— ದ್ರೋಣಾಚಾರ್ಯರ ಎದುರಿನಲ್ಲಿಯೇ, ವ್ಯದ್ರಾವಯತ್ —ಓಡಿಸಿದನು. ॥೧೦॥

ಭಾ. ಅ. ೧-೧೦ ಶ್ರೀಭೀಷ್ಮಾಚಾರ್ಯರ ಪಾತದನಂತರ, ದುರ್ಯೋಧನನು ಆ ಕಾಲದ ರಾಜರಿಗೆ ಗುರುಗಳಾದ, ಶ್ರೀಪರಶುರಾಮದೇವರ ಶಿಷ್ಯರಾದ, ಶ್ರೇಷ್ಠಜ್ಞಾನಿಗಳಾದ, ಮಹಾರಥಿಕರಾದ ದ್ರೋಣಾಚಾರ್ಯರನ್ನು ಸೇನಾಪತಿಗಳನ್ನಾಗಿ ಮಾಡಿದನು. ಭೀಷ್ಮರಿಂದ ಅವಮಾನಿತನಾಗಿ, ಅವರಕಾಲದಲ್ಲಿ ಯುದ್ಧಮಾಡದಿದ್ದ ಕರ್ಣನು ಈಗ ಭೀಷ್ಮರಿಂದ ಸಮ್ಮತಿಯನ್ನು ಪಡೆದು, ಯುದ್ಧಮಾಡಲು ಬಂದಿದ್ದಾನೆ. ದ್ರೋಣರನ್ನು ಅನುಸರಿಸಿದನು, ಪಾಂಡವರ ಪರಾಜಯಕ್ಕಾಗಿ ದುರ್ಯೋಧನನು ದ್ರೋಣರನ್ನು ಪ್ರಾರ್ಥಿಸಿದಾಗ, ಧರ್ಮರಾಜನನ್ನು ಬಂಧಿಸಿ ತರುವದಾಗಿ ಪ್ರತಿಜ್ಞೆ ಮಾಡಿದರು. ಇದನ್ನು ತಿಳಿದ ಪಾಂಡವರು ಧರ್ಮರಾಜನ ಬಂಧನವಾಗದಿರುವಂತೆ ರಕ್ಷಿಸುವದಕ್ಕಾಗಿ ಪ್ರಯತ್ನಮಾಡುವವರಾಗಿ ಯುದ್ಧಕ್ಕೆ ಬಂದರು. ಆಗ ಭಯಂಕರ ಯುದ್ಧವಾಯಿತು. ಧನುರ್ವಿದ್ಯಾನೈಪುಣ್ಯದಿಂದ ದ್ರೋಣರು ಪಾಂಡವಸೈನ್ಯವನ್ನು ಚೆನ್ನಾಗಿ ಪೀಡಿಸುತ್ತಿರುವಾಗ ಶ್ರೀ ಭೀಮಸೇನರು ಸಿಂಹನಾದವನ್ನು ಮಾಡುತ್ತಾ, ದ್ರೋಣರ ಹತ್ತಿರ ಯುದ್ಧಕ್ಕೆ ಬಂದರು. ಇವರ ಹತ್ತಿರ ಅಶ್ವತ್ಥಾಮ, ಕೃಪಶಲ್ಯರು ಬಂದರು. ಆಗ ಶ್ರೀ ಭೀಮಸೇನರು ಅವರನ್ನೆಲ್ಲ ಓಡಿಸಿ, ದ್ರೋಣರ ಹತ್ತಿರ ಬಂದರು. ಅವರನ್ನು ಅನುಸರಿಸಿ ಅಭಿಮನ್ಯುವೂ ಬಂದಿದ್ದಾನೆ. ಅವನನ್ನು ಶಲ್ಯನು ಎದುರಿಸಿದನು. ಅವರಿಬ್ಬರಿಗೂ ಭಯಂಕರ ಯುದ್ಧವಾಯಿತು. ಅಭಿಮನ್ಯುವನ್ನು ಕೊಲ್ಲಬೇಕೆಂದು ಶಲ್ಯನು ಗದೆಯನ್ನು ತೆಗೆದುಕೊಂಡಾಗ ಗದಾಧಾರಿಗಳಾಗಿ ಶ್ರೀಭೀಮಸೇನರು ಅವನೆದುರು ಹೋದರು. ಅವರಿಗೆ ಭಯಂಕರ ಯುದ್ಧ ನಡೆಯಿತು. ಇಬ್ಬರೂ ಗದಾಯುದ್ಧದ ಅನೇಕ ಚಾತುರ್ಯಗಳನ್ನು ತೋರಿಸಿದರು. ನೋಡುವವರಿಗೆ ಆಕರ್ಷಕವಾದ ಆ ಯುದ್ಧದಲ್ಲಿ ಪರಸ್ಪರ ಗದಾಪ್ರಹಾರಗಳಿಂದ ಮೈಮೇಲೆ ಗುರುತುಗಳನ್ನು ಹೊಂದಿದ್ದಾರೆ.

ಇಬ್ಬರೂ ಏಕಕಾಲದಲ್ಲಿ ಗದಾ ಹೊಡೆತಗಳನ್ನು ಕೊಟ್ಟಾಗ ಶಲ್ಯನು ಮೂರ್ಛಿತನಾಗಿ ಬಿದ್ದನು. ಭೀಮರು ವಶಾತ್ರ ಶಲ್ಯಬಲವನ್ನು ಪ್ರಕಟಿಸುವದಕ್ಕಾಗಿ ಅವನ ಗದಾ ಪ್ರಹಾರದಿಂದ (ನೋವಾದಂತೆ ತೋರಿಸಲು) ಕಾಲು ಅಲುಗಾಡಿಸಿ ಮೊಂಡೆಯೂರಿ ಕುಳಿತು ತಕ್ಷಣದಲ್ಲಿ ಎದ್ದುನಿಂತು, ಸಿಟ್ಟಿನಿಂದ ಬಿದ್ದ ಶಲ್ಯನನ್ನು ಪುನಃ ಯುದ್ಧಕಾಗಿ ಆಹ್ವಾನಿಸಿದರು. ಅದನ್ನು ನೋಡಿದ ಕೃಪಾಚಾರ್ಯರು ಬಂದು ಶ್ರೀಭೀಮರು ಇತರ ಎಲ್ಲರೂ ನೋಡುತ್ತಿರುವಂತೆಯೇ ಶಲ್ಯನನ್ನು ರಥದಲ್ಲಿ ಹಾಕಿಕೊಂಡು ಹೋದರು. ಹೀಗೆ ಭೀಮಸೇನರು ಶಲ್ಯನನ್ನು ಗೆದ್ದು, ಸಿಂಹಗರ್ಜನವನ್ನು ಮಾಡುತ್ತಾ, ಬಾಣಪ್ರಹಾರಗಳಿಂದ ದ್ರೋಣರ ಎದುರಿಗೇ ಕೌರವ ಸೈನ್ಯವನ್ನು ಓಡಿಸಿದರು.

ವಿದ್ರಾವಯತ್ಯಾಶುಕುರೂನ್ಸ್ವಕೋದರೇಽಥಧೂಯ ಸೌಭದ್ರಮುಖಾನ್ಸಸಾತ್ಯಕೀನ್ ॥
ದ್ರೋಣೋಽಭಿಪೇದೇನೃಪತಿಂ ಗೃಹೀತುಂತಮಾಸಸಾದಾಶು ಧನಂಜಯೋರಥೀ ॥೧೧॥

ವ್ಯಕೋದರೇ – ಭೀಮನು, ಕುರೂನ್ – ಕೌರವರನ್ನು, ಆಶು – ಕೂಡಲೇ, ವಿದ್ರಾವಯತಿಸತಿ – ಓಡಿಸುತ್ತಿರಲು, ದ್ರೋಣಃ – ದ್ರೋಣರು, ಸಸಾತ್ಯಕೀನ್—ಸಾತ್ಯಕಿಯಿಂದ ಕೂಡಿದ, ಸೌಭದ್ರಮುಖಾನ್ – ಅಭಿಮನ್ಯುವೇ ಮೊದಲಾದವರನ್ನು, ವಿಧೂಯ – ಓಡಿಸಿ, ನೃಪತಿಂ – ಯುಧಿಷ್ಠಿರನನ್ನು, ಗೃಹೀತುಂ — ಹಿಡಿಯಲು, ಅಭಿಪೇದೇ— ಹೊಂದಿದರು, ರಥೀ – ರಥಿಕನಾದ, ಧನಂಜಯಃ–ಅರ್ಜುನನು, ಆಶು–ಕೂಡಲೇ, ತಂ–ಆ ದ್ರೋಣರನ್ನು, ಆಸಸಾದ–ಹೊಂದಿದನು. ॥೧೧॥

ಸವಾಸುದೇವಪ್ರಯತೇರಥೇಸ್ಥಿತಃ ಶರೈಃಶರೀರಾಂತಕರೈಃಸಮಂತತಃ ॥
ನಿಹತ್ಯನಾಗಾಶ್ವರಥಾನ್ಪ್ರವರ್ತಯನ್ನದೃಶ್ಯತಾಶ್ವೇವಚ ಶೋಣಿತಾಪಗಾಃ ॥೧೨॥

ವಾಸುದೇವ ಪ್ರಯತೇ – ಶ್ರೀಕೃಷ್ಣನಿಂದ ನಡಿಸಲ್ಪಟ್ಟ, ರಥೇ – ರಥದಲ್ಲಿ, ಸ್ಥಿತಃ – ಇರತಕ್ಕ, ಸಃ – ಆ ಅರ್ಜುನನು ಶರೀರಾಂತಕರೈಃ – ಶರೀರಕ್ಕೆ ನಾಶವನ್ನುಂಟು ಮಾಡತಕ್ಕ, ಶರೈಃ – ಬಾಣಗಳಿಂದ, ಸಮಂತತಃ – ಸುತ್ತಮುತ್ತಲೂ ನಾಗಾಶ್ವರಥಾನ್ – ಆನೆ, ಕುದುರೆ, ರಥಿಕರನ್ನು, ನಿಹತ್ಯ – ಕೊಂದು, ಶೋಣಿತಾಪಗಾಃ–ರಕ್ತದ ನದಿಗಳನ್ನು, ಪ್ರವರ್ತಯನ್ಸನ್ – ಹರಿಸುವವನಾಗಿ, ಆಶು – ಕೂಡಲೇ, ಅದೃಶ್ಯತ— ಜನರಿಂದಕಾಣಿಸಿಕೊಳ್ಳಲ್ಪಟ್ಟನು. ॥೧೨॥

ನಿಹನ್ಯಮಾನಾಸು ಕಿರೀಟಿನಾಚಮೂಷ್ವಾರಕ್ಷಿತೇಧರ್ಮಸುತೇತಥಾಪದಃ ॥
ಚಮೂಂಚ ಭೀಮಾರ್ಜುನಬಾಣಭಗ್ನಾಂದ್ರೋಣೋಽಪಹೃತ್ಯಾಪಯಯೌ ನಿಶಾಗಮೇ ॥೧೩॥

ಕಿರೀಟಿನಾ— ಅರ್ಜುನನಿಂದ, ಚಮೂಷು — ಸೈನ್ಯಗಳು, ನಿಹನ್ಯಮಾನಾಸು ಸತೀಷು — ಕೊಲ್ಲಲ್ಪಡುತ್ತಿರಲು, ತಥಾ — ಹಾಗೆಯೇ, ಧರ್ಮಸುತೇ — ಧರ್ಮರಾಜನು, ಆಪದಃ — ಆಪತ್ತಿನದೆಸೆಯಿಂದ, ಆರಕ್ಷಿತೇಸತಿ — ಚೆನ್ನಾಗಿ ರಕ್ಷಿಸಿಕೊಳ್ಳಲ್ಪಡುತ್ತಿರಲು, ದ್ರೋಣಃ— ದ್ರೋಣರು, ಭೀಮಾರ್ಜುನಬಾಣಭಗ್ನಾಂ — ಭೀಮಾರ್ಜುನಶರಗಳಿಂದ ನಷ್ಟವಾದ, ಚಮೂಂ–ಸೈನ್ಯವನ್ನು. ಅಪಹೃತ್ಯ–ಹಿಂತಿರುಗಿಸಿ, ನಿಶಾಗಮೇ – ರಾತ್ರಿಯಲ್ಲಿ, ಅಪಯಯೌ – ಹೋದರು. ॥೧೩॥

ಸಧಾರ್ತರಾಷ್ಟ್ರೇಣಯುಧಿಷ್ಠಿರಾಗ್ರಹಾತ್ಸಂಶ್ರಾವಿತಃ ಕ್ರೂರವಚೋನಿಶಾಯಾಂ ॥
ಜಗಾದದೂರಂ ಸಮರಾದ್ವಿನೀಯತಾಂ ಪಾರ್ಥಸ್ತತೋಧರ್ಮಸುತಂಗೃಹೀಷ್ಯೇ ॥೧೪॥

ಧಾರ್ತರಾಷ್ಟ್ರೇಣ — ದುರ್ಯೋಧನನಿಂದ, ಯುಧಿಷ್ಠಿರಾಗ್ರಹಾತ್ — ಧರ್ಮರಾಜನನ್ನು ಹಿಡಿಯುದಿರುವುದರಿಂದ, ನಿಶಾಯಾಂ – ರಾತ್ರಿಯಲ್ಲಿ, ಕ್ರೂರವಚಃ — ಕೆಟ್ಟವಮಾತನ್ನು, ಸಂಶ್ರಾವಿತಃ— ಕೇಳಿಸಿಕೊಳ್ಳಲ್ಪಟ್ಟ, ಸಃ– ಆ ದ್ರೋಣರು

ಪಾರ್ಥಃ – ಅರ್ಜುನನು, ಸಮರಾತ್ – ಯುದ್ಧಸ್ಥಳದಿಂದ, ದೂರಂ - ದೂರಪ್ರದೇಶಕ್ಕೆ, ವಿನೀಯತಾಂ–ಒಯ್ಯಲ್ಪಡಲಿ, ತತಃ – ಅನಂತರ, ಧರ್ಮಸುತಂ – ಧರ್ಮರಾಜನನ್ನು, ಗೃಹೀಷ್ಯೇ — ಹಿಡಿಯುವೆನು, ಇತಿ — ಎಂದು ಜಗಾದ— ಹೇಳಿದರು. ॥೧೪॥

ತತಃ ಸುಶರ್ಮಾ ಸಹಿತೋನುಹಾರಥೈಃ ಸಂಶಪ್ತಕೈರ್ದೂರತರಂ ಪ್ರಣೇತುಂ ॥
ಯುದ್ಧಾಯ ಭೀಮಾನುಜಮಾಶುಕ್ಲೃಪ್ತೋದುರ್ಯೋಧನೇನೋಮಿತಿಸೋಬ್ರವೀತ್ ॥೧೫॥

ತತಃ – ಅನಂತರ, ಮಹಾರಥೈಃ — ಮಹಾರಥಿಕರಾದ, ಸಂಶಪ್ತಕೈಃ – ಸಂಶಪ್ತಕರಿಂದ, ಸಹಿತಃ — ಕೂಡಿದ, ಸುಶರ್ಮಾ — ಸುಶರ್ಮನು, ಯುದ್ಧಾಯ — ಸಮರಕ್ಕೋಸ್ಕರ, ಭೀಮಾನುಜಂ – ಭೀಮನತಮ್ಮನಾದ ಅರ್ಜುನನನ್ನು, ದೂರತರಂ – ಬಹುದೂರವ ವರೆಗೆ, ಪ್ರಣೇತುಂ– ಕರೆದುಕೊಂಡು ಹೋಗುವುದಕ್ಕಾಗಿ, ದುರ್ಯೋಧನೇನ–ದುರ್ಯೋಧನನಿಂದ, ಆಶು— ಕೂಡಲೇ, ಕ್ಲೃಪ್ತಃ – ಆಜ್ಞಾಪಿಸಲ್ಪಟ್ಟನು. ಸಃ—ಆ ಸುಶರ್ಮನು, ಓಮಿತಿ – ಹಾಗೇಯೇ, ಆಗಲೆಂದು, ಅಬ್ರವೀತ್ ಹೇಳಿದನು. ॥೧೫॥

ಸಮಾಹ್ವಯಾಮಾಸುರಥೋಽರ್ಜುನಂ ತೇ ಪ್ರಾತರ್ಹುತಾಶಸ್ಯ ದಿಶಂ ರಣಾಯ ॥
ಆಯೋಧಯತ್ತಾನ್ಸಚ ತತ್ರಗತ್ವಾ ಭೀಮೋಗಜಾನೀಕಮುಥಾತ್ರಚಾವಧೀತ್ ॥೧೬॥

ಅಥೋ – ಅನಂತರ, ತೇ – ಸುಶರ್ಮನಿಂದ ಕೂಡಿದ ಸಂಶಪ್ತಕರು, ಪ್ರಾತಃ—ಬೆಳಿಗ್ಗೆ, ಹುತಾಶಸ್ಯ — ಅಗ್ನಿಯ, ದಿಶಂ–ದಿಕ್ಕಾದ ಆಗ್ನೇಯದಿಕ್ಕನ್ನು ಕುರಿತು, ಅರ್ಜುನಂ–ಅರ್ಜುನನನ್ನು, ರಣಾಯ–ಯುದ್ಧಕ್ಕಾಗಿ, ಸಮಾಹ್ವಯಾಮಾಸುಃ– ಕರೆದರು. ಸಚ— ಆ ಅರ್ಜುನನಾದರೂ, ತತ್ರ – ಅವರಿದ್ದಲ್ಲಿಗೆ, ಗತ್ವಾ—ಹೋಗಿ, ತಾನ್– ಆ ಸುಶರ್ಮಸಂಶಪ್ತಕರನ್ನು, ಆಯೋಧಯತ್–ಯುದ್ಧ ಮಾಡಿದನು. ಅಥ—ಅನಂತರ, ಭೀಮಃ – ಭೀಮನು, ಅತ್ರ–ಈ ರಣರಂಗದಲ್ಲಿ, ಗಜಾನೀಕಂ– ಆನೆಗಳ ಸಮೂಹವನ್ನು, ಅವಧೀತ್ – ಕೊಂದನು. ॥೧೬॥

ನಿಹನ್ಯಮಾನೇಷು ಗಜೇಷು ಸರ್ವಶೋ ವಿದ್ರಾವ್ಯಮಾಣೇಷ್ವಖಿಲೇಷು ರಾಜಸು ॥
ಪ್ರಾಗ್ಜ್ಯೋತಿಷೋ ಧಾರ್ತರಾಷ್ಟ್ರಾರ್ಥಿತಸ್ತಂ ಸಮಾಗಮತ್ಸುಪ್ರತೀಕೇನ ಧನ್ವೀ ॥೧೭॥

ಸರ್ವಶಃ—ಎಲ್ಲಾ, ಗಜೇಷು–ಆನೆಗಳು, ನಿಹನ್ಯಮಾನೇಷು ಸತ್ಸು– ಭೀಮನಿಂದಕೊಲ್ಲಲ್ಪಡುತ್ತಿರಲು, ಅಖಿಲೇಷು ರಾಜಸು— ಎಲ್ಲಾ ರಾಜರೂ, ವಿದ್ರಾವ್ಯಮಾಣೇಷುಸತ್ಸು–ಓಡಿಸಲ್ಪಡುತ್ತಿರಲು, ಧಾರ್ತರಾಷ್ಟ್ರಾರ್ಥಿತಃ— ದುರ್ಯೋಧನನಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ, ಪ್ರಾಗ್ಜ್ಯೋತಿಷಃ – ಭಗದತ್ತನು, ಧನ್ವೀಸನ್ — ಧನುರ್ಧಾರಿಯಾಗಿ, ಸುಪ್ರತೀಕೇನ – ಸುಪ್ರತೀಕವೆಂಬ ಆನೆಯಿಂದ, ಸಹ – ಕೂಡಿಕೊಂಡು, ತಂ – ಆ ಭೀಮನನ್ನು, ಸಮಾಗಮತ್ – ಹೊಂದಿದನು. ॥೧೭॥

ವಿಭೀಷಿತಾಃ ಸುಪ್ರತೀಕೇನ ಭೀಮಹಯಾ ನತಸ್ಥುಸ್ತದನುಸ್ಮ ಸಾತ್ಯಕಿಃ ॥
ಸೌಭದ್ರಮುಖ್ಯಾಶ್ಚ ಗಜಂತಮಭ್ಯಯುಶ್ಚಿಕ್ಷೇಪ ತೇಷಾಂ ಸರಥಾನಥಾಂಬರೇ ॥೧೮॥

ಸುಪ್ರತೀಕೇನ — ಸುಪ್ರತೀಕವೆಂಬ ಆನೆಯಿಂದ, ವಿಭೀಷಿತಾಃ – ಚೆನ್ನಾಗಿ ಹೆದರಿದ, ಭೀಮಹಯಾಃ – ಭೀಮನ ಕುದುರೆಗಳು, ನತಸ್ಥುಃ -- ನಿಲ್ಲಲಿಲ್ಲ; ಓಡಿದವು. ತದನು — ಆನಂತರ, ಸಾತ್ಯಕಿಃ— ಸಾತ್ಯಕಿಯು, ಸೌಭದ್ರಮುಖ್ಯಾಶ್ಚ — ಅಭಿಮನ್ಯುವೇ ಪ್ರಧಾನರಾಗಿಉಳ್ಳವರೂ ಕೂಡ, ತಂಗಜಂ — ಆ ಸುಪ್ರತೀಕವೆಂಬ ಆನೆಯನ್ನು, ಅಭ್ಯಯುಃ– ಎದುರಾಗಿ ಹೊಂದಿದರು. ಸಃ – ಆ ಆನೆಯು, ತೇಷಾಂ— ಆ ಸಾತ್ಯಕಿ ಮೊದಲಾದವರ, ರಥಾನ್ – ರಥಗಳನ್ನು, ಅಂಬರೇ—ಆಕಾಶದಲ್ಲಿ, ಚಿಕ್ಷೇಪ—ಬೀಸಾಡಿತು. ॥೧೮॥

ಶೈನೇಯಪೂರ್ವೇಷುರಥೋಜ್ಝಿತೇಷು ಭೂಮಾವವಪ್ಲುತ್ಯಕಥಂಚಿದೇವ ॥
ಸ್ಥಿತೇಷು ಭೀಮೇಚ ವಿಭೀಷಿತಾಶ್ವಾನ್ಸಂಯಮ್ಯಯುಧ್ಯತ್ಯಪಿ ಕೃಷ್ಣಐಕ್ಷತ್ ॥೧೯॥

ಶೈನೇಯಪೂರ್ವೇಷು — ಸಾತ್ಯಕಿಯೇ ಮೊದಲಾದವರು, ರಥೋಜ್ಝಿತೇಷುಸತ್ಸು — ರಥವಿಲ್ಲದವರಾಗುತ್ತಿರಲು, ಕಥಂಚಿದೇವ — ಕಷ್ಟದಿಂದಲೇ, ಭೂಮೌ — ಭೂತಲದಲ್ಲಿ, ಅವಪ್ಲುತ್ಯ — ಹಾರಿ, ಸ್ಥಿತೇಷುಸತ್ಸು — ಇರುತ್ತಿರಲು, ಭೀಮೇಚ — ಭೀಮನೊಂದಿಗೂ, ವಿಭೀಷಿತಾಶ್ವಾನ್ — ಹೆದರಿದಕುದುರೆಗಳನ್ನು, ಸಂಯಮ್ಯ — ಕಟ್ಟಿ, ಯುಧ್ಯತಿಸತಿ — ಯುದ್ಧಮಾಡುತ್ತಿರಲು, ಕೃಷ್ಣಃ — ಶ್ರೀಕೃಷ್ಣನು, ಐಕ್ಷತ್ — ನೋಡಿದನು. ॥೧೯॥

ಸಂಕ್ಲೇಶಿತೋ ವೈಷ್ಣವಾಸ್ತ್ರಂವಿಮುಂಚೇತ್ತಾಗ್ಜ್ಯೋತಿಷೋಭೀಮಸೇನೇತತೋಽಹಂ ॥
ಯಾಮ್ಯರ್ಜುನೇನೈವ ತದಸ್ತ್ರಮಾತ್ಮನಃ ಸ್ವೀಕರ್ತುಮನ್ಯೇನ ವರಾದಧಾರ್ಯಂ ॥೨೦॥

ಸಂಕ್ಲೇಶಿತಃ — ಭೀಮಸೇನನಿಂದ ಯುದ್ಧದಲ್ಲಿ ದುಃಖವನ್ನು ಹೊಂದಿದ, ಪ್ರಾಗ್ಜ್ಯೋತಿಷಃ — ಭಗದತ್ತನು, ಭೀಮಸೇನೇ — ಭೀಮಸೇನನಲ್ಲಿ, ವೈಷ್ಣವಾಸ್ತ್ರಂ — ವಿಷ್ಣುದೇವತಾಕವಾದ ಅಸ್ತ್ರವನ್ನು, ವಿಮುಂಚೇತ್ — ಬಿಡುವನು. ತತ್ — ಆ ಕಾರಣದಿಂದ, ಅಹಂ — ನಾನು, ಅರ್ಜುನೇನ — ಅರ್ಜುನನಿಂದಕೂಡಿಕೊಂಡೇ, ವರಾತ್ — ನನ್ನವರದಿಂದ, ಅನ್ಯೇನ — ಇತರರಿಂದ, ಅಧಾರ್ಯಂ — ಧರಿಸಲು ಅಶಕ್ಯವಾದ, ಆತ್ಮನಃ — ನನ್ನ, ಅಸ್ತ್ರಂ — ಅಸ್ತ್ರವನ್ನು, ಸ್ವೀಕರ್ತುಂ — ತೆಗೆದುಕೊಳ್ಳಲು, ಯಾಮಿ — ಹೋಗುತ್ತೇನೆ. ॥೨೦॥

ಇತಿಸ್ಮ ಸಂಚಿತ್ಯ ಸಹಾರ್ಜುನೇನ ತತ್ರಾಯಯಾವಥಪಾರ್ಥಂತ್ರಿಗರ್ತಾಃ ॥
ನ್ಯವಾರಯಂಸ್ತ್ವಾಷ್ಟ್ರಮಸ್ತ್ರಂಸತೇಷುವ್ಯವಾಸೃಜನ್ಮೋಹನಾಯಾಶುವೀರಃ ॥೨೧॥

ಇತಿ — ಈ ರೀತಿಯಾಗಿ, ಸಂಚಿತ್ಯ — ಆಲೋಚಿಸಿ, ಅರ್ಜುನೇನ — ಅರ್ಜುನನಿಂದ, ಸಹ — ಕೂಡಿಕೊಂಡು, ತತ್ರ — ಅಲ್ಲಿಗೆ, ಆಯಯೌ — ಬಂದನು. ಅಥ — ಅನಂತರ, ತ್ರಿಗರ್ತಾಃ — ತ್ರಿಗರ್ತರೆಂಬ ಅಸುರರು, ಪಾರ್ಥಂ — ಅರ್ಜುನನನ್ನು, ನ್ಯವಾರಯನ್ — ತಡೆದರು. ವೀರಃ — ಪ್ರರಾಕ್ರಮಿಯಾದ, ಸಃ — ಆ ಅರ್ಜುನನು, ತೇಷು — ಆ ತ್ರಿಗರ್ತರಲ್ಲಿ ಮೋಹನಾಯ — ಮೂರ್ಛೆಬರುವುದಕ್ಕಾಗಿ, ತ್ವಾಷ್ಟ್ರಂ ಅಸ್ತ್ರಂ — ತ್ವಷ್ಟೃದೇವತಾಕವಾದ ಅಸ್ತ್ರವನ್ನು, ಆಶು — ಕೂಡಲೇ, ವ್ಯವಾಸೃಜತ್ — ಬಿಟ್ಟನು. ॥೨೧॥

ತದಸ್ತ್ರವೀರ್ಯೇಣವಿಮೋಹಿತಾಸ್ತೇಪರಸ್ಪರಂ ಕೃಷ್ಣಪಾರ್ಥಾವಿತಿಸ್ಮ ॥
ಜಘ್ನುಸ್ತದಾ ವಾಸವಿಸ್ತಾನ್ವಿಸೃಜ್ಯಪ್ರಾಗ್ಜ್ಯೋತಿಷಂಹಂತುಮಿವಾಭ್ಯಯಾದ್ದ್ರುತಂ ॥೨೨॥

ತದಸ್ತ್ರವೀರ್ಯೇಣ — ಆ ತ್ವಾಷ್ಟ್ರಾಸ್ತ್ರದಸಾಮರ್ಥ್ಯದಿಂದ, ವಿಮೋಹಿತಾಃ — ಮೂರ್ಛೆಗೊಂಡ, ತೇ — ಆ ತ್ರಿಗರ್ತರು, ಕೃಷ್ಣಪಾರ್ಥೌ — ಇವನು ಶ್ರೀಕೃಷ್ಣನು ಇವನು ಅರ್ಜುನನು ಎಂಬ ಬುದ್ಧಿಯಿಂದ, ಪರಸ್ಪರಂ — ತಾವೇ ಒಬ್ಬರಿಗೊಬ್ಬರು, ಯದಾ — ಯಾವಾಗ, ಜಘ್ನುಃ — ಹೊಡೆದುಕೊಂಡರೋ, ತದಾ — ಆವಾಗ, ವಾಸವಿಃ — ಅರ್ಜುನನು, ತಾನ್ — ಅವರನ್ನು ವಿಸೃಜ್ಯ — ಬಿಟ್ಟು, ದ್ರುತಂ — ಬೇಗನೇ, ಪ್ರಾಗ್ಜ್ಯೋತಿಷಂ — ಭಗದತ್ತನನ್ನು, ಹಂತುಮಿವ — ಕೊಲ್ಲುವದಕ್ಕೋಎಂಬಂತೆ ಅಭ್ಯಯಾತ್ — ಎದುರಾಗಿಬಂದನು. ॥೨೨॥

ಭಾ. ಅ. ೧೧—೨೨ ಹೀಗೆ ಕೌರವ ಸೈನ್ಯವನ್ನು ಶ್ರೀಭೀಮಸೇನರು ಓಡಿಸುತ್ತಿರಲು, ದ್ರೋಣಾಚಾರ್ಯರು ಅಭಿಮನ್ಯು, ಸಾತ್ಯಕಿ ಮೊದಲಾದವರನ್ನು ಓಡಿಸಿ, ಧರ್ಮರಾಜನನ್ನು ಹಿಡಿಯಲೆಂದು ಬರುವ ಹೊತ್ತಿಗೆ ಕೂಡಲೇ

ಅರ್ಜುನನು ಬಂದನು. ಹದನವಾದ ಬಾಣಗಳಿಂದ ಆನೆ, ಕುದುರೆ, ರಥಿಕರನ್ನು ಸಂಹರಿಸಿ ರಕ್ತದನದಿಗಳನ್ನೇ ಹರಿಸಿದನು. ಭೀಮಾರ್ಜುನರಿಂದ ಹೀಗೆ ಬಹುಸೈನ್ಯ ನಾಶವಾಗುತ್ತಿರುವದನ್ನು, ಧರ್ಮರಾಜನು ಸುರಕ್ಷಿತವಾಗಿರುವದನ್ನು ನೋಡಿ ದ್ರೋಣರು ಸಾಯಂಕಾಲಕ್ಕೆ ಸೈನ್ಯವನ್ನು ಹಿಂದೆಗೆದುಕೊಂಡು ಹೋದರು. ಧರ್ಮಜಬಂಧನವಾಗದಿದ್ದದ್ದರಿಂದ ರಾತ್ರಿಯಲ್ಲಿ ದುರ್ಯೋಧನನು ದ್ರೋಣರಲ್ಲಿಗೆ ಬಂದು, ನಿಂದಾವಾತುಗಳನ್ನು ಹೇಳಿದಾಗ, ಅರ್ಜುನನನ್ನು ಬೇರೆ ಸ್ಥಳಕ್ಕೆ ಕರೆದುಕೊಂಡು ಹೋಗು, ಆಗ ಧರ್ಮರಾಜನನ್ನು ಹಿಡಿಯುತ್ತೇನೆ ಎಂದು ದ್ರೋಣರು ಹೇಳಿದರು. ಆ ಪ್ರಕಾರ ದುರ್ಯೋಧನನು ಸುಶರ್ಮನಿಗೆ ಸಂಶಪ್ತಕ ಗಣದ ರಾಕ್ಷಸರಿಂದ ಕೂಡಿಕೊಂಡು ಅರ್ಜುನನನ್ನು ಬೇರೆಡೆಗೆ ಆಹ್ವಾನಿಸಿ ಯುದ್ಧವಾಡುವಂತೆ ಆಜ್ಞಾಪಿಸಿದನು. ಮರುದಿನ ಪ್ರಾತಃಕಾಲದಲ್ಲಿ ಸುಶರ್ಮನು ಆಗ್ನೇಯ ದಿಕ್ಕಿಗೆ ಅರ್ಜುನನನ್ನು ಯುದ್ಧಕ್ಕಾಗಿ ಆಹ್ವಾನಿಸಿ ಕರೆದುಕೊಂಡು ಹೋದನು. ಅರ್ಜುನನು ಸಂಶಪ್ತಕರು ಹಾಗೂ ಸುಶರ್ಮರ ಜೊತೆಗೆ ಕಾದಾಡುತ್ತಿದ್ದನು. ಈ ಕಡೆ ಶ್ರೀಭೀಮರು ಆನೆಗಳ ಸಮೂಹಗಳನ್ನೇ ನಾಶಪಡಿಸುತ್ತಿದ್ದರು. ಸಕಲರಾಜರನ್ನು ಓಡಿಸಿದರು. ಆಗ ಸುಪ್ರತೀಕ ಆನೆಯನ್ನು ಏರಿ ಭಗದತ್ತನು ಯುದ್ಧಕ್ಕೆ ಬಂದನು. ಆ ಆನೆಯನ್ನು ನೋಡಿ ಭೀಮಸೇನದೇವರ ರಥದ ಕುದುರೆಗಳು ಹೆದರಿ ಓಡಲಾರಂಭಿಸಿದವು. ಆಗ ಸಾತ್ಯಕಿ, ಅಭಿಮನ್ಯು ಮೊದಲಾದವರು ಆ ಆನೆಯ ಸಮೀಪಕ್ಕೆ ಬಂದಾಗ ಆ ಆನೆಯು ಅವರ ರಥಗಳನ್ನೇ ಆಕಾಶಕ್ಕೆ ತೂರಿತು. ಇವರೆಲ್ಲರೂ ಹೀಗೆ ರಥಹೀನರಾಗಿ ಭೂಮಿಯಲ್ಲಿ ನಿಂತಿರಲು, ಭೀಮರು ತಮ್ಮ ಕುದುರೆಗಳನ್ನು ನಿಲ್ಲಿಸಿ ಯುದ್ಧ ಮಾಡುತ್ತಿದ್ದರೂ ಕೂಡ, ಶ್ರೀಕೃಷ್ಣನು 'ಈ ಭಗದತ್ತನು ಈ ಭೀಮನಿಂದ ಪೀಡಿತನಾಗಿ ವೈಷ್ಣವಾಸ್ತ್ರವನ್ನು ಪ್ರಯೋಗಿಸಬಹುದು. ಅದನ್ನು ಧರಿಸಲು ನಾನು ಹೋಗಬೇಕು' ಎಂದು ವಿಚಾರಿಸಿ ಆ ಕಡೆಗೆ ಹೊರಟನು. ಆಗ ತ್ರಿಗರ್ತನಾಮಕರಾದ ಅಸುರರು ಅರ್ಜುನನನ್ನು ತಡೆದರು. ಆಗ ಅವರ ಮೇಲೆ ತ್ವಾಷ್ಟ್ರಾಸ್ತ್ರವನ್ನು ಪ್ರಯೋಗಿಸಿ ತಮ್ಮನ್ನೇ ಪರಸ್ಪರವಾಗಿ ಕೃಷ್ಣನನ್ನಾಗಿಯೋ ಅರ್ಜುನನನ್ನಾಗಿಯೋ ತಿಳಿದುಕೊಂಡು ಹೊಡೆದಾಡಿಕೊಂಡು ಸಾಯುವಂತೆ ಮೋಹಗೊಳಿಸಿ, ಅವರನ್ನು ಬಿಟ್ಟು ಭಗದತ್ತನನ್ನು ಕೊಲ್ಲುವದಕ್ಕಾಗಿ ಎಂಬಂತೆ ಏರಿ ಬಂದನು.

ವಿಸೃಜ್ಯಭೀಮುಂ ಸಚಪಾರ್ಥಮೇವ ಯಯೌ ಗಜಸ್ಕಂಧಗತೋಗಜಂತಂ ॥
ಸಂಚೋದಯಾಮಾಸ ರಥಾಯ ತಸ್ಯ ಚಕ್ರೇಽಪಸವ್ಯಂ ಹರಿರೇನಮಾಶು ॥೨೩॥

ಸಚ— ಆ ಭಗದತ್ತನಾದರೂ, ಭೀಮಂ — ಬೀಮನನ್ನು, ವಿಸೃಜ್ಯ — ಬಿಟ್ಟು, ಪಾರ್ಥಮೇವ–ಅರ್ಜುನನನ್ನೇ, ಯಯೌ — ಹೊಂದಿದನು. ಗಜಸ್ಕಂಧಗತಃ—ಆನೆಯ ಹೆಗಲಮೇಲಿರುವ ಭಗದತ್ತನು, ತಂ ಗಜಂ — ಆಸುಪ್ರತೀಕ ಆನೆಯನ್ನು, ತಸ್ಯ–ಅರ್ಜುನನ, ರಥಾಯ— ರಥವನ್ನು ಮೇಲಕ್ಕೆಹಾರಿಸುವುದಕ್ಕೋಸ್ಕರ, ಸಂಚೋದಯಾಮಾಸ–ಪ್ರೇರಿಸಿದನು. ಹರಿಃ – ಶ್ರೀಕೃಷ್ಣನು, ಏನಂ — ಈ ಆನೆಯನ್ನು, ಅಪಸವ್ಯಂಚಕ್ರೇ — ಆನೆಯನ್ನು ಮಧ್ಯದಲ್ಲಿ ಮಾಡಿ ರಥವನ್ನು ತಿರುಗಿಸಿದನು. ॥೨೩॥

ಮನೋಜವೇನೈವರಥೇಪರೇಣ ಸಂಭ್ರಾಮ್ಯಮಾಣೇನತು ತಂಗಜಃ ಸಃ ॥
ಪ್ರಾಪ್ತುಂಶಶಾಕಾಥಶರೈಃಸುತೀಕ್ಷ್ಣೈರಭ್ಯರ್ದಯಾಮಾಸ ನೃಪಂ ಸವಾಸವಿಃ ॥೨೪॥

ಪರೇಣ–ಸರ್ವೋತ್ತಮನಾದ ಶ್ರೀಕೃಷ್ಣನಿಂದ, ರಥೇ – ರಥವು, ಮನೋಜವೇನೈವ — ಮನೋವೇಗದಿಂದಲೇ, ಸಂಭ್ರಾಮ್ಯಮಾಣೇಸತಿ — ತಿರಿಗಿಸಲ್ಪಡುತ್ತಿರಲು, ಸಃಗಜಃ– ಆ ಸುಪ್ರತೀಕ ಆನೆಯು, ತಂ— ಆ ರಥವನ್ನು, ಪ್ರಾಪ್ತುಂ— ಹೊಂದಿ ಮೇಲಕ್ಕೆಹಾರಿಸಲು, ನ ಶಶಾಕ – ಸಮರ್ಥವಾಗಲಿಲ್ಲ. ಅಥ– ಆನಂತರ, ಸಃವಾಸವಿಃ — ಆ ಅರ್ಜುನನು, ನೃಪಂ—ಭಗದತ್ತನನ್ನು ಸುತೀಕ್ಷ್ಣೈಃ–ಅತಿತೀಕ್ಷ್ಣಗಳಾದ ಶರೈಃ-ಬಾಣಗಳಿಂದ, ಅಭ್ಯರ್ದಯಾಮಾಸ – ಪೀಡಿಸಿದನು. ॥೨೪॥

ಅಸೃಕ್ಪೃಚ್ಛಶಸೃಕ್ಪೃಃಸುಚಿರಂನೃವೀರಾವಯುಧ್ಯತಾಂ ತೌ ಬಲಿನಾಂಪ್ರಬರ್ಹೌ ॥
ಅಥೋಚಕರ್ತಾರ್ಜುನಸ್ಯಧನುಃಸಪಾರ್ಥಃಸವೈಷ್ಣವಾಸ್ತ್ರಂಚತದಾಂಕುಶೇಽಕರೋತ್ ॥೨೫॥

ಬಲಿನಾಂ – ಬಲಿಷ್ಠರ ಮಧ್ಯದಲ್ಲಿ, ಪ್ರಬಹೌ – ಶ್ರೇಷ್ಠರಾದ, ನೃವೀರೌ ಪುರುಷಶ್ರೇಷ್ಠರಾದ, ತೌ — ಆ ಅರ್ಜುನ ಭಗದತ್ತರಿಬ್ಬರೂ, ಸುಚಿರಂ – ಬಹುಕಾಲದವರೆಗೆ, ಅಸ್ತ್ರೈಃ – ಅಸ್ತ್ರಗಳಿಂದ, ಶಸ್ತ್ರೈಶ್ಚ — ಶಸ್ತ್ರಗಳಿಂದಲೂ ಕೂಡ, ಅಯುಧ್ಯತಾಂ — ಯುದ್ಧಮಾಡಿದರು. ಅಥೋ — ಅನಂತರ, ಸಃಪಾರ್ಥಃ— ಆ ಅರ್ಜುನನು, ಅಸ್ಯ— ಈ ಭಗದತ್ತನ, ಧನುಃ— ಬಿಲ್ಲನ್ನು, ಚಕರ್ತ — ಕತ್ತರಿಸಿದನು. ತದಾ — ಆಗ, ಸಃ– ಆ ಭಗದತ್ತನು, ವೈಷ್ಣವಾಸ್ತ್ರಂ – ವಿಷ್ಣುದೇವತಾಕ ಅಸ್ತ್ರವನ್ನು, ಅಂಕುಶೇ — ಆನೆಯನ್ನು ನಿಯಮಿಸುವ ಅಂಕುಶವೆಂಬಆಯುಧದಲ್ಲಿ, ಅಕರೋತ್– ಜಪಿಸಿದನು. ॥೨೫॥

ತಸ್ಮಿನ್ನಸ್ತ್ರೇ ತೇನತದಾಪ್ರಮುಕ್ತೇದಧಾರತದ್ವಾಸುದೇವೋsಮಿತೌ ಜಾಃ ॥
ತದಂಸದೇಶೇsಸ್ಯತು ವೈಜಯಂತೀ ಬಭೂವಮಾಲಾsಖಿಲಲೋಕಭರ್ತುಃ ॥೨೬॥

ತದಾ ಆಗ, ತೇನ – ಆ ಭಗದತ್ತನಿಂದ, ತಸ್ಮಿನ್ನಸ್ತ್ರೇ — ಆ ವೈಷ್ಣವಾಸ್ತ್ರವು. ಪ್ರಮುಂಕ್ತೇಸತಿ – ಬಿಡಲ್ಪಡುತ್ತಿರಲು, ಅಮಿತೌಜಾಃ — ಅಪರಿಮಿತ ಪರಾಕ್ರಮವುಳ್ಳ, ವಾಸುದೇವಃ — ಶ್ರೀಕೃಷ್ಣನು, ತತ್ —ವೈಷ್ಣವಾಸ್ತ್ರವನ್ನು, ದಧಾರ – ಧರಿಸಿದನು, ಅಖಿಲ ಲೋಕಭರ್ತುಃ – ಎಲ್ಲಾ ಲೋಕಗಳನ್ನೂ ಧರಿಸಿರುವ, ಅಸ್ಯ – ಈ ಶ್ರೀಕೃಷ್ಣನ, ಅಂಸದೇಶೇ – ಹೆಗಲಿನಲ್ಲಿ, ತತ್ – ಆ ವೈಷ್ಣವಾಸ್ತ್ರವು, ವೈಜಯಂತೀಮಾಲಾ– ವೈಜಯಂತೀ ಮಾಲಿಕೆಯು, ಬಭೂವ– ಆಯಿತು. ॥೨೬॥

ದೃಷ್ಟೈವತದ್ಧಾರಿತ ಮಚ್ಯುತೇನ ಪಾರ್ಥಃಕಿಮರ್ಥಂ ವಿಧೃತಂತ್ವಯೇತಿ ॥
ಊಚೇತದಾಹಾಶು ಜಗನ್ನಿವಾಸೋ ಮಯಾಖಿಲಂ ಧಾರ್ಯತೇ ಸರ್ವದೈವ ॥೨೭॥

ಪಾರ್ಥಃ — ಅರ್ಜುನನು, ಅಚ್ಯುತೇನ – ಶ್ರೀಕೃಷ್ಣನಿಂದ, ಧಾರಿತಂ – ಧರಿಸಲ್ಪಟ್ಟ, ತತ್– ಆ ವೈಷ್ಣವಾಸ್ತ್ರವನ್ನು, ದೃಷ್ಟೈವ – ನೋಡಿಯೇ, ತ್ವಯಾ— ನಿನ್ನಿಂದ, ಕಿಮರ್ಥಂ—ಯಾವದಕ್ಕೋಸ್ಕರ, ವಿಧೃತಂ—ಧರಿಸಲ್ಪಟ್ಟಿತು, ಇತಿ— ಎಂದು, ಊಚೇ – ಹೇಳಿದನು, ಜಗನ್ನಿವಾಸಃ—ಲೋಕಕ್ಕೆ ಆಶ್ರಯನಾದ ಶ್ರೀಕೃಷ್ಣನು, ಮಯಾ – ನನ್ನಿಂದ, ಅಖಿಲಂ – ಚೇತನಾಚೇತನಾತ್ಮಕವಾದ ಎಲ್ಲಾ ಜಗತ್ತು, ಸರ್ವದಾ – ಸೃಷ್ಟ್ಯಾದ್ಯವಸ್ಥೆಗಳಲ್ಲಿ, ಧಾರ್ಯತೇ – ಧರಿಸಲ್ಪಡುತ್ತದೆ, ಇತಿ – ಎಂದು, ಆಶು—ಕೂಡಲೇ, ತಂ – ಆ ಅರ್ಜುನನನ್ನು ಕುರಿತು, ಆಹ – ಹೇಳಿದನು. ॥೨೭॥

ನಮಾದೃಶೋsನ್ಯೋಸ್ತಿಕುತಃಪರೋಮತ್ಸೋsಹಂ ಚತುರ್ಧಾಜಗತೋಹಿತಾಯ ॥
ಸ್ಥಿತೋಸ್ಮಿಮೋಕ್ಷಪ್ರಲಯಸ್ಥಿತೀನಾಂ ಸೃಷ್ಟೇಶ್ಚ ಕರ್ತಾಕ್ರಮಶಃಸ್ವಮೂರ್ತಿಭಿಃ ॥
ಸವಾಸುದೇವಾದಿಚತುಃಸ್ವರೂಪಃ ಸ್ಥಿತೋsನಿರುದ್ಧೋ ಹೃದಿಚಾಖಿಲಸ್ಯ ॥೨೮॥

ಮಾದೃಶಃ – ನನಗೆ ಸದೃಶನಾದ, ಅನ್ಯಃ - ಇನ್ನೊಬ್ಬ ಪುರುಷನು, ನಾಸ್ತಿ–ಇರುವದಿಲ್ಲ, ಮತ್ – ನನ್ನದೆಸೆಯಿಂದ, ಪರಃ – ಉತ್ತಮನು, ಕುತಃ— (ಸಮಾನನು ಇಲ್ಲವೆಂದಮೇಲೆ) ಹೇಗೆ ಇರುವನು, ಸೋsಹಂ—ಆ ಈ ಸಮಾಧಿಕರಹಿತನಾದ ನಾನು, ಚತುರ್ಧಾ— ವಾಸುದೇವಾದಿ ನಾಲ್ಕು ಪ್ರಕಾರದಿಂದ, ಜಗತಃ—ಲೋಕಕ್ಕೆ, ಹಿತಾಯ – ಹಿತವನ್ನುಂಟು ಮಾಡಲು ಸ್ಥಿತೋsಸ್ಮಿ —ಇರತಕ್ಕವನಾಗಿದ್ದೇನೆ, ವಾಸುದೇವಾದಿ ಚತುಃಸ್ವರೂಪಃ–ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ಸ್ವರೂಪವುಳ್ಳ ನಾನು, ಸ್ವಮೂರ್ತಿಭಿಃ – ನನ್ನ ಈ ನಾಲ್ಕು ರೂಪಗಳಿಂದ, ಮೋಕ್ಷಪ್ರಲಯಸ್ಥಿತೀನಾಂ— ಮುಕ್ತಿ. ನಾಶ, ಪಾಲನ ಇವುಗಳನ್ನು, ಸೃಷ್ಟೇಶ್ಚ—ಉತ್ಪತ್ತಿಯನ್ನೂ ಕೂಡ, ಕ್ರಮಶಃ – ಶಾಸ್ತ್ರೋಕ್ತ ರೀತಿಯಿಂದ, ಕರ್ತಾ– ಮಾಡತಕ್ಕವನು, ಅಸ್ಮಿ—ಆಗಿದ್ದೇನೆ, ಅನಿರುದ್ಧಃ—ಅನಿರುದ್ಧನಾಮಕನಾದ, ಸೋಹಂ–ಅಂತಹನಾನು, ಅಖಿಲಸ್ಯ – ಎಲ್ಲಾ ಜಗತ್ತಿನ, ಹೃದಿ – ಹೃತ್ಕಮಲದಲ್ಲಿ, ಸ್ಥಿತಃ – ಇರತಕ್ಕವನು, ಅಸ್ಮಿ – ಆಗಿದ್ದೇನೆ. ॥೨೮॥

ಸಏವಚ ಕ್ರೋಡತನುಃ ಪುರಾಹಂ ಭೂಮಿಪ್ರಿಯಾರ್ಥಂ ನರಕಾಯಚಾದಾಂ॥
ಅಸ್ತ್ರಂ ಮದೀಯಂ ವರಮಸ್ಮಚಾದಾಮವಧ್ಯತಾಂ ಯಾವದಸ್ತ್ರಂ ಸಸೂನೋಃ ॥೨೯॥

ಸಏವ – ಆ ವಾಸುದೇವಾದಿರೂಪವುಳ್ಳ, ಅಹಂ – ನಾನು, ಕ್ರೋಡತನುಸ್ಸನ್ – ವರಾಹರೂಪಳುಳ್ಳವನಾಗಿ, ಪುರಾ – ಹಿಂದೆ, ಭೂಮಿಪ್ರಿಯಾರ್ಥಂ – ಭೂದೇವಿಗೆ ಪ್ರೀತಿಯನ್ನುಂಟು ಮಾಡಲು, ನರಕಾಯ – ನರಕಾಸುರನಿಗೋಸ್ಕರ, ಮದೀಯಂ – ನನ್ನದಾದ, ಅಸ್ತ್ರಂ – ಅಸ್ತ್ರವನ್ನು, ಆದಾಂ – ಕೊಟ್ಟೆನು, ಸಸೂನೋಃ – ಮಗನಾದ ಭಗದತ್ತನಿಂದ ಕೂಡಿದ, ಅಸ್ಯ – ಈ ನರಕಾಸುರನಿಗೆ, ಯಾವದಸ್ತ್ರಂ – ಎಷ್ಟರತನಕ ನನ್ನ ಅಸ್ತ್ರವಿರುವುದೋ, ತಾವತ್ – ಅಷ್ಟರತನಕ, ಅವಧ್ಯತಾಂ– ಇತರರಿಂದ ಅವಧ್ಯತ್ವರೂಪವಾದ, ವರಂಚ – ವರವನ್ನೂ ಕೂಡ, ಅದಾಂ – ಕೊಟ್ಟೆನು, (ಆದ್ದರಿಂದಲೇ ಅಸ್ತ್ರವಿರುವಾಗ ಇತರರಿಗೆ ಕೊಲ್ಲಲು ಶಕ್ತಿ ಇಲ್ಲದಿರುವದರಿಂದ ನಾನೇಕೃಷ್ಣನಾಗಿ ನರಕನನ್ನು ಸಂಹರಿಸಿದೆನು.) ॥೨೯॥

ಅಸ್ತ್ರಸ್ಯಚಾನ್ಯೋ ನತುಕಶ್ಚಿದಸ್ತಿಯೋಽವಧ್ಯ ಏತಸ್ಯ ಕುತಶ್ಚಮತ್ತಃ ॥
ಇತಿಸ್ಮತೇನೈವ ಮಯಾಧೃತಂ ತದಸ್ತ್ರಂ ತದೇನಂಜಹಿಚಾಸ್ತ್ರಹೀನಂ ॥೩೦॥

ಮತ್ತಃ - ನನ್ನದೆಸೆಯಿಂದ, ಅನ್ಯಃ – ಇತರನಾದ, ಯಃಕಶ್ಚಿತ್ – ಯಾವನೊಬ್ಬ ಪುರುಷನೂ ಕೂಡ, ಕುತಶ್ಚ– ಯಾವ ಕಾರಣದಿಂದಲೂ, ಏತಸ್ಯಅಸ್ತ್ರಸ್ಯಸಕಾಶಾತ್ – ಈ ಅಸ್ತ್ರದಿಂದ, ಅವಧ್ಯಃ – ನಾಶವಿಲ್ಲದವನು, ನತುಅಸ್ತಿ – ಇಲ್ಲವೇ ಇಲ್ಲ, ಇತಿಸ್ಮ – ಈ ಕಾರಣದಿಂದ, ತೇನೈವ – ಅಸ್ತ್ರದಿಂದ ಅವಧ್ಯತ್ವವಿರುವದರಿಂದಲೇ, ಮಯಾ – ನನ್ನಿಂದ, ತದಸ್ತ್ರಂ– ಆ ವೈಷ್ಣವಾಸ್ತ್ರವು, ಧೃತಂ – ಧರಿಸಲ್ಪಟ್ಟಿತು, ತತ್– ಆ ಕಾರಣದಿಂದ, ಅಸ್ತ್ರಹೀನಂ—ಅಸ್ತ್ರವಿಲ್ಲದ, ಏನಂ—ಈ ಭಗದತ್ತನನ್ನು, ಜಹಿ – ಕೊಲ್ಲು. ॥೩೦॥

ಇತ್ಯುಕ್ತವಾಕರ್ಣ್ಯಸಕೇಶವೇನಸಂಮುಂತ್ರ್ಯಬಾಣಂ ಹೃದಯೇಮುಮೋಚ ॥
ಪ್ರಾಗ್ಜ್ಯೋತಿಷಸ್ಯಾಪರಮುತ್ತಮುಂಶರಂ ಗಜೇಂದ್ರಕುಂಭಸ್ಥಲ ಆಶ್ವಮುಜ್ಜಯತ್ ॥೩೧॥

ಕೇಶವೇನ – ಶ್ರೀಕೃಷ್ಣನಿಂದ, ಇತಿ – ಈ ರೀತಿಯಾಗಿ, ಉಕ್ತಂ— ಹೇಳಲ್ಪಟ್ಟದ್ದನ್ನು, ಆಕರ್ಣ್ಯ—ಕೇಳಿ, ಸಃ— ಆ ಅರ್ಜುನನು, ಸಂಮುಂತ್ರ್ಯ — ಆಲೋಚಿಸಿ, ಬಾಣಂ — ಶರವನ್ನು, ಪ್ರಾಗ್ಜ್ಯೋತಿಷಸ್ಯ ಹೃದಯೇ – ಭಗದತ್ತನ ಎದೆಯಲ್ಲಿ, ಮುಮೋಚ – ಬಿಟ್ಟನು, ಗಜೇಂದ್ರಕುಂಭಸ್ಥಲೇ — ಸುಪ್ರತೀಕವೆಂಬ ಆನೆಯ ಕುಂಭಸ್ಥಲದಲ್ಲಿ, ಅಪರಂ – ಬೇರೊಂದು, ಉತ್ತಮುಂಶರಂ – ಶ್ರೇಷ್ಠಬಾಣವನ್ನು, ಆಶು – ಕೂಡಲೇ ಅಮುಜ್ಜಯತ್ – ಮುಳುಗಿಸಿದನು, ಸಂಬದ್ಧವಾಗುವಂತೆ ಮಾಡಿದನು. ॥೩೧॥

ಉಭೌ ಚತೌ ಪೇತತುರದ್ರಿಸನ್ನಿಭೌ ಮಹೇಂದ್ರವಜ್ರಾಭಿಹತಾವಿವಾಶು ॥
ನಿಹತ್ಯತೌ ವಾಸವಿರುಗ್ರಪೌರುಷೌ ಮುಮೋದ ಸಾಧುಸ್ವಜನಾಭಿಪೂಜಿತಃ ॥೩೨॥

ಅದ್ರಿಸನ್ನಿಭೌ – ಪರ್ವತಕ್ಕೆ ಸಮಾನರಾದ, ತೌಉಭೌ – ಆ ಆನೆ ಹಾಗೂ ಭಗದತ್ತರಿಬ್ಬರು, ಆಶು – ಕೂಡಲೇ, ಮಹೇಂದ್ರವಜ್ರಾಭಿಹತಾವಿವ — ದೇವೇಂದ್ರನ ವಜ್ರಾಯುಧದಿಂದ ಹೊಡೆಸಿಕೊಳ್ಳಲ್ಪಟ್ಟವರಂತೆ, ಪೇತತುಃ – ಬಿದ್ದರು, ವಾಸವಿಃ— ಅರ್ಜುನನು, ಉಗ್ರಪೌರುಷೌ – ಕ್ರೂರವಾದ ಪರಾಕ್ರಮವುಳ್ಳ, ತೌ – ಆ ಭಗದತ್ತ ಸುಪ್ರತೀಕರಿಬ್ಬರನ್ನು, ನಿಹತ್ಯ – ಕೊಂದು, ಸಾಧು – ಚೆನ್ನಾಗಿ, ಸ್ವಜನಾಭಿಪೂಜಿತಃಸನ್ – ತನ್ನವರಿಂದ ಪೂಜಿಸಿಕೊಳ್ಳಲ್ಪಟ್ಟವನಾಗಿ, ಮುಮೋದ– ಸಂತೋಷಪಟ್ಟನು. ॥೩೨॥

ಅಥಾಚಲಂ ವೃಷಭಂ(ಕಂ) ಚೈವಹತ್ವಾಕನೀಯಸೌ ಶಕುನೇಸ್ತಂಚ ಬಾಣೈಃ ॥
ವಿವ್ಯಾಧವಮಾಯಾಮಸೃಜತ್ಸತಾಂಚ ವಿಜ್ಞಾನಾಸ್ತ್ರೇಣಾಶು ನಾಶಾಯಚಕ್ರೇ ॥೩೩॥

ಅಥ— ಅನಂತರ, ಸಃ– ಆ ಅರ್ಜುನನು, ಶಕುನೇಃ – ಶಕುನಿಯ, ಕನೀಯಸೌ – ತಮ್ಮಂದಿರಾದ, ಅಚಲಂ – ಅಚಲನನ್ನು, ವೃಷಭಂಚ – ವೃಷಭನನ್ನೂ ಕೂಡ, ಹತ್ವಾ— ಕೊಂದು, ತಂ—ಆ ಶಕುನಿಯನ್ನು, ಬಾಣೈಃ—ಬಾಣಗಳಿಂದ, ವಿವ್ಯಾಧ – ಹೊಡೆದನು. ಸಃ— ಆ ಶಕುನಿಯು,ಮಾಯಾಂ — ಮಾಯೆಯನ್ನು, ಅಸೃಜತ್ – ಸೃಷ್ಟಿಮಾಡಿದನು. ಸಃ— ಅರ್ಜುನನು, ತಾಂ— ಆ ಮಾಯೆಯನ್ನು, ವಿಜ್ಞಾನಾಸ್ತ್ರೇಣ – ವಿಜ್ಞಾನಾಸ್ತ್ರದಿಂದ, ಆಶು – ಕೂಡಲೇ, ನಾಶಾಯ – ನಾಶಕ್ಕಾಗಿ, ಚಕ್ರೇ— ಮಾಡಿದನು. ॥೩೩॥

ಸನಷ್ಟಮಾಯಃಪ್ರಾದ್ರವತ್ಪಾಪಕರ್ಮಾತತಃಪಾರ್ಥಃಶರಪೂಗೈಶ್ಚಮೂಂ ತಾಂ ॥
ವಿದ್ರಾವಯಾಮಾಸ ತದಾ ಗುರೋಃಸುತೋಮಾಹಿಷ್ಮತೀಪತಿಮಾಜೌ ಜಘಾನ ॥೩೪॥

ಪಾಪಕರ್ಮಾ – ಪಾಪಕರ್ಮವುಳ್ಳ, ಸಃ—ಆ ಶಕುನಿಯು, ನಷ್ಟಮಾಯಃ ಸನ್-- ನಷ್ಟವಾದ ಮಾಯೆಯುಳ್ಳವನಾಗಿ, ಪ್ರಾದ್ರವತ್—ಓಡಿದನು, ತತಃ – ಅನಂತರ, ಪಾರ್ಥಃ – ಅರ್ಜುನನು, ಶರಪೂಗೈಃ ಬಾಣಗಳ ಸಮೂಹದಿಂದ, ತಾಂ ಚಮೂಂ— ಆ ಸೈನ್ಯವನ್ನು, ವಿದ್ರಾವಯಾಮಾಸ–ಓಡಿಸಿದನು. ತದಾ– ಆಗ, ಗುರೋಃ – ದ್ರೋಣರ, ಸುತಃ– ಮಗನಾದ ಅಶ್ವತ್ಥಾಮಾಚಾರ್ಯರು, ಆಜೌ — ಯುದ್ಧದಲ್ಲಿ, ಮಾಹಿಷ್ಮತೀಪತಿಂ– ಮಾಹಿಷ್ಮತೀ ರಾಷ್ಟ್ರದ ರಾಜನನ್ನು, ಜಘಾನ–ಕೊಂದರು. ॥೩೪॥

ತದಾಭೀಮಸ್ತಸ್ಯನಿಹತ್ಯವಾಹಾನ್ವ್ಯದ್ರಾವಯದ್ಧಾರ್ತರಾಷ್ಟ್ರೀಂ ಚಮೂಂಚ ॥
ಭೀಮಾರ್ಜುನಾಭ್ಯಾಂ ಹನ್ಯಮಾನಾಂ ಚಮೂಂ ತಾಂ ದೃಷ್ಟ್ವಾದ್ರೋಣಃ ಕ್ಷಿಪ್ರಮುಪಾಜಹಾರ ॥೩೫॥

ತದಾ —ಆಗ, ಭೀಮಃ – ಭೀಮನು, ತಸ್ಯ —ಆ ಅಶ್ವತ್ಥಾಮನ, ವಾಹಾನ್ — ಕುದುರೆಗಳನ್ನು, ನಿಹತ್ಯ–ಕೊಂದು ಧಾರ್ತರಾಷ್ಟ್ರೀಂ–ದುರ್ಯೋಧನನ, ಚಮೂಂ — ಸೈನ್ಯವನ್ನು, ವ್ಯದ್ರಾವಯತ್– ಓಡಿಸಿದನು. ದ್ರೋಣಃ – ದ್ರೋಣರು, ಭೀಮಾರ್ಜುನಾಭ್ಯಾಂ– ಭೀಮಾರ್ಜುನರಿಂದ, ಹನ್ಯಮಾನಾಂ — ಕೊಲ್ಲಲ್ಪಡತಕ್ಕ, ತಾಂ ಚಮೂಂ– ಆ ಕೌರವಸೈನ್ಯವನ್ನು, ದೃಷ್ಟ್ವಾ–ನೋಡಿ, ಕ್ಷಿಪ್ರಂ–ಕೂಡಲೇ, ಉಪಾಜಹಾರ —ಹಿಂತಿರುಗಿಸಿಕೊಂಡು ಹೋದರು ॥೩೫॥

ಭಾ. ಅ. ೨೩ - ೩೫ ಆಗ ಭಗದತ್ತನು ಭೀಮಸೇನರ ಹತ್ತಿರ ಯುದ್ಧವನ್ನು ಬಿಟ್ಟು, ಗಜಾರೂಢನಾಗಿ ಅರ್ಜುನನ ಹತ್ತಿರ ಯುದ್ಧಕ್ಕೆ ಬಂದನು. ಅರ್ಜುನನ ರಥವನ್ನು ಮೇಲೆ ತೂರುವಂತೆ ಆ ಆನೆಗೆ ಪ್ರೇರಿಸಿದನು. ಆಗ ಆನೆಯು ಬರುತ್ತಿರಲು ಶ್ರೀಕೃಷ್ಣನು ಆನೆಯನ್ನು ಎಡಬದಿಯಲ್ಲಿ ಉಳಿಯುವಂತೆ ರಥವನ್ನು ಬೇಗಬೇಗನೇ ವೇಗದಿಂದ ತಿರುಗಿಸುತ್ತಿದ್ದನು. ಆ ಆನೆಗೆ ರಥವು ಸಿಗಲೇಇಲ್ಲ. ಅರ್ಜುನನು ಭಗದತ್ತನಿಗೆ ತೀಕ್ಷ್ಣ ಬಾಣವನ್ನು ಬಿಟ್ಟು ಮರ್ದನ ಮಾಡಿದನು. ಇಬ್ಬರೂ ಭಯಂಕರ ಯುದ್ಧವನ್ನು ಮಾಡುತ್ತಿರುವಾಗ ಅರ್ಜುನನು ಭಗದತ್ತನ ಧನುಸ್ಸನ್ನು ಕತ್ತರಿಸಿದನು. ಆಗ ಭಗದತ್ತನು ವೈಷ್ಣವಾಸ್ತ್ರವನ್ನು ತನ್ನ ಅಂಕುಶದಲ್ಲಿ ಅಭಿಮಂತ್ರಿಸಿದನು, ಅರ್ಜುನನ ಮೇಲೆ ಪ್ರಯೋಗಿಸಿದನು. ಆಗ ಶ್ರೀಕೃಷ್ಣನು ಅದರ ಎದುರು ಬಂದು ತಾನು ಧರಿಸಿದನು. ಆಗ ಆ ಅಸ್ತ್ರಯುಕ್ತವಾದ ಅಂಕುಶವು ಶ್ರೀಕೃಷ್ಣನಕೊರಳಲ್ಲಿ ವೈಜಯಂತೀ ಮಾಲಾರೂಪವಾಗಿ ಪರಿಣಮಿಸಿತು. ಇದನ್ನೆಲ್ಲ ನೋಡಿದ ಅರ್ಜುನನು ನೀನೇಕೆ ಧರಿಸಿದಿ ಎಂದು ಕೇಳಿದನು. ಆಗ ಶ್ರೀಕೃಷ್ಣನು ಈ ಅಸ್ತ್ರವನ್ನು ಪಾತ್ರವಲ್ಲ ಇಡೀ ಬ್ರಹ್ಮಾಂಡವನ್ನೇ ನಾನು ಧರಿಸಿರುವೆನು ಎಂದು ಹೇಳಿ ನಾನು ವಾಸುದೇವಾದಿ ನಾಲ್ಕುರೂಪಗಳಿಂದ ಜಗತ್ತಿನ ಮೋಕ್ಷಾದಿ ಕಾರ್ಯಗಳನ್ನು ಮಾಡುವೆನು; ನನ್ನ ಸಮ ಹಾಗೂ ಶ್ರೇಷ್ಠರಂತೂ ಇಲ್ಲವೇ ಇಲ್ಲ. ಸರ್ವರ ಹೃದಯದಲ್ಲಿ ನಾನಿರುವೆನು. ಅಂಥ ನಾನು ವರಾಹ ರೂಪನಾಗಿರುವಾಗ ನನ್ನ ಹೆಂಡತಿಯಾದ ಭೂಮಿದೇವಿಯ ಸಂತೋಷಕ್ಕಾಗಿ ನನ್ನ ಮಗನಾಗಿ ಹುಟ್ಟಿದ

ನರಕಾಸುರನಿಗೆ ವೈಷ್ಣವಾಸ್ತ್ರವನ್ನು ಕೊಟ್ಟು ಆ ಅಸ್ತ್ರವಿರುವ ಪರ್ಯಂತ ಅವನ ಮಗ ಭಗದತ್ತನಿಂದ ಸಹಿತನಾಗಿ ಅವನಿಗೆ ವಧ ಬಾರದಂತೆ ವರವನ್ನು ಕೊಟ್ಟಿದ್ದನು. ಆದ್ದರಿಂದಲೇ ನರಕಾಸುರನನ್ನು ನಾನೇ ಸಂಹರಿಸಬೇಕಾಯಿತು, ನನ್ನನ್ನು ಬಿಟ್ಟು ಬೇರೆ ಯಾರೂ ಆ ಅಸ್ತ್ರದಿಂದ ವಧ್ಯರಾಗದವರಿಲ್ಲ. ಆದ್ದರಿಂದ ನಾನೇ ಅದನ್ನು ಧರಿಸಿದೆನು. ಈಗ ಆಸ್ತ್ರ ಹೀನನಾದ ಈ ಭಗದತ್ತನನ್ನು ಸಂಹರಿಸು ಎಂದು ಹೇಳಿದನು. ಆಗ ಅರ್ಜುನನು ಇದನ್ನೆಲ್ಲ ತಿಳಿದು ಒಂದು ಬಾಣವನ್ನು ಅಭಿಮಂತ್ರಿಸಿ ಅವನ ಹೃದಯಕ್ಕೂ, ಇನ್ನೊಂದನ್ನು ಆನೆಯ ಕುಂಭಸ್ಥಲಕ್ಕೂ ಬಿಟ್ಟಾಗ ಇಂದ್ರನ ವಜ್ರಾಯುಧದಿಂದ ಬಡಿಸಿಕೊಂಡ ದೊಡ್ಡ ಪರ್ವತಗಳು ಬೀಳುವಂತೆ ಬಿದ್ದರು. ಆಗ ಅರ್ಜುನನನ್ನು ಎಲ್ಲ ಸ್ವಪಕ್ಷೀಯರೂ ಪ್ರಶಂಸಿಸಿದರು. ಅರ್ಜುನನೂ ಸಂತುಷ್ಟನಾದನು. ಆಮೇಲೆ ಅರ್ಜುನನು ಶಕುನಿಯ ತಮ್ಮಂದಿರಾದ ವೃಷಕ, ಅಚಲರನ್ನು ಕೊಂದು ಶಕುನಿಯಮೇಲೂ ಬಾಣ ಪ್ರಹಾರ ಮಾಡಿದನು. ಶಕುನಿಯು ಮಾಯೆಯನ್ನು ಸೃಜಿಸಿದರೆ, ಅದನ್ನು ವಿಜ್ಞಾನಾಸ್ತ್ರದಿಂದ ನಾಶ ಮಾಡಿದಾಗ, ಪಾಪಿಷ್ಠನಾದ ಆ ಶಕುನಿಯು ಓಡಿ ಹೋದನು. ಆಗ ಅಶ್ವತ್ಥಾಮಾಚಾರ್ಯರು ಪಾಂಡವ ಪಕ್ಷೀಯನಾದ ಮಾಹಿಷ್ಮತೀ ದೇಶದ ರಾಜ ನೀಲನನ್ನು ಕೊಂದರು. ಆಗ ಶ್ರೀ ಭೀಮರು ಬಂದು ಅಶ್ವತ್ಥಾಮರ ಕುದುರೆಗಳನ್ನು ಕೊಂದು, ಕೌರವ ಸೈನ್ಯವನ್ನು ಓಡಿಸಿದರು. ಹೀಗೆ ಭೀಮಾರ್ಜುನರಿಂದ ಸ್ವಸೈನ್ಯವು ಸಾಯುವದನ್ನು ನೋಡಿದ ದ್ರೋಣರು ಸೈನ್ಯವನ್ನು ಶಿಬಿರಕ್ಕೆ ಹಿಂದೆಗೆದು ಕೊಂಡರು.

ಪ್ರಾಗ್ಜ್ಯೋತಿಷೇನಿಹತೇಚಾಗ್ರಹಾಚ್ಚ ಯುಧಿಷ್ಠಿರಸ್ಯಾತಿವಿಷಣ್ಣರೂಪಃ ॥
ದುರ್ಯೋಧನೋಽತ್ರಾವಯದ್ದೀನವಾಕ್ಯಾನ್ಯತ್ರದ್ರೋಣಂಸೋಽಪಿನೃಪಂಜಗಾದ ॥೩೬॥

ಪ್ರಾಗ್ಜ್ಯೋತಿಷೇ — ಭಗದತ್ತನು, ನಿಹತೇಸತಿ — ಕೊಲ್ಲಲ್ಪಡುತ್ತಿರಲು, ಯುಧಿಷ್ಠಿರಸ್ಯ — ಧರ್ಮರಾಜನನ್ನು, ಅಗ್ರಹಾಚ್ಚ — ಹಿಡಿಯದಿರುವುದರಿಂದ, ಅತಿವಿಷಣ್ಣರೂಪಃ — ಅತ್ಯಂತ ದುಃಖಗೊಂಡ ಸ್ವರೂಪವುಳ್ಳ, ದುರ್ಯೋಧನಃ— ದುರ್ಯೋಧನನು, ಅತ್ರ — ಈ ಪರಾಜಯವಿಷಯದಲ್ಲಿ, ದ್ರೋಣಂ — ದ್ರೋಣರನ್ನು ಕುರಿತು, ದೀನ ವಾಕ್ಯಾನಿ—ಕೆಟ್ಟ ಮಾತುಗಳನ್ನು, ಅಶ್ರಾವಯತ್ — ಕೇಳಿಸಿದನು. (ಹೇಳಿದನು) ಸೋಪಿ— ಆ ದ್ರೋಣಾಚಾರ್ಯರಾದರೂ, ನೃಪಂ — ದುರ್ಯೋಧನನನ್ನು ಕುರಿತು, ಜಗಾದ — ಹೇಳಿದರು. ॥೩೬॥

ಪಾರ್ಥೇಗತೇಶ್ವೋನೃಪತಿಂಗೃಹೀಷ್ಯೇನಿಹನ್ಮಿವಾತತ್ಸದೃಶಂತದೀಯಂ ॥
ಇತಿಪ್ರತಿಜ್ಞಾಂಸವಿಧಾಯಭೂಯಃಪ್ರಾತರ್ಯಯೌಯುದ್ಧಮಾಕಾಂಕ್ಷಮಾಣಃ ॥೩೭॥

ಶ್ವಃ— ನಾಳೆ, ಪಾರ್ಥೇ — ಅರ್ಜುನನು, ಗತೇಸತಿ—ಹೋಗುತ್ತಿರಲು, ನೃಪತಿಂ—ಧರ್ಮರಾಜನನ್ನು, ಗೃಹೀಷ್ಯೇ— ಹಿಡಿಯುವೆನು, ವಾ—ಅಥವಾ, ತತ್ಸದೃಶಂ — ಆ ಧರ್ಮರಾಜನಿಗೆ ಸಮಾನನಾದ, ತದೀಯಂ— ಆಧರ್ಮರಾಜನ ಸಂಬಂಧಿಕನನ್ನು, ನಿಹನ್ಮಿ— ಕೊಲ್ಲುತ್ತೇನೆ, ಇತಿ— ಈರೀತಿಯಾಗಿ, ಸಃ— ಆ ದ್ರೋಣರು, ಪ್ರತಿಜ್ಞಾಂ — ಪ್ರತಿಜ್ಞೆಯನ್ನು, ಭೂಯಃ— ಮತ್ತು, ವಿಧಾಯ—ಮಾಡಿ, ಪ್ರಾತಃ ಬೆಳಿಗ್ಗೆ, ಯುದ್ಧಂ - ಸಮರವನ್ನು, ಆಕಾಂಕ್ಷಮಾಣಸ್ಸನ್—ಇಚ್ಛಿಸಿದವರಾಗಿ, ಯಯೌ - ಹೋದರು ॥೩೭॥

ಪದ್ಮವ್ಯೂಹಂವ್ಯೂಹ್ಯಪರೈರಭೇದ್ಯಂವರಾದ್ವಿಷ್ಣೋಸ್ತಸ್ಯಮಂತ್ರಂಚ ಜಪ್ತ್ವಾ ॥
ಪಾರ್ಥಾಶ್ಚತಂಪ್ರಾಪುರ್ಯತೇಽರ್ಜುನೇನ ಸಂಶಪ್ತಕೈರ್ಯುಯುಧೇಸೋಽಪಿವೀರಃ ॥೩೮॥

ತಸ್ಯ—ಆ ವಿಷ್ಣುವಿನ, ಮಂತ್ರಂ— ಮಂತ್ರವನ್ನು, ಜಪ್ತ್ವಾ — ಜಪಿಸಿ, ವಿಷ್ಣೋಃ — ವಿಷ್ಣುವಿನ, ವರಾತ್ — ವರದಿಂದ, ಅಂದರೆ ವೈಷ್ಣವಮಂತ್ರವನ್ನು ಜಪಿಸಿವ್ಯೂಹವನ್ನು ಮಾಡಿದರೆ, ಆ ವ್ಯೂಹವು ಅಭೇದ್ಯವಾಗಲಿ ಎಂಬ ವಿಷ್ಣುವಿನ ವರದಿಂದ, ಪರೈಃ — ಶತ್ರುಗಳಿಂದ, ಅಭೇದ್ಯಂ — ಭೇದಿಸಲಂ ಅಶಕ್ಯವಾದ, ಪದ್ಮವ್ಯೂಹಂ — ಪದ್ಮಾಕಾರವಾಗಿ ಸೈನ್ಯದ

ವಿನ್ಯಾಸವನ್ನು, ವ್ಯೂಹ್ಯ – ಮಾಡಿ, ಯಯೌ – ದ್ರೋಣರು ಹೋದರು. ಅರ್ಜುನೇನ – ಅರ್ಜುನನಿಂದ, ಋತೇ –ಹೊರತು, ಪಾರ್ಥಾಃ–ಪಾಂಡವರು, ತಂ – ಆವ್ಯೂಹವನ್ನು, ಪ್ರಾಪುಃ— ಹೊಂದಿದರು. ವೀರಃ– ಪ್ರರಾಕ್ರಮಿಯಾದ, ಸೋಪಿ— ಆ ಅರ್ಜುನನಾದರೂ, ಸಂಶಪ್ತಕೈಃ— ಸಂಶಪ್ತಕರಿಂದ, ಯುಯುಧೇ – ಯುದ್ಧಮಾಡಿದನು. ॥೩೮॥

ಪಾರ್ಥಾವ್ಯೂಹಂಚತಂಪ್ರಾಪ್ಯ ನಾಶಕನ್ಭೇತ್ತುಮುದ್ಯತಾಃ ॥
ಜಾನಂಶ್ಚಪ್ರತಿಭಾಯೋಗಾತ್ಕಾಮ್ಯಂ ನೈವಾಜಪನ್ಮನುಂ ॥೩೯॥

ಭೀಮೋಯುಧಿಷ್ಠಿರಸ್ತತ್ರ ತಜ್ಜ್ಞಂ ಸೌಭದ್ರಮಬ್ರವೀತ್ ॥
ಭಿಂಧಿವ್ಯೂಹಮಿಮಂತಾತವಯಂತ್ವಾಮನುಯಾಮಹೇ ॥೪೦॥

ಪಾರ್ಥಾಃ– ಪಾಂಡವರು, ತಂ ವ್ಯೂಹಂ ಆ – ಸೈನ್ಯವಿನ್ಯಾಸವನ್ನು, ಪ್ರಾಪ್ಯ— ಹೊಂದಿ, ಭೇತ್ತುಂ – ಭೇದಿಸಲು ಉದ್ಯತಾಅಪಿ —ಉದ್ಯುಕ್ತರಾದರೂ ಕೂಡ, ನಾಶಕನ್– ಸಮರ್ಥರಾಗಲಿಲ್ಲ, ಭೀಮಃ – ಭೀಮನು, ಪ್ರತಿಭಾಯೋಗಾತ್ – ಸ್ವಾಭಾವಿಕವಾದಪ್ರಜ್ಞೆಇರುವುದರಿಂದ, ಜಾನಂಶ್ಚ – ವ್ಯೂಹಭೇದನವನ್ನು ತಿಳಿದವನಾದರೂ, ಕಾಮ್ಯಂ – ಫಲೋದ್ದೇಶಕವಾದ, ಮಂತ್ರಂ – ಮಂತ್ರವನ್ನು, ನೈವಾಜಪತ್ – ಜಪಿಸಲೇ ಇಲ್ಲ. ತತ್ರ–ಆಗ, ಯುಧಿಷ್ಠಿರಃ – ಧರ್ಮರಾಜನು, ತಜ್ಜ್ಞಂ—ವ್ಯೂಹ ಭೇದವನ್ನು ತಿಳಿದಿರುವ, ಸೌಭದ್ರಂ – ಸುಭದ್ರೆಯಮಗನಾದ ಅಭಿಮನ್ಯುವನ್ನು ಕುರಿತು, ಹೇ ತಾತ–ಎಲೋಮಗನೇ, ಇಮಂ ವ್ಯೂಹಂ – ಈ ವ್ಯೂಹವನ್ನು, ಭಿಂಧಿ — ಭೇದಿಸು. ವಯಂ– ನಾವು, ತ್ವಾಂ – ನಿನ್ನನ್ನು ಅನುಯಾಮಹೇ – ಅನುಸರಿಸಿ ಬರುತ್ತೇವೆ, ಇತಿ – ಎಂದು, ಅಬ್ರವೀತ್ —ಹೇಳಿದನು. ॥೩೯॥೪೦॥

ಸಏವಮುಕ್ತೋರಥಿನಾಂಪ್ರಬರ್ಹೋ ವಿವೇಶಭಿತ್ವಾದ್ವಿಷತಾಂ ಚಮೂಂ ತಾಂ ॥
ಅನ್ವೇವತಂ ವಾಯುಸುತಾದಯಶ್ಚ ವಿವಕ್ಷವಃಸ್ಮೈಂಧವೇನೈವ ರುದ್ಧಾಃ ॥೪೧॥

ವರೇಣರುದ್ರಸ್ಯನಿರುಧ್ಯಮಾನೋ ಜಯದ್ರಥೇನಾತ್ರ ವೃಕೋದರಸ್ತು ॥
ವಿಷ್ಣೋರಭೀಷ್ಟಂವಧಮಾರ್ಜುನೇಸ್ತದಾ ವಿಜ್ಞಾಯಶಕ್ತೋಪಿನಚಾತ್ಯವರ್ತತ ॥೪೨॥

ಏವಂ — ಈ ರೀತಿಯಾಗಿ, ಉಕ್ತಃ – ಯುಧಿಷ್ಠಿರನಿಂದ ಹೇಳಿಸಿಕೊಳ್ಳಲ್ಪಟ್ಟ, ರಥಿನಾಂ — ರಥಿಕರ ಮಧ್ಯದಲ್ಲಿ, ಪ್ರಬರ್ಹಃ – ಶ್ರೇಷ್ಠನಾದ, ಸಃ—ಆ ಅಭಿಮನ್ಯುವು, ಭಿತ್ವಾ – ವ್ಯೂಹವನ್ನು ಭೇದಿಸಿ, ದ್ವಿಷತಾಂ– ಶತ್ರುಗಳಾದ ಕೌರವರ ತಾಂ ಚಮೂಂ – ವ್ಯೂಹವಿರುವ ಸೇನೆಯನ್ನು, ವಿವೇಶ–ಪ್ರವೇಶಿಸಿದನು, ತಂ – ಆ ಅಭಿಮನ್ಯುವನ್ನು, ಅನ್ವೇವ–ಅನು-ಸರಿಸಿಯೇ, ವಿವಕ್ಷವಃ— ವ್ಯೂಹವನ್ನು ಪ್ರವೇಶಿಸಲು ಇಚ್ಛಿಸುವ, ವಾಯಸುತಾದಯಃ – ಭೀಮಸೇನನೇ ಮೊದಲಾದವರು ರುದ್ರಸ್ಯ – ರುದ್ರನ, ವರೇಣೈವ – ವರದಿಂದಲೇ. ಜಯದ್ರಥೇನ – ಸೈಂಧವನಿಂದ, ರುದ್ಧಾಃ— ತಡೆಯಲ್ಪಟ್ಟರು, ಅತ್ರ– ಈ ಯುದ್ಧದಲ್ಲಿ, ಜಯದ್ರಥೇನ—ಸೈಂಧವನಿಂದ, ನಿರುಧ್ಯಮಾನಃ — ತಡೆಯಲ್ಪಟ್ಟ, ವೃಕೋದರಸ್ತು – ಭೀಮನಾದರೂ, ಶಕ್ತೋಪಿ—ಸೈಂಧವನನ್ನು ಗೆಲ್ಲಲು ಸಮರ್ಥನಾದಾಗ್ಯೂ, ತದಾ – ಆಗ. ಆರ್ಜುನೇಃ – ಅರ್ಜುನನ ಮಗನಾದ ಅಭಿಮನ್ಯು ವಿನ, ವಧಂ – ನಾಶವನ್ನು,ವಿಷ್ಣೋಃ— ಶ್ರೀಕೃಷ್ಣನ, ಅಭೀಷ್ಟಂ – ಇಷ್ಟವನ್ನಾಗಿ, ವಿಜ್ಞಾಯ – ತಿಳಿದು, ನಾತ್ಯವರ್ತತ– ಸೈಂಧವನನ್ನು ಅತಿಕ್ರಮಿಸಿ ಹೋಗಲಿಲ್ಲ. ॥೪೧॥೪೨॥

ಜಯದ್ರಥಸ್ಥೇನ ವೃಷಧ್ವಜೇನ ಪ್ರಯುಧ್ಯಮಾನೇಷು ವೃಕೋದರಾದಿಷು ॥
ಪ್ರವಿಶ್ಯವೀರಃ ಸಧನಂಜಯಾತ್ಮಜೋವಿಲೋಡಯಾಮಾಸ ಪರೋರುಸೇನಾಂ ॥೪೩॥

ವೃಕೋದರಾದಿಷು—ಭೀಮಸೇನನೇ ಮೊದಲಾದವರು, ಜಯದ್ರಥಸ್ಥೇನ—ಸೈಂಧವನಲ್ಲಿರುವ, ವೃಷಧ್ವಜೇನ—ಎತ್ತು ಧ್ವಜದಲ್ಲಿರುವ ರುದ್ರನಿಂದ, ಪ್ರಯುಧ್ಯಮಾನೇಷುಸತ್ಸು – ಯುದ್ಧಮಾಡುತ್ತಿರಲು, ವೀರಃ – ಪರಾಕ್ರಮಿಯಾದ, ಧನಂಜಯಾತ್ಮಜಃ – ಅರ್ಜುನನ ಮಗನಾದ, ಸಃ – ಆ ಅಭಿಮನ್ಯುವು, ಪ್ರವಿಶ್ಯ—ವ್ಯೂಹವನ್ನು ಪ್ರವೇಶಿಸಿ, ಪರೋರುಸೇನಾಂ—ಶತ್ರುಗಳ ಉತ್ಕೃಷ್ಟವಾದ ಬಹಳವಾದ, ಸೈನ್ಯವನ್ನು, ವಿಲೋಡಯಾಮಾಸ—ಕದಡಿಸಿದನು. ॥೪೩॥

ಸದ್ರೋಣದುರ್ಯೋಧನ ಕರ್ಣಶಲ್ಯದ್ರೌಣ್ಯಗ್ರಣೀಭಿಃ ಕೃತವರ್ಮಯುಕ್ತೈಃ ॥
ರುದ್ಧಶ್ಚಚಾರಾರಿಬಲೇಷ್ವಭೀತಃ ಶಿರಾಂಸಿಕೃಂತಂಸ್ತದನುವ್ರತಾನಾಂ ॥೪೪॥

ಕೃತವರ್ಮಯುಕ್ತೈಃ– ಕೃತವರ್ಮನಿಂದಕೂಡಿದ,ದ್ರೋಣದುರ್ಯೋಧನಕರ್ಣಶಲ್ಯದ್ರೌಣ್ಯಗ್ರಣೀಭಿಃ–ದ್ರೋಣರು, ದುರ್ಯೋಧನನು, ಕರ್ಣನು, ಶಲ್ಯನು, ಅಶ್ವತ್ಥಾಮನು ಇವರೇ ಅಗ್ರಗಣ್ಯರಾಗಿರುವವರಿಂದ, ಸಃ – ಆ ಅಭಿಮನ್ಯುವು, ರುದ್ಧಃ— ತಡೆಯಲ್ಪಟ್ಟವನಾದರೂ, ಅಭೀತಸ್ಸನ್ – ಭಯರಹಿತನಾಗಿ, ತದನುವ್ರತಾನಾಂ – ದ್ರೋಣಾದಿಗಳನ್ನು ಅನುಸರಿಸಿದವರ, ಶಿರಾಂಸಿ – ತಲೆಗಳನ್ನು, ಕೃಂತನ್ಸನ್ – ಕತ್ತರಿಸುವವನಾಗಿ, ಅರಿಬಲೇಷು — ಶತ್ರುಗಳ ಸೈನ್ಯಗಳಲ್ಲಿ ಚಚಾರ– ಸಂಚರಿಸಿದನು. ॥೪೪॥

ಸಲಕ್ಷಣಂರಾಜಸುತಂ ಪ್ರಸಹ್ಯಪಿತುಃಸಮೀಪೇऽನಯದಾಶುಮೃತ್ಯವೇ ॥
ಬೃಹದ್ಬಲಂಚೋತ್ತಮವೀರ್ಯಕರ್ಮಾ ವರಂರಥಾನಾಮಯುತಂ ಪತತ್ರಿಭಿಃ ॥೪೫॥

ಸಃ–ಆ ಅಭಿಮನ್ಯುವು, ರಾಜಸುತಂ–ದುರ್ಯೋಧನನ ಮಗನಾದ, ಲಕ್ಷಣಂ – ಲಕ್ಷಣನನ್ನು, ಪಿತುಃ– ತಂದೆಯಾದ ದುರ್ಯೋಧನನ, ಸಮೀಪೇ – ಹತ್ತಿರದಲ್ಲಿ, ಪ್ರಸಹ್ಯ—ಬಲಾತ್ಕರಿಸಿ, ಆಶು– ಕೂಡಲೇ, ಮೃತ್ಯವೇ— ಯಮನ ಸಮೀಪಕ್ಕೆ ಅನಯತ್–ಕಳುಹಿಸಿದನು (ಕೊಂದನು.) ಉತ್ತಮವೀರ್ಯಕರ್ಮಾ – ಶ್ರೇಷ್ಠವಾದಪರಾಕ್ರಮವೂ, ಯುದ್ಧಾದಿ ವ್ಯಾಪಾರವೂ ಇವುಗಳುಳ್ಳ ಅಭಿಮನ್ಯುವು, ಬೃಹದ್ಬಲಂ – ಬೃಹದ್ಬಲನೆಂಬರಾಜನನ್ನೂ, ವರಂ- ಬಲಅಸ್ತ್ರಾದಿಗಳಿಂದಉತ್ತಮವಾದ, ಬೃಹದ್ಬಲಂ — ಬಹಳಸಾಮರ್ಥ್ಯವುಳ್ಳ, ರಥಾನಾಂ– ರಥಿಕರ, ಅಯುತಂ — ಹತ್ತುಸಾವಿರವನ್ನು, ಪತತ್ರಿಭಿಃ — ಬಾಣಗಳಿಂದ, ಮೃತ್ಯವೇ ಅನಯತ್ — ಯಮಲೋಕಕ್ಕೆಕಳುಹಿಸಿದನು. ॥೪೫॥

ದ್ರೋಣಾದಯಸ್ತಂ ಹರಿಕೋಪಭೀತಾಃಪ್ರತ್ಯಕ್ಷತೋಹಂತುಮಶಕ್ನುವಂತಃ ॥
ಸಂಮಂತ್ರ್ಯಕರ್ಣಂಪುರತೋನಿಧಾಯಚಕ್ರುರ್ವಿಚಾಪಾಶ್ವರಥಂ ಕ್ಷಣೇನ ॥೪೬॥

ದ್ರೋಣಾದಯಃ – ದ್ರೋಣರೇಮೊದಲಾದವರು, ಹರಿಕೋಪಭೀತಾಸ್ಸಂತಃ – ಶ್ರೀಕೃಷ್ಣನ ಸಿಟ್ಟಿನಿಂದ ಹೆದರಿದವರಾಗಿ, ತಂ– ಆ ಅಭಿಮನ್ಯುವನ್ನು, ಪ್ರತ್ಯಕ್ಷತಃ — ಎದುರಿನಿಂದ, ಹಂತುಂ – ಕೊಲ್ಲಲು, ಅಶಕ್ನುವಂತಃಸಂತಃ – ಅಸಮರ್ಥರಾಗಿ, ಸಂಮಂತ್ರ್ಯ – ಆಲೋಚಿಸಿ, ಕರ್ಣಂ – ಕರ್ಣನನ್ನು, ಪುರತಃನಿಧಾಯ — ಮುಂದೆಮಾಡಿಕೊಂಡು, ಕ್ಷಣೇನ – ಕ್ಷಣಕಾಲದಿಂದ, ವಿಚಾಪಾಶ್ವರಥಂ — ಹೋಗಲ್ಪಟ್ಟ ಧನುಸ್ಸು, ಕುದುರೆಗಳು, ರಥವುಇವುಗಳುಳ್ಳವನನ್ನಾಗಿ, ಚಕ್ರುಃ – ಮಾಡಿದರು. ॥೪೬॥

ಕರ್ಣೋಧನುಸ್ತಸ್ಯಕೃಪಶ್ಚಸಾರಥಿಂ ದ್ರೋಣೋಹಯಾನಾಶುವಿಧೂಯಸಾಯುಕೈಃ ॥
ಸಚರ್ಮಖಡ್ಗಂ ರಥಚಕ್ರಮುಸ್ಯ ಪ್ರಣುದ್ಯಹಸ್ತಸ್ಥಿತಮೇವಚಕ್ರುಃ ॥೪೭॥

ಕರ್ಣಃ —ಕರ್ಣನು, ತಸ್ಯ, – ಆ ಅಭಿಮನ್ಯುವಿನ, ಧನುಃ— ಬಿಲ್ಲನ್ನೂ, ಕೃಪಶ್ಚ – ಕೃಪಾಚಾರ್ಯರೊ ಕೂಡ, ಸಾರಥಿಂ – ಸಾರಥಿಯನ್ನೂ, ದ್ರೋಣಃ— ದ್ರೋಣಾಚಾರ್ಯರು, ಹಯಾನ್ — ಕುದುರೆಗಳನ್ನೂ, ಆಶು — ಕೂಡಲೇ,

ವಿಧೂಯ — ನಾಶಮಾಡಿ, ಸಾಯಕೈಃ— ಆ ಮೂವರೂ ಬಾಣಗಳಿಂದ, ಅಸ್ಯ – ಈ ಅಭಿಮನ್ಯುವಿನ, ಸಚರ್ಮಖಡ್ಗಂ— ಚರ್ಮಸಹಿತವಾದ ಖಡ್ಗವನ್ನೂ, ರಥಚಕ್ರಂ – ರಥಚಕ್ರಕ್ಕೆ ಸದೃಶವಾದ ಚಕ್ರಾಖ್ಯಾಯುಧವನ್ನೂ, ಪ್ರಣುದ್ಯ – ತುಂಡು ಮಾಡಿ, ಹಸ್ತಸ್ಥಿತಮೇವ—ಕೈಗಳಿಂದ ಇತಕ್ಕವನನ್ನಾಗಿಯೇ, ಚಕ್ರುಃ – ಪಾಡಿದರು; ಸಂಹರಿಸಲಿಲ್ಲ. ॥೪೭॥

ಭೀತೇಷುಕೃಷ್ಣಾದಥ ತದ್ವಧಾಯ ತೇಷ್ವಾಶಸಾದಾಶು ಗದಾಯುಧಂಗದೀ ॥
ದೌಶ್ಶಾಸನಿಸ್ತ್ವಯುಗಪಚ್ಚಮುಮ್ಮುರ್ತುರ್ಗದಾಭಿಘಾತೇನ ಮಿಥೋಽತಿಪೌರುಷೌ ॥೪೮॥

ಅಥ – ಅನಂತರ, ತೇಷು— ಆ ಕರ್ಣಾದಿಗಳು, ತದ್ವಧಾಯ — ಆ ಅಭಿಮನ್ಯುವನ್ನು ಕೊಲ್ಲುವದಕ್ಕೋಸ್ಕರ, ಕೃಷ್ಣಾತ್ – ಶ್ರೀಕೃಷ್ಣನಿಂದ, ಭೀತೇಷುಸತ್ಸು – ಭಯಪಡುತ್ತಿರಲು, ಆಶು – ಕೂಡಲೇ, ಗದೀ–ಗದೆಯುಳ್ಳ, ದೌಶ್ಶಾಸನಿಃ– ದುಃಶಾಸನನ ಮಗನು, ಗದಾಯುಧಂ — ಗದೆಯು ಆಯುಧವಾಗಿಉಳ್ಳ ಅಭಿಮನ್ಯುವನ್ನು, ಆ ಸಸಾದ —ಹೊಂದಿದನು. ಅತಿಪೌರುಷೌ - ಬಹಳಪರಾಕ್ರಮವುಳ್ಳ, ತೌ — ಆ ಅಭಿಮನ್ಯು, ದುಃಶಾಸನನ ಮಗ ಇವರಿಬ್ಬರೂ, ಮಿಥಃ–ಪರಸ್ಪರವಾಗಿ ಗದಾಭಿಘಾತೇನ — ಗದೆಯಹೊಡೆತದಿಂದ, ಯುಗಪತ್ — ಏಕಕಾಲದಲ್ಲಿಯೇ, ಮುಮ್ಮುರ್ತುಃ - ಸತ್ತರು. ॥೪೮॥

ತಸ್ಮಿನ್ಹತೇ ಶತ್ರುರವಂನಿಶಮ್ಯಹರ್ಷೋದ್ಭವಂ ಮಾರುತಿರುಗ್ರವಿಕ್ರಮಃ ॥
ವಿಜಿತ್ಯಸರ್ವಾನಪಿಸೈಂಧವಾದೀನ್ ಯುಧಿಷ್ಠಿರಸ್ಯಾನುಮತೇನ್ಯಷೀದತ್ ॥೪೯॥

ತಸ್ಮಿನ್ – ಆ ಅಭಿಮನ್ಯುವು, ಹತೇಸತಿ – ಮೃತನಾಗುತ್ತಿರಲು, ಹರ್ಷೋದ್ಭವಂ – ಸಂತೋಷದಿಂದಉಂಟಾದ, ಶತ್ರುರವಂ — ಶತ್ರುಗಳಧ್ವನಿಯನ್ನು, ಉಗ್ರವಿಕ್ರಮಃ – ಕ್ರೂರವಾದಪರಾಕ್ರಮವುಳ್ಳ, ಮಾರುತಿಃ–ಭೀಮನು, ನಿಶಮ್ಯ– ಕೇಳಿ, ಸೈಂಧವಾದೀನ್ — ಜಯದ್ರಥನೇ ಮೊದಲಾಗಿಉಳ್ಳ, ಸರ್ವಾನಪಿ — ಎಲ್ಲರನ್ನೂ ಕೂಡ, ವಿಜಿತ್ಯ —- ಗೆದ್ದು, ಯುಧಿಷ್ಠಿರಸ್ಯ – ಧರ್ಮರಾಜನ, ಅನುಮತೇ — ಅನುಮತಿಯಿಂದ, ನ್ಯಷೀದತ್ — ಕುಳಿತನು. ॥೪೯॥

ವ್ಯಾಸಸ್ತದಾತಾನಮಿತಾತ್ಮವೈಭವೋಯುಧಿಷ್ಠಿರಾದೀನ್ಗ್ಲಪಿತಾನಬೋಧಯತ್ ॥
ವಿಜಿತ್ಯಸಂಶಪ್ತಕಪೂಗಮುಗ್ರೋನಿಶಾಗಮೇವಾಸವಿರಾಪಸಾಚ್ಯುತಃ ॥೫೦॥

ತದಾ – ಆಗ, ಅಮಿತಾತ್ಮವೈಭವಃ– ಅಪರಿಮಿತವಾದ, ಸ್ವರೂಪಭೂತವಾದ ಜ್ಞಾನಾದಿಸಂಪತ್ತುಳ್ಳ, ವ್ಯಾಸಃ — ವೇದವ್ಯಾಸರು, ಗ್ಲಪಿತಾನ್–ದುಃಖಿತರಾದ, ಯುಧಿಷ್ಠಿರಾದೀನ್ – ಧರ್ಮರಾಜನೇ ಮೊದಲಾದವರನ್ನು, ಅಬೋಧಯತ್– ಬೋಧಿಸಿದರು, ಉಗ್ರಃ - ಭಯಂಕರನಾದ, ಸಾಚ್ಯುತಃ – ಶ್ರೀಕೃಷ್ಣನಿಂದಕೂಡಿದ, ವಾಸವಿಃ- ಅರ್ಜುನನು, ಸಂಶಪ್ತಕಪೂಗಂ- ಸಂಶಪ್ತಕರ ಸಮೂಹವನ್ನು, ವಿಜಿತ್ಯ-ಗೆದ್ದು, ನಿಶಾಗಮೇ — ಸಾಯಂಕಾಲದಲ್ಲಿ, ಆಪ–ಶಿಬಿರವನ್ನು ಹೊಂದಿದನು ॥೫೦॥

ನಿಶಮ್ಯಪುತ್ರಸ್ಯವಧಂ ಭೃಶಾರ್ತಃ ಪ್ರತಿಶ್ರವಂಸೋಽಥಚಕಾರವೀರಃ ॥
ಜಯದ್ರಥಸ್ಯೈವವಧೇನಿಶಾಯಾಂ ಸ್ವಪ್ನೇಽನಯತ್ತಂಗಿರಿಶಾಂತಿಕಂಹರಿಃ ॥೫೧॥

ಅಥ – ಅನಂತರ, ಪುತ್ರಸ್ಯ — ಮಗನಾದ ಅಭಿಮನ್ಯುವಿನ, ವಧಂ – ನಾಶವನ್ನು, ನಿಶಮ್ಯ—ಕೇಳಿ, ಭೃಶಾರ್ತಃ– ಅತ್ಯಂತ ದುಃಖಿತನಾದ, ವೀರಃ — ಪರಾಕ್ರಮಿಯಾದ, ಸಃ – ಆ ಅರ್ಜುನನು, ಜಯದ್ರಥಸ್ಯ — ಸೈಂಧವನ, ವಧೇ – ಸಂಹಾರ ವಿಷಯಲ್ಲಿ, ಪ್ರತಿಶ್ರವಂ – ಪ್ರತಿಜ್ಞೆಯನ್ನು, ಚಕಾರ—ಮಾಡಿದನು. ಹರಿಃ – ಶ್ರೀಕೃಷ್ಣನು, ತಂ— ಆ ಅರ್ಜುನನನ್ನು, ನಿಶಾಯಾಂ – ರಾತ್ರಿಯಲ್ಲಿ, ಸ್ವಪ್ನೇ – ಸ್ವಪ್ನದಲ್ಲಿ, ಗಿರಿಶಾಂತಿಕಂ — ರುದ್ರನಸಮೀಪಕ್ಕೆ, ಅನಯತ್— ಕರೆದು ಕೊಂಡು ಹೋದನು. ॥೫೧॥

ಭಾ. ಅ. ೩೬-೫೧ ಭಗದತ್ತನು ಸತ್ತದ್ದರಿಂದ, ಧರ್ಮರಾಜನನ್ನು ಹಿಡಿಯದಿದ್ದದ್ದರಿಂದ, ಅತಿ ವಿಷಾದವನ್ನು ಹೊಂದಿದ, ದುರ್ಯೋಧನನು ದ್ರೋಣರ ಹತ್ತಿರ ನಿಂದೆಯ ಮಾತುಗಳನ್ನಾಡಿದಾಗ, ಅವರು 'ನಾಳಿನ ದಿನ ಅರ್ಜುನನು ದೂರಕ್ಕೆ ಹೋಗುತ್ತಿರಲು ಧರ್ಮರಾಜನನ್ನಾದರೂ ಹಿಡಿಯುತ್ತೇನೆ ಅಥವಾ ಅವನಂತಹ ಅವನ ಪಕ್ಷದ ಮಹಾರಥಿಕನನ್ನಾದರೂ ಸಂಹರಿಸುತ್ತೇನೆ' ಎಂದು ಪ್ರತಿಜ್ಞಾ ಮಾಡಿ, ಪ್ರಾತಃ ಯುದ್ಧಕ್ಕೆ ಹೋದರು. ಪದ್ಮಾಕಾರದಲ್ಲಿ ಸೈನ್ಯವನ್ನು ನಿಲ್ಲಿಸಿ ಆ ಪದ್ಮವ್ಯೂಹಕ್ಕೆ ವೈಷ್ಣವ ಮಂತ್ರವನ್ನು ಜಪಿಸಿದರು. ಆ ವ್ಯೂಹದ ಸಮೀಪಕ್ಕೆ ಅರ್ಜುನನನ್ನು ಬಿಟ್ಟು ಉಳಿದ ಪಾಂಡವರೆಲ್ಲ ಬಂದರು. ಅರ್ಜುನನು ಸಂಶಪ್ತಕ ಗಣದವರ ಜೊತೆಗೆ ಯುದ್ಧಮಾಡಲು ಹೋದನು. ಭೀಮಸೇನದೇವರು ಆ ವ್ಯೂಹವನ್ನು ಮಂತ್ರದಿಂದ ಭೇದಿಸಲು ಸಮರ್ಥರಾದರೂ ಕೂಡ ಕಾರ್ಯಫಲಕ್ಕಾಗಿ ಮಂತ್ರೋಪಯೋಗ ಮಾಡಲಿಲ್ಲ; ಉಳಿದವರಿಗೆ ಶಕ್ಯವಾಗಲಿಲ್ಲ. ಆಗ ಧರ್ಮರಾಜನು ಆ ವ್ಯೂಹಭೇದನ ಮಂತ್ರವನ್ನು ತಿಳಿದ ಅಭಿಮನ್ಯುವಿಗೆ ಈ ಕಾರ್ಯ ಮಾಡಲು ಹೇಳಿದನು. ನಾವು ನಿನ್ನ ಹಿಂದೆ ಬರುವೆವು ಎಂದೂ ಹೇಳಿದನು. ಆಗ ಅಭಿಮನ್ಯುವು ಪದ್ಮವ್ಯೂಹವನ್ನು ಭೇದಿಸಿ, ಸೈನ್ಯವನ್ನು ಪ್ರವೇಶಿಸಿದನು. ಅವನ ಹಿಂದೆಯೇ ಭೀನುಸೇನನೇ ಮೊದಲಾದ ಪಾಂಡವರೂ ಪ್ರವೇಶಿಸಲು ಪ್ರವೃತ್ತರಾದಾಗ ಜಯದ್ರಥನು ತಡೆದನು. ರುದ್ರವರದಿಂದಾಗಿ ಅವನಿಗೆ ಆ ಶಕ್ತಿಯು ಬಂದಿತ್ತು. ಆ ವರವನ್ನು ಮೀರಿ ಜಯದ್ರಥನನ್ನು ನಿವಾರಿಸಿ, ಮೀರಿ ಪ್ರವೇಶಮಾಡಲು ಶ್ರೀಭೀಮಸೇನದೇವರು ಶಕ್ತರಾದರೂ ಕೂಡ, ಆಗ ಅಭಿಮನ್ಯುವಿನ ವಧವು ಶ್ರೀಕೃಷ್ಣನಿಗೆ ಅಭಿಪ್ರೇತವಾದದ್ದು ಎಂದು ತಿಳಿದು ಜಯದ್ರಥನನ್ನು ಮೀರಿ ಒಳಗೆ ಹೋಗಲೇ ಇಲ್ಲ. ಹೀಗೆ ಹೊರಗೆಯೇ ಪಾಂಡವರೆಲ್ಲರೂ ಜಯದ್ರಥನೊಳಗೆ ಇರುವ ರುದ್ರದೇವರ ಜೊತೆ ಯುದ್ಧಮಾಡುತ್ತಿದ್ದರು. ಒಳಗೆ ಅಭಿಮನ್ಯು ಒಬ್ಬನೇ ಕೌರವ ಸೈನ್ಯವನ್ನು ಬೆಲ್ಲಾಪಿಲ್ಲಿ ಮಾಡುತ್ತಿದ್ದಾನೆ. ಬಹಳ ಸೈನ್ಯವನ್ನು ನಾಶಮಾಡುತ್ತಿದ್ದನು. ಇದನ್ನು ನೋಡಿ ಗಾಬರಿಯಾದ ಕೌರವರು ಒಬ್ಬೊಬ್ಬರು ಇವನನ್ನು ಎದುರಿಸಲು ಅಶಕ್ತರಾಗಿ ಎಲ್ಲರೂ (ದ್ರೋಣ, ದುರ್ಯೋಧನ, ಕರ್ಣ, ಶಲ್ಯ, ಅಶ್ವತ್ಥಾಮ, ಕೃತವರ್ಮ ಇವರೇ ಮೊದಲಾದವರು) ಒಟ್ಟಾಗಿ ಎದುರಿಸಿ ಯುದ್ಧ ಮಾಡುತ್ತಿದ್ದರು. ಆದರೂ ಕೂಡ ಅಭಿಮನ್ಯುವು ಸ್ವಲ್ಪವೂ ಹೆದರದೆಯೇ ಕೌರವ ಸೈನ್ಯದ ಶಿರಸ್ಸುಗಳನ್ನು ಕತ್ತರಿಸುತ್ತಿದ್ದನು. ದುರ್ಯೋಧನನ ಎದುರೇ,ಅವನ ಪುತ್ರನಾದ ಲಕ್ಷಣಕುಮಾರನನ್ನು ಸಂಹರಿಸಿದನು. ಶಕುನಿಯ ತಮ್ಮನಾದ ಬೃಹದ್ಬಲನನ್ನು, ಹತ್ತುಸಾವಿರ ರಥಿಕರನ್ನು ಸಂಹರಿಸಿದನು. ದ್ರೋಣಾದಿಗಳು ಅಭಿಮನ್ಯುವಿನ ಎದುರಿಗೆ ಬಂದು ಅವನನ್ನು ಸಂಹರಿಸಿದರೆ ಶ್ರೀಕೃಷ್ಣನ ಕ್ರೋಧಕ್ಕೆ ~~ಪಾತ್ರರಾಗಬಹುದು ಎಂದುಕೊಂಡು ಏಕೂರು ಬರಲು ಅಸಮರ್ಥರಾಗಿ, ಗುಪ್ತ ಆಲೋಚನೆ ಮಾಡಿ ಕರ್ಣನನ್ನು ಮುಂದೆ~~ ಮಾಡಿಕೊಂಡು ಎಲ್ಲರೂ ಏಕಕಾಲದಲ್ಲಿ ಅವನ ಮೇಲೆ ಯುದ್ಧಮಾಡುತ್ತಾ ಧನುಸ್ಸನ್ನು ಕರ್ಣನು ಕತ್ತರಿಸಿದನು; ಕೃಪಾಚಾರ್ಯರು ಸಾರಥಿಯನ್ನು ಕೊಂದರು; ದ್ರೋಣರು ಕುದುರೆಗಳನ್ನು ಕೊಂದರು; ಎಲ್ಲರೂ ಸೇರಿ ಅವನ ಖಡ್ಗ, ಢಾಲು, ಚಕ್ರಗಳನ್ನೂ ನಾಶಪಡಿಸಿದರು. ಹೀಗೆ ಅವನನ್ನು ಬರಿಗೈಯಿಂದ ಇರುವವನನ್ನಾಗಿ ಮಾಡಿದರು. ಆಗ ಅಭಿಮನ್ಯುವು ಗದೆಯನ್ನು ಹಿಡಿದು ಯುದ್ಧಕ್ಕೆ ನಿಂತಿರುತ್ತಿರಲು, ಅವನನ್ನು ಸಂಹರಿಸಲು ಇತರರು ಹೆದರುತ್ತಿರಲು, ದುಃಶಾಸನನ ಮಗನು ಗದಾಧಾರಿಯಾಗಿ ಬಂದಾಗ ಇಬ್ಬರೂ ಪರಸ್ಪರರನ್ನು ಏಕಕಾಲದಲ್ಲಿ ಹೊಡೆದುಕೊಂಡರು. ಆ ಹೊಡೆತಗಳಿಂದ ಇಬ್ಬರೂ ಏಕಕಾಲದಲ್ಲಿ ಮೃತರಾದರು. ಹೀಗೆ ಅಭಿಮನ್ಯುವು ಮಾಗಿದದ್ದರಿಂದ ಕೌರವರು ತುಂಬಾ ಸಂತಸದ ಧ್ವನಿಯನ್ನು ಮಾಡಿದಾಗ ಅದನ್ನು ಕೇಳಿದ, ಶತ್ರು ಭಯಂಕರ ಪರಾಕ್ರಮವುಳ್ಳ ಶ್ರೀಭೀಮರು ಜಯದ್ರಥನೇ ಮೊದಲಾದವರನ್ನು ಗೆದ್ದು ಇನ್ನೂ ಯುದ್ಧವನ್ನು ನಡೆಸುತ್ತಿರಲು ಧರ್ಮರಾಜನು ಬೇಡ ಎಂದದ್ದರಿಂದ ಯುದ್ಧವನ್ನು ನಿಲ್ಲಿಸಿ ಕುಳಿತರು. ಶ್ರೀವೇದವ್ಯಾಸದೇವರು ಬಂದು, ಪುತ್ರಶೋಕದಿಂದ ಕೂಡಿದ ಪಾಂಡವರನ್ನು ಕುರಿತು ತಿಳಿಹೇಳಿ ಸಮಾಧಾನಪಡಿಸಿದರು. ಇದೇ ಸಮಯಕ್ಕೆ ಅರ್ಜುನನು ಸಂಶಪ್ತಕರನ್ನು ಗೆದ್ದು, (ಅಚ್ಯುತ) ಶ್ರೀಕೃಷ್ಣನಿಂದ ಸಹಿತನಾಗಿ ರಾತ್ರಿಯು ಪ್ರಾರಂಭಕ್ಕೆ ಶಿಬಿರಕ್ಕೆ ಬಂದನು. ಪುತ್ರವಧವಾರ್ತೆಯನ್ನು ಕೇಳಿ ಬಹಳ ದುಃಖಪಟ್ಟು, ಮರುದಿನ ಸೂರ್ಯಾಸ್ತವಾಗುವದರೊಳಗೆ, ತನ್ನ ಮಗನಾದ ಅಭಿಮನ್ಯುವಿನನ ಮರಣಕ್ಕೆ ಕಾರಣನಾದ ಜಯದ್ರಥನ ಸಂಹಾರವನ್ನು ಮಾಡುವದಾಗಿ ಪ್ರತಿಜ್ಞೆಯನ್ನು ಮಾಡಿದನು. ಆ ರಾತ್ರಿಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಸ್ವಪ್ನದಲ್ಲಿ ಶ್ರೀರುದ್ರದೇವರ ಸಮೀಪಕ್ಕೆ ಕರೆದುಕೊಂಡು ಹೋದನು.

ಅವಃ — ಅರ್ಜುನನನ್ನು ರಕ್ಷಿಸುವದರಲ್ಲಿ ಶ್ರೀಕೃಷ್ಣನಿಗೆ ಶಕ್ತಿಯಿಲ್ಲದಿರುವದರಿಂದ ರುದ್ರನಸಮೀಪಕ್ಕೆ ಕರೆದುಕೊಂಡು ಹೋದನೋ ಎಂಬ ಶಂಕೆಯನ್ನು ಪರಿಹರಿಸುತ್ತಾರೆ.

ಸ್ವಯಮೇವಾಖಿಲಜಗದ್ರಕ್ಷಾದ್ಯಮಿತಶಕ್ತಿಮಾನ್ ॥
ಅಪ್ಯಚ್ಯುತೋಗುರುದ್ವಾರಾಪ್ರಸಾದಕೃದಹಂತ್ವಿತಿ ॥೫೨॥

ಜ್ಞಾಪಯನ್ಫಲ್ಗುನಸ್ಯಾಸ್ತ್ರಗುರುಂ ಗಿರಿಶಮಂಜಸಾ ॥
ಪ್ರಾಪಯಿತ್ವೈನಮೆವೈತತ್ಪ್ರಸಾದಾದಸ್ತ್ರಮುಲ್ಬಣಂ ॥
ಚಕ್ರೇತದರ್ಥಮೇವಾಸ್ಯ ಚಕ್ರೇರಕ್ಷಾಂತದಾತ್ಮಿಕಾಂ ॥೫೩॥

(ಶ್ರೀಕೃಷ್ಣನು) ಸ್ವಯಮೇವ – ತಾನೇ, ಅಖಿಲಜಗದ್ರಕ್ಷಾದ್ಯಮಿತಶಕ್ತಿಮಾನಪಿ – ಎಲ್ಲಜಗತ್ತಿನಪಾಲನಾದಿಗಳಲ್ಲಿ ಅಪರಿಮಿತಸಾಮರ್ಥ್ಯಉಳ್ಳವನಾದರೂ ಕೂಡ, ಅಚ್ಯುತಃ – ನಾಶರಹಿತನಾದ, ಅಹಂ– ನಾನು, ಗುರುದ್ವಾರಾ – ಗುರುಗಳ ಮುಖದಿಂದ, ಪ್ರಸಾದಕೃತ್ – ಅನುಗ್ರಹವನ್ನು ಮಾಡತಕ್ಕವನು, ಇತಿ — ಎಂಬುದಾಗಿ, ಜ್ಞಾಪಯಿತುಂ – ತಿಳಿಸುವದ ಕ್ಕೋಸ್ಕರ, ಫಲ್ಗುನಸ್ಯ – ಅರ್ಜುನನಿಗೆ, ಅಸ್ತ್ರಗುರುಂ– ಅಸ್ತ್ರಗುರುವಾದ, ಗಿರಿಶಂ— ರುದ್ರನನ್ನು, ಅಂಜಸಾ — ನಮ್ರಾ-ಭೂತನನ್ನಾಗಿ, ಏನಂ– ಈ ಅರ್ಜುನನನ್ನು, ಪ್ರಾಪಯಿತ್ವಾ – ಹೊಂದಿಸಿ, ಏತತ್ಪ್ರಸಾದಾದೇವ – ರುದ್ರನ ಅನುಗ್ರಹ ದಿಂದಲೇ, ತದರ್ಥಂ— ಅರ್ಜುನನರಕ್ಷಣೆಗಾಗಿ, ಅಸ್ತ್ರಂ – ಪಾಶುಪತಾಸ್ತ್ರವನ್ನು, ಉಲ್ಬಣಂ – ಸಾಮರ್ಥ್ಯಉಳ್ಳದ್ದನ್ನಾಗಿ, ಚಕ್ರೇ— ಮಾಡಿದನು. ಅಸ್ಯ – ಈ ಅರ್ಜುನನಿಗೆ, ತದಾತ್ಮಿಕಾಂ – ರುದ್ರದೇವತಾತ್ಮಕವಾದ, ರಕ್ಷಾಂ – ರಕ್ಷೆಯನ್ನು, ಚಕ್ರೇ – ಮಾಡಿದನು. ॥೫೨॥೫೩॥

ಸಾಂತ್ವಯಿತ್ವಾಸುಭದ್ರಾಂಚಗತ್ವೋಪಪ್ಲಾವ್ಯಮಚ್ಯುತಃ ॥
ಯೋಜಯಿತ್ವಾರಥಂಪ್ರಾತಃ ಸಾರ್ಜುನೋಯೋದ್ಧುಮಭ್ಯಯಾತ್ ॥೫೪॥

ಅಚ್ಯುತಃ— ಶ್ರೀಕೃಷ್ಣನು, ಉಪಪ್ಲಾವ್ಯಂ – ಉಪಪ್ಲಾವ್ಯನಗರವನ್ನು ಕುರಿತು, ಗತ್ವಾ– ಹೋಗಿ, ಸುಭದ್ರಾಂ– ಸುಭದ್ರೆಯನ್ನು, ಸಾಂತ್ವಯಿತ್ವಾ — ಸಮಾಧಾನಪಡಿಸಿ, ರಥಂ – ರಥವನ್ನು, ಯೋಜಯಿತ್ವಾ — ಕುದುರೆಗಳಿಂದ ಯುಕ್ತವಾಗುವಂತೆಮಾಡಿ, ಪ್ರಾತಃ—ಬೆಳಿಗ್ಗೆ, ಸಾರ್ಜುನಃ ಸನ್—ಅರ್ಜುನನಿಂದಕೂಡಿದವನಾಗಿ, ಯೋದ್ಧುಂ – ಯುದ್ಧ ಮಾಡಲು, ಅಭ್ಯಯಾತ್ — ಹೋದನು. ॥೫೪॥

ಶ್ರುತ್ವಾಪ್ರತಿಜ್ಞಾಂ ಪುರುಹೂತಸೂನೋಃದುರ್ಯೋಧನೇನಾರ್ಥಿತಃಸಿಂಧುರಾಜಂ ॥
ತ್ರಾತಾಸ್ಮ್ಯಹಂ ಸರ್ವಥೇತಿಪ್ರತಿಜ್ಞಾಂಕೃತ್ವಾದ್ರೋಣೋವ್ಯೂಹಮಭೇದ್ಯಮಾತನೋತ್ ॥೫೫॥

ಪುರುಹೂತಸೂನೋಃ – ಇಂದ್ರನಮಗನಾದ ಅರ್ಜುನನ, ಪ್ರತಿಜ್ಞಾಂ – ಪ್ರತಿಜ್ಞೆಯನ್ನು, ಶ್ರುತ್ವಾ — ಕೇಳಿ ದುರ್ಯೋಧನೇನ – ದುರ್ಯೋಧನನಿಂದ, ಅರ್ಥಿತಃ – ರಕ್ಷಿಸಲು ಪಾರ್ಥಿಸಿಕೊಳ್ಳಲ್ಪಟ್ಟ ದ್ರೋಣಾಚಾರ್ಯರು, ಅಹಂ— ನಾನು, ಸಿಂಧುರಾಜಂ — ಸೈಂಧವನನ್ನು, ಸರ್ವಥಾ – ಎಲ್ಲಾ ರೀತಿಯಿಂದ, ತ್ರಾತಾ–ರಕ್ಷಿಸತಕ್ಕವನು,ಅಸ್ಮಿ–ಆಗುತ್ತೇನೆ. ಇತಿ– ಎಂದು, ಪ್ರತಿಜ್ಞಾಂ – ಪ್ರತಿಜ್ಞೆಯನ್ನು, ಕೃತ್ವಾ – ಮಾಡಿ, ದ್ರೋಣಃ— ದ್ರೋಣರು, ಅಭೇದ್ಯಂ ಭೇದಿಸಲು ಅಶಕ್ಯವಾದ, ವ್ಯೂಹಂ – ಸೈನ್ಯದವಿನ್ಯಾಸವನ್ನು, ಆತನೋತ್ — ಮಾಡಿದರು. ॥೫೫॥

ಸದಿವ್ಯಮಗ್ರ್ಯಂಶಕಟಾಬ್ಜಚಕ್ರಂ ಕೃತ್ವಾಸ್ವಯಂ ವ್ಯೂಹಮುಖೇವ್ಯವಸ್ಥಿತಃ ॥
ಪೃಷ್ಠೇಕರ್ಣದ್ರೌಣಿಕೃಪೈಃಸಶಲ್ಯೈಃಜಯದ್ರಥಂಗುಪ್ತಮುಧಾತ್ಪರೈಶ್ಚ ॥೫೬॥

ಸಃ – ಆ ದ್ರೋಣರು, ದಿವ್ಯಂ— ದೇವತಾಅಭಿಮನ್ಯಮಾನವಾದ, ಶಕಟಾಬ್ಜಚಕ್ರಂ— ಹೊರಗೆ ಚಕ್ರಾಕಾರವಾದ, ಒಳಗಿನಭಾಗದಲ್ಲಿ ಚಕ್ರಾಕಾರವಾದ, ಆ ಎರಡರಮಧ್ಯದಲ್ಲಿ ಪದ್ಮಾಕಾರವಾದ ಹೀಗೆ ಮೂರುವ್ಯೂಹಗಳಿಂದ ಒಂದೇಕಡೆಯಲ್ಲಿ ನಿರ್ಮಿತವಾದವ್ಯೂಹವನ್ನು, ಕೃತ್ವಾ – ಮಾಡಿ, ಸ್ವಯಂ — ತಾನು ವ್ಯೂಹಮುಖೇ — ಸೈನ್ಯವಿನ್ಯಾಸದ ಮುಂಭಾಗದಲ್ಲಿ, ವ್ಯವಸ್ಥಿತಃ— ನಿಂತರು. ಸಶಲ್ಯೈಃ – ಶಲ್ಯನಿಂದಕೂಡಿದ, ಕರ್ಣದ್ರೌಣಿಕೃಪೈಃ — ಕರ್ಣನು, ಅಶ್ವತ್ಥಾಮನು, ಕೃಪಾಚಾರ್ಯ ಇವರಿಂದಲೂ, ಪರೈಶ್ಚ – ಸೌಮದತ್ತಿಮೊದಲಾದವರಿಂದಲೂ, ಗುಪ್ತಂ ರಕ್ಷಿಸಿಕೊಳ್ಳಲ್ಪಟ್ಟ, ಜಯದ್ರಥಂ – ಸೈಂಧವನನ್ನು, ಪೃಷ್ಠೇ – ವ್ಯೂಹದಹಿಂಭಾಗದಲ್ಲಿ, ಅಧಾತ್— ಸ್ಥಾಪಿಸಿದರು. ॥೫೬॥

ಅಥಾರ್ಜುನೋದಿವ್ಯರಥೋಪರಿಸ್ಥಿತಃಸುರಕ್ಷಿತಃಕೇಶವೇನಾವ್ಯಯೇನ ॥
ವಿಜಿತ್ಯದುರ್ಮರ್ಷಣಮುಗ್ರತೋಽಭ್ಯಯಾದ್ದ್ರೋಣಂ ಸುಧನ್ವಾಗುರುಮುಗ್ರಪೌರುಷಃ ॥೫೭॥

ಅಥ – ಅನಂತರ, ಉಗ್ರಪೌರುಷಃ – ಕ್ರೂರವಾದ ಪರಾಕ್ರಮವುಳ್ಳ, ದಿವ್ಯರಥೋಪರಿಸ್ಥಿತಃ – ದಿವ್ಯವಾದ ರಥದ ಮೇಲೆ ಕುಳಿತಿರುವ, ಅವ್ಯಯೇನ — ನಾಶವಿಲ್ಲದ, ಕೇಶವೇನ – ಶ್ರೀಕೃಷ್ಣನಿಂದ, ಸುರಕ್ಷಿತಃ — ಚೆನ್ನಾಗಿ ರಕ್ಷಿಸಿಕೊಳ್ಳಲ್ಪಟ್ಟ, ಸುಧನ್ವಾ – ಒಳ್ಳೆಯ ಧನುಸ್ಸುಳ್ಳ, ಅರ್ಜುನಃ – ಅರ್ಜುನನು, ಅಗ್ರತಃ—ದ್ರೋಣರ ಮುಂಬಾಗದಲ್ಲಿ, ದುರ್ಮರ್ಷಣಂ– ದುರ್ಮರ್ಷಣನನ್ನು, ವಿಜಿತ್ಯ – ಗೆದ್ದು, ಗುರುಂ — ಗುರುಗಳಾದ, ದ್ರೋಣಂ – ದ್ರೋಣರನ್ನು, ಅಭ್ಯಯಾತ್ – ಹೊಂದಿದನು. ॥೫೭॥

ಪ್ರದಕ್ಷಿಣೇಕೃತ್ಯತವಾಶ್ವಗಾತ್ತತಃ ಕಾಲಾತ್ಯಯಂ ತ್ವೇವವಿಶಂಕಮಾನಃ ॥
ರಥಂಮನೋವೇಗಮಥಾನಯದ್ಧರಿರ್ಯಥಾ ಶರಾಃ ಪೇತುರಮುಷ್ಯಪೃಷ್ಠತಃ ॥೫೮॥

ತತಃ — ಅನಂತರ, ಕಾಲಾತ್ಯಯಮೇವ – ದ್ರೋಣರ ಹತ್ತಿರ ಯುದ್ಧಮಾಡುತ್ತಿರಲು ಸಾಯಂಕಾಲವಾಗುವುದೆಂದು ಸಮಯದ ಅತಿಕ್ರಮಣವನ್ನು, ವಿಶಂಕಮಾನಃ – ಶಂಕಿಸುತ್ತಿರುವ ಅರ್ಜುನನು, ತಂ – ಆ ದ್ರೋಣರನ್ನು, ಪ್ರದಕ್ಷಿಣೇಕೃತ್ಯ – ಪ್ರದಕ್ಷಿಣೆ ಮಾಡಿ, ತತಃ–ದ್ರೋಣರ ಸಕಾಶದಿಂದ, ಆಶು–ಕೂಡಲೇ, ಅಗಾತ್ – ಹೋದನು, ಅಥ – ಅನಂತರ, ಹರಿಃ – ಶ್ರೀಕೃಷ್ಣನು, ಅಮುಷ್ಯ – ಈ ಅರ್ಜುನನ, ಶರಾಃ–ಮೊದಲು ಬಿಟ್ಟಬಾಣಗಳು, ಪೃಷ್ಠತಃ–ಅರ್ಜುನನ ಹಿಂಭಾಗದಲ್ಲಿ, ಯಥಾಪೇತುಃ – ಹೇಗೆ ಬೀಳುವವೋ, ತಥಾ – ಹಾಗೆ, ಮನೋವೇಗಂ – ಮನಸ್ಸಿನಂತೆ ವೇಗಉಳ್ಳದ್ದನ್ನಾಗಿ, ರಥಂ – ರಥವನ್ನು, ಅನಯತ್ – ನಡೆಸಿದನು. ॥೫೮॥

ವಿಜಿತ್ಯಹಾರ್ದಿಕ್ಯಮಥಾಪ್ರಯತ್ನತಃ ಸ ಇಂದ್ರಸೂನುಃ ಪ್ರವಿವೇಶತದ್ಬಲಂ ॥
ವಿಲೋಡಯಾಮಾಸಚಸಾಯಕೋತ್ತಮೈಃ ಯಥಾ ಗಜೇಂದ್ರೋ ನಲಿನೀಂಬಲೋದ್ಧತಃ ॥೫೯॥

ಅಥ – ಅನಂತರ, ಇಂದ್ರಸೂನುಃ – ಇಂದ್ರನ ಮಗನಾದ ಅರ್ಜುನನು, ಅಪ್ರಯತ್ನತಃ– ಆಯಾಸವಿಲ್ಲದೇನೇ, ಹಾರ್ದಿಕ್ಯಂ— ಕೃತವರ್ಮನನ್ನು, ವಿಜಿತ್ಯ ಗೆದ್ದು, ತದ್ಬಲಂ— ಆ ಕೌರವರ ಸೈನ್ಯವನ್ನು, ಪ್ರವಿವೇಶ – ಪ್ರವೇಶಿಸಿದನು. ಬಲೋದ್ಧತಃ – ಸಾಮರ್ಥ್ಯದಿಂದ ದೃಪ್ತವಾದ, ಗಜೇಂದ್ರಃ – ಶ್ರೇಷ್ಠಆನೆಯು, ನಲಿನೀಂ – ಸರೋವರವನ್ನು, ಯಥಾ– ಹೇಗೆ ಕದಡುವುದೋ, ತಥಾ – ಹಾಗೆಯೇ, ಸಾಯಕೋತ್ತಮೈಃ – ಶ್ರೇಷ್ಠ ಬಾಣಗಳಿಂದ, ವಿಲೋಡಯಾಮಾಸ – ಕೌರವರ ಸೈನ್ಯವನ್ನು ಕಳವಳಪಡಿಸಿದನು. ॥೫೯॥

ಸಉಚ್ಚಕಾಶೇಽತಿರಥೋ ರಥೋತ್ತಮೇ ಸಹಾಸುದೇವೋ ಹರಿಣಾಯುಧೇಂದ್ರಃ ॥
ಚಕರ್ತ ಚೋಗ್ರೋದ್ವಿಷತಾಂ ಶಿರಾಂಸಿ ಶರೈಃ ಶರೀರಾಂತಕರೈಃ ಸಮಂತತಃ ॥೬೦॥

ಸವಾಸುದೇವಃ – ಶ್ರೀಕೃಷ್ಣನಿಂದ ಕೂಡಿದ, ಸಃ– ಆ ಅರ್ಜುನನು, ರಥೋತ್ತಮೇ – ಶ್ರೇಷ್ಠರಥದಲ್ಲಿ, ಹರಿಣಾ– ಬಲಿಚಕ್ರವರ್ತಿಯಮದವನ್ನು ಅಪಹರಿಸುವ ವಾಮನನಿಂದ, ಇಂದ್ರಃ– ದೇವೇಂದ್ರನು, ಯಥಾ— ಹೇಗೆ ಶೋಭಿಸಿದನೋ, ತಥಾ – ಹಾಗೆ, ಉಚ್ಚಕಾಶೇ — ಶೋಭಿಸಿದನು. ಉಗ್ರಃ – ಸಹಿಸಲಶಕ್ಯನಾದ ಅರ್ಜುನನು, ಶರೀರಾಂತಕರೈಃ–ಶರೀರಕ್ಕೆ ನಾಶವನ್ನುಂಟು ಮಾಡತಕ್ಕ, ಶರೈಃ– ಬಾಣಗಳಿಂದ, ಸಮಂತತಃ – ಎಲ್ಲಾಕಡೆಯಲ್ಲಿಯೂ, ದ್ವಿಷತಾಂ – ಶತ್ರುಗಳ, ಶಿರಾಂಸಿ – ತಲೆಗಳನ್ನು, ಚಕರ್ತ – ಕತ್ತರಿಸಿದನು. ॥೬೦॥

ದೃಢಾಯುಂ ಚಾಚ್ಯುತಾಯುಂಚ ಹತ್ವಾವಿಂದಾನುವಿಂದಕೌ ॥
ಶರಾಭ್ಯಾಂ ಪ್ರೇಷಯಾಮಾಸ ಯಮಾಯ ವಿಜಯೋ ಯುಧಿ ॥೬೧॥

ವಿಜಯಃ— ಅರ್ಜುನನು, ಯುಧಿ –ಯುದ್ಧದಲ್ಲಿ, ಶರಾಭ್ಯಾಂ–ಬಾಣಗಳಿಂದ, ದೃಢಾಯುಂ– ದೃಢಾಯುವನ್ನೂ, ಅಚ್ಯುತಾಯುಂಚ – ಅಚ್ಯುತಾಯುವನ್ನೂ, ಹತ್ವಾ — ಕೊಂದು, ಪುನಃ – ಮತ್ತು, ಶರಾಭ್ಯಾಂ – ಬಾಣಗಳಿಂದ, ವಿಂದಾನುವಿಂದಕೌ – ಆವಂತಿದೇಶದ ರಾಜರಾದ ವಿಂದಾನುವಿಂದರನ್ನು, ಯಮಾಯ – ಮೃತ್ಯು ಲೋಕಕ್ಕೆ, ಪ್ರೇಷಯಾಮಾಸ – ಕಳುಹಿಸಿದನು. ॥೬೧॥

ಸುದಕ್ಷಿಣಂಚ ಕಾಂಭೋಜಂ ನಿಹತ್ಯಾಂಬಷ್ಠಮೇವಚ ॥
ಶ್ರುತಾಯುಧಂ ನದೀಜಾತಂ ವರುಣಾದಾಸಸಾದಹ ॥೬೨॥

ಯಸ್ಯಾದಾದ್ವರುಣೋ ದಿವ್ಯಮಮೋಘಾಂ ಮಹತೀಂಗದಾಂ ॥
ಸತುತೇನ ಶರೈಸ್ತೀಕ್ಷ್ಣೈರರ್ಪಿತೋ ವಿರಥಂಕ್ಷಣಾತ್ ॥೬೩॥

ಚಕಾರಪಾರ್ಥಸ್ಯರಥಮಾರುಹ್ಯಾರಿಧರಾಯುಧಾಂ ॥
ಗದಾಂ ಚಿಕ್ಷೇಪಸಾತಸ್ಯವಾರುಣೇಃ ಶಿರಏವತು ॥
ಬಿಭೇದ ಶತಧಾಶೀರ್ಣಮುಸ್ತಿಷ್ಕಃ ಸೋಽಪತದ್ಭುವಿ ॥೬೪॥

ಸಃ – ಆ ಅರ್ಜುನನು, ಕಾಂಭೋಜಂಸುದಕ್ಷಿಣಂ – ಕಾಂಭೋಜರಾಜನ ಮಗನಾದ ಸುದಕ್ಷಿಣನನ್ನು, ಅಂಬಷ್ಠಂ– ಅಂಬಷ್ಠನನ್ನೂ, ನಿಹತ್ಯ–ಕೊಂದು, ವರುಣಾತ್–ವರುಣನಿಂದ. ನದೀಜಾತಂ-ಗಂಗೆಯಲ್ಲಿಹುಟ್ಟಿದ, ಶ್ರುತಾಯುಧಂ–ಶ್ರುತಾಯುಧನನ್ನು, ಆಸಸಾದ – ಹೊಂದಿದನು. ಯಸ್ಯ – ಯಾವಶ್ರುತಾಯುಧನಿಗೆ, ವರುಣಃ –ವರುಣನು, ದಿವ್ಯಾಂ–ದಿವ್ಯವಾದ, ಅಮೋಘಾಂ – ವ್ಯರ್ಥವಲ್ಲದ, ಮಹತೀಂ—ದೊಡ್ಡದಾದ, ಗದಾಂ—ಗದೆಯನ್ನು, ಅದಾತ್ – ಕೊಟ್ಟನೋ, ತೇನ – ಆ ಶ್ರುತಾಯುಧನಿಂದ, ತೀಕ್ಷ್ಣೈಃ– ಹರಿತಗಳಾದ, ಶರೈಃ–ಬಾಣಗಳಿಂದ, ಅರ್ಪಿತಃ–ಹೊಡೆಯಲ್ಪಟ್ಟ, ಸತು–ಆಅರ್ಜುನನಾದರೂ, ಕ್ಷಣಾತ್ – ಕ್ಷಣದಿಂದ, ವಿರಥಂ—ಶ್ರುತಾಲಯುದ್ಧನನ್ನು ರಥರಹಿತನನ್ನಾಗಿ, ಚಕಾರ – ಮಾಡಿದನು. ಸಃ – ಆಶ್ರುತಾಯುಧನು, ಪಾರ್ಥಸ್ಯ – ಅರ್ಜುನನ, ರಥಂ – ರಥವನ್ನು, ಆರುಹ್ಯ – ಏರಿ, ಅರಿಧರಾಯುಂ – ಚಕ್ರಧಾರಿಯಾದ ಶ್ರೀಕೃಷ್ಣನಿಗೋಸ್ಕರ, ತಾಂ ಗದಾಂ— ಆ ಗದೆಯನ್ನು, ಚಿಕ್ಷೇಪ – ಹಾಕಿದನು. ಸಾ – ಆ ಗದೆಯು, ವಾರುಣೇಃ— ವರುಣಪುತ್ರನಾದ, ತಸ್ಯ – ಆ ಶ್ರುತಾಯುಧನ, ಶಿರಏವ – ತಲೆಯನ್ನೇ ಶತಧಾ – ನೂರುಪ್ರಕಾರವಾಗಿ, ಬಿಭೇದ—ಭೇದಿಸಿತು, ಸಃ — ಆ ಶ್ರುತಾಯುಧನು, ಶೀರ್ಣಮುಸ್ತಿಷ್ಕಃ— ಸನ್ – ಸೀಳಲ್ಪಟ್ಟ ತಲೆಯುಳ್ಳವನಾಗಿ, ಭುವಿ – ಭೂಮಿಯಲ್ಲಿ, ಅಪತತ್ – ಬಿದ್ದನು. ॥೬೨॥ ॥೬೩॥ ॥೬೪॥

ಬಾ. ಆ. ೫೨–೬೪ ತಾನೇ ಸಕಲ ಜಗದ್ರಕ್ಷಣಾದಿ ಶಕ್ತಿಉಳ್ಳವನಾದರೂ, ಗುರುಗಳದ್ವಾರಾನೇ ನಾನು ಅನುಗ್ರಹ ಮಾಡುವೆನು ಎಂದು ತಿಳಿಸುವದಕ್ಕಾಗಿ, ಅರ್ಜುನನಿಗೆ ಅಸ್ತ್ರ ಗುರುವಾದ ಶ್ರೀರುದ್ರದೇವರ ಹತ್ತಿರ ಕರೆದುಕೊಂಡು ಹೋಗಿ ಉಪದೇಶ ಅನುಗ್ರಹ ಮಾಡಿಸಿ ಅದರ ದ್ವಾರಾ ತಾನು ಅನುಗ್ರಹ ಮಾಡಿದನು. ಪಾಶುಪತಾಸ್ತ್ರವು ವಿಶೇಷ ಸಾಮರ್ಥ್ಯ

ಉಳ್ಳದ್ದನ್ನಾಗಿ ಮಾಡಿದನು. ರುದ್ರಾನುಗ್ರಹರಕ್ಷಾಕವಚವನ್ನು ತೊಡಿಸಿದನು. ಶ್ರೀಕೃಷ್ಣನು ಉಪಪ್ಲಾವ್ಯಕ್ಕೆ ಬಂದು, ಅಲ್ಲಿರುವ ತಂಗಿ ಸುಭದ್ರೆಯನ್ನು ಸಮಾಧಾನಪಡಿಸಿ ಬಂದು ಪುನಃ ಪ್ರಾತಃಕಾಲದಲ್ಲಿ ಅರ್ಜುನ ಸಮೇತನಾಗಿ ಯುದ್ಧ ಭೂಮಿಗೆ ಹೊರಟನು. ಅರ್ಜುನನ ಪ್ರತಿಜ್ಞೆಯನ್ನು ತಿಳಿದ ದುರ್ಯೋಧನನು ಜಯದ್ರಥನ ರಕ್ಷಣೆಗಾಗಿ ದ್ರೋಣರನ್ನು ಪ್ರಾರ್ಥಿಸಿದಾಗ, ನಾನು ಎಲ್ಲ ಉಪಾಯಗಳಿಂದಲೂ ಅವನನ್ನು ರಕ್ಷಿಸುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಶಕಟಾಬ್ಜಚಕ್ರ ಎಂಬ ಅಭೇದ್ಯವ್ಯೂಹವನ್ನು ರಚಿಸಿದರು ತಾವು ಸ್ವತಃ ವ್ಯೂಹದ ಬಾಗಿಲಲ್ಲಿ ನಿಂತರು. ಜಯದ್ರಥನನ್ನು ವ್ಯೂಹದ ಪೂರ್ಣ ಹಿಂದೆ ನಿಲ್ಲಿಸಿದರು. ಅವನ ಮುಂಭಾಗದಲ್ಲಿ ಕರ್ಣಾದಿಗಳು ಇದ್ದಾರೆ. ಅರ್ಜುನನು ಯುದ್ಧಕ್ಕೆ ಬಂದು ದುರ್ಮರ್ಷಣನನ್ನು ಗೆದ್ದು, ದ್ರೋಣರನ್ನು ಹೊಂದಿದನು. ಆದರೆ ಅವರ ಜೊತೆಗೆ ಯುದ್ಧಮಾಡುತ್ತಾ ನಿಂತರೆ, ಕಾಲವು ಮೀರುವದು ಎಂದು ವಿಚಾರಿಸಿ, ಅವರನ್ನು ಪ್ರದಕ್ಷಿಣೆ ಮಾಡಿ ಹೊರಟುಹೊದನು. ಅರ್ಜುನನು ಬಿಟ್ಟಬಾಣಗಳು ಅರ್ಜುನನ ರಥದ ಹಿಂಬದಿಗೆ ಬೀಳುವಂತೆ ಶ್ರೀಕೃಷ್ಣನು ರಥವನ್ನು ಮನೋವೇಗದಿಂದ ನಡಿಸಿದನು. ಅರ್ಜುನನು ಕೃತವರ್ಮನನ್ನು ಗೆದ್ದು ಸೈನ್ಯ ಪ್ರವೇಶ ಮಾಡಿದನು. ಆನೆಯು ಸರೋವರವನ್ನು ಕದಡುವಂತೆ ಸೈನ್ಯವನ್ನು ಕದಡಿದನು. ಇಂದ್ರನು ವಾಮನನಿಂದ ಕೂಡಿಕೊಂಡು ಶೋಭಿಸುವಂತೆ ಅರ್ಜುನನು ಶ್ರೀಕೃಷ್ಣನಿಂದ ಕೂಡಿಕೊಂಡು ಶೋಭಿಸುತಿದ್ದನು. ಬಹು ವೈರಿಗಳ ಶಿರಸ್ಸುಗಳನ್ನೇ ಕತ್ತರಿಸಿದನು. ದೃಢಾಯು, ಅಚ್ಯುತಾಯು, ವಿಂದ – ಅನುವಿಂದರನ್ನು ಸಂಹರಿಸಿ, ಸುದಕ್ಷಿಣ, ಅಂಬಷ್ಠರನ್ನೂ ಸಂಹರಿಸಿದನು. ವರುಣ–ಗಂಗೆಯರ ಮಗನಾದ ಶ್ರುತಾಯುಧನು ಅರ್ಜುನನ ಮೇಲೆ ಬಾಣ ಪ್ರಯೋಗ ಮಾಡಿದನು. ಆಗ ಅರ್ಜುನನು ಅವನನ್ನು ಕೂಡಲೇ ರಥಹೀನನನ್ನಾಗಿಸಿದನು. ಆಗ ಅವನು ಗದಾವನ್ನು ಎತ್ತಿ ಅರ್ಜುನನ ರಥವನ್ನೇರಿ ಯುದ್ಧ ಮಾಡದಿರುವ ಶ್ರೀಕೃಷ್ಣನ ಮೇಲೆ ಒಗೆದನು. ವರುಣದೇವರು ಅಮೋಘವಾದ ಆ ಗದಾವನ್ನು ಅವನಿಗೆ ಕೊಟ್ಟು ಯುದ್ಧ ಮಾಡದಿರುವವರ ಮೇಲೆ ಇದನ್ನು ಒಗೆದರೆ ಅದು ಹಿಂದಿರುಗಿ ನಿನ್ನ ತಲೆಯನ್ನೇ ಒಡೆಯುತ್ತದೆ ಎಂದು ಹೇಳಿದ್ದರಿಂದ, ಅದು ಹಿಂದಿರುಗಿ ಬಂದು ಅವನ ತಲೆಯನ್ನು ನೂರು ತುಂಡು ಮಾಡಿತು. ಹೀಗೆ ಅವನು ಸತ್ತನು.

ಅಯುಧ್ಯಂತಂಸ್ವಗದಯಾಯದಿತಾಡಯಸಿಸ್ವಯಂ ॥
ತಯಾವಿಶೀರ್ಣಮುಸ್ತಿಷ್ಕೋಭವಿಷ್ಯಸಿ ನ ಸಂಶಯಃ ॥೬೫॥

ಅಮೋಘಾಚಾನ್ಯಥಾ ಸೇಯಂ ಗದಾತವ ಭವಿಷ್ಯತಿ ॥೬೬॥

ಇತ್ಯಬ್ರವೀತ್ತಂವರುಣಃ ಪುರಾತೇನಸಕೇಶವೇ ॥
ಅಯುಧ್ಯತಿಗದಾಕ್ಷೇಪಾತ್ತಯಾಶೀರ್ಣಶಿರಾಅಭೂತ್ ॥೬೭॥

ಅಯುಧ್ಯಂತಂ — ಯುದ್ಧಮಾಡದಿರುವವರನ್ನು, ಸ್ವಗದಯಾ — ತನ್ನ ಗದೆಯಿಂದ, ಸ್ವಯಂ– ನೀನಾಗಿಯೇ, ತಾಡಯಸಿಯದಿ — ಹೊಡೆಯವಿಯಾದರೆ, ತರ್ಹಿ—ಆ ಪಕ್ಷದಲ್ಲಿ, ತಯಾ – ಆ ಗದೆಯಿಂದ, ವಿಶೀರ್ಣಮುಸ್ತಿಷ್ಕಃ – ಪುಡಿ ಮಾಡಲ್ಪಟ್ಟ ತಲೆಯುಳ್ಳವನು, ಭವಿಷ್ಯಸಿ – ಆಗುವಿ. ನ ಸಂಶಯಃ – ಸಂಶಯವಿಲ್ಲ, ಅನ್ಯಥಾ — ಯುದ್ಧ ಮಾಡದಿರುವವನನ್ನು ಹೊಡೆಯದಿದ್ದರೆ, ತವ—ನಿನ್ನ, ಸೇಯಂ—ಆ ಈ ದಾವಗದೆಯು,ಅಮೋಘಾ—ವ್ಯರ್ಥವಲ್ಲದ್ದು,ಭವಿಷ್ಯತಿ– ಆಗುವುದು. ಇತಿ– ಈ ರೀತಿಯಾಗಿ, ಪುರಾ – ಹಿಂದೆ, ವರುಣಃ—ವರುಣನು, ತಂ—ಆ ಶ್ರುತಾಯುಧನನ್ನು ಕುರಿತು, ಅಬ್ರವೀತ್ – ಹೇಳಿದನು, ತೇನ – ಆ ಕಾರಣದಿಂದ, ಅಯುಧ್ಯತಿ— ಯುದ್ಧ ಮಾಡದಿರುವ, ಕೇಶವೇ – ಶ್ರೀಕೃಷ್ಣನಲ್ಲಿ, ಗದಾಕ್ಷೇಪಾತ್ – ಗದೆಯನ್ನು ಹಾಕಿದ್ದರಿಂದ, ಸಃ— ಆ ಶ್ರುತಾಯುಧನು, ತಯಾ – ಆ ಗದೆಯಿಂದ, ಶೀರ್ಣಶಿರಾಃ – ಪುಡಿಮಾಡಲ್ಪಟ್ಟತಲೆಯುಳ್ಳವನು, ಅಭೂತ್ — ಆದನು. ॥೬೫॥೬೬॥೬೭॥

ಹತೇಷುವೀರೇಷುನಿಜೇಷುಸಂಘಶೋವಿದ್ರಾವಿತೇಷ್ವಾಲುಲಿತೇಚ ಸೈನ್ಯೇ ॥
ದುರ್ಯೋಧನೋದ್ರೋಣಮುಪೇತ್ಯದೀನಮುವಾಚಹಾಪಾರ್ಥಮುಪೇಕ್ಷಿತಸ್ತ್ವಯಾ ॥೬೮॥

ವೀರೇಷು — ಪರಾಕ್ರಮಿಗಳಾದ, ನಿಜೇಷು — ತಮ್ಮವರು, ಹತೇಷುಸತ್ಸು - ಸಾಯುತ್ತಿರಲು, ನಿಜೇಷು – ತಮ್ಮವರು, ಸಂಘಶಃ – ಗುಂಪಾಗಿ, ವಿದ್ರಾವಿತೇಷುಸತ್ಸು-ಓಡಿಸಲ್ಪಡುತ್ತಿರಲು, ಸೈನ್ಯೇ–ಸೈನ್ಯವು, ಆಲುಲಿತೇಚಸತಿ — ಚಂಚಲೀಕೃತವಾಗುತ್ತಿರಲು, ದುರ್ಯೋಧನಃ – ದುರ್ಯೋಧನನು, ದ್ರೋಣಂ —ದ್ರೋಣರನ್ನು. ಉಪೇತ್ಯ–ಹೊಂದಿ, ತ್ವಯಾ–ನಿಮ್ಮಿಂದ, ಪಾರ್ಥಃ – ಅರ್ಜುನನು, ಉಪೇಕ್ಷಿತಃ — ವ್ಯೂಹದದ್ವಾರದಲ್ಲಿ ಉಪೇಕ್ಷಿಸಲ್ಪಟ್ಟನು. ಹಾ – ಕಷ್ಟ, ಇತಿ — ಈರೀತಿಯಾಗಿ, ದೀನಂ— ದ್ರೋಣರಿಗೆ ದಯೆಯು ಹೇಗೆ ಉಂಟಾದೀತೋ ಹಾಗೆ, ಉವಾಚ — ಹೇಳಿದನು, ॥೬೮॥

ಇತೀರಿತೋಽಭೇದ್ಯಮಮುಷ್ಯವರ್ಮಬಧ್ವಾ ಮಹಾಮಂತ್ರಬಲಾತ್ಸವಿಪ್ರಃ ॥
ಜಗಾದಯೇನೈವ ಬಲೇನ ಪಾರ್ಥೈರ್ವಿರುಧ್ಯಸೇ ತೇನ ಹಿಯಾಹಿಫಲ್ಗುನಂ ॥೬೯॥

ಇತಿ — ಈ ರೀತಿಯಾಗಿ, ಈರಿತಃ — ಹೇಳಿಸಿಕೊಳ್ಳಲ್ಪಟ್ಟ, ಸಃ ವಿಪ್ರಃ – ಆ ದ್ರೋಣಾಚಾರ್ಯರು, ಮಹಾಮಂತ್ರ ಬಲಾತ್ – ಮಹತ್ತಾದ ಮಂತ್ರದ ಸಾಮರ್ಥ್ಯದಿಂದ, ಅಭೇದ್ಯಂ— ಭೇದಿಸಲಶಕ್ಯವಾದ,ವರ್ಮ – ಕವಚವನ್ನು, ಅಮುಷ್ಯ–ದುರ್ಯೋಧನನಿಗೆ, ಬಧ್ವಾ – ಕಟ್ಟಿ, ಯೇನಬಲೇನ – ನನ್ನಿಂದ ಮಂತ್ರಿಸಿಕಟ್ಟಲ್ಪಟ್ಟ ಯಾವ ಕವಚ ಸಾಮರ್ಥ್ಯದಿಂದ, ಪಾರ್ಥೈರಪಿ—ಎಲ್ಲಾ ಪಾಂಡವರಿಂದಲೂ ಕೂಡ, ವಿರುಧ್ಯಸೇ—ವಿರೋಧವನ್ನು ಮಾಡಲು ಸಮರ್ಥನಾಗುವಿಯೊ, ತೇನ–ಆ ಕವಚ ಬಲದಿಂದ, ಫಲ್ಗುನಂಯಾಹಿ – ಬಲಿಷ್ಠನಾದ ಒಬ್ಬ ಅರ್ಜುನನನ್ನು ಹೊಂದು. ಈ ಕವಚಬಲದಿಂದ ಎಲ್ಲಾ ಪಾಂಡವರನ್ನು ಜಯಿಸಲು ಸಮರ್ಥನಾದ ನಿನಗೆ ಒಬ್ಬ ಅರ್ಜುನನನ್ನು ಜಯಿಸಲು ಸಮರ್ಥನೆಂದು ಏನು ಹೇಳತಕ್ಕದ್ದು. ॥೬೯॥

ಇತೀರಿತೋಧಾರ್ತರಾಷ್ಟ್ರಃಸಚಾಪಮಾದಾಯಸೌ ವರ್ಣರಥೋಪರಿಸ್ಥಿತಃ ॥
ಜಗಾಮುಪಾರ್ಥಂತಮುವಾರಯಚ್ಚ ಶರೈರನೇಕೈರನಲಪ್ರಕಾಶೈಃ ॥೭೦॥

ಇತಿ – ಈರೀತಿಯಾಗಿ, ಈರಿತಃ – ಹೇಳಿಸಿಕೊಳ್ಳಲ್ಪಟ್ಟ, ಸ ಧಾರ್ತರಾಷ್ಟ್ರಃ – ಆ ದುರ್ಯೋಧನನು, ಚಾಪಂ–ಧನುಸ್ಸನ್ನು, ಆದಾಯ — ಹಿಡಿದುಕೊಂಡು, ಸೌವರ್ಣರಥೋಪರಿ — ಭಂಗಾರಮಯವಾದರಥದ ಮೇಲೆ, ಸ್ಥಿತಸ್ಸನ್–ಕುಳಿತವನಾಗಿ, ಜಗಾಮು – ಹೋದನು. ಅನಲಪ್ರಕಾಶೈಃ - ಬೆಂಕಿಯಂತೆ ಪ್ರಕಾಶವುಳ್ಳ, ಅನೇಕೈಃ ಶರೈಃ – ಬಹಳಬಾಣಗಳಿಂದ ತಂ ಪಾರ್ಥಂ -ಆ ಅರ್ಜುನನನ್ನು, ಅವಾರಯತ್ – ತಡೆದನು. ॥೭೦॥

ವಿವ್ಯಾಧಪಾರ್ಥೋಪಿತಮುಗ್ರವೇಗೈಃಶರೈರ್ನತೇತಸ್ಯಚವರ್ಮಭೇದನಂ ॥
ಚಕ್ರುಸ್ತತೋ ವಾಸವಿರ್ದಿವ್ಯಮುಸ್ತ್ರಂತದ್ವರ್ಮಭೇದಾಯಸಮಾದದೇರುಷಾ ॥೭೧॥

ಪಾರ್ಥೋಪಿ – ಅರ್ಜುನನೂಕೂಡ, ತಂ - ಆ ದುರ್ಯೋಧನನನ್ನು, ಉಗ್ರವೇಗೈಃ– ಬಹುವೇಗವುಳ್ಳ, ಶರೈಃ — ಬಾಣಗಳಿಂದ, ವಿವ್ಯಾಧ — ಹೊಡೆದನು. ತೇ–ಆ ಬಾಣಗಳು, ತಸ್ಯ– ಆ ದುರ್ಯೋಧನನ, ವರ್ಮಭೇದನಂ — ಕವಚದ ಭೇದನವನ್ನು ನಚಕ್ರುಃ — ಮಾಡಲಿಲ್ಲ. ತತಃ– ಅನಂತರ, ವಾಸವಿಃ— ದೇವೇಂದ್ರನ ಮಗನಾದ ಅರ್ಜುನನು,– ತದ್ವರ್ಮ-ಭೇದಾಯ – ಆ ದುರ್ಯೋಧನನ ಕವಚವನ್ನು ಭೇದಿಸುವುದಕ್ಕೋಸ್ಕರ, ದಿವ್ಯಮುಸ್ತ್ರಂ – ದಿವ್ಯವಾದ ಅಸ್ತ್ರವನ್ನು, ರುಷಾ– ಕೋಪದಿಂದ, ಸಮಾದದೇ —ಹಿಡಿದನು. ॥೭೧॥

ಸಂಧೀಯಮಾನಂತುಗುರೋಃಸುತಸ್ತಚ್ಚಿಚ್ಛೇದಪಾರ್ಥೋಽಥಸುಯೋಧನಾಶ್ವಾನ್ ॥
ಹತ್ವಾತಲೇಽವಿಧ್ಯದಥೈನಮುಗ್ರೈಃದ್ರೌಣಿಃಶರೈಃಪಾರ್ಥಮವಾರಯದ್ಭೃಶಂ ॥೭೨॥

ಗುರೋಃ—ದ್ರೋಣಾಚಾರ್ಯರ, ಸುತಃ–ಮಗನಾದ ಅಶ್ವತ್ಥಾಮನು, ಸಂಧೀಯಮಾನಂ– ಅರ್ಜುನನಬಾಣದಲ್ಲಿ ಸಂಧಾನ ಮಾಡಿದ, ತತ್–ಆ ದಿವ್ಯಾಸ್ತ್ರವನ್ನು, ಚಿಚ್ಛೇದ — ತುಂಡರಿಸಿದನು. ಅಥ–ಅನಂತರ, ಪಾರ್ಥಸ್ತು — ಅರ್ಜುನ

ನಾದರೂ, ಸುಯೋಧನಾಶ್ವಾನ್ – ದುರ್ಯೋಧನನ ಕುದುರೆಗಳನ್ನು, ಹತ್ವಾ–ಕೊಂದು, ಏನಂ-ಈ ದುರ್ಯೋಧನನನ್ನು, ತಲೇ–ಹಸ್ತತಲದಲ್ಲಿ, ಅವಿಧ್ಯತ್ –ಹೊಡೆದನು, ದ್ರೌಣಿಃ – ಅಶ್ವತ್ಥಾಮನು, ಉಗ್ರೈಃ- ಕ್ರೂರಗಳಾದ, ಶರೈಃ– ಬಾಣಗಳಿಂದ, ಯುಧಿ – ಯುದ್ಧದಲ್ಲಿ, ಪಾರ್ಥಂ– ಅರ್ಜುನನನ್ನು, ಅವಾರಯತ್—ತಡೆದನು. ॥೭೨॥

ಸದ್ರೌಣಿಕರ್ಣಪ್ರಮುಖೈರ್ಧನಂಜಯೋಯುಯೋಧತೇಚೈನಮವಾರಯನ್ಶರೈಃ ॥
ಬಭೂವಯುದ್ಧಂ ತದತುಲ್ಯಮದ್ಭುತಂ ಜಯದ್ರಥಾರ್ಥೇಽದ್ಭುತವೀರ್ಯಕರ್ಮಣಾಂ ॥೭೩॥

ಸಃ –ಆ ಅರ್ಜುನನು, ದ್ರೌಣಿಕರ್ಣಪ್ರಮುಖೈಃ–ಅಶ್ವತ್ಥಾಮಕರ್ಣನೇ ಪ್ರಧಾನರಾಗಿಉಳ್ಳವರಿಂದ, ಯುಯೋಧ–ಯುದ್ಧಮಾಡಿದನು. ತೇಚ– ಆ ಅಶ್ವತ್ಥಾಮಾದಿಗಳು, ಏನಂ– ಈ ಅರ್ಜುನನನ್ನು, ಶರೈಃ – ಬಾಣಗಳಿಂದ,ಅವಾರಯನ್–ತಡೆದರು. ಜಯದ್ರಥಾರ್ಥೇ – ಸೈಂಧವನ ರಕ್ಷಣೆಗಾಗಿ, ಅದ್ಭುತವೀರ್ಯಕರ್ಮಣಾಂ— ಆಶ್ಚರ್ಯವನ್ನುಂಟುಮಾಡುವ ಪರಾಕ್ರಮವೂ, ಕೆಲಸವೂಇವುಗಳುಳ್ಳ ಅಶ್ವತ್ಥಾಮಾದಿಗಳ, ತದ್ಯುದ್ಧಂ – ಅರ್ಜುನನಿಂದ ಕೂಡಿಕೊಂಡು ಮಾಡತಕ್ಕ ಯುದ್ಧವು, ಅದ್ಭುತಂ—ನೋಡತಕ್ಕವರಿಗೆ ಆಶ್ಚರ್ಯವನ್ನುಂಟುಮಾಡತಕ್ಕದ್ದೂ, ಅತುಲ್ಯಂ–ಅಸದೃಶವಾದದ್ದೂ, ಬಭೂವ–ಆಯಿತು. ॥೭೩॥

ಪಾರ್ಥೇಪ್ರವಿಷ್ಟೇಕುರುಸೈನ್ಯಮಧ್ಯಂದ್ರೋಣೋಽವಿಶತ್ಪಾಂಡವಸೈನ್ಯಮಾಶು ॥
ಸತದ್ರಥಾನೀಕಮುದಾರವೇಗೈಃಶರೈರ್ವಿಧೂಯನ್ಯಹನಚ್ಚವೀರಾನ್ ॥೭೪॥

ಪಾರ್ಥೇ – ಅರ್ಜುನನು, ಕುರುಸೈನ್ಯಮಧ್ಯಂ — ಕುರುಗಳಸೈನ್ಯದ ಮಧ್ಯವನ್ನು, ಪ್ರವಿಷ್ಟೇಸತಿ– ಪ್ರವೇಶಿಸುತ್ತಿರಲು, ದ್ರೋಣಃ–ದ್ರೋಣರು, ಆಶು–ಕೂಡಲೇ, ಪಾಂಡವಸೈನ್ಯಂ– ಪಾಂಡವರಸೈನ್ಯವನ್ನು, ಆವಿಶತ್– ಪ್ರವೇಶಿಸಿದರು. ~~ಸಃ – ಆ ದ್ರೋಣರು, ತದ್ರಥಾನೀಕಂ ಆ ಪಾಂಡವರ ರಥಿಕರಸೇನೆಯನ್ನು, ಉದಾರವೇಗೈಃ– ಉತ್ಕೃಷ್ಟವೇಗವುಳ್ಳ, ಶರೈಃ–~~ ಬಾಣಗಳಿಂದ, ವಿಧೂಯ — ಓಡಿಸಿ, ವೀರಾನ್– ಪರಾಕ್ರಮಶಾಲಿಗಳನ್ನು, ನ್ಯಹನತ್ ಕೊಂದರು. ॥೭೪॥

ಸವೀರವರ್ಯಃಸ್ಥವಿರೋಽಪಿಯೂನಾಂಯುವೇವ ಮಧ್ಯೇಪ್ರಚಚಾರಧನ್ವಿನಾಂ ॥
ಪ್ರಪಾತಯನ್ವೀರಶಿರಾಂಸಿಬಾಣೈರ್ಯುಧಿಷ್ಠಿರಂಚಾಸದದುಗ್ರವೀರ್ಯಃ ॥೭೫॥

ವೀರವರ್ಯಃ – ಪರಾಕ್ರಮಿಗಳಲ್ಲಿ ಶ್ರೇಷ್ಠರಾದ,ಸಃ— ಆ ದ್ರೋಣರು, ಸ್ಥವಿರೋಪಿ – ವೃದ್ಧರಾದರೂ ಕೂಡ. ಯೂನಾಂ – ತರುಣರಾದ, ಧನ್ವಿನಾಂ ಧನುರ್ಧಾರಿಗಳ, ಮಧ್ಯೇ—ಮಧ್ಯದಲ್ಲಿ, ಯುವೇವ – ತರುಣನಂತೆ, ಪ್ರಚಚಾರ – ಸಂಚರಿಸಿದರು. ಉಗ್ರವೀರ್ಯಃ— ಕ್ರೂರವಾದ ಪರಾಕ್ರಮವುಳ್ಳ ದ್ರೋಣರು, ಬಾಣೈಃ– ಶರಗಳಿಂದ, ವೀರಶಿರಾಂಸಿ–ಪರಾಕ್ರಮಿಗಳ ತಲೆಗಳನ್ನು, ಪ್ರಪಾತಯನ್ಸನ್ — ಕೆಳಗೆ ಬೀಳಿಸುವವರಾಗಿ, ಯುಧಿಷ್ಠಿರಂ — ಧರ್ಮರಾಜನನ್ನು– ಆಸದತ್ – ಹೊಂದಿದರು. ॥೭೫॥

ನೃಪಗ್ರಹೇಚ್ಛುಂತಮವೇತ್ಯ ಸತ್ಯಜಿನ್ನ್ಯವಾರಯದ್ದ್ರೌಪದಿರಾಶುವೀರ್ಯವಾನ್ ॥
ನಿವಾರಿತಸ್ತೇನಶಿರಃ ಶರೇಣಚಕರ್ತಪಾಂಚಾಲಸುತಸ್ಯವಿಪ್ರಃ ॥೭೬॥

ನೃಪಗ್ರಹೇಚ್ಛುಂ, –ಧರ್ಮರಾಜನನ್ನು ಹಿಡಿಯಲು ಇಚ್ಛೆಯುಳ್ಳ, ತಂ – ಆ ದ್ರೋಣರನ್ನು, ಅವೇತ್ಯ – ತಿಳಿದು, ವೀರ್ಯವಾನ್—ಪರಾಕ್ರಮವುಳ್ಳ, ದ್ರೌಪದಿಃ – ದ್ರುಪದನ ಮಗನಾದ, ಸತ್ಯಜಿತ್–ಸತ್ಯಜಿತ್ ಎಂಬವನು, ಆಶು – ಕೂಡಲೇ

ನ್ಯವಾರಯತ್ – ತಡೆದನು. ತೇನ—ಆ ಸತ್ಯಜಿತ್‌ನಿಂದ, ನಿವಾರಿತಃ—ತಡೆಯಲ್ಪಟ್ಟ, ವಿಪ್ರಃ – ದ್ರೋಣರು, ಪಾಂಚಾಲಸ್ಯ ತಸ್ಯ—ದ್ರುಪದನ ಮಗನ, ಶಿರಃ – ತಲೆಯನ್ನು, ಶರೇಣ – ಬಾಣದಿಂದ, ಚಕರ್ತ – ಕತ್ತರಿಸಿದರು. ॥೭೬॥

ನಿಹತ್ಯತಂವೀರತಮೋರಣೋತ್ಕಟಂಯುಧಿಷ್ಠಿರಂಬಾಣಗಣೈಃಸಮರ್ದಯತ್ ॥
ಸ್ವಶಕ್ತಿತಸ್ತೇನವಿಧಾಯಸಂಗರಂನಿರಾಯುಧೋವ್ಯಶ್ವರಥಃಕೃತಃಕ್ಷಣಾತ್ ॥೭೭॥
ಸಊರ್ಧ್ವಬಾಹುರ್ಭುವಿಸಂಸ್ಥಿತೋಽಪಿಗೃಹೀತುಮಾಜೌ ಗುರುಣಾಭಿಪನ್ನಃ ॥
ಮಾದ್ರೀಸುತಸ್ಯಾವರಜಸ್ಯಯಾನಮಾರುಹ್ಯವೇಗಾದಪಜಗ್ಮಿವಾಂಸ್ತತಃ ॥೭೮॥

ವೀರತಮಃ– ಅತಿಪರಾಕ್ರಮಿಗಳಾದ ದ್ರೋಣರು, ರಣೋತ್ಕಟಂ–ಯುದ್ಧದಲ್ಲಿ ಉತ್ಕೃಷ್ಟನಾದ, ತಂ – ಆ ಸತ್ಯಜಿತನನ್ನು, ನಿಹತ್ಯ—ಕೊಂದು, ಯುಧಿಷ್ಠಿರಂ—ಧರ್ಮರಾಜನನ್ನು, ಬಾಣಗಣೈಃ– ಶರಗಳಸಮೂಹಗಳಿಂದ, ಸಮರ್ದಯತ್– ಚೆನ್ನಾಗಿ ಪೀಡಿಸಿದರು. ಸ್ವಶಕ್ತಿತಃ – ತನ್ನ ಶಕ್ತಿಗೆ ಅನುಸಾರುವಾಗಿ, ತೇನ – ಆ ದ್ರೋಣರಿಂದ, ಸಂಗರಂ – ಯುದ್ಧವನ್ನು, ವಿಧಾಯ—ಮಾಡಿ, ಸ್ಥಿತಃ—ನಿಂತಿರುವ, ಸಃ – ಆ ಧರ್ಮರಾಜನು, ತೇನ—ಆ ದ್ರೋಣರಿಂದ, ನಿರಾಯುಧಃ – ಆಯುಧವಿಲ್ಲದವನಾಗಿಯೂ, ವ್ಯಶ್ವರಥಃ-ಹೋಗಲ್ಪಟ್ಟ ಕುದುರೆಗಳೂ, ರಥವೂ ಇವುಗಳುಳ್ಳವನಾಗಿ, ಕ್ಷಣಾತ್ – ಕೂಡಲೇ, ಕೃತಃ– ಮಾಡಲ್ಪಟ್ಟನು, ಸಃ—ಧರ್ಮರಾಜನು, ಊರ್ಧ್ವಬಾಹುಃ ಸನ್ —ಮೇಲಕ್ಕೆ ಎತ್ತಲ್ಪಟ್ಟ ಕೈಗಳುಳ್ಳವನಾಗಿ,ಭುವಿ – ಭೂಮಿಯಲ್ಲಿ, ಸಂಸ್ಥಿತೋಪಿ – ನಿಂತಿರುವವನಾದರೂಕೂಡ, ಆಜೌ – ಯುದ್ಧದಲ್ಲಿ, ಗೃಹೀತುಂ – ಹಿಡಿಯಲು, ಗುರುಣಾ— ಗುರುಗಳಾದ ದ್ರೋಣರಿಂದ, ಅಭಿಪನ್ನಸ್ಸನ್ – ಎದುರಾಗಿ ಹೊಂದಲ್ಪಟ್ಟವನಾಗಿ, ಮಾದ್ರೀಸುತ್ಯಸ್ಯ – ಮಾದ್ರಿಯಮಗನಾದ ನಕುಲನ, ಅವರಜಸ್ಯ — ತಮ್ಮನಾದ ಸಹದೇವನ, ಯಾನಂ — ರಥವನ್ನು, ಆರುಹ್ಯ— ಏರಿ, ವೇಗಾತ್ – ವೇಗದಿಂದ, ತತಃ— ದ್ರೋಣಾಚಾರ್ಯರ ಸಕಾಶದಿಂದ, ಅಪಜಗ್ಮಿವಾನ್ – ಹೊರಟುಹೋದನು. ॥೭೭॥ ॥೭೮॥

ದ್ರೋಣಂತತಃಶೈಶುಪಾಲಿಃಸಪುತ್ರೋಜಾರಾಸಂಧಿಃಕಾಶಿರಾಜಃಸಶೈಬ್ಯಃ ॥
ಸಮಾಸದನ್ಪಂಚಕಯಾಶ್ಚೈವಪಂಚಸಮರ್ದಯನ್ಬಾಣಗಣೈಶ್ಚಸರ್ವಶಃ ॥೭೯॥

ತತಃ—ಯುಧಿಷ್ಠಿರನು ಹೋದಮೇಲೆ, ಸಪುತ್ರಃ – ಮಕ್ಕಳಿಂದ ಕೂಡಿದ, ಶೈಶುಪಾಲಿಃ – ಶಿಶುಪಾಲನ ಮಗನೂ, ಜಾರಾಸಂಧಿಃ – ಜರಾಸಂಧನ ಮಗನೂ, ಸಶೈಬ್ಯಃ – ಶೈಬ್ಯನಿಂದ ಕೂಡಿದ, ಕಾಶಿರಾಜಃ–ಕಾಶಿರಾಜನು, ಪಂಚಕೈಕಯಾಶ್ಚ– ಐದುಮಂದಿ ಕೈಕಯರೂ ಕೂಡ, ದ್ರೋಣಂ – ದ್ರೋಣರನ್ನು, ಸಮಾಸದನ್ – ಹೊಂದಿದರು, ಸರ್ವಶಃ — ಎಲ್ಲರೂ, ಬಾಣಗಣೈಃ – ಶರಗಳ ಸಮೂಹದಿಂದ, ಸಮರ್ದಯನ್ — ದ್ರೋಣರನ್ನು ಪೀಡಿಸಿದರು. ॥೭೯॥

ಸುತಾನ್ಕ್ರಮೇಣೈವ ನಿಕೃತ್ತಕಂಧರಾನ್ ಶರೋತ್ತಮೈಸ್ತತ್ರವಿಧಾಯವಿಪ್ರಃ ॥
ನಿನಾಯಲೋಕಂ ಪರಮರ್ಕಮಂಡಲಂ ವ್ರಜಂತಿನಿರ್ಭಿದ್ಯಯಮೂರ್ಧ್ವರೇತಸಃ ॥೮೦॥

ಸಃವಿಪ್ರಃ– ಆ ದ್ರೋಣರು,ಕ್ರಮೇಣೈವ–ಶಿಶುಪಾಲಪುತ್ರಾದಿಕ್ರಮದಿಂದಲೇ, ತಾನ್ — ಅವರನ್ನು,ಶರೋತ್ತಮೈಃ– ಶ್ರೇಷ್ಠಬಾಣಗಳಿಂದ, ನಿಕೃತ್ತಕಂಧರಾನ್ – ಕತ್ತರಿಸಲ್ಪಟ್ಟ ಕುತ್ತಿಗೆ ಉಳ್ಳವರನ್ನಾಗಿ, ವಿಧಾಯ— ಮಾಡಿ, ಊರ್ಧ್ವರೇತಸಃ– ನೈಷ್ಠಿಕಬ್ರಹ್ಮಚರ್ಯವ್ರತದಲ್ಲಿ ಆಸಕ್ತರು, ಅರ್ಕಮಂಡಲಂ – ಸೂರ್ಯಮಂಡಲವನ್ನು, ನಿರ್ಭಿದ್ಯ — ಭೇದಿಸಿ, ಯಂ — ಯಾವಲೋಕವನ್ನು, ವ್ರಜಂತಿ – ಹೊಂದುತ್ತಾರೋ, ತಂ ಪರಂಲೋಕಂ — ಅಂತಹ ಪರಲೋಕಕ್ಕೆ, ನಿನಾಯ— ಕಳಿಸಿದರು. ॥೮೦॥

ವಿಧೂಯಮಾನೇ ಗುರುಣೋರುಸೈನ್ಯೇಪೃಥಾಸುತಾನಾಂ ಪೃತನಾಃಪರೇಷಾಂ ॥
ಪ್ರಾಯೋರಣೇಮಾರುತಸೂನುನೈವಹತಪ್ರವೀರಾಮೃದಿತಾಃಪರಾದ್ರವನ್ ॥೮೧॥

ಗುರುಣಾ – ದ್ರೋಣರಿಂದ, ಪೃಥಾಸುತಾನಾಂ – ಕುಂತಿಯ ಮಕ್ಕಳಾದ ಪಾಂಡವರ, ಉರುಸೈನ್ಯೇ – ಉತ್ಕೃಷ್ಟವಾದ ಸೈನ್ಯವು, ವಿಧೂಯಮಾನೇಸತಿ – ಓಡಿಸಲ್ಪಡುತ್ತಿರಲು, ಪ್ರಾಯಃ – ಹೆಚ್ಚಾಗಿ, ರಣೇ – ಯುದ್ಧದಲ್ಲಿ, ಮಾರುತ ಸೂನುನೈವ–ಭೀಮನಿಂದಲೇ, ಹತಪ್ರವೀರಾಃ – ಕೊಲ್ಲಲ್ಪಟ್ಟ ಮಹಾವೀರರುಳ್ಳ, ಪರೇಷಾಂ – ಶತ್ರುಗಳಾದ ಕೌರವರ-ಪೃತನಾಃ – ಸೇನೆಗಳು, ಮೃದಿತಾಃಸಂತಃ – ಪರಾಭೂತಗಳಾಗಿ, ಪರಾದ್ರವನ್ – ಓಡಿಹೋದವು. ॥೮೧॥

ಅಲಂಬುಸೋನಾಮ ತದೈವರಾಕ್ಷಸಃ ಸಮಾಸದನ್ಮಾರುತಿಮುಗ್ರಪೌರುಷಃ ॥
ಸಪೀಡಿತಸ್ತೇನ ಶರೈಃಸುತೇಜನೈಃಕ್ಷಣಾದದೃಶ್ಯತ್ವಮವಾಪಮಾಯಯಾ ॥೮೨॥

ತದೈವ – ಆಗಲೇ, ಅಲಂಬುಸಃ – ಅಲಂಬುಸನೆಂದು, ನಾಮ – ಪ್ರಸಿದ್ಧನಾದ, ರಾಕ್ಷಸಃ – ರಾಕ್ಷಸನು, ಉಗ್ರಪೌರುಷಂ – ಕ್ರೂರವಾದ ಪರಾಕ್ರಮವುಳ್ಳ, ಮಾರುತಿಂ – ಭೀಮನನ್ನು, ಸಮಾಸದತ್ – ಹೊಂದಿದನು, ತೇನ– ಆ ಭೀಮನಿಂದ, ಸುತೇಜನೈಃ – ಅತ್ಯಂತ ತೀಕ್ಷ್ಣಗಳಾದ, ಶರೈಃ – ಬಾಣಗಳಿಂದ, ಪೀಡಿತಃ– ಪೀಡಿಸಿಕೊಳ್ಳಲ್ಪಟ್ಟ,ಸಃ – ಆ ಅಲಂಬುಸನು, ಮಾಯಯಾ – ಮಾಯೆಯಿಂದ, ಕ್ಷಣಾತ್ – ಕೂಡಲೇ, ಅದೃಶ್ಯತ್ವಂ –ಕಾಣದಿರುವಿಕೆಯನ್ನು, ಅವಾಪ– ಹೊಂದಿದನು. ॥೮೨॥

ಸೋಽದೃಶ್ಯರೂಪೋಽನುಚರಾನಪೀಡಯದ್ಭೀಮಸ್ಯ ತದ್ವೀಕ್ಷ್ಯ ಚುಕೋಪ ಮಾರುತಿಃ ॥
ಅಸ್ತ್ರಜ್ಞತಾಮಾತ್ಮನಿ ಕೇಶವಾಜ್ಞಯಾ ಸಂದರ್ಶಯನ್ನಾಗತ ಧರ್ಮಸಂಕಟಃ ॥೮೩॥

ತ್ವಾಷ್ಟ್ರಮಸ್ತ್ರಮಾದತ್ತ ಸಕಾಮ್ಯಕರ್ಮಹೀನೋಽಪಿ ಭೀಮಸ್ತತ ಉತ್ಥಿತಾಃ ಶರಾಃ ॥
ತೇಬಾಣವರ್ಯಾಸ್ತದದೃಶ್ಯವೇಧಿನೋರಕ್ಷೋವಿದಾರ್ಯಾವಿವಿಶುರ್ಧರಾತಲಂ ॥೮೪॥

ಸಃ – ಅಲಂಬುಸನು, ಅದೃಶ್ಯರೂಪಃ ಸನ್–ಕಾಣದಿರುವರೂಪವುಳ್ಳವನಾಗಿ, ಭೀಮಸ್ಯ–ಭೀಮನ, ಅನುಚರಾನ್– ಸೇವಕರನ್ನು, ಅಪೀಡಯತ್—ಪೀಡಿಸಿದನು. ಮಾರುತಿಃ– ಭೀಮನು,ತದ್ವೀಕ್ಷ್ಯ— ಅದನ್ನುನೋಡಿ, ಚುಕೋಪ – ಕುಪಿತನಾದನು. ಸಭೀಮಃ – ಆ ಭೀಮನು ಕಾಮ್ಯಕರ್ಮಹೀನೋಪಿ—ಫಲೇಚ್ಛೆಯಿಂದ ಕರ್ಮವನ್ನು ಮಾಡದವನಾದರೂ ಕೂಡ, ಆಗತಧರ್ಮಸಂಕಟಃ – ದೇವತೆಗಳನ್ನು ಪ್ರಾರ್ಥಿಸಿ ಅಸ್ತ್ರ ಪ್ರಯೋಗ ಮಾಡಿದರೆ ಶುದ್ಧ ಭಾಗವತ ಧರ್ಮದ ಹಾನಿಯೂ. ಅಸ್ತ್ರಪ್ರಯೋಗ ಮಾಡದಿದ್ದರೆ ತನ್ನ ಭೃತ್ಯರಿಗೆ ಪೀಡೆಯು ಈ ರೀತಿಯಾಗಿ ಧರ್ಮ ಸಂಕಟವನ್ನು ಹೊಂದಿದವನಾಗಿ, ಕೇಶವಾಜ್ಞಯಾ–ಶ್ರೀಕೃಷ್ಣನ ಅಪ್ಪಣೆಯಿಂದ, ಆತ್ಮನಿ– ತನ್ನಲ್ಲಿ ಅಸ್ತ್ರಜ್ಞತಾಂ—ಅಸ್ತ್ರದಜ್ಞಾನವನ್ನು,ಸಂದರ್ಶಯನ್ ಸನ್— ತೋರಿಸುವವನಾಗಿ, ತ್ವಾಷ್ಟ್ರಾಸ್ತ್ರಂ,—ತ್ವಷ್ಟೃ ದೇವತಾಕವಾದ ಅಸ್ತ್ರವನ್ನು, ಆದತ್ತ— ಹಿಡಿದುಕೊಂಡನು. ತತಃ— ಆ ಅಸ್ತ್ರದಿಂದ ಶರಾಃ —ಬಾಣಗಳು, ಉತ್ಥಿತಾಃ – ಉತ್ಪನ್ನಗಳಾದವು– ಅದೃಶ್ಯವೇಧಿನಃ – ಕಾಣದೇನೇ ಹಿಂಸಿಸತಕ್ಕ, ತೇ ಬಾಣವರ್ಯಾಃ – ಆ ಶ್ರೇಷ್ಠಬಾಣಗಳು, ತದ್ರಕ್ಷಃ– ಆ ಅಲಂಬುಸನನ್ನು, ವಿದಾರ್ಯ – ಸೀಳಿ, ಧರಾತಲಂ – ಭೂತಲವನ್ನು, ಆ ವಿವಿಶುಃ – ಪ್ರವೇಶಿಸಿದವು. ॥೮೩॥ ॥೮೪॥

ಭಾ. ಅ. ೬೫ – ೮೪ ಯುದ್ಧಮಾಡದಿರುವವರ ಮೇಲೆ ಗದಾ ಪ್ರಯೋಗ ಮಾಡಿದರೆ ಆ ಗದೆಯು ನಿನ್ನ ತಲೆಯನ್ನೇ ಸಹಸ್ರಹೋಳನ್ನಾಗಿ ಮಾಡುತ್ತದೆ. ಯುದ್ಧಮಾಡುವವರ ಮೇಲೆ ಮಾತ್ರ ಪ್ರಯೋಗಿಸಿದರೆ, ಈ ಗದೆಯು ವ್ಯರ್ಥವಾಗುವದೇಇಲ್ಲ ಎಂದು ಶ್ರುತಾಯುಧನಿಗೆ ವರುಣನು ವರವನ್ನು ಕೊಟ್ಟಿದ್ದರಿಂದ, ಯುದ್ಧಮಾಡದಿರುವ

ಕೃಷ್ಣನ ಮೇಲೆ ಗದಾಪ್ರಯೋಗಮಾಡಿದ್ದರಿಂದ ಶ್ರುತಾಯುಧನು ಸತ್ತು ಹೋದನು. ಹೀಗೆ ತನ್ನ ಪರಾಕ್ರಮಿಗಳೆಲ್ಲ ಸಾಯುತ್ತಾ ಇರಲು, ತನ್ನ ಸೈನ್ಯವು ನಾಶಹೊಂದುತ್ತಿರಲು, ದ್ರೋಣಾಚಾರ್ಯರ ಹತ್ತಿರ ದುರ್ಯೋಧನನು ಬಂದು ಅತಿ ದೀನವಾದ ಮಾತನ್ನು ಹೇಳಿ ತನ್ನ ಮೇಲೆ ದಯೆಉಂಟಾಗುವಂತೆ ಮಾತನಾಡಿದನು. ಆಗ ದ್ರೋಣರು ತಮ್ಮ ಮಂತ್ರ ಸಾಮರ್ಥ್ಯದಿಂದ ಅಭೇದ್ಯವಾದ ಕವಚವನ್ನು ದುರ್ಯೋಧನನಿಗೆ ಕಟ್ಟಿ ಇದರ ಸಾಮರ್ಥ್ಯದಿಂದ ನೀನು ಪಾಂಡವರ ಜೊತೆಗೆ ಯುದ್ಧ ಮಾಡಲು ಸಮರ್ಥನಾಗುವಿ. ಅಂಥ ಈ ಕವಚದಿಂದ ಕೂಡಿ ಅರ್ಜುನನನ್ನು ಎದುರಿಸು ಹೋಗು ಎಂದು ಹೇಳಿದರು. ಆಗ ದುರ್ಯೋಧನನು ಆ ಕವಚವನ್ನು ತೊಟ್ಟು, ರಥದಲ್ಲಿ ಕುಳಿತು, ಧನುರ್ಧಾರಿಯಾಗಿ ಅರ್ಜುನನ ಹತ್ತಿರ ಬಂದು, ಬಾಣಗಳಿಂದ ತಡೆದನು. ಅರ್ಜುನನೂಕೂಡ ಭಯಂಕರ ಬಾಣಗಳಿಂದ ಅವನಿಗೆ ಹೊಡೆದರೂಕೂಡ ಆ ಕವಚ ಭೇದವನ್ನು ಮಾಡಲು ಶಕ್ಯವಾಗಲಿಲ್ಲ. ಆಗ ದಿವ್ಯಾಸ್ತ್ರವನ್ನು ಪ್ರಯೋಗಿಸಲು ಉದ್ಯುಕ್ತನಾದಾಗ, ಅಶ್ವತ್ಥಾಮಾಚಾರ್ಯರು ಅದನ್ನೇಕತ್ತರಿಸಿದರು. ಆಗ ಅರ್ಜುನನು ದುರ್ಯೋಧನನ ಕುದುರೆಗಳನ್ನು ಕೊಂದು ಅವನಿಗೆ ಅಂಗೈಯಲ್ಲಿ ಹೊಡೆದನು. ಅಶ್ವತ್ಥಾಮನು ಅರ್ಜುನನನ್ನು ಎದುರಿಸಿದನು. ಅದ್ಭುತ ಪರಾಕ್ರಮಿಗಳಾದ ಅರ್ಜುನ ಹಾಗು ಅಶ್ವತ್ಥಾಮ, ಕರ್ಣ, ಮೊದಲಾಗಿಉಳ್ಳವರಿಗೆ ಜಯದ್ರಥನ ಸಲುವಾಗಿ ಭಯಂಕರ ಯುದ್ಧವಾಯಿತು. ಅರ್ಜುನನು ಕೌರವಸೈನ್ಯದೊಳಗೆ ಪ್ರವೇಶಿಸಿದಾಗ, ದ್ರೋಣರು ಪಾಂಡವಸೈನ್ಯವನ್ನು ಪ್ರವೇಶಿಸಿದರು ಮತ್ತು ಬಹು ರಥಿಕರನ್ನು ಸಂಹರಿಸಿದರು. ವೃದ್ಧರಾದರೂ ಕೂಡ ತರುಣರಂತೆ ಭಯಂಕರ ಯುದ್ಧ ಮಾಡಿದರು. ಅನೇಕರ ತಲೆಗಳನ್ನು ಕೆಡುವುತ್ತಾ ಧರ್ಮರಾಜನ ಸಮೀಪಕ್ಕೆ ಬಂದು ಅವನನ್ನು ಬಂಧಿಸಲು ಉದ್ಯುಕ್ತರಾದಾಗ, ದ್ರುಪದಪುತ್ರನಾದ ಸತ್ಯಜಿತ್‌ನು ಅವರನ್ನು ಎದುರಿಸಿದನು. ಅವನ ತಲೆಯನ್ನೇಕತ್ತರಿಸಿದರು. ಧರ್ಮರಾಜನು ತನ್ನ ಶಕ್ತ್ಯನುಸಾರ ಯುದ್ಧಮಾಡಿದರೂ ಕೂಡ ಆಯುಧಕುದುರೆ, ರಥಗಳನ್ನು ಕಳಿದುಕೊಂಡು ಬರಿಕೈಯನ್ನು ಮೇಲಿಮಾಡಿ ನಿಂತಾಗ, ಅವನನ್ನು ಬಂಧಿಸಲು ದ್ರೋಣರು ಬರುತ್ತಿರುವಾಗ, ಸಹದೇವನರಥವು ಸರಿಸಮಯಕ್ಕೆ ಧರ್ಮರಾಜನ ಹತ್ತಿರ ಬಂದಿದೆ. ಅದನ್ನು ಏರಿಕೊಂಡು ಧರ್ಮರಾಜನು ಅಲ್ಲಿಂದ ವೇಗವಾಗಿ ಹೋದನು. ಆಗ ಶಿಶುಪಾಲ ಜರಾಸಂಧರ ಪುತ್ರರು, ಕಾಶೀರಾಜನು, ಶೈಬ್ಯನು, ಪಂಚಕೈಕಯರು ಎಲ್ಲರೂ ಸೇರಿ ದ್ರೋಣರಿಗೆ ಎದುರುನಿಂತು ಪೀಡಿಸಿದರು. ಅವರೆಲ್ಲರ ಶಿರಸ್ಸುಗಳನ್ನು ದ್ರೋಣರುಕತ್ತರಿಸಿದರು. ಬಹುಸೈನ್ಯವನ್ನುನಾಶ ಮಾಡಿದರು. ಆಗ ಭೀಮಸೇನದೇವರು ಕೌರವಸೈನ್ಯವನ್ನು ಬಹಳವಾಗಿ ನಾಶಮಾಡುತ್ತಿರಲು ಉಳಿದವರು ಓಡಿಹೋದರು. ಆಗ ಅಲಂಬುಸನು ಬಂದು ಯುದ್ಧಕ್ಕೆ ನಿಂತಾಗ, ಭೀಮಸೇನರಿಂದ ಪೀಡಿತನಾಗಿ ಕೂಡಲೇ ಅದೃಶ್ಯನಾದನು ಮತ್ತು ಭೀಮಸೇನರ ಸೈನಿಕರನ್ನು ಪೀಡಿಸುತ್ತಿರುವಾಗ ಭೀಮಸೇನರು ಸಿಟ್ಟಿಗೆದ್ದು ಶ್ರೀಕೃಷ್ಣನ ಅಪ್ಪಣೆಯಂತೆ ಅಸ್ತ್ರವನ್ನು ಅವನ ಮೇಲೆ ಪ್ರಯೋಗಿಸಿದರು. ಆ ಅಸ್ತ್ರಪೂರ್ವಕ ಬಾಣಗಳು ಕಾಣದಂತೆಯೇ ಆ ರಾಕ್ಷಸನನ್ನು ಸೀಳಿ ಭೂಮಿಯನ್ನು ಪ್ರವೇಶಿಸಿದವು. ಅಸ್ತ್ರಪ್ರಯೋಗಮಾಡದಿದ್ದರೆ ಸೈನ್ಯಕ್ಕೆ ತೊಂದರೆ, ಮಾಡಿದರೆ ತನ್ನ ಭಾಗವತ ಧರ್ಮತ್ಯಾಗ ಹೀಗೆ ಒಂದು ಥರದ ಧರ್ಮಸಂಕಟವಾದರೆ, ಸಜ್ಜನರಿಗೆ ತಾನು ಅಸ್ತ್ರಜ್ಞನೆಂಬ ತನ್ನ ಮಹಿಮೆಯು ತಿಳಿಯಲಿ ಎಂಬ ಇಚ್ಛೆಇತ್ತು ಅದಕ್ಕಾಗಿ ಪ್ರಯೋಗಿಸಿದರೆ ಧರ್ಮಹಾನಿ, ಪ್ರಯೋಗಿಸದಿದ್ದರೆ ಮಹಿವರಾಜ್ಞನವಾಗುವದಿಲ್ಲ ಎಂಬ ಧರ್ಮಸಂಕಟವೂ ಇತ್ತು. ಶ್ರೀಕೃಷ್ಣನ ಅಪ್ಪಣೆಯು ಆಗಿದ್ದರಿಂದ ಎಲ್ಲವೂ ಪರಿಹಾರವಾಯಿತು.

ತದ್ಧನ್ಯಮಾನಂ ಪ್ರವಿಹಾಯ ಭೀಮಮುಪಾದ್ರವದ್ದೂರತರಂ ಸುಭೀತಂ ॥
ತತಸ್ತುಭೀಮೋ ದ್ವಿಷತಾಂವರೂಥಿನೀಂ ವಿದ್ರಾವಯಾಮಾಸ ಶರೈಃ ಸುಮುಕ್ತೈಃ ॥೮೫॥

ಹನ್ಯಮಾನಂ – ಭೀಮನಿಂದಹಿಂಸಿಸಿಕೊಳ್ಳಲ್ಪಡತಕ್ಕ, ಸುಭೀತಂ – ಚೆನ್ನಾಗಿಭಯಗ್ರಸ್ತನಾದ, ತತ್ - ಆ ಅಲಂಬುಸ ರಾಕ್ಷಸನು, ಭೀಮಂ—ಭೀಮನನ್ನು, ಪ್ರವಿಹಾಯ – ಬಿಟ್ಟು, ದೂರತರಂ – ಬಹುದೂರ, ಅಪಾದ್ರವತ್–ಓಡಿದನು, ತತಃ–ಅನಂತರ, ಭೀಮಃ–ಭೀಮನು, ದ್ವಿಷತಾಂ—ಶತ್ರುಗಳಾದ ಕೌಡವರ, ವರೂಥಿನೀಂ – ಸೈನ್ಯವನ್ನು, ಸುಮುಕ್ತೈಃ – ಚೆನ್ನಾಗಿ ಬಿಡಲ್ಪಟ್ಟ, ಶರೈಃ – ಬಾಣಗಳಿಂದ, ವಿದ್ರಾವಯಾಮಾಸ – ಓಡಿಸಿದನು. ॥೮೫॥

ತದೈವ ಕೃಷ್ಣಾತನಯಾಃ ಸಮೇತಾಜಘ್ನುಃ ಶಲಂಸಂಯತಿ ಸೌಮದತ್ತಿಂ ॥
ಅಲಂಬುಸಂ ಪ್ರಾಪತದಾಘಟೋತ್ಕಚಃ ಪರಸ್ಪರಂ ತೌ ರಥಿನಾವಯುಧ್ಯತಾಂ ॥೮೬॥

ತದೈವ — ಆಗಲೇ,ಮಿಲಿತಾಃ – ಒಟ್ಟಿಗೆ ಸೇರಿರುವ,ಕೃಷ್ಣಾತನಯಾಃ – ದ್ರೌಪದಿಯ ಮಕ್ಕಳು, ಸಂಯುತಿ–ಯುದ್ಧದಲ್ಲಿ, ಸೌಮದತ್ತಿಂ — ಸೋಮದತ್ತನ ಮಗನಾದ, ಶಲಂ – ಶಲನೆಂಬವನನ್ನು, ಜಘ್ನುಃ– ಕೊಂದರು. ತದಾ – ಆಗ, ಘಟೋತಚಃ–ಘಟೋತ್ಕಚನು,ಅಲಂಬುಸಂ – ಅಲಂಬುಸನನ್ನು, ಪ್ರಾಪ – ಹೊಂದಿದನು. ರಥಿನೌ — ರಥವುಳ್ಳ, ತೌ – ಘಟೋತ್ಕಚ ಅಲಂಬುಸರಿಬ್ಬರು, ಪರಸ್ಪರಂ – ಅನ್ಯೋನ್ಯವಾಗಿ, ಅಯುಧ್ಯತಾಂ – ಯುದ್ಧ ಮಾಡಿದರು. ॥೮೬॥

ಘಟೋತ್ಕಚಸ್ತಂವಿರಥಂ ವಿಧಾಯ ಖಸ್ಥಂ ಖವಿನಾಭಿಯುಯೋಧ ಸಂಸ್ಥಿತಃ ॥
ತತಸ್ತುತಂ ಭೀಮಸುತೋ ನಿಗೃಹ್ಯ ನಿಪಾತ್ಯ ಭೂಮೌ ಪ್ರದದೌ ಪ್ರಹಾರಂ ॥೮೭॥

ಪದಾ ಶಿರಸ್ಯೇವ ಸಪಿಷ್ಟಮುಸ್ತಕೋಮುಮಾರ ಮಧ್ಯೇ ಪೃಥಿವೀಪತೀನಾಂ ॥
ತಸ್ಮಿನ್ಹತೇ ಭೈಮಸೇನಿಃ ಕುರೂಣಾಂ ವ್ಯದ್ರಾವಯದ್ರಥವೃಂದಂ ಸಮುಂತಾತ್ ॥೮೮॥

ಖೇ ಸ್ಥ – ಆಕಾಶದಲ್ಲಿಯೇ,ಸಂಸ್ಥಿತಃ – ಇರತಕ್ಕ, ಘಟೋತ್ಕಚಃ— ಘಟೋತ್ಕಚನು,ಖಸ್ಥಂ – ಆಕಾಶದಲ್ಲಿರತಕ್ಕ, ತಂ– ಆ ಅಲಂಬುಸನನ್ನು, ವಿರಥಂ-ರಥರಹಿತನನ್ನಾಗಿ, ವಿಧಾಯ – ಮಾಡಿ, ಯುಯೋಧ – ಯುದ್ಧಮಾಡಿದನು, ತತಃ – ಅನಂತರ, ಭೀಮಸುತಃ— ಭೀಮನಮಗನಾದ, ಘಟೋತ್ಕಚನು ತಂ– ಆ ಅಲಂಬುಸನನ್ನು, ನಿಗೃಹ್ಯ – ನಿಗ್ರಹಿಸಿ ಭೂಮೌ – ಭೂತಲದಲ್ಲಿ, ನಿಪಾತ್ಯ – ಕೆಡಹಾಕಿ, ಶಿರಸ್ಯೇವ–ತಲೆಯ ಮೇಲೆಯೇ, ಪದಾ–ಕಾಲಿನಿಂದ, ಪ್ರಹಾರಂ– ಏಟನ್ನು ಪ್ರದದೌ— ಕೊಟ್ಟನು. ಪಿಷ್ಟಮುಸ್ತಕಃ – ಪುಡಿ ಪುಡಿಯಾದತಲೆಯುಳ್ಳ, ಸಃ— ಆ ಅಲಂಬುಸನು, ಪೃಥಿವೀಪತೀನಾಂ— ರಾಜರ, ಮಧ್ಯೇ – ಮಧ್ಯದಲ್ಲಿ, ಮಮಾರ — ಸತ್ತನು, ತಸ್ಮಿನ್— ಆ ಅಲಂಬುಸನು, ಹತೇಸತಿ – ಕೊಲ್ಲಲ್ಪಡುತ್ತಿರಲು, ಭೈಮಸೇನಿಃ – ಭೀಮನ ಮಗನಾದ, ಘಟೋತ್ಕಚನು, ಕುರೂಣಾಂ—ಕುರುಗಳ, ರಥವೃಂದಂ—ರಥಗಳ ಸಮೂಹವನ್ನು, ಸಮುಂತಾತ್ – ಸುತ್ತಮುತ್ತಲೂ, ವ್ಯದ್ರಾವಯುತ್ — ಓಡಿಸಿದನು. ॥೮೭॥೮೮॥

ತದಾಸದತ್ಕೃತವರ್ಮಾರಥೇನ ಸೇನಾಂಪಾಂಡೂನಾಂ ಶರವರ್ಷಂ ಪ್ರಮುಂಚನ್ ॥
ದದೌ ವರಂತಸ್ಯಹಿಪೂರ್ವಮಚ್ಯುತಃ ಪ್ರೀತಃಸ್ತುತ್ಯಾಸರ್ವಜಯಂ ಮುಹೂರ್ತೇ ॥೮೯॥

ತದಾ—ಆಗ, ಕೃತವರ್ಮಾ – ಕೃತವರ್ಮನು, ಶರವರ್ಷಂ – ಬಾಣಗಳ ಮಳೆಯನ್ನು, ಪ್ರಮುಂಚನ್‌ಸನ್ – ಸುರಿಸುವವನಾಗಿ, ರಥೇನ – ರಥದಿಂದ, ಪಾಂಡೂನಾಂ—ಪಾಂಡವರ, ಸೇನಾಂ – ಸೈನ್ಯವನ್ನು, ಆಸದತ್–ಹೊಂದಿದನು, ಪೂರ್ವಂ—ಮೊದಲು, ಅಚ್ಯುತಃ – ಶ್ರೀಕೃಷ್ಣನು, ತಸ್ಯ – ಆ ಕೃತವರ್ಮನ, ಸ್ತುತ್ಯಾ – ಸ್ತೋತ್ರದಿಂದ, ಪ್ರೀತಃಸನ್ – ಸಂತುಷ್ಟನಾಗಿ, ಮುಹೂರ್ತೇ — ಎರಡು ಘಳಿಗೆ ಕಾಲದಲ್ಲಿ, ಸರ್ವಜಯಂ – ತನ್ನೊಡನೆ ಯುದ್ಧಕ್ಕೆ ಬಂದವರೆಲ್ಲರ ಜಯರೂಪವಾದ, ವರಂ — ವರವನ್ನು, ದದೌ—ಕೊಟ್ಟಿದ್ದನು. ॥೮೯॥

ಸತೇನ ಪಾಂಚಾಲಗಣಾನ್ವಿಜಿಗ್ಯೇಯಮೌ ಚ ಭೀಮಸ್ಯ ಪುರೋಽಥತಂಚ ॥
ವಿವ್ಯಾಧಬಾಣೇನ ಸವಾಸುದೇವವರಂವಿಜಾನನ್ನತದಾಸಮುಭ್ಯಯಾತ್ ॥೯೦॥

ತೇನ – ವರವಿರುವ ಆ ಕಾರಣದಿಂದ, ಸಃ – ಆ ಕೃತವರ್ಮನು, ಭೀಮಸ್ಯ—ಭೀಮನ, ಪುರಃ – ಮುಂಭಾಗದಲ್ಲಿ, ಪಾಂಚಾಲಗಣಾನ್ – ಪಾಂಚಾಲರ ಸಮೂಹಗಳನ್ನೂ, ಯಮೌ ಚ – ನಕುಲಸಹದೇವರನ್ನೂ ಕೂಡ, ವಿಜಿಗ್ಯೇ – ಗೆದ್ದನು, ಅಥ—ಅನಂತರ, ತಂಚ–ಆ ಭೀಮನನ್ನೂ ಕೂಡ, ಬಾಣೇನ–ಶರದಿಂದ. ವಿವ್ಯಾಧ – ಹೊಡೆದನು, ಸಃ – ಆ ಭೀಮಸೇನನು ವಾಸುದೇವವರಂ–ಶ್ರೀಕೃಷ್ಣನು ಕೊಟ್ಟಿರುವ ವರವನ್ನು, ವಿಜಾನನ್ – ತಿಳಿದವನಾಗಿ, ತದಾ – ಆ ಒಂದು ಮುಹೂರ್ತಕಾಲದಲ್ಲಿ, ನ ಸಮುಭ್ಯಯಾತ್ – ಕೃತವರ್ಮನನ್ನು ಹೊಂದಲಿಲ್ಲ. ॥೯೦॥

ವಿನೈವ ವೃಷ್ಣೀನ್ವಿ ಜಯೇ ವರೋಯದ ಮುಷ್ಯತೇನಾಸ್ಯಹಯಾನ್ಸಸಾತ್ಯಕಿಃ ॥
ನಿಹತ್ಯಬಾಣೈರತುದತ್ಸಯಾನ ಮನ್ಯತ್ಸಮಾಸ್ಥಾಯ ತತೋಽಪಜಗ್ಮಿವಾನ್ ॥೯೦॥

ಯತ್ - ಯಾವಕಾರಣದಿಂದ, ವೃಷ್ಣೀನ್—ಯಾದವರನ್ನು, ವಿನೈವ—ಹೊರತೇ, ಅಮುಷ್ಯ—ಈ ಕೃತವರ್ಮನಿಗೆ ವಿಜಯೇ – ಸರ್ವರನ್ನು ಜಯಿಸುವ ವಿಷಯದಲ್ಲಿ ವರಃ—ವರವಿದೆಯೋ. ತೇನ – ಆ ಕಾರಣದಿಂದ, ಸಸಾತ್ಯಕಿಃ – ವೃಷ್ಣಿಗಳಲ್ಲಿ ಸೇರಿದಸಾತ್ಯಕಿಯು, ಅಸ್ಯ—ಈ ಕೃತವರ್ಮನ,ಹಯಾನ್—ಕುದರೆಗಳನ್ನು,ನಿಹತ್ಯ- ಕೊಂದು, ಬಾಣೈಃ ಶರಗಳಿಂದ ಅತುದತ್— ವ್ಯಥೆಪಡಿಸಿದನು. ಸಃ - ಆ ಕೃತವರ್ಮನು, ಅನ್ಯತ್– ಬೇರೆ, ಯಾನಂ— ರಥವನ್ನು, ಸಮಾಸ್ಥಾಯ – ಏರಿಕೊಂಡು, ತತಃ – ಆ ಸಾತ್ಯಕಿಯು ಇರುವಲ್ಲಿಂದ, ಅಪಜಗ್ಮಿವಾನ್ – ಹೊರಟು ಹೋದನು. ॥೯೦॥

ತದಾಹರಿಃ ಪಾಂಚಜನ್ಯಂ ಸುಘೋಷಮಾಪೂರಯಾಮಾಸ ಜಯೇಽಭಿಯುಧ್ಯತಿ ॥
ಕರ್ಣಾದಿಭಿರ್ದ್ರೌಣಿ ಮುಖೈರಿಪೂಣಾಂ ಬಲಪ್ರಹಾಣಾಯ ಪರಃ ಪರೇಭ್ಯಃ ॥೯೨॥

ಜಯೇ—ಅತ್ಯಂತ ಜಯವುಳ್ಳ ಅರ್ಜುನನು, ದ್ರೌಣಿ ಮುಖ್ಯೈಃ-ಅಶ್ವತ್ಥಾಮನೇ ಪ್ರಧಾನರಾಗಿ ಉಳ್ಳ,ಕರ್ಣಾದಿಭಿಃ—ಕರ್ಣನೇ ಮೊದಲಾಗಿ ಉಳ್ಳವರಿಂದ, ಅಭಿಯುಧ್ಯತಿ ಸತಿ –ಯುದ್ಧ ಮಾಡುತ್ತಿರಲು, ಪರೇಭ್ಯಃ— ಉತ್ತಮರಾದ ಬ್ರಹ್ಮಾದಿಗಳಿಂದಲೂ, ಪರಃ – ಉತ್ತಮನಾದ, ಹರಿಃ—ಶ್ರೀಕೃಷ್ಣನು, ತದಾ – ಆಗ, ಶತ್ರೂಣಾಂ – ಶತ್ರುಗಳ, ಬಲಪ್ರಹಾಣಾಯ – ಸಾಮರ್ಥ್ಯವನ್ನು ನಾಶಪಡಿಸುವುದಕ್ಕಾಗಿ, ಸುಘೋಷಂ – ಚನ್ನಾಗಿ ಧ್ವನಿಯುಳ್ಳ ಪಾಂಚಜನ್ಯಂ — ಪಾಂಚಜನ್ಯವೆಂಬ ಶಂಖವನ್ನು, ಆಪೂರಯಾಮಾಸ – ಊದಿದನು. ॥೯೨॥

ಸಪಾಂಚಜನ್ಯೋಽಚ್ಯುತ ವಕ್ತ್ರವಾಯುನಾಭೃಶಂ ಸುಪೂರ್ಣೋದರ ನಿಸ್ಸೃತಧ್ವನಿಃ ॥
ಜಗದ್ವಿರಿಂಚೇಶ ಸುರೇಂದ್ರಪೂರ್ವಕಂ ಪ್ರಕಂಪಯಾಮಾಸ ಯುಗಾತ್ಯಯೇಯಥಾ ॥೯೩॥

ಅಚ್ಯುತವಕ್ತ್ರವಾಯುನಾ – ಶ್ರೀಕೃಷ್ಣನ ಮುಖದ ಗಾಳಿಯಿಂದ, ಸುಪೂರ್ಣೋದರ ನಿಸ್ಸೃತಧ್ವನಿಃ – ಚೆನ್ನಾಗಿಪೂರ್ಣ ಶಂಖದಮಧ್ಯಭಾಗದಿಂದ ಹೊರಟಶಬ್ದವುಳ್ಳ, ಸಪಾಂಚಜನ್ಯಃ— ಆ ಶಂಖವು, ವಿರಿಂಚೇಶಸುರೇಂದ್ರಪೂರ್ವಕಂ — ಬ್ರಹ್ಮನು, ರುದ್ರನು, ದೇವೇಂದ್ರನು ಇವರೇ ಮೊದಲಾಗಿಉಳ್ಳ, ಜಗತ್ – ಲೋಕವನ್ನು, ಯುಗಾತ್ಯಯೇ – ಪ್ರಳಯ ಕಾಲದಲ್ಲಿ, ಯಥಾ – ಹೇಗೋ, ತಥಾ – ಹಾಗೆಯೇ, ಭೃಶಂ – ಚೆನ್ನಾಗಿ, ಪ್ರಕಂಪಯಾಮಾಸ – ಅಲಗಾಡಿಸಿತು. ॥೯೩॥

ಗಾಂಡೀವ ಘೋಷೇಚತದಾಭಿಭೂತೇ ಯುಧಿಷ್ಠಿರೋಭೀತಭೀತಸ್ತದೈತ್ಯ ॥
ಶೈನೇಯ ಮೂಚೇಪರಸೈನ್ಯಮಗ್ನೇಪಾರ್ಥೇಸ್ವಯಂ ಯುಧ್ಯತಿಕೇಶವಃಸ್ಮ ॥೯೪॥

ತದಾ – ಆಗ, ಗಾಂಡೀವಘೋಷೇ – ಗಾಂಡೀವ ಧನುಸ್ಸಿನ ಶಬ್ದವು, ಅಭಿಭೂತೇಸತಿ – ತಿರಸ್ಕೃತವಾಗುತ್ತಿರಲು, ಭೀತಭೀತಃ – ಅತ್ಯಂತ ಭಯವನ್ನು ಹೊಂದಿದ, ಯುಧಿಷ್ಠಿರಃ – ಧರ್ಮರಾಜನು, ಶೈನೇಯಂ—ಸಾತ್ಯಕಿಯನ್ನು, ಏತ್ಯ – ಹೊಂದಿ, ಪಾರ್ಥೇ – ಅರ್ಜುನನು, ಪರಸೈನ್ಯಮಗ್ನೇಸತಿ — ಶತ್ರುಗಳ ಸೈನ್ಯದ ಮಧ್ಯದಲ್ಲಿ ಸಿಲುಕಿಕೊಂಡಿರುತ್ತಿರಲು, ಕೇಶವಃ – ಶ್ರೀಕೃಷ್ಣನು, ಸ್ವಯಂ — ತಾನೇ, ಯುಧ್ಯತಿ – ಯುದ್ಧಮಾಡುತ್ತಾನೆ, ಸ್ಮ — ಪ್ರಸಿದ್ಧ, ಇತಿ — ಎಂದು, ಊಚೇ — ಹೇಳಿದನು ॥೯೪॥

ನಶ್ರೂಯತೇ ಗಾಂಡಿವಸ್ಯಾದ್ಯಘೋಷಃ ಸಂಶ್ರೂಯತೇಪಾಂಚಜನ್ಯಸ್ಯರಾವಃ ॥
ತದ್ಯಾಹಿ ಜಾನೀಹಿ ತವುದ್ಯಪಾರ್ಥಂ ಯದಿಸ್ಮಜೀವತ್ಯಸಹಾಯ ಏಷಃ ॥೯೫॥

ಯತ್—ಯಾವ ಕಾರಣದಿಂದ, ಅದ್ಯ – ಈಗ, ಗಾಂಡೀವಸ್ಯ – ಗಾಂಡೀವಧನುಸ್ಸಿನ, ಘೋಷಃ – ಧ್ವನಿಯು, ನಶ್ರೂಯತೇ – ಕೇಳಲ್ಪಡುವುದಿಲ್ಲವೋ, ಪಾಂಚಜನ್ಯಸ್ಯ—ಶ್ರೀಕೃಷ್ಣನ ಶಂಖದ, ರಾವಃ – ಶಬ್ದವು, ಸಂಶ್ರೂಯತೇ–ಚೆನ್ನಾಗಿ ಕೇಳಲ್ಪಡುತ್ತದೋ, ತತ್ – ಆ ಕಾರಣದಿಂದ, ಯಾಹಿ—ಶ್ರೀಕೃಷ್ಣನ ಸಮೀಪಕ್ಕೆ ಹೋಗು, ಅದ್ಯ – ಈಗ, ತಂ ಪಾರ್ಥಂ– ಆ ಅರ್ಜುನನನ್ನು, ಜಾನೀಹಿ – ಬದುಕಿರುವನೋ ಇಲ್ಲವೋ ಎಂದು ತಿಳಿ, ಅಸಹಾಯಃ — ಸಹಾಯಕನಿಲ್ಲದ, ಏಷಃ – ಈ ಅರ್ಜುನನು, ಯದಿ ಜೀವತಿ — ಬದುಕಿಕೊಂಡಿದ್ದರೆ ಸಹಾಯಕನಾಗು. ॥೯೫॥

ಇತೀರಿತಃ ಸಾತ್ಯಕಿರತ್ರವಿಪ್ರಾನ್ಸಂಪೂಜ್ಯ ವಿತ್ತೈಃಪರಮಾಶಿಷಶ್ಚ ॥
ಜಯಾಯ ತೇಭ್ಯಃ ಪ್ರತಿಗೃಹ್ಯ ಸೇನಾಮುಖಂ ಯಯೌ ಭೀಮಸೇನಾನುಯಾತಃ ॥೯೬॥

ಇತಿ – ಈ ರೀತಿಯಾಗಿ, ಈರಿತಃ — ಹೇಳಿಸಿಕೊಳ್ಳಲ್ಪಟ್ಟ, ಸಾತ್ಯಕಿಃ – ಸಾತ್ಯಕಿಯು, ಅತ್ರ ಈ ಸಮಯದಲ್ಲಿ, ವಿತ್ತೈಃ ದ್ರವ್ಯಗಳಿಂದ, ವಿಪ್ರಾನ್ — ಬ್ರಾಹ್ಮಣರನ್ನು, ಸಂಪೂಜ್ಯ – ಚೆನ್ನಾಗಿ ಪೂಜಿಸಿ, ತೇಭ್ಯಃ – ಆ ವಿಪ್ರರಿಂದಲೂ ಜಯಾಯ – ಜಯಕ್ಕೋಸ್ಕರ, ಪರಮಾಶಿಷಶ್ಚ – ಉತ್ತಮಾಶೀರ್ವಾದಗಳನ್ನೂ ಕೂಡ, ಪ್ರತಿಗೃಹ್ಯ – ಸ್ವೀಕರಿಸಿ, ಭೀಮಸೇನಾನುಯಾತಸ್ತನ್— ಶತ್ರುಗಳನ್ನು ತಡೆಯುವುದಕ್ಕಾಗಿ ಭೀಮನಿಂದ ಹಿಂಬಾಲಿಸಲ್ಪಟ್ಟವನಾಗಿ, ಸೇನಾಮುಖಂ – ಸೇನೆಯ ಮುಂಭಾಗವನ್ನು ಕುರಿತು, ಯಯೌ – ಹೋದನು. ॥೯೬॥

ಭೀಮಸ್ತು ಸೇನಾಮುಖಮಾಶು ಭಿತ್ವಾಪ್ರಾವೇಶಯದ್ಯುಯುಧಾನಂ ಚಮೂಂತಾಂ ॥
ಸಯುಧ್ಯಮಾನೋ ಗುರುಣಾಭ್ಯುಪೇಕ್ಷಿತಃ ಸೂತಂನಿಹತ್ಯಾದ್ರಾವಯಾಮಾಸ ಚಾಶ್ವಾನ್ ॥೯೭॥

ಭೀಮಸ್ತು – ಭೀಮುವಾದರೂ, ಆಶು – ಕೂಡಲೇ, ಸೇನಾಮುಖಂ – ಸೈನ್ಯದ ದ್ವಾರವನ್ನು, ಭಿತ್ವಾ – ಭೇದಿಸಿ, ಯುಯುಧಾನಂ–ಸಾತ್ಯಕಿಯನ್ನು, ತಾಂ ಚಮೂಂ—ಆ ಸೈನ್ಯವನ್ನು, ಪ್ರಾವೇಶಯತ್ — ಪ್ರವೇಶ ಮಾಡಿಸಿದನು, ಗುರುಣಾ– ಗುರುಗಳಾದ ದ್ರೋಣರಿಂದ, ಯುಧ್ಯಮಾನಃ—ಯುದ್ಧಮಾಡಿಸಿಕೊಳ್ಳಲ್ಪಡತಕ್ಕ, ಸಃ – ಆ ಸಾತ್ಯಕಿಯು, ಅಭ್ಯುಪೇಕ್ಷಿತ– ಸ್ತನ್ – ಉಪೇಕ್ಷಿಸಿಕೊಳ್ಳಲ್ಪಟ್ಟವನಾಗಿ, ಸೂತಂ–ದ್ರೋಣರ ಸಾರಥಿಯನ್ನು, ನಿಹತ್ಯ – ಕೊಂದು, ಅಶ್ವಾನ್–ಕುದುರೆಗಳನ್ನು ದ್ರಾವಯಾಮಾಸ – ಓಡಿಸಿದನು. ॥೯೭॥

ಬಲಂವಿವೃದ್ಧಂಚ ತದಾಸ್ಯಸಾತ್ಯಕೇರ್ವಿಪ್ರಾಶೀರ್ಭಿಃ ಕೃಷ್ಣವರಾದಪಿಸ್ಮ ॥
ಬಲಸ್ಯವೃದ್ಧಿರ್ಹಿಪುರಾಸ್ಯ ದತ್ತಾ ಕೃಷ್ಣೇನ ತುಷ್ಟೇನ ದಿನೇಹಿ ತಸ್ಮಿನ್ ॥೯೮॥

ತದಾ – ಆ ಸೇನಾಮುಖಪನ್ನು ಪ್ರವೇಶಿಸುವಸಮಯದಲ್ಲಿ, ವಿಪ್ರಾಶೀರ್ಭಿಃ– ಬ್ರಾಹ್ಮಣರ ಆಶೀರ್ವಾದಗಳಿಂದಲೂ, ಕೃಷ್ಣವರಾದಪಿಸ್ಮ – ಶ್ರೀಕೃಷ್ಣನವರದಿಂದಲೂಕೂಡ, ಅಸ್ಯಸಾತ್ಯಕೇಃ – ಈ ಸಾತ್ಯಕಿಗೆ, ಬಲಂ – ಸಾಮರ್ಥ್ಯವು, ವಿವೃದ್ಧಂ– ಅಭಿವೃದ್ಧವಾಯಿತು. ಹಿ–ಯಶಾವಕಾರಣದಿಂದ, ತುಷ್ಟೇನ — ಸಂತುಷ್ಟನಾದ, ಕೃಷ್ಣೇನ – ಶ್ರೀಕೃಷ್ಣನಿಂದ, ಅಸ್ಯ – ಈ ಸಾತ್ಯಕಿಗೋಸ್ಕರ, ತಸ್ಮಿನ್ ದಿನೇ–ಅರ್ಜುನನ ಸಹಾಯಕ್ಕಾಗಿಹೋಗುವದಿನದಲ್ಲಿ, ಬಲಸ್ಯ–ಸಾಮರ್ಥ್ಯದ ವೃದ್ಧಿಃ–ಅಭಿವೃದ್ಧಿಯು ಭೂಯಾತ್ – ಆಗಲಿ, ಇತಿ – ಎಂದು. ಆಶೀಃ- ಆಶೀರ್ವಾದವು ಪುರಾ–ಹಿಂದೆ, ದತ್ತಾ–ಕೊಡಲ್ಪಟ್ಟದೋ, ತತ್–ಆ ಕಾರಣದಿಂದ ಬಲವು ಅಭಿವೃದ್ಧಿಯಾಯಿತು. ಹಿ— ಇದು ಪ್ರಸಿದ್ಧವು.

ತತೋವಿವೃದ್ಧೋರುಬಲಾತ್ಸಸಾತ್ಯಕಿಃಸಂಸ್ಥಾಪ್ಯಭೀಮಂ ಪ್ರಯಯೌ ರಥೇನ ॥
ತಂ ಬಾಣವರ್ಷೈಃಪೃತನಾಂಸಮುಂತಾನ್ನಿಘ್ನಂತಮಾಜೌ ಹೃದಿಕಾತ್ಮಜೋಭ್ಯಯಾತ್ ॥೯೯॥

ತತಃ—ಅನಂತರ, ವಿವೃದ್ಧೋರುಬಲಾತ್–ಬ್ರಾಹ್ಮಣರ ಆಶೀರ್ವಾದ, ಕೃಷ್ಣನವರಗಳಿಂದ ವಿಶೇಷವಾಗಿ ಅಭಿವೃದ್ಧವಾದ, ಉತ್ಕೃಷ್ಟ ಬಲದನಿಮಿತ್ತದಿಂದ, ಭೀಮಂ —ಭೀಮನನ್ನು, ಸಂಸ್ಥಾಪ್ಯ – ಸೇನಾಮುಖದ ಹೊರಗೆ ನಿಲ್ಲಿಸಿ, ರಥೇನ – ರಥದಿಂದ, ಪ್ರಯಯೌ – ಹೋದನು. ಹೃದಿಕಾತ್ಮಜಃ—ಹೃದಿಕನ ಮಗನಾದ ಕೃತವರ್ಮನು, ಬಾಣವರ್ಷೈಃ–ಬಾಣಗಳ ಮಳೆಗಳಿಂದ, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ಪೃತನಾಂ —ಸೈನ್ಯವನ್ನು, ನಿಘ್ನಂತಂ— ನಾಶವಾಡತಕ್ಕ, ತಂ – ಆ ಸಾತ್ಯಕಿಯನ್ನು, ಅಭ್ಯಯಾತ್ —ಹೊಂದಿದನು. ॥೯೯॥

ತಯೋರಭೂದ್ಯುದ್ಧಮತೀವದಾರುಣಂತತ್ರಾಕರೋತ್ತಂವಿರಥಂಸಸಾತ್ಯಕಿಃ ॥
ವಿಜಿತ್ಯತಂಸಾತ್ಯಕಿರುಗ್ರಧನ್ವಾಯಯಾವತೀತ್ಯೈವ ಶಿರಾಂಸಿ ಯೂನಾಂ ॥೧೦೦॥

ಕೃಂತನ್‌ಶರೈಸ್ತಂ ಜಲಸಂಧ ಆಗಮದ್ರಣೇಗಜಸ್ಕಂಧಗತೋಽಭಿಯೋದ್ಧುಂ ॥
ನಿವಾರಯಂತಂತವಮಸಹ್ಯವಿಕ್ರಮಂ ನಿಹತ್ಯಬಾಣೈಃಸಮರೇಸಸಾತ್ಯಕಿಃ ॥
ವಿಲೋಡಯಾಮಾಸ ಬಲಂಕುರೂಣಾಂ ನಿಘ್ನನ್‌ಗಜಸ್ಯಂದನವಾಜಿಪತ್ತಿನಃ ॥೧೦೧॥೧೦೨॥

ತಯೋಃ - ಆಸಾತ್ಯಕಿ,ಕೃತವರ್ಮರಿಗೆ, ಅತೀವದಾರುಣಂ–ಅತಿಭಯಂಕರವಾದ,ಯುದ್ಧಂ–ಯುದ್ಧವು, ಆಭೂತ್–ಆಯಿತು. ತತ್ರ—ಅಲ್ಲಿ,ಸ ಸಾತ್ಯಕಿಃ– ಆ ಸಾತ್ಯಕಿಯು, ತಂ–ಆ ಕೃತವರ್ಮನನ್ನು,ವಿರಥಂ– ರಥರಹಿತನನ್ನಾಗಿ, ಅಕರೋತ್–ಮಾಡಿದನು. ಉಗ್ರಧನ್ವಾ — ಕಠಿಣವಾದ ಧನುಸ್ಸುಳ್ಳ,ಸಾತ್ಯಕಿಃ —ಸಾತ್ಯಕಿಯು, ತಂ— ಆ ಕೃತವರ್ಮನನ್ನು, ವಿಜಿತ್ಯ— ಗೆದ್ದು, ಅತೀತ್ಯೈವ—ವೀರರನ್ನು ಅತಿಕ್ರಮಿಸಿಯೇ,ಯೂನಾಂ - ತರುಣರ, ಶಿರಾಂಸಿ - ತಲೆಗಳನ್ನು, ಶರೈಃ– ಬಾಣಗಳಿಂದ, ಕೃಂತನ್‌ಸನ್ — ಕತ್ತರಿಸತಕ್ಕವನಾಗಿ, ಯಯೌ — ಹೋದನು. ಗಜಸ್ಕಂಧಗತಃ — ಆನೆಯಮಹೆಗಲಮೇಲೆ ಕುಳಿತಿರುವ ಜಲಸಂಧಃ ಜಲಸಂಧನೆಂಬರಾಕ್ಷಸನು, ಅಭಿಯೋದ್ಧುಂ—ಯುದ್ಧಮಾಡುವುದಕ್ಕಾಗಿ, ತಂ– ಆ ಸಾತ್ಯಕಿಯನ್ನು, ರಣೇ— ಯುದ್ಧದಲ್ಲಿ, ಆಗಮತ್ — ಹೊಂದಿದನು. ಸಸಾತ್ಯಕಿಃ — ಆ ಸಾತ್ಯಕಿಯು, ಅಸಹ್ಯವಿಕ್ರಮಂ — ಸಹಿಸಲಶಕ್ಯವಾದ ಪರಾಕ್ರಮವುಳ್ಳ, ನಿವಾರಯಂತಂ– ತನ್ನನ್ನು ತಡೆಯತಕ್ಕ, ತಂ—ಆ ಜಲಸಂಧನನ್ನು, ಸಮರೇ— ಯುದ್ಧದಲ್ಲಿ, ಶರೈ:— ಬಾಣಗಳಿಂದ, ನಿಹತ್ಯ—ಕೊಂದು, ಕುರೂಣಾಂ– ಕೌರವರ, ಗಜಸ್ಯಂದನವಾಜಿಪತ್ತಿನಃ–ಆನೆಗಳು, ರಥಗಳು, ಕುದುರೆಗಳು, ಕಾಲಾಳುಗಳೂ ಇವುಗಳ ಸಮೂಹರೂಪವಾದ ಚತುರಂಗ ಸೈನ್ಯದ, ಬಲಂ–ಬಲವನ್ನು, ನಿಘ್ನನ್‌ಸನ್–ಸಂಹರಿಸುವವನಾಗಿ ವಿಲೋಡಯಾಮಾಸ— ಕಳವಳಪಡಿಸಿದನು. ॥೧೦೦॥೧೦೧॥೧೦೨॥

ಭಾ. ಅ. ಟಿಪ್ಪ-೧೦೦ ಹೀಗೆ ಭೀಮರಿಂದ ಪೀಡಿತನಾದ ಬಹು ಹೆದರಿದ ಅಲಂಬುಸ ರಾಕ್ಷಸನು ಭೀಮಸೇನರನ್ನು ಬಿಟ್ಟು ದೂರಕ್ಕೆ ಓಡಿದನು. ಆಗ ದ್ರೌಪದೀ ಪುತ್ರರು ಒಟ್ಟಾಗಿ ಬಂದು ಸೋಮದತ್ತನ ಮಗನಾದ ಶಲನೆಂಬುವನನ್ನು ಸಂಹರಿಸಿದರು. ಘಟೋತ್ಕಚನು ಅಲಂಬುಸನೊಟ್ಟಿಗೆ ಯುದ್ಧಮಾಡುತ್ತಿದ್ದನು. ಆಗ ಘಟೋತ್ಕಚನು ಅಲಂಬುಸನ ರಥವನ್ನು ನಾಶಪಡಿಸಿದನು.ಆಗ ಆಕಾಶವನ್ನು ಏರಿ ನಿಂತ ಆ ಅಲಂಬುಸನ ಜೊತೆಗೆ ಆಕಾಶದಲ್ಲಿಯೇ ನಿಂತು ಯುದ್ಧಮಾಡುತ್ತಾ, ಒಮ್ಮೆ ಅವನನ್ನು ಹಿಡಿದು ಭೂಮಿಗೆ ಕೆಡವಿ ಕಾಲಿನಿಂದ ತಲೆಯಲ್ಲಿ ಪೆಟ್ಟು ಕೊಟ್ಟನು. ಆಗ ತಲೆ ಒಡೆದು ಅಲಂಬಸನು ಸತ್ತನು. ಅನೇಕ ರಥಿಕರನ್ನು ಘಟೋತ್ಕಚನು ಓಡಿಸಿದನು. ಆಗ ಕೃತವರ್ಮನು ಪಾಂಡವಸೇನೆಯ ಮೇಲೆ ಬಾಣಗಳನ್ನು ಸುರಿಸುತ್ತಾ ಬಂದನು. ಆ ದಿನ ಆ ಮುಹೂರ್ತ ಸಮಯದಲ್ಲಿ ಅವನಿಗೆ ಸರ್ವಜಯವು ಶ್ರೀಕೃಷ್ಣನು ಹಿಂದೊಮ್ಮೆ ಅವನ ಸ್ತುತಿಯಿಂದ ಸಂತುಷ್ಟನಾಗಿ ಕೊಟ್ಟ ವರದ ಪ್ರಕಾರ ಸಿಗುವಂತಿತ್ತು. ಅದರಿಂದಾಗಿ ಭೀಮಸೇನರ ಎದುರೇ, ಪಾಂಚಾಲ ಸೈನ್ಯವನ್ನು, ನಕುಲಸಹದೇವರನ್ನೂ ಗೆದ್ದು, ಶ್ರೀ ಭೀಮರನ್ನೂ ಕೂಡ ಬಾಣದಿಂದ ಹೊಡೆದನು. ಶ್ರೀಕೃಷ್ಣನ ವರವನು ತಿಳಿದ ಶ್ರೀಭೀಮರು ಮಾತ್ರ ಅವನ ಎದುರು ಹೋಗಲಿಲ್ಲ. ಇದರಿಂದ ಶ್ರೀಭೀಮರಿಗೆ ಶ್ರೀಕೃಷ್ಣನಲ್ಲಿ ಭಕ್ತಿನಿಷ್ಠೆಗಳನ್ನು ತಿಳಿಯಬಹುದು. ಯಾದವರನ್ನು ಬಿಟ್ಟು ಉಳಿದವರ ಮೇಲೆ ಜಯಸಿಗುವಂತೆ ವರ ವಿದ್ದದ್ದರಿಂದ ಯಾದವನಾದ ಸಾತ್ಯಕಿಯು ಯುದ್ಧಕ್ಕೆ ಬಂದು ಕೃತವರ್ಮನ ಕುದುರೆಗಳನ್ನು ಸಂಹರಿಸಿ, ಬಾಣ ಪ್ರಹಾರಗಳಿಂದ ತುಂಬಾ ಪೀಡಿಸಿದನು. ಆಗ

ಕೃತವರ್ಮನು ಇನ್ನೊಂದು ರಥವನ್ನೇರಿ ಓಡಿಹೋದನು. ಆಗ ಶ್ರೀಕೃಷ್ಣನು ತನ್ನ ಪಾಂಚಜನ್ಯ ಶಂಖವನ್ನು ಊದಿದನು. ಆಗ ಅರ್ಜುನನು ಕರ್ಣ, ಅಶ್ವತ್ಥಾಮಾದಿಗಳ ಜೊತೆಗೆ ಯುದ್ಧ ಮಾಡುತ್ತಿದ್ದನು. ಶ್ರೀಕೃಷ್ಣನ ಶಂಖಧ್ವನಿಯು ಬ್ರಹ್ಮರುದ್ರ ಸಮೇತವಾದ ಸಕಲ ಜಗತ್ತನ್ನು ನಡುಗಿಸಿತು. ಈ ಧ್ವನಿಯಿಂದ ಅರ್ಜುನನ ಗಾಂಡೀವಧನುಸ್ಸಿನ ಟೇಂಕಾರ ಧ್ವನಿಯು ಮುಚ್ಚಿ ಹೋಗಿ ಕೇಳದಿರಲು ಅದರಿಂದ ಹೆದರಿದ ಧರ್ಮರಾಜನು ಸಾತ್ಯಕಿಗೆ'ಪ್ರಾಯಃ ಅರ್ಜುನನು ವೈರಿಸೈನ್ಯದಲ್ಲಿ ಮಗ್ನನಾಗಿಹೋಗಿದ್ದರಿಂದ ಕೃಷ್ಣನೇ ಯುದ್ಧ ಮಾಡುತ್ತಿರಬಹುದು. ಆದ್ದರಿಂದ ಹೋಗು, ಅರ್ಜುನನು ಬದುಕಿರುವನೊ ಇಲ್ಲವೋ, ಬದುಕಿದ್ದೂ ನಿಃಸಹಾಯಕನಾಗಿರುವನೋ ಎಂಬುದನ್ನು ನೋಡಿ ತಿಳಿದುಕೊಂಡು ಬಾ' ಎಂದು ಹೇಳಿದನು. ಅದನ್ನು ಕೇಳಿದ ಸಾತ್ಯಕಿಯು ಆಯಿತು ಎಂದು ಒಪ್ಪಿಕೊಂಡು, ಬ್ರಾಹ್ಮಣರಿಗೆ ದಾನಾದಿಗಳನ್ನು ಮಾಡಿ, ಪೂಜೆ ಸಲ್ಲಿಸಿ ಅವರಿಂದ ಜಯಾಶೀರ್ವಾದವನ್ನು ತೆಗೆದುಕೊಂಡು ಸೇನೆಕಡೆಗೆ ಹೊರಟನು. ಭೀಮರೂ ಕೂಡ ಹೋಗಿ ಸೇನೆಯ ಪ್ರಾರಂಭದಲ್ಲಿರುವವರನ್ನು ಸಂಹರಿಸಿ, ಗೆದ್ದು ಸಾತ್ಯಕಿಯು ಸೇನೆಯನ್ನು ಪ್ರವೇಶಿಸಲು, ಅನುಕೂಲವಾಡಿಕೊಟ್ಟರು. ಸಾತ್ಯಕಿಯು ಯುದ್ಧಮಾಡುತ್ತಿರುವಾಗ ದ್ರೋಣರು ಉದಾಸೀನ ಮಾಡುತ್ತಿದ್ದರು. ಆಗ ದ್ರೋಣರ ಸಾರಥಿಯನ್ನು ಸಂಹರಿಸಿ ಕುದುರೆಗಳನ್ನು ಓಡಿಸಿದನು. ಅಂದಿನ ದಿನ ಪೂರ್ತಿ ಸಾತ್ಯಕಿಗೆ ವಿರುದ್ಧವಾದ ಬಲವಿತ್ತು. ಅವನೂ ಕೂಡ ಹಿಂದೊಮ್ಮೆ ತನ್ನ ಬಗ್ಗೆ ಪ್ರಸನ್ನನಾದ ಶ್ರೀಕೃಷ್ಣನಿಂದ ಒಂದು ದಿನ ಪೂರ್ಣಬಲಾಭಿವೃದ್ಧಿಯ ವರವನ್ನು ಪಡೆದಿದ್ದನು. ಅದರಿಂದಾಗಿ, ಸಾತ್ಯಕಿಯು ಶ್ರೀಭೀಮರನ್ನೂ ನಿಲ್ಲಿಸಿ ತಾನೊಬ್ಬನೇ ಯುದ್ಧಕ್ಕೆ ಹೋದನು. ಸೈನ್ಯವನ್ನು ನಾಶಮಾಡುತ್ತಿದ್ದನು. ಆಗ ಕೃತವರ್ಮನು ಬಂದನು. ಅವರಿಗೆ ಭಯಂಕರ ಯುದ್ಧವಾಯಿತು. ಸಾತ್ಯಕಿಯು ಕೃತವರ್ಮನ ರಥವನ್ನು ನಾಶಮಾಡಿದನು; ಮತ್ತು ಅವನನ್ನು ಗೆದ್ದು, ಮುಂದೆ ಹೋಗುತ್ತಾ ಅನೇಕ ತರುಣವೀರರ ತಲೆಗಳನ್ನು ಕತ್ತರಿಸುತ್ತಿದ್ದನು.

ಸಪಾರ್ವತೇಯಾಂಶ್ಚ ಶಿಲಾಭಿವರ್ಷಿಣೋ ನಿಹತ್ಯವಿದ್ರಾವ್ಯಚಸರ್ವಸೈನಿಕಾನ್ ॥
ಸಮಾಸದತ್ಕೇಶವಫಲ್ಗುನೌ ಚಬಲೀತಮಾರಾಥ ಚ ಯೂಪಕೇತುಃ ॥೧೦೩॥

ತಯೋರಭೂದ್ಯುದ್ಧಮತೀವಘೋರಂ ಚಿರಂ ವಿಚಿತ್ರಂಚಮಹದ್ವಿಭೀಷಣಂ ॥೧೦೪॥

ಸಃ— ಆ ಸಾತ್ಯಕಿಯು, ಶಿಲಾಭಿವರ್ಷಿಣಃ – ಕಲ್ಲುಗಳನ್ನು ಮಳೆಗರಿಸುವ, ಪಾರ್ವತೇಯಾನ್ –- ಪಾರ್ವತೇಯ ನಾಮಕಗಣಗಳನ್ನು, ನಿಹತ್ಯ – ಕೊಂದು, ಸರ್ವಸೈನಿಕಾನ್– ಎಲ್ಲಾಸೈನಿಕರನ್ನು, ವಿದ್ರಾವ್ಯ – ಓಡಿಸಿ, ಕೇಶವಫಲ್ಗುನೌಚ,– ಶ್ರೀಕೃಷ್ಣಾರ್ಜುನರನ್ನು, ಸಮಾಸದತ್–ಹೊಂದಿದನು. ಅಥ–ಆನಂತರ,ಬಲೀ–ಬಲಿಷ್ಠನಾದ, ಯೂಪಕೇತುಃ– ಭೂರಿಶ್ರವನು ತಂ – ಆ ಸಾತ್ಯಕಿಯನ್ನು, ಆರ– ಹೊಂದಿದನು. ತಯೋಃ - ಆ ಸಾತ್ಯಕಿ, ಭೂರಿಶ್ರವರಿಗೆ ಅತೀವಘೋರಂ – ಅತ್ಯಂತ ಭಯಂಕರವಾದ, ವಿಚಿತ್ರಂ–ಆಶ್ಚರ್ಯವನ್ನುಂಟುಮಾಡುವ, ಮಹದ್ವಿಭೀಷಣಂ–ಮಹಾತ್ಮರಿಗೂ ಭಯವನ್ನುಂಟುಮಾಡುವ, ಯುದ್ಧಂ – ಯುದ್ಧವು, ಚಿರಂ – ಬಹುಕಾಲದತನಕ ಅಭೂತ್– ಉಂಟಾಯಿತು. ॥೧೦೩॥೧೦೪॥

ಪರಸ್ಪರಂ ತೌ ತುರಗಾನ್ನಿಹತ್ಯನಿಪಾತ್ಯ ಸೂತೌಧನುಷೀನಿಕೃತ್ಯ ॥
ಸವಿಂಯತುಶ್ಚರ್ಮವರಾಸಿಧಾರಿಣೌ ವಿಚಿತ್ರಮಾರ್ಗಾನಪಿದರ್ಶಯಂತೌ ॥೧೦೫॥

ತೌ – ಆ ಸಾತ್ಯಕಿ ಭೂರಿಶ್ರವರಿಬ್ಬರು, ಪರಸ್ಪರಂ – ಅನ್ಯೋನ್ಯವಾಗಿ, ತುರಗಾನ್ – ಕುದುರೆಗಳನ್ನು, ನಿಹತ್ಯ – ಕೊಂದು, ಸೂತೌ – ಸಾರಥಿಗಳನ್ನು, ನಿಪಾತ್ಯ - ಕೆಡವಿ, ಧನುಷೀ – ಧನುಸ್ಸುಗಳನ್ನು, ನಿಕೃತ್ಯ – ಕತ್ತರಿಸಿ, ಚರ್ಮವರಾಸಿ ಧಾರಿಣೌ ಸಂತೌ – ಶತಚಂದ್ರವನ್ನೂ ಉತ್ತಮ ಖಡ್ಗವನ್ನೂ ಧರಿಸಿದವರಾಗಿ ವಿಚಿತ್ರ ಮಾರ್ಗಾನಪಿ–ಆಶ್ಚರ್ಯವನ್ನುಂಟುಮಾಡುವ ಯುದ್ಧದ ರೀತಿಗಳನ್ನು, ದರ್ಶಯಂತೌ ಸಂತೌ – ತೋರಿಸತಕ್ಕವರಾಗಿ, ಸವಿಂಯತುಃ – ಬಂದರು. ॥೧೦೫॥

ಸಸೌ ಮುದತ್ತಿರ್ಭುವಿ ಸಾತ್ಯಕಿಂ ರಣೇ ನಿಪಾತ್ಯಕೇಶೇಷುಚಸಂಪ್ರಗೃಹ್ಯ ॥
ಪದಾಸ್ಯ ವಕ್ಷಸ್ಯಧಿರುಹ್ಯ ಖಡ್ಗಮುದಗ್ರಹೀದಾಶು ಶಿರೋಽಪಹರ್ತುಂ ॥೧೦೬॥

ಸಸೌ ಮದತ್ತಿಃ—ಆ ಭೂರಿಶ್ರವನು, ಸಾತ್ಯಕಿಂ - ಸಾತ್ಯಕಿಯನ್ನು, ರಣೇ—ಯುದ್ಧದಲ್ಲಿ, ಭುವಿ—ಭೂಮಿಯಲ್ಲಿ, ನಿಪಾತ್ಯ - ಕೆಡವಿ, ಕೇಶೇಷು — ಕೂದಲುಗಳಲ್ಲಿ, ಸಂಪ್ರಗೃಹ್ಯ - ಹಿಡಿದುಕೊಂಡು, ಅಸ್ಯ — ಈ ಸಾತ್ಯಕಿಯ, ವಕ್ಷಸಿ - ಎದೆಯಲ್ಲಿ, ಪದಾ-ಕಾಲಿನಿಂದ, ಅಧಿರುಹ್ಯ — ಒತ್ತಿಹಿಡಿದು, ಶಿರಃ — ತಲೆಯನ್ನು, ಅಪಹರ್ತುಂ-ಕತ್ತರಿಸಲು, ಖಡ್ಗಂ-ಖಡ್ಗವನ್ನು ಆಶು — ಕೂಡಲೇ, ಉದಗ್ರಹೀತ್ — ಮೇಲಕ್ಕೆತ್ತಿಹಿಡಿದನು. ॥೧೦೩॥

ತದಾ ಸುದೇವಸ್ತು ನಿರೀಕ್ಷ್ಯ ವಿಶ್ವತಶ್ಚಕ್ಷುರ್ಜಗಾದಾಶು ಧನಂಜಯಂ ರಣೇ ॥
ತ್ರಾಯಸ್ವೈನೇಯಮಿತಿಸ್ಮ ಸೋಽಪಿ ಭಲ್ಲೇನ ಚಿಚ್ಛೇದ ಭುಜಂ ಪರಸ್ಯ ॥೧೦೩॥

ವಿಶ್ವತಶ್ಚಕ್ಷುಃ—ಸರ್ವತ್ರದೃಷ್ಟಿಯುಳ್ಳ, ವಾಸುದೇವಸ್ತು — ಶ್ರೀಕೃಷ್ಣನಾದರೂ, ತತ್—ಆ ಭೂರಿಶ್ರವನಕರ್ಮವನ್ನು, ನಿರೀಕ್ಷ್ಯ — ನೋಡಿ, ಶೈನೇಯಂ — ಸಾತ್ಯಕಿಯನ್ನು, ರಣೇ - ಯುದ್ಧದಲ್ಲಿ, ಆಶು - ಕೂಡಲೇ, ತ್ರಾಯಸ್ವ — ರಕ್ಷಿಸು, ಇತಿ — ಎಂದು, ಧನಂಜಯಂ ಅರ್ಜುನನನ್ನು ಕುರಿತು, ಜಗಾದ — ಹೇಳಿದನು, ಸೋಽಪಿ — ಆ ಅರ್ಜುನನಾದರೂ, ಭಲ್ಲೇನ-ಭಲ್ಲವೆಂಬ ಬಾಣದಿಂದ, ಪರಸ್ಯ — ಶತ್ರುವಾದ ಭೂರಿಶ್ರವನ, ಭುಜಂ — ಭುಜವನ್ನು, ಚಿಚ್ಛೇದ - ಕತ್ತರಿಸಿದನು. ॥೧೦೩॥

ಸತೇನ ಚೋತ್ಕೃತ್ತಸಖಡ್ಗಬಾಹುರ್ವಿನಿಂದ್ಯ ಪಾರ್ಥಂ ನಿಷಸಾದ ಭೂಮೌ ॥
ಪ್ರಾಯೋಪವಿಷ್ಟಃ ಶರಸಂಸ್ತರೇ ಹರಿಂ ಧ್ಯಾಯನ್ವಿನಿಂದನ್ನಸುರಪ್ರವೇಶಾತ್ ॥೧೦೪॥

ತೇನ — ಆ ಅರ್ಜುನನಿಂದ, ಭಲ್ಲವೆಂಬ- ಬಾಣದಿಂದ, ಉತ್ಕೃತ್ತಸಖಡ್ಗಬಾಹುಃ — ಕತ್ತರಿಸಲ್ಪಟ್ಟ ಖಡ್ಗಸಹಿತವಾದ ಭುಜವುಳ್ಳ, ಸಃ — ಆ ಭೂರಿಶ್ರವನು, ಪಾರ್ಥಂ—ಅರ್ಜುನನನ್ನು, ವಿನಿಂದ್ಯ - ಚೆನ್ನಾಗಿನಿಂದಿಸಿ, ಭೂಮೌ — ಭೂತಲದಲ್ಲಿ, ನಿಷಸಾದ — ಕುಳಿತನು, ಹರಿಂ— ಶ್ರೀಕೃಷ್ಣನನ್ನು, ಧ್ಯಾಯನ್‌ಸನ್ — ಧ್ಯಾನಮಾಡುವವನಾಗಿ, ಅಸುರಪ್ರವೇಶಾತ್ — ಅಸುರಾವೇಶದಿಂದ, ವಿನಿಂದನ್‌ಸನ್—ಶ್ರೀಕೃಷ್ಣನುಮನುಷ್ಯನೆಂಬ ಬುದ್ಧಿಯಿಂದ ನಿಂದಿಸುವವನಾಗಿ. ಶರಸಂಸ್ತರೇ—ಬಾಣರೂಪವಾದ ಹಾಸಿಗೆಯಲ್ಲಿ, ಪ್ರಾಯೋಪವಿಷ್ಟಃ ಅಭೂತ್ — ನಿರಶನವ್ರತದಲ್ಲಿ ಆಸಕ್ತನಾದನು. ॥೧೦೪॥

ಗತೇಽಸುರಾವೇಶ ಉತಾತಿಭಕ್ತ್ಯಾ ಧ್ಯಾಯತ್ಯಮುಷ್ಮಿನ್ಗರುಡಧ್ವಜಂತಂ ॥
ಶೈನೇಯ ಉತ್ಥಾಯ ನಿವಾರ್ಯಮಾಣಃ ಕೃಷ್ಣಾರ್ಜುನಾದ್ಯೈರಹರಚ್ಛಿರೋಸ್ಯ ॥೧೦೫॥

ಅಸುರಾವೇಶೇಗತೇಸತಿ — ಭೂರಿಶ್ರವನಲ್ಲಿ ಅಸುರಾವೇಶವು ಹೋಗುತ್ತಿರಲು, ಉತ - ಅನಂತರ, ಅತಿಭಕ್ತ್ಯಾ — ಉತ್ಕೃಷ್ಟಸ್ನೇಹದಿಂದ, ಅಮುಷ್ಮಿನ್—ಈ ಭೂರಿಶ್ರವನು, ಗರುಡಧ್ವಜಂ ಗರುಡಧ್ವಜನಾದ, ತಂ — ಆ ಶ್ರೀಕೃಷ್ಣನನ್ನು ಧ್ಯಾಯತಿಸತಿ — ಧ್ಯಾನಮಾಡುತ್ತಿರಲು, ಶೈನೇಯಃ — ಸಾತ್ಯಕಿಯು, ಉತ್ಥಾಯ — ಎದ್ದು, ಕೃಷ್ಣಾರ್ಜುನಾದ್ಯೈಃ — ಶ್ರೀ ಕೃಷ್ಣಾರ್ಜುನರೇ ಮೊದಲಾದವರಿಂದ, ನಿವಾರ್ಯಮಾಣೋಽಪಿ — ತಡೆಯುಲ್ಪಟ್ಟವನಾದರೂ ಕೂಡ, ಅಸ್ಯ — ಈ ಭೂರಿಶ್ರವನ, ಶಿರಃ — ತಲೆಯನ್ನು, ಅಹರತ್ — ಕತ್ತರಿಸಿದನು. ॥೧೦೫॥

ತದಾಸ್ವಕೀಯಂ ರಥಮೇತದರ್ಥಂ ಕ್ಲೃಪ್ತಂ ದದೌ ಸಾತ್ಯಕಯೇ ಸಸೂತಂ ॥
ಕೃಷ್ಣೋಽಥ ಪಾರ್ಥಸ್ಯ ಹಯಾಸ್ತೃಷಾರ್ದಿತಾಸ್ತದಾಸೃಜದ್ವಾರುಣಾಸ್ತ್ರಂ ಸ ಪಾರ್ಥಃ ॥೧೧೦॥

ಕೃಷ್ಣಃ—ಶ್ರೀಕೃಷ್ಣನು, ತದಾ — ಆಗ, ಏತದರ್ಥಂ — ಸಾತ್ಯಕಿಗೋಸ್ಕರ, ಕ್ಲೃಪ್ತಂ — ಸಿದ್ಧವಾದ, ಸಸೂತಂ — ಸೂತನಿಂದ ಕೂಡಿದ, ಸ್ವಕೀಯಂ — ತನ್ನದಾದ, ರಥಂ- ರಥವನ್ನು, ಸಾತ್ಯಕಯೇ—ಸಾತ್ಯಕಿಗೋಸ್ಕರ, ದದೌ—ಕೊಟ್ಟನು: ಅಥ — ಅನಂತರ, ಪಾರ್ಥಸ್ಯ — ಅರ್ಜುನನ, ಹಯಾಃ — ಕುದುರೆಗಳು, ತೃಷಾರ್ದಿತಾಃ — ಬಾಯಾರಿಕೆಯಿಂದ ಪೀಡಿಸಿ

ಕೊಳ್ಳಲ್ಪಟ್ಟವು, ತದಾ–ಆಗ, ಸ ಪಾರ್ಥಃ–ಆ ಅರ್ಜುನನು, ವಾರುಣಾಸ್ತ್ರಂ – ವರುಣದೇವತಾಕ ಅಸ್ತ್ರವನ್ನು, ಅಸೃಜತ್— ಸೃಷ್ಟಿಮಾಡಿದನು. ॥೧೧೦॥

ತೇನೈವತೀರ್ಥಂ ಪರಮುಂಚಕಾರ ತಥಾಶ್ವಶಾಲಾಮಪಿ ಬಾಣರೂಪಾಂ ॥
ತತೋವಿಮುಚ್ಯಾತ್ರ ಹಯಾನಪಾಯಯದ್ಧರಿಸ್ತದಾನಾಸವಿರಾರ್ದಯತ್ಪರಾನ್ ॥೧೧೧॥

ವಾಸವಿಃ– ಅರ್ಜುನನು, ತೇನೈವ – ವಾರುಣಾಸ್ತ್ರದಿಂದಲೇ, ಪರಮಂ – ಉತ್ತಮವಾದ, ತೀರ್ಥಂ – ತೀರ್ಥವನ್ನು ಚಕಾರ – ಮಾಡಿದನು, ತಥಾ – ಹಾಗೆಯೇ, ಬಾಣರೂಪಾಂ – ಬಾಣರೂಪವಾದ, ಅಶ್ವಶಾಲಾಮಪಿ – ಕುದುರೆಗಳಿಗಾಗಿ ಶಾಲೆಯನ್ನೂ ಕೂಡ, ಚಕಾರ – ಮಾಡಿದನು, ತತಃ – ಅನಂತರ, ಹರಿಃ—ಶ್ರೀಕೃಷ್ಣನು ಅತ್ರ-ಈ ಶಾಲೆಯಲ್ಲಿ, ಹಯಾನ್–ಕುದರೆಗಳನ್ನು, ವಿಮುಚ್ಯ – ರಥದಿಂದ ಬಿಡಿಸಿ, ಅಪಾಯಯತ್-ನೀರನ್ನು ಕುಡಿಸಿದನು, ತದಾ–ಆಗ, ಸಃ ಪಾರ್ಥಃ – ಆ ಅರ್ಜುನನು, ಪರಾನ್–ಶತ್ರುಗಳನ್ನು, ಅರ್ದಯತ್–ಪೀಡಿಸಿದನು. ॥೧೧೦॥

ಯುಯೋಜ ಕೃಷ್ಣಸ್ತುರಗಾನ್ಗತಶ್ರಮಾನುದ್ಧೃತಸಾಯಕಾನ್ಪ್ರಭುಃ ॥
ಪ್ರಚೋದಿತೇ ತೇನರಥೇ ಸ್ಥಿತಃಪುನಸ್ತಥೈವ ಬೀಭತ್ಸುರರೀನಯೋಧಯತ್ ॥೧೧೨॥

ಪ್ರಭುಃ– ಸಮರ್ಥನಾದ, ಕೃಷ್ಣಃ — ಶ್ರೀಕೃಷ್ಣನು, ಉದ್ಧೃತಸಾಯಕಾನ್ – ದೇಹದಿಂದ ತೆಗೆಯಲ್ಪಟ್ಟ ಬಾಣಗಳುಳ್ಳ, ಗತಶ್ರಮಾನ್ — ಹೋಗಲ್ಪಟ್ಟ ಆಯಾಸಉಳ್ಳ, ತುರಗಾನ್ – ಕುದುರೆಗಳನ್ನು, ಪುನಃ– ಮತ್ತೆ, ರಥೇ – ರಥದಲ್ಲಿ ಯುಯೋಜ—ಕಟ್ಟಿದನು. ತೇನ–ಆ ಶ್ರೀಕೃಷ್ಣನಿಂದ, ಪ್ರಚೋದಿತೇ-– ಪ್ರೇರೇಪಿಸಲ್ಪಟ್ಟ, ರಥೇ—ರಥದಲ್ಲಿ, ಸ್ಥಿತಃ–ಇರೆತಕ್ಕ ಬೀಭತ್ಸುಃ–ಅರ್ಜುನನು, ತಥೈವ–ಹಿಂದಿನಂತೆಯೇ, ಅರೀನ್–ಶತ್ರುಗಳನ್ನು, ಅಯೋಧಯತ್– ಯುದ್ಧ ಮಾಡಿದನು. ॥೧೧೨॥

ಭಾ. ಅ. ೧೦೧-೧೧೨ ಈ ಸಮಯದಲ್ಲಿ ಜಲಸಂಧನೆಂಬವನು ಗಜಾರೂಢನಾಗಿ ಬಂದು ಸಾತ್ಯಕಿಗೆ ಎದುರಾಗಿರು ವಾಗ, ಸಾತ್ಯಕಿಯು ಅವನನ್ನೂ ಬಾಣಗಳಿಂದ ಸಂಹಾರ ಮಾಡಿದನು. ವೈರಿಗಳ ಚತುರಂಗ ಸೈನ್ಯವನ್ನು ಬಹುವಾಗಿ ನಾಶ ಪಡಿಸಿದನು. ಕಲ್ಲಿನಮಳೆಸುರಿಸುವ ಪಾರ್ವತೇಯ ಎಂಬ ಸೈನ್ಯವನ್ನು ಓಡಿಸಿ ಶ್ರೀಕೃಷ್ಣಾರ್ಜುನರ ಸಮೀಪಕ್ಕೆ ಬಂದನು. ಆಗ ಯೂಪಕೇತು (ಭೂರಿಶ್ರವ)ಎಂಬವನು ಬಂದನು. ಆಗ ಅವರಿಬ್ಬರಿಗೂ ಘೋರಯುದ್ಧವು ನಡೆದು, ಪರಸ್ಪರ ಸಾರಥಿಕುದುರೆ ಗಳನ್ನು ಸಂಹರಿಸಿ, ಧನುಸ್ಸುಗಳನ್ನು ಕತ್ತರಿಸಿ ಖಡ್ಗಧಾರಿಗಳಾಗಿ ಯುದ್ಧದಲ್ಲಿ ತೊಡಗಿ ಬಹು ನೈಪುಣ್ಯವನ್ನು ತೋರಿದರು. ಆ ಸೋಮದತ್ತಪುತ್ರನಾದ ಯೂಪಕೇತುವು ಸಾತ್ಯಕಿಯನ್ನು ತಲೆಗೂದಲಿನಲ್ಲಿ ಹಿಡಿದು, ಕೆಡವಿ, ತನ್ನ ಕಾಲನ್ನು ಸಾತ್ಯಕಿಯ ಎದೆಯಲ್ಲಿ ಇಟ್ಟು ಖಡ್ಗವನ್ನು ಕೈಯಲ್ಲಿ ಹಿಡಿದು ಸಾತ್ಯಕಿಯ ಶಿರಶ್ಛೇದಮಾಡಲು ಉದ್ಯುಕ್ತನಾಗಿದ್ದನು. ಆಗ ಎಲ್ಲಿಯೋ ಬೇರೆ ಸ್ಥಳದಲ್ಲಿರುವ, ವಿಶ್ವತಶ್ಚಕ್ಷುವಾದ ಶ್ರೀಕೃಷ್ಣನು ಅದನ್ನು ಕಂಡು ಅರ್ಜುನನಿಗೆ ಯೂಪಕೇತುವಿನ ಆ ಖಡ್ಗಧಾರಿ ಕೈಯನ್ನೇ ಕತ್ತರಿಸಿ ಸಾತ್ಯಕಿಯನ್ನು ರಕ್ಷಿಸಲು ಆಜ್ಞಾಪಿಸಿದಾಗ, ಅರ್ಜುನನು ಭಲ್ಲ ಎಂಬ ಆಯುಧದಿಂದ ಹಾಗೆ ಮಾಡಿದನು. ಆಗ ಯೂಪಕೇತುವು ಆಸುರಾವೇಶದಿಂದ ಅರ್ಜುನನನ್ನು ಬೈಯುತ್ತಾ ಭೂಮಿಯಲ್ಲಿ ಕುಳಿತು ಶ್ರೀಹರಿಯ ಧ್ಯಾನವನ್ನು ಮಾಡುತ್ತಿದ್ದನು. ಆಸುರಾವೇಶವು ಹೋದನಂತರ ಶ್ರೀಹರಿಯನ್ನು ಭಕ್ತಿಯಿಂದ ಧ್ಯಾನಿಸುತ್ತಿರುವಾಗ, ಸಾತ್ಯಕಿಯು ಎದ್ದು ಬಂದು ಖಡ್ಗದಿಂದ ಆ ಯೂಪಕೇತುವಿನ ಶಿರಸ್ಸನ್ನು ಶ್ರೀಕೃಷ್ಣಾರ್ಜುನರು ನಿಷೇಧಮಾಡುತ್ತಿದ್ದಂತೆಯೇ ಕತ್ತರಿಸಿ ದನು. ಈ ಸಮಯದಲ್ಲಿ ಸಾತ್ಯಕಿಗೆ ಹೋಗಲಿಕ್ಕಾಗಿ ಎಂದೇ ವ್ಯವಸ್ಥಿತವಾಗಿ ಇಟ್ಟಿದ್ದ ತನ್ನ ರಥವನ್ನು ಶ್ರೀಕೃಷ್ಣನು ಕೊಟ್ಟನು. ಅದನ್ನು ಏರಿ ಸಾತ್ಯಕಿಯು ಹೋದನು. ಶ್ರೀಕೃಷ್ಣನು ಅರ್ಜುನನ ರಥದಕುದುರೆಗಳು ನೀರಡಿಸಿವೆ ಎಂದು ಹೇಳಿದಾಗ ಅರ್ಜುನನು ವಾರುಣಾಸ್ತ್ರವನ್ನು ಬಿಟ್ಟು ಶ್ರೇಷ್ಠವಾದ ತೀರ್ಥವನ್ನೇ ಮಾಡಿದನು; ಹಾಗು ಕುದುರೆಗಳ ವಿಶ್ರಾಮ ಕ್ಕಾಗಿ ಬಾಣಗಳಿಂದ ಅಶ್ವಶಾಲಾವನ್ನು ಮಾಡಿದನು. ಶ್ರೀಕೃಷ್ಣನು ಅಲ್ಲಿ ಕುದುರೆಗಳನ್ನು ಬಿಟ್ಟು ನೀರುಕುಡಿಸಿದನು. ಅರ್ಜುನನು ವೈರಿಗಳ ಮರ್ದನವನ್ನು ಮಾಡುತ್ತಲೇ ಇದ್ದನು. ಕುದುರೆಗಳಿಗೆ ನಟ್ಟ ಬಾಣಗಳನ್ನು ಶ್ರೀಕೃಷ್ಣನು ತೆಗೆದು ವಿಶ್ರಾಂತಿಹೊಂದಿದ ಕುದುರೆಗಳನ್ನು ಪುನಃ ರಥದಲ್ಲಿ ಹೂಡಿ, ಹೊಡೆದನು. ಆ ರಥವನ್ನು ಏರಿ, ಅರ್ಜುನನು ವೈರಿಗಳ ಜೊತೆಗೆ ಯುದ್ಧ ಮಾಡುತ್ತಿದ್ದನು.

ಶಿನಿಪ್ರವೀರೇತುಗತೇಯುಧಿಷ್ಠಿರಃಪುನಶ್ಚ ಚಿಂತಾಕುಲಿತೋಬಭೂವಹ ॥
ಜಗಾದಭೀಮುಂಚನಗಾಂಡಿವಧ್ವನಿಃ ಸಂಶ್ರೂಯತೇಪಾಂಚಜನ್ಯಸ್ಯರಾವಃ ॥೧೧೩॥

ಶಿನಿಪ್ರವೀರೇಗತೇಸತಿ – ಸಾತ್ಯಕಿಯು ಹೋಗುತ್ತಿರಲು, ಪುನಃ—ಮತ್ತೂ, ಯುಧಿಷ್ಠಿರಃ– ಧರ್ಮರಾಜನು, ಚಿಂತಾ–ಕುಲಿತಃ–ವ್ಯಸನದಿಂದ ಕೂಡಿದವನು, ಬಭೂವಹ — ಆದನು, ಭೀಮಂ—ಭೀಮನನ್ನು ಕುರಿತು, ಗಾಂಡಿವಧ್ವನಿಃ– ಗಾಂಡಿವ ಧನುಸ್ಸಿನ ಶಬ್ದವು, ನ ಸಂಶ್ರೂಯತೇ— ಕೇಳಲ್ಪಡುವುದಿಲ್ಲ. ಪಾಂಚಜನ್ಯಸ್ಯ – ಶ್ರೀಕೃಷ್ಣನ ಶಂಖದ, ರಾವಃ – ಧ್ವನಿಯು, ಸಂಶ್ರೂಯತೇ— ಕೇಳಲ್ಪಡುತ್ತದೆ. ಇತಿ– ಎಂದು, ಜಗಾದ —ಹೇಳಿದನು. ॥೧೧೩॥

ಮಯಾನಿಯುಕ್ತಶ್ಚಗತಃಸಸಾತ್ಯಕಿ ಭಾರಂಚತಸ್ಯಾಧಿಕಮೇವಮನ್ಯೇ ॥
ತತ್ಪಾಹಿಪಾರ್ಥಂಯುಯುಧಾನಮೇವ ತ್ವಂಭೀಮಗತ್ವಾಯದಿಜೀವತಸ್ತೌ ॥೧೧೪॥

ಸಃ ಸಾತ್ಯಕಿಃ – ಆ ಸಾತ್ಯಕಿಯು, ಮಯಾ—ನನ್ನಿಂದ, ನಿಯುಕ್ತಶ್ಚ – ಆಜ್ಞಾಪಿತನಾಗಿಯೇ, ಗತಃ – ಹೋದನು. ತತ್ – ಆ ಕಾರಣದಿಂದ. ತಸ್ಯ – ಆ ಸಾತ್ಯಕಿಯ, ಗಮನಂ — ಗಮನವು, ಅಧಿಕಂಭಾರಂ — ಅಧಿಕಭಾರವುಳ್ಳದ್ದರಂತೆ (ದುಃಖಪ್ರದಂ) – ದುಃಖವನ್ನು ಕೊಡತಕ್ಕದ್ದನ್ನಾಗಿ ಮನ್ಯೇ – ತಿಳಿಯುತ್ತೇನೆ. ಹೇ ಭೀಮ – ಎಲೋಭೀಮನೆ, ತ್ವಮೇವ–ನೀನೇ, ಯುಯುಧಾನಂಚ–ಸಾತ್ಯಕಿಯನ್ನು ಪಾರ್ಥಂಚ – ಅರ್ಜುನನನ್ನೂ ಕೂಡ, ಗತ್ವಾ – ಹೊಂದಿ, ಯದಿ ತೌ ಜೀವತಃ– ಅರ್ಜುನ ಸಾತ್ಯಕಿ ಇವರು ಬದುಕಿಕೊಂಡಿದ್ದರೆ, ತರ್ಹಿ–ಆ ಪಕ್ಷದಲ್ಲಿ, ಪಾಹಿ—ರಕ್ಷಿಸು ಎಂದು ಹೇಳಿದನು. ॥೧೧೪॥

ಇತೀರಿತಃ ಪ್ರಾಹವೃಕೋದರಸ್ತಂ ನರಕ್ಷಿತಂ ವಾಸುದೇವೇನ ಪಾರ್ಥಂ ।
ಬ್ರಹ್ಮೇಶಾನಾವಪಿ ಜೇತುಂ ಸಮರ್ಥೌ ಕಂ ದ್ರೌಣಿಕರ್ಣಾದಿ ಧನುರ್ಭೃತೋಽತ್ರ ॥೧೧೫॥

ಇತಿ– ಈ ರೀತಿಯಾಗಿ, ಈರಿತಃ – ಧರ್ಮರಾಜನಿಂದ ಹೇಳಿಸಿಕೊಳ್ಳಲ್ಪಟ್ಟ, ವೃಕೋದರಃ – ಭೀಮನು, ತಂ – ಆ ಧರ್ಮರಾಜನನ್ನು ಕುರಿತು ಪ್ರಾಹ–ಹೇಳಿದನು. ವಾಸುದೇವೇನ–ಶ್ರೀಕೃಷ್ಣನಿಂದ, ರಕ್ಷಿತಂ–ಪಾಲಿಸಿಕೊಳ್ಳಲ್ಪಟ್ಟ, ಪಾರ್ಥಂ–ಅರ್ಜುನನನ್ನು, ಬ್ರಹ್ಮೇಶಾನಾವಪಿ—ಬ್ರಹ್ಮರುದ್ರರೂ ಕೂಡ, ಜೇತುಂ – ಜಯಿಸಲು, ನ ಸಮರ್ಥೌ – ಶಕ್ತರಲ್ಲ.(ದ್ರೌಣಿ) ದ್ರೋಣಕರ್ಣಾದಿಧನುರ್ಭೃತಃ – (ಅಶ್ವತ್ಥಾಮ) ದ್ರೋಣ, ಕರ್ಣ ಮೊದಲಾದ ಧನುರ್ಧಾರಿಗಳು, ಅತ್ರ— ಈ ಅರ್ಜುನನನ್ನು ಜಯಿಸುವ ವಿಷಯದಲ್ಲಿ, ಕಂ – ಸಮರ್ಥರಲ್ಲವೆಂದು ಏನು ಹೇಳತಕ್ಕದ್ದು. ॥೧೧೫॥

ಅತೋಭಯಂನಾಸ್ತಿಧನಂಜಯಸ್ಯ ನಸಾತ್ಯಕೇಶ್ಚಾಪಿ ಹರೇಃ ಪ್ರಸಾದಾತ್ ॥
ರಕ್ಷ್ಯಸ್ತ್ವಮೇವಾತ್ರಮತೋಮಯಾದ್ಯ ದ್ರೋಣೋಹ್ಯಯಂತ್ವಾಂಯತತೇಗ್ರಹೀತುಂ ॥೧೧೬॥

ಅತಃ – ಆದ್ದರಿಂದ, ಹರೇಃಪ್ರಸಾದಾತ್– ಶ್ರೀಕೃಷ್ಣನ ಅನುಗ್ರಹದಿಂದ, ಧನಂಜಯಸ್ಯ – ಅರ್ಜುನನಿಗೆ, ಭಯಂ, ಹೆದರಿಕೆಯು, ನಾಸ್ತಿ – ಇರುವುದಿಲ್ಲ, ಸಾತ್ಯಕೇಶ್ಚಾಪಿ — ಸಾತ್ಯಕಿಗೂ ಕೂಡ, ನ – ಭಯವಿಲ್ಲ, ಹಿ – ಯಾವಕಾರಣದಿಂದ ಅಯಂ ದ್ರೋಣಃ – ಈ ದ್ರೋಣರು, ತ್ವಾಂ – ನಿನ್ನನ್ನು, ಗೃಹೀತುಂ – ಹಿಡಿಯಲು, ಯತತೇ—ಪ್ರಯತ್ನಿಸುತ್ತಾರೋ, ತತಃ– ಆ ಕಾರಣದಿಂದ, ಮಯಾ — ನನ್ನಿಂದ, ತ್ವಮೇವ – ನೀನೇ, ಅದ್ಯ – ಈಗ, ರಕ್ಷ್ಯಃ– ರಕ್ಷಿಸಲು ಯೋಗ್ಯನು, ಇತಿ – ಎಂದು, ಮತಃ – ನನ್ನ ಅಭಿಪ್ರಾಯವು. ॥೧೧೬॥

ಇತೀರಿತಃ ಪ್ರಾಹಯುಧಿಷ್ಠಿರಸ್ತಂ ನಜೀವನಾನೇ ಯುಧಿವಾಂ ಘಟೋತ್ಕಚೇ ॥
ಧೃಷ್ಟ ದ್ಯುಮ್ನೋಚಾಸ್ತ್ರವಿದಾಂವರಿಷ್ಠೇದ್ರೋಣೋವಶಂ ನೇತುಮಿಹಪ್ರಭುಃಕ್ವಚಿತ್ ॥೧೧೭॥

ಇತಿ — ಈ ರೀತಿಯಾಗಿ, ಈರಿತಃ— ಭೀಮಸೇನನಿಂದ ಹೇಳಿಸಿಕೊಳ್ಳಲ್ಪಟ್ಟ, ಯುಧಿಷ್ಠಿರಃ — ಧರ್ಮರಾಜನು, ತಂ - ಆ ಭೀಮನನ್ನು ಕುರಿತು, ಪ್ರಾಹ — ಹೇಳಿದನು. ಇಹ — ನನ್ನ ಸಮೀಪದಲ್ಲಿ, ಘಟೋತ್ಕಚೇ — ಘಟೋತ್ಕಚನು, ವಿದ್ಯಮಾನೇಸತಿ — ಇರುತ್ತಿರಲು, ಅಸ್ತ್ರವಿದಾಂ — ಅಸ್ತ್ರಜ್ಞಾನಿಗಳ ಮಧ್ಯದಲ್ಲಿ, ವರಿಷ್ಠೇ — ಶ್ರೇಷ್ಠನಾದ, ಧೃಷ್ಟದ್ಯುಮ್ನೇಚ— ಧೃಷ್ಟದ್ಯುಮ್ನನೂ ಕೂಡ, ಜೀವಮಾನೇಸತಿ — ಜೀವಿಸಿಕೊಂಡು ಇರುತ್ತಿರಲು, ಯುಧಿ—ಯುದ್ಧದಲ್ಲಿ, ದ್ರೋಣಃ—ದ್ರೋಣರು, ಮಾಂ — ನನ್ನನ್ನು, ವಶಂ — ಅಧೀನನನ್ನಾಗಿ, ನೇತುಂ — ಒಯ್ಯಲು ಅಂದರೆ ಹಿಡಿಯಲು, ಕ್ವಚಿತ್ —ಎಲ್ಲಿಯೂ, ಪ್ರಭುಃ — ಸಮರ್ಥರು, ನ — ಅಲ್ಲ. ॥೧೧೭॥

ಯದಿಪ್ರಿಯಂಕರ್ತುಮಿಹೇಚ್ಛಸಿತ್ವಂ ಮಮಪ್ರಯಾಹ್ಯಾಶುಚಪಾರ್ಥಸಾತ್ಯಕೀ ॥
ರಕ್ಷಸ್ವಸಂಜ್ಞಾಮಪಿ ಸಿಂಹನಾದಾತ್ಕುರುಷ್ವಮೇಪಾರ್ಥಶೈನೇಯದೃಷ್ಟೌ ॥೧೧೮॥

ಇಹ — ಈ ಸಮಯದಲ್ಲಿ, ತ್ವಂ — ನೀನು, ಮಮ — ನನಗೆ, ಪ್ರಿಯಂ — ಇಷ್ಟವಾದದ್ದನ್ನು, ಕರ್ತುಂ — ಮಾಡಲು, ಇಚ್ಛಸಿಯದಿ — ಇಚ್ಛಿಸುವುದಾದರೆ, ತರ್ಹಿ — ಆ ಪಕ್ಷದಲ್ಲಿ, ಆಶು — ಕೂಡಲೇ, ಪಾರ್ಥಸಾತ್ಯಕೀ — ಅರ್ಜುನ ಸಾತ್ಯಕಿಯ ರನ್ನು ಕುರಿತು, ಪ್ರಯಾಹಿ — ಹೋಗು, ರಕ್ಷಸ್ವ — ಅವರನ್ನು ರಕ್ಷಿಸು. ಪಾರ್ಥಶೈನೇಯದೃಷ್ಟೌಸತ್ಯಾಂ — ಅರ್ಜುನ ಸಾತ್ಯಕಿಯರ ದರ್ಶನವಾಗುತ್ತಿರಲು, ಸಿಂಹನಾದಾತ್ — ಸಿಂಹನಾದದಿಂದ, ಮೇ — ನನಗೆ ಸಂಜ್ಞಾಮಪಿ — ಸೂಚನೆ ಯನ್ನೂ ಕೂಡ, ಕುರುಷ್ವ — ಮಾಡು. ॥೧೧೮॥

ತಥಾ ಹತೇಚ್ಛೈವ ಜಯದ್ರಥೇಮೇ ಕುರುಷ್ವಸಂಜ್ಞಾಮಪಿ ತೇನ ಚೋಕ್ತಃ ॥
ಭೀಮಸ್ತು ಹೈಡಿಂಬಮಮುಷ್ಯ ರಕ್ಷಣೇವ್ಯಧಾಚ್ಚ ಸೇನಾಪತಿಮೇವ ಸಮ್ಯಕ್ ॥೧೧೯॥

ತಥಾ — ಹಾಗೆಯೇ, ಜಯದ್ರಥೇ—ಸೈಂಧವನು, ಹತೇಸತಿಅಪಿ—ಸಾಯುತ್ತಿರಲೂ ಕೂಡ, ಮೇ—ನನಗೆ, ಸಂಜ್ಞಾಂ— ಸೂಚನೆಯನ್ನು, ಕುರುಷ್ವ — ಮಾಡು, ಇತಿ — ಈ ರೀತಿಯಾಗಿ, ತೇನ — ಆ ಯುಧಿಷ್ಠಿರನಿಂದ, ಉಕ್ತಃ — ಹೇಳಿಸಿ ಕೊಳ್ಳಲ್ಪಟ್ಟ ಭೀಮನಾದರೂ, ಅಮುಷ್ಯ—ಈ ಯುಧಿಷ್ಠಿರನ್ನು ಸಮ್ಯಕ್ ರಕ್ಷಣೇ—ಚೆನ್ನಾಗಿ ರಕ್ಷಿಸುವ ವಿಷಯದಲ್ಲಿ, ಹೈಡಿಂಬಂ — ಘಟೋತ್ಕಚನನ್ನೂ, ಸೇನಾಪತಿಂ — ಸೇನಾಪತಿಯಾದ ಧೃಷ್ಟದ್ಯುಮ್ನನನ್ನೂ, ವ್ಯಧಾತ್ —ಇಟ್ಟನು, ॥೧೧೯॥

ಸಚಾಹ ಸೇನಾಪತಿರತ್ರಭೀಮಂ ಪ್ರಯಾಹಿತೌ ಯತ್ರಚ ಕೇಶವಾರ್ಜುನೌ ॥
ನಜೀವಮಾನೇ ಮಯಿ ಧರ್ಷಿತುಂ ಕ್ಷಮೋ ದ್ರೋಣೋನೃಪಂ ಮೃತ್ಯುರಹಂಚತಸ್ಯ ॥೧೨೦॥

ಸಃ — ಆ ಸೇನಾಪತಿಯಾದ ಧೃಷ್ಟದ್ಯುಮ್ನನು, ತೌ — ಆ ಪ್ರಸಿದ್ಧರಾದ, ಕೇಶವಾರ್ಜುನೌ — ಕೃಷ್ಣಾರ್ಜುನರು, ಯತ್ರ—ಯಾವಸ್ಥಾನದಲ್ಲಿ, ವರ್ತೇತೇ — ಇದ್ದಾರೋ, ತತ್ಸ್ಥಾನಂಚ— ಆಸ್ಥಾನವನ್ನು ಕುರಿತೇ, ಪ್ರಯಾಹಿ — ಹೋಗು; ಮಯಿ ಜೀವಮಾನೇಸತಿ — ನಾನು ಬದುಕಿರುತ್ತಿರಲು, ದ್ರೋಣಃ—ದ್ರೋಣರು, ಅತ್ರ—ನನ್ನ ಸಮೀಪದಲ್ಲಿ, ಸ್ಥಿತಂ—ಇರತಕ್ಕ, ನೃಪಂ—ಧರ್ಮರಾಜನನ್ನು, ಧರ್ಷಿತುಂ—ಬಲಾತ್ಕರಿಸಲು, ನಚ ಕ್ಷಮಃ — ಸಮರ್ಥರೇ ಅಲ್ಲ. ಅಹಂಚ — ನಾನೇ, ತಸ್ಯ ಆ ದ್ರೋಣರಿಗೆ, ಮೃತ್ಯುಃ—ಮಾರಕನು, ಇತಿ — ಎಂದು, ಭೀಮಂ — ಭೀಮನನ್ನು ಕುರಿತು, ಪ್ರಾಹ — ಹೇಳಿದನು. ॥೧೨೦॥

ಇತಿ ಬ್ರುವಾಣೇ ಪ್ರಣಿಧಾಯ ಭೀಮಃ ಪುನಃಪುನಸ್ತಂ ನೃಪತಿಂಗದಾಧರಃ ॥
ಯಯೌ ಪರಾನೀಕಮುಧಿಜ್ಯಧನ್ವಾನಿರಂತರಂ ಪ್ರವಮುನ್ಬಾಣಪೂಗಾನ್ ॥೧೨೧॥

ಭೀಮಃ— ಭೀಮನು, ಇತಿ — ಈರೀತಿಯಾಗಿ, ಪುನಃಪುನಃ — ಮತ್ತೂ ಮತ್ತೂ, ಬ್ರುವಾಣೇ — ಹೇಳತಕ್ಕ ಧೃಷ್ಟದ್ಯುಮ್ನೇ — ಧೃಷ್ಟದ್ಯುಮ್ನನಲ್ಲಿ, ತಂ ನೃಪತಿಂ—ಆ ಧರ್ಮರಾಜನನ್ನು ಪ್ರಣಿಧಾಯ—ರಕ್ಷಣೆಗಾಗಿ ಇಟ್ಟು, ಗದಾಧರಸ್ಸನ್—

—ಗದೆಯನ್ನು ಧರಿಸಿದವನಾಗಿ, ಆಧಿಜ್ಯಧನ್ವಾಸನ್–ಮೇಲಕ್ಕೆ ಏರಿಸಲ್ಪಟ್ಟ ಹಗ್ಗದಿಂದ ಕೂಡಿದ ಧನುಸ್ಸುಳ್ಳವನಾಗಿ, ನಿರಂತರಂ —ವ್ಯವಧಾನ ವಿಲ್ಲದಿದ್ದದ್ದು ಹೇಗೆ ಆದೀತೋ ಹಾಗೆ, ಬಾಣಪೂಗಾನ್ — ಶರಗಳ ಸಮೂಹಗಳನ್ನು, ಪ್ರವಮನ್ ಸನ್– ಸೃಷ್ಟಿಮಾಡುವವನಾಗಿ, ಪರಾನೀಕಂ — ಶತ್ರುಗಳ ಸೈನ್ಯವನ್ನು ಕುರಿತು, ಯಯೌ — ಹೋದನು. ॥೧೨೧॥

ನ್ಯವಾರಯತ್ತಂ ಶರವರ್ಷಧಾರೋದ್ರೋಣೋವಚಶ್ಚೇದಮುವಾಚ ಭೀಮಂ ॥
ಶಿಷ್ಯಸ್ನೇಹಾದ್ವಾಸವಿಃ ಸಾತ್ಯಕಿಶ್ಚಮಯಾಪ್ರಮುಕ್ತೌ ಭೃಶಮಾನತೌ ಮಯಿ ॥೧೨೨॥

ಶರವರ್ಷಧಾರಃ — ಬಾಣಗಳ ಮಳೆಸುರಿಸತಕ್ಕ, ದ್ರೋಣಃ — ದ್ರೋಣರು, ತಂ — ಆ ಭೀಮನನ್ನು, ನ್ಯವಾರಯತ್—ತಡೆದರು, ಇದಂ ವಚಶ್ಚ—ಈ ಮಾತನ್ನೂ ಕೂಡ, ಉವಾಚ — ಹೇಳಿದರು, ಮಯಿ–ನನ್ನಲ್ಲಿ, ಭೃಶಂ — ಚೆನ್ನಾಗಿ ಆನತೌ — ನಮ್ರೀಭೂತರಾದ, ವಾಸವಿಃ — ಅರ್ಜುನನು, ಸಾತ್ಯಕಿಶ್ಚ — ಸಾತ್ಯಕಿಯೂ ಕೂಡ, ಶಿಷ್ಯಸ್ನೇಹಾತ್ — ಶಿಷ್ಯರು ಎಂಬ ಪ್ರೀತಿಯಿಂದ, ಮಯಾ — ನನ್ನಿಂದ, ಪ್ರಮುಕ್ತೌ—ಬಿಡಲ್ಪಟ್ಟರು. ॥೧೨೨॥

ಸ್ವೀಯಾಪ್ರತಿಜ್ಞಾಪಿಹಿ ಸೈಂಧವಸ್ಯ ಗುಪ್ತೌಮಯಾ ಪಾರ್ಥಕೃತೇವಿಸೃಷ್ಟಾ ॥
ದಾಸ್ಯೇ ನತೇಮಾರ್ಗಮಹಂ ಕಥಂಚಿತ್ಪಶ್ಯಾಸ್ತ್ರವೀರ್ಯಂ ಮಮುದಿವ್ಯಮದ್ಭುತಂ ॥೧೨೩॥

ಸೈಂಧವಸ್ಯ — ಜಯದ್ರಥನ, ಗುಪ್ತೌ — ರಕ್ಷಣೆಯ ವಿಷಯದಲ್ಲಿ, ಸ್ವೀಯಾ–ನನ್ನ ದ್ದಾದ, ಪ್ರತಿಜ್ಞಾಪಿ–ಪ್ರತಿಜ್ಞೆಯೂ ಕೂಡ, ಪಾರ್ಥಕೃತೇ—ಅರ್ಜುನನಿಗಾಗಿ, ಮಯಾ — ನನ್ನಿಂದ, ವಿಸೃಷ್ಟಾ — ಬಿಡಲ್ಪಟ್ಟಿತು, ಅಹಂ — ನಾನು, ಕಥಂಚಿತ್– ಯಾವ ನಿಮಿತ್ತದಿಂದಲೂ, ತೇ — ನಿನಗೆ, ಮಾರ್ಗಂ — ಒಳಗೆ ಪ್ರವೇಶಿಸಲು ದಾರಿಯನ್ನು, ನ ದಾಸ್ಯೇ — ಕೊಡಲಾರೆನು, ಮಮ — ನನ್ನ, ದಿವ್ಯಂ–ಅಲೌಕಿಕವಾದ, ಅದ್ಭುತಂ—ಆಶ್ಚರ್ಯಕರವಾದ, ಅಸ್ತ್ರವೀರ್ಯಂ — ಅಸ್ತ್ರದ ಸಾಮರ್ಥ್ಯವನ್ನು, ಪಶ್ಯ — ನೋಡು ಎಂದು ಹೇಳಿದರು. ॥೧೨೩॥

ಇತ್ಯುಕ್ತವಾಕ್ಯಃಸಗದಾಂಸಮಾದದೇ ಚಿಕ್ಷೇಪತಾಂದ್ರೋಣರಥಾಯ ಭೀಮಃ ॥
ಉವಾಚ ಚಾಹಂಪಿತೃವನ್ಮಾನಯೇತ್ವಾಂಸದಾಮೃದುಸ್ತ್ವಾಂಪ್ರತಿನಾನ್ಯಥಾ ಕ್ವಚಿತ್ ॥೧೨೪॥

ಅಮಾರ್ದವೇಪಶ್ಯಚಯಾದೃಶಂಬಲಂ ಮಮೇತಿ ತಸ್ಯಾಶು ವಿಚೂರ್ಣಿತೋ ರಥಃ ॥
ಗದಾಭಿಘಾತೇನ ವೃಕೋದರಸ್ಯಸಸೂತವಾಜಿಧ್ವಜಯುಂತ್ರಕೂಬರಃ ॥೧೨೫॥

ಇತಿ — ಈ ರೀತಿಯಾಗಿ, ಉಕ್ತವಾಕ್ಯಃ –ದ್ರೋಣರ ತೀಕ್ಷ್ಣ ಮಾತನ್ನು ಕೇಳಿದ, ಸ ಭೀಮಃ–ಆ ಭೀಮನು ಮೃದು ಯುದ್ಧವನ್ನು ಬಿಟ್ಟು, ತೀಕ್ಷ್ಣಯುದ್ಧವನ್ನು ಮಾಡಬೇಕೆಂದು ನಿಶ್ಚಯಿಸಿ, ಗದಾಂ–ಗದೆಯನ್ನು, ಸಮಾದದೇ–ಹಿಡಿದನು. ಅಥ– ಅನಂತರ ಅಹಂ–ನಾನು, ಪಿತೃವತ್ — ತಂದೆಯಂತೆ, ತ್ವಾಂ — ನಿನ್ನನ್ನು, ಮಾನಯೇ — ಗೌರವಿಸುತ್ತೇನೆ, ಆದ್ದರಿಂದಲೇ ತ್ವಾಂ ಪ್ರತಿ–ನಿನ್ನನ್ನು ಕುರಿತು, ಸದಾ—ಯಾವಾಗಲೂ, ಅಹಂ—ನಾನು, ಮೃದುಃ—ಮೃದುವಾಗಿರುತ್ತೇನೆ, ಕ್ವಚಿತ್— ಯಾವಾಗಲೂ, ಅನ್ಯಥಾ ಸ್ಥಿತೋನ—ಬೇರೆ ರೀತಿಯಿಂದ ಇರತಕ್ಕವನಲ್ಲ. ಅಮಾರ್ದವೇ— ಮೃದುತ್ವವಿಲ್ಲದಿರುವ ಅವಸ್ಥೆ ಯಲ್ಲಿ, ಮಮ—ನನ್ನ, ಬಲಂ — ಸಾಮರ್ಥ್ಯವು, ಯಾದೃಶಂ— ಎಂತಹುದೋ, ತಾದೃಶಂ — ಅಂತಹಬಲವನ್ನು, ಪಶ್ಯ — ನೋಡು, ಇತಿ — ಎಂದು ಉವಾಚ — ಹೇಳಿದನು. ತತಃ — ಅನಂತರ, ದ್ರೋಣರಥಾಯ — ದ್ರೋಣನರಥನಾಶಕ್ಕೋಸ್ಕರ, ತಾಂ ಗದಾಂ— ಆ ಗದೆಯನ್ನು, ಚಿಕ್ಷೇಪ — ಬೀಸಾಡಿದನು. ತಸ್ಯ — ಆ ದ್ರೋಣರ, ಸಸೂತವಾಜಿಧ್ವಜಯುಂತ್ರ ಕೂಬರಃ — ಸಾರಥಿಯು, ಕುದುರೆಗಳು, ಧ್ವಜವು, ಚಕ್ರವೂ, ಯುಗಂಧರವೂ ಇವುಗಳಿಂದ ಕೂಡಿದ, ರಥಃ— ರಥವು,

ವೃಕೋದರಸ್ಯ – ಭೀಮನ, ಗದಾಭಿಘಾತೇನ – ಗದೆಯ ಹೊಡೆತದಿಂದ, ಆಶು – ಕೂಡಲೇ, ವಿಚೂರ್ಣಿತಃ – ಪುಡಿಯಾಯಿತು. ॥೧೨೪॥ ॥೧೨೫॥

ದ್ರೋಣೋಗದಾಮಾಪತತೀಂನಿರೀಕ್ಷ್ಯತ್ವವಪ್ಲುತೋಲಾಘವತೋಧರಾತಲೇ ॥
ತದೈವದುರ್ಯೋಧನಯಾಪಿತಂರಥಂ ಪರಂ ಸಮಾಸ್ಥಾಯ ಶರಾನ್ವವರ್ಷಹ ॥೧೨೬॥

ದ್ರೋಣಃ – ದ್ರೋಣರು, ಆಪತಂತೀಂ – ತನ್ನೆದುರು ಬರತಕ್ಕ, ಗದಾಂ – ಗದೆಯನ್ನು, ನಿರೀಕ್ಷ್ಯ— ನೋಡಿ, ಲಾಘವತಃ – ವೇಗದಿಂದ ಅಥವಾ ಲಘಿಮೆ ಎಂಬ ಗುಣದಿಂದ, ಧರಾತಲೇ— ಭೂತಲದಲ್ಲಿ, ಅವಪ್ಲುತಃ — ಹಾರಿದರು; ತದೈವ—ರಥಪುಡಿಯಾದಾಗಲೇ, ದುರ್ಯೋಧನಯಾಪಿತಂ – ದುರ್ಯೋಧನನಿಂದ ಕಳುಹಿಸಲ್ಪಟ್ಟ, ಪರಂ – ಬೇರೆಯಾದ, ರಥಂ–ರಥವನ್ನು, ಸಮಾಸ್ಥಾಯ – ಏರಿ, ಶರಾನ್—ಬಾಣಗಳನ್ನು. ವವರ್ಷಹ – ಸುರಿಸಿದರು. ॥೧೨೬॥

ಶರೈಸ್ತದೀಯೈಃ ಪರಮಾಸ್ತ್ರಮಂತ್ರಿತೈಃ ಪ್ರವೃಷ್ಯಮಾಣೋ ಜಗದೀರಣಾತ್ಮಜಃ
ಶಿರೋನಿಧಾಯಾಶುಪುರೋವೃಷೋಯಥಾತಮಭ್ಯಯಾದೇವರಥಾದವಪ್ಲುತಃ ॥೧೨೭॥

ಪರಮಾಸ್ತ್ರಮಂತ್ರಿತೈಃ – ಉತ್ತಮಾಸ್ತ್ರಮಂತ್ರಿತಗಳಾದ, ತದೀಯೈಃ— ಆ ದ್ರೋಣರ ಸಂಬಂಧಿಗಳಾದ, ಶರೈಃ – ಬಾಣಗಳಿಂದ, ಪ್ರವೃಷ್ಯಮಾಣಃ–ಮಳೆಗರಿಸಲ್ಪಡುತ್ತಿರುವ, ಜಗದೀರಣಾತ್ಮಜಃ–ಜಗತ್ಪ್ರೇರಕರಾದ ವಾಯುದೇವರ ಮಗನಾದ ಭೀಮನು, ರಥಾತ್ – ರಥದಿಂದ, ಅವಪ್ಲುತಸ್ಸನ್ – ಕೆಳಗೆ ಹಾರಿದವನಾಗಿ, ಆಶು – ಕೂಡಲೇ, ಶಿರಃ— ತಲೆಯನ್ನು ವೃಷೋಯಥಾ–ಎತ್ತಿನಂತೆ, ಪುರೋನಿಧಾಯ– ಮುಂದೆಮಾಡಿಕೊಂಡು, ತಂ– ಆ ದ್ರೋಣಾಚಾರ್ಯರನ್ನು, ಅಭ್ಯಯಾತ್– ಎದುರಾಗಿ ಹೋದನು. ॥೧೨೭॥

ಮನೋಜವಾದೇವತಮಾಪ್ಯಭೀಮೋರಥಂಗೃಹೀತ್ವಾಂಬರಆಕ್ಷಿಪತ್ಕ್ಷಣಾತ್ ॥
ಶಕ್ತೋಪ್ಯಹಂ ತ್ವಾಂನನಿಹನ್ಮಿಗೌರವಾದಿತ್ಯೇವಸಂಜ್ಞಾಪಯಿತುಂತದಸ್ಯ ॥೧೨೮॥

ಭೀಮಃ— ಭೀಮನು, ಮನೋಜವಾದೇವ – ಮನೋವೇಗದಿಂದಲೇ, ತಂ–ಆ ದ್ರೋಣರನ್ನು: ಆಪ್ಯ – ಹೊಂದಿ, ರಥಂ– ರಥವನ್ನು, ಗೃಹೀತ್ವಾ – ಹಿಡಿದುಕೊಂಡು, ಆಂಬರೇ – ಆಕಾಶದಲ್ಲಿ, ಆಶು—ಕೂಡಲೇ, ಆಕ್ಷಿಪತ್—ಬೀಸಾಡಿದನು: ಅಹಂ – ನಾನು, ಶಕ್ತೋಪಿ – ಕೊಲ್ಲಲು ಸಮರ್ಥನಾದರೂಕೂಡ, ತ್ವಾಂ – ನಿನ್ನನ್ನು, ಗೌರವಾದೇವ — ಗುರುತ್ವಬುದ್ಧಿಯಿಂದಲೇ ನ ನಿಹನ್ಮಿ – ಕೊಲ್ಲುವುದಿಲ್ಲ. ಇತಿ – ಈರೀತಿಯಾಗಿ, ಸಂಜ್ಞಾಪಯಿತುಮೇವ —ತಿಳಿಸುವುದಕ್ಕೊಸ್ಕರವೇ, ಅಸ್ಯ – ಈ ಭೀಮನ, ತತ್ – ಆ ತೀಕ್ಷ್ಣಯುದ್ಧವು ಇರುತ್ತದೆ. ॥೧೨೮॥

ಭಾ. ಅ. ೧೧೩—೧೨೮ ಸಾತ್ಯಕಿಯು ಹೋದನಂತರ ಧರ್ಮರಾಜನು (ಸಾತ್ಯಕಿಯಿಂದ ಯಾವ ವಾರ್ತೆಯೂ ಬಾರದಿರಲು) ಚಿಂತಾಕ್ರಾಂತನಾಗಿ ಭೀಮಸೇನದೇವರಿಗೆ ಹೇಳಿದನು. "ಗಾಂಡೀವಧ್ವನಿಯು ಕೇಳುವದೇ ಇಲ್ಲ. ಶ್ರೀಕೃಷ್ಣನ ಶಂಖಧ್ವನಿಯು ಮಾತ್ರಕೇಳುತ್ತದೆ. ಅರ್ಜುನನು ಹೇಗಿದ್ದಾನೋ ಏನೋ ? ಅವನನ್ನು ನೋಡಿ ಸುದ್ದಿ ತಿಳಿಸಲಿಕ್ಕಾಗಿಯೇ ನಾನು ಸಾತ್ಯಕಿಯನ್ನು ಕಳಿಸಿದೆನು. ಆದರೆ ಆವನಿಗೂ ಇದು ಬಹಳ ಭಾರವಾದ ಕಾರ್ಯವಾಯಿತು ಎಂದು ಕಾಣುತ್ತದೆ. ಆದ್ದರಿಂದ ನೀನು ಹೋಗು. ಅರ್ಜುನ ಸಾತ್ಯಕಿ ಇಬ್ಬರೂ ಉಳಿದಿದ್ದರೆ, ಅವರಿಗೆ ಸಹಾಯ ಮಾಡಿ ರಕ್ಷಿಸು ಎಂದು ಹೇಳಿದಾಗ ಶ್ರೀಭೀಮರು—ಶ್ರೀಕೃಷ್ಣರಕ್ಷಿತನಾದ ಅರ್ಜುನನನ್ನು ಗೆಲ್ಲಲು ಬ್ರಹ್ಮರುದ್ರಾದಿಗಳಿಗೂ ಆಗದು; ಇನ್ನು ದ್ರೋಣಕರ್ಣಾದಿಗಳಿಗೆ ಹೇಗೆ ಸಾಧ್ಯವಾದೀತು ? ಆದರಂತೆ ಸಾತ್ಯಕಿಯನ್ನೂ ಏನೂ ಮಾಡಲಾರರು. ಆದ್ದರಿಂದ ನಾನು ಅಲ್ಲಿಗೆ ಹೋಗಬೇಕಾಗಿಲ್ಲ. ನಿನ್ನನ್ನು ಮಾತ್ರ ನಾನು ಇಲ್ಲಿದ್ದು ರಕ್ಷಿಸಬೇಕಾಗಿದೆ. ದ್ರೋಣರು ನಿನ್ನನ್ನು ಬಂಧಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದರು. ಆಗ ಧರ್ಮರಾಜನು ಘಟೋತ್ಕಚನಿರುವಾಗ, ಧೃಷ್ಟದ್ಯುಮ್ನನಿರುವಾಗ

ದ್ರೋಣರು ನನ್ನನ್ನು ಹಿಡಿಯಲಾರರು. ಆದ್ದರಿಂದ ನನ್ನನ್ನು ಸಂತೋಷಪಡಿಸುವದಿದ್ದರೆ ನೀನು ಬೇಗನೇ ಅರ್ಜುನ ಸಾತ್ಯಕಿಯರ ಬಳಿಗೆ ಹೋಗು, ರಕ್ಷಿಸು. ಅವರನ್ನು ಕಂಡದ್ದಕ್ಕೆ, ಸುರಕ್ಷಿತವಾಗಿದ್ದದ್ದಕ್ಕೆ ಸಿಂಹನಾದದಿಂದ ಸೂಚನೆ ಕೊಡು. ಅದರಂತೆ, ಜಯದ್ರಥ ಸಕ್ತಿದ್ದರೆ, ಅದನ್ನು ಸೂಚಿಸಿ ಧ್ವನಿ ಮಾಡು, ಎಂದು ಅಂದನು. ಆಗ ಭೀಮಸೇನದೇವರು ಘಟೋತ್ಕಚ ಧೃಷ್ಟದ್ಯುಮ್ನರನ್ನು ಧರ್ಮರಾಜನ ರಕ್ಷಣೆಗಾಗಿ ನಿಯಮಿಸಿದರು. ಧೃಷ್ಟದ್ಯುಮ್ನನು ನಾನು ಜೀವಿಸಿರುವಾಗ ದ್ರೋಣರು ಧರ್ಮರಾಜನನ್ನು ಬಂಧಿಸಲಾರರು; ನಾನು ಅವರ ಮೃತ್ಯುವು ಎಂದು ಹೇಳಿದನು. ಆಗ ಭೀಮರು ಧೃಷ್ಟದ್ಯುಮ್ನನಿಗೆ ಧರ್ಮಜನ ರಕ್ಷಣೆಯನ್ನು ಒಪ್ಪಿಸಿ ತಾವು ಗದಾಧಾರಿಗಳಾಗಿ ಹೊರಟರು. ನಿರಂತರವಾಗಿ ಬಾಣಗಳನ್ನು ಬಿಡುತ್ತಾ ವೈರಿ ಸೈನ್ಯವನ್ನು ಮರ್ದಿಸುತ್ತಿರುವಾಗ, ದ್ರೋಣರು ಬಾಣಗಳನ್ನು ಸುರಿಸುತ್ತಾ ಭೀಮರನ್ನು ತಡೆದು 'ಅರ್ಜುನ ಸಾತ್ಯಕಿಗಳು ನನ್ನ ಶಿಷ್ಯ ಪ್ರಶಿಷ್ಯರಾದ್ದರಿಂದ, ನನ್ನಲ್ಲಿ ಬಾಗಿಕೊಂಡು ಇದ್ದದ್ದರಿಂದ ಅರ್ಜುನ ಸಾತ್ಯಕಿಗಳನ್ನು ಒಳಗೆ ಬಿಟ್ಟಿದ್ದೇನೆ. ಜಯದ್ರಥನ ರಕ್ಷಣೆಗಾಗಿ ಮಾಡಿದ ಪ್ರತಿಜ್ಞೆಯನ್ನೂ ಕೂಡ ಅರ್ಜುನನ ಸ್ನೇಹದಿಂದ ಬಿಟ್ಟಿದ್ದೇನೆ. ಆದರೆ ನಿನ್ನನ್ನು ಮಾತ್ರ ಸರ್ವಥಾ ಒಳಗೆ ಬಿಡುವದಿಲ್ಲ. ನೋಡು ನನ್ನ ಅಸ್ತ್ರ ಸಾಮರ್ಥ್ಯವನ್ನು' ಎಂದು ಹೇಳಿದರು. ಆಗ ಭೀಮರು 'ನಾನು, ನೀವು ಹಿರಿಯರು ಎಂದು ಸದಾ ನಿಮ್ಮಲ್ಲಿ ನಮ್ರನಾಗಿದ್ದೇನೆ. ಆದ್ದರಿಂದಲೇ ನೀವು ಉಳಿದಿರುವಿರಿ, ಒಂದು ವೇಳೆನಾನು ಹಾಗಿರದಿದ್ದರೆ ಏನಾಗುತ್ತದೆ ನೋಡಿರಿ' ಎಂದು ಹೇಳುತ್ತಾ ಗದಾವನ್ನು ಅವರ ರಥಕ್ಕೆ ಬೀಸಾಡಿದಾಗ ಸಾರಥಿ ಕುದುರೆ, ಧ್ವಜ, ಸಹಿತವಾಗಿ ರಥವು ಪುಡಿಪುಡಿಯಾಯಿತು. ಗದೆಯು ಬರುವದನ್ನು ನೋಡಿಯೇ ದ್ರೋಣರು ಉಪಾಯದಿಂದ ಕೂಡಲೇ ಭೂಮಿಗೆ ಹಾರಿಕೊಂಡರು. ದುರ್ಯೋಧನನು ಕಳಿಸಿದ ಇನ್ನೊಂದು ರಥವನ್ನು ಏರಿ ಯುದ್ಧಮಾಡುತ್ತಿದ್ದರು. ಆಗ ಶ್ರೀಭೀಮಸೇನರು ರಥದಿಂದ ಇಳಿದು ಗೂಳಿಯಂತೆ ತಲೆಯನ್ನು ಮುಂದೆ ಮಾಡಿಕೊಂಡು ಬುನೋವೇಗದಿಂದ ಕ್ಷಣದಲ್ಲಿ ದ್ರೋಣರಥದ ಸಮೀಪಕ್ಕೆ ಹೋಗಿ, ರಥವನ್ನೇ ಹಿಡಿದು ಆಕಾಶಕ್ಕೆ ಎಸೆದರು. ಇದೇ ರೀತಿ ನಿಮ್ಮನ್ನು ಕೊಲ್ಲಲು ನಾನು ಸಮರ್ಥನಾದರೂ ಗೌರವದಿಂದ ಹಾಗೇ ಮಾಡುತ್ತಾ ಇಲ್ಲ ಎಂದೂ ಈ ಕಾರ್ಯದಿಂದ ತಿಳಿಸಿದರು.

ಸವಾಜಿಸೂತಃ ಸರಥಃ ಕ್ಷಿತೌ ಪತನ್ವಿಚೂರ್ಣಿತೋಽಸ್ಮಾದ್ಗುರುರಪ್ಯವಪ್ಲುತಃ ॥
ತದಾವಿಶೋಕೋಽಸ್ಯರಥಂ ಸಮಾನಯತ್ತಮಾರುಹದ್ಭೀಮ ಉದಾರವಿಕ್ರಮಃ ॥೧೨೯॥

ಸವಾಜಿಸೂತಃ — ಕುದುರೆಗಳೂ ಸಾರಥಿಯೂ ಇವರಿಂದಕೂಡಿದ, ಸರಥಃ — ಆ ರಥವು, ಕ್ಷಿತೌ — ಭೂಮಿಯಲ್ಲಿ, ಪತನ್‌ಸನ್ — ಬೀಳತಕ್ಕದ್ದಾಗಿ, ವಿಚೂರ್ಣಿತಃ — ಪುಡಿಯಾಯಿತು. ಅಸ್ಮಾತ್ — ಈ ರಥದಿಂದ, ಗುರುರಪಿ — ಗುರುಗಳಾದ ದ್ರೋಣರೂಕೂಡ, ಅವಪ್ಲುತಃ— ಕೆಳಗೆ ಹಾರಿದರು. ತದಾ — ಆಗ, ವಿಶೋಕಃ — ಭೀಮನಸಾರಥಿಯಾದ ವಿಶೋಕನು, ಅಸ್ಯ- ಈ ಭೀಮನ, ರಥಂ- ರಥವನ್ನು ಸಮಾನಯತ್ — ತಂದನು. ಉದಾರವಿಕ್ರಮಃ— ಉತ್ಕೃಷ್ಟ ಪರಾಕ್ರಮವುಳ್ಳ, ಭೀಮಃ- ಭೀಮನು, ತಂ- ಆ ರಥವನ್ನು, ಆರುಹತ್ ಏರಿದನು. ॥೧೨೯॥

ದ್ರೋಣೋಽಪಿ ದುರ್ಯೋಧನದತ್ತಮನ್ಯಂರಥಂಸಮಾಸ್ಥಾಯಯುಧಿಷ್ಠಿರಂಯಯೌ ॥
ಗೃಹೀತುಕಾಮಂ ನೃಪತಿಂಪ್ರಯಾಂತಂನ್ಯವಾರಯತ್ಸಂಯತಿವಾಹಿನೀಪತಿಃ ॥೧೩೦॥

ದ್ರೋಣೋಽಪಿ— ದ್ರೋಣರೂಕೂಡ, ದುರ್ಯೋಧನದತ್ತಂ — ದುರ್ಯೋಧನನಿಂದ ಕೊಡಲ್ಪಟ್ಟ, ಅನ್ಯಂರಥಂ- ಇನ್ನೊಂದುರಥವನ್ನು ಸಮಾಸ್ಥಾಯ—ಏರಿಕೊಂಡು, ಯುಧಿಷ್ಠಿರಂ – ಧರ್ಮರಾಜನನ್ನು ಕುರಿತು, ಯಯೌ – ಹೋದರು. ವಾಹಿನೀಪತಿಃ — ಸೇನಾಧಿಪತಿಯಾದ ಧೃಷ್ಟದ್ಯುಮ್ನನಂ, ನೃಪತಿಂ — ಧರ್ಮರಾಜನನ್ನು, ಗೃಹೀತುಕಾಮಂ — ಹಿಡಿಯಲು ಇಚ್ಛೆಯುಳ್ಳ, ಪ್ರಯಾಂತಂ — ಅದಕ್ಕಾಗಿಯೇ ಹೋಗತಕ್ಕ ದ್ರೋಣರನ್ನು, ಸಂಯತಿ — ಯುದ್ಧದಲ್ಲಿ, ನ್ಯವಾರಯತ್ — ತಡೆದನು. ॥೧೩೦॥

ವಿದ್ರಾವಿತಾಂದ್ರೋಣಶರೈಃ ಸ್ವಸೇನಾಂಸಂಸ್ಥಾಪ್ಯಭೂಯೋದ್ರುಪದಾತ್ಮಜಃಶರೈಃ ॥
ದ್ರೋಣಂನಿವಾರ್ಯೈವಚಮೂಂಪರೇಷಾಂ ವಿದ್ರಾವಯಾಮಾಸಚತಸ್ಯಪಶ್ಯತಃ ॥೧೩೧॥

ದ್ರುಪದಾತ್ಮಜಃ - ದ್ರುಪದನಮಗನಾದ ಧೃಷ್ಟದ್ಯುಮ್ನನು, ದ್ರೋಣಶರೈಃ—ದ್ರೋಣರಬಾಣಗಳಿಂದ, ಭೂಯಃ–ಮತ್ತೂ ಮತ್ತೂ, ವಿದ್ರಾವಿತಾಂ–ಓಡಿಸಲ್ಪಟ್ಟ, ಸ್ವಸೇನಾಂ – ತನ್ನ ಸೈನ್ಯವನ್ನು, ಸಂಸ್ಥಾಪ್ಯ –ನಿಲ್ಲಿಸಿ, ಶರೈಃ–ಬಾಣಗಳಿಂದ, ದ್ರೋಣಂ – ದ್ರೋಣರನ್ನು, ನಿವಾಯ್ಯೈವ — ತಡೆದೇ, ತಸ್ಯಪಶ್ಯತಸತಃ – ಆ ದ್ರೋಣರು ನೋಡುತ್ತಿರುವಾಗಲೇ, ಪರೇಷಾಂ — ಶತ್ರುಗಳಾದ ಕೌರವರ, ಚಮೂಂ— ಸೈನ್ಯವನ್ನು, ವಿದ್ರಾವಯಾಮಾಸ— ಓಡಿಸಿದನು. ॥೧೩೧॥

ತಯೋರಭೂದ್ಯುದ್ಧಮತೀವ ರೌದ್ರಂ ಜಯೈಷಿಣೋಃ ಪಾಂಡವಧಾರ್ತರಾಷ್ಟ್ರಯೋಃ ॥
ಅತ್ಯದ್ಭುತಂ ಸಂತತಬಾಣವರ್ಷಮನಾರತಂ ಸುಚಿರಂ ನಿರ್ವಿಶೇಷಂ ॥೧೩೨॥

ಪಾಂಡವಧಾರ್ತರಾಷ್ಟ್ರಯೋಃ ಜಯೈಷಿಣೋಃತಯೋಃ — ಯುಧಿಷ್ಠಿರನಿಗೆ ಜಯವನ್ನು ಇಚ್ಛಿಸತಕ್ಕ ಧೃಷ್ಟದ್ಯುಮ್ನನಿಗೂ, ದುರ್ಯೋಧನನಿಗೆ ಜಯವನ್ನು ಇಚ್ಛಿಸತಕ್ಕ ದ್ರೋಣರಿಗೂ, ಅತೀವರೌದ್ರಂ – ಅತ್ಯಂತ ಕ್ರೂರವಾದ, ಅತ್ಯದ್ಭುತಂ — ಅತ್ಯಂತ ಆಶ್ಚರ್ಯಕರವಾವ, ಸಂತತಬಾಣವರ್ಷಂ – ಅಂತರರಹಿತವಾದ ಬಾಣಗಳ ವೃಷ್ಟಿಯುಳ್ಳ, ಅನಾರತಂ – ವ್ಯವಧಾನವಿಲ್ಲದ, ಸುಚಿರಂ — ಬಹುಕಾಲದವರೆಗೆ, ನಿರ್ವಿಶೇಷಂ — ಸಮವಾದ, ಯುದ್ಧಂ– ಯುದ್ಧವು, ಅಭೂತ್ – ಆಯಿತು. ॥೧೩೨॥

ತತಃ ಪ್ರಾಯಾದ್ಭೀಮಸೇನೋಽಮಿತೌಜಾಹತ್ವಾನ್ ಶರೈಃ ಕೌರವರಾಜಸೇನಾಂ ॥
ವಿಂದಾನುವಿಂದ ಪ್ರಮುಖಾಧಾರ್ತರಾಷ್ಟ್ರಸ್ತಮಾಸೇದುರ್ದ್ವಾದಶ ವೀರಮುಖ್ಯಾಃ ॥೧೩೩॥

ತತಃ— ಅನಂತರ, ಅಮಿತೌಜಾಃ — ಅಪರಿಮಿತಸಾಮರ್ಥ್ಯವುಳ್ಳ, ಭೀಮಸೇನಃ — ಭೀಮಸೇನನು, ಕೌರವರಾಜಸೇನಾಂ — ದುರ್ಯೋಧನನಸೈನ್ಯವನ್ನು, ಶರೈಃ— ಬಾಣಗಳಿಂದ, ಮೃತ್ವನ್ಸನ್ —ಪೀಡಿಸುವವನಾಗಿ, ಪ್ರಾಯಯಾತ್– ಹೋದನು. ವೀರಮುಖ್ಯಾಃ – ಪರಾಕ್ರಮಿಗಳಲ್ಲಿ ಶ್ರೇಷ್ಠರಾದ, ವಿಂದಾನುವಿಂದಪ್ರಮುಖಾಃ— ವಿಂದ, ಅನುವಿಂದರೇ ಪ್ರಧಾನರಾಗಿಉಳ್ಳ, ದ್ವಾದಶ— ಹನ್ನೆರಡು ಸಂಖ್ಯಾಕರಾದ, ಧಾರ್ತರಾಷ್ಟ್ರಃ – ಧೃತರಾಷ್ಟ್ರನ ಮಕ್ಕಳು, ತಂ– ಆ ಭೀಮನನ್ನು, ಆಸೇದುಃ – ಹೊಂದಿದರು. ॥೧೩೩॥

ವಿದ್ಧಃ ಶರೈಸ್ತೈರ್ಬಹುಭಿರ್ವೃಕೋದರಃ ಶಿರಾಂಸಿತೇಷಾಂ ಯುಗಪಚ್ಚಕರ್ತ ॥
ಹತೇಷು ತೇಷುಪ್ರವರೇಷು ಧನ್ವಿನಾಂ ಸತ್ಯವ್ರತಃ ಪುರುಮಿತ್ರೋಜಯಶ್ಚ ॥೧೩೪॥

ವೃಂದಾರಕಃ ಪೌರವಶ್ಚೇತ್ಯಮಾತ್ಯಾಃ ಸಮಾಸೇದುರ್ಧಾರ್ತರಾಷ್ಟ್ರಸ್ಯ ಭೀಮಂ ॥೧೩೫॥

ತೈಃ — ಆ ವಿಂದಾದಿಗಳಿಂದ, ಬಹುಭಿಃ ಶರೈಃ— ಅನೇಕಬಾಣಗಳಿಂದ, ವಿದ್ಧಃ– ಹೊಡೆಯಲ್ಪಟ್ಟ, ವೃಕೋದರಃ– ಭೀಮನು, ತೇಷಾಂ – ಆ ವಿಂದಾದಿಗಳ, ಶಿರಾಂಸಿ — ತಲೆಗಳನ್ನು, ಯುಗಪತ್– ಏಕಕಾಲದಲ್ಲಿ, ಚಕರ್ತ– ಕತ್ತರಿಸಿದನು. ಧನ್ವಿನಾಂ— ಧನುರ್ಧಾರಿಗಳ ಮಧ್ಯದಲ್ಲಿ, ಪ್ರವರೇಷು — ಶ್ರೇಷ್ಠರಾದ, ತೇಷು — ಆ ವಿಂದಾದಿಗಳು, ಹತೇಷುಸತ್ಸು — ಸಾಯುತ್ತಿರಲು, ಸತ್ಯವ್ರತಃ – ಸತ್ಯವ್ರತನು, ಪುರುಮಿತ್ರಃ– ಪುರುಮಿತ್ರನು, ಜಯಶ್ಚ – ಜಯನು, ವೃಂದಾರಕಃ — ವೃಂದಾರಕನು, ಪೌರವಶ್ಚ – ಪೌರವನೆಂಬಐದುಮಂದಿ, ಧಾರ್ತರಾಷ್ಟ್ರಸ್ಯ – ದುರ್ಯೋಧನನ, ಅಮಾತ್ಯಾಃ— ಮಂತ್ರಿಗಳು, ತಂ – ಆ ಭೀಮನನ್ನು, ಸಮಾಸೇದುಃ – ಹೊಂದಿದರು. ॥೧೩೪॥೧೩೫॥

ಸತೈಃಪೃಷತ್ಕೈರವಕೀರ್ಯಮಾಣಃಸಿತಾನ್ವಿಷಾಣಾನ್ಯುಗಪತ್ಸಮಾದದೇ ॥
ಜಹಾರತೈರೇವ ಶಿರಾಂಸಿತೇಷಾಂ ಹತೇಷು ತೇಷ್ವೇವಪರೇಷ್ವದುದ್ರುವುಃ ॥೧೩೬॥

ಸಃ — ಆ ಭೀಮಸೇನನು, ತೈಃ– ಆ ಮಂತ್ರಿಗಳಿಂದ, ಪೃಷತ್ಕೈಃ— ಬಾಣಗಳಿಂದ, ಅವಕೀರ್ಯಮಾಣಸ್ತನ್ — ವರ್ಷಿಸಿಕೊಳ್ಳಲ್ಪಟ್ಟವನಾಗಿ, ಸಿತಾನ್ — ತೀಕ್ಷ್ಣಗಳಾದ, ವಿಪಾಠಾನ್ — ಬಾಣವಿಶೇಷಗಳನ್ನು, ಯುಗಪತ್ ಏಕಕಾಲದಲ್ಲಿ, ಸಮಾದದೇ — ಹಿಡಿದನು; ತೈರೇವ– ಆ ಐದುಬಾಣಗಳಿಂದಲೇ, ತೇಷಾಂ– ಆ ಮಂತ್ರಿಗಳ, ಶಿರಾಂಸಿ– ತಲೆಗಳನ್ನು ಜಹಾರ– ಕತ್ತರಿಸಿದನು. ತೇಷು– ಆ ಐವರು, ಹತೇಷುಸತ್ಸು– ಮೃತರಾಗುತ್ತಿರಲು, ಪರೇ–ಸಾಯದೇಉಳಿದವರು, ಪ್ರದುದ್ರುವುಃ– ಓಡಿದರು. ॥೧೩೬॥

ಭಾ. ಅ. ೧೨೯ – ೧೩೬ ಆ ರಥದಿಂದ ಹಾರಿಕೊಂಡದ್ದರಿಂದ ದ್ರೋಣಾಚಾರ್ಯರು ಬದುಕಿದರು. ರಥವು ಕೆಳಗೆ ಬಿದ್ದು ನಾಶವಾಯಿತು. ಆದೇ ಸಮಯದಲ್ಲಿ ಶ್ರೀಭೀಮರ ರಥವನ್ನು ವಿಶೋಕನು ತಂದು ಶ್ರೀಭೀಮರ ಸಮೀಪಕ್ಕೆ ನಿಲ್ಲಿಸಿದನು; ಅದನ್ನು ಏರಿದರು ಶ್ರೀಭೀಮರು. ದ್ರೋಣರು, ದುರ್ಯೋಧನನು ಕೊಟ್ಟುಕಳಿಸಿದ ರಥವನ್ನು ಏರಿ ಧರ್ಮರಾಜನನ್ನು ಹಿಡಿಯಲೆಂದು ಅವನ ಸಮೀಪಕ್ಕೆ ಹೋದರು. ಅದನ್ನು ತಿಳಿದ ಧೃಷ್ಟದ್ಯುಮ್ನನು ಅವರನ್ನು ತಡೆದನು. ಧೃಷ್ಟದ್ಯುಮ್ನನ ಸೈನ್ಯವನ್ನೇ ದ್ರೋಣರು ಓಡಿಸುತ್ತಿದ್ದರು. ಅದನ್ನು ನಿಲ್ಲಿಸಿ ಪುನಃ ಧೃಷ್ಟದ್ಯುಮ್ನನು ದ್ರೋಣರನ್ನು ತಡೆದು ಅವರು ನೋಡುತ್ತಿರುವಂತೆಯೇ ಅವರ ಸೈನ್ಯವನ್ನು ಓಡಿಸಿದರು. ಹೀಗೆ ದುರ್ಯೋಧನ ಧರ್ಮರಾಜರಿಗೆ ಜಯವನ್ನು ಅಪೇಕ್ಷಿಸ ತಕ್ಕ ಆ ದ್ರೋಣ—ಧೃಷ್ಟದ್ಯುಮ್ನರಿಗೆ ಬಹಳ ಸಮಯಪರ್ಯಂತ ಅದ್ಭುತವಾದ, ಸತತವಾಗಿ ಬಾಣಗಳ ಸುರಿಮಳೆಯುಳ್ಳ, ಜಯ–ಪರಾಜಯಗಳಿಲ್ಲದ ಯುದ್ಧ ನಡೆದಿದೆ. ಆಗ ಶ್ರೀಭೀಮರು ಕೌರವಸೈನ್ಯವನ್ನು ಮರ್ದಿಸುತ್ತಾ ಇರುವಾಗ ವಿಂದ–ಅನುವಿಂದ ಮೊದಲಾಗಿಉಳ್ಳ ಹನ್ನೆರಡು ಮಂದಿ ಕೌರವರು ಯುದ್ಧಕ್ಕೆ ಬಂದು, ಶ್ರೀಭೀಮರ ಮೇಲೆ ಬಾಣಗಳನ್ನು ಬಿಡುತ್ತಿದ್ದರು. ಆಗ ಶ್ರೀಭೀಮರು ಅವರೆಲ್ಲರ ತಲೆಗಳನ್ನು ಏಕಕಾಲದಲ್ಲಿ ಕತ್ತರಿಸಿ ಸಂಹರಿಸಿದರು. ಇವರು ಸತ್ತಾಗ ದುರ್ಯೋಧನನ ಮಂತ್ರಿಗಳಾದ ಸತ್ಯವ್ರತ, ಪುರುಮಿತ್ರ, ಜಯ, ಬೃಂದಾರಕ, ಕೌರವ ಎಂಬವರು ಭೀಮರ ಮೇಲೆ ಏರಿಬಂದರು. ಅವರು ಬಾಣಗಳಿಂದ ಹೊಡೆಯುತ್ತಿರುವಾಗ, ಹದನವಾದ ಬಾಣಗಳನ್ನು ಶ್ರೀಭೀಮರು ಅವರ ಮೇಲೆ ಬಿಟ್ಟು ಅವರನ್ನು ಸಂಹರಿಸಿದರು; ಅದನ್ನು ನೋಡಿ ಉಳಿದವರು ಓಡಿದರು.

ಸಸಿಂಹವತ್ಕ್ಷುದ್ರಮೃಗಾನ್ಸಮಂತತೋ ವಿದ್ರಾವ್ಯ ಶತ್ರೂನ್ ಹೃದಿಕಾತ್ಮಜಂ ರಣೇ ॥
ಅಭ್ಯಾಗಮತ್ತೇನ ನಿವಾರಿತಃಶರೈಃಕ್ಷಣೇನ ಚಕ್ರೇ ವಿರಥಾಶ್ವಸೂತಂ ॥೧೩೭॥

ಸಃ— ಆ ಭೀಮನು, ಕ್ಷುದ್ರಮೃಗಾನ್—ಅಲ್ಪಶಕ್ತಿಯುಳ್ಳ ನರಿ ಮೊದಲಾದವುಗಳನ್ನು, ಸಿಂಹವತ್ – ಸಿಂಹವು ಓಡಿಸುವಂತೆ, ಶತ್ರೂನ್—ವೈರಿಗಳನ್ನು, ಸಮಂತತಃ —ಸುತ್ತಮುತ್ತಲೂ, ವಿದ್ರಾವ್ಯ – ಓಡಿಸಿ, ರಣೇ — ಯುದ್ಧದಲ್ಲಿ ಹೃದಿಕಾತ್ಮಜಂ – ಹೃದಿಕನ ಮಗನಾದ ಕೃತವರ್ಮನನ್ನು, ಅಭ್ಯಾಗಮತ್—ಎದುರುಗೊಂಡನು, ತೇನ – ಆ ಕೃತವರ್ಮನಿಂದ, ಶರೈಃ – ಬಾಣಗಳಿಂದ, ನಿವಾರಿತಃ— ತಡೆಯಲ್ಪಟ್ಟ ಭೀಮನು, ಕ್ಷಣೇನ – ಕೂಡಲೇ, ವಿರಥಾಶ್ವಸೂತಂ—ರಥ, ಕುದುರೆಗಳು, ಸಾರಥಿ ಇಲ್ಲದವನನ್ನಾಗಿ ಕೃತವರ್ಮನನ್ನು, ಚಕ್ರೇ – ಮಾಡಿದನು. ।೧೩೭॥

ಸಗಾಢವಿದ್ಧಸ್ತು ವೃಕೋದರೇಣ ರಣಂ ವಿಸೃಜ್ಯಾಪಯಯೌ ಕ್ಷಣೇನ ॥
ವಿಜಿತ್ಯ ಹಾರ್ದಿಕ್ಯಮಥಾಶುಭೀಮೋ ವಿದ್ರಾವಯಾಮಾಸ ವರೂಥಿನೀಂ ತಾಂ ॥
ಸಂಪ್ರೇಷಯನ್ಸರ್ವನರಾಶ್ವಕುಂಜರಾನ್ಯಮಾಯ ಯಾತೋ ಹರಿಪಾರ್ಥಪಾರ್ಶ್ವಂ ॥೧೩೮॥

ವೃಕೋದರೇಣ – ಭೀಮನಿಂದ, ತು—ವಿಶೇಷವಾಗಿ, ಗಾಢವಿದ್ಧಃ— ದೃಢವಾಗಿ ಹೊಡೆಸಿಕೊಳ್ಳಲ್ಪಟ್ಟ, ಸಃ — ಆ ಕೃತವರ್ಮನು, ರಣಂ— ಯುದ್ಧವನ್ನು, ವಿಸೃಜ್ಯ–ಬಿಟ್ಟು, ಕ್ಷಣೇನ–ಕೂಡಲೇ, ಅಪಯಯೌ –ಹಿಂತಿರುಗಿ ಹೋದನು. ಭೀಮಃ– ಭೀಮನು, ಹಾರ್ದಿಕ್ಯಂ – ಕೃತವರ್ಮನನ್ನು, ವಿಜಿತ್ಯ— ಗೆದ್ದು, ಅಥ—ಅನಂತರವೇ, ತಾಂ ವರೂಥಿನೀಂ – ಆ ಕೌರವರ

ಸೈನ್ಯವನ್ನು, ವಿದ್ರಾವಯಾಮಾಸ – ಓಡಿಸಿದನು. ಸರ್ವನರಾಶ್ವಕುಂಜರಾನ್ – ಎಲ್ಲಾ ಮನುಷ್ಯರು, ಕುದುರೆಗಳು, ಆನೆಗಳು ಇವುಗಳನ್ನು, ಯಮಾಯ – ಮೃತ್ಯುವಿಗೋಸ್ಕರ, ಸಂಪ್ರೇಷಯನ್ – ಕಳುಹಿಸುವ ಭೀಮನು, ಹರಿಪಾರ್ಥಪಾರ್ಶ್ವಂ— ಶ್ರೀಕೃಷ್ಣಾರ್ಜುನರ ಸವಿೂಪಕ್ಕೆ ಯಾತಃ— ಹೋದನು; ॥೧೩೮॥

ದೃಷ್ಟೈವ ಕೃಷ್ಣವಿಜಯೌ ಪರಮುಪ್ರಹೃಷ್ಟಸ್ತಾಭ್ಯಾಂನಿರೀಕ್ಷಿತ ಉತ ಪ್ರತಿಭಾಷಿತಶ್ಚ ॥
ಸಂಜ್ಞಾಂ ನೃಪಸ್ಯಸದದಾವಪಿ ಸಿಂಹನಾದಾತ್ ಶ್ರುತ್ವಾಪರಾಂ ಮುದಮುವಾಪಸಚಾಗ್ರ್ಯ ಬುದ್ಧಿಃ ॥೧೩೯॥

ಕೃಷ್ಣವಿಜಯೌ –ಶ್ರೀಕೃಷ್ಣಾರ್ಜುನರನ್ನು,ದೃಷ್ಟೈವ- ನೋಡಿಯೇ, ಪರಮಂಪ್ರಹೃಷ್ಟಃ – ಅತಿ ಸಂತೋಷಗೊಂಡ, ತಾಭ್ಯಾಂ – ಆ ಕೃಷ್ಣಾರ್ಜುನರಿಂದ, ನಿರೀಕ್ಷಿತಃ—ಕಾಣಿಸಿಕೊಳ್ಳಲ್ಪಟ್ಟ,ಉತ – ಮತ್ತು ಪ್ರತಿಭಾಷಿತಶ್ಚ– ಹೇಳಿಸಿಕೊಳ್ಳಲ್ಪಟ್ಟ, ಸಃ – ಆ ಭೀಮನು,ಸಿಂಹನಾದಾತ್-ಸಿಂಹನಾದದಿಂದ, ನೃಪಸ್ಯ – ಧರ್ಮರಾಜನಿಗೆ, ಸಂಜ್ಞಾಂ— ಅರ್ಜುನಸಾತ್ಯಕಿಯರನ್ನು ನಾನುನೋಡಿದೆ ಎಂಬ ಸೂಚನೆಯನ್ನು ದದೌ — ಕೊಟ್ಟನು, ಅಗ್ರ್ಯಬುದ್ಧಿಃ – ಚುರುಕಾದ ಬುದ್ಧಿಯುಳ್ಳ ಸಃ – ಆ ಯುಧಿಷ್ಠಿರನು, ಶ್ರುತ್ವಾ–ಸಿಂಹನಾದವನ್ನುಕೇಳಿ, ಪರಾಂ ಮುದಂ-ಅತಿ ಸಂತೋಷವನ್ನು, ಅವಾಪಹೊಂದಿದನು. ॥೧೩೯॥

ಭೀಮಸ್ಯ ನಾನದತಏವ ಮಹಾಸ್ವನೇನ ವಿಣ್ಮೂತ್ರ ಶೋಣಿತಮಥೋವ್ಯಥಿವಾಪುರೇಕೇ ॥
ಭೀತೇಷುಸರ್ವನೃಪತಿಷ್ವಮುವಾಪತೂರ್ಣಂ ಕರ್ಣೋವಿಕರ್ಣಮುಖರಾ ಅಪಿಧಾರ್ತರಾಷ್ಟ್ರಾಃ ॥೧೪೦॥

ನಾನದತಃ – ಅತ್ಯಂತಶಬ್ದವನ್ನು ಮಾಡತಕ್ಕ, ಭೀಮಸ್ಯ–ಭೀಮನ, ಮಹಾಸ್ವನೇನೈವ–ಮಹತ್ತಾದ ಶಬ್ದದಿಂದಲೇ, ವಿಣ್ಮೂತ್ರಶೋಣಿತಂ— ಮಲವು, ಮೂತ್ರವೂ, ರಕ್ತವೂ ಇವುಗಳ ವಿಸರ್ಜನವನ್ನು, ಆಪುಃ – ಗುದ, ಮುಖ ಮೊದಲಾದ ದ್ವಾರಗಳಿಂದ ದುರ್ಯೋಧನನ ಸೈನಿಕರು ಮಾಡಿದರು. ಏಕೇ – ಕೆಲವರು, ವ್ಯಥಿಂ — ಮರಣವನ್ನು, ಆಪುಃ – ಹೊಂದಿದರು, ಸರ್ವನೃಪತಿಷು – ಎಲ್ಲಾ ರಾಜರು, ಭೀತೇಷುಸತ್ಸು – ಹೆದರುತ್ತಿರಲು, ಕರ್ಣಃ – ಕರ್ಣನು, ತೂರ್ಣಂ – ಬೇಗನೇ, ಅಮುಂ – ಭೀಮನನ್ನು, ಆಪ – ಹೊಂದಿದನು, ವಿಕರ್ಣಮುಖರಾಃ – ವಿಕರ್ಣನೇಪ್ರಧಾನರಾಗಿವುಳ್ಳ, ಧಾರ್ತರಾಷ್ಟ್ರಾಅಪಿ– ಧೃತರಾಷ್ಟ್ರನ ಮಕ್ಕಳೂ ಕೂಡ, ಅಮುಮಾಪುಃ – ಈ ಭೀಮನನ್ನು ಹೊಂದಿದರು. ॥೧೪೦॥

ಹತ್ವಾವಿಕರ್ಣಮುತ ತತ್ರಚಚಿತ್ರಸೇನಂ ಸಂಚೂರ್ಣಿತಂ ಪ್ರವಿದಧೇರಥಮರ್ಕಸೂನೋಃ ॥
ಘೋರೈಃಶರೈಃ ಪುನರಪಿಸ್ಮ ಸಮೃದ್ಯಮಾನಃಕರ್ಣೋಽಪಯಾನಮಕರೋದ್ದ್ರುತಮೇವಭೀಮಾತ್॥೧೪೧॥

ಸಃ — ಆ ಭೀಮಸೇನನು, ವಿಕರ್ಣಂ — ವಿಕರ್ಣನನ್ನು, ಉತ – ಮತ್ತು, ಚಿತ್ರಸೇನಂಚ – ಚಿತ್ರಸೇನನನ್ನೂ ಕೂಡ, ಹತ್ವಾಕೊಂದು, — ತತ್ರ – ಆ ಯುದ್ಧದಲ್ಲಿ, ಅರ್ಕಸೂನೋಃ — ಸೂರ್ಯಪುತ್ರ ಕರ್ಣನ, ರಥಂ – ರಥವನ್ನು, ಸಂಚೂರ್ಣಿತಂ – ಚೆನ್ನಾಗಿ ಪುಡಿಯಾದದ್ದನ್ನಾಗಿ, ಪ್ರವಿದಧೇ—ಮಾಡಿದನು, ಪುನಃ – ಮತ್ತು, ಘೋರೈಃ – ಭಯಂಕರ ಗಳಾದ, ಶರೈಃ – ಬಾಣಗಳಿಂದ, ಮೃದ್ಯಮಾನಃ – ಪೀಡಿಸಿಕೊಳ್ಳಲ್ಪಟ್ಟ, ಸಃ – ಆ ಕರ್ಣನು, ಭೀಮಾತ್ – ಭೀಮನಿಂದ ದ್ರುತಮೇವ – ಕೂಡಲೇ, ಅಪಯಾನಂ—ಪಲಾಯನವನ್ನು, ಅಕರೋತ್ – ಮಾಡಿದನು. ॥೧೪೧॥

ಆಶ್ವಾಸ್ಯ ಚೈವಸುಚಿರಂ ಪುನರೇವಭೀಮಂ ಯುದ್ಧಾಯಯಾತಿ ಧೃತರಾಷ್ಟ್ರಸುತೈಸ್ತಥಾನ್ಯೈಃ ॥
ತಾಂಶ್ಚೈವ ತತ್ರವಿನಿಹತ್ಯ ತಥೈವಕರ್ಣೋವ್ಯಶ್ವಾಯುಧಃಕೃತ ಉತಾಪಯಯೌ ಕ್ಷಣೇನ ॥೧೪೨॥

ಸಃ—ಆ ಕರ್ಣನು, ಸುಚಿರಂ – ಬಹುಕಾಲದ ತನಕ, ಆಶ್ವಾಸ್ಯಚೈವ—ವಿಶ್ರಾಂತಿಯನ್ನು ಹೊಂದಿಯೇ, ಅನ್ಯೈಃ– ಇತರರಾದ, ಧೃತರಾಷ್ಟ್ರಸುತೈಃ – ಧೃತರಾಷ್ಟ್ರನ ಮಕ್ಕಳಿಂದ ಕೂಡಿ, ಯುದ್ಧಾಯ – ಯುದ್ಧಕ್ಕೋಸ್ಕರ, ಭೀಮಂ–ಭೀಮ

ನನ್ನು ಕುರಿತು, ಯಾತಿ – ಹೋದನು, ತತ್ರ – ಅಲ್ಲಿ, ತಾನ್–ಆ ಧೃತರಾಷ್ಟ್ರನ ಮಕ್ಕಳನ್ನು, ವಿನಿಹತ್ಯ – ಕೊಂದು, ಸ್ಥಿತೇನ–ಇರತಕ್ಕ ಭೀಮನಿಂದ, ತಥೈವ – ಹಿಂದಿನಂತೆಯೇ, ಕರ್ಣಃ – ಕರ್ಣನು, ವ್ಯಶ್ವಾಯುಧಃ – ಹೋಗಲ್ಪಟ್ಟ ಕುದುರೆ ಮತ್ತು ಆಯುಧಗಳುಳ್ಳವನಾಗಿ, ಕೃತಃ – ಮಾಡಲ್ಪಟನು, ಉತ – ಮತ್ತು, ಕ್ಷಣೇನ–ಕೂಡಲೇ, ಅಪಯಯೌ – ಹಿಂತೆರಳಿದನು. ॥೧೪೨॥

ವಿಕರ್ಣಚಿತ್ರಸೇನಾದ್ಯಾ ಏವಂ ವೀರತಮಾಃ ಸುತಾಃ ॥
ಕರ್ಣಸ್ಯಪಶ್ಯತೋ ಭೀಮಬಾಣಕೃತ್ತ ಶಿರೋಧರಾಃ ॥೧೪೩॥

ನಿಪೇತುರ್ಧೃತರಾಷ್ಟ್ರಸ್ಯ ರಥೇಭ್ಯಃ ಪೃಥಿವೀತಲೇ ॥
ತ್ರಯೋವಿಂಶತಿ ರೇವಾತ್ರ ಕರ್ಣ ಸಾಹಾಯ್ಯಕಾರಿಣಃ ॥೧೪೪॥

ಏವಂ–ಹೀಗೆ, ಕರ್ಣಸಾಹಾಯ್ಯಕಾರಿಣಃ– ಕರ್ಣನಿಗೆ ಸಹಾಯ ಮಾಡತಕ್ಕ. ತ್ರಯೋವಿಂಶತಿರೇವ – ಇಪ್ಪತ್ತಮೂರು ಸಂಖ್ಯಾಕರಾದ, ವೀರತಮಾಃ – ಅತಿ ಪರಾಕ್ರಮಿಗಳಾದ, ವಿಕರ್ಣಚಿತ್ರಸೇನಾದ್ಯಾಃ– ವಿಕರ್ಣಚಿತ್ರಸೇನನೇ ಮೊದಲಾಗಿಉಳ್ಳ, ಧೃತರಾಷ್ಟ್ರಸ್ಯ– ಧೃತರಾಷ್ಟ್ರನ, ಸುತಾಃ – ಮಕ್ಕಳು, ಕರ್ಣಸ್ಯಪಶ್ಯತಃಸತಃ— ಕರ್ಣನು ನೋಡುತ್ತಿರುವಾಗಲೇ, ಭೀಮ ಬಾಣಕೃತ್ತಶಿರೋಧರಾಸ್ಸಂತಃ— ಭೀಮನ ಬಾಣಗಳಿಂದ ಕತ್ತರಿಸಲ್ಪಟ್ಟ ಕುತ್ತಿಗೆಯುಳ್ಳವರಾಗಿ, ರಥೇಭ್ಯಃ – ರಥಗಳಿಂದ, ಪೃಥಿವೀತಲೇ – ಭೂತಲದಲ್ಲಿ, ನಿಪೇತುಃ – ಬಿದ್ದರು. ॥೧೪೩॥೧೪೪॥

ಏಕವಿಂಶತಿ ವಾರಂಚ ವ್ಯಶ್ವಸೂತರಥಧ್ವಜಃ ॥
ಗಾಢಮಭ್ಯರ್ದಿತಸ್ತೀಕ್ಷ್ಣೈಃಶರೈರ್ಭೀಮೇನ ಸಂಯುಗೇ ॥೧೪೫॥

ಪ್ರಾಣಸಂಶಯಮಾಪನ್ನಃ ಸರ್ವಲೋಕಸ್ಯಪಶ್ಯತಃ ॥
ರಣಂತ್ಯಕ್ತ್ವಾಪ್ರದುದ್ರಾವ ರುದನ್ದುಃಖಾತ್ಪುನಃಪುನಃ ॥೧೪೬॥

ಭೀಮೇನ – ಭೀಮನಿಂದ, ಸಂಯುಗೇ— ಯುದ್ಧದಲ್ಲಿ, ತೀಕ್ಷ್ಣೈಃ — ಹರಿತಗಳಾದ, ಶರೈಃ – ಬಾಣಗಳಿಂದ ಗಾಢಂ – ಚೆನ್ನಾಗಿ, ಅಭ್ಯರ್ದಿತಃ–ಪೀಡಿಸಿಕೊಳ್ಳಲ್ಪಟ್ಟ, ಏಕವಿಂಶತಿವಾರಂ – ಇಪ್ಪತ್ತೊಂದು ಸಲ, ವ್ಯಶ್ವಸೂತರಥಧ್ವಜಃ– ಹೋಗಲ್ಪಟ್ಟ ಕುದುರೆಗಳು, ಸಾರಥಿಯು, ರಥಗಳೂ, ಧ್ವಜಗಳೂ ಇವುಗಳುಳ್ಳ, ಪ್ರಾಣಸಂಶಯಂ – ತನ್ನಜೀವನದಲ್ಲಿ ಸಂದೇಹವನ್ನು, ಆಪನ್ನಃ— ಹೊಂದಿರುವ, ದುಃಖಾತ್— ದುಃಖದಿಂದ, ಪುನಃಪುನಃ — ಮತ್ತೂ ಮತ್ತೂ, ರುದನ್ – ಅಳತಕ್ಕ ಕರ್ಣನು, ಸರ್ವಲೋಕಸ್ಯ–ಎಲ್ಲಾ ಜನರು, ಪಶ್ಯತಃಸತಃ – ನೋಡುತ್ತಿರುವಾಗಲೇ ರಣಂ— ಯುದ್ಧವನ್ನು, ತ್ಯಕ್ತ್ವಾ – ಬಿಟ್ಟು, ಪ್ರದುದ್ರಾವ – ಓಡಿದನು. ॥೧೪೫॥ ॥೧೪೬॥

ದ್ವಾವಿಂಶತಿಮಯುದ್ಧೇತು ರಾಮದತ್ತಂ ಸುಭಾಸ್ವರಂ ॥
ಅಭೇದ್ಯಂರಥಮಾರುಹ್ಯ ವಿಜಯಂ ಧನುರೇವಚ ॥೧೪೭॥

ತದ್ದತ್ತಮೇವ ಸಂಗೃಹ್ಯ ತೂಣೇಚಾಕ್ಷಯಸಾಯಕೌ ॥
ಅಸಸಾದರಣೇ ಭೀಮಂ ಕರ್ಣೋವೈಕರ್ತನೋರುಷಾ ॥೧೪೮॥

ದ್ವಾವಿಂಶತಿಮಯುದ್ಧೇತು— ಇಪ್ಪತ್ತೆರಡನೆಯ ಯುದ್ಧದಲ್ಲಾದರೂ, ರಾಮದತ್ತಂ – ಪರಶುರಾಮದೇವರಿಂದ ಕೊಡಲ್ಪಟ್ಟ, ಸುಭಾಸ್ವರಂ – ಚೆನ್ನಾಗಿ ಪ್ರಕಾಶಮಾನವಾದ, ಅಭೇದ್ಯಂ – ಭೇದಿಸಲು ಅಶಕ್ಯವಾದ, ವಿಜಯಂ — ವಿಶೇಷ-

ವಾಗಿ ಜಯವನ್ನು ಕೊಡುವ, ರಥಂ—ರಥವನ್ನು, ಆರುಹ್ಯ – ಏರಿಕೊಂಡು, ತದ್ದತ್ತವೇವ – ಆ ಪರುಶುರಾಮರಿಂದಲೇ ಕೊಡಲ್ಪಟ್ಟ, ಧನುಃ—ಬಿಲ್ಲನ್ನು, ಅಕ್ಷಯಸಾಯಕೌ –ಬರಿದಾಗದ ಬಾಣಗಳುಳ್ಳ, ತೂಣೇ — ಬತ್ತಳಿಕೆಗಳನ್ನು, ಸಂಗೃಹ್ಯ– ಸಂಗ್ರಹಿಸಿ, ವೈಕರ್ತನಃಕರ್ಣಃ — ಸೂರ್ಯನ ಪುತ್ರನಾದ ಕರ್ಣನು, ರುಷಾ – ಕೋಪದಿಂದ, ಭೀಮಂ—ಭೀಮನನ್ನು, ರಣೇ – ಯುದ್ಧದಲ್ಲಿ, ಆಸಸಾದ – ಹೊಂದಿದನು ॥೧೪೭॥೧೪೮॥

ಸುಘೋರ ಆಸೀತ್ತತಯೋರ್ವಿಮರ್ದೋಭಿಮುಸ್ಯ ಕರ್ಣಸ್ಯ ಚದೀರ್ಘಕಾಲಂ ॥
ಆಕಾಶಮಾಚ್ಛಾದಯತಾಂ ಶರೌಘೈಃಪರಸ್ಪರಂ ಚೈವಸುರಕ್ತನೇತ್ರಯೋಃ ॥೧೪೯॥

ಸುರಕ್ತನೇತ್ರಯೋಃ – ಚೆನ್ನಾಗಿ ಕೆಂಪಾದ ಕಣ್ಣುಗಳುಳ್ಳ, ಶರೌಘೈಃ – ಬಾಣಗಳ ಸಮೂಹಗಳಿಂದ, ಪರಸ್ಪರಂ – ಅನ್ಯೋನ್ಯವಾಗಿ, ಆಕಾಶಂ – ಆಕಾಶವನ್ನು, ಆಚ್ಛಾದಯತಾಂ—ಮುಚ್ಚತಕ್ಕ, ತಯೋಃ — ಆ, ಭೀಮಸ್ಯ – ಭೀಮನಿಗೂ, ಕರ್ಣಸ್ಯಚ — ಕರ್ಣನಿಗೂ, ದೀರ್ಘಕಾಲಂ —ಬಹುಕಾಲದ ವರೆಗೆ, ಸುಘೋರಃ – ಅತಿಭಯಂಕರವಾದ, ಸಃ ವಿಮರ್ದಃ–ಆ ಯುದ್ಧವು, ಆಸೀತ್ – ಆಯಿತು. ॥೧೪೯॥

ತತೋಭೀಮೋ ಮಹಾಬಾಹುಃ ಸಹಜಾಭ್ಯಾಂಚ ಸಂಯುತಂ ॥
ತ್ವಾಂತುಕುಂಡಲವರ್ಮಭ್ಯಾಂಶಕ್ನುಯಾಂ ಹಂತುಮಂಜಸಾ ॥೧೫೦॥
ಇತಿಜ್ಞಾಪಯಿತುಂ ತಸ್ಯ ಕುಂಡಲೇಕವಚಂ ತಥಾ ॥
ಶರೈರುತ್ಕೃತ್ಯ ಸಮರೇ ಪಾತಯಾಮಾಸ ಭೂತಲೇ ॥೧೫೧॥

ತತಃ – ಅನಂತರ, ಮಹಾಬಾಹುಃ–ಶ್ರೇಷ್ಠಭುಜಗಳುಳ್ಳ, ಭೀಮಃ – ಭೀಮನು, ಸಹಜಾಭ್ಯಾಂ–ಹುಟ್ಟುವಾಗಲೇ ಇರುತ್ತಿದ್ದ, ಕುಂಡಲವರ್ಮಭ್ಯಾಂ — ಕರ್ಣಾಭರಣಗಳೂ, ಕವಚವೂ ಇವುಗಳಿಂದ, ಸಂಯುತಂ – ಕೂಡಿರುವ, ತ್ವಾಂ—ನಿನ್ನನ್ನು, ಆಂಜಸಾ—ಚೆನ್ನಾಗಿ, ಹಂತುಂ—ಕೊಲ್ಲಲು, ಶಕ್ನುಯಾಂ – ಸಮರ್ಥನು, ಇತಿ — ಎಂಬುದಾಗಿ, ಜ್ಞಾಪಯಿತುಂ – ಹುಟ್ಟುವಾಗ ಇದ್ದ ಕುಂಡಲಕವಚಗಳನ್ನು ಇಂದ್ರನು ತೆಗೆದುಕೊಂಡು ಹೋಗಿರುವದರಿಂದ ಸಹಜ ಕುಂಡಲಕವಚಗಳಿದ್ದರೂ ಅವುಗಳನ್ನು ಛೇದಿಸಲು ಸಮರ್ಥನೆಂದು ತಿಳಿಸುವುದಕ್ಕಾಗಿ, ತಸ್ಯ—ಆ ಕರ್ಣನ, ಕುಂಡಲೇ–ನೂತನ ಕುಂಡಲಗಳನ್ನೂ, ತಥಾ – ಹಾಗೆಯೇ, ಕವಚಂ—ಕವಚವನ್ನು, ಸಮರೇ—ಯುದ್ಧದಲ್ಲಿ, ಶರೈಃ – ಬಾಣಗಳಿಂದ, ಉತ್ಕೃತ್ಯ— ಕತ್ತರಿಸಿ, ಭೂತಲೇ – ಭೂಮಿಯಲ್ಲಿ, ಪಾತಯಾಮಾಸ—ಬೀಳಿಸಿದನು. ॥೧೫೦॥೧೫೧॥

ಏವಂತಾನ್ಯಪಕೃಷ್ಯಾಹಂ ಹನ್ಯಾಂ ತ್ವಾಮಿತಿವೇದಯನ್ ॥
ಪುನಶ್ಚ ಬಹುಭಿಸ್ತೀಕ್ಷ್ಣೈಃ ಶರೈರೇನಂ ಸಮರ್ದಯತ್ ॥೧೫೨॥

ಏವಂ – ಈ ರೀತಿಯಾಗಿ, ಅಹಂ—ನಾನು, ತಾನಿ – ಆ ಸಹಜ ಕುಂಡಲ ಕವಚಗಳನ್ನೂ ಕೂಡ, ಅಪಕೃಷ್ಯ–ಕಿತ್ತು, ತ್ವಾಂ—ನಿನ್ನನ್ನು, ಹನ್ಯಾಂ — ಕೊಲ್ಲುವೆನು, ಇತಿ – ಎಂದು, ವೇದಯನ್ – ತಿಳಿಸುತಕ್ಕ ಭೀಮನು, ಪುನಶ್ಚ – ಮತ್ತೂ ಬಹುಭಿಃ – ಬಹಳಗಳಾದ, ತೀಕ್ಷ್ಣೈಃ – ಹರಿತಗಳಾದ, ಶರೈಃ—ಬಾಣಗಳಿಂದ, ಏನಂ – ಈ ಕರ್ಣನನ್ನು, ಸಮರ್ದಯತ್–ಪೀಡಿಸಿದನು. ॥೧೫೨॥

ಭಾ. ಅ. ೧೩೭ – ೧೫೨ ಶ್ರೀಭೀಮರು ಸಿಂಹವು ಕ್ಷುದ್ರಮೃಗಗಳನ್ನು ಓಡಿಸುವಂತೆ ಶತ್ರುಗಳನ್ನು ಓಡಿಸಿದರು. ಕೃತವರ್ಮನ ಹತ್ತಿರ ಯುದ್ಧಮಾಡುತ್ತಾ ಅವನ ರಥ, ಕುದುರೆ ಸಾರಥಿಗಳನ್ನು ಸಂಹರಿಸಿ ಅವನಿಗೂ ಬಾಣ ಪ್ರಹಾರ ಮಾಡಿದಾಗ, ಕೃತವರ್ಮನು ಆ ಪೆಟ್ಟಿನಿಂದ ಶ್ರೀಭೀಮರನ್ನು ಬಿಟ್ಟು ಹೋದನು. ಹೀಗೆ ಅವನನ್ನು ಗೆದ್ದು ಶ್ರೀಭೀಮರು ಅವನ

ಸೈನ್ಯವನ್ನೆಲ್ಲ ಓಡಿಸಿ, ಬಹು ಪದಾತಿ, ಆನೆ ಮೊದಲಾದವನ್ನು ಸಂಹರಿಸಿ ಶ್ರೀಕೃಷ್ಣಾರ್ಜುನರ ಸಮೀಪಕ್ಕೆ ಬಂದರು. ಅವರಿಬ್ಬರನ್ನೂ ನೋಡಿ ತುಂಬಾ ಸಂತಸಪಟ್ಟರು. ಆವರೂಕೂಡ ಶ್ರೀಭೀಮರನ್ನು ನೋಡಿ ಸಂತಸಪಟ್ಟು ಮಾತನಾಡಿದರು. ಧರ್ಮರಾಜನಿಗೆ ಸಿಂಹನಾದದ ಮೂಲಕ ಸೂಚನೆಯನ್ನು ಕೊಟ್ಟರು. ಧರ್ಮರಾಜನೂ ಕೂಡ ಅದನ್ನು ಕೇಳಿ ತುಂಬಾ ಆನಂದಪಟ್ಟನು. ವೈರಿಪಕ್ಷದ ಕೆಲವರು ಆ ಸಿಂಹನಾದವನ್ನು ಕೇಳಿ ಭೀತಿಯಿಂದ ಮಲಮೂತ್ರ ವಿಸರ್ಜನ, ರಕ್ತವಮನ ಮಾಡಿ ಮರಣವನ್ನು ಹೊಂದಿದರು. ಎಲ್ಲ ರಾಜರೂ ಗಾಬರಿಯಾದರು. ಆಗ ಕರ್ಣನು ಶ್ರೀಭೀಮರ ಹತ್ತಿರ ಯುದ್ಧಕ್ಕೆ ಬಂದನು. ವಿಕರ್ಣನೇ ಮೊದಲಾದ ಧೃತರಾಷ್ಟ್ರಪುತ್ರರು ಬಂದರು. ವಿಕರ್ಣಚಿತ್ರಸೇನರನ್ನು ಸಂಹರಿಸಿ ಕರ್ಣನ ರಥವನ್ನು ಪುಡಿಮಾಡಿದರು. ಅವರ ಭಯಂಕರ ಬಾಣಗಳಿಂದ ಪೀಡಿತನಾದ ಕರ್ಣನು ಕೂಡಲೇ ಓಡಿಹೋದನು. ವಿಶ್ರಾಂತಿ ತೆಗೆದು ಕೊಂಡು ಮತ್ತೆ ಶ್ರೀಭೀಮರ ಹತ್ತಿರ ಯುದ್ಧಕ್ಕೆ ಬಂದನು. ಬೇರೆ ಕೌರವರನ್ನು ಸಹಾಯಕ್ಕಾಗಿ ಕರೆದುಕೊಂಡು ಬಂದಿದ್ದನು. ಕೌರವರನ್ನು ಸಂಹರಿಸಿ ಕರ್ಣನನ್ನು ರಥಾದಿಗಳಿಂದ ರಹಿತನನ್ನಾಗಿ, ಬಾಣಪೀಡಿತನನ್ನಾಗಿ ಮಾಡಿ ಕಳಿಸಿದರು. ಹೀಗೆ ವಿಕರ್ಣ, ಚಿತ್ರಸೇನ ಮೊದಲಾದ ಮಹಾಪರಾಕ್ರಮಿಗಳಾದ ಕೌರವರು ಕರ್ಣನು ನೋಡುತ್ತಿರುವಂತೆಯೇ ಶ್ರೀಭೀಮಸೇನ ದೇವರ ಬಾಣಗಳಿಂದ ತಲೆಕತ್ತರಿಸಿಕೊಂಡವರಾಗಿ ಸತ್ತುಹೋದರು. ಹೀಗೆ ಇಪ್ಪತ್ತುಮೂರು ಜನ ಧೃತರಾಷ್ಟ್ರಪುತ್ರರು ಸತ್ತರು. ಕರ್ಣನು ಹೀಗೆ ಇಪ್ಪತ್ತೊಂದು ಸಲ ಯುದ್ಧದಲ್ಲಿ ಶ್ರೀಭೀಮರಿಂದ ರಥಾದಿಗಳನ್ನು ಕಳೆದುಕೊಂಡು, ಬಾಣ ಪ್ರಹಾರದಿಂದತುಂಬಾ ಪೀಡೆಹೊಂದಿ ಬದುಕುವನೋ ಇಲ್ಲವೋ ಎಂಬ ಸ್ಥಿತಿಯನ್ನು ಎಲ್ಲರ ಸಮಕ್ಷದಲ್ಲಿ ಹೊಂದಿದನು. ಅಳುತ್ತಾ ಯುದ್ಧಬಿಟ್ಟು ಓಡಿ ಹೋದನು. ಇಪ್ಪತ್ತೆರಡನೆಯ ಯುದ್ಧದಲ್ಲಿ ಪರುಶುರಾಮದೇವರು ಕೊಟ್ಟ, ಹೊಳೆಯುವ ರಥವನ್ನು ಏರಿಕೊಂಡು, ಅವರೇಕೊಟ್ಟ ಧನುಸ್ಸು, ಬತ್ತಳಿಕೆಗಳನ್ನು ತೆಗೆದುಕೊಂಡು ಸಿಟ್ಟಿನಿಂದ ಶ್ರೀಭೀಮರಹತ್ತಿರ ಯುದ್ಧಕ್ಕೆ ಬಂದನು. ಇಬ್ಬರಿಗೂ ಬಹುಕಾಲಪರ್ಯಂತ ಘೋರವಾದ ಯುದ್ಧವಾಗಿದೆ. ಪರಸ್ಪರರು ಪರಸ್ಪರರಿಗೆ ಬಿಡುವ ಬಾಣ ಗಳಿಂದ ಆಕಾಶವನ್ನೇ ಮುಚ್ಚಿದ್ದಾರೆ. ನಂತರ, ಭೀಮಸೇನದೇವರು ಕರ್ಣನನ್ನು ಅವನ ಜನ್ಮದಿಂದಲೇ ಇರತಕ್ಕ ಕರ್ಣಕುಂಡಲ, ಕವಚಗಳಿದ್ದರೂ ಕೂಡ ಅವುಗಳನ್ನೂ ಕೂಡ ಕತ್ತರಿಸಿ ಸಂಹರಿಸಲು ತಾನು ಸಮರ್ಥ ಎಂದು ಅವನಿಗೆ ತಿಳಿಸುವದ ಕ್ಕೋಸ್ಕರ ಅವನ ಹತ್ತಿರ ಬಂದು ಹೊಸ ಕರ್ಣಕುಂಡಲ, ಕವಚಗಳನ್ನು ಬಾಣಗಳಿಂದ ಕತ್ತರಿಸಿಹಾಕಿದರು. ಬಾಣಗಳಿಂದ ಪೀಡಿಸಿದರು.

'ತತಸ್ತು ಭೀಮಸ್ಯ ಬಭೂವ ಬುದ್ಧಿರಸ್ಪರ್ಧಿನಸ್ಸರ್ವಜಯೋಹಿದತ್ತಃ ॥
ಅಮುಷ್ಯರಾಮೇಣ ನಚಸ್ಪೃಧಾಯಂ ಕರ್ಣೋಮಯಾಯುಧ್ಯತಿಕೃಚ್ಛ್ರಗೋಹ್ಯಯಂ ॥೧೫೩॥

ತತಃ – ಆನಂತರ, ಭೀಮಸ್ಯತು – ಭೀಮನಿಗಾದರೂ, ಇತ್ಥಂ — ಈ ರೀತಿಯಾಗಿ, ಬುದ್ಧಿಃ – ವಿಚಾರವು, ಬಭೂವ – ಉಂಟಾಯಿತು. ಅಸ್ಪರ್ಧಿನಃ – ಸ್ಪರ್ಧೆಯಿಲ್ಲದ, ಅಮುಷ್ಯ – ಕರ್ಣನಿಗೆ, ರಾಮೇಣ — ಪರಶುರಾಮನಿಂದ ಸರ್ವಜಯಃ—ಎಲ್ಲರಿಂದಲೂ ಜಯವು, ದತ್ತೋಹಿ – ಕೊಡಲ್ಪಟ್ಟಿದೆಯಷ್ಟೇ, ಅಯಂ – ಈ ಕರ್ಣನು, ಕೃಚ್ಛ್ರಗೋಹಿ– ಕಷ್ಟವನ್ನು ಹೊಂದಿದವನಷ್ಟೆ. ॥೧೫೩॥

ತಥಾಪಿಮೇ ಭಗವಾನತ್ಯನುಗ್ರಹಾಜ್ಜಯಂ ದದಾತ್ಯಾತ್ಮವಚೋವಿಹಾಯ ॥
ಮಯಾತುಮಾನ್ಯಂ ವಚನಂ ಹರೇಃಸದಾತಸ್ಮಾದ್ದಾಸ್ಯೇ ವಿವರಂ ತ್ವದ್ಯಶತ್ರೋಃ ॥೧೫೪॥

ತಥಾಪಿ – ಕರ್ಣನಿಗೆ ಸರ್ವರಿಂದ ಜಯವು ಕೊಡಲ್ಪಟ್ಟರೂ ಕೂಡ, ಭಗವಾನ್ —ಷಡ್ಗುಣೈಶ್ವರ್ಯ ಸಂಪನ್ನರಾದ ಪರಶುರಾಮದೇವರು, ಅತ್ಯನುಗ್ರಹಾತ್ – ನನ್ನಲ್ಲಿರುವ ಪರಮಾನುಗ್ರಹದಿಂದ, ಆತ್ಮವಚಃ – "ಅಸ್ಪರ್ಧಮಾನಂ ನಕಥಂಚನತ್ವಾಂಜೇತಾಕಶ್ಚಿತ್" ಸ್ಪರ್ಧೆಯಿಲ್ಲದ ನಿನ್ನನ್ನು ಯಾವನೊಬ್ಬನೂ, ಯಾವರೀತಿಯಿಂದಲೂ ಜಯಿಸಲಾರನು ಎಂಬ ತನ್ನ ಮಾತನ್ನು, ವಿಹಾಯ – ಬಿಟ್ಟು, ಮೇ – ನನಗೆ, ಜಯಂ—ಜಯವನ್ನು, ದದಾತಿ— ಕೊಡುತ್ತಾರೆ, ಮಯಾತು – ನನ್ನಿಂದಲಾದರೂ, ಹರೇಃ – ಪರಶುರಾಮದೇವರ, ವಚನಂ ಮಾತು ಸದಾ— ಯಾವಾಗಲೂ, ಮಾನ್ಯಂ – ಗೌರವಿಸಲು

ಯೋಗ್ಯವು. ತು ಶಬ್ದದಿಂದ ಅಲ್ಪಭಕ್ತರಾದ ಭೀಷ್ಮರು ಪರಮಾತ್ಮನನಿಯಮವನ್ನು ಬಿಡಿಸಿದಂತೆ ಭಾಗವತ ಧರ್ಮದಲ್ಲಿರುವ ನಾನು ಪರಮಾತ್ಮನ ನಿಯಮವನ್ನು ಬಿಡಿಸುವುದು ಧರ್ಮವಲ್ಲವೆಂದು ಸೂಚಿತವಾಯಿತು. ತಸ್ಮಾತ್– ಆದ್ದರಿಂದ, ಅದ್ಯ – ಈಗ, ಶತ್ರೋಃ— ಶತ್ರುವಾದ ಕರ್ಣನಿಗೆ, ವಿವರಂ — ಯುದ್ಧಪಡಲು ಅವಕಾಶವನ್ನು, ದಾಸ್ಯೇ – ಕೊಡುವೆನು. ॥೧೫೪॥

ಏವಂ ಸ್ಮೃತ್ವಾತೇನರಂಧ್ರೇಪ್ರದತ್ತೇಕರ್ಣೋಸ್ತ್ರವೀರ್ಯೇಣ ಧನುರ್ಸ್ಯಕೃಂತತ್ ॥
ರಶ್ಮೀನ್ ಹಯಾನಾಂ ಚತತೋ ರಥಂಸ ತತ್ಯಾಜ ನೈಜಂ ಬಲಮೇವವೇದಯನ್ ॥೧೫೫॥

ಏವಂ – ಈ ರೀತಿಯಾಗಿ, ಸ್ಮೃತ್ವಾ - ಆಲೋಚಿಸಿ, ತೇನ—ಆ ಭೀಮನಿಂದ, ರಂಧ್ರೇ – ಅವಕಾಶವು, ಪ್ರದತ್ತೇ ಸತಿ – ಕೊಡಲ್ಪಡುತ್ತಿರಲು, ಕರ್ಣಃ— ಕರ್ಣನು, ಅಸ್ತ್ರವೀರ್ಯೇಣ – ಅಸ್ತ್ರದಸಾಮರ್ಥ್ಯದಿಂದ, ಧನುಃ–ಬಿಲ್ಲನ್ನು, ಹಯಾನಾಂ— ಕುದುರೆಗಳ, ರಶ್ಮೀನ್ಚ – ಹಗ್ಗಗಳನ್ನೂ ಕೂಡ, ಸ್ಯಕೃಂತತ್ – ಕತ್ತರಿಸಿದನು. ತತಃ – ಅನಂತರ, ಸಃ— ಆ ಭೀಮನು, ನೈಜಂ – ತನ್ನ ಸ್ವಾಭಾವಿಕವಾದ, ಬಲಮೇವ-ಸಾಮರ್ಥ್ಯವನ್ನೇ, ವೇದಯನ್ ಸನ್—ತಿಳಿಸತಕ್ಕವನಾಗಿ, ರಥಂ—ರಥವನ್ನು, ತತ್ಯಾಜ—ಬಿಟ್ಟನು. ॥೧೫೫॥

ನಮೇರಥಾದ್ಯೈರ್ಧನುಷಾವಾಪಿಕಾರ್ಯಮಿತ್ಯೇವಸಂಜ್ಞಾಪಯಿತುಂವೃಕೋದರಃ ॥
ಖಮುತ್ಪಪಾತೋತ್ತಮವೀರ್ಯತೇಜಾರಥಂ ಚಕರ್ಣಸ್ಯಸಮಾಸ್ಥಿತಃ ಕ್ಷಣಾತ್ ॥೧೫೬॥

ಮೇ – ನನಗೆ, ರಥಾದ್ಯೈಃ – ರಥವೇ ಮೊದಲಾಗಿಉಳ್ಳ ಅಸ್ತ್ರಸೈನ್ಯಾದಿಗಳಿಂದಲೂ, ಧನುಷಾವಾಪಿ –ಬಿಲ್ಲಿನಿಂದಲೂ ಕೂಡ, ಕಾರ್ಯಂ – ಪ್ರಯೋಜನವು, ನ—ಇಲ್ಲ, ಇತ್ಯೇವ – ಎಂಬುದಾಗಿಯೇ, ಸಂಜ್ಞಾಪಯಿತುಂ – ತಿಳಿಸುವುದಕ್ಕಾಗಿ, ~~ಉತ್ತಮವೀರ್ಯತೇಜಾಃ–ಶ್ರೇಷ್ಠಪರಾಕ್ರಮಬಲವುಳ್ಳ, ವೃಕೋದರಃ – ಭೀಮನು,ಖಂ–ಆಕಾಶಕ್ಕೆ,ಉತ್ಪಪಾತ – ಹಾರಿದನು,~~ ಕ್ಷಣಾತ್–ಕೂಡಲೇ, ಕರ್ಣಸ್ಯ -- ಕರ್ಣನ, ರಥಂ – ರಥವನ್ನು, ಸಮಾಸ್ಥಿತಃ – ಏರಿನಿಂತನು, ॥೧೫೬॥

ಭೀತಸ್ತು ಕರ್ಣೋ ರಥಕೂಬರೇತದಾವ್ಯಲೀಯತಾಧಃ ಸವೃಕೋದರೋರಥಾತ್ ॥
ಅವಪ್ಲುತೋಜ್ಞಾಪಯಿತುಂ ಸ್ವಶಕ್ತಿಂ ನಿರಾಯುಧತ್ವೇಪ್ಯರಿನಿಗ್ರಹಾದೌ ॥೧೫೭॥

ತದಾ – ಆಗ, ಕರ್ಣಸ್ತು – ಕರ್ಣನಾದರೂ,ಭೀತಸ್ಸನ್ – ಹೆದರಿದವನಾಗಿ,ರಥಕೂಬರೇ—ಕುದುರೆಗಳನ್ನು ಕಟ್ಟುವ ಯುಗಂಧರದ, ಅಧಃ – ಕೆಳಗೆ, ವ್ಯಲೀಯತ – ಅಡಗಿಕೂತನು, ಭೀಮನು ರಥವನ್ನು ಏರಲು ಕಾರಣವನ್ನು ಹೇಳುತ್ತಾರೆ. ಸ ವೃಕೋದರಃ — ಆ ಭೀಮನು, ನಿರಾಯುಧತ್ವೇಪಿ – ತಾನು ಆಯುಧವಿಲ್ಲದವನಾದರೂ, ಅರಿನಿಗ್ರಹಾದೌ – ಶತ್ರುಗಳನ್ನು ನಿಗ್ರಹ ಪಡಿಸುವುದು ಕೊಲ್ಲುವುದು ಮೊದಲಾದವುಗಳಲ್ಲಿ, ಅತಃ— ಅಕಾರ ಶಬ್ದವಾಚ್ಯನಾದ ಭಗವದನುಗ್ರಹದಿಂದ– (ಇರತಕ್ಕ) ಸ್ವಶಕ್ತಿಂ – ತನ್ನ ಸ್ವಾಭಾವಿಕ ಸಾಮರ್ಥ್ಯವನ್ನು, ಜ್ಞಾಪಯಿತುಂ — ತಿಳಿಸುವುದಕ್ಕಾಗಿ, ರಥವನ್ನು ಏರಿ ರಥಾದವಪ್ಲುತಃ—ರಥದಿಂದ ಕೆಳಗಿಳಿದನು. ॥೧೫೭॥

ನೈಚ್ಛದ್ಗ್ರಹೀತುಂ ವಿನಿಹಂತುಮೇವವಾರಥಂಧನುರ್ವಾಸ್ಯರಣೇಽಪಹರ್ತುಂ ॥
ದ್ರೋಣಸ್ಯಯದ್ವತ್ಪೂರ್ವಮತೀವ ಶಕ್ತೋಽಪ್ಯಮಾನಯದ್ರಾವುವಚೋಽಸ್ಯಭಕ್ತ್ಯಾ ॥೧೫೮॥

ಅಸ್ಯ–ಈ ಕರ್ಣನ, ರಥಂ – ರಥವನ್ನು, ಧನುರ್ವಾ—ಬಿಲ್ಲನ್ನಾಗಲೀ, ಅಪಹರ್ತುಂವಾ– ಅಪಹರಿಸಲಿಕ್ಕಾಗಲೀ, ವಿನಿಹಂತುಮೇವವಾ – ಕೊಲ್ಲಲಿಕ್ಕಾಗಲೀ, ನೈಚ್ಛದೇವ — ಇಚ್ಛಿಸಲೇಇಲ್ಲ. ಪೂರ್ವಂ – ಹಿಂದೆ, ದ್ರೋಣಸ್ಯಯದ್ವತ್ –

ದ್ರೋಣರ ರಥಾದಿಗಳನ್ನು ನಾಶಪಡಿಸಲು ಹೇಗೆ ಶಕ್ತನೋ, ತಥಾ — ಹಾಗೆಯೇ, ಅತೀವಶಕ್ತೋಪಿ – ಕರ್ಣನನ್ನು ನಾಶ ಪಡಿಸಲು ಅತ್ಯಂತ ಸಮರ್ಥನಾದರೂ ಕೂಡ, (ಭೀಮನು) ಅಸ್ಯಭಕ್ತ್ಯಾ – ಪರಶುರಾಮದೇವರ ಮೇಲಿನ ಭಕ್ತಿಯಿಂದ, ರಾಮವಚಃ – ಪರಶುರಾಮರ ಮಾತನ್ನು, ಅಮಾನಯತ್–ಗೌರವಿಸಿದನು. ॥೧೫೮॥

ಭೀಮನು ಕರ್ಣನನ್ನು ಸಂಹರಿಸದೇ ಇರಲು ಕಾರಣಾಂತರವನ್ನು ಹೇಳುತ್ತಾರೆ.

ಸತ್ಯಂ ಕರ್ತುಂವಾಸವೇಶ್ಚಪ್ರತಿಜ್ಞಾಂ ಸಂಮಾನಯನ್ವೈಷ್ಣವತ್ವಾಚ್ಚ ಕರ್ಣಂ ॥
ದಾತುಂ ರಂಧ್ರಂ ಸೂರ್ಯಜಸ್ಯ ಪ್ರಯಾತಃ ಶರಕ್ಷೇಪಾರ್ಥಂ ದೂರಮತಿಷ್ಠದತ್ರ ॥೧೫೯॥

ವಾಸವೇಃ – ಅರ್ಜುನನ, ಪ್ರತಿಜ್ಞಾಂ— ಕರ್ಣನನ್ನು ನಾನೇ ಕೊಲ್ಲುವೆನೆಂಬ ಪ್ರತಿಜ್ಞೆಯನ್ನು, ಸತ್ಯಂ–ಯಥಾರ್ಥವನ್ನಾಗಿ ಕರ್ತುಂ—ಮಾಡಲು, ವೈಷ್ಣವತ್ವಾಚ್ಚ –ಕರ್ಣನು ಭಗವದ್ಭಕ್ತನಾದ್ದರಿಂದಲೂ, ಕರ್ಣಂ — ಕರ್ಣನನ್ನು, ಸಂಮಾನಯನ್ಸನ್ – ಬಹುಮಾನಿಸುವವನಾಗಿ, ಸಂಹರಿಸಲು ಇಚ್ಛಿಸಲಿಲ್ಲ. ಸೂರ್ಯಜಸ್ಯ — ಕರ್ಣನಿಗೆ, ಶರಕ್ಷೇಪಾರ್ಥಂ— ಬಾಣಗಳನ್ನು ಪ್ರಯೋಗಿಸುವುದಕ್ಕಾಗಿ, ರಂಧ್ರಂ—ಅವಕಾಶವನ್ನು, ದಾತುಂ— ಕೊಡಲು, ದೂರಂ—ದೂರ ಪ್ರದೇಶವನ್ನು, ಪ್ರಯಾತಸ್ಸನ್ – ಹೊಂದಿದವನಾಗಿ, ಅತ್ರ – ದೂರಪ್ರದೇಶದಲ್ಲಿ, ಅತಿಷ್ಠತ್ – ನಿಂತನು. ॥೧೫೯॥

ತತಃ ಕರ್ಣೋ ದೂರಗತಂ ವೃಕೋದರಂ ಸಂಮಾನಯಂತಂ ರಾಮವಾಕ್ಯಂ ವಿಜಾನನ್ ।
ಶರೈರವಿಧ್ಯತ್ಸಚ ತಾನನಾರಯದ್ಗಜೈಮೃತೈಸ್ತಾಂಶ್ಚ ಚಕರ್ತ ಕರ್ಣಃ ॥೧೬೦॥

ತತಃ – ಅನಂತರ, ಕರ್ಣಃ – ಕರ್ಣನು, ದೂರಗತಂ – ದೂರ ಪ್ರದೇಶವನ್ನು ಹೊಂದಿದ, ವೃಕೋದರಂ— ಭೀಮಸೇನನನ್ನು, ರಾಮವಾಕ್ಯಂ – ಪರಶುರಾಮದೇವರ ಮಾತನ್ನು, ಸಂಮಾನಯಂತಂ – ಬಹುಮಾನಿಸತಕ್ಕವನನ್ನಾಗಿ, ವಿಜಾನನ್ – ತಿಳಿದವನಾಗಿ, ಶರೈಃ —ಬಾಣಗಳಿಂದ. ಅವಿಧ್ಯತ್ – ಹೊಡೆದನು, ಸಚ — ಆ ಭೀಮನಾದರೂ, ತಾನ್ – ಆ ಬಾಣಗಳನ್ನು, ಮೃತೈಃ–ಮರಣ ಹೊಂದಿದ ಗಜೈಃ–ಆನೆಗಳಿಂದ, ನ್ಯವಾರಯತ್–(ಸತ್ತ ಆನೆಗಳನ್ನು ಬಿಸಾಡಿ) ತಡೆದನು. ಕರ್ಣಃ – ಕರ್ಣನು, ತಾನ್— ಆ ಸತ್ತ ಆನೆಗಳನ್ನು, ಚಕರ್ತ – ಕತ್ತರಿಸಿದನು. ॥೧೬೦॥

ವ್ಯಸೂನ್ಗಜಾನ್ಪ್ರಕ್ಷಿಪಂತಂ ಸಮೇತ್ಯ ಸಂಸ್ಪೃಶ್ಯಚಾಪೇನ ವಚಶ್ಚದುಷ್ಟಂ ॥
ಸಂಶ್ರಾವಯಾಮಾಸ ಸುಯೋಧನಸ್ಯ ಪ್ರೀತ್ಯೈಪ್ರಜಾನನ್ನಪಿತಸ್ಯವೀರ್ಯಂ ॥೧೬೧॥

ಕರ್ಣಃ — ಕರ್ಣನು, ವ್ಯಸೂನ್— ಸತ್ತಿರುವ, ಗಜಾನ್ – ಆನೆಗಳನ್ನು, ಪ್ರಕ್ಷಿಪಂತಂ—ಬೀಸಾಡತಕ್ಕ ಭೀಮನನ್ನು, ಸಮೇತ್ಯ – ಹೊಂದಿ, ಚಾಪೇನ – ಧನುಸ್ಸಿನಿಂದ, ಸಂಸ್ಪೃಶ್ಯ—ಕುತ್ತಿಗೆಗೆ ತಿಕ್ಕಿ, ತಸ್ಯ – ಆ ಭೀಮನ, ವೀರ್ಯಂ–ಸಾಮರ್ಥ್ಯವನ್ನು, ಪ್ರಜಾನನ್ನಪಿ – ಚೆನ್ನಾಗಿ ತಿಳಿದವನಾದರೂ, ಸುಯೋಧನಸ್ಯ – ದುರ್ಯೋಧನನ, ಪ್ರೀತ್ಯೈ–ಸಂತೋಷಕ್ಕೋಸ್ಕರ, ದುಷ್ಟಂ ವಚಃ—ಕೆಟ್ಟ ಮಾತನ್ನು, ಸಂಶ್ರಾವಯಾಮಾಸ—(ಕೇಳುವಂತೆ ಮಾಡಿದನು) ಕೇಳಿಸಿದನು. ॥೧೬೧॥

ಸಂಶ್ರಾವಯಂತಂ ವಚನಾನಿರೂಕ್ಷಾಣ್ಯಸಾಹನದ್ಬಾಣಗಣೈಸ್ತದಾರ್ಜುನಃ ॥
ಸವರ್ಮಹೀನಃ ಸಾರ್ಥಬಾಹಾಭಿತಪ್ತೋವ್ಯಪಾಗಮದ್ಭೀಮ ಅಪಾತ್ಮಯಾನಂ ॥೧೬೨॥

ರೂಕ್ಷಾಣಿ – ಕ್ರೂರಗಳಾದ, ವಚನಾನಿ – ಮಾತುಗಳನ್ನು, ಸಂಶ್ರಾವಯಂತಂ – ಕೇಳಿಸುತ್ತಿದ್ದ ಕರ್ಣನನ್ನು, ಅರ್ಜುನಃ— ಅರ್ಜುನನು, ತದಾ — ಆಗ, ಬಾಣಗಣೈಃ – ಬಾಣಗಳ, ಸಮೂಹಗಳಿಂದ ಅಪಾಹನತ್ — ಹೊಡೆದನು.

ವರ್ಮಹೀನಃ— ಭೀಮನಿಂದ ಬೀಳಿಸಲ್ಪಟ್ಟ ಕವಚವುಳ್ಳ, ಸಃ—ಆ ಕರ್ಣನು ಪಾರ್ಥಬಾಣಾಭಿತಪ್ತಸ್ಸನ್ — ಅರ್ಜುನ ಶರಗಳಿಂದ ಸಂತಾಪವನ್ನು ಹೊಂದಿದವನಾಗಿ, ವ್ಯಪಾಗಮತ್—ಹಿಂತಿರುಗಿ ಹೋದನು. ಭೀಮಃ— ಭೀಮನು ಆತ್ಮಯಾನಂ ...ತನ್ನ ರಥವನ್ನು ಆಪ—ಹೊಂದಿದನು. ॥೧೬೨॥

ಕರ್ಣೋಭೀಮೇವಾಸವೀಂನೈವಶಕ್ತಿಂ ವಿಮೋಕ್ತುಮೈಚ್ಛನ್ನೈವ ಬೀಭತ್ಸುತೋಽನ್ಯಾನ್ ॥
ಹನ್ಯಾವಿತಿಪ್ರಾಹಯತಃಸಕುಂತ್ಯೈಯದ್ಯಪ್ಯವಧ್ಯಃ ಸತಯಾಪಿಭೀಮಃ ॥೧೬೩॥

ಸಕರ್ಣಃ — ಆ ಕರ್ಣನು, ಯದ್ಯಪಿ — ಶಕ್ತಿಯನ್ನು ಪ್ರಯೋಗಿಸಿದರೂ ಕೂಡ, ಸ ಭೀಮಃ — ಆ ಭೀಮನು, ತಯಾಪಿ — ಆ ಶಕ್ತಿಯಿಂದಲೂ ಕೂಡ, ಅವಧ್ಯಃ — ಕೊಲ್ಲಲು ಅಶಕ್ಯನು. ತಥಾಪಿ — ಹಾಗಾದರೂ ಕೂಡ, ಅಹಂ — ನಾನು, ಬೀಭತ್ಸುತಃ — ಅರ್ಜುನನಿಂದ, ಅನ್ಯಾನ್ — ಇತರರಾದ ಧರ್ಮಾದಿಗಳನ್ನು ನ ಹನ್ಯಾಂಏವ — ಕೊಲ್ಲುವುದೇ ಇಲ್ಲ. ಇತಿ — ಎಂದು, ಕುಂತ್ಯೈ—ಕುಂತಿ ಗೋಸ್ಕರ, ಯತಃ — ಯಾವ ಕಾರಣದಿಂದ ಪ್ರಾಹ — ಹೇಳಿದನೋ, ತತ ಏವ — ತಾಯಿಗೆ ಹೇಳಿರುವುದರಿಂದಲೇ, ಕರ್ಣಃ — ಕರ್ಣನು. ಭೀಮೇ — ಭೀಮನಲ್ಲಿ, ವಾಸವೀಂ—ಇಂದ್ರನು ಕೊಟ್ಟಿರುವ, ಶಕ್ತಿಂ — ಶಕ್ತ್ಯಾಯುಧವನ್ನು, ವಿಮೋಕ್ತುಂ — ಬಿಡಲು, ನೈಚ್ಛತ್ — ಇಚ್ಛಿಸಲಿಲ್ಲ. ॥೧೬೩॥

ಅವ — ಶಕ್ತಿಯಿಂದ ಅವಧ್ಯನೆಂದು ಹೇಳಿದ್ದನ್ನು ಯುಕ್ತಿಯಿಂದ ಸಮರ್ಥಿಸುತ್ತಾರೆ.

ನಾರಾಯಣಾಸ್ತ್ರಂ ಶಿರಸಿಪ್ರಪಾತಿತಂ ನಯಸ್ಯಲೋಮಾಪ್ಯದ ಹಚ್ಛಿರಃಸ್ಥಿತಂ ॥
ಕಿಂತಸ್ಯ ಶಕ್ತಿಃ ಪ್ರಕರೋತಿವಾಸವೀತಥಾನ್ಯದಪ್ಯಸ್ತ್ರ ಶಸ್ತ್ರಂ ಮಹಚ್ಚ ॥೧೬೪॥

ಶಿರಸಿ—ದ್ರೋಣರ ಸಂಹಾರಾನಂತರ ಅಶ್ವತ್ಥಾಮನಿಂದ ಭೀಮನ ತಲೆಯಲ್ಲಿ, ಪ್ರಪಾತಿತಂ — ಬೀಳಿಸಲ್ಪಟ್ಟ, ನಾರಾಯಣಾಸ್ತ್ರಮಪಿ — ನಾರಾಯಣಾಸ್ತ್ರವೂ ಕೂಡ, ಯಸ್ಯ — ಯಾವ ಭೀಮನ, ಶಿರಃ ಸ್ಥಿತಂ — ತಲೆಯಲ್ಲಿರುವ, ಲೋಮಾಪಿ — ಒಂದು ರೋಮವನ್ನೂ ಕೂಡ, ನಾದಹತ್ — ಸುಡಲಿಲ್ಲವೋ, ತಸ್ಯ — ಅಂತಹ ಭೀಮನಿಗೆ, ವಾಸವೀ ಶಕ್ತಿಃ — ಇಂದ್ರನದ್ದಾದ ಶಕ್ತಿಃ ಆಯುಧವು, ಕಿಂಪ್ರಕರೋತಿ — ಏನು ಮಾಡುತ್ತದೆ ? ತಥಾ — ಹಾಗೆಯೇ, ಅನ್ಯದಪಿ — ಬೇರೆಯಾದ, ಮಹತ್ ಅಸ್ತ್ರಶಸ್ತ್ರಂಚ — ಮಹತ್ತಾದ ಅಸ್ತ್ರಶಸ್ತ್ರಗಳೂ ಕೂಡ, ಕಿಂ — ಏನು ಮಾಡುತ್ತವೆ ? ॥೧೬೪॥

ಭೀಮಃ ಕರ್ಣರಥಂಪ್ರಾಪ್ತಃ ಶಕ್ತಿಂ ನಾದಾತುಮೈಚ್ಛತ ॥
ಅಭಿಪ್ರಾಯಂ ಕೇಶವಸ್ಯಜಾನನ್ ಹೈಡಿಂಬಮೃತ್ಯವೇ ॥೧೬೫॥

ಹೈಡಿಂಬಮೃತ್ಯವೇ — ಘಟೋತ್ಕಚನ ಮರಣಕ್ಕಾಗಿ, ಭವೇತ್ — ಕಾರಣ ಆಗುವುದೆಂದು, ಕೇಶವಸ್ಯ—ಶ್ರೀಕೃಷ್ಣನ, ಅಭಿಪ್ರಾಯಂ — ಆಶಯವನ್ನು, ಜಾನನ್ — ತಿಳಿದಿರುವ, ಭೀಮಃ — ಭೀಮನು, ಕರ್ಣರಥಂ — ಕರ್ಣನ ರಥವವನ್ನು, ಪ್ರಾಪ್ತಃ ಸನ್—ಹೊಂದಿದವನಾಗಿ, ಶಕ್ತಿಂ—ಶಕ್ತ್ಯಾಯುಧವನ್ನು ಆದಾತುಂ—ತೆಗೆದುಕೊಳ್ಳಲು, ನೈಚ್ಛತ—ಇಚ್ಛಿಸಲಿಲ್ಲ. ॥೧೬೫॥

ಭಾ. ಅ. ೧೫೩—೧೬೫ ಶ್ರೀಭೀಮಸೇನದೇವರಿಗೆ ಮುಂದೆ ಈ ರೀತಿ ವಿಚಾರ ಬಂದಿತು. ಸ್ಪರ್ಧೆ ಇಲ್ಲದೆ ಯುದ್ಧ ಮಾಡುವಾಗ ಕರ್ಣನಿಗೆ ಎಲ್ಲರ ಮೇಲೂ ಜಯವೂ ಸಿಗಲಿ ಎಂದು ಶ್ರೀ ಪರಶುರಾಮದೇವರು ವರವನ್ನು ಕೊಟ್ಟಿದ್ದಾರೆ. ಇವನು ನನ್ನ ಹತ್ತಿರ ಸ್ಪರ್ಧೆಯಿಂದ ಯುದ್ಧ ಮಾಡುತ್ತಿಲ್ಲ. ಹೀಗಾಗಿ ಆ ವರದ ಪ್ರಕಾರ, ಇವನಿಗೆ ಜಯ ಸಿಗಬೇಕು. ಆದರೆ, ಇವನೀಗ ಕಷ್ಟದಲ್ಲಿದ್ದಾನೆ. ಯದ್ಯಪಿ ಇವನಮೇಲೆ ಜಯವನ್ನು ನನಗೆ ದೇವರು ತನ್ನ ಮಾತನ್ನೂ ಬಿಟ್ಟೂ ಕೂಡ ಕೊಟ್ಟೇ ಕೊಡುತ್ತಾನೆ. ಆದರೆ ಶ್ರೀ ಹರಿಯ ಮಾತನ್ನು ನಾನು ಮನ್ನಿಸುವದು ನನಗೆ ಯೋಗ್ಯವಾದ್ದರಿಂದ ಈ ಕರ್ಣನಿಗೆ ನನ್ನಮೇಲೆ ಜಯ ಸಿಗುವಂತೆ ಅವಕಾಶವನ್ನು ಕೊಡುತ್ತೇನೆ ಎಂದು ವಿಚಾರಿಸಿ ಅವಕಾಶವನ್ನು ತಾವಾಗಿಯೇ ಕಲ್ಪಿಸಿ

ಕೊಟ್ಟಾಗ, ಕರ್ಣನು ತನ್ನ ಅಸ್ತ್ರಸಾಮರ್ಥ್ಯದಿಂದ ಭೀಮಸೇನ ದೇವರ ಬಿಲ್ಲನ್ನು, ಕುದುರೆಗಳ ಹಗ್ಗವನ್ನು ಕತ್ತರಿಸಿದನು. ಈ ಸಮಯದಲ್ಲಿ ತನ್ನ ಸ್ವಾಭಾವಿಕ ಸಾಮರ್ಥ್ಯವನ್ನು ತೋರಿಸಲು ಇಚ್ಛೆ ಬಂದು, ಶ್ರೀಭೀಮರು ರಥವನ್ನೇ ಬಿಟ್ಟು ಬಂದು ಈ ರಥಾದಿ ಉಪಸ್ಕರಗಳು ನನಗೆ ಬೇಕೇ ಇಲ್ಲ ಎಂದು ತೋರಿಸುತ್ತಾ ಆಕಾಶಕ್ಕೆ ಹಾರಿ ಕ್ಷಣಮಾತ್ರದಲ್ಲಿ ಕರ್ಣನ ರಥವನ್ನು ಏರಿ ನಿಂತರು. ಆಗ ಕರ್ಣನು ಹೆದರಿ ತನ್ನ ರಥದ ಕೆಳಬದಿಯಲ್ಲಿ ಅಚ್ಚಿನ ಕೆಳಗೆ ಅಡಗಿ ನಿಂತನು. ಇದರ ನಂತರ ಶ್ರೀಭೀಮರು ಅವನ ರಥದಿಂದ ಕೆಳಗಿಳಿದರು. ವಾಹನ ವಿಲ್ಲದಿದ್ದರೂ, ನಿರಾಯುಧನಾದರೂ ನಾನು ವೈರಿಗಳನ್ನು ಸಂಹರಿಸಲು ಸಮರ್ಥ ಎಂದು ತಿಳಿಸುವ ಉದ್ದೇಶ ಮಾತ್ರವಿದ್ದದ್ದರಿಂದ ಈಗ ಆ ಕರ್ಣನನ್ನು ಬಂಧಿಸಲಾಗಲೀ, ಸಂಹರಿಸಲಾಗಲೀ ಅವನ ರಥಾದಿಗಳನ್ನು ಅಪಹರಿಸಲಾಗಲೀ ಪ್ರವೃತ್ತರಾಗಲಿಲ್ಲ. ದ್ರೋಣಾಚಾರ್ಯರೊಂದಿಗೆ ಈ ಮೊದಲು ಯುದ್ಧ ಮಾಡುವಾಗ ತೋರಿಸಿದಂತೆ ಇಲ್ಲಿಯೂ ತೋರಿಸಿದ್ದಾರೆ. ಪರಶುರಾಮದೇವರಲ್ಲಿ ಭಕ್ತಿಯಿಂದ, ಅವರ ಮಾತಿನಲ್ಲಿ ಗೌರವದಿಂದ, ಅರ್ಜುನನ ಪ್ರತಿಜ್ಞೆಯನ್ನು ಸತ್ಯ ಮಾಡುವದಕ್ಕಾಗಿಯೂ ಕೂಡ, ಈ ರೀತಿ ಮಾಡಿ, ಅವನಿಗೆ ತನ್ನಮೇಲೆ ಬಾಣ ಪ್ರಯೋಗ ಮಾಡಲು ಅವಕಾಶ ಮಾಡಿಕೊಡಲು ದೂರಕ್ಕೆ ಹೋಗಿ ನಿಂತರು. ಅದೇ ಸಮಯವನ್ನು ನಿರೀಕ್ಷಿಸುತ್ತಿದ್ದ ಕರ್ಣನು ಭೀಮರ ಮೇಲೆ ಬಾಣಗಳಿಂದ ಪ್ರಹಾರ ಮಾಡಿದನು. ಆದರೆ ಆ ಬಾಣಗಳನ್ನು ಭೀಮರು ಮೃತಗಜಗಳಿಂದ ತಡೆದರು. ಇದರಿಂದ ಮೃತ ಗಜಗಳನ್ನೇ ಆ ಬಾಣಗಳು ಸೀಳುತ್ತಿದ್ದಷ್ಟೇ ವಿನಃ ಹೊಸ ಫಲವೇನೂ ಆಗುತ್ತಿದ್ದಿಲ್ಲ. ಆಗ ಕರ್ಣನು ಶ್ರೀಭೀಮರ ಸನಿಹಕ್ಕೆ ಬಂದು ಅವರ ಪರಾಕ್ರಮವನ್ನು ತಿಳಿದವನಾದರೂ ಕೂಡ ದುರ್ಯೋಧನನ ಪ್ರೀತಿಗಾಗಿ ಬಿಲ್ಲಿನಿಂದ ಭೀಮರ ಕಡೆಗೆ ತಿವಿದಂತೆ ಮಾಡಿ, ದುಷ್ಟ ವಚನಗಳನ್ನಾಡಿದನು. ಆಗ ಅರ್ಜುನನು ಪ್ರಬಲ ಬಾಣಗಳಿಂದ ಕರ್ಣನಿಗೆ ಪ್ರಹರಿಸಿದನು. ಕವಚಹೀನನಾದ ಕರ್ಣನು ಆ ಬಾಣಪ್ರಹಾರದಿಂದ ತಂಬಾ ಪೀಡಿತನಾಗಿ ಯುದ್ಧದಿಂದ ಹಿಂದಿರುಗಿದನು. ಆಗ ಶ್ರೀ ಭೀಮರು ತಮ್ಮ ರಥಕ್ಕೆ ಬಂದರು. ಕರ್ಣನು ಇಂದ್ರದತ್ತವಾದ ಶಕ್ತ್ಯಾಯುಧವನ್ನು ಭೀಮರ ಮೇಲೆ ಪ್ರಯೋಗಿಸಲು ಇಚ್ಛಿಸುತ್ತಿದ್ದಿಲ್ಲ. ಏಕೆಂದರೆ ಅದರಿಂದ ಶ್ರೀ ಭೀಮರು ಸಾಯುವರು ಎಂದು ತಿಳಿದಿದ್ದನು. ಆದರೆ ತಾನು ಅರ್ಜುನನನ್ನು ಬಿಟ್ಟು ಬೇರೆ ಪಾಂಡವನನ್ನು ಸಂಹರಿಸುವದಿಲ್ಲ ಎಂಬ ವಚನವನ್ನುಕುಂತಿಗೆ ಕೊಟ್ಟಿದ್ದರಿಂದ ಆ ಶಕ್ತ್ಯಾಯುಧದ ಪ್ರಯೋಗ ಮಾಡುತ್ತಿದ್ದಿಲ್ಲ. ಆದರೆ, ನಾರಾಯಣಾಸ್ತ್ರವು ತಲೆಯಮೇಲೆ ಬಿದ್ದಾಗಲೂ ಕೂಡ ಯಾವ ಭೀಮರ ರೋಮವನ್ನೂ ಕೂಡ ಸುಡಲು ~~ಸಮರ್ಥವಾಗಲಿಲ್ಲವೋ ಅಂಥ ಭೀಮರಲ್ಲಿ ಈ ಇಂದ್ರನ ಶಕ್ತ್ಯಾಯುಧವು, ಬೇರೆ ಯಾವದೇ ಶಸ್ತ್ರ ಅಸ್ತ್ರ ಏನು ಮಾಡೀತು?~~ ಶ್ರೀ ಭೀಮರು ಈ ಮೊದಲು ಕರ್ಣನ ರಥಕ್ಕೆ ಹೋದವರು ಶಕ್ತ್ಯಾಯುಧವನ್ನು ತೆಗೆಯಬಹುದಿತ್ತು. ಆದರೆ ಆ ಶಕ್ತ್ಯಾಯುಧದಿಂದ ತನ್ನ ಘಟೋತ್ಕಚನು ಸಾಯಬೇಕೆಂಬ ಶ್ರೀಕೃಷ್ಣನ ಇಚ್ಛೆ ಇದ್ದದ್ದನ್ನು ತಿಳಿದುಕೊಂಡು ಹಾಗೆ ಮಾಡಲಿಲ್ಲ.

ವಿಶೇಷಾಂಶ— ೧) ಶ್ರೀ ಭೀಮಸೇನರು ತಮಗೆ ಪರಾಜಯ ಬಂದಿದೆ ಎಂದು ಜನ ಆಡಿಕೊಂಡರೂ ಚಿಂತೆ ಇಲ್ಲ, ತಮ್ಮನ ಮಗ (ಅರ್ಜುನ ಪುತ್ರ) ಪರಾಕ್ರಮಿ ಅಭಿಮನ್ಯು ಮೃತನಾದರೂ ಚಿಂತೆ ಇಲ್ಲ; ತಮ ಮಗನೇ ಘಟೋತ್ಕಚನು ಮೃತನಾದರೂ ಚಿಂತೆ ಇಲ್ಲ. ಆದರೆ ಭಗವಂತನ (ಶ್ರೀಕೃಷ್ಣನ) ಸಂಕಲ್ಪ ವಚನಗಳಿಗೆ ವಿರೋಧ ಮಾಡಿಕೊಳ್ಳಬಾರದು ಎಂಬ ಅವರ ಶುದ್ಧ ವೈಷ್ಣವ ದೀಕ್ಷೆಯನ್ನು ನಾವು ಕಾಣಬಹುದು.

೨) ಭಗವಂತನ ಬಗ್ಗೆ ತಪ್ಪು ತಿಳಿವಳಿಕೆಯು ಇಲ್ಲ ಎಂಬುದನ್ನು ಧರ್ಮರಾಜನು ಅರ್ಜುನನ ಗಾಂಡೀವ ಧ್ವನಿಯು ಕೇಳಿಸದೇ ಇರುವಾಗ ಪಾಂಚಜನ್ಯ ಶಂಖಧ್ವನಿಯು ಮಾತ್ರ ಕೇಳಿಸಿದಾಗ, ಸಂಶಯಗೊಂಡು ಅರ್ಜುನನಿಗೆ ಸಹಾಯಮಾಡಲು ಮೊದಲು ಸಾತ್ಯಕಿಯನ್ನು ಕಳಿಸಿದಾಗ ಅವನು ಹೋಗಿಯೇಬಿಟ್ಟ. ಮತ್ತೆ ಭೀಮನನ್ನು ಕಳಿಸುವಾಗ ಭೀಮರು ಮಾತ್ರ ವಾಸುದೇವನಿಂದ ರಕ್ಷಿತನಾದ ಅರ್ಜುನನನ್ನು ಬ್ರಹ್ಮ ರುದ್ರಾದಿಗಳೂ ಕೂಡ ಗೆಲ್ಲಲಾರರು ಎಂದು ಸ್ಪಷ್ಟವಾಗಿ ಹೇಳಿದ್ದನ್ನು ಅವಲೋಕಿಸಿದಾಗ ತಿಳಿಯುತ್ತದೆ.

೩) ಸಾತ್ಯಕಿಯು ಅರ್ಜುನನನ್ನು ನೋಡಲು, ಸಹಾಯಮಾಡಲು ಹೋದದ್ದರಿಂದ, ಶ್ರೀಕೃಷ್ಣನು ಮಾಡುವ ರಕ್ಷಣೆಯಲ್ಲಿ ವಿಶ್ವಾಸ ಪೂರ್ಣವಿಲ್ಲ; ಹಾಗೆಯೇ ಧರ್ಮರಾಜನೂ ಕೂಡ ಸೇನಾಪತಿಯಾದ ಧೃಷ್ಟದ್ಯುಮ್ನನಿಂದ ತಾನು ಸುರಕ್ಷಿತ ಎಂದು ಭಾವಿಸಿಕೊಂಡವನು ಜಗತ್ಪತಿಯಾದ ಶ್ರೀಕೃಷ್ಣನಿಂದ ಅರ್ಜುನ ಸುರಕ್ಷಿತ ಎಂಬ ಭಾವನೆಯನ್ನು ಹೊಂದಲಿಲ್ಲ. ಇವನ್ನೆಲ್ಲ ನೋಡಿದರೆ ಭೀಮರನ್ನು ಬಿಟ್ಟು ಉಳಿದವರಿಗಾರೂ ಸರಿಯಾಗಿ ತಿಳಿಯಲಾರರು ಎಂದು ತಿಳಿಯುವದು.

ತತಃಕರ್ಣೋಽನ್ಯಮಾಸ್ಥಾಯರಥಮರ್ಜುನಮಭ್ಯಯಾತ್ ॥
ದಿವ್ಯಂರಥಂಧನುಶ್ಚೈವ ಕೃಷ್ಣಬುಧ್ಯಾರ್ಜುನೋಹರೇತ್ ॥೧೬೬॥

ಇತಿಭೀತಸ್ತತಾಂ ಶಕ್ತಿಮಾದಾಯಾರ್ಜುನಮೃತ್ಯವೇ ॥
ಯುದ್ಧಾಯಾಯಾದ್ರಥಂಚಾಪಂ ಶಕ್ತಿಂ ಚೈಕತ್ರನಾಕರೋತ್ ॥೧೬೭॥

ತತಃ – ಅನಂತರ, ಕರ್ಣಃ – ಕರ್ಣನು, ಅನ್ಯಂರಥಂ – ಪರಶುರಾಮ ದೇವರು ಕೊಟ್ಟಿರುವ ರಥಕ್ಕಿಂತ ಬೇರೆ ರಥವನ್ನು, ಆಸ್ಥಾಯ— ಏರಿ, ಅರ್ಜುನಂ — ಅರ್ಜುನನನ್ನು, ಅಭ್ಯಯಾತ್ —ಹೊಂದಿದನು, ಅರ್ಜುನಃ — ಅರ್ಜುನನು, ಕೃಷ್ಣಬುಧ್ಯಾ — ಕೃಷ್ಣನ ಉಪದೇಶದಿಂದ, ದಿವ್ಯಂರಥಂ — ದಿವ್ಯವಾದ ರಥವನ್ನು, ಧನುಶ್ಚೈವ – ಧನುಸ್ಸನ್ನೂ ಕೂಡ, ಹರೇತ್—ಅಪಹರಿಸಿಯಾನು, ಇತಿ – ಈ ರೀತಿಯಾಗಿ, ಭೀತಸ್ತನ್ – ಹೆದರಿದವನಾಗಿ, ತಾಂ ಶಕ್ತಿಂ – ಆ ಇಂದ್ರದತ್ತ ಶಕ್ತಿಯನ್ನು, ಆದಾಯ— ಹಿಡಿದುಕೊಂಡು, ಅರ್ಜುನಮೃತ್ಯವೇ – ಅರ್ಜುನನ ಮರಣಕ್ಕಾಗಿ,ಯುದ್ಧಾಯ – ಯುದ್ಧಕ್ಕೋಸ್ಕರ ಆಯಾತ್ – ಹೋದನು, ರಥಂ – ರಥವನ್ನು, ಚಾಪಂ – ಧನುಸ್ಸನ್ನು, ಶಕ್ತಿಂಚ – ಶಕ್ತ್ಯಾಯುಧವನ್ನು, ಏಕತ್ರ – ಒಂದೂ ಯುದ್ಧದಲ್ಲಿ, ನಾಕರೋತ್—ಏಕಕಾಲದಲ್ಲಿ ಮೂರನ್ನು ಹಿಡಿದುಕೊಂಡು ಹೋಗಲಿಲ್ಲ. ॥೧೬೬॥೧೬೭॥

ಏಕಂಹೃತಂ ಚೇದನ್ಯತ್ಸ್ಯಾದಿತಿಮತ್ವಾ ಭಯಾಕುಲಃ ॥
ಬಿಭೇತಿ ಸರ್ವದಾನೀತೇಃಕೃಷ್ಣಸ್ಯಾಮಿತತೇಜಸಃ ॥೧೬೮॥

ಏಕಂಹೃತಂಚೇತ್ – ರಥಾದಿಗಳಲ್ಲಿ ಒಂದು ಅಪಹರಿಸಲ್ಪಟ್ಟರೆ, ಅನ್ಯತ್ಸ್ಯಾತ್— ಇನ್ನೊಂದು ಇರುವುದು, ಇತಿ—ಎಂದು, ಮತ್ವಾ– ತಿಳಿದು, ಭಯಾಕುಲಸ್ತನ್—ಹೆದರಿಕೆಯಿಂದ ಸಂಭ್ರಾಂತನಾಗಿ, ಒಮ್ಮೆಲೆ ಹಿಡಿದುಕೊಂಡು ಹೋಗಲಿಲ್ಲ. ಅಮಿತತೇಜಸಃ — ಅಪರಿಮಿತಪರಾಕ್ರಮವುಳ್ಳ, ಕೃಷ್ಣಸ್ಯ – ಶ್ರೀಕೃಷ್ಣನ, ನೀತೇಃ — ನೀತಿಗೆ, ಸರ್ವದಾ – ಯಾವಾಗಲೂ, ಬಿಭೇತಿ – ಹೆದರುತ್ತಾನೆ. ॥೧೬೮॥

ನಿಶ್ಚಿತೋಮರಣಾಯೈವ ಮೃತಿಕಾಲೇತು ತಂರಥಂ ॥
ಆರುಹ್ಯಾಗಾದ್ಧಿ ಪೂರ್ವಂತು ನಕಾಲಂ ಮನ್ಯತೇಮೃತೇಃ ॥೧೬೯॥

(ಕರ್ಣನು) ಮೃತಿಕಾಲೇ—ಸಾಯುವ ದಿನದಲ್ಲಿ, ಮರಣಾಯೈವ–ಸಾಯುವದಕ್ಕಾಗಿಯೇ, ನಿಶ್ಚಿತಸ್ತನ್– ನಿಶ್ಚಯವುಳ್ಳವನಾಗಿ, ತಂ ರಥಂ – ಪರಶುರಾಮದೇವರು ಕೊಟ್ಟಿರುವ ರಥವನ್ನು, ಆರುಹ್ಯ — ಏರಿ, ಧನುಸ್ಸನ್ನು ಹಿಡಿದುಕೊಂಡು, ಹಿ – ಯಾವಕಾರಣದಿಂದ, ಅಗಾತ್ – ಯುದ್ಧಕ್ಕೆ ಹೋದನೋ, ತತ್ — ಆ ಕಾರಣದಿಂದ, ಪೂರ್ವಂ – ಮರಣ ದಿನದಿಂದ ಮೊದಲು, ಮೃತೇಃ – ಮರಣದ, ಕಾಲಂ — ಸಮಯವನ್ನು, ನ ಮನ್ಯತೇ—ತಿಳಿದಿರುವದಿಲ್ಲ. ॥೧೬೯॥

ಶಕ್ತಿಂತುತದ್ರಥಗತಾಂ ಪ್ರಸವಿಮೃಷ್ಯಕೃಷ್ಣಃಸಂಸ್ಥಾಪ್ಯ ಪಾರ್ಥಮಪಿ ಸಾತ್ಯಕಿಮೇವಯೋದ್ಧುಂ ॥
ದತ್ವಾಸ್ವಕೀಯರಥಮೇವ ವಿರೋಚನಸ್ಯಪುತ್ರೇಣ ಸೋಽದಿಶದಮುಷ್ಯಬಲಂ ಪ್ರದಾಯ ॥೧೭೦॥

ಸ ಕೃಷ್ಣಃ – ಆ ಶ್ರೀಕೃಷ್ಣನು, ತದ್ರಥಗತಾಂ — ಕರ್ಣನ ಆ ರಥದಲ್ಲಿರತಕ್ಕ, ಶಕ್ತಿಂತು – ಶಕ್ತಿಯನ್ನಾದರೂ, ಪ್ರಸವಿಮೃಷ್ಯ—ನೋಡಿ, ಪಾರ್ಥಮಪಿ – ಅರ್ಜುನನನ್ನಾದರೂ, ಸಂಸ್ಥಾಪ್ಯ – ಅಲ್ಲಿಯೇ ಬಿಲ್ಲಿಸಿ, ಅಮುಂಷ್ಯ–ಈ ಸಾತ್ಯಕಿಗೆ ಬಲಂ – ತನ್ನ ಆವೇಶದಿಂದ ಕರ್ಣನನ್ನು ಜಯಿಸುವ ಸಾಮರ್ಥ್ಯವನ್ನು, ಪ್ರದಾಯ–ಕೊಟ್ಟು, ಸ್ವಕೀಯಮೇವ – ತನ್ನದ್ದೇ

ಆದ, ರಥಂ – ರಥವನ್ನು, ದತ್ವಾ – ಕೊಟ್ಟು, ವಿರೋಚನಸ್ಯ – ಸೂರ್ಯನ, ಪುತ್ರೇಣ – ಮಗನಾದ ಕರ್ಣನಿಂದ. ಯೋದ್ಧುಂ—ಯುದ್ಧಮಾಡುವುದಕ್ಕಾಗಿ, ಸಾತ್ಯಕಿಮೇವ—ಸಾತ್ಯಕಿಯನ್ನೇ, ಅದಿಶತ್ – ಕಳುಹಿಸಿದನು. ॥೧೭೮॥

ಶಿಷ್ಯಂತ್ವಶಕ್ತಮಿಹಮೇಪ್ರತಿಯೋಧನಾಯಪಾರ್ಥೋ೯ಹ್ಯದಾದಿತಿ ಸಸಾತ್ಯಕಿಮೀಕ್ಷಮಾಣಃ ॥
ಸಂಸ್ಪರ್ಧಯೈವಯುಯುಧೇ ವಿರಥಂಚಕಾರ ತೇನೈವ ಸಾತ್ಯಕಿರಮುಂ ಹರಿಯಾನಸಂಸ್ಥಃ ॥೧೭೯॥

ಪಾರ್ಥಃ – ಅರ್ಜುನನು, ಇಹ–ಯುದ್ಧದಲ್ಲಿ, ಮೇ – ನನ್ನಿಂದ ಕೂಡಿಕೊಂಡು, ಪ್ರತಿಯೋಧನಾಯ – ಯುದ್ಧ ಮಾಡುವುದಕ್ಕೋಸ್ಕರ, ಅಶಕ್ತಂ ದುರ್ಬಲನಾದ, ಶಿಷ್ಯಂ – ಶಿಷ್ಯನನ್ನು, ಅದಾತ್—ಕೊಟ್ಟನು, ಇತಿ – ಎಂಬುದಾಗಿ, ಸಾತ್ಯಕಿಂ—ಸಾತ್ಯಕಿಯನ್ನು, ಈಕ್ಷಮಾಣಃ – ನೋಡತಕ್ಕ, ಸಃ – ಆ ಕರ್ಣನು, ಸಂಸ್ಪರ್ಧಯೈವ – ದುರ್ಬಲನನ್ನೇ ನನಗೆ ಸಮನಾಗಿ ಯುದ್ಧ ಮಾಡಲು ಕಳುಹಿಸಿಕೊಟ್ಟನು ಎಂಬ ಸ್ಪರ್ಧೆಯಿಂದ, ಯುಯುಧೇ – ಯುದ್ಧ ಮಾಡಿದನು, ತೇನೈವ – ಆ ಸ್ಪರ್ಧಾಪೂರ್ವಕ ಯುದ್ಧದಿಂದಲೇ, ಹರಿಯಾನಸಂಸ್ಥಃ – ಶ್ರೀಕೃಷ್ಣನ ರಥದಲ್ಲಿರುವ, ಸಾತ್ಯಕಿಃ – ಸಾತ್ಯಕಿಯು, ಅಮುಂ– ಈ ಕರ್ಣನನ್ನು, ವಿರಥಂ – ರಥರಹಿತನನ್ನಾಗಿ, ಚಕಾರ – ಮಾಡಿದನು. ॥೧೭೯॥

ನಕೇಶವರಥೇ ಕಶ್ಚಿತ್ಸ್ಥಿತೋಯಾತಿ ಪರಾಜಯಂ ॥
ಅತಶ್ಚ ಸಾತ್ಯಕಿರ್ನಾಪ ಕರ್ಣೇನಾತ್ರ ಪರಾಜಯಂ ॥೧೭೨॥

ಕೇಶವರಥೇ—ಶ್ರೀಕೃಷ್ಣನ ರಥದಲ್ಲಿ, ಸ್ಥಿತಃ–ಇರತಕ್ಕ, ಕಶ್ಚಿತ್–ಯಾವನೊಬ್ಬನೂ, ಪರಾಜಯಂ – ಪರಾಜಯವನ್ನು, ನ ಯಾತಿ – ಹೊಂದುವುದಿಲ್ಲ. ಅತಶ್ಚ – ಈ ಕಾರಣದಿಂದಲೂ, ಸಾತ್ಯಕಿಃ – ಸಾತ್ಯಕಿಯು, ಕರ್ಣೇನ – ಕರ್ಣನಿಂದ, ಪರಾಜಯಂ – ಪರಾಜಯವನ್ನು, ನಾಪ—ಹೊಂದಲಿಲ್ಲ. ॥೧೭೨॥

ಭಾ. ಅ. ೧೬೬ – ೧೭೨ ಇದರ ನಂತರ ಕರ್ಣನು ಶ್ರೀ ಪರಶುರಾಮದೇವರು ಕೊಟ್ಟ ರಥಕ್ಕಿಂತ ಬೇರೆಯಾದ

ರಥವನ್ನು ಏರಿಕೊಂಡು, ಅರ್ಜುನನ ಹತ್ತಿರ ಯುದ್ಧಕ್ಕೆ ಬಂದನು. ಶಕ್ತ್ಯಾಯುಧವನ್ನು ಹಿಡಿದುಕೊಂಡು ಬಂದನು. ಕರ್ಣನು ಶ್ರೀಪರಶುರಾಮರು ಕೊಟ್ಟ ರಥ ಧನುಸ್ಸುಗಳನ್ನು, ಇಂದ್ರದತ್ತ ಶಕ್ತ್ಯಾಯುಧವನ್ನು ಒಮ್ಮೆಲೆ ತರುತ್ತಿರಲಿಲ್ಲ. ಏಕೆಂದರೆ, ಎಲ್ಲವನ್ನು ಒಮ್ಮೆಯೇ ತಂದರೆ, ಶ್ರೀಕೃಷ್ಣನು ಅರ್ಜುನನಿಗೆ ಹೇಳಿಕೊಟ್ಟು ನನ್ನ ಆ ಎಲ್ಲವನ್ನೂ ಅಪಹರಿಸಿಬಿಡ ಬಹುದು ಎಂಬ ಹೆದರಿಕೆ ಇತ್ತು. ಒಂದು ಹೋದರೆ ಮುಂದಿನ ಯುದ್ಧಕ್ಕೆ ಇನ್ನೊಂದಾದರೂ ಇರಲಿ ಎಂಬ ವಿಚಾರದಿಂದ ಒಂದೊಂದೇ ಒಯ್ಯುತ್ತಿದ್ದನು. ಶ್ರೀಕೃಷ್ಣನ ರಾಜಕೀಯ ನೀತಿಗೆ ಯುದ್ಧನೀತಿ ಕೌಶಲ್ಯಕ್ಕೆ ಯಾವಾಗಲೂ ಹೆದರುತ್ತಿದ್ದನು. ಆದರೆ ಕೊನೆಯ ಯುದ್ಧದಲ್ಲಿ ತಾನು ಮರಣವನ್ನೇ ಹೊಂದುವೆನು ಎಂದು ನಿಶ್ಚಯಮಾಡಿಕೊಂಡು ನನ್ನ ನಂತರ ಈ ರಥದಿಂದ ಏನುಉಪಯೋಗ ಎಂದು ವಿಚಾರಿಸಿ ಆ ರಥವನ್ನು ತೆಗೆದುಕೊಂಡು ಬಂದನು. ಈ ಮೊದಲಿನ ಯುದ್ಧಗಳಲ್ಲಿ ಮಾತ್ರ ತಾನು ಸಾಯಬಹುದೆಂದು ತಿಳಿದಿರಲಿಲ್ಲ. ಈಗ ಕರ್ಣನು ಶಕ್ತ್ಯಾಯುಧವನ್ನು ತಂದದ್ದನ್ನು ತಿಳಿದ ಶ್ರೀಕೃಷ್ಣನು ಅರ್ಜುನನನ್ನು ನಿಲ್ಲಿಸಿ ಅವನೊಟ್ಟಿಗೆ (ಕರ್ಣನ ಜೊತೆಗೆ) ಯುದ್ಧಮಾಡಲು ಸಾತ್ಯಕಿಯನ್ನು ಕಳಿಸಿ ಅವನಿಗೆ ಕರ್ಣನನ್ನು ಜಯಿಸುವ ಶಕ್ತಿಯನ್ನು, ರಥವನ್ನುಕೊಟ್ಟಿದ್ದಾನೆ. ಈ ಸಮಯದಲ್ಲಿ ಕರ್ಣನು ಸಾತ್ಯಕಿ ಯುದ್ಧಕ್ಕೆ ಬಂದದ್ದಕ್ಕೆ ಹೀಗೆ ವಿಚಾರಿಸಿದನು ಈ ಅರ್ಜುನನು ತನ್ನ ಶಿಷ್ಯನಾದ, ಅಶಕ್ತನಾದ ಸಾತ್ಯಕಿಯನ್ನು ಕಳಿಸಿದ್ದಾನೆ. ನನ್ನ ಶಕ್ತಿಯನ್ನು ತೋರಿಸುತ್ತೇನೆ, ಇವನನ್ನು ಸೋಲಿಸಿಬಿಡುತ್ತೇನೆ, ಎಂಬ ಸ್ಪರ್ಧಾಮನೋಭಾವವನ್ನು ಹೊಂದಿ ಯುದ್ಧಮಾಡಿದನು. ಹೀಗಾಗಿ ಶ್ರೀಪರಶುರಾಮದೇವರ ಶಾಪವಚನದ ಪ್ರಕಾರ, ಶ್ರೀಕೃಷ್ಣನ ರಥದಲ್ಲಿ ಕುಳಿತು ಬಂದದ್ದರಿಂದ ವಿಶೇಷ ಬಲವನ್ನು ಸಾತ್ಯಕಿಯು ಹೊಂದಿದ್ದರಿಂದಲೂ, ಸಾತ್ಯಕಿಯು ಕರ್ಣನನ್ನು ವಿರಥನನ್ನಾಗಿ ಮಾಡಿದನು. ಕರ್ಣನು ಪರಾಜಯವನ್ನು ಹೊಂದಿದನು. ಸಾತ್ಯಕಿಯು ಮಾತ್ರ ಹೊಂದಲಿಲ್ಲ.

ಶಸ್ತ್ರಂಸಂಗ್ರಹಕಾಲೇತು ಕುಮಾರಾಣಾಂ ವ್ರತಂ ಭವೇತ್ ॥
ಇತ್ಯುಕ್ತಂ ಜಾಮದಗ್ನ್ಯೇನ ಧನುರ್ವಿದ್ಯಾಪುರಾಕೃತಾ ॥೧೭೩॥

ತಚ್ಚತ್ರುವಧರೂಪಂಚ ಪೂರ್ವಾಸಿದ್ಧಂಚ ಗೂಹಿತಂ ॥
ಅವಿರುದ್ಧಂಚ ಧರ್ಮಸ್ಯ ಕಾರ್ಯಂ ರಾಮಸ್ಯ ತುಷ್ಟಿದಂ ॥೧೭೪॥

ಅನುಪದ್ರವಂತು ಲೋಕಸ್ಯೇತ್ಯತೋಭೀಮೋವ್ರತಂತ್ವಿದಂ ॥
ಚಕಾರತೂಬರೇತ್ಯುಕ್ತೋಹನ್ಯಾಮಿತಿರಹಃ ಪ್ರಭುಃ ॥೧೭೫॥

ಅನುಪದ್ರವಾಯ ಲೋಕಸ್ಯ ಸುಶ್ಮಶ್ಮಮಂಡಲಃ ॥
ಸುಶ್ಮಶ್ಮಂಮಾಂ ನಕಶ್ಚಿದ್ಧಿ ತಥಾಬ್ರೂಯಾದಿತಿಸ್ಫುಟಂ ॥
ತದರ್ಜುನೋವಿಜಾನಾತಿ ಸ್ನೇಹಾದ್ಭೀಮೋದಿತಂ ರಹಃ ॥೧೭೬॥

ಧನುರ್ವಿದ್ಯಾಪುರಾಕೃತಾ — ಧನುರ್ವಿದ್ಯೆಯನ್ನು ಮೊದಲು ಉಪದೇಶ ಮಾಡಿದ, ಜಾಮದಗ್ನ್ಯೇನ — ಪರಶುರಾಮರಿಂದ, ಶಸ್ತ್ರಸಂಗ್ರಹಕಾಲೇ — ದ್ರೋಣರಿಗೆ ಶಸ್ತ್ರಾಭ್ಯಾಸ ಮಾಡಿಸುವ ಸಮಯದಲ್ಲಿ, ಕುಮಾರಾಣಾಂ— ಮಕ್ಕಳಿಗೆ, ವ್ರತಂ — ವ್ರತವು, ಭವೇತ್ — ಇರತಕ್ಕದ್ದು, ಇತಿ — ಎಂದು ಉಕ್ತಂ — ಹೇಳಲ್ಪಟ್ಟಿದೆ. ಆ ವ್ರತವನ್ನು ವಿವರಿಸುತ್ತಾರೆ, ತಚ್ಚತ್ರುವಧರೂಪಂ (ತೂಬರನೆಂದು ಹೇಳತಕ್ಕವನನ್ನು ಕೊಲ್ಲುತ್ತೇನೆಂದು ವ್ರತಮಾಡಿದವನಿಗೆ ತನ್ನನ್ನು ಯಾರೂ ತೂಬರನೆಂದು ಹೇಳಬಾರದೆಂಬ ಇಚ್ಛೆಗೆ ವಿಪರೀತವಾಗಿ ತೂಬರನೆಂದು ಹೇಳತಕ್ಕ) ಶತ್ರುವಿನ ಸಂಹಾರ ನಿರೂಪಣವು ಯಾವ ವ್ರತದಲ್ಲಿದೆಯೋ ಅಂತಹ ವ್ರತವು ಹೇಳಲ್ಪಟ್ಟಿದೆ. ಪೂರ್ವಾಸಿದ್ಧಂ—ಮೊದಲು ಯಾರಿಂದಲೂ ಮಾಡಲ್ಪಡದಿರತಕ್ಕದ್ದು, ಗೂಹಿತಂ — ಗೋಪ್ಯವಾದದ್ದು, ಅಂದರೆ ಯಾರಿಂದಲೂ ತಿಳಿಯಲ್ಪಡದೇ ಇರತಕ್ಕದ್ದು, ಗೋಪ್ಯವಾಗದಿದ್ದರೆ ಯಾರು ಹೇಳುವರೋ ಅವರೆಲ್ಲರೂ ಕೊಲ್ಲಲ್ಪಡುವರು. ಆದ್ದರಿಂದ ವ್ರತವು ಗೋಪ್ಯವಾಗಿರಬೇಕು. ಧರ್ಮಸ್ಯ—ಧರ್ಮಕ್ಕೆ ಅವಿರುದ್ಧಂ — ವಿರುದ್ಧವಾಗದೇ ಇರತಕ್ಕದ್ದು, ಇದರಿಂದ ಏಕಾದಶೀ ಭೋಜನಾದಿ ವ್ರತವನ್ನು ಮಾಡಬಾರದೆಂದು ಸೂಚಿತವಾಯಿತು, ರಾಮಸ್ಯ -- ಪರಶುರಾಮದೇವರಿಗೆ, ತುಷ್ಟಿದಂ — ಸಂತೋಷವನ್ನುಂಟುಮಾಡತಕ್ಕದ್ದು, ಲೋಕಸ್ಯ — ಜನರಿಗೆ ಪ್ರಾಯಶಃ ಅನುಪದ್ರವಂ — ಉಪದ್ರವವನ್ನುಂಟು ಮಾಡದೇ ಇರತಕ್ಕದ್ದು, ಇರತಕ್ಕ ದೋಷಗಳನ್ನು ಹೇಳಿದಾಗ ಕೊಲ್ಲುತ್ತೇನೆಂದು ಪ್ರತಿಜ್ಞೆ ಮಾಡಿದರೆ ಎಲ್ಲರೂ ಹೇಳಿಯಾರು, ಎಲ್ಲರನ್ನೂ ಕೊಲ್ಲಬೇಕಾಗುವುದು, ಇಲ್ಲದಿರುವ ದೋಷಗಳನ್ನುಹೇಳಿದಾಗ ಕೊಲ್ಲುತ್ತೇನೆಂದು ಪ್ರತಿಜ್ಞೆ ಮಾಡಿದರೆ ದೋಷಗಳು ಇಲ್ಲದಿರುವುದರಿಂದಲೇ ಯಾರೂ ಹೇಳಲಾರರು. ಯಾರನ್ನೂಕೊಲ್ಲುವ ಸಂದರ್ಭವೂ ಬರಲಾರದು ಎಂಬ ಅಭಿಪ್ರಾಯದಿಂದ ಅನುಪದ್ರವಂ ಎಂದು ಹೇಳಿರುವರು, ಇದನ್ನೇ ವಿವರಿಸುತ್ತಾರೆ. ಸುಶ್ಮಶ್ರುಂ—ಶೋಭನವಾದ ಗಡ್ಡವುಳ್ಳ, ಮಾಂ–ನನ್ನನ್ನು, ಕಶ್ಚಿತ್–ಯಾವ ಪುರುಷನೂಕೂಡ, ತಥಾ — ತೂಬರನೆಂದು, ಸ್ಫುಟಂ — ಸ್ಪಷ್ಟವಾಗಿ, ನ ಬ್ರೂಯಾತ್ — ಹೇಳಲಾರನು. ಇತಿ — ಎಂದೂ, ಹಿ — ಕಾರಣದಿಂದ, ಸುವ್ಯಕ್ತಶ್ಮಶ್ರುಮಂಡಲಃ— ಚೆನ್ನಾಗಿ ತೋರತಕ್ಕ ಮುಖದಲ್ಲಿ ಕೂದಲುಗಳುಳ್ಳ, ಪ್ರಭುಃ — ಭೀಮನು, ಲೋಕಸ್ಯ ಅನುಪದ್ರವಾಯ -- ಜನರಿಗೆ ತೊಂದರೆಯನ್ನು ಮಾಡದಿರುವುದಕ್ಕಾಗಿ, ತೂಬರೇತ್ಯುಕ್ತೋಸತಿ — ತೂಬರನೆಂದು ಹೇಳಿಸಿಕೊಳ್ಳಲ್ಪಡುತ್ತಿರಲು, ಹನ್ಯಾಂ-ತೂಬರನೆಂದು ಹೇಳುವವನನ್ನು ಕೊಲ್ಲುವೆನು, ಇತಿ-ಎಂಬ, ಇದಂವ್ರತಂ– ಈ ವ್ರತವನ್ನು, ರಹಃ — ಏಕಾಂತದಲ್ಲಿ, ಚಕಾರ — ಮಾಡಿದನು, ಸ್ನೇಹಾತ್ — ಪ್ರೀತಿವಿಶೇಷದಿಂದ, ರಹಃ — ಏಕಾಂತದಲ್ಲಿ, ಭೀಮೋದಿತಂ — ಭೀಮನಿಂದ ಹೇಳಲ್ಪಟ್ಟ, ತತ್ — ಆ ವ್ರತವನ್ನು, ಅರ್ಜುನಃ—ಅರ್ಜುನನು, ವಿಜಾನಾತಿ ತಿಳಿದಿರುತ್ತಾನೆ. ॥೧೭೩॥ ॥೧೭೪॥ ॥೧೭೫॥ ॥೧೭೬॥

ಅರ್ಜುನಸ್ಯಾಪಿ ಗಾಂಡೀವಂದೇಹಿತ್ಯುಕ್ತೇನಿಹನ್ಮಿತಂ ॥
ಗಾಂಡೀವಸ್ಯಾಗಮಂ ಪೂರ್ವಂ ಜಾನಾತ್ಯೇವಹಿನಾರದಾತ್ ॥೧೭೭॥

ಇತಿ ತಚ್ಚವಿಜಾನಾತಿ ಭೀಮ ಏಕೋ ನಚಾಪರಃ ॥೧೭೮॥

ಗಾಂಡೀವಂ – ಗಾಂಡೀವವೆಂಬ ಧನುಸ್ಸನ್ನು, ದೇಹಿ—ಕೊಡು, ಇತಿ– ಎಂದು, ಉಕ್ತೇಸತಿ — ಹೇಳಲ್ಪಡುತ್ತಿರಲು ತಂ – ಹಾಗೆ ಹೇಳತಕ್ಕವನನ್ನು, ನಿಹನ್ಮಿ — ಕೊಲ್ಲುತ್ತೇನೆ ಇತಿ— ಎಂದು, ಅರ್ಜುನಸ್ಯ – ಅರ್ಜುನನ ವ್ರತಂ – ವ್ರತವು. ವಿದ್ಯಾಭ್ಯಾಸಕಾಲದಲ್ಲಿ ಗಾಂಡೀವ ಧನುಸ್ಸು ಇಲ್ಲದಿರುವುದರಿಂದ ಹೇಗೆ ಪ್ರತಿಜ್ಞೆ ಮಾಡಿದನು ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ. ಗಾಂಡೀವಸ್ಯ – ಗಾಂಡೀವದ ಆಗಮಂ– ಪ್ರಾಪ್ತಿಯನ್ನು, ಪೂರ್ವಂ— ಮೊದಲೇ, ನಾರದಾತ್ – ನಾರದರಿಂದ, ವಿಜಾನಾತಿ – ತಿಳಿದಿರುತ್ತಾನೆ. ತತ್–ಆ ಅರ್ಜುನನ ವ್ರತವು, ಇತಿ – ಹೀಗೆ ಇದೆ ಎಂದು, ಭೀಮಃ ಏಕಃ— ಭೀಮನೊಬ್ಬನೇ, ವಿಜಾನಾತಿ – ತಿಳಿದಿರುತ್ತಾನೆ. ಅಪರಃ – ಬೇರೊಬ್ಬನು, ನಚ – ತಿಳಿದಿರಲಿಲ್ಲ ॥೧೭೭॥ ॥೧೭೮॥

ಪ್ರತಿಜ್ಞಾಂ ಭೀಮಸೇನಸ್ಯ ಬ್ರುವತಃ ಫಲ್ಗುನೇ ರಹಃ ॥
ದುರ್ಯೋಧನಸ್ತು ಶುಶ್ರಾವ ತಾಂಚಕರ್ಣಾಯ ಸೋಽಬ್ರವೀತ್ ॥೧೭೯॥

ಫಲ್ಗುನೇ— ಅರ್ಜುನನ ತಿಳಿಪಳಿಕೆಗೋಸ್ಕರ, ರಹಃ – ಏಕಾಂತದಲ್ಲಿ, ಬ್ರುವತಃ – ಹೇಳತಕ್ಕ ಭೀಮಸೇನಸ್ಯ— ಭೀಮಸೇನನ, ಪ್ರತಿಜ್ಞಾಂ – ಪ್ರತಿಜ್ಞೆಯನ್ನು, ದುರ್ಯೋಧನಸ್ತು— ದುರ್ಯೋಧನನಾದರೂ, ಶುಶ್ರಾವ – ಕೇಳಿದನು, ಸಃ– ಆ ದುರ್ಯೋಧನನು, ತಾಂ— ಆ ಭೀಮನ ಪ್ರತಿಜ್ಞೆಯನ್ನು, ಕರ್ಣಾಯ — ಕರ್ಣನಿಗೋಸ್ಕರ, ಅಬ್ರವೀತ್ ಹೇಳಿದನು. ॥೧೭೯॥

ಅತೂಬರೋಽಪಿತೇನಾಸೌ ತಸ್ಮಾತ್ತೂಬರ ಇತ್ಯಲಂ ॥
ಉಕ್ತಃಪ್ರಕೋಪನಾಯೈವ ತಸ್ಮಾದರ್ಜುನಮಬ್ರವೀತ್ ॥೧೮೦॥

ತೂಬರನೆಂದರೆ ಗಲ್ಲದಲ್ಲಿ ಅಲ್ಪಕೂದಲುಗಳುಳ್ಳವನು. "ತೂಬರೋಽಶ್ಮಶ್ರುಪುರುಷಃ" ಎಂದು ವಿಶ್ವ ಕೋಶ ವಿದೆ. ಅಸೌ – ಈ ಭೀಮನು ವ್ಯಕ್ತವಾದ ಶ್ಮಶ್ರುಗಳುಳ್ಳವನಾದರೂ ತೂಬರನಲ್ಲದಿದ್ದರೂ ತೇನ – ಆ ಕರ್ಣನಿಂದ, ತಸ್ಮಾತ್ — ಭೀಮನು ಪ್ರತಿಜ್ಞಾ ಮಾಡಿದ್ದರಿಂದ, ಅಲಂ – ಚೆನ್ನಾಗಿ, ಪ್ರಕೋಪನಾಯೈವ — ಭೀಮನಿಗೆ ಕೋಪವನ್ನುಂಟು ಮಾಡುವುದಕ್ಕಾಗಿಯೇ, ತೂಬರಇತಿ—ಶ್ಮಶ್ರು ಇಲ್ಲದಿರುವ ಪುರುಷನೆಂದು, ಉಕ್ತಃ—ಹೇಳಿಸಿಕೊಳ್ಳಲ್ಪಟ್ಟನು. ತಸ್ಮಾತ್— ತೂಬರನೆಂದು ಕರ್ಣನು ಹೇಳಿದ್ದರಿಂದ, ಅರ್ಜುನಂ ಅರ್ಜುನನನ್ನು ಕುರಿತು, ಅಬ್ರವೀತ್ — ಹೇಳಿದನು. ॥೧೮೦॥

ಜಾನಾಸಿಮುತ್ಪ್ರತಿಜ್ಞಾಂ ತ್ವಂ ತ್ವತ್ಪ್ರತಿಜ್ಞಾಮಹಂತಥಾ ॥
ಅತೋಹಂತವ್ಯತಾಂಪ್ರಾಪ್ತೋಮಮ ವೈಕರ್ತನೋಽತ್ರಹಿ ॥೧೮೧॥

ಪ್ರತಿಜ್ಞಾತೋ ವಧಶ್ಚಾಸ್ಯ ತ್ವಯಾಪಿಮಮದನುಜ್ಞಯಾ ॥
ಅತಸ್ತ್ವಯಾ ಮಯಾವಾಯಂ ಹಂತವ್ಯಃ ಸೂತನಂದನಃ ॥೧೮೨॥

ತ್ವಂ – ನೀನು, ಮತ್ಪ್ರತಿಜ್ಞಾಂ — ನನ್ನ ಪ್ರತಿಜ್ಞೆಯನ್ನು, ಜಾನಾಸಿ – ತಿಳಿದಿರುತ್ತಿ; ತಥಾ — ಹಾಗೆಯೇ, ತ್ವತ್ಪ್ರತಿಜ್ಞಾಂ – ನಿನ್ನ ಪ್ರತಿಜ್ಞೆಯನ್ನು, ಅಹಂ — ನಾನು, ಜಾನಾಮಿ – ತಿಳಿದಿರುತ್ತೇನೆ. ಅತಃ – ಆದ್ದರಿಂದ, ಅತ್ರ – ಈ ಪ್ರತಿ ಜ್ಞಾತ ವಿಷಯದಲ್ಲಿ, ವೈಕರ್ತನಃ— ಕರ್ಣನು, ಮಮ —ನನ್ನಿಂದ,ಹಂತವ್ಯತಾಂ – ಕೊಲ್ಲಿಸಿಕೊಳ್ಳಲು ಅರ್ಹತೆಯನ್ನು ಪ್ರಾಪ್ತೋಹಿ – ಹೊಂದಿರುವನಷ್ಟೆ, ಮದನುಜ್ಞಯಾ – ನನ್ನ ಅಪ್ಪಣೆಯಿಂದ, ತ್ವಯಾಪಿ – ನಿನ್ನಿಂದಲೂಕೂಡ, ಅಸ್ಯ– ಕರ್ಣನ, ವಧಃ — ನಾಶವು, ಪ್ರತಿಜ್ಞಾತಃ – ದ್ಯೂತದಸಮಯದಲ್ಲಿ ಪ್ರತಿಜ್ಞಾ ಮಾಡಲ್ಪಟ್ಟಿದೆ. ಅತಃ – ಆದ್ದರಿಂದ, ತ್ವಯಾ – ನಿನ್ನಿಂದ, ಮಯಾವಾ — ನನ್ನಿಂದಲಾಗಲೀ, ಅಯಂ ಸೂತನಂದನಃ— ಈ ಸೂತ ಪುತ್ರನಾದ ಕರ್ಣನು, ಹಂತವ್ಯಃ— ವಧಾರ್ಹನು, ॥೧೮೧॥ ॥೧೮೨॥

ವಿಶೇಷಾಂಶ : ನನ್ನ ಅನುಜ್ಞೆಯಿಂದ ದ್ಯೂತಕಾಲದಲ್ಲಿ ನೀನು ಕರ್ಣನನ್ನು ಕೊಲ್ಲುವೆನೆಂದು ಪ್ರತಿಜ್ಞೆಯನ್ನು ಮಾಡಿರುವಿ. ನನ್ನ ಅನುಜ್ಞೆಯಿಂದ ನೀನು ಕರ್ಣನಹನನ ಪ್ರತಿಜ್ಞೆಮಾಡಿದ್ದರಿಂದ ಸಾಕ್ಷಾತ್ತಾಗಿ ಕರ್ಣಹನನ ಪ್ರತಿಜ್ಞೆಯನ್ನು ನೀನು ಮಾಡಿದಂತಾಯಿತು. ಪರಂಪರಯಾ ನಾನು ಮಾಡಿದಂತಾಯಿತು. ನೀನಾಗಲೀ ನಾನಾಗಲೀ ಕರ್ಣನನ್ನು ಸಂಹರಿಸ ಬೇಕು.ತೂಬರನೆಂದು ಹೇಳಿದವನನ್ನು ಸಂಹರಿಸುವೆನು ಎಂಬ ನನ್ನ ಪ್ರತಿಜ್ಞೆಯು ಸಾಮಾನ್ಯರೂಪವಾದ್ದರಿಂದ,ನೀನು ಮಾಡಿದ ಪ್ರತಿಜ್ಞೆಯು ವಿಶೇಷರೂಪವಾದ್ದರಿಂದ ಸಾಮಾನ್ಯವು ವಿಶೇಷದಿಂದ ಬಾಧಿಸಲ್ಪಡುವದರಿಂದ, ನನ್ನ ಅನುಜ್ಞೆಯಿಂದ ನೀನು ಮಾಡಿದ ಪ್ರತಿಜ್ಞೆಯು ನನ್ನ ಪ್ರತಿಜ್ಞೆಯೇ ಆದ್ದರಿಂದ ಸಾಕ್ಷಾತ್ತಾಗಿ ಕರ್ಣನನ್ನು ಕೊಲ್ಲುವೆನೆಂಬ ನಿನ್ನ ಪ್ರತಿಜ್ಞೆಯ ರಕ್ಷಣೆ ಗಾಗಿ ನನ್ನ ಒಂದು ಅಂಶದಿಂದ ಆವಿಷ್ಟನಾದ ನೀನೇಕರ್ಣನನ್ನು ಸಂಹರಿಸಿದರೆ ನಮ್ಮಿಬ್ಬರ ಪ್ರತಿಜ್ಞೆಯೂ ಸಫಲವಾಗುವುದು.

ಇತ್ಯುಕ್ತೋವಾಸವಿಃ ಪ್ರಾಹ ಹಂತವ್ಯೋಽಯಂಮಯೈವಹಿ ॥
ತ್ವದೀಯೋಽಹಂ ಯತಸ್ತೇನ ಮತ್ಕೃತಂತ್ವತ್ಕೃತಂ ಭವೇತ್ ॥೧೮೩॥

ಇತ್ಯುಕ್ತಃ — ಈರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ, ವಾಸವಿಃ — ಅರ್ಜುನನು, ಅಯಂ — ಈ ಕರ್ಣನು, ಮಯೈವ— ನನ್ನಿಂದಲೇ, ಹಂತವ್ಯಃ — ಕೊಲ್ಲಲ್ಪಡಲುಯೋಗ್ಯನು. ಹಿ— ನಿಶ್ಚಯವು, ಯತಃ — ಯಾವಕಾರಣದಿಂದ, ಅಹಂ — ನಾನು, ತ್ವದೀಯಃ — ನಿನ್ನ ಶಿಷ್ಯನೋ ನಿನ್ನಅಂಶದಿಂದ ಆವಿಷ್ಟನೋ, ತೇನ — ಆ ಕಾರಣದಿಂದ, ಮತ್ಕೃತಂ — ನನ್ನಿಂದ ಮಾಡಲ್ಪಟ್ಟದ್ದು, ತ್ವತ್ಕೃತಂ — ನಿನ್ನಿಂದ ಮಾಡಲ್ಪಟ್ಟದ್ದೇ ಭವೇತ್ — ಆಗುವುದು. ॥೧೮೩॥

ನತ್ವತ್ಕೃತಂಮತ್ಕೃತಂಸ್ಯಾದ್ಗುರುರ್ಜುನ ಯತೋಭವಾನ್ ॥
ಅತೋಮಯೈವ ಹಂತವ್ಯ ಇತ್ಯುಕ್ತ್ವಾ ಕರ್ಣಮಬ್ರವೀತ್ ॥೧೮೪॥

~~ಯತಃ — ಯಾವಕಾರಣದಿಂದ, ಭವಾನ್ — ನೀನು, ಮಮ — ನನಗೆ, ಗುರುಃ— ಉಪದೇಶಕನೋ, ಅತಃ—~~
ಆದ್ದರಿಂದ, ತ್ವತ್ಕೃತಂ—ನಿನ್ನಿಂದ ಮಾಡಲ್ಪಟ್ಟದ್ದು, ಮತ್ಕೃತಂ — ನನ್ನಿಂದ ಮಾಡಲ್ಪಟ್ಟದ್ದು, ನಸ್ಯಾತ್ — ಆಗಲಾರದು ಅತಃ — ಆದ್ದರಿಂದ, ಮಯೈವ — ನನ್ನಿಂದಲೇ, ಹಂತವ್ಯಃ — ಕರ್ಣನು ಕೊಲ್ಲಲು ಯೋಗ್ಯನು, ಇತಿ — ಎಂಬುದಾಗಿ ಉಕ್ತ್ವಾ—ಹೇಳಿ, ಕರ್ಣಂ — ಕರ್ಣನನ್ನು, ಕುರಿತು ಅಬ್ರವೀತ್ — ಹೇಳಿದನು ॥೧೮೪॥

ರೂಕ್ಷಾವಾಚಃ ಶ್ರಾವಿತೋಽಯಂ ಭೀಮಃ ಕೃಷ್ಣಸ್ಯಶೃಣ್ವತಃ ॥
ಯಚ್ಚಾಭಿಮನ್ಯುರ್ಯುಷ್ಮಾಭಿರೇಕಃ ಸಂಭೂಯ ಪಾತಿತಃ ॥೧೮೫॥

ಅತಸ್ತ್ವಾಂನಿಹನಿಷ್ಯಾಮಿ ತ್ವತ್ಪುತ್ರಂಚ ತವಾಗ್ರತಃ ॥
ಇತ್ಯುಕ್ತೋನ್ಯಂ ರಥಂಪ್ರಾಪ್ಯ ಕರ್ಣಆವೀಜ್ಜಯದ್ರಥಂ ॥೧೮೬॥

ಕೃಷ್ಣಸ್ಯಶೃಣ್ವತಃ ಸತಃ—ಕೃಷ್ಣನು ಕೇಳುತ್ತಿರುವಾಗಲೇ,ಕೃಷ್ಣನನ್ನು ಲಕ್ಷವಾಡದೇ,ರೂಕ್ಷಾವಾಚಃ— ಕ್ರೂರವಾದ ಮಾತುಗಳನ್ನು, ಅಯಂಭೀಮಃ— ಈ ಭೀಮನು, ಶ್ರಾವಿತಃ— ಕೇಳಿಸಲ್ಪಟ್ಟನು. ಯತ್ — ಯಾವಕಾರಣದಿಂದ, ಏಕಃ — ಒಬ್ಬನಾದ, ಅಭಿಮನ್ಯುಃ— ಅಭಿಮನ್ಯುವು, ಸಂಭೂಯ — ಮಿಲಿತರಾಗಿ, ಯುಷ್ಮಾಭಿಃ— ನಿಮ್ಮಿಂದ, ಪಾತಿತಃ — ಕೊಲ್ಲಲ್ಪಟ್ಟನೋ, ಅತಃ— ಆದ್ದರಿಂದ, ತ್ವಾಂ — ನಿನ್ನನ್ನು, ನಿಹನಿಷ್ಯಾಮಿ—ಕೊಲ್ಲುವೆನು. ತ್ವತ್ಪುತ್ರಂಚ—ನಿನ್ನ ಮಗನನ್ನೂ ಕೂಡ, ತವಾಗ್ರತಃ — ನಿನ್ನ ಮುಂಭಾಗದಲ್ಲಿಯೇ ಕೊಲ್ಲುವೆನು, ಎಂದು ಹೇಳಿದನು; ಇತ್ಯುಕ್ತಃ — ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ, ಕರ್ಣಃ—ಕರ್ಣನು, ಅನ್ಯಂರಥಂ — ಇನ್ನೊಂದು ರಥವನ್ನು, ಪ್ರಾಪ್ಯ — ಹೊಂದಿ, ಜಯದ್ರಥಂ — ಸೈಂಧವನನ್ನು ಆವೀತ್— ರಕ್ಷಿಸಿದನು. ॥೧೮೫॥ ॥೧೮೬॥

ದ್ರೌಣಿಕರ್ಣಾಭಿಗುಪ್ತಂತಂ ನಾಶಕದ್ಧಂತುಮರ್ಜುನಃ ॥
ತತ್ರವೇಗಂಪರಂಚಕ್ರೇದ್ರೌಣಿಃ ಪಾರ್ಥನಿವಾರಣೇ ॥೧೪೭॥

ನಚೈವಮುಶಕತ್ತರ್ತುಂ ಯತ್ನವಾನಪಿ ಫಲ್ಗುನಃ ॥
ತಯೋರಾಸೀಚ್ಚಿರಂ ಯುದ್ಧಂ ಚಿತ್ರಂಲಘುಚಸುಷ್ಠುಚ ॥೧೪೮॥

ಅರ್ಜುನಃ- ಅರ್ಜುನನು, ದ್ರೌಣಿಕರ್ಣಾಭಿಗುಪ್ತಂ— ಅಶ್ವತ್ಥಾಮ, ಕರ್ಣರಿಂದ ರಕ್ಷಿಸಲ್ಪಟ್ಟ,ತಂ- ಆ ಜಯದ್ರಥನನ್ನು, ಹಂತುಂ ಕೊಲ್ಲಲು, ನಾಶಕತ್ — ಸಮರ್ಥನಾಗಲಿಲ್ಲ. ತತ್ರ- ಅವರ ಮಧ್ಯದಲ್ಲಿ, ದ್ರೌಣಿಃ – ಅಶ್ವತ್ಥಾಮನು, ಪಾರ್ಥನಿವಾರಣೇ- ಅರ್ಜುನನನ್ನು ತಡೆಯುವುದರಲ್ಲಿ, ಪರಂವೇಗಂ- ಮಹಾಚಮತ್ಕಾರವನ್ನು, ಚಕ್ರೇ — ಮಾಡಿದನು. ಫಲ್ಗುನಃ – ಅರ್ಜುನನು, ಯತ್ನವಾನಪಿ- ಪ್ರಯತ್ನವುಳ್ಳವನಾದರೂ, ಏನಂ – ಅಶ್ವತ್ಥಾಮನನ್ನು, ತರ್ತುಂ- ಅತಿಕ್ರಮಿಸಿ ಹೋಗಲು, ನಾಶಕತ್ – ಸಮರ್ಥನಾಗಲಿಲ್ಲ. ತಯೋಃ— ಆ ಅರ್ಜುನ ಮತ್ತು ಅಶ್ವತ್ಥಾಮರಿಗೆ, ಚಿರಂ —ಬಹುಕಾಲದ ವರೆಗೆ, ಚಿತ್ರಂ— ಆಶ್ಚರ್ಯಕರವಾದ, ಲಘು – ಹಸ್ತಲಾಘವವುಳ್ಳ, ಯುದ್ಧಂ — ಯುದ್ಧವು, ಸುಷ್ಠು – ಚೆನ್ನಾಗಿ, ಆಸೀತ್ — ಆಯಿತು. ॥೧೪೭॥ ॥೧೪೮॥

ತದ್ದೃಷ್ಟ್ವಾಭಗವಾನ್ಕೃಷ್ಣೋ ಲೋಹಿತಾಯತಿ ಭಾಸ್ಕರೇ ॥
ಅಜಿತೇದ್ರೋಣತನಯೇ ತ್ವಹತೇಚಜಯದ್ರಥೇ ॥
ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜತಮಮೂರ್ಜಿತಂ ॥೧೪೯॥

ಭಗವಾನ್— ಷಡ್ಗುಣೈಶ್ವರ್ಯಸಂಪನ್ನನಾದ, ಕೃಷ್ಣಃ— ಶ್ರೀಕೃಷ್ಣನು, ತತ್ – ಆ ಯುದ್ಧವನ್ನು ದೃಷ್ಟ್ವಾವ – ನೋಡಿ, ಭಾಸ್ಕರೇ- ಸೂರ್ಯನು, ಲೋಹಿತಾಯತಿಸತಿ – ಕೆಂಪುವರ್ಣವುಳ್ಳವನಾಗುತ್ತಿರಲು, ದ್ರೋಣತನಯೇ – ದ್ರೋಣಪುತ್ರ ಅಶ್ವತ್ಥಾಮನು, ಅಜಿತೇಸತಿ – ಪರಾಜಿತನಾಗದೇ ಇರುತ್ತಿರಲು, ಜಯದ್ರಥೇ— ಸೈಂಧವನು, ಅಹತೇಸತಿ– ಕೊಲ್ಲಲ್ಪಡದಿರುತ್ತಿರಲು, ಅರ್ಜುನಸ್ಯ – ಅರ್ಜುನನಿಗೆ, ಜಯಾಕಾಂಕ್ಷೀ – ಜಯವನ್ನು ಇಚ್ಛಿಸತಕ್ಕ ಶ್ರೀಕೃಷ್ಣನು, ಊರ್ಜಿತಂ – ಉತ್ಕೃಷ್ಟವಾದ, ತಮಃ – ಕತ್ತಲೆಯನ್ನು, ಸಸರ್ಜ – ಸೃಜಿಸಿದನು. ॥೧೪೯॥

ತಮೋವ್ಯಾಪ್ತೇಗಗನೇ ಸೂರ್ಯಮುಂಸ್ತಂಗತಂ ಮತ್ವಾದ್ರೋಣಪೂರ್ವಾಃಸಮುಸ್ಥಾಃ ॥
ವಿಶಶ್ರಮುಃಸೈಂಧವಶ್ಚಾರ್ಜುನಸ್ಯ ಹತಪ್ರತಿಜ್ಞಸ್ಯ ಮುಖಂ ಸಮೈಕ್ಷತ ॥೧೫೦॥

ಗಗನೇ— ಆಕಾಶವು, ತಮೋವ್ಯಾಪ್ತೇಸತಿ – ಕತ್ತಲೆಯಿಂದ ತುಂಬುತ್ತಿರಲು, ಸೂರ್ಯಂ – ಸೂರ್ಯನನ್ನು ಅಸ್ತಂಗತಂ – ಅಸ್ತಮಾನವನ್ನು ಹೊಂದಿದವನನ್ನಾಗಿ,ಮತ್ವಾ—ತಿಳಿದು,ದ್ರೋಣಪೂರ್ವಾಃ ಸಮುಸ್ಥಾಃ–ದ್ರೋಣಾಚಾರ್ಯರೇ ಮೊದಲಾದವರೆಲ್ಲರೂ— ವಿಶಶ್ರಮುಃ – ಯುದ್ಧ ಬಿಟ್ಟು ವಿಶ್ರಾಂತಿಯನ್ನು ಹೊಂದಿದರು. ಸೈಂಧವಶ್ಚ – ಜಯದ್ರಥನೂ ಕೂಡ, ಹತಪ್ರತಿಜ್ಞಸ್ಯ – ಭಗ್ನವಾದ ಪ್ರತಿಜ್ಞೆಯುಳ್ಳವನಂತೆ ಕಾಣತಕ್ಕ, ಅರ್ಜುನಸ್ಯ — ಅರ್ಜುನನ, ಮುಖಂ – ಮೋರೆಯನ್ನು ಸಮೈಕ್ಷತ –ನೋಡಿದನು. ॥೧೯೦॥

ತದಾಹರೇರಾಜ್ಞಯಾಶಕ್ರಸೂನುಶ್ಚಕರ್ತಬಾಣೇನಜಯದ್ರಥಸ್ಯ ॥
ವಹ್ನಿಂವಿವಕ್ಷನ್ನಿವ ದರ್ಶಿತಃಶಿರಃತದಾವಚಃ ಪ್ರಾಹಜನಾರ್ದನಸ್ತಂ ॥೧೯೧॥

ಮಹ್ನಂ – ಬೆಂಕಿಯನ್ನು, ವಿವಕ್ಷನ್ನಿವ — ಪ್ರವೇಶಿಸಲು ಇಚ್ಛಿಸುವವನಂತೆ, ದರ್ಶಿತಃ— ಇತರರಿಂದ ಕಾಣಿಸಿ ಕೊಳ್ಳಲ್ಪಟ್ಟ, ಶಕ್ರಸೂನುಃ— ಇಂದ್ರನ ಮಗನಾದ ಅರ್ಜುನನು, ತದಾ – ಆಗ, ಹರೇಃ – ಶ್ರೀಕೃಷ್ಣನ, ಆಜ್ಞಯಾ – ಅಪ್ಪಣೆಯಿಂದ, ಬಾಣೇನ — ಶರದಿಂದ, ಜಯದ್ರಥಸ್ಯ – ಸೈಂಧವನ, ಶಿರಃ – ತಲೆಯನ್ನು. ಚಕರ್ತ – ಕತ್ತರಿಸಿದನು. ತದಾ – ಆಗ, ಜನಾರ್ದನಃ— ಶ್ರೀಕೃಷ್ಣನು, ತಂ – ಆ ಅರ್ಜುನನನ್ನು ಕುರಿತು, ವಚಃ – ಮಾತನ್ನು, ಪ್ರಾಹ– ಹೇಳಿದನು. ॥೧೯೧॥

ನೈತಚ್ಛಿರಃ ಪಾತಯಭೂತಲೇ ತ್ವಮಿತೀರಿತಃ ಪಾಶುಪತಾಸ್ತ್ರತೇಜಸಾ ॥
ದಧಾರಬಾಣೈರನುಪುಂಖಪುಂಖೈಃ ಪುನಸ್ತಮೂಚೇಗರುಡಧ್ವಜೋವಚಃ ॥೧೯೨॥

ಏತಚ್ಛಿರಃ— ಈ ತಂಡಾದ ಜಯದ್ರಥನ ಶಿರಸ್ಸನ್ನು, ಭೂತಲೇ – ಭೂಮಿಯಲ್ಲಿ, ತ್ವಂ – ನೀನು, ನ ಪಾತಯ— ಹಾಕಬೇಡ. ಇತಿ – ಈ ರೀತಿಯಾಗಿ, ಈರಿತಃ – ಹೇಳಿಸಿಕೊಳ್ಳಲ್ಪಟ್ಟ ಅರ್ಜುನನು, ಪಾಶುಪತಾಸ್ತ್ರತೇಜಸಾ— ಪಾಶುಪತಾಸ್ತ್ರದ ಸಾಮರ್ಥ್ಯದಿಂದ, ಅನುಪುಂಖಿಪುಂಖೈಃ – ಬಾಣದ ಬಂಡವನ್ನು ಅನುಸರಿಸಿ ಇರತಕ್ಕ ಬಾಣದ ಮೂಲಗಳುಳ್ಳ, ಬಾಣೈಃ – ಬಾಣಗಳಿಂದ, ದಧಾರ – ಧರಿಸಿದನು. ಗುರುಡಧ್ವಜಃ – ಗರುಡನು ಧ್ವಜನಾಗಿಉಳ್ಳ ಶ್ರೀಕೃಷ್ಣನು, ಪುನಃ – ಮತ್ತು, ತಂ – ಆ ಅರ್ಜುನನನ್ನು ಕುರಿತು, ವಚಃ – ಮಾತನ್ನು, ಊಚೇ – ಹೇಳಿದನು. ॥೧೯೨॥

ಭಾ. ಅ. ೧೭೩—೧೯೨ ಧನುರ್ವಿದ್ಯೆಯನ್ನು ಲೋಕದಲ್ಲಿ ಪ್ರಥಮೋಪದೇಶ ಮಾಡಿದಂಥ ಶ್ರೀಪರಶುರಾಮದೇವರು "ಶಸ್ತ್ರಾಸ್ತ್ರ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ತಮ್ಮ ಗುರುಗಳ ಸಮೀಪದಲ್ಲಿ ಗುಪ್ತವಾಗಿ ಒಂದು ಪ್ರತಿಜ್ಞೆಯನ್ನು ಮಾಡಬೇಕು. ಅದನ್ನು ಹಿಂದೆ ಯಾರೂ ಮಾಡಿರಬಾರದು; ಧರ್ಮಕ್ಕೆ ವಿರುದ್ಧವಾಗಿರಬಾರದು. ಲೋಕಕ್ಕೆ ಉಪದ್ರವಕಾರಿಯಾಗಿರಬಾರದು." ಎಂದು ನಿಯಮವನ್ನು ಮಾಡಿದ್ದಾರೆ. ಆ ಪ್ರಕಾರ ಶ್ರೀ ಭೀಮಸೇನದೇವರು ತನ್ನನ್ನು ತೂಬರ (ಗಡ್ಡ ಮೀಸೆ ಇಲ್ಲದವ) ಎಂದು ಯಾವನು ಕರೆಯುತ್ತಾನೋ ಅವನನ್ನು ನಾನು ಸಂಹರಿಸುತ್ತೇನೆ ಎಂದು ಪ್ರತಿಜ್ಞೆಯನ್ನು ಏಕಾಂತದಲ್ಲಿ ಮಾಡಿದ್ದರು. ಇದು ಹಿಂದೆ ಯಾರಿಂದಲೂ ಮಾಡಲ್ಪಟ್ಟಿಲ್ಲ; ಧರ್ಮ ವಿರುದ್ಧವಲ್ಲ; ಲೋಕೋಪದ್ರವಕಾರಿಯೂ ಅಲ್ಲ. ~~ಏಕೆಂದರೆ ಸ್ಪಷ್ಟವಾದ ದಟ್ಟವಾದ ಮೀಸೆಯುಳ್ಳ ನನ್ನನ್ನು ಯಾರೂ ಹಾಗೆ ಹೇಳಲಾರರು.~~ ಹೀಗಾಗಿ ಯಾರಿಗೂ ಉಪದ್ರವ ಪ್ರಶ್ನೆಯೇ ಇಲ್ಲ, ಎಂದು ತಿಳಿದು ಹಾಗೆ ಪ್ರತಿಜ್ಞೆ ಮಾಡಿದ್ದರು. ಅರ್ಜುನನ ಮೇಲೆ ಪ್ರೀತಿಯಿಂದ ಈ ಪ್ರತಿಜ್ಞೆಯನ್ನು ಅವನಿಗೆ ತಿಳಿಸಿದ್ದರು. ಇದರಂತೆ ಅರ್ಜುನನೂ 'ಗಾಂಡೀವ ಧನುಸ್ಸನ್ನು ಕೊಡು ಎಂದು ಯಾರು ಹೇಳುವರೋ ಅವರನ್ನು ಸಂಹರಿಸುವೆನು ಎಂದು ಪ್ರತಿಜ್ಞೆಯನ್ನು ಮಾಡಿದ್ದನು. ಈ ಪ್ರತಿಜ್ಞೆಯು ಶ್ರೀ ಭೀಮರಿಗೆ ಮಾತ್ರ ತಿಳಿದಿತ್ತು. ಅಭ್ಯಾಸ ಕಾಲದಲ್ಲಿ ಗಾಂಡೀವ ಧನುಸ್ಸಿಲ್ಲದಿದ್ದರೂ ಮುಂದೆ ತನಗೆ ಬರುವದು ಎಂದು ನಾರದರಿಂದ ತಿಳಿದದ್ದರಿಂದ ಹಾಗೆ ಪ್ರತಿಜ್ಞೆ ಮಾಡಿದ್ದನು. ಶ್ರೀ ಭೀಮರು ತಮ್ಮ ಪ್ರತಿಜ್ಞೆಯನ್ನು ಅರ್ಜುನನ ಹತ್ತಿರ ಹೇಳುತ್ತಿರುವಾಗ, ದುರ್ಯೋಧನನು ಕೇಳಿ ಕೊಂಡಿದ್ದನು. ಅದನ್ನು ಕರ್ಣನಿಗೆ ಹೇಳಿದ್ದನು. ಹೀಗಾಗಿ ಕರ್ಣನು ಶ್ರೀ ಭೀಮರೊಂದಿಗಿನ ಯುದ್ಧದಲ್ಲಿ ಶ್ರೀಭೀಮರನ್ನು ಸಿಟ್ಟಿಗೆಬ್ಬಿಸಬೇಕು ಎಂದು 'ತೂಬರ' ಎಂದು ಅವರನ್ನು ನಿಂದಿಸಿದನು. ಆಗ ಶ್ರೀಭೀಮರು ಅರ್ಜುನನಿಗೆ 'ನನ್ನ ಪ್ರತಿಜ್ಞೆಯನ್ನು ತಿಳಿದಿರುತ್ತೀದಿ, ನಿನ್ನ ಕರ್ಣಸಂಹಾರ ಪ್ರತಿಜ್ಞೆಯನ್ನೂ ನಾನು ತಿಳಿದಿರುವೆ. ಆದರೆ ಈಗ ನಾನು ಅವನನ್ನು ಸಂಹರಿಸುವ ಪ್ರಸಂಗ ಬಂದಿದೆ. ನೀನು ಸಂಹರಿಸಬೇಕು; ನಾನಾಗಲೀ ಇವನನ್ನು ಸಂಹರಿಸಬೇಕು.' ಎಂದು ಹೇಳಿದರು; ಆಗ ಅರ್ಜುನನು 'ನಾನು ನಿನ್ನ ಶಿಷ್ಯನಾದದ್ದರಿಂದ ನಾನು ಮಾಡಿದ ಕಾರ್ಯನಿನ್ನಿಂದಲೂ ಆದಂತೆಯೇ; ನೀನು ಮಾಡಿದ ಕಾರ್ಯ ನನ್ನಿಂದಾದಂತಾಗುವದಿಲ್ಲ. ಆದ್ದರಿಂದ ನಾನೇ ಸಂಹರಿಸಬೇಕು. ಎಂದು ಹೇಳಿದನು; ನಂತರ 'ನೀನು ಶ್ರೀಕೃಷ್ಣನ ಎದುರಿನಲ್ಲಿ ನನ್ನ ಅಣ್ಣ ಭೀಮರಿಗೆ ನಿಂದಾಮಾತನ್ನು ಆಡಿರುವಿ. ನನ್ನ ಮಗ ಅಭಿಮನ್ಯುವನ್ನು ಎಲ್ಲರೂ ಒಟ್ಟಾಗಿ ಕೊಂದಿರುವಿರಿ. ಆದ್ದರಿಂದ ನಿನ್ನನ್ನು ಸಂಹರಿಸುವೆನು ಹಾಗು ನಿನ್ನ ಎದುರೇ ನಿನ್ನ ಮಗನನ್ನು ಸಂಹರಿಸುವೆನು' ಎಂದು ಕರ್ಣನಿಗೆ ಹೇಳಿದನು. ಆಗ ಕರ್ಣನು ಇನ್ನೊಂದು ರಥವನ್ನು ಏರಿಕೊಂಡು ಜಯದ್ರಥನನ್ನು ರಕ್ಷಿಸುತ್ತಿದ್ದನು. ಅಶ್ವತ್ಥಾಮರೂ ರಕ್ಷಿಸುತ್ತಿದ್ದರು. ಇವರಿಬ್ಬರಿಂದ ರಕ್ಷಿತನಾದ ಜಯದ್ರಥನನ್ನು ಸಂಹರಿಸಲು ಅರ್ಜುನನು ಸಮರ್ಥನಾಗಿದ್ದಿಲ್ಲ, ಪ್ರಯತ್ನ ನಡದೇ ಇತ್ತು. ಆಗ ಅಶ್ವತ್ಥಾಮರು ಅರ್ಜುನನನ್ನು ತಡೆಯಲು ಬಹು ಪ್ರಯತ್ನ ನಡಿಸಿದರು. ಅವರನ್ನು ಮೀರಿ ಹೋಗಲು ಪ್ರಯತ್ನ ಮಾಡಿದರೂ ಕೂಡ ಅರ್ಜುನನು ಶಕ್ತನಾಗಲಿಲ್ಲ. ಅವರಿಬ್ಬರಿಗೂ ಬಹು ಘೋರವಾದ ಯುದ್ಧ ಬಹು ಸಮಯ

ನಡಿಯಿತು. ಸೂರ್ಯ ಅಸ್ತನಾಗುವ ಸಮಯ ಬಂದಿದೆ. ಅಶ್ವತ್ಥಾಮನು ಸೋತಿಲ್ಲ; ಜಯದ್ರಥ ಸತ್ತಿಲ್ಲ. ಅದನ್ನು ಕಂಡ ಶ್ರೀಕೃಷ್ಣನು ಅರ್ಜುನನಿಗೆ ಜಯವನ್ನು ಉಂಟುಮಾಡುವ ಅಪೇಕ್ಷೆಯುಳ್ಳವನಾಗಿ ಬಹು ತಮಸ್ಸನ್ನು ಸೃಷ್ಟಿಸಿದನು. ಸೂರ್ಯಾಸ್ತ ವಾಯಿತು ಎಂದು ಅಶ್ವತ್ಥಾಮಾದಿಗಳು ಯುದ್ಧದಿಂದ ನಿವೃತ್ತರಾದರು. ಜಯದ್ರಥನು ಅರ್ಜುನನ ಪ್ರತಿಜ್ಞೆ ಭಂಗವಾಯಿತು ಎಂದು ಛೇಡಿಸುವಂತೆ ಎದುರು ಬಂದು ಅವನ ಮುಖವನ್ನು ನೋಡಿದನು. ಆಗ ಅರ್ಜುನನು ಪ್ರತಿಜ್ಞೆಯಂತೆ ಅಗ್ನಿ ಪ್ರವೇಶ ಮಾಡಲು ಸಿದ್ಧನಾಗಿದ್ದನು. ಆಗ ಶ್ರೀಕೃಷ್ಣನು ಜಯದ್ರಥನ ಶಿರಶ್ಛೇದ ಮಾಡಲು ಆಜ್ಞಾಪಿಸಿದನು. ಆಗ ಶ್ರೀಕೃಷ್ಣನ ಅಪ್ಪಣೆಯಂತೆ ಅರ್ಜುನನು ಜಯದ್ರಥನ ಶಿರಸ್ಸನ್ನು ಬಾಣದಿಂದ ಛೇದಿಸಿದನು.

ಇದಂಪಿತುಸ್ತಸ್ಯಕರೇನಿಪಾತ್ಯತಾಂವರೋಽಸ್ಯದತ್ತೋಹಿ ಪುರಾಽಮುನಾಽಯಂ ॥
ಶಿರೋನಿಕೃತ್ತಂಭುವಿಪಾತಯೇದ್ಯಃ ತವಾಸ್ಯಭೂಯಾಚ್ಚ ಶಿರಃಸಹಸ್ರಧಾ ॥೧೯೩॥

ಇದಂ— ಈ ಜಯದ್ರಥನ ತಲೆಯು, ತಸ್ಯ—ಆ ಸೈಂಧವನ, ಪಿತುಃ–ತಂದೆಯಾದ ವೃದ್ಧಕ್ಷತ್ರನ, ಕರೇ- ತೊಡೆಯು ಮೇಲಿರುವಕೈಯಲ್ಲಿ, ನಿಪಾತ್ಯತಾಂ ಹಾಕಲ್ಪಡಲಿ, ಅಮುನಾ—ಈ ಜಯದ್ರಥನ ತಂದೆಯಿಂದ, ಅಸ್ಯ — ಈ ಜಯದ್ರಥನಿಗೆ ಅಯಂವರಃ–ಈ ವರವು, ದತ್ತೋಹಿ– ಕೊಡಲ್ಪಟ್ಟಿದೆಯಷ್ಟೆ, ವರವನ್ನು ವಿವರಿಸಂತ್ತಾರೆ. ತವ–ನಿನ್ನ ನಿಕೃತ್ತಂ ಕತ್ತರಿಸಲಟ್ಟ, ಶಿರಃ — ತಲೆಯನ್ನು, ಯಃ – ಯಾವನು, ಭುವಿ – ಭೂಮಿಯಲ್ಲಿ, ಪಾತಯೇತ್ —, ಹಾಕುವನೋ, ಅಸ್ಯ–ಹಾಕುವವನ, ಶಿರಃ – ತಲೆಯು, ಸಹಸ್ರಧಾಭೂಯಾತ್— ಸಾವಿರ ತುಂಡಾಗಲಿ, ॥೧೯೩॥

ಇತಿಸ್ಮವಧ್ಯಃಸ ಪಿತಾಪಿತೇನೇತ್ಯುದೀರಿತೇತಸ್ಯ ಸಂಧ್ಯಾಕ್ರಿಯಸ್ಯ ॥
ಅಂಕೇವ್ಯಧಾತ್ತಚ್ಛಿರ ಆಶುವಾಸವಿಃಸಸಂಭ್ರಮಾತ್ತದ್ಭುವಿಚನ್ಯಪಾತಯತ್ ॥೧೯೪॥

ಯತ್ — ಯಾವಕಾರಣದಿಂದ, ಇತಿ — ಈ ರೀತಿಯಾಗಿ ವರವುಕೊಡಲ್ಪಟ್ಟದ್ದೋ, ತೇನ — ಆ ಕಾರಣದಿಂದ, ಜಯದ್ರಥನಂತೆಯೇ ಅಸ್ಯಪಿತಾಪಿ — ಈ ಜಯದ್ರಥನ ತಂದೆಯೂ ಕೂಡ.ವಧ್ಯಃ – ವಧಾರ್ಹನು.ಇತಿ— ಈರೀತಿಯಾಗಿ, ತೇನ ಉದೀರಿತೇ ಸತಿ – ಕೃಷ್ಣನಿಂದ ಹೇಳಲ್ಪಡುತ್ತಿರಲು, ವಾಸವಿಃ – ಅರ್ಜುನನು, ಸಂಧ್ಯಾಕ್ರಿಯಸ್ಯ — ಸಂಧ್ಯಾವಂದನ ಕರ್ಮವುಳ್ಳ, ತಸ್ಯ —ಆ ಸೈಂಧವನ ತಂದೆಯ, ಅಂಕೇ – ತೊಡೆಯಲ್ಲಿರುವ ಕೈಯಲ್ಲಿ, ತಚ್ಛಿರಃ —ಆ ಜಯದ್ರಥನ ತಲೆಯನ್ನು, ವ್ಯಧಾತ್ – ಇಟ್ಟನು, ಸಃ– ಅವನ ತಂದೆಯು, ಸಂಭ್ರಮಾತ್ — ಹೆದರಿಕೆಯಿಂದ, ತತ್ – ಆ ತಲೆಯನ್ನು, ಭುವಿ – ಭೂಮಿಯಲ್ಲಿ, ನ್ಯಪಾತಯತ್ – ಹಾಕಿದನು. ॥೧೯೪॥

ತತೋಭವತ್ತಸ್ಯಶಿರಃ ಸಹಸ್ರಧಾ ಹರಿಶ್ಚಚಕ್ರೇತಮಸೋ ಲಯಂಪುನಃ ॥
ತದೈವ ಸೂರ್ಯೇ ಸಕಲೈಶ್ಚದೃಷ್ಟೇಹಾಹೇತಿವಾದಃ ಸುಮಹಾನಥಾಸೀತ್ ॥೧೯೫॥

ತತಃ – ಶಿರಸ್ಸನ್ನು ಭೂಮಿಗೆ ಹಾಕಿದ್ದರಿಂದ, ತಸ್ಯ— ಆ ಜಯದ್ರಥನ ತಂದೆಯು, ಶಿರಃ – ತಲೆಯು, ಸಹಸ್ರಧಾ ಅಭವತ್ — ಸಾವಿರ ಚೂರಾಯಿತು. ಪುನಃ – ಅನಂತರ, ಹರಿಃ – ಶ್ರೀಕೃಷ್ಣನು, ತಮಸಃ – ಕತ್ತಲೆಯ, ಲಯಂ — ನಾಶವನ್ನು, ಚಕ್ರೇ — ಮಾಡಿದನು. ತದೈವ — ಆಗಲೇ ಸಕಲೈಃ – ಎಲ್ಲರಿಂದಲೂ, ಸೂರ್ಯೇ — ರವಿಯು ದೃಷ್ಟೇಸತಿ – ಕಾಣಲ್ಪಡುತ್ತಿರಲು, ಅಥ— ಅನಂತರ, ಸುಮಹಾನ್– ಅತಿಮಹತ್ತಾದ, ಹಾಹೇತಿವಾದಃ– ಹಾಹಾಕಾರ ಧ್ವನಿಯು, ಅಭವತ್— ಆಯಿತು. ॥೧೯೫॥

ಭೀಮಸ್ತದಾಶಲ್ಯದುರ್ಯೋಧನಾದೀನ್ ಕೃಪಂಚಜಿತ್ವಾವ್ಯನದದತ್ಸುಭೈರವಂ ॥
ಕುರ್ವನ್ ಸಹಾಯಂ ಫಲ್ಗುನಸ್ಯೈವ ತುಷ್ಟೋಬಭೂವಶೈನೇಯಯುತೋಹತೇರಿಷು ॥೧೯೬॥

ತದಾ— ಆಗ, ಭೀಮಃ – ಭೀಮನು, ಶಲ್ಯದುರ್ಯೋಧನಾದೀನ್ – ಶಲ್ಯ, ದುರ್ಯೋಧನನೇ ಮೊದಲಾಗಿ ಉಳ್ಳವರನ್ನು, ಕೃಪಂ ಚ – ಕೃಪನನ್ನೂ ಕೂಡ, ಜಿತ್ವಾ — ಗೆದ್ದು, ಸುಭೈರವಂ–– ಅತಿಂಭಯಂಕರವಾದದ್ದು ಹೇಗೋ ಹಾಗೆ, ವ್ಯನದತ್ – ಸಿಂಹನಾದವನ್ನು ಮಾಡಿದನು. ರಿಪೌ –ಶತ್ರುವಾದ ಜಯದ್ರಥನು, ಹತೇಸತಿ – ಸಾಯುತ್ತಿರಲು ಫಲ್ಗುನಸ್ಯೈವ — ಅರ್ಜುನನಿಗೇನೇ, ಸಹಾಯಂ — ಸಹಾಯವನ್ನು, ಕುರ್ವನ್ – ಮಾಡತಕ್ಕ, ಶೈನೇಯಯುತಃ – ಸಾತ್ಯಕಿಯಂದ ಕೂಡಿದ ಭೀಮನು, ತುಷ್ಟೋಬಭೂವ – ಸಂತುಷ್ಟನಾದನು. ॥೧೯೬॥

ಅಪೂರಯತ್ಪಾಂಚಜನ್ಯಂಚ ಕೃಷ್ಣೋಮುದಾತದಾದೇವದತ್ತಂಚಪಾರ್ಥಃ ॥
ಭೀಮಸ್ಯನಾದಂ ಸಹಪಾಂಚಜನ್ಯಘೋಷಂ ಶ್ರುತ್ವಾನಿಹತಂ ಸಿಂಧುರಾಜಂ ॥
ಜ್ಞಾತ್ವಾರಾಜಾಧರ್ಮಸುತೋಮುಮೋದ ದುರ್ಯೋಧನಶ್ಚಾಸ ಸುದುಃಖಿತಸ್ತದಾ ॥೧೯೭॥

ತದಾ – ಆಗ, ಕೃಷ್ಣಃ– ಶ್ರೀಕೃಷ್ಣನು, ಮುದಾ–ಸಂತೋಷದಿಂದ, ಪಾಂಚಜನ್ಯಂಚ- ಪಾಂಚಜನ್ಯವೆಂಬ ಶಂಖವನ್ನೂ, ಪಾರ್ಥಃ – ಅರ್ಜುನನು, ದೇವದತ್ತಂಚ–ದೇವದತ್ತವೆಂಬ ಶಂಖವನ್ನೂ, ಅಪೂರಯತ್ – ಊದಿದನು. ರಾಜಾ – ರಾಜನಾದ, ಧರ್ಮಸುತಃ – ಯುಧಿಷ್ಠಿರನು, ಸಹಪಾಂಚಜನ್ಯಘೋಷಂ — ಪಾಂಚಜನ್ಯಶಂಖದ ಧ್ವನಿಯಿಂದ ಸಹಿತವಾದ, ಭೀಮಸ್ಯ– ನಾದಂ – ಭೀಮನಸಿಂಹನಾದವನ್ನು, ಶ್ರುತ್ವಾ–ಕೇಳಿ, ಸಿಂಧುರಾಜಂ – ಸೈಂಧವನನ್ನು, ನಿಹತಂ – ಸತ್ತವನನ್ನಾಗಿ, ಜ್ಞಾತ್ವಾ– ತಿಳಿದು, ಮುಮೋದ – ಸಂತೋಷಗೊಂಡನು. ತದಾ –ಆಗ ದುರ್ಯೋಧನಃ – ದುರ್ಯೋಧನನು, ಸುದುಃಖಿತಃ – ಅತ್ಯಂತ ದುಃಖವುಳ್ಳವನು ಆಸ— ಆದನು ॥೧೯೭॥

ತತೋದ್ರೌಣಿರ್ಮುಖಾಂಸೇನಾಂ ಸರ್ವಾಂಭೀಮೋಽಭ್ಯವರ್ತತ ॥
ಪಾರ್ಥಃಕರ್ಣಮುಖಾಂ ಶಿಷ್ಟಾಂತತೋಽಭಜ್ಯತ ತದ್ಬಲಂ ॥೧೯೮॥

ತತಃ —ಅನಂತರ, ಭೀಮಃ – ಭೀಮನು, ದ್ರೌಣಿರ್ಮುಖಾಂ ಸೇನಾಂ— ಅಶ್ವತ್ಥಾಮನೇ ಪ್ರಧಾನನಾಗಿ ಉಳ್ಳ ಸೈನ್ಯವನ್ನು ಕುರಿತು, ಅಭ್ಯವರ್ತತ – ಯುದ್ಧಕ್ಕಾಗಿ ಪ್ರವೃತ್ತನಾದನು. ಪಾರ್ಥಃ – ಅರ್ಜುನನು, ಕರ್ಣಮುಖಾಂ— ಕರ್ಣನೇ ಪ್ರಧಾನನಾಗಿಉಳ್ಳ, ಶಿಷ್ಟಾಂ— ಉಳಿದಿರುವ ಸೈನ್ಯವನ್ನು ಕುರಿತು ಯುದ್ಧಕ್ಕಾಗಿ ಪ್ರವೃತ್ತನಾದನು, ತತಃ— ಆ ಭೀಮಾರ್ಜುನರಿಂದ, ತದ್ಬಲಂ – ಅಶ್ವತ್ಥಾಮಕರ್ಣರ ಸೈನ್ಯವು, ಅಭಜ್ಯತ —ಪರಾಜಿತವಾಯಿತು. ॥೧೯೮॥

ಶೀರ್ಣಾಂಸೇನಾಂಪ್ರವಿವಿಶು ರ್ಧೃಷ್ಟದ್ಯುಮ್ನಪುರೋಗಮಾಃ ॥
ತತಸ್ತಂ ದೇಶಮಾಪುಸ್ತೇಯತ್ರಭೀಮಧನಂಜಯೌ ॥೧೯೯॥

ಧೃಷ್ಟದ್ಯುಮ್ನಪುರೋಗಮಾಃ — ಧೃಷ್ಟದ್ಯುಮ್ನನೇ ಪ್ರಧಾನನಾಗಿ ಉಳ್ಳವರು, ಶೀರ್ಣಾಂ – ಭೀಮಾರ್ಜುನರಿಂದ ಪರಾಜಯಹೊಂದಿದ, ಸೇನಾಂ – ಸೈನ್ಯವನ್ನು, ಪ್ರವಿವಿಶುಃ–ಪ್ರವೇಶಿಸಿದರು. ತತಃ – ಆನಂತರ, ತೇ– ಆ ಧೃಷ್ಟದ್ಯುಮ್ನಾದಿ ಗಳು ಯತ್ರ – ಎಲ್ಲಿ, ಭೀಮಧನಂಜಯೌ — ಭೀಮಾರ್ಜುನರೋ, ತಂ ದೇಶಂ – ಆ ಪ್ರದೇಶವನ್ನು, ಆಪುಃ – ಹೊಂದಿದರು. ॥೧೯೯॥

ಭಾ. ಅ. ೧೯೩ – ೧೯೭ ಶ್ರೀಕೃಷ್ಣನು ಅರ್ಜುನನಿಗೆ 'ಈ ಶಿರಸ್ಸನ್ನು ಕೆಳಗೆ ಬೀಳಿಸಬೇಡ' ಎಂದು ಹೇಳಿದಾಗ, ಅರ್ಜುನನು ಪಾಶುಪತಾಸ್ತ್ರದ ಶಕ್ತಿಯಿಂದ ಸತತವಾಗಿ ಒಂದರ ಹಿಂದೆ ಒಂದರಂತೆ ಬಾಣಗಳನ್ನು ಬಿಟ್ಟು ಆ ಶಿರಸ್ಸನ್ನು ಬೀಳದಂತೆ ಹಿಡಿದನು. ಆಗ ಶ್ರೀಕೃಷ್ಣನು ಪುನಃ ಅರ್ಜುನನಿಗೆ ಈ ಶಿರಸ್ಸನ್ನು ಅವನ ತಂದೆಯು ತನ್ನ ಕೈಯಿಂದ ಬೀಳಿಸುವಂತೆ

ವಾಡು; ಏಕೆಂದರೆ ಅವನು ತನ್ನ ಮಗನಿಗೆ 'ನಿನ್ನ ಶಿರಸ್ಸನ್ನು ಭೂಮಿಯಲ್ಲಿ ಯಾವನು ಬೀಳಿಸುವನೋ ಅವನ ತಲೆಯು ಸಹಸ್ರ ಹೋಳಾಗಿ ಸಾಯುವನು.' ಎಂದು ವರವನ್ನು ಕೊಟ್ಟಿದ್ದಾನೆ. ಆವನ ಸಂಹಾರವೂ ಆಗಲೇಬೇಕು ಎಂದು ಹೇಳಿದಾಗ ಅರ್ಜುನನು ಆ ಪ್ರಕಾರ ಆ ತಲೆಯನ್ನು ಸಂಧ್ಯಾ ಮಾಡುತ್ತಿದ್ದ ತಂದೆಯು ತೊಡೆಯಲ್ಲಿರುವ ಕೈಯಲ್ಲಿ ಬೀಳಿಸಿದನು. ಆಗ ಒಮ್ಮಿಂದೊಮ್ಮೆಲೆ ಮಗನ ತಲೆಯು ಬಿದ್ದದ್ದನ್ನು ನೋಡಿ ಅವನು ಗಾಬರಿಯಾಗಿ, ಗಡಿಬಿಡಿಯಿಂದ ತನ್ನ ಕೈಯಿಂದ ಭೂಮಿಯಲ್ಲಿ ಬೀಳಿಸಿದನು. ಇದರಿಂದ ಅವನೂ ಕೂಡ ತಲೆಯು ಹೋಳಾಗಿ ಸತ್ತು ಹೋದನು. ಇಷ್ಟಾದನಂತರ ಶ್ರೀಕೃಷ್ಣನು (ಇಷ್ಟೆಲ್ಲ ಆಗಲು ಕೆಲ ಕ್ಷಣಗಳು ಮಾತ್ರ ಆಗಿದೆ ಅಷ್ಟೇ ವಿನಃ ಹೆಚ್ಚು ಸಮಯವಲ್ಲ) ಕತ್ತಲೆಯನ್ನು ಪುನಃ ನಾಶ ಪಡಿಸಿದನು. ಪುನಃ ಎಲ್ಲರಿಗೂ ಸೂರ್ಯ ಕಾಣುತ್ತಿರಲು ಎಲ್ಲರೂ (ಕೌರವರು) ಗಾಬರಿಯಿಂದ ಹಾ ಹಾ ಎಂದು ಅಂದರು. ಶಲ್ಯ ದುರ್ಯೋಧನಾದಿಗಳನ್ನು ಜಯಿಸಿದ ಶ್ರೀಭೀಮರು ಅದ್ಭುತ ಸಿಂಹನಾದವನ್ನು ಮಾಡಿದರು. ಅರ್ಜುನನಿಗೆ ಸಹಾಯ ವಾಡುತ್ತಿರುವ ಸಾತ್ಯಕಿಯೂ ಸಂತೋಷಬಟ್ಟನು. ಶ್ರೀಕೃಷ್ಣನು ಸಂತೋಷದಿಂದ ಪಾಂಚಜನ್ಯ ಶಂಖವನ್ನು ಧ್ವನಿಸಿದನು; ಅರ್ಜುನನು ದೇವದತ್ತ ಶಂಖವನ್ನು ಧ್ವನಿಸಿದನು, ಈ ಎಲ್ಲ ನಾದಗಳನ್ನು ಕೇಳಿ ಧರ್ಮರಾಜನು ಜಯದ್ರಥನು ಸತ್ತನೆಂದು ತಿಳಿದು ತುಂಬಾ ಸಂತಸಬಟ್ಟನು; ದುರ್ಯೋಧನನು ಪರಮ ದುಃಖಿತನಾದನು.

ತತಏಕೀಕೃತಾಸ್ಸರ್ವೇ ಪಾಂಡವಾಃ ಸಹಸೋಮಕಾಃ ॥
ಪರಾನ್ವಿದ್ರಾವಯಾಮಾಸುಸ್ತೇಭೀತಾಃ ಪ್ರಾದ್ರವನ್ದಿಶಃ ॥೨೦೦॥

ತತಃ— ಭೀಮಾರ್ಜುನರನ್ನು ಹೊಂದಿದ ಮೇಲೆ, ಏಕೀಕೃತಾಃ – ಒಂದೇಕಡೆ ಸೇರಿರುವ, ಸಹಸೋಮಕಾಃ – ಪಾಂಚಾಲರಿಂದ ಕೂಡಿಕೊಂಡಿರುವ, ಸರ್ವೇಪಾಂಡವಾಃ – ಪಂಚಪಾಂಡವರೂ, ಪರಾನ್— ಶತ್ರುಗಳನ್ನು, ವಿದ್ರಾವಯಾಮಾಸುಃ— ಓಡಿಸಿದರು. ತೇ– ಆ ಶತ್ರುಗಳು, ಭೀತಾಃ ಸಂತಃ— ಹೆದರಿದವರಾಗಿ, ದಿಶಃ – ದಿಕ್ಕುಗಳನ್ನು ಕುರಿತು, ಪ್ರಾದ್ರವನ್— ಓಡಿದರು. ॥೨೦೦॥

ವಿದ್ರಾವ್ಯಮಾಣಂ ಸೈನ್ಯಂತದ್ದೃಷ್ಟ್ವಾದುರ್ಯೋಧನೋನೃಪಃ ॥
ಜಯದ್ರಥವಧಾಚ್ಚೈವಕುಪಿತೋಭ್ಯದ್ರವತ್ಪರಾನ್ ॥೨೦೧॥

ನೃಪಃ – ರಾಜನಾದ, ದುರ್ಯೋಧನಃ—ದುರ್ಯೋಧನನು, ವಿದ್ರಾವ್ಯಮಾಣಂ – ಓಡಿಸಲ್ಪಡತಕ್ಕ, ತತ್ಸೈನ್ಯಂ– ಆ ಸೈನ್ಯವನ್ನು, ದೃಷ್ಟ್ವಾ—ನೋಡಿ, ಜಯದ್ರಥವಧಾಚ್ಚ – ಜಯದ್ರಥನ ಸಂಹಾರದಿಂದಲೂ, ಕುಪಿತಃಸನ್ — ಕೋಪಗೊಂಡವನಾಗಿ, ಪರಾನ್—ಶತ್ರುಗಳನ್ನು, ಅಭ್ಯದ್ರವತ್ – ಎದುರಾಗಿ ಬಂದನು. ॥೨೦೧॥

ಸ ಭೀಮಸೇನಂಚ ಧನಂಜಯಂಚ ಯುಧಿಷ್ಠಿರಂ ಮಾದ್ರವತೀಸುತೌ ಚ ॥
ಧೃಷ್ಟದ್ಯುಮ್ನಂಸಾತ್ಯಕಿಂ ದ್ರೌಪದೇಯಾನ್ಸರ್ವಾನೇಕಃ ಶರವರ್ಷೈರ್ವವರ್ಷ ॥೨೦೨॥

ಸಃ–ಆ ದುರ್ಯೋಧನನು,ಭೀಮಸೇನಂ ಚ – ಭೀಮಸೇನನನ್ನು, ಧನಂಜಯಂ ಚ–ಅರ್ಜುನನನ್ನು, ಯುಧಿಷ್ಠಿರಂ– ಧರ್ಮರಾಜನನ್ನು, ಮಾದ್ರವತೀಸುತೌ ಚ–ಮಾದ್ರಿಯ ಮಕ್ಕಳಾದ ನಕುಲ ಸಹದೇವರನ್ನು, ಧೃಷ್ಟದ್ಯುಮ್ನಂ–ಧೃಷ್ಟದ್ಯುಮ್ನನನ್ನು, ಸಾತ್ಯಕಿಂ – ಸಾತ್ಯಕಿಯನ್ನು, ದ್ರೌಪದೇಯಾನ್—ದ್ರೌಪದಿಯ ಮಕ್ಕಳನ್ನು, ಸರ್ವಾನ್-ಎಲ್ಲರನ್ನು, ಏಕಃ-ಒಬ್ಬನೇ ಶರವರ್ಷೈಃ – ಬಾಣಗಳ ವೃಷ್ಟಿಯಿಂದ, ವವರ್ಷ – ಮಳೆಗರಿಸಿದನು. ॥೨೦೨॥

ತಂವಿವ್ಯಧುಸ್ತೇಬಹುಭಿಃ ಶಿಲೀಮುಖೈಃ ಸ ತಾನನಾದೃತ್ಯಚಕರ್ತಬಾಣೈಃ ॥
ಧನೂಂಷಿಚಿತ್ರಾಣಿ ಬಹೂನಿರಥಾನಾಂ ಚಕಾರಸಂಖ್ಯೇ ವಿರಥೌ ಯುವೌ ಚ ॥೨೦೩॥

ತೇ–ಆ ಭೀಮಾದಿಗಳು, ಬಹುಭಿಃ–ಅನೇಕ, ಶಿಲೀಮುಖೈಃ–ಬಾಣಗಳಿಂದ, ತಂ–ಆ ದುರ್ಯೋಧನನನ್ನು, ವಿವ್ಯಧುಃ– ವ್ಯಥೆಪಡಿಸಿದರು. ಸಃ – ಆ ದುರ್ಯೋಧನನು, ತಾನ್ – ಆ ಬಾಣಗಳನ್ನು, ಅನಾದೃತ್ಯ – ತಿರಸ್ಕರಿಸಿ, ಮಹಾರಥಾನಾಂ – ಮಹಾರಥಿಕರ, ಚಿತ್ರಾಣಿ —ವಿಚಿತ್ರಗಳಾದ, ಧನೂಂಷಿ – ಬಿಲ್ಲುಗಳನ್ನು, ಬಾಣೈಃ – ಬಾಣಗಳಿಂದ, ಚಕರ್ತ– ಕತ್ತರಿಸಿದನು, ಯಮೌ – ನಕುಲಸಹದೇವರನ್ನು, ಸಂಖ್ಯೇ – ಯುದ್ಧದಲ್ಲಿ, ವಿರಥೌ – ರಥರಹಿತರನ್ನಾಗಿ, ಚಕಾರ – ಮಾಡಿದನು. ॥೨೦೩॥

ಆದಾಯ ಚಾಪಾನಿ ಪರಾಣಿತೇಽಪಿ ದುರ್ಯೋಧನಂ ವವೃಷುಃ ಸಾಯಕೌಘೈಃ ॥
ಅಚಿಂತಯಿತ್ವೈವ ಶರಾನ್ಸ ಏಕೋ ನ್ಯವಾರಯತ್ತಾನಖಿಲಾಂಶ್ಚ ಬಾಣೈಃ ॥೨೦೪॥

ತೇಪಿ – ಆ ಮಹಾರಥಿಕರೂಕೂಡ, ಪರಾಣಿ – ಬೇರೆ, ಚಾಪಾನಿ—ಧನುಸ್ಸುಗಳನ್ನು, ಆದಾಯ – ಹಿಡಿದುಕೊಂಡು, ಸಾಯಕೌಘೈಃ – ಬಾಣಗಳ ಸಮೂಹಗಳಿಂದ, ದುರ್ಯೋಧನಂ—ದುರ್ಯೋಧನನನ್ನು, ವವೃಷುಃ— ಮುಳಿಗರಿಸಿದರು. ಸ ಏಕಃ – ಆ ದುರ್ಯೋಧನನೊಬ್ಬನೇ, ಶರಾನ್ – ಬಾಣಗಳನ್ನು ಅಚಿಂತಯಿತ್ವೈವ–ಲೆಕ್ಕಿಸದೇ, ತಾನಖಿಲಾನ್– ಅವರೆಲ್ಲರನ್ನೂ, ಬಾಣೈಃ— ಶರಗಳಿಂದ, ನ್ಯವಾರಯತ್ – ತಡೆದನು. ॥೨೦೪॥

ತಂಗಾಹಮಾನಂ ದ್ವಿಷತಾಂ ಬಹೂನಾಂ ಮಧ್ಯೇದ್ರೋಣದ್ರೌಣಿಕೃಪಪ್ರಧಾನಾಃ ॥
ದೃಷ್ಟ್ವಾ ಸರ್ವೇಜುಗುಪುಶ್ಚಾತ್ತಚಾಪಾ ಅನಾರತಂ ಬಾಣಗಣಾನ್ಸೃಜಂತಃ ॥೨೦೫॥

ಬಹೂನಾಂ – ಬಹಳ, ದ್ವಿಷತಾಂ ಮಧ್ಯೇ—ಶತ್ರುಗಳ ಮಧ್ಯದಲ್ಲಿ, ಗಾಹಮಾನಂ—ಕದಡಿಸುತ್ತಿರುವ, ತಂ – ಆ ದುರ್ಯೋಧನನನ್ನು, ದ್ರೋಣದ್ರೌಣಿಕೃಪಪ್ರಧಾನಾಃ – ದ್ರೋಣರು, ಅಶ್ವತ್ಥಾಮ, ಕೃಪ ಇವರೇ ಪ್ರಧಾನರಾಗಿರುಳ್ಳ, ಸರ್ವೇ – ಎಲ್ಲರೂ, ದೃಷ್ಟ್ವಾ — ನೋಡಿ, ಆತ್ತಚಾಪಾಃ ಸಂತಃ – ಸ್ವೀಕರಿಸಲ್ಪಟ್ಟ ಧನುಸ್ಸುಳ್ಳವರಾಗಿ, ಅನಾರತಂ– ನಿರಂತರವಾಗಿ, ಬಾಣಗಣಾನ್—ಶರಸಮೂಹಗಳನ್ನು, ಸೃಜಂತಃಸಂತಃ–ಬಿಡುವವರಾಗಿ, ಜುಗುಪುಃ–ರಕ್ಷಿಸಿದರು. ॥೨೦೫॥

ಸುಯೋಧನಃ ಕರ್ಣಮಾಹ ಜಹಿ ಭೀಮಮಿಮಂ ಯುಧಿ ॥
ಸ ಆಹ ನೈವಶಕ್ಯೋಹಿ ಜೇತುಂ ದೇವೈಃ ಸವಾಸವೈಃ ॥೨೦೬॥

ಸುಯೋಧನಃ – ದುರ್ಯೋಧನನು, ಕರ್ಣಂ— ಕರ್ಣನನ್ನು ಕುರಿತು, ಯುಧಿ – ಯುದ್ಧದಲ್ಲಿ, ಇಮಂ ಭೀಮಂ– ಈ ಭೀಮನನ್ನು, ಜಹಿ— ಕೊಲ್ಲು, ಇತಿ – ಎಂದು, ಆಹ —ಹೇಳಿದನು. ಸಃ – ಆ ಕರ್ಣನು, ಸವಾಸವೈಃ – ಇಂದ್ರನಿಂದ ಕೂಡಿದ, ದೇವೈಃ – ದೇವತೆಗಳಿಂದಲೂ, ಏಷಃ – ಈ ಭೀಮನು, ಜೇತುಂ – ಜಯಿಸಲು, ನ ಶಕ್ಯಃ – ಶಕ್ಯನಲ್ಲ, ಇತಿ–ಎಂದು ಆಹ – ಹೇಳಿದನು, ॥೨೦೬॥

ದೈವಾಜ್ಜೀವಾಮ್ಯಹಂ ರಾಜನ್ಯುಧ್ಯಂಸ್ತೇನಾತಿಪೀಡಿತಃ ॥
ಅತೋಘಟಾಮುಹೇಶಕ್ತ್ಯಾ ಜಯೋದ್ದೈವೇ ಸಮಾಹಿತಃ ॥೨೦೭॥

ಹೇರಾಜನ್ – ಎಲೋ ರಾಜನೇ, ಅಹಂ — ನಾನು, ತೇನ — ಆ ಭೀಮನಿಂದ, ಯುಧ್ಯನ್ ಸನ್ – ಯುದ್ಧ– ಮಾಡತಕ್ಕವನಾಗಿ, ಅತಿಪೀಡಿತಸ್ಸನ್ – ಬಹಳವಾಗಿ ಪೀಡಿಸಿಕೊಳ್ಳಲ್ಪಟ್ಟವನಾಗಿ, ದೈವಾತ್— ಅದೃಷ್ಟದಿಂದ, ಜೀವಾಮಿ– ಬದುಕಿರುತ್ತೇನೆ, ಅತಃ – ಆದ್ದರಿಂದ, ಶಕ್ತ್ಯಾ – ಶಕ್ತ್ಯನುಸಾರವಾಗಿ; ಘಟಾಮಹೇ – ಉದ್ಯೋಗವನ್ನು ಮಾಡುತ್ತೇನೆ, ಜಯಃ– ಜಯವು, ದೈವೇ ಸಮಾಹಿತಃ – ದೈವದ ಅಧೀನವಾದದ್ದು. ॥೨೦೭॥

ದುರ್ಯೋಧನೋದ್ರೋಣಮಾಹ ಸೈಂಧವಸ್ತ್ವದುಪೇಕ್ಷಯಾ ॥
ಪಾರ್ಥೇನನಿಹತೋ ಭೀಮಸಾತ್ಯಕಿಭ್ಯಾಂಚ ಮೇಬಲಂ ॥೨೦೮॥

ಪ್ರತಿಜ್ಞಾಚಪರಿತ್ಯಕ್ತಾಪಾಂಡವ ಸ್ನೇಹತಸ್ತ್ವಯಾ ॥
ಇತ್ಯುಕ್ತಃ ಕುಪಿತೋದ್ರೋಣಃ ಪ್ರತಿಜ್ಞಾಮಕರೋತ್ತತಃ ॥೨೦೯॥

ದುರ್ಯೋಧನಃ — ದುರ್ಯೋಧನನು, ದ್ರೋಣಂ – ದ್ರೋಣರನ್ನು, ಕುರಿತು ಆಹ – ಹೇಳಿದನು. ಸೈಂಧವಃ— ಜಯದ್ರಥನು, ತ್ವದುಪೇಕ್ಷಯಾ – ನಿಮ್ಮಉದಾಸೀನತೆಯಿಂದ, ಪಾರ್ಥೇನ — ಅರ್ಜುನನಿಂದ, ನಿಹತಃ – ಕೊಲ್ಲಲ್ಪಟ್ಟನು. ಭೀಮಸಾತ್ಯಕಿಭ್ಯಾಂ— ಭೀಮಸಾತ್ಯಕಿಯರಿಂದ, ಮೇ–ನನ್ನ, ಬಲಂಚ– ಸೈನ್ಯವೂ, ಕೊಲ್ಲಲ್ಪಟ್ಟಿತು. ತ್ವಯಾ —ನಿಮ್ಮಿಂದ, ಪಾಂಡವಸ್ನೇಹತಃ - ಪಾಂಡವರಮೇಲಿನ ಪ್ರೀತಿಯಿಂದ, ಪ್ರತಿಜ್ಞಾಚ – ಪ್ರತಿಜ್ಞೆಯೂ ಕೂಡ, ಪರಿತ್ಯಕ್ತಾ– ಬಿಡಲ್ಪಟ್ಟಿತು. ಇತ್ಯುಕ್ತಃ– ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ, ದ್ರೋಣಃ – ದ್ರೋಣರು, ತತಃ– ಅನಂತರ, ಕುಪಿತಃ ಸನ್– ಕ್ರುದ್ಧರಾಗಿ, ಪ್ರತಿಜ್ಞಾಂ–ಪ್ರತಿಜ್ಞೆಯನ್ನು, ಅಕರೋತ್ – ಮಾಡಿದರು. ॥೨೦೮॥ ॥೨೦೯॥

ಇತಃಪರಂನೈವರಣಾದ್ರಾತ್ರ್ಯಾವಹನಿವಾಕ್ವಚಿತ್ ॥
ಗಚ್ಛೇಯಂನೈವನೋಕ್ಷ್ಯಾಮಿವರ್ಮಬದ್ಧಂಕಥಂಚನ ॥೨೧೦॥

ಇತಃಪರಂ— ಇನ್ನುಮುಂದೆ, ರಾತ್ರೌವಾ–ರಾತ್ರಿಯಲ್ಲಾಗಲೀ,ಅಹನಿವಾ–ಹಗಲಿನಲ್ಲಾಗಲೀ, ಕ್ವಚಿತ್–ಎಲ್ಲಿಯೂ ರಣಾತ್– ಯುದ್ಧದಿಂದ, ನೈವಗಚ್ಛೇಯಂ – ಶಿಬಿರವನ್ನು ಕುರಿತು ಹೋಗಲಾರೆನು, ಕಥಂಚನ – ಯಾವರೀತಿಯಿಂದಲೂ, ಬದ್ಧಂ – ಕಟ್ಟಲ್ಪಟ್ಟ,ವರ್ಮ – ಕವಚವನ್ನು, ನೈವ ಮೋಕ್ಷ್ಯಾಮಿ — ಬಿಡಿಸಿಕೊಳ್ಳಲಾರೆನು. ॥೨೧೦॥

ಮತ್ಪುತ್ರಶ್ಚತ್ವಯಾವಾಚ್ಯಃಪಾಂಚಾಲಾನ್ನೈವಶೇಷಯೇಃ ॥
ಸದೌ ಹಿತ್ರಾನಿತಿಪ್ರೋಕ್ತ್ವಾವಿಜಗಾಹೇನಿಶಾಗಮೇ ॥೨೧೧॥

ಚಮೂಂಪರೇಷಾಮಭ್ಯಾಗಾದ್ಧೃಷ್ಟದ್ಯುಮ್ನಸ್ತವಾಶುಚ ॥
ದ್ರೌಣಿದುರ್ಯೋಧನೌತತ್ರ ವಿರಥೀಕೃತ್ಯ ಮಾರುತಿಃ ॥
ದ್ರಾವಯಾಮಾಸ ತತ್ಸೈನ್ಯಂ ಪಶ್ಯತಾಂ ಸರ್ವಭೂಭೃತಾಂ ॥೨೧೨॥

ಸದೌ ಹಿತ್ರಾನ್ — ದ್ರೌಪದಿಯ ಮಕ್ಕಳಿಂದ ಸಹಿತರಾದ, ಪಾಂಚಾಲಾನ್ — ದ್ರುಪದಾದಿಗಳನ್ನು,ನೈವ ಶೇಷಯೇಃ– ಕೊಲ್ಲದೆ ಉಳಿಸಬೇಡ, ಇತಿ – ಎಂದು, ಮತ್ಪುತ್ರಃ – ನನ್ನ ಮಗನಾದ ಅಶ್ವತ್ಥಾಮನು, ತ್ವಯಾ - ನಿನ್ನಿಂದ, ವಾಚ್ಯಃ — ಹೇಳಲ್ಪಡಬೇಕು, ಇತಿ—ಎಂದು, ಪ್ರೋಕ್ತ್ವಾ —ಹೇಳಿ, ನಿಶಾಗಮೇ–ರಾತ್ರಿಕಾಲ ಬರಲು, ಪರೇಷಾಂ-ಶತ್ರುಗಳ ಚಮೂಂ– ಸೈನ್ಯವನ್ನು ವಿಜಗಾಹೇ — ಕಳವಳಪಡಿಸಿದನು. ಧೃಷ್ಟದ್ಯುಮ್ನಃ— ಧೃಷ್ಟದ್ಯುಮ್ನನು, ತಂ— ಆ ದ್ರೋಣರನ್ನು, ಆಶು- ಕೂಡಲೇ, ಅಭ್ಯಾಗಾತ್– ಎದುರಾಗಿ ಬಂದನು. ಮಾರುತಿಃ – ಭೀಮನು, ತತ್ರ–ಆ ಸಮಯದಲ್ಲಿ,ದ್ರೌಣಿದುರ್ಯೋಧನೌ– ಅಶ್ವತ್ಥಾಮ ದುರ್ಯೋಧನರನ್ನು, ವಿರಥೀಕೃತ್ಯ — ರಥರಹಿತರನ್ನಾಗಿ ಮಾಡಿ, ಸರ್ವಭೂಭೃತಾಂ — ಎಲ್ಲಾರಾಜರು, ಪಶ್ಯತಾಂಸತಾಂ–ನೋಡುತ್ತಿರುವಾಗ, ತತ್ಸೈನ್ಯಂ–ಆ ಕೌರವಸೈನ್ಯವನ್ನು, ದ್ರಾವಯಾಮಾಸ — ಓಡಿಸಿದನು. ॥೨೧೧॥೨೧೨॥

ಅಕ್ಷೌ ಹಿಣ್ಯಸ್ತುಸಪ್ತೈವ ಸೇನಯೋರುಭಯೋರಪಿ ॥
ಹತಾಸ್ತಾಸಾಂಚ ಭೀಮೇನ ತಿಸ್ರೋದ್ವೇ ಫಲ್ಗುನೇನಚ ॥೨೧೩॥

ಸೌ ಭದ್ರಸಾತ್ಯಕಿಮುಖೈಸ್ತನ್ಮಧ್ಯೇಷೋಡಶಾಂಶಕಃ ॥
ಹೈಡಿಂಬಪಾರ್ಷತಮುಖೈಸ್ತ್ರಯಾಚ್ಚ ದಶಮಾಂಶಕಃ ॥೨೧೪॥

ಉಭಯೋಃ ಸೇನಯೋಃ– ಕುರುಪಾಂಡವರ ಎರಡು ಸೇನೆಗಳ ಮಧ್ಯದಲ್ಲಿ, ಸಪ್ತೈವ – ಏಳೇ, ಅಕ್ಷೌಹಿಣ್ಯಃ – ಅಕ್ಷೌಹಿಣೀ ಸೈನ್ಯಗಳೂ, ಹತಾಃ—ಕೊಲ್ಲಲ್ಪಟ್ಟವು. ಅವುಗಳ ವಿಭಾಗವನ್ನು ತೋರಿಸುತ್ತಾರೆ. ತಾಸಾಂ – ಆ ಏಳು ಅಕ್ಷೌಹಿಣಿ ಗಳ ಮಧ್ಯದಲ್ಲಿ, ಭೀಮೇನ – ಭೀಮರಿಂದ, ತಿಸ್ರಃ – ಮೂರು ಅಕ್ಷೌಹಿಣೀ ಸೇನೆಗಳೂ, ಫಲ್ಗುನೇನ – ಅರ್ಜುನರಿಂದ ದ್ವೇ – ಎರಡು ಅಕ್ಷೌಹಿಣಿಗಳುಕೊಲ್ಲಲ್ಪಟ್ಟವು. ಭೀಮಾರ್ಜುನರಿಂದ ಕೊಲ್ಲಲ್ಪಟ್ಟ ಅಕ್ಷೌಹಿಣಿಗಳಲ್ಲಿಯೂ ವಿಭಾಗವನ್ನು ತೋರಿಸುತ್ತಾರೆ, ತನ್ಮಧ್ಯೇ – ಅರ್ಜುನನಿಂದ ಕೊಲ್ಲಲ್ಪಟ್ಟ ಎರಡು ಅಕ್ಷೌಹಿಣಿಗಳ ಮಧ್ಯದಲ್ಲಿ, ಷೋಡಶಾಂಶಕಃ – ಹದಿನಾರನೇ ಒಂದು ಭಾಗವು, ಸೌಭದ್ರಸಾತ್ಯಕಿಮುಖೈಃ— ಅಭಿಮನ್ಯು, ಸಾತ್ಯಕಿ ಮೊದಲಾದವರಿಂದ, ಹತಃ – ಕೊಲ್ಲಲ್ಪ ಟ್ಟಿತು, ಹದಿನೈದು ಭಾಗಗಳು ಅರ್ಜುನನಿಂದ ಕೊಲ್ಲಲ್ಪಟ್ಟವು. ತ್ರಯಾತ್–ಅಕ್ಷೌಹಿಣೀ ಮೂರರ, ದಶಮಾಂಶಕ – ಹತ್ತನೇ ಒಂದು ಅಂಶವು, ಹೈಡಿಂಬಪಾರ್ಷತಮುಖೈಃ – ಘಟೋತ್ಕಚ. ಧೃಷ್ಟದ್ಯುಮ್ನ ಮೊದಲಾದವರಿಂದ, ಸಹತಃ – ಕೊಲ್ಲಲ್ಪಟ್ಟಿತು. ಒಂಭತ್ತು ಭಾಗಗಳು ಭೀಮನಿಂದ ಕೊಲ್ಲಲ್ಪಟ್ಟವು. ॥೨೧೩॥ ॥೨೧೪॥

ಭೀಷ್ಮದ್ರೋಣ ದ್ರೌಣಿಭಿಶ್ಚ ದ್ವೇಸಮಂ ನಿಹತೇತದಾ ॥
ತದನ್ಯೈರ್ಮಿಲಿತೈಃ ಸರ್ವೈಸ್ತಚ್ಚತುರ್ಥಾಂಶ ಏವಚ ॥೨೧೫॥

ತದಾ – ಆಗ, ಭೀಷ್ಮದ್ರೋಣದ್ರೌಣಿಭಿಃ – ಭೀಷ್ಮರು, ದ್ರೋಣರು, ಅಶ್ವತ್ಥಾಮ ಇವರಿಂದ, ದ್ವೇ — ಎರಡೂ ಅಕ್ಷೌಹಿಣಿಗಳು ಸವ ಭಾಗವಾಗಿ ಅಂದರೆ ಎರಡು ಅಕ್ಷೌಹಿಣಿಯನ್ನು ನಾಲ್ಕು ಭಾಗ ಮಾಡುವಾಗ ಒಂದು ಭಾಗ ದ್ರೋಣ ರಿಂದಲೂ, ಒಂದುಭಾಗ ಭೀಷ್ಮರಿಂದಲೂ, ಒಂದು ಭಾಗ ಅಶ್ವತ್ಥಾಮರಿಂದಲೂ,ನಿಹತಾಃ–ಕೊಲ್ಲಲ್ಪಟ್ಟವು. ತಚ್ಚತುರ್ಥಾಂಶಃ– ಎರಡು ಅಕ್ಷೌಹಿಣಿಗಳ ನಾಲ್ಕನೇ ಭಾಗವು. ತದನ್ಯೈಃ – ಭೀಷ್ಮಾದಿಗಳಿಂದ ಇತರರಾದ ಸರ್ವೈಃಮಿಲಿತೈಃ — ಎಲ್ಲಾ ಮಿಲಿತರಾದ ಸೋಮದತ್ತಾದಿಗಳಿಂದ, ನಿಹತಃ— ಕೊಲ್ಲಲ್ಪಟ್ಟಿತು. ॥೨೧೫॥

ಭಾ.ಅ. ೧೯೮—೨೧೨ ಅಶ್ವತ್ಥಾಮನೇ ಮೊದಲಾಗಿರುಳ್ಳ ಎಲ್ಲ ಸೈನ್ಯವನ್ನು ಶ್ರೀಭೀಮರು ಮರ್ದಿಸಿದರು. ಅರ್ಜುನನು ಕರ್ಣಾದಿಗಳನ್ನು ಅವರ ಸೈನ್ಯವನ್ನು ಮರ್ದಿಸಿದನು. ಧೃಷ್ಟದ್ಯುಮ್ನನೇ ಮೊದಲಾದವರು ಹಣ್ಣಾದ ಕೌರವ ಸೈನ್ಯವನ್ನು ಪ್ರವೇಶಿಸಿ ಯುದ್ಧಮಾಡಿ ಭೀಮಾರ್ಜುನರು ಇರುವಸ್ಥಳಕ್ಕೆ ಬಂದರು. ಪಾಂಚಾಲ ಸೈನ್ಯದಿಂದ ಸಹಿತರಾದ ಪಾಂಡವರು ವೈರಿಸೈನ್ಯವನ್ನು ಓಡಿಸಿದರು. ಆ ವೈರಿಗಳೂ ಹೆದರಿ ದಿಕ್ಕು ದಿಕ್ಕಿಗೆ ಓಡಿದರು. ಇದನ್ನು ನೋಡಿದ್ದರಿಂದಲೂ, ಜಯದ್ರಥಸಂಹಾರದಿಂದಲೂ ದುರ್ಯೋಧನನು ಸಿಟ್ಟಿಗೆದ್ದು ಪಾಂಡವಸೈನ್ಯವನ್ನು ಕುರಿತು ಏರಿಹೋದನು. ಶ್ರೀಭೀಮಸೇನರು, ಧನಂಜಯ, ಧರ್ಮರಾಜ, ನಕುಲಸಹದೇವರು, ಧೃಷ್ಟದ್ಯುಮ್ನ, ಸಾತ್ಯಕಿ, ದ್ರೌಪದೀಪುತ್ರರು ಇವರೆಲ್ಲರ ಜೊತೆಗೆ ಒಬ್ಬನೇ ಯುದ್ಧಮಾಡುತ್ತಾ ಬಾಣಗಳನ್ನು ಸುರಿಸಿದನು. ಆಗ ಅವರೆಲ್ಲರೂ ಕೂಡ ಬಹುಪ್ರಬಲವಾದ ಬಾಣಗಳಿಂದ ಅವನನ್ನು ಹೊಡೆದರು. ಆದರೂ ಅವರನ್ನು, ಅವರ ಈ ಬಾಣಪ್ರಹಾರಗಳನ್ನೂ ತಿರಸ್ಕರಿಸಿ (ಲಕ್ಷಿಸದೆ) ಮಹಾರಥಿಕರ ಧನುಸ್ಸು ಗಳನ್ನೂ ಕೂಡ ಕತ್ತರಿಸಿ, ನಕುಲಸಹದೇವರನ್ನು ವಿರಥರನ್ನಾಗಿ ಮಾಡಿದನು. ಆ ಮಹಾರಥಿಕರು ಬೇರೆಧನುಸ್ಸುಗಳನ್ನು ಹಿಡಿದುಕೊಂಡು ಬಂದು ದುರ್ಯೋಧನನ ಜೊತೆಗೆ ಯುದ್ಧಮಾಡುತ್ತಿರಲು, ಅವರನ್ನೆಲ್ಲ ತಾನೊಬ್ಬನೇ ತಡೆದು ಯುದ್ಧ ಮಾಡುತ್ತಾ ಅವರೆಲ್ಲರ ಮಧ್ಯದಲ್ಲಿ ಮುಳುಗಿರುವಾಗ, ಅದನ್ನು ನೋಡಿದ ದ್ರೋಣ, ಅಶ್ವತ್ಥಾಮ, ಕೃಪಾಚಾರ್ಯ ಮೊದಲಾದ ವರು ಸತತವಾಗಿ ಬಾಣಗಳನ್ನು ಬಿಡುತ್ತಾ ದುರ್ಯೋಧನನನ್ನು ರಕ್ಷಿಸುತ್ತಿದ್ದರು. ಈ ಸಮಯದಲ್ಲಿ, ದುರ್ಯೋಧನನು ಕರ್ಣನಿಗೆ 'ಈ ಭೀಮನನ್ನು ಕೊಲ್ಲು' ಎಂದು ಹೇಳಿದನು. ಅದಕ್ಕೆ ಕರ್ಣನು 'ಈ ಭೀಮನನ್ನು ಯುದ್ಧದಲ್ಲಿ ಗೆಲ್ಲಲು ಇಂದ್ರಾದಿದೇವತೆಗಳಿಗೂ ಶಕ್ಯವಿಲ್ಲ. ನಾನೂ ಕೂಡ ಅವನಿಂದ ಅನೇಕ ಸಲ ಯುದ್ಧದಲ್ಲಿ ಪೀಡಿತನಾಗಿ ಸಾಯುವಂತಾಗಿದ್ದೆನು. ದೈವಾನುಗ್ರಹದಿಂದ ಬದುಕಿದ್ದೇನೆ. ಆದ್ದರಿಂದ ಹೇ ರಾಜನೇ, ನಮ್ಮಶಕ್ತ್ಯನುಸಾರ ಪ್ರಯತ್ನಿಸುತ್ತೇವೆ. ಜಯಿಸಿಗುವದು

ಭಗವದಧೀನವಾದದ್ದು.' ಎಂದು ದುರ್ಯೋಧನನಿಗೆ ಹೇಳಿದನು. ಆಗ ದುರ್ಯೋಧನನು ದ್ರೋಣಾಚಾರ್ಯರನ್ನು ಕುರಿತು, 'ನೀವು ಉದಾಸೀನತೆಯನ್ನು ಮಾಡಿದ್ದರಿಂದ ಅರ್ಜುನನು ಜಯದ್ರಥನನ್ನು ಸಂಹರಿಸಿದನು, ಭೀಮಸಾತ್ಯಕಿಗಳು ನನ್ನ ಸೈನವನ್ನು ಸಂಹರಿಸಿದರು. ಪಾಂಡವರಲ್ಲಿಯ ಸ್ನೇಹದಿಂದ ಧರ್ಮರಾಜನನ್ನು ಒಂಧಿಸುವ ನಿಮ್ಮ ಪ್ರತಿಜ್ಞೆಯನ್ನೂ ತ್ಯಜಿಸಿದಿರಿ', ಎಂದು ಹೇಳಿದಾಗ ದ್ರೋಣರು 'ಇನ್ನು ಮೇಲೆ ಯುದ್ಧದಿಂದ ರಾತ್ರಿಯಾಗಲೀ ಹಗಲಾಗಲೀ ಹಿಂದಿರುಗುವದೇ ಇಲ್ಲ; ಕಟ್ಟಿದ ಕವಚವನ್ನು ಬಿಚ್ಚುವದಿಲ್ಲ. ದ್ರೌಪದೀಪುತ್ರಸಮೇತ ಪಾಂಚಾಲಸೈನ್ಯವನ್ನು ಉಳಿಸದಂತೆ ಸಂಹರಿಸಲು ಅಶ್ವತ್ಥಾಮರಿಗೆ ತಿಳಿಸು' ಎಂದು ಹೇಳಿದರು. ರಾತ್ರಿಯಲ್ಲಿಯೂ ಕೂಡ ಯುದ್ಧ ಮಾಡಿದರು. ಧೃಷ್ಟದ್ಯುಮ್ನನು ಕೌರವಸೈನ್ಯದ ಮೇಲೆ ಏರಿ ಹೋಗಿರುವಾಗ, ಅಶ್ವತ್ಥಾಮ ದುರ್ಯೋಧನರು ಕೂಡಲೇ ಯುದ್ಧಕ್ಕೆ ಬಂದರು. ಧೃಷ್ಟದ್ಯುಮ್ನನು ದ್ರೋಣರನ್ನು, ವಿರಥರನ್ನಾಗಿಮಾಡಿದನು. ಶ್ರೀಭೀಮರು ಅಶ್ವತ್ಥಾಮ ದುರ್ಯೋಧನರನ್ನು ವಿರಥರನ್ನಾಗಿಮಾಡಿ ಅವರ ಸೈನ್ಯವನ್ನು ಎಲ್ಲ ರಾಜರು ನೋಡುತ್ತಿರುವಂತೆಯೇ ಓಡಿಸಿದರು. ಅಲ್ಲಿಯವರೆಗಿನ ಯುದ್ಧದಲ್ಲಿ ಏಳು ಅಕ್ಷೋಹಿಣೀಸೈನ್ಯ ಎರಡೂಪಕ್ಷದಲ್ಲಿ ಸೇರಿ ಸಂಹೃತವಾಗಿತ್ತು.

ತತೋರಾತ್ರೌಪಂಚಭಿಶ್ಚ ಪಾರ್ಥಾಃ ಷಡ್ಭಿಶ್ಚ ಕೌರವಾಃ ॥
ಅಕ್ಷೌಹಿಣೀಭಿಃ ಸಂವ್ಯೂಹ್ಯಯುದ್ಧಂ ಚಕ್ರುಃಸುದಾರುಣಂ ॥೨೧೬॥

ತತಃ – ಅನಂತರ, ರಾತ್ರೌ – ರಾತ್ರಿಯಲ್ಲಿ, ಪಾರ್ಥಾಃ – ಪಾಂಡವರು, ಪಂಚಭಿಃ ಅಕ್ಷೌಹಿಣೀಭಿಃ – ಐದು ಅಕ್ಷೌಹಿಣಿಗಳಿಂದ, ಕೌರವಾಃ – ಕೌರವರು, ಷಡ್ಭಿಃ – ಆರು ಅಕ್ಷೌಹಿಣೀಗಳಿಂದಲೂ, ಸಂವ್ಯೂಹ್ಯ – ಸೇನಾರಚನೆಯನ್ನು ಮಾಡಿ, ಸುದಾರುಣಂ – ಅತ್ಯಂತ ಭಯಂಕರವಾದ, ಯುದ್ಧಂ – ಯುದ್ಧವನ್ನು. ಚಕ್ರುಃ – ಮಾಡಿದರು. ॥೨೧೬॥

ಭೀಮಂ ಸೇನಾಂ ದ್ರಾವಯಂತಂ ಪುನಃಕರ್ಣಃ ಸಮಾಸದತ್ ॥
ಸಕರ್ಣಪುರತೋ ಭೀಮೋದುಷ್ಕರ್ಣಂ ಕರ್ಣಮೇವಚ ॥೨೧೭॥

ದುರ್ಯೋಧನಸ್ಯಾವರಜೌ ನಿಷ್ಪಿಪೇಷ ಪದಾಕ್ಷಣಾತ್ ॥
ರಥಾಶ್ವಧ್ವಜಸೂತೈಶ್ಚ ಸಹಿತೌ ನ ವ್ಯಪಶ್ಯತಾಂ ॥೨೧೮॥

ಕರ್ಣಃ – ಕರ್ಣನು, ಪುನಃ – ಮತ್ತು, ಸೇನಾಂ – ಸೈನ್ಯವನ್ನು, ದ್ರಾವಯಂತಂ – ಓಡಿಸುತ್ತಿರುವ, ಭೀಮಂ – ಭೀಮನನ್ನು, ಸಮಾಸದತ್ – ಹೊಂದಿದನು, ಸಃ – ಆ ಭೀಮನು, ಕರ್ಣಪುರತಃಏವ – ಕರ್ಣನ ಮುಂಭಾಗದಲ್ಲಿಯೇ, ರಥಾಶ್ವಧ್ವಜಸೂತೈಃ – ರಥಗಳೂ, ಕುದುರೆಗಳೂ, ಧ್ವಜಗಳೂ, ಸೂತರು ಇವರಿಂದ, ಸಹಿತೌ – ಕೂಡಿದ, ದುಷ್ಕರ್ಣಂ ಕರ್ಣಂಚ – ದುಷ್ಕರ್ಣ ಮತ್ತು ಕರ್ಣರೆಂಬ, ದುರ್ಯೋಧನಸ್ಯ – ದುರ್ಯೋಧನನ, ಅವರಜೌ – ತಮ್ಮಂದಿರನ್ನು, ಕ್ಷಣಾತ್ – ಕೂಡಲೇ, ಪದಾ – ಕಾಲಿನಿಂದ, ನಿಷ್ಪಿಪೇಷ – ಪುಡಿಪಾಡಿದನು, ತೌ ನ ವ್ಯಪಶ್ಯತಾಂ – ಅವರಿಬ್ಬರೂ ಕಾಣಿಸಿಕೊಳ್ಳಲ್ಪಡಲಿಲ್ಲ. ॥೨೧೭॥೨೧೮॥

ಅವಃ – ಭೀಮನು ಆಯುಧಗಳಿರುವಾಗ ಕಾಲಿನಿಂದ ಮರ್ದಿಸಿದ ಕಾರಣವನ್ನು ಹೇಳುತ್ತಾರೆ.

ನಿರಾಯುಧೋಽಹಮಿತಿ ಮಾಂತ್ವಮಾತ್ಥಪರುಷಂ ವಚಃ ॥
ನಿರಾಯುಧಃ ಪಶ್ಯೈವಾಹಂ ತ್ವಾಂ ಹಂತುಮಶಕಂ ತದಾ ॥೨೧೯॥

ಇತಿ ಕರ್ಣಸ್ಯತೌ ಭೀಮಃ ಸಂಜ್ಞಯಾ ಜ್ಞಾಪಯನ್ಭುವಿ ॥
ಪದಾ ಪಿಪೇಷ ಕಾಲಿಂಗಂ ಮುಷ್ಟಿನೈವ ಜಘಾನ ಹ ॥೨೨೦॥

ಅಹಂ ನಾನು, ನಿರಾಯುಧಃ —ಆಯುಧವಿಲ್ಲವದನು, ಇತಿ – ಎಂದು, ತ್ವಂ — ನೀನು, ಮಾಂ – ನನ್ನನ್ನು, ಮಂತ್ವಾ – ತಿಳಿದು, ಪರುಷಂ – ಕ್ರೂರವಾದ, ವಚಃ – ಮಾತನ್ನು, ಆತ್ಥ – ಈ ಹಿಂದಿನ ಯುದ್ಧದಲ್ಲಿ ಹೇಳಿರುತ್ತಿ, ತದೈವ– ಆಗಲೇ, ನಿರಾಯುಧಃ – ಆಯುಧ ರಹಿತನಾದ, ಅಹಂ—ನಾನು, ಪದೈವ – ಕಾಲಿನಿಂದಲೇ, ತ್ವಾಂ – ನಿನ್ನನ್ನು, ಹಂತುಂ – ಕೊಲ್ಲಲು, ಅಶಕಂ— ಸಮರ್ಥನಾಗಿದ್ದೆನು, ಇತಿ – ಎಂಬುದಾಗಿ, ಕರ್ಣಸ್ಯ— ಕರ್ಣನಿಗೆ, ಸಂಜ್ಞಯಾ – ಸೂಚನೆಯಿಂದ, ಜ್ಞಾಪಯನ್ – ತಿಳಿಸತಕ್ಕ, ಭೀಮಃ – ಭೀಮನು, ತೌ – ಆ ದುಷ್ಕರ್ಣ ಕರ್ಣರಿಬ್ಬರನ್ನು. ಭುವಿ - ಭೂಮಿಯಲ್ಲಿ, ಪದಾ– ಕಾಲಿನಿಂದ, ಪಿಪೇಷ – ಪುಡಿಮಾಡಿದನು, ಕಾಲಿಂಗಂ — ಕಾಲಿಂಗನನ್ನು, ಮುಷ್ಟಿನೈವ — ಮುಷ್ಟಿಯಿಂದಲೇ, ಜಘಾನ – ಕೊಂದನು. ॥೨೧೯॥೨೨೦॥

ಅವ : ಮುಷ್ಟಿಯಿಂದ ಕಾಲಿಂಗನನ್ನು ಕೊಂದ ಅಭಿಪ್ರಾಯವನ್ನು ಹೇಳುತ್ತಾರೆ.

ಮುಷ್ಟಿನಾತ್ವದ್ವಧಾಯಾಹಂ ಸಮರ್ಥಇತಿಕಿಂವದೇ ॥
ತಸ್ಮಾನ್ಮಯಾರಕ್ಷಿತಸ್ತ್ವಮಿತಿ ಜ್ಞಾಪಯಿತುಂ ಪ್ರಭುಃ ॥೨೨೦॥

ಸಾಶ್ವಸೂತಧ್ವಜರಥಃ ಕಾಲಿಂಗೋಮುಷ್ಟಿಚೂರ್ಣಿತಃ ॥೨೨೨॥

ಅಹಂ – ನಾನು, ಮುಷ್ಟಿನಾ – ಮುಷ್ಟಿಯಿಂದ, ತ್ವದ್ವಧಾಯ – ನಿನ್ನನ್ನು ಕೊಲ್ಲಲಿಕ್ಕೆ, ಸಮರ್ಥ ಇತಿ– ಸಮರ್ಥನೆಂದು, ಕಿಂ ವದೇ – ಏನು ಹೇಳುವದು. ತಸ್ಮಾತ್ – ಆದ್ದರಿಂದ, ತ್ವಂ – ನೀನು, ಮಯಾ – ನನ್ನಿಂದ, ರಕ್ಷಿತಃ–ರಕ್ಷಿತನಾಗಿದ್ದಿ, ಇತಿ – ಎಂದು, ಜ್ಞಾಪಯಿತುಂ—ತಿಳಿಸುವುದಕ್ಕಾಗಿ, ಪ್ರಭುಃ – ಸಮರ್ಥನಾದ ಭೀಮನು, ಕಾಲಿಂಗನನ್ನು ಮುಷ್ಟಿಯಿಂದ ಕೊಂದನು. ಸಾಶ್ವಸೂತಧ್ವಜರಥಃ – ಕುದುರೆಗಳು, ಸೂತನು, ಧ್ವಜವು, ರಥವು ಇವುಗಳಿಂದಕೂಡಿದ, ಕಾಲಿಂಗಃ– ಕಾಲಿಂಗನು, ಮುಷ್ಟಿಚೂರ್ಣಿತಃ – ಮುಷ್ಟಿಯಿಂದ ಪುಡಿಮಾಡಲ್ಪಟ್ಟನು. ॥೨೨೧॥ ॥೨೨೨॥

ಅವಃ – ದ್ರೋಣಾಚಾರ್ಯರ ರಾತ್ರಿಯುದ್ಧದಲ್ಲಿ ಪ್ರಸಂಗದಿಂದ ಭೀಷ್ಮ ಪರ್ವದಲ್ಲಿ ಹತ್ತುದಿನಗಳ ಮಧ್ಯದಲ್ಲಿ ಸೂರ್ಯಾಸ್ತಮಯಾನಂತರವೂ ಕೆಲವು ಸಮಯ ಖಡ್ಗಯುದ್ಧವಾಗಿತ್ತು. ಆ ಕಥೆಯನ್ನು ಸಂಗ್ರಹಿಸಿ ಹೇಳುತ್ತಾರೆ. ಇಡೀ ರಾತ್ರಿಯಲ್ಲಿ ಯುದ್ಧವಾಗದೇ ಇರುವುದರಿಂದ ಅಲ್ಲಿ ಅದನ್ನು ಪ್ರತ್ಯೇಕ ಹೇಳಲಿಲ್ಲ.

ಕೇತುಮಾಂಶ್ಚ ಪಿತಾತಸ್ಯ ಶಕ್ರದೇವಃ ಶ್ರುತಾಯುಧಃ ॥
ಅಕ್ಷೌ ಹಿಣ್ಯಾಸೇನಯಾಚ ಸಹಭೀಮೇನಪಾತಿತಾಃ ॥೨೨೩॥

ಖಡ್ಗಯುದ್ಧೇಪುರಾಭೀಷ್ಮೇ ಸೇನಾಪತ್ಯಂ ಪ್ರಕುರ್ವತಿ ॥
ಕರ್ಣಾನುಜಾನ್ಧ್ರುವಾದ್ಯಾಂಶ್ಚ ಬಹೂನ್ಜಘ್ನೇಸವೈನಿಶಿ ॥೨೨೪॥

ಪುರಾ – ಹಿಂದೆ, ಭೀಷ್ಮೇ— ಭೀಷ್ಮರು, ಸೇನಾಪತ್ಯಂ – ಸೇನಾಧಿಪತಿತ್ವವನ್ನು, ಪ್ರಕುರ್ವತಿ ಸತಿ–ಮಾಡುತ್ತಿರಲು, ಖಡ್ಗಯುದ್ಧೇ –ಖಡ್ಗಯುದ್ಧದಲ್ಲಿ, ತಸ್ಯ – ಆ ಕಾಲಿಂಗನ, ಪಿತಾ – ತಂದೆಯಾದ, ಕೇತುಮಾನ್ — ಕೇತುವಾನ್ ಎಂಬವನು, ಶಕ್ರದೇವಃ – ಶಕ್ರದೇವನು, ಶ್ರುತಾಯುಧಃ – ಶ್ರುತಾಯುಧನು, ಈ ಮೂರುಮಂದಿ, ಅಕ್ಷೌ ಹಿಣ್ಯಾ ಸೇನಯಾಚ— ಒಂದು ಅಕ್ಷೌಹಿಣೀಸೈನ್ಯದಿಂದ, ಸಹ — ಕೂಡಿಕೊಂಡು, ಭೀಮೇನ – ಭೀಮನಿಂದ, ಪಾತಿತಾಃ— ಕೊಲ್ಲಲ್ಪಟ್ಟರು. ಸಃ – ಆ ಭೀಮನು, ನಿಶಿ – ರಾತ್ರಿಯಲ್ಲಿ, ಕರ್ಣಾನುಜಾನ್ — ಕರ್ಣನತಮ್ಮಂದಿರಾದ ಬಹೂನ್, — ಬಹುಸಂಖ್ಯಾಕರಾದ, ಧ್ರುವಾದ್ಯಾನ್ – ಧ್ರುವನೇ ಮೊದಲಾದವರನ್ನು ಜಘ್ನೇ, — ಕೊಂದನು. ॥೨೨೩॥ ॥೨೨೪॥

ಸಂಜ್ಞಾಂ ಭೀಮಕೃತಾಂ ಜ್ಞಾತ್ವಾ ಶಕ್ತಿಂ ಚಿಕ್ಷೇಪಚಾಪರಾಂ ॥
ಕರ್ಣಃ ಶಕ್ತಿರ್ಮಯಾದಿವ್ಯಾನ ಮುಕ್ತಾತೇನ ಜೀವಸಿ ॥೨೨೫॥

ಇತಿ ಜ್ಞಾಪಯಿತುಂ ತಾಂತು ಜ್ಞಾತ್ವಾ ಭೀಮಃ ಕ್ಷಣಾತ್ತದಾ ॥
ಖಮುತ್ಪತ್ಯ ಗೃಹೀತ್ವಾ ಚಕರ್ಣೇ ಚಿಕ್ಷೇಪ ಸತ್ವರಃ ॥೨೨೬॥

ಕರ್ಣಃ— ಕರ್ಣನು,ಭೀಮಕೃತಾಂ — ಭೀಮನಿಂದ ಮಾಲಲ್ಪಟ್ಟ, ಸಂಜ್ಞಾಂ – ಸೂಚನೆಯನ್ನು, ಜ್ಞಾತ್ವಾ – ತಿಳಿದು, ಯತ್ – ಯಾವ ಕಾರಣದಿಂದ, ಮಯಾ – ನನ್ನಿಂದ, ದಿವ್ಯಾ ಶಕ್ತಿಃ— ಇಂದ್ರನಿಂದ ಕೊಡಲ್ಪಟ್ಟ ಶಕ್ತಿಯು, ನ ಮುಕ್ತಾ – ಬಿಡಲ್ಪಡಲಿಲ್ಲವೋ, ತೇನ— ಆ ಕಾರಣದಿಂದ, ಜೀವಸಿ – ಬುದುಕಿಕೊಂಡು ಇದ್ದಿ, ಇತಿ – ಎಂದು, ಜ್ಞಾಪಯಿತುಂ — ಭೀಮನಿಗೆ ತಿಳಿಸುವುದಕ್ಕಾಗಿ, ಅಪರಾಂ ಶಕ್ತಿಂ – ಇಂದ್ರನಿಂದ ಕೊಡಲ್ಪಟ್ಟ ಶಕ್ತಿಯಿಂದ ಇತರವಾದ ಶಕ್ತಿಯನ್ನು, ಚಿಕ್ಷೇಪ —ಬೀಸಾಡಿದನು. ಭೀಮಃ— ಭೀಮನು, ತಾಂ – ಕರ್ಣನಿಂದ ಸೂಚಿಸಲ್ಪಟ್ಟ ಸಂಜ್ಞೆಯನ್ನು, ಜ್ಞಾತ್ವಾ – ತಿಳಿದು, ತದಾ– ಆಗ, ಸತ್ವರಃ – ವೇಗ ಯುಕ್ತನಾಗಿ, ಕ್ಷಣಾತ್ – ಕೂಡಲೇ, ಖಂ – ಆಕಾಶಕ್ಕೆ, ಉತ್ಪತ್ಯ – ಹಾರಿ, ಗೃಹೀತ್ವಾ – ಆ ಶಕ್ತಿಯನ್ನು ಹಿಡಿದು, ಕರ್ಣೇ — ಕರ್ಣನಲ್ಲಿ, ಚಿಕ್ಷೇಪ— ಬೀಸಾಡಿದನು. ॥೨೨೫॥ ॥೨೨೬॥

ಭಾ. ಅ. ೨೧೩—೨೨೪ ಅಲ್ಲಿಯವರೆಗೆ ಎರಡೂ ಪಕ್ಷಗಳಲ್ಲಿ ಹತವಾದ ಒಟ್ಟು ಏಳು ಅಕ್ಷೌಹಿಣೀಗಳಲ್ಲಿ ಮೂರು ಅಕ್ಷೌಹಿಣೀಗಳನ್ನು ಭೀಮಸೇನ ದೇವರು, ಎರಡನ್ನು ಅರ್ಜುನನು, ಭೀಷ್ಮ ದ್ರೋಣ, ಅಶ್ವತ್ಥಾಮರು ಸೇರಿ ಒಟ್ಟು ಎರಡು ಅಕ್ಷೌಹೀಣಿಗಳನ್ನು ಸಂಹರಿಸಿದರು. ಇದರಲ್ಲಿಯೂ ಕೂಡ ಭೀಮಾರ್ಜುನರಿಂದ ಸಂಹೃತವಾದ ಐದು ಅಕ್ಷೌಹಿಣೀಗಳಲ್ಲಿಯೂ ಎರಡರಲ್ಲಿ, ಹದಿನಾರನೆಯ ಒಂದ($\frac{1}{16}$)ರಷ್ಟು ಸೈನ್ಯವನ್ನು ಅಭಿಮನ್ಯು ಸಾತ್ಯಕಿ ಮೊದಲಾದವರು ಸಂಹರಿಸಿದ್ದರು. ಮೂರರ ಪೈಕಿ ಹತ್ತರ ಒಂದ ($\frac{1}{10}$) ರಷ್ಟು ಸೈನ್ಯವನ್ನು ಘಟೋತ್ಕಚ, ಧೃಷ್ಟದ್ಯುಮ್ನ ಮೊದಲಾದವರು ಸಂಹರಿಸಿದ್ದರು. ಅದರಂತೆ ಭೀಷ್ಮ, ದ್ರೋಣ, ಅಶ್ವತ್ಥಾಮರಿಂದ ಸಂಹೃತವಾದ ಪಾಂಡವರ ಎರಡು ಅಕ್ಷೌಹಿಣೀಗಳಲ್ಲಿ ನಾಲ್ಕರ ಒಂದ ($\frac{1}{4}$)ರಷ್ಟು ಸೈನ್ಯವನ್ನು ಉಳಿದೆಲ್ಲ ಕೌರವ ಪಕ್ಷೀಯರು ಸಂಹರಿಸಿದ್ದರು. ಇಷ್ಟರ ನಂತರ ಕೌರವರು ಹನ್ನೊಂದರಲ್ಲಿ ಉಳಿದ ಆರು ಅಕ್ಷೌಹೀಣಿಗಳಿಂದ, ಪಾಂಡವರು ತಮ್ಮ ಏಳರಲ್ಲಿ ಉಳಿದ ಐದು ಅಕ್ಷೌಹೀಣಿಗಳಿಂದ ಕೂಡಿಕೊಂಡು ಭಯಂಕರವಾದ ಯುದ್ಧವನ್ನು ಮಾಡಿದರು. ಈ ಯುದ್ಧದಲ್ಲಿ ಶ್ರೀಭೀಮರು ಕೌರವ ಸೈನ್ಯವನ್ನು ಓಡಿಸುತ್ತಿದ್ದಾಗ, ಕರ್ಣನು ಬಂದು ಎದುರಿಸಿದನು. ಭೀಮರು ಕರ್ಣನ ಎದುರಿನಲ್ಲಿಯೇ ದುರ್ಯೋಧನನ ತಮ್ಮಂದಿರಾದ ಕರ್ಣ ಮತ್ತು ದುಷ್ಕರ್ಣರನ್ನು ಕೂಡಲೇ ತನ್ನ ಕಾಲಿನಿಂದ ತುಳಿದು ಸಂಹರಿಸಿದರು, ಅವರಿಬ್ಬರ ರಥ, ಕುದುರೆ, ಸಾರಥಿಗಳನ್ನೂ ಕೂಡ ನಾಶ ಪಡಿಸಿದರು. ಹೀಗೆ ಮಾಡಿ ಕರ್ಣನಿಗೆ 'ನಾನು ನಿರಾಯುಧನಾಗಿರುವಾಗ ಕ್ರೂರ ಮಾತುಗಳನ್ನು ನೀನು ನನಗೆ ಹೇಳಿದೆಯಷ್ಟೇ. ಆದರೆ, ನಾನು ಇದೇ ರೀತಿ ಕಾಲಿನಿಂದ ನಿನ್ನನ್ನು ಸಂಹರಿಸಲು ಸಮರ್ಥನಿದ್ದೆನು' ಎಂಬುದನ್ನು ಸಂಜ್ಞೆಯಿಂದ ತಿಳಿಸಿದರು. ಹಾಗೆಯೇ ಮುಷ್ಟಿಯಿಂಪಲೇ ಕಾಲಿಂಗನೆಂಬವೆನನನ್ನು ರಥಾಶ್ವ ಸೂತ ಸಮೇತವಾಗಿ ಸಂಹರಿಸಿದರು. (ಹೀಗೆ ಕರ್ಣನಿಗೆ ಸಂಜ್ಞೆ ಮಾಡಿ ನಾನು ಹಾಗೆ ಪಾವ, ಮುಷ್ಟಿಗಳಿಂದ ಸಂಹರಿಸಿಲ್ಲವಾದ್ದರಿಂದ ನೀನು ಬದುಕಿರುವಿ. ಆದ್ದರಿಂದ ನೀನು ನನ್ನಿಂದ ರಕ್ಷಿತ ಎಂಬುದನ್ನು ತಿಳಿಸಿದರು.) ಕಾಲಿಂಗನ ತಂದೆ, ಶಕ್ರದೇವ, ಶ್ರುತಾಯುಧರೆಂಬವರನ್ನು, ಅಕ್ಷೌಹಿಣೀ ಸೈನ್ಯವನ್ನೂ ಕೂಡ ಸಂಹರಿಸಿದರು.

(ಈಗ ರಾತ್ರಿಯುದ್ಧವನ್ನು ಹೇಳುತ್ತಿದ್ದದ್ದರಿಂದ ಭೀಷ್ಮ ಪರ್ವದಲ್ಲಿ ಕೆಲವು ಸಲ ನಡೆದ ರಾತ್ರಿ ಯುದ್ಧವನ್ನು 'ಖಡ್ಗಯುದ್ಧೇ'ಎಂಬ ಶ್ಲೋಕದಲ್ಲಿ ತಿಳಿಸಿರುವರು.)ಹಿಂದೆಯೂ ಭೀಷ್ಮರು ಸೇನಾಪತಿಯಾಗಿರುವಾಗ ಕರ್ಣನ ತಮ್ಮಂದಿರಾದ ಧ್ರುವ ಮೊದಲಾದವರನ್ನು ರಾತ್ರಿ ಯುದ್ಧದಲ್ಲಿಯೇ ಶ್ರೀ ಭೀಮರೇ ಕೊಂದರು.

ವಿಶೇಷ : 'ಖಡ್ಗಯುದ್ಧೇ' ಎಂಬ ಪಂಕ್ತಿಯನ್ನು ಹಿಂದಿನ ಶ್ಲೋಕದ ಜೊತೆಗೆ ಇಟ್ಟುಕೊಂಡು ಕೇತುಮದಾದಿಗಳನ್ನು ಭೀಷ್ಮರ ಸೇನಾಪತ್ಯದಲ್ಲಿ ಶ್ರೀ ಭೀಮರು ಕೊಂದರು. ಎಂದು ಅರ್ಥಹೇಳಿ ದ್ರೋಣರ ಸೇನಾಪತ್ಯದಲ್ಲಿಯೇ ರಾತ್ರಿಯಲ್ಲಿ ಧ್ರುವಮೊದಲಾದ ಕರ್ಣಾನುಜರನ್ನು ಶ್ರೀ ಭೀಮರು ಕೊಂದರು ಎಂದು ವ್ಯಾಖ್ಯಾವೂ ಇದೆ. ಮಾಹಜ್ಜನರು ನಿರ್ಣಾಯಕರು.

ಯುದಿತ್ವಯಾತದಾಮುಕ್ತಾ ಶಕ್ತಿಸ್ತ್ವಾಂಸಾ ಹನಿಷ್ಯತಿ ।।
ಇತಿಜ್ಞಾಪಯಿತುಂ ಸಾಚಕರ್ಣರಕ್ಷಣಕಾಂಕ್ಷಿಣಾ ॥೨೨೭॥

ಮುಕ್ತಾದಕ್ಷ ಭುಜೇ ಸಾऽಥ ವಿದಾರ್ಯ ಧರಣೀಂ ತಥಾ ॥
ಭಿತ್ವಾ ವಿವೇಶ ಕರ್ಣಸ್ಯ ದರ್ಶಯಂತೀ ನಿದರ್ಶನಂ ॥೨೨೮॥

ತ್ವಯಾ – ನಿನ್ನಿಂದ, ಸಾ ಶಕ್ತಿಃ – ಇಂದ್ರನಿಂದ ಕೊಡಲ್ಪಟ್ಟ ಶಕ್ತಿಯು, ಮುಕ್ತಾ ಯದಿ – ಬಿಡಲ್ಪಟ್ಟರೆ, ತದಾ – ಆಗ, ಸಾ – ಆ ಇಂದ್ರನ ಶಕ್ತಿಯು, ತ್ವಾಂಚ – ನಿನ್ನನ್ನೇ, ಹನಿಷ್ಯತಿ— ಕೊಲ್ಲುವುದು. ಇತಿ–ಹೀಗೆಂದು, ಜ್ಞಾಪಯಿತುಂ – ತಿಳಿಸುವುದಕ್ಕಾಗಿ, (ಚಿಕ್ಷೇಪ)— ಬೀಸಾಡಿದನು. ಕರ್ಣರಕ್ಷಣಕಾಂಕ್ಷಿಣಾ—ಕರ್ಣನರಕ್ಷಣೆಯನ್ನು ಇಚ್ಛಿಸುವ ಭೀಮನಿಂದ, ದಕ್ಷ ಭುಜೇ– ಕರ್ಣನ ಬಲಭುಜದಲ್ಲಿ, ಮುಕ್ತಾ—ಬಿಡಲ್ಪಟ್ಟ, ಕರ್ಣಸ್ಯ–ಕರ್ಣನಿಗೆ, ನಿದರ್ಶನಂ– ಸಂಜ್ಞೆಯನ್ನು,– ದರ್ಶಯಂತೀ– ತೋರಿಸತಕ್ಕ, ಸಾ– ಆ ಶಕ್ತಿಯು, ಅಥ – ಅನಂತರ, ವಿದಾರ್ಯ – ಭುಜವನ್ನು ಶೀಳಿಕೊಂಡು, ತಥಾ – ಹಾಗೆಯೇ, ಧರಣೀಂ – ಭೂಮಿಯನ್ನು, ಭಿತ್ವಾ— ಭೇದಿಸಿಕೊಂಡು, ವಿವೇಶ—ಭೂಮಿಯನ್ನು ಪ್ರವೇಶಿಸಿತು. ॥೨೨೭॥ ೨೨೮॥

ತತೋಭೀಮಃ ಪುನಸ್ತಂತು ರಥಮಾಸ್ಥಾಯ ಚಾಪಭೃತ್ ॥
ಕರ್ಣಸ್ಯಪುರತಃ ಶತ್ರೂನ್ದ್ರಾವಯಾಮಾಸ ಸರ್ವತಃ ॥೨೨೯॥

ತತಃ – ಅನಂತರ, ಭೀಮಃ— ಭೀಮನು, ಪುನಃ – ಮತ್ತು, ತಂ ರಥಂ – ಆ ರಥವನ್ನೇ, ಆಸ್ಥಾಯ – ಏರಿ, ಚಾಪಭೃತ್ಸನ್ – ಧನುಸ್ಸನ್ನು ಧರಿಸಿದವನಾಗಿ, ಕರ್ಣಸ್ಯ – ಕರ್ಣನ, ಪುರತಃ – ಎದುರು, ಸರ್ವತಃ – ಎಲ್ಲಾ, ಶತ್ರೂನ್— ಶತ್ರುಗಳನ್ನು, ದ್ರಾವಯಾಮಾಸ – ಓಡಿಸಿದನು. ॥೨೨೯॥

ತಂಕರ್ಣೋವಾರಯಾಮಾಸ ಶರೈಃಸನ್ನತಪರ್ವಭಿಃ ॥
ಭೀಮಃಕರ್ಣರಥಾಯೈವ ಗದಾಂಚಿಕ್ಷೇಪ ವೇಗತಃ ॥೨೩೦॥

ಕರ್ಣಃ – ಕರ್ಣನು, ತಂ – ಆ ಭೀಮನನ್ನು, ಸನ್ನತಪರ್ವಭಿಃ – ಬಗ್ಗಿದಗಂಟುಗಳುಳ್ಳ, ಶರೈಃ— ಬಾಣಗಳಿಂದ, ವಾರಯಾಮಾಸ— ತಡೆದನು. ಭೀಮಃ–ಭೀಮನು, ಕರ್ಣರಥಾಯೈವ – ಕರ್ಣನ ರಥಕ್ಕೋಸ್ಕರವೇ, ವೇಗತಃ – ವೇಗದಿಂದ, ಗದಾಂ – ಗದೆಯನ್ನು ಚಿಕ್ಷೇಪ—ಬೀಸಾಡಿದನು. ॥೨೩೦॥

ಸತದ್ಗದಾಭಿಘಾತಾಯ ಸ್ಥೂಣಾಕರ್ಣಾಸ್ತ್ರಮಾಸೃಜತ್ ॥
ತೇನಾಸ್ತ್ರೇಣಪ್ರತಿಹತಾ ಸಾಗದಾಭೀಮಮಾವೃಜತ್ ॥೨೩೧॥

ಸಃ – ಆ ಕರ್ಣನು, ತದ್ಗದಾಭಿಘಾತಾಯ – ಭೀಮನ ಗದೆಯನ್ನು ತಡೆಂಡರಿಸುವುದಕ್ಕಾಗಿ, ಸ್ಥೂಣಾಕರ್ಣಾಸ್ತ್ರಂ– ಸ್ಥೂಣಾಕರ್ಣವೆಂಬ ಅಸ್ತ್ರವನ್ನು, ಅಸೃಜತ್ – ಬಿಟ್ಟನು, ತೇನಾಸ್ತ್ರೇಣ — ಆ ಅಸ್ತ್ರದಿಂದ ಪ್ರತಿಹತಾ – ತಡೆಯಲ್ಪಟ್ಟ, ಸಾ ಗದಾ – ಆ ಗದೆಯು, ಭೀಮಂ – ಭೀಮನನ್ನು, ಆವೃಜತ್ – ಸೇರಿತು. ॥೨೩೧॥

ಭೀಮೋಗದಾಂಸಮಾದಾಯ ಕರ್ಣಸ್ಯರಥಮಾರುಹತ್ ॥
ತಯಾಸಂಚೂರ್ಣಯಾಮಾಸ ಕರ್ಣಸ್ಯರಥಕೂಬರಂ ॥೨೩೨॥

ಭೀಮಃ - ಭೀಮನು, ಗದಾಂ – ಗದೆಯನ್ನು, ಸಮಾದಾಯ – ಹಿಡಿದುಕೊಂಡು, ಕರ್ಣಸ್ಯ— ಕರ್ಣನ, ರಥಂ— ರಥವನ್ನು, ಆರುಹತ್, ಏರಿದನು. ತಯಾ– ಆ ಗದೆಯಿಂದ, ಕರ್ಣಸ್ಯ–ಕರ್ಣನ, ರಥಕೂಬರಂ– ರಥದ ಯುಗಂಧತವನ್ನು ನೊಗವನ್ನು, ಸಂಚೂರ್ಣಯಾಮಾಸ— ಪುಡಿಮಾಡಿದನು. ॥೨೩೨॥

ಏವಂತ್ವಚ್ಚೂರ್ಣನೇ ಶಕ್ತೋಮತ್ಕಾಮಾತ್ತ್ವಂಹಿ ಜೀವಸಿ ॥
ಏವಂನಿದರ್ಶಯಿತ್ವೈವ ಪುನಃಸ್ವರಥಮಾವ್ರಜತ್ ॥೨೩೩॥

ಏವಂ – ರಥಕೂಬರವನ್ನು ಪುಡಿಮಾಡಿದಂತೆ, ತ್ವಚ್ಚೂರ್ಣನೇ – ನಿನ್ನನ್ನು ಪುಡಿಮಾಡುವುದರಲ್ಲಿ, ಶಕ್ತಃ– ಸಮರ್ಥನಾಗಿರುತ್ತೇನೆ. ಮತ್ಕಾಮಾತ್ — ಕರ್ಣನುಬದುಕಿಕೊಂಡಿರಲಿ ಎಂಬ ನನ್ನ ಇಚ್ಛೆಯಿಂದಲೇ, ತ್ವಂ-ನೀನು ಜೀವಸಿ— ಬದುಕಿಕೊಂಡು ಇರುವಿ, ಏವಂ— ಈ ರೀತಿಯಾಗಿ, ನಿದರ್ಶಯಿತ್ವೈವ – ತೋರಿಸಿಯೇ, ಪುನಃ – ಮತ್ತು, ಸ್ವರಥಂ– ತನ್ನ ರಥವನ್ನು, ಆವ್ರಜತ್ – ಹೊಂದಿದನು. ॥೨೩೩॥

ಪುನಃಕರ್ಣಪುರಃ ಸೇನಾಂ ಜಘಾನ ಬಹುಶೋರಣೇ ॥
ಕರ್ಣಸ್ತುತಂ ಪರಿತ್ಯಜ್ಯ ಸಹದೇವಮುಪಾದ್ರವತ್ ॥೨೩೪॥

ಪುನಃ— ಮತ್ತೂ ಭೀಮನು, ಬಹುಶಃ – ಅನೇಕಸಲ, ರಣೇ – ಯುದ್ಧದಲ್ಲಿ, ಕರ್ಣಪುರಃ— ಕರ್ಣನ ಮುಂದೆ, ಸೇನಾಂ – ಸೈನ್ಯವನ್ನು, ಜಘಾನ – ಕೊಂದನು. ಕರ್ಣಸ್ತು — ಕರ್ಣನಾದರೂ, ತಂ — ಆ ಭೀಮನನ್ನು, ಪರಿತ್ಯಜ್ಯ – ಬಿಟ್ಟು, ಸಹದೇವಂ– ಸಹದೇವನನ್ನು, ಉಪಾದ್ರವತ್ – ಸಮೀಪಿಸಿದನು. ॥೨೩೪॥

ಸತು ತಂ ವಿರಥೀಕೃತ್ಯ ಧನುಃಕಂಠೇಽವಸಜ್ಯಚ ॥
ಕುತ್ಸಯಾಮಾಸ ಬಹುಶಃ ಸತು ನಿರ್ವೇದಮಾಗಮತ್ ॥೨೩೫॥

ಸತು— ಆ ಕರ್ಣನಾದರೂ, ತಂ – ಆ ಸಹದೇವನನ್ನು, ವಿರಥೀಕೃತ್ಯ – ರಥರಹಿತನನ್ನಾಗಿಮಾಡಿ, ಕಂಠೇ– ಕುತ್ತಿಗೆಯಲ್ಲಿ, ಧನುಃ – ಬಿಲ್ಲನ್ನು, ಅವಸಜ್ಯ – ತಿಕ್ಕಿ, ಬಹುಶಃ— ಅನೇಕರೀತಿಯಿಂದ, ಕುತ್ಸಯಾಮಾಸ – ನಿಂದಿಸಿದನು. ಸತು– ಆ ಸಹದೇವನಾದರೂ, ನಿರ್ವೇದಂ – ದುಃಖವನ್ನು, ಆಗಮತ್ – ಹೊಂದಿದನು. ॥೨೩೫॥

ಭಾ. ಆ. ೨೨೫ – ೨೩೫ ಕರ್ಣನಿಗೆ ಭೀಮರು ಸಂಜ್ಞೆಯಿಂದ ತಿಳಿಸುತ್ತಿರಲು ಅವನು ತನಗೆ ಇಂದ್ರದತ್ತವಾದ ಶಕ್ತಿ ಎಂಬ ಆಯುಧಕ್ಕಿಂತ ಬೇರೆಯಾದ ಶಕ್ತಿ ಎಂಬ ಆಯುಧವನ್ನು ಶ್ರೀಭೀಮರ ಮೇಲೆ ಬೀಸಾಡಿ ನಾನು ನನ್ನ ಶಕ್ತ್ಯಾಯುಧವನ್ನು ನಿನ್ನ ಮೇಲೆ ಪ್ರಯೋಗಿಸಿಲ್ಲವಾದ್ದರಿಂದ ನೀನು ಬದುಕಿರುವಿ ಎಂದು ಸಂಜ್ಞೆಯನ್ನು ಮಾಡಿದನು. ಈ ಸಂಜ್ಞೆಯನ್ನು ತಿಳಿದ ಭೀಮರು ಕೂಡಲೇ ಆಕಾಶಕ್ಕೆ ಹಾರಿ ತನ್ನ ಕಡೆ ಬರುತ್ತಿರುವ ಆ ಶಕ್ತ್ಯಾಯುಧವನ್ನು ಹಿಡಿದು ಕರ್ಣನಿಗೇ ಒಗೆದು ಒಂದು ವೇಳೆ ನೀನು ನಿನ್ನ ನಿಜವಾದ ಶಕ್ತ್ಯಾಯುಧವನ್ನು ಪ್ರಯೋಗಿಸಿದ್ದರೂ ಕೂಡ ಇದೇ ರೀತಿ ಹಿಡಿದು ಅದರಿಂದ ನಿನ್ನನ್ನೇ ಸಂಹರಿಸುತ್ತಿದ್ದೆನು ಎಂದು ಸೂಚಿಸಿದರು. ಕರ್ಣನು ಈಗ ತನ್ನಿಂದ ಸಾಯಬಾರದೆಂದೇ ಆ ಶಕ್ತಿಯನ್ನು ಆ ಕರ್ಣನ ಬಲಭುಜಕ್ಕೆ ಬೀಸಾಡಿದ್ದರು. ಅದು ಅವನ ಬಲಗೈಯನ್ನು ಸೀಳಿಕೊಂಡು ಭೂಮಿಗೆ ಬಿದ್ದು ಭೂಮಿಯನ್ನು ಕೂಡ ಒಡೆದು ಒಳಗೆ ಪ್ರವೇಶಿಸಿ ಕರ್ಣನಿಗೆ ಸೂಚನೆಯನ್ನು ಕೊಟ್ಟಿತು. ಅನಂತರ ಭೀಮರು ತಮ್ಮ ರಥಕ್ಕೆ ಬಂದು ಕರ್ಣನ ಎದುರಿನಲ್ಲಿಯೇ ವೈರಿ ಸೈನ್ಯವನ್ನು ಎಲ್ಲ ಕಡೆಗೂ ಓಡಿಸುತ್ತಿದ್ದರು. ಆಗ ಕರ್ಣನು ತೀಕ್ಷ್ಣ ಬಾಣಗಳಿಂದ ತಡೆದನು. ಆಗ ಅವನ ರಥನಾಶಮಾಡಲು ಗದಾವನ್ನು. ಶ್ರೀಭೀಮರು ಒಗೆದಾಗ, ಕರ್ಣನು ಆ ಗದೆಯನ್ನು ತಡೆಯುವದಕ್ಕಾಗಿ ಸ್ಥೂಣಾಕರ್ಣಾಸ್ತ್ರವನ್ನು ಪ್ರಯೋಗಿಸಿದನು, ಅದರಿಂದ ತಡೆಯಲ್ಪಟ್ಟ ಆ ಗದೆಯು ಶ್ರೀಭೀಮರ ಹತ್ತಿರಕ್ಕೆ ವಾಪಸ್

ಬುದಿತು. ಆಗ ಭೀಮರು ಆ ಗದೆಯನ್ನು ಹಿಡಿದುಕೊಂಡು ಕರ್ಣನ ರಥಕ್ಕೆ ಬಂದು ಅದರ ಕೂಬರ (ಅಚ್ಚು ಎಂಬ ಭಾಗ)ವನ್ನೇ ಮುರಿದು ಹಾಕಿದರು. ಇದೇ ರೀತಿ ನಿನ್ನನ್ನು ಪುಡಿ ಮಾಡಲು ಶಕ್ತ, ಆದರೆ ನೀನು ಇನ್ನೂ ಬದುಕಬೇಕು ಎಂಬ ಇಚ್ಛೆ ನನ್ನಲ್ಲಿದ್ದದ್ದರಿಂದ ಬದುಕಿರುವಿ ಎಂದು ತಿಳಿಸಿ ತಮ್ಮ ರಥಕ್ಕೆ ಬಂದರು.

ನಹಂತುಮೈಚ್ಛತ್ತಂಕರ್ಣಃ ಪೃಥಾಯೈಸ್ವಂವಚಃ ಸ್ಮರನ್ ॥
ತಂವಿಜಿತ್ಯರಣೇಕರ್ಣೋ ಜಘ್ನೇಪಾರ್ಥವರೂಥಿನೀಂ ॥೨೩೬॥

ಕರ್ಣಃ—ಕರ್ಣನು, ಪೃಥಾಯೈ – ಕುಂತಿಗೋಸ್ಕರ, ಸ್ವಂ ವಚಃ – ಅರ್ಜುನನನ್ನು ಹೊರತು ಇತರರನ್ನು ಕೊಲ್ಲುವು ದಿಲ್ಲ ಎಂಬ ತನ್ನ ಮಾತನ್ನು, ಸ್ಮರನ್‌ಸನ್—ಸ್ಮರಿಸುವವನಾಗಿ, ತಂ- ಆ ಸಹದೇವನನ್ನು, ಹಂತು–ಕೊಲ್ಲಲು, ನೈಚ್ಛತ್ – ಇಚ್ಛಿಸಲಿಲ್ಲ, ಕರ್ಣಃ – ಕರ್ಣನು, ತಂ – ಸಹದೇವನನ್ನು, ವಿಜಿತ್ಯ— ಗೆದ್ದು, ರಣೇ—ಯುದ್ಧದಲ್ಲಿ, ಪಾರ್ಥವರೂಥಿನೀಂ— ಪಾಂಡವರ ಸೈನ್ಯವನ್ನು, ಜಘ್ನೇ—ಕೊಂದನು. ॥೨೩೬॥

ತತೋದ್ರೌಣಿರ್ವಿವಿಧೈರ್ಬಾಣ ಸಂಘೈರ್ಜಘಾನಪಾರ್ಥಸ್ಯ ಚಮೂಂಸಮಂತತಃ ॥
ಸಾಹನ್ಯಮಾನಾರಣಕೋವಿದೇನ ನಾಶಂಲೇಭೇ ಮೃತ್ಯುನಾರ್ತಾಪ್ರಜೇವ ॥೨೩೭॥

ತತಃ – ಅನಂತರ, ದ್ರೌಣಿಃ—ಅಶ್ವತ್ಥಾಮನು, ವಿವಿಧೈಃ – ನಾನಾವಿಧಗಳಾದ, ಬಾಣಸಂಘೈಃ—ಶರಗಳ ಸಮೂಹ ದಿಂದ, ಪಾರ್ಥಸ್ಯ—ಅರ್ಜುನನ, ಚಮೂಂ – ಸೈನ್ಯವನ್ನು, ಸಮಂತತಃ – ಸುತ್ತಮುತ್ತಲೂ, ಜಘಾನ—ಕೊಂದನು, ರಣಕೋವಿದೇನ—ಯುದ್ಧದಲ್ಲಿ ನಿಪುಣನಾದ ಅಶ್ವತ್ಥಾಮನಿಂದ, ಹನ್ಯಮಾನಾ – ಕೊಲ್ಲಲ್ಪಡುವ, ಸಾ — ಆ ಸೇನೆಯು, ಮೃತ್ಯುನಾ – ಯಮನಿಂದ, ಆರ್ತಾ – ಪೀಡಿತವಾದ, ಪ್ರಜೇವ -- ಪ್ರಜೆಯಂತೆ, ನಾಶಂ -- ಮರಣವನ್ನು, ಲೇಭೇ – ಹೊಂದಿತು. ॥೨೩೭॥

ದೃಷ್ಟ್ವಸೇನಾಂ ದ್ರೌಣಿಬಲಾಭಿಭೂತಾಂ ತಮಾಹ್ವಯಾಮಾಸ ಘಟೋತ್ಕಚೋ ಯುಧಿ ॥
ದ್ರೌಣಿಸ್ತಮಾಹಾಲಮಲಂ ನವತ್ಸಪುತ್ರಸ್ತಾತಂ ಯೋಧಯಸ್ವಾದ್ಯಮಾಂತ್ವಂ ॥೨೩೮॥

ಘಟೋತ್ಕಚಃ— ಘಟೋತ್ಕಚನು, ದ್ರೌಣಿಬಲಾಭಿಭೂತಾಂ— ಅಶ್ವತ್ಥಾಮನ ಸಾಮರ್ಥ್ಯದಿಂದ ಪರಾಜಿತವಾದ, ಸೇನಾಂ— ಸೈನ್ಯವನ್ನು, ದೃಷ್ಟ್ವ – ನೋಡಿ, ಯುಧಿ – ಯುದ್ಧಕಾಗಿ ತಂ – ಆ ಅಶ್ವತ್ಥಾಮನನ್ನು, ಆಹ್ವಯಾಮಾಸ– ಕರೆದನು, ದ್ರೌಣಿಃ – ಅಶ್ವತ್ಥಾಮನು, ತಂ- ಆ ಘಟೋತ್ಕಚನನ್ನು, ಕುರಿತು ಹೇವತ್ಸ– ಎಲೋ ಮಗನೇ, ಅಲಂಅಲಂ— ಆಹ್ವಾನ ಮಾತ್ರದಿಂದ ಸಾಕು, ಸಾಕು, ಪುತ್ರಸ್ತ್ವಂ – ಮಗನಾದ ನೀನು, ತಾತಂ ಮಾಂ — ತಂದೆಯಾದ ನನ್ನನ್ನು ಕುರಿತು, ಅದ್ಯ – ಈಗ ನ ಯೋಧಯಸ್ವ — ಯುದ್ಧ ಮಾಡಬೇಡ. ಇತಿ – ಎಂದು, ಆಹ — ಹೇಳಿದನು. ॥೨೩೮॥

ಇತ್ಯುಕ್ತ ಊಚೇನಪಿತಾಮಮತ್ವಂ ಸಖಾಪಿತುರ್ಯದ್ಯಪಿ ಶತ್ರುಸಂಶ್ರಯಾತ್ ॥
ಅರಿಶ್ಚನೋಽಸೀತಿತಮಾಹಯುದ್ಧ್ಯರಿಂಮಾಂ ಮನ್ಯಸೇ ತದ್ವದಹಂ ಕರೋಮಿ ತೇ ॥೨೩೯॥

ಇತ್ಯುಕ್ತಃ – ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಘಟೋತ್ಕಚನು, ತ್ವಂ— ನೀನು, ಮಮ — ನನಗೆ, ಪಿತಾ – ತಂದೆಯು, ನ— ಅಲ್ಲ. ಯದ್ಯಪಿ—ಒಂದು ವೇಳೆ, ಪಿತುಃ – ತಂ ದೆಗೆ, ಸಖಾ — ಗೆಳೆಯನು, ತಥಾಪಿ – ಹಾಗಾದರೂ ಶತ್ರುಸಂಶ್ರಯಾತ್ — ಶತ್ರುಪಕ್ಷವನ್ನಾಶ್ರಯಿಸಿ ಇರುವುದರಿಂದ, ಮೇ – ನನಗೆ, ಅರಿಶ್ಚಾಸಿ – ಶತ್ರುವೂ ಆಗಿದ್ದಿ, ಇತಿ– ಎಂದು, ಊಚೇ — ಅಶ್ವತ್ಥಾಮನನ್ನುಕುರಿತು ಹೇಳಿದನು, ಮಾಂ – ನನ್ನನ್ನು, ಅರಿಂ – ಶತ್ರುವನ್ನಾಗಿ,

ಽನ್ಯಸೇಯದಿ – ತಿಳಿಯುವುದಾದರೆ, ತರ್ಹಿ — ಆ ಪಕ್ಷದಲ್ಲಿ, ಅಹಂ — ನಾನು, ತೇ – ನಿನಗೆ, ಶುತ್ರುವತ್ – ಶತ್ರುವಿನಂತೆ, ಕರೋಮಿ – ಮಾಡುತ್ತೇನೆ. ಇತಿ — ಎಂದು, ತಂ – ಆ ಘಟೋತ್ಕಚನನ್ನು, ಕುರಿತು ಅಹ – ಅಶ್ವತ್ಥಾಮನು ಹೇಳಿದನು. ॥೨೩೯॥

ಇತ್ಯೂಚಿವಾನ್ ಶಕ್ರಧನುಃ ಪ್ರಕಾಶಂ ವಿಷ್ಫಾರ್ಯ ಚಾಪಂ ಪ್ರಕಿರನ್ ಶರೌಘಾನ್ ॥
ಅಭ್ಯಾಗಮದ್ರಾಕ್ಷಸಮುಗ್ರವೇಗಃ ಸ್ವಸೇನಯಾಸೋಽಪಿ ತಮಭ್ಯವರ್ತತ ॥೨೪೦॥

ಇತಿ— ಈ ರೀತಿಯಾಗಿ, ಊಚಿವಾನ್ – ಹೇಳತಕ್ಕ, ಉಗ್ರವೇಗಃ— ಕ್ರೂರವೇಗವುಳ್ಳ ಅಶ್ವತ್ಥಾಮನು, ಇಂದ್ರ-ಧನುಃ ಪ್ರಕಾಶಂ – ಇಂದ್ರನ ಧನುಸ್ಸಿನಂತೆ ಕಾಂತಿಯುಳ್ಳ, ಚಾಪಂ – ಧನುಸ್ಸನ್ನು, ವಿಷ್ಫಾರ್ಯ – ಎಳೆದು, ಶರೌಘಾನ್– ಬಾಣಗಳ ಸಮೂಹಗಳನ್ನು, ಪ್ರಕಿರನ್ ಸನ್ — ವಿಸ್ತರಿಸುವವನಾಗಿ, ರಾಕ್ಷಸಂ — ಘಟೋತ್ಕಚನನ್ನು, ಅಭ್ಯಾಗಮತ್ — ಎದುರಾಗಿ ಬಂದನು, ಉಗ್ರವೇಗಃ – ಕ್ರೂರವೇಗವುಳ್ಳ, ಸೋಽಪಿ – ಆ ಘಟೋತ್ಕಚನೂ ಕೂಡ, ತಂ -– ಅಶ್ವತ್ಥಾಮರನ್ನು ಸ್ವಸೇನಯಾ – ತನ್ನ ಸೈನ್ಯದಿಂದ, ಅಭ್ಯವರ್ತತ – ಎದುರಾಗಿ ಬಂದನು. ॥೨೪೦॥

ಸರಕ್ಷಸಾಂ ಲಕ್ಷಸಮಾವೃತೋಬಲೀ ನೃಭಿಶ್ಚ ವೀರೈರ್ಬಹುಭಿಃಸುಶಿಕ್ಷಿತೈಃ ॥
ಅಕ್ಷೌ ಹಿಣೀಮಾತ್ರಬಲೇನ ರಾಕ್ಷಸಃ ಸಂಕ್ಷೋಭಯಾಮಾಸ ಗುರೋಃಸುತಂ ಶರೈಃ ॥೨೪೧॥

ರಕ್ಷಸಾಂ—ರಾಕ್ಷಸರ, ಲಕ್ಷಸಮಾವೃತಃ—ಲಕ್ಷ ಸಂಖ್ಯಾದಿಂದ ಕೂಡಿದ, ಸುಶಿಕ್ಷಿತೈಃ – ಚೆನ್ನಾಗಿ ಶಿಕ್ಷಿತರಾದ— ಬಹುಭಿಃ – ಬಹುಸಂಖ್ಯಾಕರಾದ, ವೀರೈಃ – ಪರಾಕ್ರಮಿಗಳಾದ, ನೃಭಿಶ್ಚ — ಮನುಷ್ಯರಿಂದಲೂ ಕೂಡಿದ, ಅಕ್ಷೌ ಹಿಣೀ ಮಾತ್ರಬಲೇನ ಆವೃತಃ—ಒಂದೇ ಅಕ್ಷೌಹಿಣೀ ಸೈನ್ಯದಿಂದ ಕೂಡಿದ, ಬಲೀ–ಬಲಿಷ್ಠನಾದ, ಸ ರಾಕ್ಷಸಃ–ಆ ಘಟೋತ್ಕಚನು, ಶರೈಃ—ಬಾಣಗಳಿಂದ, ಗುರೋಃ ಸುತಂ – ಗುರುಪುತ್ರರಾದ ಅಶ್ವತ್ಥಾಮರನ್ನು, ಸಂಕ್ಷೋಭಯಾಮಾಸ — ಕಳವಳಪಡಿಸಿದನು. ॥೨೪೧॥

ಸತೇನ ಬಾಣೈರ್ಬಹುಭಿಃ ಸುಪೀಡಿತೋ ವಿಭಿನ್ನಗಾತ್ರಃ ಕ್ಷತಜಾಭಿಪ್ಲುತಾಂಗಃ ॥
ವ್ಯಾವೃತ್ತನೇತ್ರೋಕುಪಿತೋ ಮಹದ್ಧನುರ್ವಿಷ್ಫಾರ್ಯ ಬಾಣೈ ರಜನೀಂಚಕಾರ ॥೨೪೨॥

ತೇನ – ಘಟೋತ್ಕಚನಿಂದ, ಬಹುಭಿಃ— ಅನೇಕವಿಧಗಳಾದ, ಬಾಣೈಃ – ಶರಗಳಿಂದ, ಸುಪೀಡಿತಃ — ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ, ವಿಭಿನ್ನಗಾತ್ರಃ – ಶೀರ್ಣವಾದ ಶರೀರವುಳ್ಳ, ಕ್ಷತಜಾಭಿಪ್ಲುತಾಂಗಃ—ರಕ್ತದಿಂದ ಒದ್ದೆಯಾದ ಅವಯವವುಳ್ಳ, ಸಃ – ಅಶ್ವತ್ಥಾಮಾಚಾರ್ಯರು, ನೇತ್ರೇ—ಕಣ್ಣುಗಳನ್ನು– ವ್ಯಾವೃತ್ತ – ತಿರುಗಿಸಿ, ಕುಪಿತಸ್ಸನ್ – ಕೋಪಗೊಂಡವರಾಗಿ, ಮಹದ್ಧನುಃ — ಮಹತ್ತಾದ ಧನುಸ್ಸನ್ನು, ವಿಷ್ಫಾರ್ಯ ಎಳೆದು ಬಾಣೈಃ – ಬಾಣಗಳಿಂದ, ರಜನೀಂ — ಕತ್ತಲೆಯನ್ನು, ಚಕಾರ – ಮಾಡಿದನು. ॥೨೪೨॥

ಸೋಽಕ್ಷೌ ಹಿಣೀಂ ತಾಂ ಕ್ಷಣಮಾತ್ರತಃಕ್ಷರನ್ಮಹಾಶರಾಂಸ್ತಾನಪಿ ರಾಕ್ಷಸಾನ್ಕ್ಷಯಂ ॥
ನಿನಾಯಪುತ್ರಂಚ ಘಟೋತ್ಕಚಸ್ಯ ನಿಷ್ಕ್ಯಂ ಪುರಾಯೋಂಜನವರ್ಮನಾಮಕಃ ॥೨೪೩॥

ಸಃ – ಆ ಅಶ್ವತ್ಥಾಮರು, ಮಹಾಶರಾನ್ – ಮಹತ್ತಾದ ಬಾಣಗಳನ್ನು, ಕ್ಷರನ್ ಸನ್ – ಸುರಿಸುವವರಾಗಿ, ಕ್ಷಣಮಾತ್ರತಃ – ಕ್ಷಣಮಾತ್ರದಿಂದ, ತಾಂ ಅಕ್ಷೌಹಿಣೀಂ — ಆ ಅಕ್ಷೌಹಿಣೀ ಸೈನ್ಯವನ್ನು, ತಾನ್ ರಾಕ್ಷಸಾನ್— ಲಕ್ಷ ಸಂಖ್ಯಾಕ

ದರಾ ರಾಕ್ಷಸರನ್ನೂ ಕೂಡ, ಕ್ಷಯಂ – ನಾಶವನ್ನು, ನಿನಾಯ – ಹೊಂದಿಸಿಕೊಟ್ಟನು. ಪುರಾ – ಹಿಂದೆ, ಯಃ – ಯಾವನು, ಅಜಂನವರ್ಮ ನಾಮಕಃ–ಅಂಜನವರ್ಮನೆಂದು ಹೆಸರುಳ್ಳವನಿದ್ದನೋ, ತಂ–ಅಂತಹ, ನಿಷ್ಕ್ಯಂ– ನಿಷ್ಕ್ಯನೆಂದು ಹೆಸರುಳ್ಳ, ಘಟೋತ್ಕಚಸ್ಯ—ಘಟೋತ್ಕಚನ, ಪ್ರತ್ರಂಚ – ಮಗನನ್ನೂಕೂಡ, ಕ್ಷಯಂ ನಿನಾಯ – ನಾಶವನ್ನು ಹೊಂದಿಸಿದನು. ॥೨೪೩॥

ನಿರೀಕ್ಷ್ಯ ಸೇನಾಂ ಸ್ವಸುತಂಚ ಪಾತಿತಂ ಘಟೋತ್ಕಚೋದ್ರೋಣಸುತಂ ಶರೇಣ ॥
ವಿವ್ಯಾಧಗಾಢಂ ಸಸುವಿಹ್ವಲೋಧ್ವಜಂ ಸಮಾಶ್ರಿತಶ್ಚಾಶುಸಸಂಜ್ಞಕೋಽಭವತ್ ॥೨೪೪॥

ಘಟೋತ್ಕಚಃ—ಘಟೋತ್ಕಚನು, ಸೇನಾಂ–ಅಶ್ವತ್ಥಾಮರಿಂದ ಕೊಲ್ಲಲ್ಪಟ್ಟ ಸೇನೆಯನ್ನು, ಪಾತಿತಂ–ಕೊಲ್ಲಲ್ಪಟ್ಟ, ಸ್ವಸುತಂಚ– ತನ್ನ ಮಗನನ್ನೂ ಕೂಡ, ನಿರೀಕ್ಷ್ಯ—ನೋಡಿ, ದ್ರೋಣಸುತಂ— ಅಶ್ವತ್ಥಾಮರನ್ನು, ಶರೇಣ– ಬಾಣದಿಂದ, ಗಾಢಂ — ದೃಢವಾಗಿ, ವಿವ್ಯಾಧ– ಹೊಡೆದನು, ಸುವಿಹ್ವಲಃ—ಅತ್ಯಂತ ಕಳವಳಗೊಂಡ ಅಶ್ವತ್ಥಾಮರು, ಧ್ವಜಂ– ಪತಾಕೆಯನ್ನು, ಸಮಾಶ್ರಿತಸ್ಸನ್ — ಆಶ್ರಯಿಸಿದವರಾಗಿ, ಆಶು– ಕೂಡಲೇ, ಸಸಂಜ್ಞಕಃ — ಪ್ರಜ್ಞೆಯಿಂದ ಕೂಡಿದವರು, ಅಭವತ್–ಆದರು. ॥೨೪೪॥

ಉತ್ಥಾಯಬಾಣಂ ಯಮದಂಡಕಲ್ಪಂ ಸಂಧಾಯಚಾಪೇ ಪ್ರವಿಕೃಷ್ಯರಾಕ್ಷಸೇ ॥
ಮುಮೋಚತೇನಾಭಿಹತಃ ಪಪಾತವಿನಷ್ಟಸಂಜ್ಞಃ ಸ್ವರಥೇಘಟೋತ್ಕಚಃ ॥೨೪೫॥

ಉತ್ಥಾಯ — ಅಶ್ವತ್ಥಾಮರು ಎದ್ದು, ಯಮದಂಡಕಲ್ಪಂ – ಯಮನದಂಡಕ್ಕೆ ಸಮಾನವಾದ, ಬಾಣಂ – ಶರವನ್ನು, ಚಾಪೇ — ಧನುಸ್ಸಿನಲ್ಲಿ, ಸಂಧಾಯ – ಇಟ್ಟು, ಪ್ರವಿಕೃಷ್ಯ — ಎಳೆದು, ರಾಕ್ಷಸೇ — ಘಟೋತ್ಕಚನಲ್ಲಿ, ಮುಮೋಚ— ಬಿಟ್ಟನು. ತೇನ — ಆ ಬಾಣದಿಂದ, ಅಭಿಹತಃ — ಹೊಡೆಯಲ್ಪಟ್ಟ, ಘಟೋತ್ಕಚಃ — ಘಟೋತ್ಕಚನು, ವಿನಷ್ಟಸಂಜ್ಞಃ–ನಷ್ಟವಾದ ಜ್ಞಾನವುಳ್ಳವನಾಗಿ ಅಂದರೆ ಮೂರ್ಛಿತನಾಗಿ, ಸ್ವರಥೇ–ತನ್ನ ರಥದಲ್ಲಿ, ಪಪಾತ–ಬಿದ್ದನು. ॥೨೪೫॥

ವಿಮೂರ್ಛಿತಂ ಸಾರಥಿರಸ್ಯದೂರಂ ನಿನಾಯಯುದ್ಧಾಜ್ಜಗತೋಽಭಿಪಶ್ಯತಃ ॥
ದ್ರೌಣಿಶ್ಚಸೇನಾಂ ನಿಶಿತೈಃಶರೋತ್ತಮೈಃ ವ್ಯದ್ರಾವಯತ್ಪಾಂಡವ ಸೋಮಕಾನಾಂ ॥೨೪೬॥

ಅಸ್ಯ – ಈ ಘಟೋತ್ಕಚನ, ಸಾರಥಿಃ— ಸಾರಥಿಯು, ವಿಮೂರ್ಛಿತಂ – ಚೆನ್ನಾಗಿ ಮೂರ್ಛೆಯನ್ನು ಹೊಂದಿದ ಘಟೋತ್ಕಚನನ್ನು, ಯುದ್ಧಾತ್ – ಯುದ್ಧಸ್ಥಾನದಿಂದ, ದೂರಂ – ದೂರಪ್ರದೇಶವನ್ನು ಕುರಿತು, ಜಗತಃ – ಲೋಕವು, ಅಭಿಪಶ್ಯತಃಸತಃ — ನೋಡುತ್ತಿರುವಾಗಲೇ, ನಿನಾಯ – ಕರೆದುಕೊಂಡು ಹೋದನು. ದ್ರೌಣಿಶ್ಚ – ಅಶ್ವತ್ಥಾಮರು, ಪಾಂಡವಸೋಮಕಾನಾಂ — ಪಾಂಡವರ ಮತ್ತು ಪಾಂಚಾಲರ, ಸೇನಾಂ — ಸೈನ್ಯವನ್ನು, ನಿಶಿತೈಃ – ಹರಿತಗಳಾದ, ಶರೋತ್ತಮೈಃ – ಶ್ರೇಷ್ಠ ಬಾಣಗಳಿಂದ, ವ್ಯದ್ರಾವಯತ್ ಓಡಿಸಿದರು. ॥೨೪೬॥

ಸಂಜ್ಞಾಮವಾಪ್ಯಾಥಘಟೋತ್ಕಚೋಽಪಿ ಕ್ರುದ್ಧೋಽವಿಶತ್ಕೌರವಸೈನ್ಯಮಾಶು ॥
ವಿದ್ರಾವಯಾಮಾಸಚ ಬಾಣವರ್ಷೈಃ ಪ್ರಕಂಪಯಾಮಾಸ ಮಹಾರಥಾಂಸ್ತದಾ ॥೨೪೭॥

ಅಥ – ಅನಂತರ, ಘಟೋತ್ಕಚೋಪಿ – ಘಟೋತ್ಕಚನೂ ಕೂಡ, ಸಂಜ್ಞಾಂ— ಪ್ರಜ್ಞೆಯನ್ನು, ಅವಾಪ್ಯ – ಹೊಂದಿ, ಕ್ರುದ್ಧಸ್ಸನ್ — ಕುಪಿತನಾಗಿ, ಆಶು – ಕೂಡಲೇ, ಕೌರವಸೈನ್ಯಂ – ಕೌರವರಸೈನ್ಯವನ್ನು, ಅವಿಶತ್ – ಪ್ರವೇಶಿಸಿದನು. ತದಾ—ಆಗ, ಬಾಣವರ್ಷೈಃ – ಶರಗಳವೃಷ್ಟಿಗಳಿಂದ, ಮಹಾರಥಾನ್—ಮಹಾರಥಿಕರನ್ನು, ಪ್ರಕಂಪಯಾಮಾಸ— ಅಲುಗಾಡಿಸಿದನು, ವಿದ್ರಾವಯಾಮಾಸ ಚ—ಓಡಿಸಿದನು. ॥೨೪೭॥

ತದೈವಪಾರ್ಥಂ ಪ್ರತಿಯೋದ್ಧುಮಾಗತಂ ವೈಕರ್ತನಂ ವೀಕ್ಷ್ಯ ಜಗತ್ಪತಿರ್ಹರಿಃ ॥
ಘಟೋತ್ಕಚಂ ಪ್ರಾಹಿಣೋಚ್ಛಕ್ತಿಮುಗ್ರಾಂ ತಸ್ಮಿನ್ಮೋಕ್ತುಂ ಪಾರ್ಥರಕ್ಷಾರ್ಥಮೇವ ॥೨೪೮॥

ತದೈವ – ಆಗಲೇ, ಜಗತ್ಪತಿಃ – ಲೋಕದೊಡೆಯನಾದ, ಹರಿಃ—ಶ್ರೀಕೃಷ್ಣನು, ಪಾರ್ಥಂಪ್ರತಿ—ಅರ್ಜುನನನ್ನು ಕುರಿತು, ಯೋದ್ಧುಂ—ಯುದ್ಧಕ್ಕಾಗಿ, ಆಗತಂ – ಬಂದಿರುವ, ವೈಕರ್ತನಂ – ಕರ್ಣನನ್ನು, ವೀಕ್ಷ್ಯ—ನೋಡಿ, ಪಾರ್ಥ-ರಕ್ಷಾರ್ಥಮೇವ — ಅರ್ಜುನನನ್ನು ರಕ್ಷಿಸುವುದಕ್ಕಾಗಿಯೇ, ಉಗ್ರಾಂ — ಕ್ರೂರವಾದ, ಶಕ್ತಿಂ – ಶಕ್ತ್ಯಾಯುಧವನ್ನು, ತಸ್ಮಿನ್—ಆ ಘಟೋತ್ಕಚನಲ್ಲಿ, ಮೋಕ್ತುಂ—ಬಿಡುವುದಕ್ಕಾಗಿ, ಘಟೋತ್ಕಚಂ – ಘಟೋತ್ಕಚನನ್ನು, ಪ್ರಾಹಿಣೋತ್ – ಕರ್ಣನ ಹತ್ತಿರ ಕಳುಹಿಸಿದನು. ॥೨೪೮॥

ಸಕರ್ಣಮಾಹೂಯ ಯುಯೋಧತೇನ ತಸ್ಮಾನು ದುರ್ಯೋಧನಪೂರ್ವಕಾಶ್ಚಯೇ ॥
ದ್ರೋಣೇನಚೈತಾನ್ಸಮರೇಸ ಏಕೋನಿವಾರಯಾಮಾಸ ಮಮರ್ದಚಾಧಿಕಂ ॥೨೪೯॥

ಸಃ – ಆ ಘಟೋತ್ಕಚನು, ಕರ್ಣಂ—ಕರ್ಣನನ್ನು, ಆಹೂಯ – ಕರೆದು ತೇನ—ಆ ಕರ್ಣನಿಂದ, ಯುಯೋಧ — ಯುದ್ಧಮಾಡಿದನು, ತಸ್ಮಾನು-ಆ ಕರ್ಣನನ್ನು ಅನುಸರಿಸಿ ಬಂದಿರುವ, ದ್ರೋಣೇನ-ದ್ರೋಣರಿಂದ, ಸಹ-ಕೂಡಿಕೊಂಡು ಯೇ— ಯಾವ, ದುರ್ಯೋಧನಪೂರ್ವಕಾಃ — ದುರ್ಯೋಧನನೇ ಮೊದಲಾದವರೋ, ಏತಾಂಶ್ಚ – ಇವರನ್ನೂ ಕೂಡ, ಸಮರೇ - ಯುದ್ಧದಲ್ಲಿ, ಸ ಏಕಃ – ಅವನೊಬ್ಬನೇ, ನಿವಾರಯಾಮಾಸ-ತಡೆದನು, ಅಧಿಕಂ — ಚೆನ್ನಾಗಿ, ಮಮರ್ದಚ – ಮರ್ದಿಸಿದನು. ॥೨೪೯॥

ಭಾ. ಅ. ೨೩೪—೨೪೭ ಶ್ರೀಭೀಮರು ಕರ್ಣನ ಎದುರಿನಲ್ಲಿಯೇ ಮತ್ತೂ ಮತ್ತೂ ಹೆಚ್ಚು ಸೈನ್ಯವನ್ನು ಸಂಹರಿಸಿದರು. ಕರ್ಣನು ಭೀಮರನ್ನು ಬಿಟ್ಟುಕೊಟ್ಟು ಸಹದೇವನ ಹತ್ತಿರ ಹೋದನು. ಅವನನ್ನು ವಿರಥನನ್ನಾಗಿ ಮಾಡಿ, ತನ್ನ ಬಿಲ್ಲನ್ನು ಅವನ ಕೊರಳಿನಲ್ಲಿ ಹಾಕಿ ಬಹು ಹೀಯಾಳಿಸಿದನು. ಆಗ ಸಹದೇವನಿಗೆ ತುಂಬಾ ಬೇಸರವಾಗಿ ಯುದ್ಧವೇ ಬೇಡವೆನ್ನುವಂತೆ ಆಗಿದೆ. ಕರ್ಣನು ತಾಯಿ ಕುಂತಿಗೆ ಕೊಟ್ಟ (ಅರ್ಜುನನನ್ನು ಬಿಟ್ಟು ಬೇರೆ ಯಾರನ್ನೂ ಸಂಹರಿಸುವದಿಲ್ಲ ಎಂಬ) ವಚನವನ್ನು ನೆನಪಿಸಿಕೊಂಡು ಸಹದೇವನನ್ನು ಸಂಹರಿಸಲು ಇಚ್ಛಿಸಲಿಲ್ಲ. ಪಾಂಡವ ಸೈನ್ಯವನ್ನು ಸಂಹರಿಸಿದನು. ಅಶ್ವತ್ಥಾಮರೂ ಕೂಡ ಸಂಹರಿಸುತ್ತಿದ್ದರು. ಆಗ ಪಾಂಡವಸೈನ್ಯವು ಮೃತ್ಯುದೇವತೆಯಿಂದ ಪೀಡಿತವಾದಂತೆ ಆಗಿತ್ತು. ಇದನ್ನು ನೋಡಿದ ಘಟೋತ್ಕಚನು ಅಶ್ವತ್ಥಾಮರನ್ನು ಯುದ್ಧಕ್ಕಾಗಿ ಆಹ್ವಾನಿಸಿದನು. ಆಗ ಅಶ್ವತ್ಥಾಮರು 'ಹೇ ಮಂಗು, ಘಟೋತ್ಕಚನೇ, ನಿನ್ನ ತಂದೆಯಾದ ನನ್ನ ಹತ್ತಿರ ಯುದ್ಧ ಮಾಡಬೇಡ ನಡಿ' ಎಂದರು. ನೀನು ನನ್ನ ತಂದೆಯಲ್ಲವೇ ಅಲ್ಲ. ನನ್ನ ತಂದೆಯು ಗೆಳೆಯನೇನೋ ಅಹುದು. ಆದರೆ ನಮ್ಮ ಶತ್ರುಗಳಾದ ಕೌರವರನ್ನು ಆಶ್ರಯಿಸಿಕೊಂಡಿದ್ದರಿಂದ, ಅವರ ಪಕ್ಷದಲ್ಲಿದ್ದರಿಂದ ನೀನು ನನಗೆ ವೈರಿಯೂ ಆಗಿರುವಿ ಎಂದು ಘಟೋತ್ಕಚನು ಹೇಳಿದಾಗ ನಾನು ನಿನ್ನ ಅರಿಯಾಗುವ ದಾದರೆ ನಾನು ಅದರಂತೆಯೇ ಮಾಡುವೆನು ನೋಡು ಎಂದು ಹೇಳಿ, ಇಂದ್ರನ ಧನುಸ್ಸಿನಂತಿರುವ ತಮ್ಮ ಧನುಸ್ಸನ್ನು ಟೇಂಕಾರ ಮಾಡಿ ಬಾಣಸಮೂಹವನ್ನು ಸುರಿಸುತ್ತಾ ಘಟೋತ್ಕಚನ ಹತ್ತಿರ ಅಶ್ವತ್ಥಾಮರು ಯುದ್ಧಕ್ಕೆ ಬಂದರು. ಘಟೋತ್ಕಚನು ಲಕ್ಷಸಂಖ್ಯಾಕರಾಕ್ಷಸರಿಂದ ಕೂಡಿಕೊಂಡು, ಪರಾಕ್ರಮಿಗಳಾದ ಪದಾತಿಗಳಿಂದ ಕೂಡಿ, ಒಟ್ಟು ಅಕ್ಷೌಹಿಣೀ ಸೈನ್ಯದಿಂದ ಕೂಡಿ ಬಂದು ಅಶ್ವತ್ಥಾಮರನ್ನು ಪೀಡಿಸಿದನು. ಹೀಗೆ ಬಾಣಪ್ರಹಾರಗಳಿಂದ ಪೀಡಿತರಾದ ಅಶ್ವತ್ಥಾಮರು ಕಣ್ಣುಗಳನ್ನು ತಿರುಗಿಸುತ್ತಾ ಸಿಟ್ಟಿನಿಂದ ಬಹುಬಾಣ ಪರಂಪರೆಯನ್ನೇ ಬಿಡುತ್ತಾ ಕತ್ತಲೆಯನ್ನೇ ಉಂಟುಮಾಡಿದರು. ಆಗ ಅವರು ಕ್ಷಣಮಾತ್ರದಲ್ಲಿ ಅಕ್ಷೌಹಿಣೀ ಸೈನ್ಯವನ್ನೂ, ರಾಕ್ಷಸರನ್ನೂ ಯಮಲೋಕಕ್ಕೆ ಕಳಿಸಿದರು. ಅಷ್ಟಲ್ಲದೇ ಘಟೋತ್ಕಚನ ಮಗನಾದ, ಹಿಂದೆ ಅಂಜನವರ್ಮ ಎಂಬ ಹೆಸರುಳ್ಳ ನಿಷ್ಠ್ಯನೆಂಬವನನ್ನೂ ಕೂಡ ಸಂಹರಿಸಿದರು. ಇದನ್ನೆಲ್ಲ ನೋಡಿದ ಘಟೋತ್ಕಚನು ಅಶ್ವತ್ಥಾಮರನ್ನು ಘಟ್ಟಿಯಾಗಿ ಬಾಣದಿಂದ ಹೊಡೆದನು. ಆಗ ಆ ಪೆಟ್ಟಿನಿಂದ ತುಂಬಾ ನೋವನ್ನು ಹೊಂದಿ ಬೀಳುತ್ತಾ ಧ್ವಜವನ್ನು ಹಿಡಿದುಕೊಂಡು ಮೂರ್ಛಿತರಾದವರು ಪುನಃ ಕೂಡಲೇ ಎಚ್ಚತ್ತು, ಎದ್ದು, ಯಮದಂಡ

ಸದೃಶವಾದ ಬಾಣವನ್ನು ಘಟೋತ್ಕಚನಿಗೆ ಬಿಟ್ಟರು. ಅದರಿಂದ ಮೂರ್ಛಿತನಾಗಿ ತನ್ನ ರಥದಲ್ಲಿ ಘಟೋತ್ಕಚನು ಬಿದ್ದನು. ಆಗ ಸಾರಥಿಯು ರಥವನ್ನು ದೂರಕ್ಕೆ ತೆಗೆದುಕೊಂಡು ಹೋದನು. ಅಶ್ವತ್ಥಾಮರು ಪಾಂಡವರ ಪಾಂಚಾಲರ ಸೈನ್ಯವನ್ನು ಓಡಿಸುತ್ತಲೇ ಇದ್ದರು. ಕೆಲ ಸಮಯದ ನಂತರ ಘಟೋತ್ಕಚನು ಎಚ್ಚರಗೊಂಡು ಕೌರವ ಸೈನ್ಯವನ್ನು ಪ್ರವೇಶಿಸಿ ಮಹಾ ಭಯಂಕರ ಯುದ್ಧ ಮಾಡಿ ಸೈನ್ಯವನ್ನು ಓಡಿಸಿ ಮಹಾರಥಿಕರನ್ನೂ ಕೂಡ ಕಂಗೆಡಿಸಿದನು.

ತೇಬಾಧ್ಯಮಾನಾ ಬಹುಶೋಬಲೀಯಸಾ ಕರ್ಣಂಪುರೋಧಾಯತಮಭ್ಯಯೋಧಯನ್ ॥
ನವಿವ್ಯಥೇತತ್ರರಣೇ ಸಕರ್ಣಃ ಸ್ವವೀರ್ಯಮಾಸ್ಥಾಯ ಮಹಾಸ್ತ್ರವೇತ್ತಾ ॥೨೫೦॥

ಬಲೀಯಸಾ – ಬಲಿಷ್ಠನಾದ ಘಟೋತ್ಕಚನಿಂದ, ಬಹುಶಃ– ಅನೇಕಸಲ, ಬಾಧ್ಯಮಾನಾಃ– ಪೀಡಿಸಿಕೊಳ್ಳಲ್ಪಡುವ, ತೇ– ಆ ದುರ್ಯೋಧನಾದಿಗಳು, ಕರ್ಣಂ– ಕರ್ಣನನ್ನು, ಪುರೋಧಾಯ – ಮುಂದೆಮಾಡಿಕೊಂಡು, ತಂ– ಆ ಘಟೋತ್ಕಚನನ್ನು ಕುರಿತು, ಅಭ್ಯಯೋಧಯನ್ – ಯುದ್ಧಮಾಡಿದರು. ತತ್ರರಣೇ— ಆ ಯುದ್ಧದಲ್ಲಿ, ಮಹಾಸ್ತ್ರವೇತ್ತಾ– ಶ್ರೇಷ್ಠ ಅಸ್ತ್ರಗಳನ್ನು ತಿಳಿದಿರುವ, ಸ ಕರ್ಣಃ–ಆ ಕರ್ಣನು, ಸ್ವವೀರ್ಯಮಾಸ್ಥಾಯ—ತನ್ನ ಸಾಮರ್ಥ್ಯವನ್ನವಲಂಬಿಸಿ, ನವಿವ್ಯಥೇ— ದುಃಖಿಪಡಲಿಲ್ಲ. ॥೨೫೦॥

ನಿವಾರಯಾಮಾಸಗುರೋಃ ಸುತಂ ತದಾ ಭೀಮಸ್ತ್ರಿಗರ್ತಾಂಶ್ಚತಮನ್ಯುನಂದನಃ ॥
ಅಲಂಬಲೋನಾಮ ತದೈವ ರಾಕ್ಷಸಃಸಮಾಸದದ್ಭೀಮಸುತಂ ನಿಹಂತುಂ ॥೨೫೧॥

ತದಾ – ಆಗ, ಭೀಮಃ– ಭೀಮನು, ಗುರೋಃಸುತಂ — ದ್ರೋಣಪುತ್ರರಾದ ಅಶ್ವತ್ಥಾಮರನ್ನು, ನಿವಾರಯಾ – ಮಾಸ— ತಡೆದನು, ಶತಮನ್ಯುನಂದನಃ— ಇಂದ್ರನಮಗನಾದ ಅರ್ಜುನನು, ತ್ರಿಗರ್ತಾನ್ — ತ್ರಿಗರ್ತರನ್ನು ತಡೆದನು. ತದೈವ – ಆಗಲೇ, ಅಲಂಬಲೋನಾಮ – ಅಲಂಬಲನೆಂದು ಪ್ರಸಿದ್ಧನಾದ, ರಾಕ್ಷಸಃ— ರಾಕ್ಷಸನು, ಭೀಮಸುತಂ—ಭೀಮ ಪುತ್ರನಾದ ಘಟೋತ್ಕಚನನ್ನು, ನಿಹಂತುಂ— ಕೊಲ್ಲುವುದಕ್ಕಾಗಿ, ಸಮಾಸದತ್— ಹೊಂದಿದನು. ॥೨೫೧॥

ಯುಧ್ವಾಪ್ರಗೃಹ್ಯೈನಮಥೋನಿಪಾತ್ಯ ಘಟೋತ್ಕಚೋ ಭೂಮಿತಲೇsಸಿನಾಸ್ಯ ॥
ಉತ್ಕೃತ್ಯ ಶೀರ್ಷಂತು ಸುಯೋಧನೇsಕ್ಷಿಪದ್ವಿಷೇದುರತ್ರಾಖಿಲ ಭೂಮಿಪಾಲಾಃ ॥೨೫೨॥

ಅಥೋ—ಅನಂತರ, ಘಟೋತ್ಕಚಃ—ಘಟೋತ್ಕಚನು, ಯುಧ್ವಾ—ಅಲಂಬಲನಿಂದ ಯುದ್ಧ ಮಾಡಿ, ಏನಂ— ಈ ಅಲಂಬಲನನ್ನು, ಪ್ರಗೃಹ್ಯ – ಹಿಡಿದು, ಭೂಮಿತಲೇ—ಭೂತಲದಲ್ಲಿ, ನಿಪಾತ್ಯ—ಕೆಡವಿಹಾಕಿ, ಅಸಿನಾ—ಖಡ್ಗದಿಂದ ಅಸ್ಯ— ಈ ಅಲಂಬಲನ, ಶೀರ್ಷಂ — ತಲೆಯನ್ನು, ಉತ್ಕೃತ್ಯ — ಕತ್ತರಿಸಿ, ಸುಯೋಧನೇ — ದುರ್ಯೋಧನನ ಮೇಲೆ, ಅಕ್ಷಿಪತ್–ಬೀಸಾಡಿದನು. ಅತ್ರ– ಈ ಘಟೋತ್ಕಚನ ಸಾಮರ್ಥ್ಯ ವಿಷಯದಲ್ಲಿ, ಅಖಿಲಭೂಮಿಪಾಲಾಃ—ಎಲ್ಲಾರಾಜರು, ವಿಷೇದುಃ – ದುಃಖಿಪಟ್ಟರು. ॥೨೫೨॥

ಅಲಾಯುಧೋsಥಾಗಮದುಗ್ರವೀರ್ಯೋ ನರಾಶನಸ್ತಂ ಸಘಟೋತ್ಕಚೋsಭ್ಯಯಾತ್ ॥
ಯುಧ್ವಾಮುಹೂರ್ತಂ ಸತುತೇನಭೂಯೌ ನಿಪಾತ್ಯತಂ ಯುಜ್ಜಪಶುಂಚಕಾರ ॥೨೫೩॥

ಅಥ— ಅನಂತರ, ಉಗ್ರವೀರ್ಯಃ— ಕ್ರೂರವಾದಪರಾಕ್ರಮಳ್ಳ, ನರಾಶನಃ– ಮನುಷ್ಯರನ್ನು ತಿನ್ನತಕ್ಕರಾಕ್ಷಸನಾದ, ಅಲಾಯುಧಃ—ಅಲಾಯುಧನು, ಆಗಮತ್— ಬಂದನು. ಸ ಘಟೋತ್ಕಚಃ—ಆ ಘಟೋತ್ಕಚನು, ತಂ– ಆ ಅಲಾಯುಧನನ್ನು, ಅಭ್ಯಯಾತ್—ಎದುರಾಗಿ ಬಂದನು. ಸತು– ಆ ಘಟೋತ್ಕಚನಾದರೂ, ಮುಹೂರ್ತಂ–ಯರಡು ಘಳಿಗೆಯ

ಕಾಲ, ತೇನ—ಆ ಅಲಾಯುಧನಿಂದ, ಯುದ್ಧಾ – ಯುದ್ಧಮಾಡಿ, ಭೂಮೌ —ಭೂಮಿಯಲ್ಲಿ, ನಿಪಾತ್ಯ, ಕೆಡವಿಹಾಕಿ, ತಂ—ಆ ಅಲಾಯುಧನನ್ನು, ಯುಜ್ಞಪಶುಂ – ಯುದ್ಧಾಖ್ಯಯಜ್ಞದಲ್ಲಿ ಪಶುವನ್ನಾಗಿ, ಚಕಾರ– ಮಾಡಿದನು. ॥೨೫೩॥

ಅಥಾಸ್ಯ ಶಿರಉತ್ಕೃತ್ಯ ಕ್ರೋಧಾದ್ದುರ್ಯೋಧನೋರಸಿ ॥
ಚಿಕ್ಷೇಪ ತೇನಸಂಭ್ರಾಂತಾಃ ಸರ್ವೇದುರ್ಯೋಧನಾದಯಃ ॥೨೫೪॥

ಅಥ–ಅನಂತರ ಘಟೋತ್ಕಚನು, ಅಸ್ಯ–ಈ ಅಲಾಯುಧನ, ಶಿರಃ–ತಲೆಯನ್ನು, ಉತ್ಕೃತ್ಯ-ಕತ್ತರಿಸಿ, ಕ್ರೋಧಾತ್-ಕೋಪದಿಂದ, ದುರ್ಯೋಧನೋರಸಿ – ದುರ್ಯೋಧನನ ಎದೆಯಮೇಲೆ, ಚಿಕ್ಷೇಪ – ಬೀಸಾಡಿದನು. ತೇನ – ಆ ಘಟೋತ್ಕಚನ ಕರ್ಮದಿಂದ, ಸರ್ವೇ — ಎಲ್ಲಾ, ದುರ್ಯೋಧನಾದಯಃ – ದುರ್ಯೋಧನನೇ ಮೊದಲಾದವರು, ಸಂಭ್ರಾಂತಾಃ – ಕಳವಳಗೊಂಡರು. ॥೨೫೪॥

ಘಟೋತ್ಕಚ ಬಲಖ್ಯಾತ್ಯೈ ಸಮರ್ಥೇನಾಪಿಯೋರಣೇ ॥
ನಹತೋಭೀಮಸೇನೇನಹತೇಽಸ್ಮಿನ್ಭೈಮಸೇನಿನಾ ॥
ಸರ್ವೇಸಂಚೋದಯಾಮಾಸುಃ ಕರ್ಣಂಶಕ್ತಿವಿಮೋಕ್ಷಣೇ ॥೨೫೫॥

ಘಟೋತ್ಕಚ ಬಲಖ್ಯಾತ್ಯೈ — ಘಟೋತ್ಕಚನ ಸಾಮರ್ಥ್ಯವನ್ನು ಪ್ರಕಟೀಕರಿಸುವುದಕ್ಕೋಸ್ಕರ, ಸಮರ್ಥೇನಾಪಿ-ಸಮರ್ಥನಾದರೂ ಕೂಡ, ಭೀಮಸೇನೇನ — ಭೀಮಸೇನನಿಂದ, ಯಃ— ಯಾವನು, ರಣೇ — ಯುದ್ಧದಲ್ಲಿ, ನ ಹತಃ — ಕೊಲ್ಲಲ್ಪಡಲ್ಲಿಲ್ಲವೋ, ಅಸ್ಮಿನ್—ಈ ಅಲಾಯುಧನು, ಭೈಮಸೇನಿನಾ – ಭೀಮನ ಮಗನಾದ ಘಟೋತ್ಕಚನಿಂದ, ಹತೇಸತಿ-ಕೊಲ್ಲಲ್ಪಡುತ್ತಿರಲು, ಸರ್ವೇ — ಎಲ್ಲಾ ದುರ್ಯೋಧನಾದಿಗಳು, ಅಸ್ಮಿನ್ — ಈ ಘಟೋತ್ಕಚನಲ್ಲಿ, ಶಕ್ತಿವಿಮೋಕ್ಷಣೇ-ಶಕ್ತ್ಯಾಯುಧವನ್ನು ಬಿಡುವುದರಲ್ಲಿ, ಕರ್ಣಂ – ಕರ್ಣನನ್ನು, ಸಂಚೋದಯಾಮಾಸುಃ— ಪ್ರೇರಿಸಿದರು. ॥೨೫೫॥

ಅಸ್ಮಿನ್ಹತೇ ಹತಂಸರ್ವಂ ಕಿಂನಃ ಪಾರ್ಥಃ ಕರಿಷ್ಯತಿ ॥
ಏವಂ ಸಂಚೋದ್ಯಮಾನಃ ಸಧಾರ್ತರಾಷ್ಟ್ರೈಃ ಪುನಃ ಪುನಃ ॥೨೫೬॥

ಹೈಡಿಂಬೇನಾರ್ದ್ಯಮಾನೈಶ್ಚ ಸ್ವಯಂಚಭೃಶಪೀಡಿತಃ ॥
ಆದತ್ತಶಕ್ತಿಂ ವಿಪುಲಾಂ ಪಾಕಶಾಸನಸಮ್ಮತಾಂ ॥೨೫೭॥

ಅಸ್ಮಿನ್ – ಈ ಘಟೋತ್ಕಚನು, ಹತೇಸತಿ – ಸಾಯುತ್ತಿರಲು, ಸರ್ವಂ – ಎಲ್ಲಾ ಶತ್ರು ಸಮೂಹವು, ಹತಂ – ಸತ್ತಂತೆಯೇ, ಪಾರ್ಥಃ—ಅರ್ಜುನನು, ನಃ – ನಮಗೆ, ಕಿಂಕರಿಷ್ಯತಿ—ಏನನ್ನು ಮಾಡುವನು. ಏವಂ – ಈ ರೀತಿಯಾಗಿ, ಹೈಡಿಂಬೇನ – ಘಟೋತ್ಕಚನಿಂದ, ಅರ್ದ್ಯಮಾನೈಃ – ಪೀಡಿಸಿಕೊಳ್ಳಲ್ಪಡತಕ್ಕ, ಧಾರ್ತರಾಷ್ಟ್ರೈಃ – ದುರ್ಯೋಧನಾದಿಗಳಿಂದ, ಪುನಃ ಪುನಃ – ಮತ್ತೂ ಮತ್ತೂ, ಸಂಚೋದ್ಯಮಾನಃ– ಪ್ರೇರಿಸಿಕೊಳ್ಳಲ್ಪಡತಕ್ಕ, ಸಃ– ಆ ಕರ್ಣನು, ಸ್ವಯಂಚ-ತಾನೂ ಕೂಡ, ಭೃಶಪೀಡಿತಃಸನ್ — ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟವನಾಗಿ, ಪಾಕಶಾಸನಸಮ್ಮತಾಂ – ಇಂದ್ರನಿಗೆ ಸಮ್ಮತವಾದ, ವಿಪುಲಾಂ — ಶ್ರೇಷ್ಠವಾದ, ಶಕ್ತಿಂ– ಶಕ್ತ್ಯಾಯುಧವನ್ನು, ಆದತ್ತ–ಹಿಡಿದುಕೊಂಡನು. ॥೨೫೬॥ ॥೨೫೭॥

ತಾಮುಂಬರಸ್ಥಾಯ ಘಟೋತ್ಕಚಾಯ ಶೈಲೋಪಮಾಯಾತುಲವಿಕ್ರಮಾಯ ॥
ಚಿಕ್ಷೇಪ ಮೃತ್ಯೋರಸನೋಪಮಾಮುಲಂ ಪ್ರಕಾಶಯಂತೀಂ ಪ್ರದಿಶೋದಿಶಶ್ಚ ॥೨೫೮॥

ಅಂಬರಸ್ಥಾಯ — ಆಕಾಶದಲ್ಲಿರುವ, ಶೈಲೋಪಮಾಯ — ಪರ್ವತಕ್ಕೆ ಸದೃಶನಾದ, ಅತುಲವಿಕ್ರಮಾಯ ಘಟೋತ್ಕಚಾಯ — ಅಸದೃಶಪರಾಕ್ರಮವುಳ್ಳ ಘಟೋತ್ಕಚನಿಗೋಸ್ಕರ, ಮೃತ್ಯೋಃ— ಮೃತ್ಯುವಿನ, ರಸನೋಪಮಾಂ — ನಾಲಿಗೆಗೆ ಸದೃಶವಾದ, ಅಲಂ–ಚೆನ್ನಾಗಿ, ದಿಶಃ — ದಿಕ್ಕುಗಳನ್ನು, ಪ್ರದಿಶಶ್ಚ — ವಿದಿಕ್ಕುಗಳನ್ನೂ ಕೂಡ, ಪ್ರಕಾಶಯಂತೀಂ— ಪ್ರಕಾಶಪಡಿಸತಕ್ಕ, ತಾಂ — ಆ ಇಂದ್ರದತ್ತ ಶಕ್ತಿಯನ್ನು, ಚಿಕ್ಷೇಪ — ಕರ್ಣನು ಬೀಸಾಡಿದನು. ॥೨೫೮॥

ನಿರ್ಭಿನ್ನವಕ್ಷಾಃ ಸತಯಾಪಪಾತ ವ್ಯಚೂರ್ಣಯಚ್ಛತ್ರುಬಲಂಹತೋಽಪಿ ॥
ತಸ್ಮಿನ್ಹತೇಜಹೃಷುರ್ಧಾರ್ತರಾಷ್ಟ್ರಾಉಚ್ಚುಕ್ರುಶುಃ ದುಧುವುಶ್ಚಾಂಬರಾಣಿ ॥೨೫೯॥

ಸಃ — ಆ ಘಟೋತ್ಕಚನು, ತಯಾ — ಆ ಶಕ್ತಿಯಿಂದ, ನಿರ್ಭಿನ್ನವಕ್ಷಾಃ ಸನ್ — ಸೀಳಲ್ಪಟ್ಟ ಎದೆಯುಳ್ಳವನಾಗಿ, ಪಪಾತ — ಬಿದ್ದನು. ಹತೋಽಪಿ–ಕೊಲ್ಲಲ್ಪಟ್ಟವನಾದರೂ ಕೂಡ, ಶತ್ರುಬಲಂ–ಶತ್ರುಗಳ ಸೈನ್ಯವನ್ನು, ವ್ಯಚೂರ್ಣಯತ್– ತಾನು ಸಾಯುವಾಗ ತನ್ನ ಪತನದಿಂದ ಪುಡಿ ಮಾಡಿದನು, ತಸ್ಮಿನ್ — ಆ ಘಟೋತ್ಕಚನು, ಹತೇಸತಿ — ಸಾಯುತ್ತಿರಲು, ಧಾರ್ತರಾಷ್ಟ್ರಾಃ — ಕೌರವರು, ಜಹೃಷುಃ — ಸಂತೋಷಗೊಂಡರು, ಉಚ್ಚುಕ್ರುಶುಃ— ಚೆನ್ನಾಗಿ ಆಕ್ರೋಶವನ್ನು ಮಾಡಿದರು. ಅಂಬರಾಣಿ — ವಸ್ತ್ರಗಳನ್ನು, ದುಧುವುಃ— ಹಾರಿಸಿದರು. ॥೨೫೯॥

ತದಾನನರ್ತಕೇಶವಃ ಸಮಾಶ್ಲಿಷಚ್ಚ ಫಲ್ಗುನಂ ॥
ನನಾದ ಶಂಖಮಾಧಮಜ್ಜಹಾಸಚೋರುನಿಃಸ್ವನಃ ॥೨೬೦॥

ತದಾ— ಆಗ, ಕೇಶವಃ — ಶ್ರೀಕೃಷ್ಣನು, ನನರ್ತ — ಕುಣಿದನು. ಫಲ್ಗುನಂ— ಅರ್ಜುನನನ್ನು, ಸಮಶ್ಲಿಷತ್– ಆಲಿಂಗಿಸಿದನು. ಶಂಖಂ — ಶಂಖವನ್ನು, ಅಧಮತ್ — ಊದಿದನು; ನನಾದ — ಸಿಂಹನಾದವನ್ನು ಮಾಡಿದನು; ಉರುನಿಸ್ವನಸ್ಸನ್ — ಉತ್ಕೃಷ್ಟಧ್ವನಿಯುಳ್ಳವನಾಗಿ, ಜಹಾಸ — ನಗೆಯಾಡಿದನು; ॥೨೬೦॥

ತಮುಪೃಚ್ಛದ್ಗುಡಾಕೇಶಃ ಕಿಮೇತದಿತಿದುರ್ಮನಾಃ ॥
ಹತೇಸುತೇಽಗ್ರಜೇಽಸ್ಮಾಕಂ ವೀರೇ ಕಿಂನಂದಸಿಪ್ರಭೋ ॥೨೬೧॥

ತಮಾಹ ಭಗವಾನ್ಕೃಷ್ಣೋದಿಷ್ಟ್ಯಾ ಜೀವಸಿ ಫಲ್ಗುನ ॥
ತ್ವದರ್ಥಂ ನಿಹಿತಾಶಕ್ತಿರ್ವಿಮುಕ್ತಾಸ್ಮಿನ್ನಿ ರಾಕ್ಷಸೇ ॥೨೬೨॥

ಗುಡಾಕೇಶಃ—ನಿದ್ರೆಯನ್ನು ಜಯಿಸಿದ ಅರ್ಜುನನು, ದುರ್ಮನಾಃಸನ್— ದುಃಖದಿಂದ ಕೂಡಿದ ಮನಸ್ಸುಳ್ಳವನಾಗಿ, ಹೇ ಪ್ರಭೋ—ಸ್ವಾಮಿಯಾದ ಶ್ರೀಕೃಷ್ಣನೇ, ಏತತ್ಕಿಂ — ಇದು ಏನು ಆಶ್ಚರ್ಯವು. ಅಸ್ಮಾಕಂ–ನಮ್ಮ, ಅಗ್ರಜೇ– ಜ್ಯೇಷ್ಠನಾದ, ವೀರೇ—ಪರಾಕ್ರಮಿಯಾದ, ಸುತೇ — ಮಗನು, ಹತೇಸತಿ — ಸಾಯುತ್ತಿರಲು, ಕಿಂ — ಏತಕ್ಕಾಗಿ, ನಂದಸಿ — ಸಂತೋಷಪಡುವಿ, ಇತಿ — ಎಂದು, ತಂ — ಆ ಕೃಷ್ಣನನ್ನು, ಅಪೃಚ್ಛತ್, —ಕೇಳಿದನು. ಭಗವಾನ್ — ಷಡ್ಗುಣೈಶ್ವರ್ಯ ಸಂಪನ್ನನಾದ, ಕೃಷ್ಣಃ — ಶ್ರೀಕೃಷ್ಣನು, ಹೇ ಫಲ್ಗುನ —ಎಲೋ ಅರ್ಜುನನೇ, ತ್ವಂ— ನೀನು, ದಿಷ್ಟ್ಯಾ — ದೈವದಿಂದ; ಜೀವಸಿ — ಬದುಕಿಕೊಂಡಿರುವಿ; ತ್ವದರ್ಥಂ — ನಿನಗೋಸ್ಕರವೇ, ನಿಹಿತಾ — ಇಟ್ಟಿರುವ, ಶಕ್ತಿಃ— ಶಕ್ತ್ಯಾಯುಧವು, ಹಿ — ಯಾವಕಾರಣದಿಂದ, ಅಸ್ಮಿನ್ರಾಕ್ಷಸೇ — ಈ ಘಟೋತ್ಕಚನಲ್ಲಿ, ವಿಮುಕ್ತಾ — ಬಿಡಲ್ಪಟ್ಟಿತೋ, ತಸ್ಮಾತ್ — ಆ ಕಾರಣದಿಂದ ನೀನು ಬದುಕಿಕೊಂಡಿರುವಿ; ಆದ್ದರಿಂದಲೇ ಸಂತೋಷ, ಇತಿ — ಎಂದು, ತಂ— ಆ ಫಲ್ಗುನನನ್ನು ಕುರಿತು, ಆಹ — ಹೇಳಿದನು. ॥೨೬೧॥ ॥೨೬೨॥

ಭಾ. ಅ. ೨೪೮ – ೨೬೨ ಈ ಸಮಯದಲ್ಲಿ ಅರ್ಜುನನ ಹತ್ತಿರ ಯುದ್ಧಕ್ಕೆ ಬಂದ ಕರ್ಣನನ್ನು ನೋಡಿ ಅವನು ಶಕ್ತ್ಯಾಯುಧದಿಂದ ಸಹಿತನಾಗಿದ್ದನ್ನೂ ತಿಳಿದ ಶ್ರೀಕೃಷ್ಣನು ಆ ಶಕ್ತ್ಯಾಯುಧವನ್ನು ಘಟೋತ್ಕಚನ ಮೇಲೆ ಹಾಕಿಸಿ ಅರ್ಜುನನ ರಕ್ಷಣೆ ಮಾಡುವದಕ್ಕಾಗಿ ಘಟೋತ್ಕಚನನ್ನು ಕಳುಹಿದನು. ಅವನು ಕರ್ಣನನ್ನು ಆಹ್ವಾನಿಸಿದನು. ನಂತರ ದುರ್ಯೋಧನ, ದ್ರೋಣ ಮೊದಲಾದವರನ್ನೂ ಕೂಡ ಆಹ್ವಾನಿಸಿ ಆ ಎಲ್ಲರ ಒಟ್ಟಿಗೆ ಯುದ್ಧ ಮಾಡಿದನು. ಅವನ ಬಹು ಘೋರ ಯುದ್ಧದಿಂದ ಬಹುಬಾಧೆಯನ್ನು ಹೊಂದಿದ ಅವರೆಲ್ಲರು ಆಗ ಬಾಧೆಯನ್ನು ಹೊಂದದ ಕರ್ಣನನ್ನು ಮುಂದೆ ಮಾಡಿಕೊಂಡು ಯುದ್ಧ ಮಾಡಹತ್ತಿದರು. ಮಹಾಸ್ತ್ರಜ್ಞಾನಿಯಾದ ಕರ್ಣ ತನ್ನ ಪರಾಕ್ರಮದಿಂದ ತಡೆದನು; ಆಗ ಶ್ರೀ ಭೀಮಸೇನರು ಅಶ್ವತ್ಥಾಮಾಚಾರ್ಯರನ್ನು, ಅರ್ಜುನನು ತ್ರಿಗರ್ತ ದೈತ್ಯರನ್ನು ಎದುರಿಸುತ್ತಿದ್ದರು. ಆಗ ಅಲಂಬಲ ಎಂಬ ರಾಕ್ಷಸನು ಘಟೋತ್ಕಚನನ್ನು ಸಂಹರಿಸಲು ಬಂದನು. ಆಗ ಘಟೋತ್ಕಚನು ಅವನನ್ನು ಭೂಮಿಯಲ್ಲಿ ಕೆಡವಿ ಖಡ್ಗದಿಂದ ತಲೆಯನ್ನು ಕತ್ತರಿಸಿ ಅದನ್ನು ದುರ್ಯೋಧನನ ಕಡೆಗೆ ಬೀಸಾಡಿದನು. ಆಗ ಅಲಾಯುಧನೆಂಬ ಮಹಾ ಪರಾಕ್ರಮಿ ರಾಕ್ಷಸನು ಯುದ್ಧಕ್ಕೆ ಬಂದನು. ಅವನ ಸಂಗಡ ಸ್ವಲ್ಪ ಸಮಯ ಯುದ್ಧಮಾಡಿ ಅವನನ್ನೂ ಕೂಡ ಸಂಹರಿಸಿದನು. ಹಾಗೂ ಅವನ ಶಿರಸ್ಸನ್ನೂ ಕೂಡ ದುರ್ಯೋಧನಾದಿಗಳ ಕಡೆ ಬೀಸಾಡಿದನು. ಈ ಎರಡೂ ಸಂದರ್ಭಗಳಲ್ಲಿ ಆ ರುಂಡಗಳನ್ನು ನೋಡಿದ ದುರ್ಯೋಧನಾದಿಗಳೆಲ್ಲರೂ ಹೆದರಿದರು. ಈ ಅಲಾಯುಧನನ್ನು ಈ ಹಿಂದೆ ಭೀಮಸೇನದೇವರು ತಮ್ಮ ಮಗ ಘಟೋತ್ಕಚನು ಸಂಹರಿಸಿ ಕೀರ್ತಿಯನ್ನು ಹೊಂದಲಿಕ್ಕಾಗಿಯೇ ಸಂಹರಿಸಿದ್ದಿಲ್ಲ. ಅಂಥವನು ಈಗ ಘಟೋತ್ಕಚನಿಂದ ಸಂಹೃತನಾದಾಗ ಎಲ್ಲರೂ ಹೆದರಿ ಈ ಘಟೋತ್ಕಚನನ್ನು ಸಂಹರಿಸಿಬಿಡುವದೇ ಒಳ್ಳೆಯದು. ಇವನು ಸತ್ತರೆ ಎಲ್ಲವೂ ಸತ್ತ ಹಾಗೆ: ಅರ್ಜುನನು ಏನು ಮಾಡುತ್ತಾನೆ. ಆದ್ದರಿಂದ ಇವನನ್ನು ಕೊಲ್ಲಲು, ಶಕ್ತ್ಯಾಯುಧವನ್ನು ಬಿಟ್ಟುಬಿಡು ಎಂದು ಕರ್ಣನಿಗೆ ಮೇಲಿಂದಮೇಲೆ ಬಲಾತ್ಕರಿಸುತ್ತಿರಲು, ಕರ್ಣನೂಕೂಡ ತಾನೂ ತುಂಬಾ ಪೀಡಿತನಾದ್ದರಿಂದ, ಇಂದ್ರನಿಗೆ ತುಂಬಾ ಪ್ರಿಯವಾದ ಶಕ್ತ್ಯಾಯುಧವನ್ನು ತೆಗೆದುಕೊಂಡು ದೊಡ್ಡ ಆಕಾರವುಳ್ಳ, ಆಕಾಶದಲ್ಲಿರುವ, ಅತುಲಪರಾಕ್ರಮಿಯಾದ ಘಟೋತ್ಕಚನಿಗೆ ಒಗೆದನು. ಆಗ ಅದರಿಂದ ವಕ್ಷಸ್ಥಲವು ಸೀಳಿ ಬೀಳುತ್ತಾ ಶತ್ರುಸೈನ್ಯದ ಮೇಲೆ ಬಿದ್ದು ಬಹುಸೈನ್ಯವನ್ನು ಪುಡಿ ಮಾಡಿದನು; ತಾನೂ ಸಂಹೃತನಾದನು. ಆಗ ದುರ್ಯೋಧನಾದಿಕೌರವರು ಸಂತೋಷಬಟ್ಟು, ತಮ್ಮ ವಸ್ತ್ರಗಳನ್ನು ಹಾರಾಡಿಸಿದರು. ಶ್ರೀಕೃಷ್ಣನೂ ಕೂಡ ಕುಣಿದಾಡಿ, ಅರ್ಜುನನನ್ನು ಅಪ್ಪಿಕೊಂಡನು; ಶಂಖವನ್ನು ಊದಿದನು; ಜೋರಾಗಿ ನಕ್ಕನು. ಇದನ್ನೆಲ್ಲ ನೋಡಿದ, ದುಃಖಿಯಾದ ಅರ್ಜುನನು 'ನಮ್ಮಲ್ಲರ ಹಿರಿಯ ಮಗನಾದ, ಭೀಮ ಪುತ್ರನಾದ, ವೀರ ಘಟೋತ್ಕಚನು ಸತ್ತರೆ ನೀನು ಸಂತೋಷಬಡುತ್ತಿದ್ದೀಯಲ್ಲ; ಇದೇನಿದು' ಎಂದು ಶ್ರೀಕೃಷ್ಣನಿಗೆ ಅಂದನು. ಆಗ ಶ್ರೀಕೃಷ್ಣನು ಘಟೋತ್ಕಚನು ಸತ್ತದ್ದಕ್ಕೆ ನಾನು ಆನಂದ ಬಡುತ್ತಿಲ್ಲ; ನಿನ್ನನ್ನು ಕೊಲ್ಲಲು ಎಂದು ಕಾಯ್ದಿಟ್ಟಿದ್ದ ಶಕ್ತ್ಯಾಯುಧವನ್ನು ಇವನ ಮೇಲೆ ಒಗೆದು ಕೊಂದದ್ದರಿಂದ ನೀನು ಬದುಕಿದಿ; ದೈವಾನುಗ್ರಹದಿಂದ ಉಳಿದಿ ಎಂದು ನಾನು ಸಂತೋಷ ಪಡುತ್ತಿದ್ದೇನೆ' ಎಂದು ಹೇಳಿದನು.

ತತೋಯುಧಿಷ್ಠಿರೋ ದುಃಖಾದಮರ್ಷಾಚ್ಚಾಭ್ಯವರ್ತತ ॥
ಕರ್ಣಂ ಪ್ರತಿ ತಮೂಹಾಥ ಕೃಷ್ಣದ್ವೈಪಾಯನಃ ಪ್ರಭುಃ ॥೨೬೩॥

ತತಃ— ಅನಂತರ, ಯುಧಿಷ್ಠಿರಃ – ಧರ್ಮರಾಜನು, ದುಃಖಾತ್ —ದುಃಖದಿಂದಲೂ, ಅಮರ್ಷಾಚ್ಚ – ಕರ್ಣನ ಮೇಲಿನಕೋಪದಿಂದಲೂ, ಕರ್ಣಂ ಪ್ರತಿ – ಕರ್ಣನನ್ನು ಕುರಿತು, ಅಭ್ಯವರ್ತತ – ಯುದ್ಧಕ್ಕಾಗಿ ಎದುರಾಗಿ ಬಂದನು; ಪ್ರಭುಃ— ಸಮರ್ಥರಾದ, ಕೃಷ್ಣದ್ವೈಪಾಯನಃ — ವೇದವ್ಯಾಸದೇವರು, ತಂ-ಆ ಧರ್ಮರಾಜನನ್ನು, ಕರಿತ- ಆಹ– ಹೇಳಿದರು. ॥೨೬೩॥

ಯಯಾರ್ಜುನೋನಿಹಂತವ್ಯಸ್ತಯಾಸೌ ರಾಕ್ಷಸೋಹತಃ ॥
ತನ್ಮಾಶುಚಸ್ತ್ವಂ ರಾಜೇಂದ್ರದಿಷ್ಟ್ಯಾಜೀವತಿ ಫಲ್ಗುನಃ ॥
ಇತ್ಯುಕ್ತ್ವಾಪ್ರಯಯೌ ವ್ಯಾಸಸ್ತತೋಯುದ್ಧಮವರ್ತತ ॥೨೬೪॥

ಯಯಾ – ಯಾವ ಶಕ್ತ್ಯಾಯುಧದಿಂದ, ಅರ್ಜುನಃ— ಅರ್ಜುನನು, ನಿಹಂತವ್ಯಃ – ಕೊಲ್ಲಲುಯೋಗ್ಯನೋ ತಯಾ– ಆ ಶಕ್ತಿಯಿಂದ, ಹಿ– ಯಾವಕಾರಣದಿಂದ, ಅಸೌ ರಾಕ್ಷಸಃ – ಈ ಘಟೋತ್ಕಚನು, ಹತಃ— ಕೊಲ್ಲಲ್ಪಟ್ಟನೋ, ತತ್ – ಆ ಕಾರಣದಿಂದ, ಹೇರಾಜೇಂದ್ರ – ಎಲೋರಾಜಶ್ರೇಷ್ಠನೇ, ತ್ವಂ – ನೀನು, ಮಾ ಶುಚಃ–ದುಃಖಿಸಬೇಡ,–ಫಲ್ಗುನಃ– ಅರ್ಜುನನು, ದಿಷ್ಟ್ಯಾ— ದೈವದಿಂದ, ಜೀವತಿ—ಬದುಕಿದ್ದಾನೆ, ಇತಿ – ಈ ರೀತಿಯಾಗಿ ಉಕ್ತ್ವಾ – ಹೇಳಿ, ವ್ಯಾಸಃ – ವೇದವ್ಯಾಸರು, ಪ್ರಯಯೌ–ಹೋದರು. ತತಃ–ಅನಂತರ, ಯುದ್ಧಂ–ಸಮರವು, ಅವರ್ತತ–ಪ್ರಾರಂಭವಾಯಿತು ॥೨೬೪॥

ಭೀಮಾರ್ಜುನಾಭ್ಯಾಮನುಹನ್ಯಮಾನೇಬಲೇಕುರೂಣಾಮಿತರೈಶ್ಚ ಪಾಂಡವೈಃ ॥
ಪ್ರದೀಪಹಸ್ತಾ ಅಥಯೋಧಕಾಶ್ಚ ಸರ್ವೇಪಿ ನಿದ್ರಾವಶಗಾ ಬಭೂವುಃ ॥೨೬೫॥

ಭೀಮಾರ್ಜುನಾಭ್ಯಾಂ – ಭೀಮಾರ್ಜುನರಿಂದ, ಇತರೈಃ – ಭೀಮಾರ್ಜುನರಿಂದ ಇತರರಾದ, ಪಾಂಡವೈಶ್ಚ— ಯುಧಿಷ್ಠಿರಾದಿಗಳಿಂದಲೂ, ಕುರೂಣಾಂ — ಕೌರವರ, ಬಲೇ— ಸೈನ್ಯವು, ಹನ್ಯಮಾನೇಸತಿ ಕೊಲ್ಲಲ್ಪಡುತ್ತಿರಲು, ಅಥ — ಅನಂತರ, ಇತರೈಃ – ಪಾಂಡವರಿಂದ ಇತರರಾದ ಕೌವರರಿಂದ, ಬಲೇ–ಪಾಂಡವರ ಸೈನ್ಯವು, ಹನ್ಯಮಾನೇಸತಿ – ಕೊಲ್ಲಲ್ಪಡುತ್ತಿರಲು, ಇಹ — ಈ ಎರಡು ಸೈನ್ಯಗಳ ಮಧ್ಯದಲ್ಲಿ ಕೆಲವರು ಸತ್ತರು. ಉಳಿದಿರುವ ಪ್ರದೀಪಹಸ್ತಾಃ— ಕೈಯಲ್ಲಿ, ದೀಪವನ್ನು ಹಿಡಿದುಕೊಂಡಿರುವವರೂ, ಸರ್ವೇಯೋಧಕಾಶ್ಚ — ಯುದ್ಧಮಾಡತಕ್ಕವರೆಲ್ಲರೂ, ನಿದ್ರಾವಶಗಾಃ– ನಿದ್ರೆಯ ಪರವಶರು, ಬಭೂವುಃ — ಆದರು. ॥೨೬೫॥

ದೃಷ್ಟ್ವೈವತಾನಾಹಧನಂಜಯಸ್ತದಾಸ್ವಪ್ನ್ಯಂತುಯಾವಚ್ಛಶಿನಃ ಪ್ರಕಾಶಃ ॥
ಇತೀರಿತಾಆಶಿಷಃಫಲ್ಗುನಾಯು ಪ್ರಯುಜ್ಯ ಸರ್ವೇಸುಷುಪುರ್ಯಥಾಸ್ಥಿತಾಃ ॥೨೬೬॥

ಧನಂಜಯಃ — ಅರ್ಜುನನು, ತಾನ್— ನಿದ್ರಾಪರವಶರಾದವರನ್ನು, ದೃಷ್ಟ್ವೈವ– ನೋಡಿಯೇ, ತದಾ—ಆಗ, ಶಶಿನಃ – ಚಂದ್ರನ, ಪ್ರಕಾಶಃ ಯಾವತ್– ಉದಯವಾಗುವತನಕ, ಸರ್ವೇ — ಎಲ್ಲರೂ, ಸ್ವಪ್ನ್ಯಂತು – ನಿದ್ರಿಸಲಿ. ಇತಿ— ಎಂದು, ಆಹ — ಹೇಳಿದನು. ಇತಿ — ಈ ರೀತಿಯಾಗಿ, ಈರಿತಾಃ – ಹೇಳಿಸಿಕೊಳ್ಳಲ್ಪಟ್ಟವರು, ಫಲ್ಗುನಾಯು – ಅರ್ಜುನನಿಗೆ, ಆಶಿಷಃ – ಆಶೀರ್ವಾದಗಳನ್ನು, ಪ್ರಯುಜ್ಯ — ಮಾಡಿ, ಸರ್ವೇ — ಎಲ್ಲರೂ, ಯಥಾಸ್ಥಿತಾಃ — ಹೇಗೆ ಹೇಗೆ ಇರುತ್ತಿದ್ದರೋ, ತಥಾ – ಹಾಗೆಯೇ ಅಂದರೆ ಆನೆ ಮೊದಲಾದ ವಾಹನಗಳಲ್ಲಿ ಕುಳಿತವರು ಅಲ್ಲಿಯೇ, ತಮ್ಮ ತಮ ಆಯುಧಗಳನ್ನು ಕೈಯಲ್ಲಿ ಹಿಡಿದುಕೊಂಡೇ, ಸುಷುಪುಃ – ಮಲಗಿದರು. ॥೨೬೬॥

ಪುನಶ್ಚ ಚಂದ್ರೇs ಭ್ಯುದಿತೇಯುಧೇತೇ ಸಮಾಯಯುಃ ಶಸ್ತ್ರಮಹಾಸ್ತ್ರವರ್ಷಾಃ ॥
ತತ್ರಾಯಾತಃ ಸಾತ್ಯಕಿಂ ಸೋಮದತ್ತೋಭೂರಿಶ್ಚತಾಭ್ಯಾಂ ಯುಯುಧೇಸಏಕಃ ॥೨೬೭॥

ಚಂದ್ರೇ – ಚಂದ್ರನು, ಅಭ್ಯುದಿತೇಸತಿ – ಉದಯಿಸುತ್ತಿರಲು, ಪುನಃ—ಮತ್ತು, ತೇ — ಆ ಕೌರವ ಪಾಂಡವರ ಪಕ್ಷದವರು, ಶಸ್ತ್ರಮಹಾಸ್ತ್ರವರ್ಷಾಃಸಂತಃ – ಶಸ್ತ್ರಗಳನ್ನೂ ಮಹತ್ತಾದ ಅಸ್ತ್ರಗಳನ್ನೂ ಮಳೆಗರಿಸತಕ್ಕವರಾಗಿ, ಯುದ್ಧೇ— ಯುದ್ಧಕ್ಕಾಗಿ, ಸಮಾಯಯುಃ—ಬಂದರು, ತತ್ರ—ಆ ಯುದ್ಧದಲ್ಲಿ, ಸೋಮದತ್ತಃ – ಸೋಮದತ್ತನು, ಭೂರಿಶ್ಚ— ಭೂರಿಯೂ ಕೂಡ, ಸಾತ್ಯಕಿಂ – ಸಾತ್ಯಕಿಯನ್ನೂ, ಆಯಾತಃ – ಹೊಂದಿದರು, ಏಕಃಸಃ—ಸಾತ್ಯಕಿಯೊಬ್ಬನೇ, ತಾಭ್ಯಾಂ— ಭೂರಿಸೋಮದತ್ತರಿಂದ, ಯುಯುಧೇ—ಯುದ್ಧ ಮಾಡಿದನು. ॥೨೬೭॥

ಹತೌ ಚತೌ ಪೇತತುಸ್ತೇನ ಭೂಮೌ ಬಾಹ್ಲೀಕಏನಂ ಸಮರೇತ್ವಯೋಧಯತ್ ॥
ಸಸಾತ್ಯಕಿಂ ವಿರಥೀಕೃತ್ಯಬಾಣಂವಧಾಯತಸ್ಯಾಶು ಮುಮೋಚ ವೀರಃ ॥೨೬೮॥

ತೇನ — ಆ ಸಾತ್ಯಕಿಯಿಂದ, ತೌ – ಆ ಭೂರಿಸೋಮದತ್ತರು, ಹತೌ ಸಂತೌ —ಕೊಲ್ಲಲ್ಪಟ್ಟವರಾಗಿ, ಭೂಮೌ – ಭೂಮಿಯಲ್ಲಿ, ಪೇತತುಃ — ಬಿದ್ದರು. ಬಾಹ್ಲೀಕಃ – ಬಾಹ್ಲೀಕನು, ಏನಂ — ಈ ಸಾತ್ಯಕಿಯನ್ನು, ಸಮರೇ – ಯುದ್ಧದಲ್ಲಿ, ಅಯೋಧಯತ್ – ಯುದ್ಧ ಮಾಡಿದನು, ವೀರಃ ಸಃ — ವೀರನಾದ ಆ ಬಾಹ್ಲೀಕನು, ಸಾತ್ಯಕಿಂ – ಸಾತ್ಯಕಿಯನ್ನು, ವಿರಥೀಕೃತ್ಯ – ರಥರಹಿತನನ್ನಾಗಿ ಮಾಡಿ, ತಸ್ಯ — ಆ ಸಾತ್ಯಕಿಯ, ವಧಾಯ — ನಾಶಕ್ಕೋಸ್ಕರ, ಆಶು — ಕೂಡಲೇ, ಬಾಣಂ – ಶರವನ್ನು, ಮುಮೋಚ — ಬಿಟ್ಟನು. ॥೨೬೮॥

ಚಿಚ್ಛೇದ ತಂ ಭೀಮಸೇನಸ್ತ್ರಿಧೈವ ತಸ್ಮೈ ಶತಘ್ನೀಂ ಪ್ರಜಹಾರ ಬಾಹ್ಲಿಕಃ ॥
ತಯಾಹತೋವಿಹ್ವಲಿತೋವೃಕೋದರೋ ಜಘಾನ ತಂ ಗದಯಾ ಸೋಽಪತಚ್ಚ ॥೨೬೯॥

ಭೀಮಸೇನಃ— ಭೀಮಸೇನನು, ತಂ— ಆ ಬಾಣವನ್ನು, ತ್ರಿಧೈವ – ಮೂರು ಪ್ರಕಾರವಾಗಿಯೇ, ಚಿಚ್ಛೇದ— ತುಂಡರಿಸಿದನು. ಬಾಹ್ಲಿಕಃ — ಬಾಹ್ಲಿಕನು, ತಸ್ಮೈ – ಆ ಭೀಮನಿಗೋಸ್ಕರ, ಶತಘ್ನೀಂ — ಬ್ರಹ್ಮದತ್ತವಾದ ಗದೆಯನ್ನು, ಪ್ರಜಹಾರ — ಹೊಡೆದನು, ತಯಾ – ಆ ಗದೆಯಿಂದ, ಹತಃ–ಹೊಡೆಯಲ್ಪಟ್ಟ, ವಿಹ್ವಲಿತಃ—ಭಯದಿಂದಕೂಡಿದವನಂತೆ ಚಲನ ವಿಶಿಷ್ಟನಾದ, ವೃಕೋದರಃ— ಭೀಮಸೇನನು, ತಂ – ಆ ಬಾಹ್ಲೀಕನನ್ನು, ಗದಯಾ --ಗದೆಯಿಂದ, ಜಘಾನ – ಹೊಡೆದನು. ಸಃ – ಆ ಬಾಹ್ಲೀಕನು, ಅಪತತ್ – ಬಿದ್ದನು ॥೨೬೯॥

ಬಾಹ್ಲೀಕಃ ಪ್ರಾರ್ಥಯಾಮಾಸಪೂರ್ವಂಸ್ನೇಹಪುರಃಸರಂ ॥
ಭೀಮು ತ್ವಯೈವ ಹಂತವ್ಯೋರಣೇಽಹಂ ಪ್ರೀತಿಮಿಚ್ಛತಾ ॥
ತದಾಯುಶಶ್ಚ ಧರ್ಮಂಚ ಲೋಕಂಚಪ್ರಾಪ್ನುಯಾಮ್ಯಹಂ ॥೨೭೦॥

ಬಾಹ್ಲೀಕಃ – ಬಾಹ್ಲೀಕರಾಜನು, ಪೂರ್ವಂ—ಹಿಂದೆ, ಸ್ನೇಹಪುರಃಸರಂ – ಪ್ರೀತಿಪೂರ್ವಕವಾಗಿಯೇ, ಪ್ರಾರ್ಥಯಾಮಾಸ – ಪ್ರಾರ್ಥಿಸಿದ್ದನು. ಹೇ ಭೀಮ–ಎಲೋ ಭೀಮನೇ, ಪ್ರೀತಿಂ–ಪ್ರೀತಿಯನ್ನು, ಇಚ್ಛತಾ– ಇಚ್ಛಿಸತಕ್ಕ, ತ್ವಯೈವ – ನಿನ್ನಿಂದಲೇ, ರಣೇ–ಯುದ್ಧದಲ್ಲಿ, ಅಹಂ — ನಾನು, ಹಂತವ್ಯಃ — ಕೊಲ್ಲಲುಯೋಗ್ಯನು. ತದಾ–ಆಗ, ಅಹಂ–ನಾನು, ಯಶಃ–ಕೀರ್ತಿಯನ್ನು, ಧರ್ಮಂಚ–ಧರ್ಮವನ್ನು,ಲೋಕಂಚ–ಲೋಕವನ್ನೂಕೂಡ, ಪ್ರಾಪ್ನುಯಾಂ-ಹೊಂದುವೆನು ॥೨೭೦॥

'ಇತ್ಯುಕ್ತ ಆಹ ತಂ ಭೀಮೋನಿತರಾಂ ವ್ಯಥಿತಸ್ತದಾ ॥
ಹನ್ಯಾಂನೈವಾನ್ಯಥಾಯುದ್ಧೇ ತತ್ತೇ ಶುಶ್ರೂಷಣಂ ಭವೇತ್ ॥೨೭೧॥

ಇತಿತೇನ ಹತಸ್ತತ್ರ ಭೀಮಸೇನೇನ ಬಾಹ್ಲಿಕಃ ॥೨೭೨॥

ಇತಿ – ಈ ರೀತಿಯಾಗಿ, ಉಕ್ತಃ — ಹೇಳಿಸಿಕೊಳ್ಳಲ್ಪಟ್ಟ, ಭೀಮಃ — ಭೀಮನು, ತಂ- ಆ ಬಾಹ್ಲೀಕನನ್ನು ಕುರಿತು ಆಹ— ಹೇಳಿದನು, ಯದಾ— ಯಾವಾಗ, ನಿತರಾಂ – ಚೆನ್ನಾಗಿ, ವ್ಯಥಿತಃ –ತಾಡಿತನಾಗುವೆನೋ, ತದಾ – ಆಗ, ಅಹಂ-ನಾನು, ಹನ್ಯಾಂ – ನಿನ್ನನ್ನು ಕೊಲ್ಲುವೆನು. ಅನ್ಯಥಾ— ನಿನ್ನ ಆಜ್ಞೆ ಇಲ್ಲದೆ ಅಥವಾ ನಿನ್ನಿಂದ ತಾಡಿತನಾಗದೇ, ಯುದ್ಧೇ— ಯುದ್ಧದಲ್ಲಿ, ನೈವ ಹನ್ಯಾಂ — ಕೊಲ್ಲಲಾರೆನು. ತತ್ – ನಿನ್ನ ಆಜ್ಞೆಯಿಂದ ಹನನವು, ತೇ-ನಿನ್ನ, ಶುಶ್ರೂಷಣಂ – ಸೇವೆಯು, ಭವೇತ್ – ಆಗುವುದು, ಇತಿ— ಈ ಕಾರಣದಿಂದ, ತೇನ ಭೀಮಸೇನೇನ — ಆ ಭೀಮಸೇನನಿಂದ, ತತ್ರ – ಆ ಯುದ್ಧದಲ್ಲಿ, ಬಾಹ್ಲೀಕಃ – ಬಾಹ್ಲಿಕನು, ಹತಃ – ಕೊಲ್ಲಲ್ಪಟ್ಟನು. ॥೨೭೧॥ ॥೨೭೨॥

ಭಾ. ಅ. ೨೬೩ – ೨೭೨ ಘಟೋತ್ಕಚನ ಮರಣದ ದುಃಖದಿಂದ, ಸಿಟ್ಟಿನಿಂದ ಧರ್ಮರಾಜನು ಕರ್ಣನನ್ನು ಕೊಂದೇ ಬಿಡಬೇಕೆಂದು ಏರಿಹೋದನು, ಆಗ ಶ್ರೀವೇದವ್ಯಾಸದೇವರು ಪ್ರಕಟರಾಗಿ 'ಯಾವ ಶಕ್ತ್ಯಾಯುಧದಿಂದ

ಅರ್ಜುನನ ಸಂಹಾರವಾಗಬೇಕಿತ್ತೋ ಅದರಿಂದ ಈ ಘಟೋತ್ಕಚನು ಸತ್ತಿದ್ದಾನಷ್ಟೇ. ದೈವಾನುಗ್ರಹದಿಂದ ಅರ್ಜುನನು ಬದುಕಿದ್ದಾನೆ. ಆದ್ದರಿಂದ ದುಃಖಿಸಬೇಡ ಎಂದು ಧರ್ಮರಾಜನಿಗೆ ಹೇಳಿ ಅದೃಶ್ಯರಾದರು. ನಂತರ ಯುದ್ಧಾರಂಭವಾಗಿ ಪರಸ್ಪರ ಸೈನ್ಯವು ಹತವಾಗುತ್ತಿರಲು, ಕೈಯಲ್ಲಿ ದೀಪ (ಹಿಲಾಲು)ಗಳನ್ನು ಹಿಡಿದ, ಆಯುಧಗಳನ್ನು ಹಿಡಿದ ಎಲ್ಲ ಯೋಧರೂ ಕೂಡ ನಿದ್ರಾಪೀಡಿತರಾಗಿದ್ದನ್ನು ನೋಡಿದ ಅರ್ಜುನನು ಚಂದ್ರೋದಯವಾಗುವ ಪರ್ಯಂತ ಎಲ್ಲ ಯೋಧರು ಮಲಗಿ ವಿಶ್ರಾಂತಿ ಪಡೆಯಲಿ ಎಂದು ಅವಕಾಶವನ್ನು ಕೊಟ್ಟಾಗ ಆ ಎಲ್ಲರೂಕೂಡ ಅರ್ಜುನನನಿಗೆ ಶುಭಾಶಂಸನಗಳನ್ನು ಮಾಡಿ ನಿಂತನಿಂತಲ್ಲಿಯೇ ಕುಳಿತು ಮಲಗಿದರು. ಚಂದ್ರೋದಯವಾಗಲು ಪುನಃ ಯುದ್ಧಾರಂಭವಾಯಿತು. ಸಾತ್ಯಕಿಯು ಹತ್ತಿರ ಸೋಮದತ್ತ, ಭೂರಿ ಇವರು ಯುದ್ಧಕ್ಕೆ ಬಂದರು. ಇಬ್ಬರ ಜೊತೆಗೂ ಒಬ್ಬನೇ ಯುದ್ಧ ಮಾಡಿ, ಹೊಡೆದಾಗ ಇಬ್ಬರೂ ಕೆಳಗೆ ಬಿದ್ದರು. ಆಗ ಬಾಹ್ಲೀಕನು ಬಂದು ಸಾತ್ಯಕಿಯ ರಥವನ್ನು ನಾಶಮಾಡಿ, ಅವನನ್ನೇ ಕೊಲ್ಲಲ್ಲು ಬಾಣವೊಂದನ್ನು ತೆಗೆದು ಬಿಟ್ಟನು. ಅದನ್ನು ಶ್ರೀಭೀಮರು ಮೂರು ತುಂಡು ಮಾಡಿದರು. ಆಗ ಬಾಹ್ಲೀಕನು ಶತಘ್ನೀ ಎಂಬ ಆಯುಧವನ್ನು ಶ್ರೀ ಭೀಮರಿಗೆ ಬಿಟ್ಟನು. ಅದು ಬಡಿದಾಗ ಅದರ ಪೆಟ್ಟಿನಿಂದ ವ್ಯಥಿತರಂತೆ, ಚಂಚಲ್ಲರಾದಂತಾಗಿ ಗದಾದಿಂದ ಬಾಹ್ಲೀಕರಾಜನನ್ನು ಹೊಡೆದರು ? ಆಗ ಆ ಪೆಟ್ಟಿನಿಂದ ಬಳಲಿ ಕೆಳಗೆ ಬಿದ್ದನು. ಬಾಹ್ಲೀಕನೂಕೂಡ ವಿಷ್ಣು ಭಕ್ತನು. ಕರ್ಣನು ವಿಷ್ಣು ಭಕ್ತನಾದ್ದರಿಂದ, ಅವನನ್ನು ಶ್ರೀ ಭೀಮರು ಕೊಲ್ಲಲಿಲ್ಲ ಎಂದು ಒಂದು ಕಾರಣವೆನ್ನು ಹಿಂದೆ ಹೇಳಿದ್ದಾರೆ. ಈಗ ಬಾಹ್ಲೀಕನನ್ನು ಹೇಗೆ ಹೊಡೆದರು? ಎಂಬ ಪ್ರಶ್ನೆಯು ಬರುವದು. ಅದಕ್ಕೆ ಆಚಾರ್ಯರು ಹೀಗೆ ನಿರ್ಣಯ ಕೊಟ್ಟಿದ್ದಾರೆ—ಬಾಹ್ಲೀಕರಾಜರು ಈ ಮೊದಲೇ ಪ್ರಾರ್ಥಿಸಿದ್ದರು – 'ನೀನೇ ನನ್ನನ್ನು ಯುದ್ಧದಲ್ಲಿ ಹೊಡೆಯಬೇಕು; ನೀನು ಹೊಡೆದರೆ ನಾನು ಉತ್ತಮ ಲೋಕವನ್ನು, ಕೀರ್ತಿಯನ್ನು ಹೊಂದುತ್ತೇನೆ' ಎಂದು. ಆಗ ಶ್ರೀಭೀಮರು ನೀನು ನನ್ನ ಹಿರಿಯನು; ಹಾಗೆಲ್ಲ ಹೊಡೆಯುವದಿಲ್ಲ; ನನಗೆ ತುಂಬಾ ವ್ಯಥೆಯುಂಟಾದರೆ, ನಿನ್ನ ಸೇವಾರೂಪವಾಗುವದಾದರೆ ಮಾತ್ರ ಹೊಡೆಯುವೆನು', ಎಂದು ಅಂದಿದ್ದರು. ಅದಕ್ಕಾಗಿ ಈಗ ಬಾಹ್ಲೀಕರಾಜನನ್ನು ಹೊಡೆದರು.

॥೨೨೭॥

ಹತೇಬಾಹ್ಲೀಕೇ ಕೌರವಾಭೀಮಸೇನಮಭ್ಯಾಜಗ್ಮುಃ ಕರ್ಣಸುಯೋಧನಾದ್ಯಾಃ ॥
ದ್ರೌಣಿಂಪುರಸ್ಕೃತ್ಯ ಗುರುಂಚಪಾರ್ಷತಃ ಸಭ್ರಾತೃಕಃ ಸಾತ್ಯಕಿನಾಸಮುಚ್ಯಯಾತ್ ॥೨೨೫॥

ಬಾಹ್ಲೀಕೇ–ಬಾಹ್ಲೀಕರಾಜರು, ಹತೇಸತಿ–ಸಾಯುತ್ತಿರಲು, ಕರ್ಣಸುಯೋಧನಾದ್ಯಾಃ—ಕರ್ಣ, ದುರ್ಯೋಧನನೇ ಮೊದಲಾಗಿರುಳ್ಳ, ಕೌರವಾಃ–ಕೌರವರು, ದ್ರೌಣಿಂ–ಅಶ್ವತ್ಥಾಮರನ್ನು, ಪುರಸ್ಕೃತ್ಯ–ಮುಂದೆಮಾಡಿಕೊಂಡು, ಭೀಮಸೇನಂ–ಭೀಮಸೇನನನ್ನು, ಅಭ್ಯಾಜಗ್ಮುಃ–ಬದುರಾಗಿ ಬಂದರು, ಸಭ್ರಾತೃಕಃ – ಸಹೋದರರಿಂದ ಕೂಡಿದ, ಸಾತ್ಯಕಿನಾಸಹಿತಃ—ಸಾತ್ಯಕಿಯಿಂದ ಕೂಡಿದ, ಪಾರ್ಷತಃ – ಧೃಷ್ಟದ್ಯುಮ್ನನು, ಗುರುಂ —ಗುರುಗಳಾದ ದ್ರೋಣರನ್ನು, ಸಮುಚ್ಯಯಾತ್ – ಹೊಂದಿದನು. ॥೨೨೫॥

॥೨೨೬॥

ಸಂಶಪ್ತಕೈರೇವ ಪಾರ್ಥೋಯುಯೋಧ ತದ್ಯುದ್ಧಮಾಸೀದತಿರೌದ್ರಮದ್ಭುತಂ ॥
—ಅಕ್ಷೌಹಿಣೀ ತತ್ರಭೀಮಾರ್ಜುನಾಭ್ಯಾಂ ನಿಷೂದಿತಾ ರಾತ್ರಿಯುದ್ಧೇಸಮಸ್ತಾ ॥೨೨೬॥

ಪಾರ್ಥಃ—ಅರ್ಜುನನು, ಸಂಶಪ್ತಕೈರೇವ – ಸಂಶಪ್ತಕರಿಂದಲೇ, ಯುಯುಯೋಧ — ಯುದ್ಧಮಾಡಿದನು, ತದ್ಯುದ್ಧಂ—ಆ ಯುದ್ಧವು, ಅತಿರೌದ್ರಂ –ಅತ್ಯಂತ ಕ್ರೂರವೂ, ಅದ್ಭುತಂ – ಆಶ್ಚರ್ಯಕರವೂ, ಆಸೀತ್ – ಆಗಿತ್ತು; ತತ್ರ – ಆ ರಾತ್ರಿಯುದ್ಧದಲ್ಲಿ, ಭೀಮಾರ್ಜುನಾಭ್ಯಾಂ – ಭೀಮಾರ್ಜುನರಿಂದ, ಸಮಸ್ತಾಅಕ್ಷೌಹಿಣೀ— ಪೂರ್ಣವಾದ ಒಂದು ಅಕ್ಷೌಹಿಣಿಯು, ನಿಷೂದಿತಾ—ಕೊಲ್ಲಲ್ಪಟ್ಟಿತು. ॥೨೨೬॥

॥೨೨೭॥

ತತಃಸೂರ್ಯಶ್ಚಾಭ್ಯುದಿತಸ್ತದಾತಿಘೋರಂ ದ್ರೋಣಃಕರ್ಮಯುದ್ಧೇಚಕಾರ ॥
ಸಪಾಂಚಾಲಾನಾಂ ರಥವೃಂದಂ ಪ್ರವಿಶ್ಯ ಜಘ್ನಾನಹಸ್ತ್ಯಶ್ವರಥಾನ್ನರಾಂಶ್ಚ ॥೨೨೭॥

ತತಃ – ಅನಂತರ, ಸೂರ್ಯಃ–ರವಿಯು, ಅಭ್ಯುದಿತಃ–ಉದಯಿಸಿದನು, ತದಾ – ಉದಯಾನಂತರ, ದ್ರೋಣಃ–ದ್ರೋಣರು, ಯುದ್ಧೇ – ಯುದ್ಧದಲ್ಲಿ, ಅತಿಘೋರಂ — ಅತ್ಯಂತ ಭಯಂಕರವಾದ, ಕರ್ಮ – ಕೆಲಸವನ್ನು, ಚಕಾರ — ಮಾಡಿದರು, ಸಃ –ಆ ದ್ರೋಣರು, ಪಾಂಚಾಲಾನಾಂ – ಪಾಂಚಾಲರ, ರಥವ್ಯೂಹಂ – ರಥಗಳ ಸಮೂಹವನ್ನು, ಪ್ರವಿಶ್ಯ–ಪ್ರವೇಶಿಸಿ, ಹಸ್ತ್ಯಶ್ವರಥಾನ್—ಆನೆಗಳು, ಕುದುರೆಗಳು, ರಥಗಳೂ ಇವುಗಳನ್ನು ನರಾಂಶ್ಚ — ಮನುಷ್ಯರನ್ನೂ ಕೂಡ, ಜಘಾನ - ಕೊಂದರು. ॥೨೭॥

ವಿದ್ರಾವಿತಾಸ್ತೇನಮಹಾರಥಾಶ್ಚನೈವಾವಿಂದನ್ ಶರ್ಮಬಾಣಾಂಧಕಾರೇ ॥
ಯುವೇವ ವೈದ್ರೋಽಪಿ ಚಚಾರಯುದ್ಧೇಸ ಉಗ್ರಧನ್ವಾಪರಮಾಸ್ತ್ರವೇತ್ತಾ ॥೨೭೬॥

ತೇನ – ಆ ದ್ರೋಣರಿಂದ, ವಿದ್ರಾವಿತಾಃ – ಓಡಿಸಲ್ಪಟ್ಟ, ಮಹಾರಥಾಃ—ಮಹಾರಥಿಕರು, ಬಾಣಾಂಧಕಾರೇ–ಬಾಣಗಳಿಂದ ಮಾಡಲ್ಪಟ್ಟ ಕತ್ತಲೆಯಲ್ಲಿ, ಶರ್ಮ – ಸುಖವನ್ನು, ನೈವಾವಿಂದನ್ — ಹೊಂದಲೇ ಇಲ್ಲ, ಉಗ್ರಧನ್ವಾ – ಕ್ರೂರವಾದ ಧನುಸ್ಸುಳ್ಳ, ಪರಮಾಸ್ತ್ರವೇತ್ತಾ — ಉತ್ತಮಾಗಳಾದ ಅಸ್ತ್ರಗಳನ್ನು ತಿಳಿದಿರುವ, ಸಃ – ಆ ದ್ರೋಣರು, ವೈದ್ರೋಪಿ – ಮಂದುಕರಾದರೂ ಕೂಡ, ಯುದ್ಧೇ -- ಯುದ್ಧದಲ್ಲಿ, ಯುವೇವ — ತರುಣರಂತೆ, ಚಚಾರ — ಸಂಚರಿಸಿದರು. ॥೨೭೬॥

ರಥಾರ್ಬುದಂತೇನ ಹತಂಚತತ್ರ ತತಃಸಹಸ್ರಂ ಗುಣಿತಂ ನರಾಣಾವ್ ॥
ತತೋದಶಾಂಶೋ ನಿಹತೋಹಯಾನಾಂ ಗಜಾರ್ಬುದಂಚೈವ ರಣೋತ್ಕಟೇನ ॥೨೭೭॥

ರಣೋತ್ಕಟೇನ–ಯುದ್ಧದಲ್ಲಿ ಉದ್ಧತನಾದ, ತೇನ – ದ್ರೋಣರಿಂದ, ತತ್ರ–ಆ ಯುದ್ಧದಲ್ಲಿ, ರಥಾರ್ಬುದಂ–ರಥಗಳ ಇಪತ್ತುಸಾವಿರವು, ಹತಂ – ಕೊಲ್ಲಲ್ಪಟ್ಟಿತು, ತತಃ—ಆ ಅರ್ಬುದದಿಂದ, ಗುಣಿತಂ – ಗುಣಿಸಲ್ಪಟ್ಟ, ನರಾಣಾಂ–ಮನುಷ್ಯರ, ಸಹಸ್ರಂ—ಒಂದುಸಾವಿರವು ಅಂದರೆ ಎರಡು ಕೋಟಿಯು, ಹತಂ — ಕೊಲ್ಲಲ್ಪಟ್ಟಿತು. ತತಃ — ಆ ಸಾವಿರ ಅರ್ಬುದದ, ಹಯಾನಾಂ — ಕುದುರೆಗಳ, ದಶಾಂಶಃ – ಹತ್ತನೇ ಒಂದು ಅಂಶವು ಅಂದರೆ ಇಪ್ಪತ್ತು ಲಕ್ಷವು, ಹತಂ— ಕೊಲ್ಲಲ್ಪಟ್ಟಿತು, ಗಜಾರ್ಬುದಂಚ—ಆನೆಗಳ ಇಪ್ಪತುಸಾವಿರವೂ ಕೂಡ, ಹತಂ - ಕೊಲ್ಲಲ್ಪಟ್ಟಿತು. ॥೨೭೭॥

ತಥಾವಿರಾಟದ್ರುಪದೌ ಶರಾಭ್ಯಾಂ ನಿನಾಯಲೋಕಂ ಪರಮಾಜಿಮುಧ್ನೇ ॥
ತತೋವಿಜಿತ್ಯೈವ ಗುರೋಃಸುತಾದೀನ್ ಧೃಷ್ಟದ್ಯುಮ್ನಂ ಭೀಮಸೇನೋಜುಗೋಪ ॥೨೭೮॥

ತಥಾ—ಹಾಗೆಯೇ ದ್ರೋಣರು, ಪರಮಾಜಿಮಧ್ನೇ—ಶ್ರೇಷ್ಠವಾದ ಯುದ್ಧದ ಮಧ್ಯದಲ್ಲಿ, ವಿರಾಟದ್ರುಪದೌ — ವಿರಾಟ ಮತ್ತು ದ್ರುಪದರನ್ನು, ಶರಾಭ್ಯಾಂ – ಬಾಣಗಳಿಂದ, ಲೋಕಂ—ಪರಲೋಕವನಕ್ಕೆ, ನಿನಾಯ — ಕಳುಹಿಸಿದರು, ತತಃ–ಅನಂತರ, ಭೀಮಸೇನಃ–ಭೀಮಸೇನನು, ಗುರೋಃ–ದ್ರೋಣರ, ಸುತಾದೀನ್– ಮಗನಾದ ಅಶ್ವತ್ಥಾಮ ಮೊದಲಾದವರನ್ನು, ವಿಜಿತ್ಯೈವ–ಜಯಿಸಿಯೇ ಧೃಷ್ಟದ್ಯುಮ್ನಂ – ಧೃಷ್ಟದ್ಯುಮ್ನನನ್ನು, ಜುಗೋಪ–ರಕ್ಷಿಸಿದನು. ॥೨೭೮॥

ಧೃಷ್ಟದ್ಯುಮ್ನೋಭೀಮಸೇನಾಭಿಗುಪ್ತೋ ದ್ರೋಣಂ ಹಂತುಂ ಯತ್ನಮುಚ್ಚೈಶ್ಚಕಾರ ॥
ನಿವಾರಯಾಮಾಸ ಗುರುಃಶರೌಘೈಃ ಧೃಷ್ಟದ್ಯುಮ್ನಂಸೋಽಪಿತಂ ಸಾಯಕೇನ ॥೨೭೯॥

ವಿವ್ಯಾಧತೇನಾಭಿಹ ಸ ಮೂರ್ಛಾಂ ಅವಾಪ ವಿಸ್ರೋ ನಿಷಸಾದಚಾಶು ॥೨೮೦॥

ಭೀಮಸೇನಾಭಿಗುಪ್ತಃ – ಭೀಮಸೇನನಿಂದ ರಕ್ಷಿಸಿಕೊಳ್ಳಲ್ಪಟ್ಟ, ಧೃಷ್ಟದ್ಯುಮ್ನಃ– ಧೃಷ್ಟದ್ಯುಮ್ನನು, ದ್ರೋಣಂ– ದ್ರೋಣರನ್ನು, ಹಂತುಂ – ಕೊಲ್ಲಲು, ಉಚ್ಚೈಃ – ಚೆನ್ನಾಗಿ, ಯತ್ನಂ – ಪ್ರಯತ್ನವನ್ನು, ಚಕಾರ – ಮಾಡಿದನು, ಗುರುಃ - ದ್ರೋಣರು, ಶರೌಘೈಃ – ಬಾಣಗಳ ಸಮೂಹದಿಂದ, ಧೃಷ್ಟದ್ಯುಮ್ನಂ – ಧೃಷ್ಟದ್ಯುಮ್ನನನ್ನು, ನಿವಾರಯಾಮಾಸ – ತಡೆದರು, ಸೋಪಿ – ಆ ಧೃಷ್ಟದ್ಯುಮ್ನನೂ ಕೂಡ, ತಂ – ಆ ದ್ರೋಣರನ್ನು, ಸಾಯಕೇನ – ಬಾಣದಿಂದ. ವಿವ್ಯಾಧ – ಹೊಡೆದನು, ತೇನ — ಆ ಧೃಷ್ಟದ್ಯುಮ್ನನಿಂದ, ಅಭಿಹತಃ —ಹೊಡೆಯಲ್ಪಟ್ಟ, ಸಃವಿಪ್ರಃ – ಆ ದ್ರೋಣರು, ಮೂರ್ಛಾಂ – ಮೂರ್ಛೆಯನ್ನು. ಅವಾಪ —ಹೊಂದಿದರು, ಆಶು—ಕೂಡಲೇ. ನಿಷಸಾದ—ರಥದಲ್ಲಿ ಕುಳಿತರು. ॥೨೭೯॥
॥೨೮೦॥

ಧೃಷ್ಟದ್ಯುಮ್ನಃ ಸತ್ವರಂ ಖಡ್ಗಚರ್ಮಣ್ಯಾದಾಯತಸ್ಯಾರುರುಹೇರಥೋತ್ತಮಂ ॥
ಸಂಜ್ಞಾಮವಾಪ್ಯಾಥ ಗುರುಃಶರೌಘೈಃಪ್ರಾದೇಶಮಾತ್ರೈರ್ವ್ಯಥಯಾಮಾಸ ತಂಚ ॥೨೮೧॥

ಧೃಷ್ಟದ್ಯುಮ್ನಃ – ಧೃಷ್ಟದ್ಯುಮ್ನನು, ಸತ್ವರಂ — ಕೂಡಲೇ, ಖಡ್ಗಚರ್ಮಣೇ – ಖಡ್ಗ ಮತ್ತು ಚರ್ಮಗಳನ್ನು, ಆದಾಯ —ಹಿಡಿದುಕೊಂಡು, ತಸ್ಯ– ಆದ್ರೋಣರ. ರಥೋತ್ತಮಂ — ಶ್ರೇಷ್ಠರಥವನ್ನು, ಆರುರುಹೇ — ಏರಿದನು. ಆಥ—ಅನಂತರ, ಗುರುಃ— ದ್ರೋಣರು, ಸಂಜ್ಞಾಂ—ಪ್ರಜ್ಞೆಯನ್ನು ಅವಾಪ್ಯ – ಹೊಂದಿ, ಪ್ರಾದೇಶಮಾತ್ರೈಃ– ಒಂದು ಗೇಣುಪರಿಮಾಣವುಳ್ಳ, ಶರೌಘೈಃ – ಬಾಣಗಳಸಮೂಹಗಳಿಂದ, ತಂ – ಆ ಧೃಷ್ಟದ್ಯುಮ್ನನನ್ನು, ವ್ಯಥಯಾಮಾಸ – ವ್ಯಥೆಪಡಿಸಿದರು. ॥೨೮೧॥

ಸತೈರತಿವ್ಯಥಿತಸ್ತದ್ರಥಾಚ್ಚ ಪರಾವೃತ್ತಃ ಸ್ವರಥಂ ಚಾರುರೋಹ. ॥
ಸುಸಂರಬ್ಧೌತೌಪುನರೇವಯುದ್ಧಂ ಸಂಚಕ್ರತುರ್ವೃಷ್ಟಶರಾಂಬುಧಾರೌ ॥೨೮೨॥

ಸಃ— ಆ ಧೃಷ್ಟದ್ಯುಮ್ನನು, ತೈಃ – ಆ ಪ್ರಾದೇಶ ಮಾತ್ರಶರಗಳಿಂದ, ಅತಿವ್ಯಥಿತಃಸನ್ —ಅತ್ಯಂತವ್ಯಥೆ ಪಟ್ಟವನಾಗಿ, ತದ್ರಥಾತ್ – ಆ ದ್ರೋಣಾಚಾರ್ಯರ ರಥದಿಂದ, ಪರಾವೃತ್ತಃ ಸನ್ — ಕೆಳಗಿಳಿದವನಾಗಿ, ಸ್ವರಥಂ – ತನ್ನ ರಥವನ್ನು, ಆರುರೋಹ – ಏರಿದನು. ಸುಸಂರಬ್ಧೌ – ಚೆನ್ನಾಗಿ ಕುಪಿತರಾದ, ವೃಷ್ಟಶರಾಂಬುಧಾರೌ – ಮಳೆಗರಿಸಲ್ಪಟ್ಟ ಬಾಣಗಳೆಂಬ ಜಲಧಾರೆಗಳುಳ್ಳ, ತೌ – ಆ ದ್ರೋಣ ಧೃಷ್ಟದ್ಯುಮ್ನರಿಬ್ಬರೂ, ಪುನಃ – ಮತ್ತು, ಯುದ್ಧಂ – ಯುದ್ಧವನ್ನು, ಸಂಚಕ್ರತುಃ— ಮಾಡಿದರು ॥೨೮೨॥

ನಿವಾರ್ಯಶತ್ರೂನ್ಸಶರೈರ್ಬ್ರಹ್ಮಾಸ್ತ್ರಮಸೃಜದ್ದ್ವಿಜಃ ॥
ತೇನಸಂದಾಹಯಾಮಾಸ ಪಾಂಚಾಲಾನ್ಸುಬಹೂನ್ರಣೇ ॥
ಪುರುಜಿತ್ಕುಂತಿಭೋಜಶ್ಚ ತೇನಾನ್ಯೇಽಪಿಹತಾಸ್ತದಾ ॥೨೮೩॥

ದ್ವಿಜಃ ಸಃ— ಬ್ರಾಹ್ಮಣರಾದ ಆ ದ್ರೋಣರು, ಶರೈಃ – ಬಾಣಗಳಿಂದ, ಶತ್ರೂನ್ – ಶತ್ರುಗಳನ್ನು, ನಿವಾರ್ಯ– ತಡೆದು, ಬ್ರಹ್ಮಾಸ್ತ್ರಂ— ಬ್ರಹಾಸ್ತ್ರವನ್ನು, ಅಸೃಜತ್ – ಬಿಟ್ಟರು, ತೇನ – ಆ ಬ್ರಹ್ಮಾಸ್ತ್ರದಿಂದ, ರಣೇ – ಯುದ್ಧದಲ್ಲಿ, ಸುಬಹೂನ್–ಬಹುಸಂಖ್ಯಾಕರಾದ, ಪಾಂಚಾಲಾನ್–ಪಾಂಚಾಲರನ್ನು, ಸಂದಾಹಯಾಮಾಸ — ಸುಡುವಂತೆ ಮಾಡಿದರು. ತದಾ – ಆಗ, ತೇನ – ಆ ಬ್ರಹ್ಮಾಸ್ತ್ರದಿಂದಲೇ, ಪುರುಜಿತ್ – ಪುರುಜಿತ್ ಎಂಬವನು, ಕುಂತಿಭೋಜಶ್ಚ – ಕುಂತಿಭೋಜರಾಜನು, ಅನ್ಯೇಪಿ — ಇತರರೂಕೂಡ, ಹತಾಃ— ಕೊಲ್ಲಲ್ಪಟ್ಟರು. ॥೨೮೩॥

ಭೀಮೋಽರ್ಜುನಃ ಸಾತ್ಯಕಿಶ್ಚಪರ್ಯಾಯೇಣ ಗುರೋಃಸುತಂ ॥
ದೂರತೋವಾರಯಾಮಾಸುಃ ಮಹತ್ಯಾ ಸೇನಯಾ ಸಹ ॥೨೮೪॥

ಭೀಮಃ — ಭೀಮನು, ಅರ್ಜುನಃ — ಅರ್ಜುನನು, ಸಾತ್ಯಕಿಶ್ಚ — ಸಾತ್ಯಕಿಯೂ ಕೂಡ, ಮಹತ್ಯಾ — ಮಹತ್ತಾದ, ಸೇನಯಾ — ಸೈನ್ಯದಿಂದ, ಸಹ — ಕೂಡಿಕೊಂಡು, ಪರ್ಯಾಯೇಣ — ಕ್ರಮದಿಂದ, ಗುರೋಃ — ದ್ರೋಣರ, ಸುತಂ — ಮಗನಾದ ಅಶ್ವತ್ಥಾಮನನ್ನು, ದೂರತಃ — ದೂರದಿಂದಲೇ, ವಾರಯಾಮಾಸುಃ — ತಡೆದರು ॥೨೮೪॥

ಕರ್ಣದುರ್ಯೋಧನಾದೀಂಶ್ಚ ಶಲ್ಯಂ ಭೋಜಂ ಕೃಪಂ ತಥಾ ॥
ಭೀಮಾರ್ಜುನೌ ಶರೌಘೇಣ ವಾರಯಾಮಾಸತೂ ರಣೇ ॥೨೮೫॥

ಭೀಮಾರ್ಜುನೌ — ಭೀಮಾರ್ಜುನರು, ಕರ್ಣದುರ್ಯೋಧನಾದೀನ್ — ಕರ್ಣನು, ದುರ್ಯೋಧನನೂ ಇವರೇ ಮೊದಲಾಗಿ ಉಳ್ಳವರನ್ನು, ಶಲ್ಯಂ — ಶಲ್ಯನನ್ನು, ಭೋಜಂ — ಕೃತವರ್ಮನನ್ನು ತಥಾ — ಹಾಗೆಯೇ, ಕೃಪಂ — ಕೃಪಾಚಾರ್ಯರನ್ನೂ, ರಣೇ — ಯುದ್ಧದಲ್ಲಿ, ಶರೌಘೇಣ — ಬಾಣಗಳ ಸಮೂಹದಿಂದ, ವಾರಯಾಮಾಸತುಃ — ತಡೆದರು ॥೨೮೫॥

ತ್ರತಭೀಮೋಗಜಾನೀಕಂ ಜಯತ್ಸೇನಂಚ ಮಾಗಧಂ ॥
ಜಘಾನ ಸುಬಹೂಂಶ್ಚೈವ ಮಾಗಧಾನಾಂ ರಥವ್ರಜಾನ್ ॥೨೮೬॥

ತತ್ರ — ಆ ಯುದ್ಧದಲ್ಲಿ, ಭೀಮಃ — ಭೀಮನು, ಗಜಾನೀಕಂ — ಆನೆಗಳ ಸೈನ್ಯವನ್ನು, ಜಯತ್ಸೇನಂ — ಜಯತ್ಸೇನನೆಂಬ, ಮಾಗಧಂಚ — ಮಾಗಧನನ್ನೂ ಕೂಡ, ಜಘಾನ — ಕೊಂದನು, ಸುಬಹೂನ್ — ಅತಿ ಬಹುಸಂಖ್ಯಾಕಗಳಾದ, ಮಾಗಧಾನಾಂ — ಮಾಗಧರ, ರಥವ್ರಜಾನ್ — ರಥಿಕರ ಸಮೂಹಗಳನ್ನೂ, ಜಘಾನ — ಕೊಂದನು ॥೨೮೬॥

ಅಥಮಾಲವರಾಜಸ್ಯ ಅಶ್ವತ್ಥಾಮಾಭಿದಂ ಗಜಂ ॥
ಭೀಮಸೇನಹತಂ ದೃಷ್ಟ್ವಾ ವಾಸುದೇವಪ್ರಚೋದಿತಃ ॥
ಅಶ್ವತ್ಥಾಮಾ ಹತ ಇತಿ ಪ್ರಾಹರಾಜಾ ಯುಧಿಷ್ಠಿರಃ ॥೨೮೭॥

ಅಶ್ವತ್ಥಾಮವಧಂ ಶ್ರುತ್ವಾ ನಾಹಂ ಯೋತ್ಸ್ಯ ಇತಿ ಸ್ವಯಂ ॥
ಪುರೋಕ್ತಂ ಧರ್ಮಜಾಯೈವ ತೇನದ್ರೋಣೋ ಯುಧಿಷ್ಠಿರಂ ॥೨೮೮॥

ಬ್ರೂಹಿಸತ್ಯಮಿತಿ ಪ್ರಾಹ ಸತ್ಯಮಿತ್ಯೇವ ಸೋಽಬ್ರವೀತ್ ॥
ಉಪಾಂಶು ಕುಂಜರಶ್ಚೇತಿ ದ್ರೋಣೋಽತಿವ್ಯಥಿತೋಽಭವತ್ ॥೨೮೯॥

ಅಥ — ಅನಂತರ, ಮಾಲವರಾಜಸ್ಯ — ಮಾಲವದೇಶದ ರಾಜನ, ಅಶ್ವತ್ಥಾಮಾಭಿಧಂ — ಅಶ್ವತ್ಥಾಮನೆಂದು ಹೆಸರುಳ್ಳ, ಗಜಂ — ಆನೆಯನ್ನು, ಭೀಮಸೇನಹತಂ — ಭೀಮಸೇನನಿಂದ ಕೊಲ್ಲಲ್ಪಟ್ಟದ್ದನ್ನಾಗಿ, ದೃಷ್ಟ್ವಾ — ನೋಡಿ, ವಾಸುದೇವಪ್ರಚೋದಿತಃ — ಶ್ರೀಕೃಷ್ಣನಿಂದ ಪ್ರೇರಿಸಿಕೊಳ್ಳಲ್ಪಟ್ಟ, ರಾಜಾ ಯುಧಿಷ್ಠಿರಃ — ರಾಜನಾದ ಧರ್ಮರಾಜನು, ಅಶ್ವತ್ಥಾಮಾ ಹತ ಇತಿ — ಅಶ್ವತ್ಥಾಮನು ಸತ್ತನೆಂದು, ಪ್ರಾಹ — ಹೇಳಿದನು, ಪುರಾ — ಹಿಂದೆ, ಸ್ವಯಂ — ತಾನಾಗಿಯೇ, ತೇನ — ಆ ದ್ರೋಣರಿಂದ, ಅಶ್ವತ್ಥಾಮವಧಂ — ಅಶ್ವತ್ಥಾಮನ ನಾಶವನ್ನು, ಶ್ರುತ್ವಾ — ಕೇಳಿ, ಅಹಂ — ನಾನು, ನಯೋತ್ಸ್ಯೇ — ಯುದ್ಧಮಾಡಲಾರೆನು, ಇತಿ — ಎಂದು, ಧರ್ಮಜಾಯೈವ — ಧರ್ಮರಾಜನಿಗೆ, ಉಕ್ತಂ — ಹೇಳಲ್ಪಟ್ಟಿದೆ, ತೇನ — ಆ ಕಾರಣದಿಂದ, ದ್ರೋಣಃ — ದ್ರೋಣರು, ಯುಧಿಷ್ಠಿರಂ — ಧರ್ಮರಾಜನನ್ನು ಕುರಿತು, ಸತ್ಯಂ — ಸತ್ಯವನ್ನು, ಬ್ರೂಹಿ — ಹೇಳು, ಇತಿ — ಎಂದು, ಪ್ರಾಹ — ಹೇಳಿದರು, ಸಃ — ಆ ಧರ್ಮಜನು, ಸತ್ಯಮಿತ್ಯೇವ — ಯಥಾರ್ಥವೆಂದೇ ಅಬ್ರವೀತ್ — ಹೇಳಿದನು,

ಉಪಾಂಶು – ಮೆಲ್ಲನೇ, ಕುಂಜರಃ –ಆನೆಯು, ಇತಿಚ— ಎಂದೂ ಹೇಳಿದನು, ದ್ರೋಣಃ – ದ್ರೋಣರು, ಅತಿವ್ಯಥಿತಃ— ಅತ್ಯಂತ ದುಃಖವುಳ್ಳವರು ಅಭವತ್—ಆದರು. ॥೨೮೭॥೨೮೮॥೨೮೯॥

ತಸ್ಮಭೀಮೋರಥೇಷಾಂಚ ಗೃಹೀತ್ವಾನ ತವೇದೃಶಂ ॥
ಯೋಗ್ಯಂ ಗುಣವತೋನಿತ್ಯಂ ಪರಧರ್ಮೋಪಜೀವನಂ ॥೨೯೦॥
ಇತ್ಯಾಹ ಖಸ್ಥಾಮುನಯುಶ್ಚಾಲನೇಹೀತಿ ತಂತದಾ ॥
ಊಚುಸ್ತದಖಿಲಂ ಜ್ಞಾತ್ವಾ ದ್ರೋಣಃಶಸ್ತ್ರಮವಾಸೃಜತ್ ॥೨೯೧॥

ಭೀಮಃ—ಭೀಮನು. ತಸ್ಯ—ಆ ದ್ರೋಣರ, ರಥೇಷಾಂ —ರಥದ ಕಾಷ್ಠವಿಶೇಷವನ್ನು, ಗೃಹೀತ್ವಾ — ಹಿಡಿದು, ಗುಣವತಃ – ಗುಣವಂತನಾದ, ತವ—ನಿನಗೆ, ನಿತ್ಯಂ—ಯಾವಾಗಲೂ, ಈದೃಶಂ – ಇಂತಹ, ಪರಧರ್ಮೋಪಜೀವನಂ– ಕ್ಷತ್ರಿಯಧರ್ಮವಾದ ಯುದ್ಧದಿಂದ ಬದುಕಿಕೊಂಡಿರುವಿಕೆಯು, ನಯೋಗ್ಯಂ – ಯೋಗ್ಯವಲ್ಲ, ಇತಿ – ಎಂದು, ಆಹ — ಹೇಳಿದನು. ಖಸ್ಥಾಃ – ಆಕಾಶದಲ್ಲಿರತಕ್ಕ, ಮುನಯಶ್ಚ – ಋಷಿಗಳೂ ಕೂಡ, ಅಲಂ – ಯುದ್ಧವು ಸಾಕು ಇನ್ನುಮುಂದೆ ಯುದ್ಧದಿಂದ ಪ್ರಯೋಜನವಿಲ್ಲ, ಏಹಿ-ಬಾ, ಇತಿ – ಎಂಬುದಾಗಿ, ತಂ—ಆ ದ್ರೋಣರನ್ನು ಕುರಿತು, ತದಾ—ಭೀಮನು ಹೇಳುವ ಸಮಯದಲ್ಲಿಯೇ, ಊಚುಃ – ಹೇಳಿದರು, ತದಖಿಲಂ – ಭೀಮನು ಮತ್ತು ಋಷಿಗಳು ಹೇಳಿದ ಹಿತವಾದ ಮಾತನ್ನು, ಜ್ಞಾತ್ವಾ – ತಿಳಿದು, ದ್ರೋಣಃ–ದ್ರೋಣರು, ಶಸ್ತ್ರಂ – ಶಸ್ತ್ರವನ್ನು, ಅವಾಸೃಜತ್–ಕೆಳಗಿಟ್ಟರು. ॥೨೯೦॥೨೯೧॥

ಸನ್ಯಸ್ಯಕರ್ಮಾಣಿ ತದಾಖಿಲಾನಿಯೋಗಾರೂಢಃಪರಮಂ ವಾಸುದೇವಂ ॥
ಸರ್ವೇಶ್ವರಂ ನಿತ್ಯನಿರಸ್ತದೋಷಂ ಧ್ಯಾಯನ್ಮುಕ್ತ್ವಾದೇಹಮಗಾತ್ಸ್ವಧಾಮ ॥೨೯೨॥

ದ್ರೋಣರು ತದಾ—ಶಸ್ತ್ರಪರಿತ್ಯಾಗಕಾಲದಲ್ಲಿ, ಅಖಿಲಾನಿ – ಎಲ್ಲಾ ಕರ್ಮಗಳನ್ನೂ, ಸನ್ಯಸ್ಯ – ಪರಮಾತ್ಮನಿಗೆ ಅರ್ಪಿಸಿ, ಯೋಗಾರೂಢಃಸನ್—ಯೋಗಾಸಕ್ತರಾಗಿ, ದೇಹಂ – ಶರೀರವನ್ನು, ಮುಕ್ತ್ವಾ–ಪರಿತ್ಯಾಗ ಮಾಡಿ, ಸ್ವಧಾಮ– ತನ್ನ ಮಂದಿರವನ್ನು ಕುರಿತು, ಅಗಾತ್—ಹೋದರು. ॥೨೯೨॥

ತಂಕೇಶವಃಪಾಂಡವಾಗೌತಮಶ್ಚಯಾಂತಂ ಸ್ವಲೋಕಂ ದದೃಶುರ್ವಿಹಾಯಸಾ ॥
ಧೃಷ್ಟದ್ಯುಮ್ನಃಪಾಂಡವೈರ್ವಾರ್ಯಮಾಣೋಽಪ್ಯಗಾತ್ಖಡ್ಗಂಚರ್ಮಚಾದಾಯ ತತ್ರ ॥೨೯೩॥

ಕೇಶವಃ – ಕೃಷ್ಣನು, ಪಾಂಡವಾಃ – ಪಾಂಡವರು, ಗೌತಮಶ್ಚ — ಕೃಪಾಚಾರ್ಯರೂ ಕೂಡ, ವಿಹಾಯಸಾ – ಆಕಾಶಮಾರ್ಗದಿಂದ, ಸ್ವಲೋಕಂ – ತನ್ನ ಲೋಕವನ್ನು ಕುರಿತು, ಯಾಂತಂ – ಹೋಗತಕ್ಕ, ತಂ— ಆ ದ್ರೋಣರನ್ನು, ದದೃಶುಃ – ನೋಡಿದರು, ಧೃಷ್ಟದ್ಯುಮ್ನಃ – ಧೃಷ್ಟದ್ಯುಮ್ನನು, ಪಾಂಡವೈಃ—ಪಾಂಡವರಿಂದ, ವಾರ್ಯಮಾಣೋಪಿ – ತಡೆಯಲ್ಪಟ್ಟವನಾದರೂ ಕೂಡ, ಖಡ್ಗಂ— ಖಡ್ಗವನ್ನು ಚರ್ಮಚ —ಢಾಲನ್ನೂ, ಕೂಡ, ಆದಾಯ — ಹಿಡಿದುಕೊಂಡು, ತತ್ರ – ಆ ದ್ರೋಣರದೇಹವಿದ್ದಲ್ಲಿಗೆ, ಅಗಾತ್ – ಹೋದನು. ॥೨೯೩॥

ಛಿತ್ವಾಸಿನಾತಸ್ಯಶಿರಃ ಪುನಶ್ಚರಥಂ ಸ್ವಕೀಯಂ ತ್ವರಯಾ ಸಮಾಸ್ಥಿತಃ ॥
ದೃಷ್ಟ್ವಾಕೃಪಸ್ತಂ ಸುಭೃಶಂ ಭಯಾರ್ದಿತಸ್ಸಂಪ್ರಾದ್ರವದ್ವಾಜಿನಮೇಕ ಮಾಸ್ಥಿತಃ ॥೨೯೪॥

ಧೃಷ್ಟದ್ಯುಮ್ನನು ತಸ್ಯ–ಆ ದ್ರೋಣರ ದೇಹದ, ಶಿರಃ–ತಲೆಯನ್ನು, ಅಸಿನಾ – ಖಡ್ಗದಿಂದ, ಛಿತ್ವಾ–ತುಂಡರಿಸಿ, ತ್ವರಯಾ – ವೇಗದಿಂದ, ಸ್ವಕೀಯಂ ರಥಂ—ತನ್ನ ರಥವನ್ನು, ಸಮಾಸ್ಥಿತಃ – ಏರಿದನು, ಕೃಪಃ—ಕೃಪರು, ತಂ – ಆ

ಧೃಷ್ಟದ್ಯುಮ್ನನನ್ನು, ದೃಷ್ಟ್ವಾ—ನೋಡಿ, ಸುಭೃಶಂ -- ಚೆನ್ನಾಗಿ. ಭಯಾರ್ದಿತಸ್ಸನ್ – ಹೆದರಿಕೆಯಿಂದ ಪೀಡಿಸಿಕೊಳ್ಳಲ್ಪಟ್ಟವರಾಗಿ, ಏಕಂ ವಾಜಿನಂ—ಒಂದು ಕುದುರೆಯನ್ನು, ಆಸ್ಥಿತಸ್ಸನ್-ಏರಿದವರಾಗಿ, ಸಂಪ್ರಾದ್ರವ-್—ಓಡಿದರು. ॥೨೯೪॥

ಸಂಛಿನ್ನೇ ದ್ರೋಣಶಿರಸಿ ಗರ್ಹಯಾಮಾಸ ವಾಸವಿಃ ॥
ಯುಧಿಷ್ಠಿರಶ್ಚ ಪಾಂಚಾಲ್ಯಂ ಸಾತ್ಯಕಿಶ್ಚಾಪಿ ಕೋಪಿತಃ ॥೨೯೫॥

ವಾಸವಿಃ – ಅರ್ಜುನನು, ಯುಧಿಷ್ಠಿರಶ್ಚ – ಧರ್ಮರಾಜನೂ ಕೂಡ, ದ್ರೋಣಶಿರಸಿ – ದ್ರೋಣರ ತಲೆಯು, ಸಂಛಿನ್ನೇಸತಿ—ಛಿನ್ನವಾಗುತ್ತಿರಲು, ಪಾಂಚಾಲ್ಯಂ-ಧೃಷ್ಟದ್ಯುಮ್ನನನ್ನು, ಗರ್ಹಯಾಮಾಸ-ನಿಂದಿಸಿದರು, ಸಾತ್ಯಕಿಶ್ಚಾಪಿ-ಸಾತ್ಯಕಿಯೂ ಕೂಡ, ಕೋಪಿತಃ—ಕ್ರೋಧಯುಕ್ತನಾದನು. ॥೨೯೫॥

ಧೃಷ್ಟದ್ಯುಮ್ನಸ್ತು ತಾವಾಹ ಕಥಂಭೂರಿಶ್ರವಾಹತಃ ॥
ಇತಿ ತಂ ಸಾತ್ಯಕಿಃಕ್ರುದ್ಧೋ ಗದಾಪಾಣಿಃ ಸಮುಭ್ಯಯಾತ್ ॥೨೯೬॥

ಧೃಷ್ಟದ್ಯುಮ್ನಸ್ತು – ಧೃಷ್ಟದ್ಯುಮ್ನನಾದರೂ, ಭೂರಿಶ್ರವಾಃ—ಭೂರಿಶ್ರವನು, ಕಥಂ – ಹೇಗೆ, ಹತಃ—ಕೊಲ್ಲಲ್ಪಟ್ಟನು, ಇತಿ—ಎಂಬುದಾಗಿ, ತೌ – ಆ ಅರ್ಜುನ ಮತ್ತು ಸಾತ್ಯಕಿಯರನ್ನು ಕುರಿತು, ಆಹ—ಹೇಳಿದನು, ತಂ—ಆ ಧೃಷ್ಟದ್ಯುಮ್ನನನ್ನು ಕುರಿತು, ಕ್ರುದ್ಧಃ – ಕುಪಿತನಾದ, ಸಾತ್ಯಕಿಃ–ಸಾತ್ಯಕಿಯು, ಗದಾಪಾಣಿಃಸನ್ – ಗದೆಯನ್ನು ಕೈಯಲ್ಲಿ ಹಿಡಿದವನಾಗಿ, ಸಮುಭ್ಯಯಾತ್ – ಯುದ್ಧಕ್ಕಾಗಿ ಬಂದನು. ॥೨೯೬॥

ಆಹ್ವಯಾಮಾಸಪಾಂಚಾಲ್ಯಸ್ತಂಧೃತಾಸಿರವಿಸ್ಮಯಃ ॥

ತದಾಜಗ್ರಾಹ ಶೈನೇಯಂ ಭೀಮಃ ಕೃಷ್ಣಪ್ರಚೋದಿತಃ ॥
ಶಮಯಾಮಾಸ ಪಾರ್ಥಂಚ ಪಾಂಚಾಲ್ಯಸ್ನೇಹಯಂತ್ರಿತಃ ॥೨೯೭॥

ಪಾಂಚಾಲ್ಯಃ – ಧೃಷ್ಟದ್ಯುಮ್ನನು, ಧೃತಾಸಿಸ್ಸನ್ – ಖಡ್ಗವನ್ನು ಧರಿಸಿದವನಾಗಿ, ಅವಿಸ್ಮಯಸ್ಸನ್—ಭಯರಹಿತನಾಗಿ, ತಂ – ಆ ಸಾತ್ಯಕಿಯನ್ನು, ಆಹ್ವಯಾಮಾಸ—ಯುದ್ಧಕ್ಕೆ ಕರೆದನು, ತದಾ – ಆಗ, ಕೃಷ್ಣಪ್ರಚೋದಿತಃ–ಶ್ರೀಕೃಷ್ಣನಿಂದ ಪ್ರೇರಿಸಲ್ಪಟ್ಟ, ಭೀಮಃ – ಭೀಮನು, ಶೈನೇಯಂ— ಸಾತ್ಯಕಿಯನ್ನು, ಜಗ್ರಾಹ – ಹಿಡಿದನು, ಪಾಂಚಾಲ್ಯ ಸ್ನೇಹಯಂತ್ರಿತಃ — ಧೃಷ್ಟದ್ಯುಮ್ನನ ಮೇಲಿನ ಪ್ರೀತಿಯು ಅಧೀನನಾದ ಭೀಮನು, ಪಾರ್ಥಂ—ಅರ್ಜುನನನ್ನು, ಶಮಯಾಮಾಸ – ಸಮಾಧಾನಪಡಿಸಿದನು. ॥೨೯೭॥

ತೇವಾಸುದೇವೇನ ತದಾ ಸುಶಿಕ್ಷಿತಾಃಸ್ನೇಹಂ ಪುನಃಪೂರ್ವವದಾಪುರುತ್ತಮಂ ॥
ಯತ್ತಾಶ್ಚಯುದ್ಧಾಯ ಸಮುದ್ಯತಾಶ್ಚ ತದಾಗನುದ್ರೌಣಿರಪ್ಯಾತ್ತಧನ್ವಾ ॥೨೯೮॥

ತದಾ—ಆಗ, ವಾಸುದೇವೇನ — ಶ್ರೀಕೃಷ್ಣನಿಂದ, ಸುಶಿಕ್ಷಿತಾಃ – ಚೆನ್ನಾಗಿ ಶಿಕ್ಷಿಸಲ್ಪಟ್ಟ, ತೇ — ಆ ಅರ್ಜುನ, ಸಾತ್ಯಕಿ, ಧೃಷ್ಟದ್ಯುಮ್ನರು, ಪುನಃ – ಮತ್ತೆ, ಪೂರ್ವವತ್ – ಹಿಂದಿನಂತೆಯೇ, ಉತ್ತಮಂ ಸ್ನೇಹಂ – ಉತ್ತಮವಾದ ಪ್ರೀತಿಯನ್ನು, ಆಪುಃ – ಹೊಂದಿದರು. ಅರ್ಜುನಾದಿಗಳು, ಯತ್ತಾಃಸಂತಃ – ಸ್ವೀಕರಿಸಲ್ಪಟ್ಟ ಆಯುಧವುಳ್ಳವರಾಗಿ, ಯುದ್ಧಾಯ—ಯುದ್ಧಕ್ಕೊಸ್ಕರ, ಸಮುದ್ಯತಾಃ—ಸನ್ನದ್ಧರಾದರು, ತದಾ – ಆಗ, ದ್ರೌಣಿರಪಿ—ಅಶ್ವತ್ಥಾಮರೂ ಕೂಡ, ಆತ್ತಧನ್ವಾಸನ್ – ಧನುಸ್ಸನ್ನು ಸ್ವೀಕರಿಸಿದವರಾಗಿ, ಆಗಮತ್—ಬಂದರು. ॥೨೯೮॥

ಭಾ. ಅ. ೨೭೩—೨೯೮ ಬಾಹ್ಲೀಕರಾಜನು ಸಾಯುತ್ತಿರಲು ಕರ್ಣ, ದುರ್ಯೋಧನ ಮೊದಲಾದ ಕೌರವರು ಅಶ್ವತ್ಥಾಮರನ್ನು ಮುಂದೆ ಮಾಡಿಕೊಂಡು ಶ್ರೀಭೀಮರ ಮೇಲೆ ಏರಿ ಬಂದರು. ಧೃಷ್ಟದ್ಯುಮ್ನನು ತನ್ನ ತಮ್ಮಂದಿರು ಹಾಗು ಸಾತ್ಯಕಿಗಳಿಂದ ಕೂಡಿಕೊಂಡು ದ್ರೋಣರ ಹತ್ತಿರ ಯುದ್ಧಕ್ಕೆ ಹೋದನು. ಅರ್ಜುನನು ಸಂಶಪ್ತಕರ ಜೊತೆಗೆ ಭಯಂಕರ ಯುದ್ಧ ಮಾಡುತ್ತಿದ್ದನು. ಆ ರಾತ್ರಿ ಯುದ್ಧದಲ್ಲಿ ಭೀಮಾರ್ಜುನರು ಒಂದು ಅಕ್ಷೌಹಿಣೀ ಸೈನ್ಯವನ್ನು ಸಂಹರಿಸಿದರು. ಮರುದಿನ ಸೂರ್ಯೋದಯವಾದ ಮೇಲೆ ನಡೆದ ಯುದ್ಧದಲ್ಲಿ ದ್ರೋಣರು ಮುದುಕರಾದರೂ ತರುಣರಂತೆ ಅತಿ ಘೋರವಾದ ಯುದ್ಧವನ್ನು ಮಾಡುತ್ತಾ ಪಾಂಚಾಲರ ಮಹಾರಥಿಕರ ಸಮೂಹವನ್ನು ಪ್ರವೇಶಿಸಿ ಎಷ್ಟೋ ಚತುರಂಗ ಸೈನ್ಯವನ್ನು ಸಂಹರಿಸಿದರು. ಬಹಳ ಮಹಾರಥಿಕರು ಗಾಬರಿಯಾಗಿ ಓಡಿದರು. ಅರ್ಬುದ ಆನೆ, ಅರ್ಬುದ ರಥಗಳನ್ನು, ಸಾವಿರ ಅರ್ಬುದ ನರರನ್ನು,ಒಂದುನೂರು ಅರ್ಬುದ ಕುದುರೆಗಳನ್ನು ಸಂಹರಿಸಿದರು.(ಇಲ್ಲಿ ಅರ್ಬುದ ಎಂದರೆ ಇಪ್ಪತ್ತು ಸಾವಿರ ಎಂದು ಅರ್ಥ ಎಂದು ಶ್ರೀವಾದಿರಾಜ ಶ್ರೀಪಾದರು ತಿಳಿಸಿದ್ದಾರೆ). ದ್ರುಪದ-ವಿರಾಟ ರಾಜರನ್ನು ಸಂಹರಿಸಿದರು. ಆಗ ಶ್ರೀಭೀಮರು ಅಶ್ವತ್ಥಾಮಾದಿಗಳನ್ನು ಗೆದ್ದು ಧೃಷ್ಟದ್ಯುಮ್ನನನ್ನು ರಕ್ಷಿಸಿದರು. ಧೃಷ್ಟದ್ಯುಮ್ನನು ದ್ರೋಣರನ್ನು ಸಂಹರಿಸಿಲು ಬಹು ಯತ್ನವನ್ನು ಮಾಡಿದನು. ದ್ರೋಣರು ಆ ಎಲ್ಲ ಪ್ರಯತ್ನಗಳನ್ನು ವಿಫಲಗೊಳಿಸುತ್ತಿದ್ದರು; ಹಾಗು ಧೃಷ್ಟದ್ಯುಮ್ನನ ಮೇಲೆಯೇ ಏರಿಹೋಗುತ್ತಿದ್ದರು. ಧೃಷ್ಟದ್ಯುಮ್ನನು ಬಾಣದಿಂದ ಹೊಡೆದಾಗ ದ್ರೋಣರಿಗೆ ಮೂರ್ಛೆಬಂದಿತು; ಸ್ತಬ್ಧರಾಗಿ ಕುಳಿತರು. ಆಗ ಕೂಡಲೇ ಧೃಷ್ಟದ್ಯುಮ್ನನು ಖಡ್ಗ ಧಾರಿಯಾಗಿ ಅವರ ರಥಕ್ಕೆ ಹೋಗಿ, ಏರಿ ಅವರನ್ನು ಹೊಡೆಯುವ ಇಚ್ಛೆಯಲ್ಲಿದ್ದನು. ಅವನು ಅವರ ಅತಿ ಸಮೀಪಕ್ಕೆ ಬಂದಹೊತ್ತಿಗೆ ದ್ರೋಣರಿಗೆ ಎಚ್ಚರ ಬಂದು, ಸಣ್ಣ ಬಾಣಗಳಿಂದ ಅವನಿಗೆ ಹೊಡೆದರು. ಅವುಗಳಿಂದ ತುಂಬಾವ್ಯಥೆಗೊಂಡ ಧೃಷ್ಟದ್ಯುಮ್ನನು ಅವರ ರಥದಿಂದ ವಾಪಸ್ ತನ್ನ ರಥಕ್ಕೆ ಹೋದನು. ಇಬ್ಬರೂ ಸಿಟ್ಟಿನಿಂದ ಜೋರಾಗಿ ಯುದ್ಧ ಮಾಡಿದರು. ಪರಸ್ಪರ ಬಾಣವೃಷ್ಟಿ ಮಾಡುತ್ತಾ ಇರಲು, ಬ್ರಹ್ಮಾಸ್ತ್ರವನ್ನು ದ್ರೋಣರು ಪ್ರಯೋಗಿಸಿದರು. ಅದರಿಂದ ಬಹು ಪಾಂಚಾಲ ಸೈನ್ಯವನ್ನು ಧ್ವಂಸ ಮಾಡಿದರು; ಪುರುಜಿತ್, ಕುಂತಿಭೋಜ ಮೊದಲಾದ ರಾಜರನ್ನೂ ಕೂಡ ಸಂಹರಿಸಿದರು, ಶ್ರೀಭೀಮರು, ಅರ್ಜುನ, ಸಾತ್ಯಕಿ ಇವರೆಲ್ಲರೂ ಒಬ್ಬರ ನಂತರ ಒಬ್ಬರಂತೆ ಅಶ್ವತ್ಥಾಮರನ್ನು ತಡೆದರು. ಕರ್ಣ ದುರ್ಯೋಧನಾದಿ ಕೌರವರು, ಶಲ್ಯ, ಕೃತವರ್ಮ, ಕೃಪ ಇವರೆಲ್ಲರನ್ನು, ಬಹು ಸೈನವನ್ನೂ ದೂರದಿಂದಲೇ ಭೀಮಾರ್ಜುನರು ತಡೆಯುತ್ತಿದ್ದರು. ಶ್ರೀಭೀಮರು ಆನೆಗಳ ಹಿಂಡನ್ನೇ ಸಂಹರಿಸಿದರು; ಮಗಧ ದೇಶದ ಜಯತ್ಸೇನನೆಂಬವನನ್ನು ಹಾಗು ರಥಸಮೂಹಗಳನ್ನು ಧ್ವಂಸಗೊಳಿಸಿದರು. ಮಾಲವ ದೇಶದ ರಾಜನ 'ಅಶ್ವತ್ಥಾಮ' ಎಂಬ ಹೆಸರಿನ ಆನೆಯನ್ನೂ ಕೂಡ ಕೊಂದಾಗ, ಶ್ರೀಕೃಷ್ಣನ ಆಜ್ಞಾ ಪ್ರಕಾರ ಧರ್ಮರಾಜನು 'ಅಶ್ವತ್ಥಾಮಾಹತಃ' (ಅಶ್ವತ್ಥಾಮನು ಸತ್ತನು) ಎಂಬುದಾಗಿ ಹೇಳಿದನು. ಏಕೆಂದರೆ ಅಶ್ವತ್ಥಾಮನು ಸತ್ತರೆ ನಾನು ಯುದ್ಧವನ್ನು ಮಾಡಲಾರೆ ಎಂದು ಈ ಮೊದಲು ಧರ್ಮರಾಜನಿಗೇ ತಿಳಿಸಿದ್ದರು, ಈಗ ಧರ್ಮರಾಜನು ಹೀಗೆ ಹೇಳಿದ್ದನ್ನು ಕೇಳಿ ಸತ್ಯವನ್ನು ಹೇಳು ಎಂದು ಆಂದಾಗ, ಧರ್ಮರಾಜನು 'ಅಹುದು' ಎಂದು ಹೇಳಿ ಮೆಲ್ಲನೇ 'ಕುಂಜರಃ' ('ಆನೆಯು') ಎಂದು ಹೇಳಿದನು. ಆದರೆ ಈ ಮೆಲ್ಲಮಾತು ಕೇಳದೆಯೇ, ಮಗ ಅಶ್ವತ್ಥಾಮನು ಸತ್ತನೆಂದೇ ತಿಳಿದು ವ್ಯಥೆಗೊಂಡು ಕುಳಿತರು. ಆಗ ಶ್ರೀಭೀಮರು ಅವರ ರಥದ ಒಂದು ಬಡಿಗೆಯನ್ನು ಹಿಡಿದು ನಿಮ್ಮಂತಹ ಜ್ಞಾನಿಗಳಿಗೆ, ಗಣ್ಯರಿಗೆ ಈ ರೀತಿ ಪರಧರ್ಮ (ಕ್ಷಾತ್ರಧರ್ಮ)ದಿಂದ ಜೀವನವು ಯೋಗ್ಯವಲ್ಲ' ಎಂದು ಹೇಳಿದಾಗ ಮುನಿಗಳು, ದೇವತೆಗಳೂ ಕೂಡ ಆಕಾಶದಲ್ಲಿ ನಿಂತು "ಸಾಕು, ಸಾಕು ಯುದ್ಧ, ನೀನು ಸ್ವಮೂಲರೂಪಕ್ಕೆ ಬಾ" ಎಂದು ಕರೆದರು. ಇದನ್ನೆಲ್ಲ ಕೇಳಿದ ದ್ರೋಣರು ಅವರೆಲ್ಲರ ಅಭಿಪ್ರಾಯವನ್ನು ತಿಳಿದು, ತಮಗೆ ಹಿತವೆಂದು ತಿಳಿದು ಅದರಂತೆ ಶಸ್ತ್ರತ್ಯಾಗ ಮಾಡಿ, ಎಲ್ಲ ಬಾಹ್ಯಕರ್ಮಗಳನ್ನು ದೇವರಿಗೆ ಅರ್ಪಿಸಿ ಯೋಗಾಸನಾರೂಢರಾಗಿ, ಸರ್ವನಿಯಾಮಕನಾದ, ನಿರ್ದುಷ್ಟನಾದ ಭಗವಂತನನ್ನು ಧ್ಯಾನ ಮಾಡುತ್ತಾ ದೇಹ ಬಿಟ್ಟು ತಮ್ಮ ಸ್ಥಾನವನ್ನು ಸೇರಿದರು. ಅವರು ಆಕಾಶ ಮಾರ್ಗದಿಂದ ಪ್ರಯಾಣ ಮಾಡುವದನ್ನು ಶ್ರೀಕೃಷ್ಣ, ಪಾಂಡವರು, ಕೃಪರು ನೋಡಿದರು. ಧೃಷ್ಟದ್ಯುಮ್ನನು ಖಡ್ಗವನ್ನು ಹಿಡಿದುಕೊಂಡು ಅವರ ಸಮೀಪಕ್ಕೆ ಅವರ ಶಿರಶ್ಛೇದ ಮಾಡಲೆಂದು, ಪಾಂಡವರು ನಿಷೇಧಿಸುತ್ತಿದ್ದರೂ ಕೂಡ ಹೋಗಿ ಅವರ ಶಿರಸ್ಸನ್ನು ಕತ್ತರಿಸಿ ತನ್ನ ರಥಕ್ಕೆ ಬೇಗ ವಾಪಸ್ ಆದನು. ಇದನ್ನೆಲ್ಲ ನೋಡಿದ ಕೃಪರು ಹೆದರಿ ಕುದುರೆಯೊಂದನ್ನು ಏರಿಕೊಂಡು ಓಡಿದರು. ಅರ್ಜುನನು ಈ ಕಾರ್ಯ ಮಾಡಿದ ಧೃಷ್ಟದ್ಯುಮ್ನನನ್ನು ನಿಂದಿಸಿದನು. ಧರ್ಮರಾಜನನ್ನು ನಿಂದಿಸಿದನು. ಸಾತ್ಯಕಿಯೂ ಧೃಷ್ಟದ್ಯುಮ್ನನನ್ನು ನಿಂದಿಸಿದನು. ಆಗ ಧೃಷ್ಟದ್ಯುಮ್ನನು ಅವರಿಬ್ಬರಿಗೂ ಭೂರಿಶ್ರವಸ್ಸನನ್ನು ಹೇಗೆ ಕೊಂದದ್ದು ? ಎಂದು ಕೇಳಿದನು. ಆಗ ಸಾತ್ಯಕಿಯು ಸಿಟ್ಟಿಗೆದ್ದು ಗದಾ ಹಿಡಿದುಕೊಂದು ಧೃಷ್ಟದ್ಯುಮ್ನನ ಮೇಲೆ ಏರಿ ಹೋದನು.

ಧೃಷ್ಟದ್ಯುಮ್ನನೂ ಕೂಡ ತಡವಾಡದೇ ಖಡ್ಗ ಹಿಡಿದುಕೊಂಡು ಆಹ್ವಾನಿಸಿದನು. ಆಗ ಶ್ರೀಕೃಷ್ಣಪ್ರೇರಿತರಾದ ಶ್ರೀಭೀಮರು ಸಾತ್ಯಕಿಯನ್ನು ಹಿಡಿದು ಹಿಂದೆ ಸರಿಸಿ ಅವನನ್ನು ಹಾಗು ಅರ್ಜುನನನ್ನು ಸಮಾಧಾನ ಮಾಡಿದರು. ಶ್ರೀಕೃಷ್ಣನೂ ಕೂಡ ಒಬ್ಬರಿಗೊಬ್ಬರು ಸಿಟ್ಟು ಮಾಡಿಕೊಳ್ಳದಿರಲು ಉಪದೇಶಿಸಿದನು. ಆಗ ಎಲ್ಲರೂ ಸಿಟ್ಟನ್ನು ಬಿಟ್ಟು ಮೊದಲಿನಂತೆ ಸ್ನೇಹ ಯುಕ್ತರಾದರು. ಎಲ್ಲರೂ ಯುದ್ಧಕ್ಕೆ ಸಿದ್ಧರಾಗಿ ನಿಂತರು.

ವಿಶೇಷಾಂಶ ೧) ದೇವಗುರು ಬೃಹಸ್ಪತಿಗಳ ಅವತಾರರಾದ ದ್ರೋಣರು ಪರಧರ್ಮ ಬಿಟ್ಟು ಸ್ವಧರ್ಮವನ್ನು ಆಚರಿಸಿ, ಭಗವದ್ಧ್ಯಾನ ಮಾಡಿ, ಉದ್ಧೃತರಾಗಲು ಶ್ರೀಭೀಮರ ಉಪದೇಶವೇಕಾರಣವಾಯಿತು ಎಂಬುದನ್ನು ಗಮನಿಸಿದರೆ ಸರ್ವಜ್ಞ ಶ್ರೀಮದಾನಂದತೀರ್ಥರ ಶಾಸ್ತ್ರ ಶ್ರವಣ ಮನನಗಳೇ ಎಲ್ಲ ಸಚ್ಚೇತನರ ಉದ್ಧಾರಕ್ಕೆ ಕಾರಣಗಳು ಎಂಬುದನ್ನು ತಿಳಿಯಬಹುದು. **೨)** ದ್ರೋಣರು ಭಗವಂತನನ್ನು ಸರ್ವನಿಯಾಮಕನನ್ನಾಗಿ, ನಿರ್ದೋಷ್ಟನನ್ನಾಗಿ, ತಿಳಿದು ತಮ್ಮ ಮೂಲ ರೂಪವನ್ನು ಹೊಂದಿದರು ಎಂಬ ಕಥಾವನ್ನು ವಿಚಾರಿಸಿದರೆ ಶ್ರೀಮನ್ಮಧ್ವ ಸಿದ್ಧಾಂತವೇ ಉದ್ಧಾರ ಸಾಧನ, ಪ್ರಾಮಾಣಿಕ ಎಂದು ತಿಳಿಯಬಹುದು.

ಆಶ್ರುತ್ಥತಾತಂ ನಿಹತಂ ಪ್ರತಿಜ್ಞಾಂಚಕಾರ ನಿಶ್ಶೇಷರಿಪುಪ್ರಮಾಥನೇ ॥
ನಾರಾಯಣಾಸ್ತ್ರಂ ವಿಸಸರ್ಜಕೋಪಾತ್ತದಾಭೀತಾಭೀಮಮೃತೇಸಮಸ್ತಾಃ ॥೨೯॥

ಅಶ್ವತ್ಥಾಮಾಚಾರ್ಯರು ತಾತಂ — ತಂದೆಯನ್ನು, ನಿಹತಂ – ಕೊಲ್ಲಲ್ಪಟ್ಟವರನ್ನಾಗಿ, ಆಶ್ರುತ್ಥ – ಕೇಳಿ, ನಿಶ್ಶೇಷರಿಪುಪ್ರಮಾಥನೇ – ಶೇಷವಿಲ್ಲದ್ದು ಹೇಗೋ ಹಾಗೆ ಶತ್ರುಗಳ ನಾಶದಲ್ಲಿ, ಪ್ರತಿಜ್ಞಾ–ಪ್ರತಿಜ್ಞೆಯನ್ನು, ಚಕಾರ–ಮಾಡಿದರು. ಕೋಪಾತ್—ಕ್ರೋಧದಿಂದ, ನಾರಾಯಣಾಸ್ತ್ರಂ – ನಾರಾಯಣಾಸ್ತ್ರವನ್ನು ವಿಸಸರ್ಜ–ಬಿಟ್ಟರು, ತದಾ–ಆಗ, ಭೀಮಮೃತೇ–ಭೀಮನನ್ನು ಬಿಟ್ಟು, ಸಮಸ್ತಾಃ – ಎಲ್ಲರೂ, ಭೀತಾಃ—ಭಯಗ್ರಸ್ತರಾದರು. ॥೨೯॥

ಯುಧಿಷ್ಠಿರಃಪ್ರಾಹ ವಿಷಣ್ಣಚೇತನಃ ಶೈನೇಯಪೂರ್ವಾಃಪ್ರತಿಯಾಂತುಸರ್ವೇ ॥
ಸಭ್ರಾತೃಕೋಽಹಂ ದ್ರೌಣಿವರಾಭಸ್ತ್ರಗ್ನೋಭವೇಯಮಿತ್ಯತ್ರ ಜಗಾದಕೇಶವಃ ॥೩೦೦॥

ಯುಧಿಷ್ಠಿರಃ – ಧರ್ಮರಾಜನು, ವಿಷಣ್ಣಚೇತನಸ್ಸನ್–ದುಃಖಿತವಾದ ಮನಸ್ಸುಳ್ಳವನಾಗಿ, ಶೈನೇಯಪೂರ್ವಾಃ–ಸಾತ್ಯಕಿಯೇ ಮೊದಲಾಗಿ ಉಳ್ಳ, ಸರ್ವೇ—ಎಲ್ಲರೂ, ಪ್ರತಿಯಾಂತು—ಹೋಗಲಿ, ಸಭ್ರಾತೃಕಃ—ತಮ್ಮಂದಿರಿಂದ ಕೂಡಿದ, ಅಹಂ – ನಾನು, ದ್ರೌಣಿವರಾಸ್ತ್ರಭಗ್ನಃ – ಅಶ್ವತ್ಥಾಮರ ಶ್ರೇಷ್ಠವಾದ ಅಸ್ತ್ರದಿಂದ ಸುಡಲ್ಪಡತಕ್ಕವನು, ಭವೇಯಂ – ಆಗುವೆನು, ಇತಿ – ಎಂದು, ಪ್ರಾಹ—ಹೇಳಿದನು, ಅತ್ರ— ಈ ನಾರಾಯಣಾಸ್ತ್ರದ ಪರಿಹಾರವಿಷಯದಲ್ಲಿ, ಕೇಶವಃ – ಶ್ರೀಕೃಷ್ಣನು, ಜಗಾದ—ಹೇಳಿದನು. ॥೩೦೦॥

ನಮಧ್ವಮಸ್ತ್ರಸ್ಯತತೋವಿಮೋಕ್ಷ್ಯಥೇತ್ಯಥ ಪ್ರಣೇಮುಶ್ಚ ಧನಂಜಯಾದಿಕಾಃ ॥
ಸರ್ವೇನ ಭೀಮಸ್ತದಮುಷ್ಯಮೂರ್ಧ್ನಿಪಪಾತ ಸೋಽಗ್ನಾವಿವಸಂಸ್ಥಿತೋಽಗ್ನಿಃ ॥೩೦೧॥

ಹೇ ಪಾಂಡವಾಃ – ಲೋ ಪಾಂಡವರೇ, ಅಸ್ತ್ರಸ್ಯ – ಅಸ್ತ್ರಕ್ಕೆ, ನಮಧ್ವಂ ನಮಸ್ಕರಿಸಿರಿ, ತತಃ—ಆ ನಮಸ್ಕಾರ ರೂಪ ಕ್ರಿಯೆಯಿಂದ, ವಿಮೋಕ್ಷ್ಯಥ – ಅಸ್ತ್ರದಿಂದ ಬಿಡುಗಡೆಯನ್ನು ಹೊಂದಿರಿ, ಇತಿ — ಎಂದು ಹೇಳಿದನು, ಅಥ – ಅನಂತರ, ಧನಂಜಯಾದಿಕಾಃ — ಅರ್ಜುನನೇ ಮೊದಲಾಗಿಉಳ್ಳ, ಸರ್ವೇ – ಎಲ್ಲರೂ, ಪ್ರಣೇಮುಃ ನಮಸ್ಕರಿಸಿದರು. ಭೀಮಃ – ಭೀಮನು, ನ ನನಾಮ—ನಮಸ್ಕರಿಸಲಿಲ್ಲ, ತತ್ – ಆ ಅಸ್ತ್ರವು, ಅಮುಷ್ಯ—ಈ ಭೀಮನ, ಮೂರ್ಧ್ನಿ— ಶಿರಸ್ಸಿನಲ್ಲಿ, ಪಪಾತ - ಬಿತ್ತು, ಸಃ – ಆ ಭೀಮನು ಬಿದ್ದ ಅಸ್ತ್ರದಿಂದ ಸುಡುವವನಾಗಲಿಲ್ಲ, ಅದಕ್ಕೆ ದೃಷ್ಟಾಂತವು ಅಗ್ನೌ – ಬೆಂಕಿ

ಯಲ್ಲಿ, ಸಂಸ್ಥಿತಃ—ಇರತಕ್ಕ, ಅಗ್ನಿರಿವ – ಬೆಂಕಿಯಂತೆ, ಅಗ್ನಿಯಲ್ಲಿರುವ ಅಗ್ನಿಯನ್ನು ಹೇಗೆ ಸುಡುವುದಿಲ್ಲವೋ ಹಾಗೆ, ಭೀಮನ ಶಿರಸ್ಸಿನಲ್ಲಿರುವ ಅಸ್ತ್ರವು ಭೀಮನನ್ನು ಸುಡಲಿಲ್ಲ. ॥೩೦೧॥

ಅದಹ್ಯಮಾನೇಭೀಮೇಪಿ ವಹ್ನೌವಹ್ನಿರಿವಸ್ಥಿತೇ ॥
ಅವೇಷ್ಟಯದ್ವಾರುಣೇನ ಪಾರ್ಥೋಽತ್ರಾತ್ಮಪ್ರಪತ್ತಯೇ ॥೩೦೨॥

ವಹ್ನೌವಹ್ನಿರಿವ – ಬೆಂಕಿಯಲ್ಲಿರುವ ಬೆಂಕಿಯಂತೆ, ಭೀಮೇ–ಭೀಮನು, ಅದಹ್ಯಮಾನೇಸ್ಥಿತೇಸತಿ–ನಾರಾಯಣಾಸ್ತ್ರದಿಂದ ಸುಡದೇ ಇರುತ್ತಿರಲು, ಪಾರ್ಥಃ – ಅರ್ಜುನನು, ಅತ್ರ – ಅಸ್ತ್ರಪರಿಹಾರ ವಿಷಯದಲ್ಲಿ, ಆತ್ಮಪ್ರಪತ್ತಯೇ–ತನಗೆ ಭೀಮಸೇನನ ಮೇಲಿರುವ ಸ್ನೇಹಕ್ಕಾಗಿ, ವಾರುಣೇನ — ವಾರುಣಾಸ್ತ್ರದಿಂದ, ಅವೇಷ್ಟಯತ್ — ವೇಷ್ಟನ ಮಾಡಿದನು, ಭೀಮನ ಸುತ್ತಲೂ ನೀರು ಬೀಳುವಂತೆ ಮಾಡಿದನು. ॥೩೦೨॥

ನದೇಹೇ ಪತಿತಾಸ್ತ್ರಸ್ಯ ಬಹಿರ್ವೇಷ್ಟನತಃ ಫಲಂ ॥
ತಥಾಪಿ ಸ್ನೇಹವಶಗೋ ವೇಷ್ಟಯಾಮಾಸ ಫಲ್ಗುನಃ ॥೩೦೩॥

ದೇಹೇ –ಶರೀರದಲ್ಲಿ, ಪತಿತಾಸ್ತ್ರಸ್ಯ – ಬಿದ್ದಿರುವ ನಾರಾಯಣಾಸ್ತ್ರವುಳ್ಳ ಭೀಮನಿಗೆ, ಬಹಿಃ–ಹೊರಗೆ, ವೇಷ್ಟನತಃ–ವಾರುಣಾಸ್ತ್ರದ ವೇಷ್ಟನದಿಂದ, ಫಲಂ – ಪ್ರಯೋಜನವು, ನ – ಇರುವುದಿಲ್ಲ. ತಥಾಪಿ— ಹಾಗಾದರೂ, ಫಲ್ಗುನಃ— ಅರ್ಜುನನು, ಸ್ನೇಹವಶಗಃ ಸನ್ — ಭೀಮನ ಮೇಲಿನ ಸ್ನೇಹಾಧೀನನಾಗಿ, ವೇಷ್ಟಯಾಮಾಸ – ವಾರುಣಾಸ್ತ್ರದಿಂದ ಸುತ್ತು ವರಿಸಿದನು. ॥೩೦೩॥

ಅಮೋಘತ್ವಂ ನಿಜಾಸ್ತ್ರಸ್ಯ ಭೀಮಸ್ಯಾವಧ್ಯತಾಮಪಿ ॥
ಸಾಧಯನ್ಸಾರ್ಜುನಃಕೃಷ್ಣೋ ಭೀಮಸ್ಯ ರಥಮಾರುಹತ್ ॥೩೦೪॥

ನಿಜಾಸ್ತ್ರಸ್ಯ— ನಾರಾಯಣಾಸ್ತ್ರಕ್ಕೆ, ಅಮೋಘತ್ವಂ — ವ್ಯರ್ಥವಾಗದಿರುವಿಕೆಯನ್ನು, ಭೀಮಸ್ಯ — ಭೀಮನಿಗೆ, ಅವಧ್ಯತಾಮಪಿ – ಕೊಲ್ಲಲ್ಪಡದಿರುವಿಕೆಯನ್ನೂಕೂಡ, ಸಾಧಯನ್— ಸಾಧಿಸತಕ್ಕ, ಸಾರ್ಜುನಃ – ಅರ್ಜುನನಿಂದ ಕೂಡಿದ, ಕೃಷ್ಣಃ— ಶ್ರೀಕೃಷ್ಣನು, ಭೀಮಸ್ಯ—ಭೀಮನ, ರಥಂ – ರಥವನ್ನು, ಆರುಹತ್ – ಏರಿದನು. ॥೩೦೪॥

ವೇಷ್ಟಿತಂ ವಾರುಣಾಸ್ತ್ರೇಣ ಪ್ರವಿಷ್ಟಂ ಬಾಹ್ಯತಸ್ತದಾ ॥
ಸಹಿತತ್ವಾತ್ಕೇಶವೇನ ನರತ್ವಾದಥಫಲ್ಗುನಂ ॥೩೦೫॥

ತದಸ್ತ್ರಂನಾದಹತ್ತಾಭ್ಯಾಂ ಸ್ವರಥಾದವರೋಪಿತೇ ॥
ಭೀಮಆಚ್ಛಿನ್ನಹೇತೌಚತದಸ್ತ್ರಂ ಶಾಂತಿಮಾಗನುತ್ ॥೩೦೬॥

ತದಾ — ಆಗ, ವಾರುಣಾಸ್ತ್ರೇಣ — ವಾರುಣಾಸ್ತ್ರದಿಂದ, ಬಾಹ್ಯತಃ— ಹೊರಗಿನ ಭಾಗದಿಂದ, ವೇಷ್ಟಿತಂ— ಸುತ್ತುವರಿಯಲ್ಪಟ್ಟ ಆ ನಾರಾಯಣಾಸ್ತ್ರವು, ಪ್ರವಿಷ್ಟಂ — ತನ್ನಜ್ವಾಲೆಯ ಮಧ್ಯದಲ್ಲಿ ಪ್ರವಿಷ್ಟನಾದ ಭೀಮನನ್ನು ತಣ್ಣೀರಿನಲ್ಲಿ ಬೆರೆಸಿದ ಬಿಸಿನೀರಿನಂತೆ, ನಾದಹತ್ — ಸುಡಲಿಲ್ಲ. ಕೇಶವೇನ — ಶ್ರೀಕೃಷ್ಣನಿಂದ, ಸಹಿತತ್ವಾತ್ — ಕೂಡಿಕೊಂಡಿರುವುದರಿಂದಲೂ, ನರತ್ವಾತ್ — ನರಾವೇಶವಿರುವುದರಿಂದಲೂ, ಅಸ್ತ್ರಕ್ಕೆ ನಮಸ್ಕಾರ

ಮೂಡಿರುವುದರಿಂದಲೂ, ಫಲ್ಗುನಂ— ಅರ್ಜುನನನ್ನು,ನಾದಹತ್ · ಸುಡಲಿಲ್ಲ. ಭೀಮೇ — ಭೀಮನು, ಸ್ವರಥಾತ್ — ತನ್ನರಥದಿಂದ' ಆವರೋಪಿತೇಸತಿ — ಕೆಳಗಿಳಿಸಲ್ಪಡುತ್ತಿರಲು, ತಾಭ್ಯಾಂ—ಆ ಕೃಷ್ಣಾರ್ಜುನರಿಂದ, ಆಚ್ಛಿನ್ನ ಹೇತೌಸತಿ — ಬಲಾತ್ಕಾರದಿಂದ ಆಯುಧವನ್ನು ಎಳೆದುಕೊಳ್ಳಲ್ಪಡುತ್ತಿರಲು, ತದಸ್ತ್ರಂ — ಆ ನಾರಾಯಣಾಸ್ತ್ರವು, ಶಾಂತಿಂ — ಉಪಶಮನವನ್ನು, ಆಗಮತ್ — ಹೊಂದಿತು, ॥೩೦೫॥ ॥೩೦೬॥

ಶುದ್ಧಕ್ಷತ್ರಿಯಧರ್ಮೇಷು ನಿರತೋಯದ್ಭ್ರಕೋದರಃ ॥
ವಾಹನಾದವತೀರ್ಯಾನ್ಯೈಃಪ್ರಣತೇಪಿನಿರಾಯುಧೈಃ ॥
ಸಾಯುಧಃ ಸರಥೋಽಯುಧ್ಯದವಿಷಹ್ಯಮುಪೀಶ್ವರೈಃ ॥೩೦೭॥

ವಾಹನಾತ್ — ರಥಾದಿವಾಹನದಿಂದ, ಅವತೀರ್ಯ—ಕೆಳಗಿಳಿದು, ನಿರಾಯುಧೈಃ— ಆಯುಧರಹಿತರಾದ, ಅನ್ಯೈಃ— ಇತರರಾದ ಅರ್ಜುನಾದಿಗಳಿಂದ, ಪ್ರಣತೇಽಪಿ — ಅಸ್ತ್ರವು ನಮಸ್ಕರಿಸಿಕೊಳ್ಳಲ್ಪಟ್ಟರೂ ಕೂಡ, ಯತ್ — ಯಾವಕಾರಣದಿಂದ, ವೃಕೋದರಃ — ಭೀಮಸೇನನು, ಶುದ್ಧಕ್ಷತ್ರಿಯಧರ್ಮೇಷು— ನಿರ್ದುಷ್ಟ ಕ್ಷತ್ರಿಯರ ಧರ್ಮಗಳಲ್ಲಿ, ನಿರತಃ — ಆಸಕ್ತನೋ,ತತ್ — ಆ ಕಾರಣದಿಂದ, ಸಾಯುಧಃ—ಆಯುಧಸಹಿತನಾದ, ಸರಥಃ—ರಥದಿಂದ ಕೂಡಿದ ಭೀಮನು, ಈಶ್ವರೈರಪಿ— ಸಮರ್ಥರಿಂದಲೂ ಕೂಡ, ಅವಿಷಹ್ಯಂ — ಸಹಿಸಲು ಅಶಕ್ಯವಾದ ಅಸ್ತ್ರವನ್ನು ಕುರಿತು, ಅಯುಧ್ಯತ್ — ಯುದ್ಧ ಮಾಡಿದನು. ॥೩೦೭॥

ಸ್ವಧರ್ಮಹಾನೌ ಮಿತ್ರಾಣಾಂ ಕರ್ತವ್ಯಂ ಯನ್ನಿಷೇಧನಂ ॥
ಅತಃಸೋಽನ್ಯಾನಪಿಪ್ರಾಹ ನಮಾನಮಧ್ವಮಿತಿಸ್ವಯಂ ॥೩೦೮॥

ಯತ್ — ಯಾವ ಕಾರಣದಿಂದ, ಮಿತ್ರಾಣಾಂ—ಗೆಳೆಯರಿಗೆ, ಸ್ವಧರ್ಮಹಾನೌ ಪ್ರಾಪ್ತ್ಯಾಂಸತ್ಯಾಂ— ತಮ್ಮ ತಮ್ಮ ವರ್ಣಾಶ್ರಮೋಚಿತಧರ್ಮದ ಪರಿತ್ಯಾಗವು ಪ್ರಾಪ್ತವಾದಾಗ, ಸ್ವಯಂ — ತಾನೇ, ನಿಷೇಧನಂ— ಸ್ವಧರ್ಮ ಪರಿತ್ಯಾಗವನ್ನು ಮಾಡಬೇಡಿರಿ ಎಂದು ನಿಷೇಧವನ್ನು, ಕರ್ತವ್ಯಂ—ಮಾಡತಕ್ಕದ್ದೋ, ಅತಃ— ಆದ್ದರಿಂದ, ಸಃ — ಆ ಭೀಮನು, ಅನ್ಯಾನಪಿ— ಇತರರನ್ನೂ ಕೂಡ,ಮಾ ನಮಧ್ವಂ ನಮಸ್ಕಾರಮಾಡಬೇಡಿರಿ,ಇತಿ—ಎಂದು ಸ್ವಯಂ—ತಾನೇ,ಪ್ರಾಹ— ಹೇಳಿದನು. ॥೩೦೮॥

ನಮಸ್ಕಾರ್ಯಮಪಿಹ್ಯಸ್ತ್ರಂ ನನಮ್ಯಂಜೀವನೇಚ್ಛಯಾ ॥
ಸಮರೇಶತ್ರುಣಾಮುಕ್ತಂ ತಸ್ಮಾತ್ತನ್ನಚಕಾರಸಃ ॥೩೦೯॥

ಅಸ್ತ್ರಂ—ನಾರಾಯಣಾಸ್ತ್ರವು, ನಮಸ್ಕಾರ್ಯಮಪಿ — ನಮಸ್ಕರಿಸಲು ಯೋಗ್ಯವಾದರೂ ಕೂಡ, ಹಿ — ಯಾವ ಕಾರಣದಿಂದ, ಸಮರೇ — ಯುದ್ಧದಲ್ಲಿ, ಶತ್ರುಣಾ — ವೈರಿಯಿಂದ, ಮುಕ್ತಂ — ಬಿಡಲ್ಪಟ್ಟ ಅಸ್ತ್ರವು, ಜೀವನೇಚ್ಛಯಾ — ಬದುಕುವ ಇಚ್ಛೆಯಿಂದ, ನಮ್ಯಂ ನ — ನಮಸ್ಕಾರಮಾಡಲು ಯೋಗ್ಯವಲ್ಲವೋ, ತಸ್ಮಾತ್ — ಆದ್ದರಿಂದ, ಸಃ — ಆ ಭೀಮನು ತತ್—ಆ ಅಸ್ತ್ರನಮಸ್ಕಾರವನ್ನು ನ ಚಕಾರ — ಮಾಡಲಿಲ್ಲ ॥೩೦೯॥

ಅಸ್ತ್ರಾಭಿಮಾನೀವಾಯುರ್ಹಿ ದೇವತಾಸ್ಯಹರಿಃ ಸ್ವಯಂ ॥
ತಸ್ಮಾದ್ಭೀಮಸ್ವರೂಪತ್ವಾನ್ನಾದಹಚ್ಛಾಗ್ನಿಮಗ್ನಿವತ್ ॥೩೧೦॥

ವಾಯುಃ — ವಾಯುದೇವರು, ಅಸ್ತ್ರಾಭಿಮಾನೀ — ಅಸ್ತ್ರದ್ರವ್ಯಗಳಾದ್ದರಿಂದ ಅಸ್ತ್ರಕ್ಕೆ ಅಭಿಮಾನಿದೇವತೆಯು, ಹರಿಃ — ನಾರಾಯಣನು, ಅಸ್ಯ — ಈ ಅಸ್ತ್ರಕ್ಕೆ, ಸ್ವಯಂ - ಸಾಕ್ಷಾತ್ತಾಗಿ, ದೇವತಾ -- ದೇವತೆಯು. ತಸ್ಮಾತ್ — ಅಸ್ತ್ರಾಭಿ

ಮಾನಿಯಾದ್ದರಿಂದ, ಭೀಮಸ್ವರೂಪತ್ವಾತ್ — ಅಭಿಮಾನಿಗೂ ಅಭಿಮನ್ಯಮಾನವಾದದ್ದಕ್ಕೂ ಅಭೇದ ವಿರುವುದರಿಂದ, ಅಸ್ತ್ರವುಭೀಮನ ಸ್ವರೂಪವಾದ್ದರಿಂದ, ಅಗ್ನಿಂ ಅಗ್ನಿವತ್ — ಅಗ್ನಿಯು ತನ್ನ ಸ್ವರೂಪವಾದ ಅಗ್ನಿಯನ್ನು ಹೇಗೆ ಸುಡುವುದಿಲ್ಲವೋ ಅದರಂತೆ, ನಾದಹತ್— ಅಸ್ತ್ರವು ಭೀಮನನ್ನು ಸುಡಲಿಲ್ಲ. ॥೩೧೦॥

ಮನಸೈವಾದರಂ ಚಕ್ರೇ ಭೀಮೋಽಸ್ತ್ರೇಚ ಹರೌ ತದಾ ॥
ಕ್ಷತ್ರಧರ್ಮಾನುಸಾರೇಣ ನ ನನಾಮ ಚ ಬಾಹ್ಯತಃ ॥೩೧೧॥

ಭೀಮಃ— ಭೀಮನು, ತದಾ—ಆಗ, ಅಸ್ತ್ರೇ— ಅಸ್ತ್ರದಲ್ಲಿಯೂ, ಹರೌ ಚ—ಹರಿಯಲ್ಲಿಯೂ ಕೂಡ, ಮನಸೈವ–ಮನಸ್ಸಿನಿಂದಲೇ, ಆದರಂ – ಭಕ್ತಿಯನ್ನು, ಚಕ್ರೇ – ಮಾಡಿದನು. ಕ್ಷತ್ರಧರ್ಮಾನುಸಾರೇಣ – ಕ್ಷತ್ರಿಯರ ಧರ್ಮವನ್ನನು ಸರಿಸಿ, ಬಾಹ್ಯತಃ— ಶಿರಸ್ಸುಮೊದಲಾದ ಅವಯವಗಳಿಂದ, ನ ನನಾಮ – ನಮಸ್ಕರಿಸಲಿಲ್ಲ. ॥೩೧೧॥

ವಾಸುದೇವಃ ಸ್ವಕೀಯಾಸ್ತ್ರಂ ಭೀಮಂಚಾಮೋಘಮೇವತು ॥
ಸಾಧಯಿತ್ವಾನಂತ ಶಕ್ತಿಃ ಪುನರಶ್ವಾನಚೋದಯತ್ ॥೩೧೨॥

ಅನಂತಶಕ್ತಿಃ— ಅಪರಿಮಿತ ಸಾಮರ್ಥ್ಯವುಳ್ಳ, ವಾಸುದೇವಃ— ಶ್ರೀಕೃಷ್ಣನು, ಸ್ವಕೀಯಾಸ್ತ್ರಂ— ತನ್ನದ್ದಾದ ನಾರಾಯಣಾಸ್ತ್ರವನ್ನೂ ಭೀಮಂಚ – ಭೀಮನನ್ನೂ ಕೂಡ, ಅಮೋಘಮೇವ–ವ್ಯರ್ಥವಲ್ಲದವರನ್ನಾಗಿಯೇ, ಸಾಧಯಿತ್ವಾ–ಸಾಧಿಸಿ, ಪುನಃ— ಮತ್ತೆ, ಅಶ್ವಾನ್ – ಕುದರೆಗಳನ್ನು, ಅಚೋದಯತ್ – ರಥನಡೆಸುವಂತೆ ಪ್ರೇರಿಸಿದನು. ॥೩೧೨॥

ಭಾ. ಅ. ೨೯—೩೧೨ ಆಗ ಅಶ್ವತ್ಥಾಮರು ತಂದೆಯ ಮರಣಸುದ್ದಿಯನ್ನು ಕೇಳಿ ಸಿಟ್ಟಿನಿಂದ ಧನುರ್ಧಾರಿಗಳಾಗಿ ಬಂದು ಎಲ್ಲ ವೈರಿಸಂಹಾರ ಮಾಡಲು ಪ್ರತಿಜ್ಞೆಯನ್ನು ಕೈಕೊಂಡು ನಾರಾಯಣಾಸ್ತ್ರವನ್ನು ಪ್ರಯೋಗಿಸಿದರು. ಆಗ ಶ್ರೀ ಭೀಮರೊಬ್ಬರನ್ನು ಬಿಟ್ಟು ಎಲ್ಲರೂ ಹೆದರಿದರು. ಆಗ ಧರ್ಮರಾಜನು ಎಲ್ಲರಿಗೂ 'ಸಾತ್ಯಕಿಯೇ ಮೊದಲಾದ ನೀವು ಎಲ್ಲರೂ ಹೋಗಿಬಿಡಿರಿ, ನಾನು ನನ್ನ ಸಹೋದರು ಮಾತ್ರ ಈ ಅಶ್ವತ್ಥಾಮರ ಅಸ್ತ್ರದ ಫಲವನ್ನು ಅನುಭೋಗಿಸುವೆವು.' ಎಂದ ಹೇಳಿದನು. ಆಗ ಶ್ರೀಕೃಷ್ಣನು 'ಅಸ್ತ್ರಕ್ಕೆ ನಮಸ್ಕರಿಸಿ ಅದರಿಂದ ಬಿಡುಗಡೆ ಹೊಂದಿರಿ' ಎಂದು ಹೇಳಿದನು. ಆಗ ಅರ್ಜುನಸಹಿತ ಎಲ್ಲರೂ ನಮಸ್ಕರಿಸಿದರು. ಭೀಮರು ಮಾತ್ರ ನಮಸ್ಕರಿಸಲಿಲ್ಲ. ಹೀಗಾಗಿ ಆ ಅಸ್ತ್ರವು ಅವರ ತಲೆಯ ಮೇಲೆ ಬಿದ್ದಿತು. ಅಗ್ನಿಯ ಮಧ್ಯದಲ್ಲಿರುವ ಅಗ್ನಿಯಂತೆ ಶ್ರೀಭೀಮಸೇನರು ತೋರಿದರು. ಯಾವ ಪರಿಣಾಮವೂ ಅವರಿಗಾಗಿಲ್ಲ. ಅರ್ಜುನನು ಶ್ರೀಭೀಮರ ಮೇಲೆ ತನ್ನ ವಿಶೇಷ ಪ್ರೀತಿಯಿಂದ ವಾರುಣಾಸ್ತ್ರದಿಂದ ಸುತ್ತಲೂ ಸುತ್ತಿದನು. ಆದರೆ ಒಳಗೆ ಅಗ್ನಿ ಇರುವಾಗ, ಹೊರಗೆ ನೀರಿನಿಂದ ಸುತ್ತಿದರೆ ಏನೂ ಪ್ರಯೋಜನವಾಗದಂತೆ, ಇಲ್ಲಿಯೂ ಕೂಡ ಯಾವ ಪರಿಣಾಮವೂ ಆ ವಾರುಣಾಸ್ತ್ರದಿಂದ ಇಲ್ಲ. ಆದರೂ ಸ್ನೇಹಮಾತ್ರ ಪ್ರಕಟವಾಯಿತು. ಹೀಗೆ ನಾರಾಯಣಾಸ್ತ್ರದ ಅವ್ಯರ್ಥತೆಯನ್ನು, ಭೀಮರ ಅವಧ್ಯತೆಯನ್ನು ಪ್ರಕಟಪಡಿಸಿದ ಶ್ರೀಕೃಷ್ಣನು ಅರ್ಜುನ ಸಹಿತನಾಗಿ ಶ್ರೀಭೀಮರ ರಥವನ್ನು ಏರಿದನು. ಅರ್ಜುನನು ಬಂದಿರುವಾಗ, ಅಸ್ತ್ರವು ಅವನನ್ನು ಸುಡಬೇಕಾಗಿತ್ತು. ಆದರೆ, ಹೊರಬಡಿಯಲ್ಲಿ ವಾರುಣಾಸ್ತ್ರದಿಂದ ಅಸ್ತ್ರವು ಸುತ್ತಲ್ಪಟ್ಟಿದ್ದರಿಂದ, ಅರ್ಜುನನು ಶ್ರೀಕೃಷ್ಣನಿಂದ ಸಹಿತನಾಗಿದ್ದದ್ದರಿಂದ, ನರಾವೇಶವು ಅವನಲ್ಲಿದ್ದದ್ದರಿಂದ, ಅಸ್ತ್ರಕ್ಕೆ ಮೊದಲೇ ನಮಸ್ಕಾರ ಮಾಡಿದ್ದರಿದಲೂ ಅರ್ಜುನನಿಗೆ ಪರಿಣಾಮವನ್ನು ಮಾಡಲಿಲ್ಲ. ಶ್ರೀಕೃಷ್ಣಾರ್ಜುನರು ಆ ಭೀಮರಲ್ಲಿರುವ ಆಯುಧವನ್ನು ಬಲಾತ್ಕಾರದಿಂದ ತೆಗೆಯುತ್ತಿರಲು, ಹಾಗೂ ಶ್ರೀಭೀಮರನ್ನು ರಥದಿಂದ ಕೆಳಗಿಳಿಸುತ್ತಿರಲು ಆ ನಾರಾಯಣಾಸ್ತ್ರವೂ ಶಾಂತವಾಯಿತು. ಹೀಗೆ ಉಳಿದವರೆಲ್ಲರೂ ತಮ್ಮ ರಥಗಳಿಂದ ಇಳಿದು ಆಯುಧ ಬಿಟ್ಟು, ಅಸ್ತ್ರಕ್ಕೆ ನಮಸ್ಕರಿಸಿದರೂ ಕೂಡ, ಶ್ರೀಭೀಮಸೇನದೇವರು ಮಾತ್ರ ರಥದಲ್ಲಿದ್ದು, ಆಯುಧಸಹಿತರಾಗಿ ಯುದ್ಧ ಮಾಡುತ್ತಲೇ ಇದ್ದರು. ಅಷ್ಟೇ ಅಲ್ಲ; ತನ್ನ ಇಷ್ಟ ಮಿತ್ರರು ಧರ್ಮಚ್ಯುತರಾಗುತ್ತಿರುವ ಸಮಯದಲ್ಲಿ ಅವರಿಗೆ ಧರ್ಮ ಬಿಡದಿರುವ ಉಪದೇಶಮಾಡುವದೂ ಕರ್ತವ್ಯವಾದ್ದರಿಂದ, ಎಲ್ಲರಿಗೂ ಜೀವನೇಚ್ಛೆಯಿಂದ ನಮಸ್ಕರಿಸಬೇಡಿರಿ, ಎಂದು ಹೇಳಿದರು.

ನಾರಾಯಣ ದೇವತಾಕವಾದ್ದರಿಂದ ಸಾಮಾನ್ಯವಾಗಿ ನಮನಯೋಗ್ಯವಾದರೂ, ಶತ್ರುಗಳಿಂದ ಪ್ರಯೋಗಿಸಲ್ಪಟ್ಟಿರುವಾಗ ಅದರಿಂದ ರಕ್ಷಿತವಾಗುವ ಇಚ್ಛೆಯಿಂದ ನಮಸ್ಕರಿಸುವದು ಶುದ್ಧ ಕ್ಷತ್ರಧರ್ಮವಲ್ಲವಾದ್ದರಿಂದ ತಾವು ನಮಸ್ಕಾರ ಮಾಡಲಿಲ್ಲ. ಇತರರನ್ನೂ ನಿಷೇಧಿಸಿದರು. ನಾರಾಯಣಾಸ್ತ್ರಕ್ಕೆ ಅಭಿಮಾನಿಯು ವಾಯುದೇವರೇ ಆದ್ದರಿಂದಲೂ ತದವತಾರರಾದ ಶ್ರೀ ಭೀಮರನ್ನುಸುಡಲಿಲ್ಲ. ಶ್ರೀಭೀಮರು ಅಸ್ತ್ರದೇವತೆಯಾದ ಶ್ರೀನಾರಾಯಣನಿಗೆ ಮನಸ್ಸಿನಿಂದಲೇ ಅದರ ನಮಸ್ಕಾರ ಮಾಡಿದ್ದರಿಂದ ಶ್ರೀನಾರಾಯಣ ನಮನ ಕ್ರಿಯಾಲೋಪವೂ ಆಗಿಲ್ಲ; ಹೊರಗಿನಿಂದ ನಮಸ್ಕರಿಸಿಲ್ಲವಾದ್ದರಿಂದ ಕ್ಷತ್ರಧರ್ಮ ಲೋಪವೂ ಆಗಲಿಲ್ಲ. ಹೀಗೆ ಶ್ರೀಕೃಷ್ಣನು ಶ್ರೀಭೀಮರ ಅವಧ್ಯತ್ವ, ತನ್ನ ಅಸ್ತ್ರದ ಅಮೋಘತ್ವ ಎರಡನ್ನೂ ಸಾಧಿಸಿ ಪುನಃ ಅರ್ಜುನನ ರಥಕುದುರೆಗಳನ್ನು ಪ್ರೇರಿಸಿದನು.

ಪುನಃ ಪ್ರಯೋಕ್ತುಮಸ್ತ್ರಂ ತದ್ಧಾರ್ತರಾಷ್ಟ್ರೋ ಭೃಶಚೋದಯತ್ ॥
ದ್ರೌಣಿ ರ್ನಶಕ್ಯಮಿತ್ಯುಕ್ತ್ವಾ ಧೃಷ್ಟದ್ಯುಮ್ನಂ ಸಮಭ್ಯಯಾತ್ ॥೩೧೩॥

ಧಾರ್ತರಾಷ್ಟ್ರಃ– ದುರ್ಯೋಧನನು, ತದಸ್ತ್ರಂ– ಆನಾರಾಯಣಾಸ್ತ್ರವನ್ನು, ಪುನಃ –ಮತ್ತೊಮ್ಮೆ, ಪ್ರಯೋಕ್ತುಂ– ಬಿಡಲು, ಅಭೃಚೋದಯತ್ – ಅಶ್ವತ್ಥಾಮನನ್ನು ಪ್ರೇರಿಸಿದನು. ದ್ರೌಣಿಃ— ಅಶ್ವತ್ಥಾಮನು, ನ ಶಕ್ಯಮಿತಿ— ಸಾಧ್ಯವಿಲ್ಲವೆಂದು, ಉಕ್ತ್ವಾ–ಹೇಳಿ, ಧೃಷ್ಟದ್ಯುಮ್ನಂ–ಧೃಷ್ಟದ್ಯುಮ್ನನನ್ನು, ಸಮಭ್ಯಯಾತ್–ಯುದ್ಧಕ್ಕಾಗಿ ಹೊಂದಿದನು.॥೩೧೩॥

ಆಯಾಂತಮೀಕ್ಷ್ಯೈವಗುರೋಃ ಸುತಂ ತಂ ಧೃಷ್ಟದ್ಯುಮ್ನಂ ಸಾತ್ಯಕಿರನ್ವಯಾದ್ರಣೇ ॥
ಉಭೌ ಚ ತೌ ಸಾಯಕಾಭ್ಯಾಮವಿಧ್ಯನ್ನಿಪೇತತುಸ್ತೌ ಚವಿಮೂರ್ಛಿತೌರಣೇ ॥೩೧೪॥

ತಂ ಧೃಷ್ಟದ್ಯುಮ್ನಂ – ತನ್ನ ತಂದೆಯನ್ನು ಕೊಂದ ಧೃಷ್ಟದ್ಯುಮ್ನನನ್ನು ಕುರಿತು, ಆಯಾಂತಂ-ಬರತಕ್ಕ, ಗುರೋಃ– ದ್ರೋಣರ, ಪುತ್ರಂ — ಮಗನಾದ ಅಶ್ವತ್ಥಾಮನನ್ನು, ದೃಷ್ಟ್ವೈವ – ನೋಡಿಯೇ, ಸಾತ್ಯಕಿಃ – ಸಾತ್ಯಕಿಯು, ರಣೇ – ಯುದ್ಧದಲ್ಲಿ, ಅನ್ವಯಾತ್–ಅನುಸರಿಸಿ ಹೋದನು, (ಅಶ್ವತ್ಥಾಮನು)ಉಭೌ –ಇಬ್ಬರಾದ, ತೌ—ಆ ಸಾತ್ಯಕಿ ಧೃಷ್ಟದ್ಯುಮ್ನರನ್ನು, ಸಾಯಕಾಭ್ಯಾಂ—ಬಾಣಗಳಿಂದ, ಅವಿಧ್ಯತ್ – ಹೊಡೆದನು. ತೌ --ಆ ಸಾತ್ಯಕಿ ಮತ್ತು ಧೃಷ್ಟದ್ಯುಮ್ನ ಇವರಿಬ್ಬರು, ರಣೇ – ಯುದ್ಧದಲ್ಲಿ, ವಿಮೂರ್ಛಿತೌ ಸಂತೌ —ಮೂರ್ಛಿತರಾಗಿ, ನಿಪೇತತುಃ – ಬಿದ್ದರು. ॥೩೧೪॥

ಭೀಮಸ್ಯಾಭ್ಯಾಗತಸ್ಯಾಶ್ವಾನ್ದ್ರೌಣಿರ್ವ್ಯದ್ರಾವಯದ್ರಣೇ ॥
ಸಂಸ್ಥಾಪಯತಿ ತಾನ್ಭೀಮೇದದರ್ಶ ದ್ರೌಣಿಮರ್ಜುನಃ ॥೩೧೫॥

ದ್ರೌಣಿಃ – ಅಶ್ವತ್ಥಾಮನು. ಅಭ್ಯಾಗತಸ್ಯ— ತನಗೆದುರಾಗಿ ಬರತಕ್ಕ, ಭೀಮಸ್ಯ — ಭೀಮನ, ಅಶ್ವಾನ್ – ಕುದುರೆಗಳನ್ನು, ರಣೇ – ಯುದ್ಧದಲ್ಲಿ, ವ್ಯದ್ರಾವಯತ್ — ಓಡಿಸಿದನು. ತಾನ್ – ಆ ಕುದುರೆಗಳನ್ನು, ಭೀಮೇ — ಭೀಮನು, ಸಂಸ್ಥಾಪಯತಿ – ನಿಲ್ಲುವಂತೆ ಮಾಡುತ್ತಿರಲು, ಅರ್ಜುನಃ – ಅರ್ಜುನನು, ದ್ರೌಣಿಂ — ಅಶ್ವತ್ಥಾಮನನ್ನು, ದದರ್ಶ – ನೋಡಿದನು. ॥೩೧೫॥

ತತೋಽರ್ಜುನಸ್ತಂ ಪ್ರತಿಯೋದ್ಧುಮಾಗಮದ್ರೂಕ್ಷಾವಾಚಃ ಶ್ರಾವಯನ್ನುದ್ಧರೂಪಃ ॥
ತತ್ರಾಗ್ನೇಯಂ ದ್ರೌಣಿರಮುಂಚದಸ್ತ್ರಂ ತೇನ ವ್ಯಾಪ್ತಾ ಪೃತನಾ ಪಾಂಡವಾನಾಂ ॥೩೧೬॥

ತತಃ – ಅನಂತರ, ಅರ್ಜುನಃ – ಅರ್ಜುನನು, ರೂಕ್ಷಾಃ–ಕ್ರೂರಗಳಾದ, ವಾಚಃ – ಮಾತುಗಳನ್ನು ಶ್ರಾವಯನ್–ಕೇಳಿಸುವವನಾಗಿ, ತಂಪ್ರತಿ – ಅಶ್ವತ್ಥಾಮನನ್ನು ಕುರಿತು, ಯೋದ್ಧುಂ ಯುದ್ಧವಾಡಲು, ಆಗಮತ್ — ಬಂದನು.

ಕ್ರುದ್ಧರೂಪಃ – ಕೋಪಗೊಂಡ ಸ್ವರೂಪವುಳ್ಳ ಅಶ್ವತ್ಥಾಮನು, ತತ್ರ–ಆ ಯುದ್ಧದಲ್ಲಿ, ಆಗ್ನೇಯಂ – ಅಗ್ನಿದೇವತಾಕವಾದ ಅಸ್ತ್ರಂ—ಅಸ್ತ್ರವನ್ನು, ಅಮುಂಚತ್ — ಬಿಟ್ಟನು, ತೇನ – ಆ ಅಸ್ತ್ರದಿಂದ, ಪಾಂಡವಾನಾಂ – ಪಾಂಡವರ, ಪೃತನಾ.— ಸೇನೆಯು, ವ್ಯಾಪ್ತಾ – ವ್ಯಾಪ್ತವಾಯಿತು. ॥೩೧೬॥

ಅಕ್ಷೌ ಹಿಣೀ ನಿಹತಾ ಚಾತ್ರಸೇನಾಪಾರ್ಥಂ ಸಯಾನಂ ಹರಿರುಜ್ಜಹಾರ ॥೩೧೭॥

ಜೀವಂತಮಾಲೋಕ್ಯ ಸುರೇಂದ್ರನಂದನಂ ದ್ರೌಣಿಃಕೋಪಾತ್ಕಾರ್ಮುಕಂ ಚಾಪಹಾಯ ॥
ಯಯೌ ತಮಾಗತ್ಯ ಜಗಾದ ಕೃಷ್ಣೋವೇದಾಂತಕೃತ್ಪೂರ್ಣಷಾಡ್ಗುಣ್ಯದೇಹಃ ॥೩೧೮॥

ತತ್ರ—ಆ ಯುದ್ಧದಲ್ಲಿ, ಅಕ್ಷೌಹಿಣೀಸೇನಾ – ಒಂದು ಅಕ್ಷೌಹಿಣಿ ಸೈನ್ಯವು, ನಿಹತಾ—ಕೊಲ್ಲಲ್ಪಟ್ಟಿತು, ಹರಿಃ— ಶ್ರೀಕೃಷ್ಣನು, ಸಯಾನಂ – ರಥಸಹಿತನಾದ, ಪಾರ್ಥಂ – ಅರ್ಜುನನನ್ನು, ಉಜ್ಜಹಾರ–ಅಸ್ತ್ರದಿಂದ ಉದ್ಧರಿಸಿದನು, ದ್ರೌಣಿಃ– ಅಶ್ವತ್ಥಾಮನು, ಸುರೇಂದ್ರನಂದನಂ— ದೇವೇಂದ್ರನ ಮಗನಾದ ಅರ್ಜುನನನ್ನು, ಜೀವಂತಂ – ಬದುಕಿಕೊಂಡಿರತಕ್ಕವನನ್ನಾಗಿ, ಆಲೋಕ್ಯ—ನೋಡಿ, ಕೋಪಾತ್—ಸಿಟ್ಟಿನಿಂದ, ಕಾರ್ಮುಕಂ – ಧನುಸ್ಸನ್ನು, ಅಪಹಾಯ – ಬಿಟ್ಟು, ಯಯೌ – ಹೋದನು, ವೇದಾಂತಕೃತ್–ವೇದಾರ್ಥಗಳನ್ನು ನಿರ್ಣಯ ಮಾಡತಕ್ಕ ಬ್ರಹ್ಮಸೂತ್ರಗಳನ್ನು ಮಾಡಿದ, ಪೂರ್ಣಷಾಡ್ಗುಣ್ಯ ದೇಹಃ – ಪರಿಪೂರ್ಣಗಳಾದ ಐಶ್ವರ್ಯಾದಿಷಡ್ಗುಣಗಳೇ ಶರೀರವಾಗಿ ಉಳ್ಳ, ಕೃಷ್ಣಃ– ವೇದವ್ಯಾಸರು, ಆಗತ್ಯ—ಬಂದು, ತಂ – ಅಶ್ವತ್ಥಾಮನನ್ನು ಕುರಿತು, ಜಗಾದ – ಹೇಳಿದರು. ॥೩೧೭॥೩೧೮॥

ಮಾಯಾಹಿಸಾಕ್ಷಾದ್ಗಿರಿಶಃಸುರಾಣಾಂ ಕಾರ್ಯಾರ್ಥಭೂಮೌ ಬಲವಾನಜಾಯಥಾಃ ॥
ಮಹಚ್ಚ ಕಾರ್ಯಂ ಪುನರಸ್ತಿ ದೃಷ್ಟಂ ತವಾಶು ತಚ್ಚಪ್ರತಿಪಾದಯೇತಿ ॥೩೧೯॥

ಮಾ ಯಾಹಿ – ಯುದ್ಧವನ್ನು ಬಿಟ್ಟು ಹೋಗಬೇಡ, ಬಲವಾನ್ – ಬಲಿಷ್ಠನಾದ, ಸಾಕ್ಷಾತ್ — ಮುಖ್ಯವಾಗಿ, ಗಿರಿಶಃ – ರುದ್ರಸ್ವರೂಪನಾದ, ತ್ವಂ – ನೀನು, ಸುರಾಣಾಂ – ದೇವತೆಗಳ, ಕಾರ್ಯಾರ್ಥ – ಭೂಭಾರಹರಣರೂಪ ಕೆಲಸಕ್ಕೋಸ್ಕರ, ಅಜಾಯಥಾಃ – ಹುಟ್ಟಿರುವಿ, ತವ – ನಿನ್ನ, ಮಹತ್ – ಶ್ರೇಷ್ಠವಾದ, ಕಾರ್ಯಂ– ನಾರಾಯಣಾಸ್ತ್ರ ಪ್ರಯೋಗ ರೂಪವಾದ ಕೆಲಸವು, ದೃಷ್ಟಂ – ನಮ್ಮಿಂದ ಕಾಣಲ್ಪಟ್ಟಿದೆ, ಪುನಃ — ಮತ್ತೂ ಮುಂದೆಯೂ, ಕಾರ್ಯಂ – ಯುದ್ಧದ ಕೊನೆಗೆ ಶಿಬಿರದಲ್ಲಿರುವ ಪಾಂಡವರ ಸೈನ್ಯದ ಹನನ ರೂಪವಾದ ಕೆಲಸವು, ಅಸ್ತಿ – ಇದೆ. ತಚ್ಚ—ಆ ಕೆಲಸವನ್ನೂ ಕೂಡ; ಆಶು – ಬೇಗನೆ, ಪ್ರತಿಪಾದಯ—ಮಾಡು, ಇತಿ ಎಂಬುದಾಗಿ, ಜಗಾದ—ವೇದವ್ಯಾಸರು ಹೇಳಿದರು. ॥೩೧೯॥

ತಥೋದಿತಃ ಪ್ರಾತರಿತಿ ಬ್ರುವಾಣೋಯಯೌ ಪ್ರಣಮ್ಯಾಖಿಲವೇದಯೋನಿಂ ॥
ಯಯುಸ್ತಮನ್ವೇವ ಸುಯೋಧನಾದಯೋದುಃಖಾನತಾಸ್ತೇಶಿಬಿರಾಯ ಭೀತಾಃ ॥೩೨೦॥

ತಥಾ—ಆ ರೀತಿಯಾಗಿ, ಉದಿತಃ — ಹೇಳಿಸಿಕೊಳ್ಳಲ್ಪಟ್ಟ ಅಶ್ವತ್ಥಾಮನು, ಪ್ರಾತಃ – ನೀವು ಹೇಳಿದ್ದನ್ನು ನಾಳೆ ಬೆಳಿಗ್ಗೆ ಮಾಡುವೆನೆಂದು, ಬ್ರುವಾಣಸ್ಸನ್ – ಹೇಳತಕ್ಕವನಾಗಿ, ಅಖಿಲವೇದಯೋನಿಂ — ಸಮಸ್ತವೇದಗಳು ಜ್ಞಪ್ತಿಕಾರಣಗಳಾಗಿ ಉಳ್ಳ ಅಂದರೆ ವೇದಪ್ರತಿಪಾದ್ಯರಾದ ವೇದವ್ಯಾಸರನ್ನು, ಪ್ರಣಮ್ಯ –ನಮಸ್ಕರಿಸಿ, ಯಯೌ – ಹೋದನು, ತಂ— ಅಶ್ವತ್ಥಾಮನನ್ನು, ಅನ್ವೇವ – ಅನುಸರಿಸಿಯೇ, ಸುಯೋಧನಾದಯಃ — ದುರ್ಯೋಧನನೇ ಮೊದಲಾಗಿ ಉಳ್ಳವರು, ದುಃಖಾನತಾಃಸಂತಃ–ದುಃಖದಿಂದ ಬಗ್ಗಿದವರಾಗಿ ಅಂದರೆ ದುಃಖಪೂರ್ಣರಾಗಿ, ಭೀತಾಸ್ಸಂತ–ಹೆದರಿದವರಾಗಿ, ಶಿಬಿರಾಯ– ಶಿಬಿರಕ್ಕೆ, ಯಯುಃ – ಹೋದರು. ॥೩೨೦॥

ಪಾರ್ಥಾಶ್ಚ ಸರ್ವೇ ಮುದಿತಾ ಜನಾರ್ದನಂ ಪರಂಸ್ತುವಂತಃ ಶಿಬಿರಾಯ ಜಗ್ಮುಃ ॥
ತತ್ರಾಪಿರಾತ್ರಾವಪಿ ತಾನ್ಹರೇರ್ಗುಣಾನನುಸ್ಮರಂತೋ ಮುಮುದುಃಸಮೇತಾಃ ॥೩೨೧॥

ಇತಿಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯೇ
ನಾರಾಯಣಾಸ್ತ್ರೋಪಶಮನಂನಾಮ
ಷಡ್ವಿಂಶೋಽಧ್ಯಾಯಃ ॥
॥ ಶ್ರೀಕೃಷ್ಣಾರ್ಪಣಮಸ್ತು ॥

ಮುದಿತಾಃ – ಸಂತುಷ್ಟರಾದ, ಸರ್ವೇಪಾರ್ಥಾಶ್ಚ — ಎಲ್ಲಾ ಪಾಂಡವರೂ ಕೂಡ, ಪರಂ— ಸರ್ವೋತ್ತಮನಾದ, ಜನಾರ್ದನಂ — ಜನನವಿಲ್ಲದ, ಸಂಸಾರನಾಶಕನಾದ ಶ್ರೀಕೃಷ್ಣನನ್ನು, ಸ್ತುವಂತಸ್ಸಂತಃ – ಸ್ತೋತ್ರಮಾಡುವವರಾಗಿ, ಶಿಬಿರಾಯ – ಶಿಬಿರಕ್ಕೆ, ಜಗ್ಮುಃ—ಹೋದರು, ತತ್ರಾಪಿ—ಆ ಶಿಬಿರದಲ್ಲಿಯೂ ಕೂಡ, ರಾತ್ರಾವಪಿ— ರಾತ್ರಿಯಲ್ಲಿಯೂ ಕೂಡ, ಸಮೇತಾಃ – ಏಕತ್ರಮಿಲಿತರಾಗಿ, ಹರೇಃ – ಶ್ರೀಕೃಷ್ಣನ, ತಾನ್‌ಗುಣಾನ್—ವೇದಪ್ರಸಿದ್ಧಗಳಾದ ಆನಂದಾದಿ ಗುಣಗಳನ್ನು, ಅನುಸ್ಮರಂತಃಸಂತಃ – ಸ್ಮರಿಸುವವರಾಗಿ, ಮುಮುದುಃ—ಸಂತೋಷಪಟ್ಟರು. ॥೩೨೧॥

ಈ ರೀತಿಯಾಗಿ ಶ್ರೀಮನ್ಮಧ್ವಾಚಾರ್ಯರಿಂದ ವಿರಚಿತವಾದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ನಾರಾಯಣಾಸ್ತ್ರ ಉಪಶಮನಾದಿಗಳನ್ನು ಪ್ರತಿಪಾದಿಸತಕ್ಕ ಇಪ್ಪತ್ತಾರನೇ ಅಧ್ಯಾಯವು ಸಮಾಪ್ತವಾಯಿತು.

ಈ ತಾತ್ಪರ್ಯನಿರ್ಣಯದ ಇಪ್ಪತ್ತಾರನೇ ಅಧ್ಯಾಯದ ಅನುವಾದವು ಶ್ರೀಹರಿವಾಯುಗಳಿಗೆ ಅರ್ಪಿತವಾಗಲಿ,
ಈ ಕೃತಿಯಿಂದ ಶ್ರೀ ಹರಿವಾಯುಗಳು ಪ್ರೀತರಾಗಲಿ.
ಶುಭಂ ಶುಭಂ ಶುಭಂ

ಭಾ. ಅ. ೩೧೩-೩೨೧ ದುರ್ಯೋಧನನು ಆ ಅಸ್ತ್ರವನ್ನು ಪುನಃ ಪ್ರಯೋಗಿಸಲು ಅಶ್ವತ್ಥಾಮರಿಗೆ ಹೇಳಿದನು. ಅವರು 'ಆಗದು' ಎಂದು ಹೇಳಿ ಧೃಷ್ಟದ್ಯುಮ್ನನ ಕಡೆಗೆ ಹೋದರು. ಇದನ್ನು ನೋಡಿದ ಸಾತ್ಯಕಿಯು ಏರಿಬಂದನು. ಅಶ್ವತ್ಥಾಮರು ಅವರಿಬ್ಬರಿಗೂ ಬಾಣಗಳಿಂದ ಹೊಡೆದಾಗ ಇಬ್ಬರೂ ಮೂರ್ಛಿತರಾದರು. ಆಗ ಶ್ರೀಭೀಮರು ಅವರ ಮೇಲೇರಿಬರುತ್ತಿರಲು ಅವರ ಕುದುರೆಗಳನ್ನು ಅಶ್ವತ್ಥಾಮರು ಓಡಿಸಿದರು. ಶ್ರೀಭೀಮರು ತಮ್ಮ ಕುದುರೆಗಳನ್ನು ನಿಲ್ಲಿಸುತ್ತಿದ್ದಂತೆಯೇ, ಅಶ್ವತ್ಥಾಮರನ್ನು ನೋಡಿದ ಅರ್ಜುನನು ಕ್ರೂರವಾತುಗಳನ್ನು ಹೇಳುತ್ತಾ ಯುದ್ಧಕ್ಕೆ ಬಂದಾಗ ಸಿಟ್ಟಿಗೆದ್ದ ಅಶ್ವತ್ಥಾಮರು ಆಗ್ನೇಯಾಸವನ್ನು ಬಿಟ್ಟರು. 'ಅದು ಪಾಂಡವರ ಸೈನ್ಯವನ್ನೆಲ್ಲ ಆವರಿಸಿತು. ಒಂದು ಅಕ್ಷೌಹಿಣೀ ಸೇನೆಯು ಹತವಾಯಿತು. ಶ್ರೀಕೃಷ್ಣನ್ತ್ರ ರಥವನ್ನು, ಅರ್ಜುನನನ್ನು ಆ ಅಸ್ತ್ರದಿಂದ ರಕ್ಷಿಸಿದನು. ಅಸ್ತ್ರದಿಂದ ದೂರಕ್ಕೆ ಸರಿಸಿದನು. ಅರ್ಜುನನು ಬದುಕಿರುವದನ್ನು ನೋಡಿದ ಅಶ್ವತ್ಥಾಮರು ಕೋಪದಿಂದ ಧನುಷ್ಟ್ಯಾಗ ಮಾಡಿ ಹೊರಟರು. ಆಗ ಶ್ರೀವೇದವ್ಯಾಸರು ಬಂದು ನೀನು ರುದ್ರಾಂಶನು; ದೇವತಾಕಾರ್ಯಕ್ಕಾಗಿ ಭೂಮಿಯಲ್ಲಿ ಬಲಿಷ್ಠನಾಗಿ ಅವತರಿಸಿದವನು. ನೀನು ಇನ್ನೂ ದೊಡ್ಡ ಕಾರ್ಯವನ್ನು ಸಾಧಿಸಲಿಕ್ಕಿದೆ. ಅದನ್ನೂ ಬೇಗಸಾಧಿಸು, ಆದ್ದರಿಂದ ಯುದ್ಧ ಬಿಡಬೇಡ ಎಂದು ಹೇಳಿದರು. ಆಗ ಅಶ್ವತ್ಥಾಮರು 'ಆಯಿತು ಪ್ರಾತಃ ಕಾಲಕ್ಕೆ ಮಾಡುವೆನು' ಎಂದು ಹೇಳಿ ಶ್ರೀವೇದವ್ಯಾಸರಿಗೆ ನಮಸ್ಕರಿಸಿ ಹೊರಟರು. ಕೌರವರು ಅವರನ್ನು ಅನುಸರಿಸಿ ದುಃಖದಿಂದ ಕಳಮುಖ ಮಾಡಿಕೊಂಡು ಹೊರಟರು. ಪಾಂಡವರು ಸಂತೋಷದಿಂದ ಸರ್ವೋತ್ತಮ ಶ್ರೀಕೃಷ್ಣನನ್ನು

ಸ್ತುತಿಸುತ್ತಾ ಶಿಬಿರಕ್ಕೆ ಹೋಗಿ, ಅಲ್ಲಿಯೂ ರಾತ್ರಿಯಲ್ಲಿ ಒಟ್ಟಿಗೆ ಸೇರಿ ಭಗವಂತನ ಗುಣಗಾನ ಮಾಡುವವರಾಗಿ ಸಂತೋಷದಿಂದ ವಾಸಿಸಿದರು'.

ಇಲ್ಲಿಗೆ ಶ್ರೀಮದಾನಂದತೀರ್ಥರಿಂದ ರಚಿತವಾದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ದ್ರೋಣಪರ್ವದ ನಿರೂಪಣ ಮಾಡುವ ಇಪ್ಪತ್ತಾರನೆಯ ಅಧ್ಯಾಯದ ಭಾವಾನುವಾದವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು, ಶ್ರೀಮದ್ವೇಶಾರ್ಪಣಮಸ್ತು. ॥

ತಿದ್ದುಪಡಿ

ಪುಟ	ಸಾಲು	ತಪ್ಪು	ಸರಿ
3	6	ತಥಾಃ	ತಥಾ
	23	ಸ ಮಾನ	ಸಮಾನ
	26	ಶೂದ್ರ	ಊದ್ರ
5	31	ಲೋಕಕೋಸ್ಕರ	ಲೋಕಕ್ಕೋಸ್ಕರ
10	18	ಸಂಖ್ಯೆ	ಸಂಖ್ಯೇ
16	5	ಇಂತಿ	ಇತಿ
22	19	ಶಿಶ್ಯಲ	ಶಿಶ್ಯೇ
24	8	ತ್ಕೆಶವಸ್ಯ	ತ್ಕೇಶವಸ್ಯ
25	9	ಯೂ:	ಯಾಃ
26	5	ಯೂ	ಯಾ
26	17	ಮೆ	ಮೇ
28	17	ಕ	ಕ್ಕೆ
29	2	ನನೂ	ನೂ
33	34	ರ್ವಾಷ್ಟ್ರ	ರಾಷ್ಟ್ರ
36	15	ಹಿಂದೇ	ಹಿಂದೆ
37	24	ದುರ್ಯೊ	ದುರ್ಯೋ
38	10	ಕೃತರ್ಮಾ	ಕೃತವರ್ಮಾ
38	16	ದುರ್ಯೊರ್ಧನ	ದುರ್ಯೋರ್ಧನ
40	17	ದ್ರೌಣಯೇ	ದ್ರೌಣಯೇ
40	22	ಕೌವವ	ಕೌರವ

ಪುಟ	ಸಾಲು	ತಪ್ಪು	ಸರಿ
41	6	ಕುರ	ಕುರು
41	9	ವಿಶೆಷ	ವಿಶೇಷ
41	22	ಧುರ್ಯೊ	ದುರ್ಯೋ
49	1	ಉಕ್ಕೃಷ್ಟ	ಉತ್ಕೃಷ್ಟ
49	12	ರೌತ್ರಾ	ರಾತ್ರೌ
50	8	ಸೋತ್ತಿ	ಸೋತಿ
51	13	ಜಿಗಿವಾನ್	ಜಗ್ಮಿವಾನ್
53	13	ಭೀಷ	ಭೀಷ್ಮ
55	8	ಇತಿಃ	ಇತಿ
55	14	ಭಿಷ್ಮರ	ಭೀಷ್ಮರ
	14	ವಿರುಜಿ:	ನಿರುಜಃ
56	2	ಮಾರ್ಖೆ	ಮೂರ್ಖೆ
56	15	ಜೀತೆ	ಜಿತೇ
56	18	ಏದೆ	ಎದೆ
57	11	ಭಮು	ಭೀಮು
57	14	ಸೆರುವ	ಸೇರುವ
60	31	ಜಗುಃ	ಜಗ್ಮುಃ
63	19	ಬಲಿಯಸಾ	ಬಲೀಯಸಾ
66	29	ನಾತ್ರಂ	ನಾಸ್ತ್ರಂ
69	10	ಕೆಳ	ಕೇಳ
72	10	ದ್ರೊಣ	ದ್ರೋಣ
72	11	ಭೂರೀ	ಭೂರಿ
73	13	ಗೊ	ಗೋ
75	24	ವುಳ	ವುಳ್ಳ
75	27	ದ್ರೊಣ	ದ್ರೋಣ
77	28	ಶ್ರೀನ್ಮಧ್ವಾ	ಶ್ರೀಮನ್ಮಧ್ವಾ
77	28	ಶ್ರೀನ್ಮಹಾ	ಶ್ರೀಮನ್ಮಹಾ
81	12	ನೋಡ	ನೋಡುಂ
88	9	ಂರೋಃ	ಗುರೋಃ
93	10	ಭೀನು	ಭೀಮ
93	17	ಕೃತರ್ಮ	ಕೃತವರ್ಮ
96	24	ಶೃತಾಲಯುದ್ಧ	ಶ್ರುತಾಯುಧ
96	32	ಅದರ	ಅವರ
97	18	ಆಯು	ಅಯು
103	3	ತಚಃ	ತ್ಕಚಃ
106	16	ಯೊದ್ಧಂ	ಯೋದ್ಧಂ
106	30	ವನು	ವನ್ನು
110	5	ಧುನು	ಧನು

ಪುಟ	ಸಾಲು	ತಪ್ಪು	ಸರಿ
113	21	ದಕ್ಕೊ	ದಕ್ಕೋ
117	23	ಪ್ರವೀ	ಪ್ರವಿ
118	3	ಟನು	ಟ್ಟನು
123	19	ಮಹು	ಮಹ
124	21	ಶಕ್ತ್ಯ	ಶಕ್ತ್ಯಾ
129	5	ವೀಶೇಷ	ವಿಶೇಷ
131	10	ಗುರುಡ	ಗರುಡ
135	2	ಮಹಾಥಾ	ಮಹಾರಥಾ
137	14	ದ್ರೊಣ	ದ್ರೋಣ
137	26	ಧುನು	ಧನು
138	2	ಸೈನ	ಸೈನ್ಯ
140	3	ಮಾಲ	ಮಾಡ
140	5	ಬುದು	ಬದು
140	30	ಪತ್ಯೆ	ಪತ್ಯ
144	1	ಶುತ್ರು	ಶತ್ರು
145	1	ದರಾ	ಠಾದ
145	2	ಅಜಂನ	ಅಂಜನ
146	18	ಬೆಡ	ಬೇಡ
147	7	ಭಾದ್ಯ	ಬಾಧ್ಯ
147	15	ತಿಗರ್ತ	ತ್ರಿಗರ್ತ
148	2	ಯುಜ್ಞ	ಯಜ್ಞ
149	28	ಅ	ಅ
151	10	ಕೌವರ	ಕೌರವ
152	20	ತಮು	ತಮ್ಮ
152	30	ಧೀ	ಥೀ
153	11	ಹೊಡೆದರು ?	ಹೊಡೆದರು,
153	21	ಮೋದ	ಮೊದ
154	15	ನಾದ	ರಾದ
155	28	ಹ	ಹತಃ
156	9	ತ್ರತ	ತತ್ರ
156	21	ಅಥಃ	ಅಥ
157	16	—	ಕರ್ಮಾಣಿ
158	27	ಕ್ಕೊ	ಕ್ಕೋ
159	31	ದೆವ	ದೇವ
163	14	ಧುನು	ಧನು
163	28	ಶ್ರಿ	ಶ್ರೀ
164	16	ದ	ದೃ
164	26	ನ್ಮು	ನ್ಮ್ರು
167	22	ಸ	ಸ್ತ್ರ
167	23	ಶ್ರೀಕೃಷ್ಣನ್ತ್ರಿ	ಶ್ರೀಕೃಷ್ಣನು